40th year of publication. 3-11-1960

ಸಂಪುಟ ೪೦

ಸಂಚಿಕೆ ೧೦

NAVAYUGA KA

ESTD. 1921 NAVAYUGA KANNADA WEEKLY, UDIPI. Founder: Late Sri A. Former Min Health &

ಗಳು.

ಸೇಳಿ, ಮು

ವಿಚಾರ ವರ್ಷ:

ಕಾರ್ಯಾಂಗ ಕರ್ತವ್ಯ ನಿಷ್ಠವಾಗಬೇಕು

ಶಾಸನಾಂಗವು ರಚಿಸಿಕೊಟ್ಟ ಶಾಸನಗಳನ್ನು ಸಮರ್ಪಕ ರೀತಿಯಲ್ಲಿ ವ್ಯವಹೃತಗೊಳಿಸಿಅವನ್ನು ಯಶಸ್ವಿಗೊಳಿಸುವ ಗುರುತರ ಉತ್ತರದಾಯಿತ್ವ ಕಾರ್ಯಾಂಗದ ತಲೆಯ ಮೇಲಿದೆ. ಕಾರ್ಯಾಂಗವು ನಿಷ್ಪಾರ್ಥತೆಯಿಂದ ಕಾರ್ಯಪ್ರವೃತ್ತವಾಗಿ ತನ್ನ ಕರ್ತವ್ಯನಿಷ್ಠೆಯನ್ನು ಪ್ರದರ್ಶಿಸುವುದರಿಂದಲೇ ದೇಶದಲ್ಲಿ ಕಾಯದೆ ಸುವ್ಯವಸ್ಥೆ ಉಳಿಯುವುದು.

ಶ್ರೀ ಗೋರಾ

ಭಾರತವು ಸ್ವತಂತ್ರಗೊಂಡ ಬಳಿಕ ಪ್ರದರ್ಶದ ಹೆಸರಿನಲ್ಲಿ ಮಾಡಿದ ಒಂದು ಶಾಸನವೆಂದರೆ ಮದ್ಯಪಾನ ಪ್ರತಿಬಂಧ ಸಂಬಂಧಿ. ಜನತೆಯ ನೈತಿಕ ಹಾಗೂ ಸಾಮಾಜಿಕ ಅಧಃಪತನ ಹೇತುವಾಗಿರುವ ಮದ್ಯಪಾನವನ್ನು ಅವಶ್ಯ ಪ್ರತಿಬಂಧಿಸಬೇಕು ಮತ್ತು ತನ್ಮೂಲಕ ಜನತೆಗೆ ಸುಯೋಗ್ಯ ಪ್ರಜೆಗಳಾಗಿ ಬಾಳುವ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂಬ ಸದಾತ್ತ ಧ್ಯೇಯಕ್ಕೆ ಕಟ್ಟುಬಿದ್ದು ಈ ನಗ್ನವ ಶಾಸನವನ್ನು ವ್ಯವಹೃತಗೊಳಿಸಲಾಯಿತು. ಆದರೆ, ಈ ಕಾನೂನು ವ್ಯಾಪಕೋಗಿಕವಾಗಿಯೆಂಬಂತೆ ದೇಶದಲ್ಲಿ ಇಲ್ಲವೇ ರಾಜ್ಯಗಳಲ್ಲಿ ಎಲ್ಲೆಡೆಯೂ ಜ್ಯಾರಿಯಾಗದೆ ಕೆಲವೊಂದು ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಅನ್ವಯಿಸುವಂತಿದ್ದುದೇ ಕಾಯದೆಯ ಅಯಶಸ್ವಿತೆಗೆ ಕಾರಣವಾಯಿತು ಎಂದೆನ್ನಬೇಕು. ತನ್ನೂರಲ್ಲಿ ಕುಡಿಯುವುದಕ್ಕೆ ಕಾನೂನಿನ ಹೆದರಿಕೆಯಿಂದ ಅಂಜುವವ ಇನ್ನೊಂದು ಊರಿಗೆ ಹೋಗಿ ಬೇಕೆಂಬಷ್ಟು ಕುಡಿದು ತೃಪ್ತನಾಗಿ ವಾಪಸಾಕಾಶವೊದಗಿ ಬಂತು. ಇಂದಿಗಾದರೂ ದೇಶದಲ್ಲಿ ಸರ್ವತ್ರ ಈ ಕಾಯದೆಯಿಲ್ಲದಿರುವುದನ್ನು ನಾವು ಗಮನಿಸಬಹುದು; ಮತ್ತು ಇದರಿಂದಾಗುತ್ತಿರುವ ಪರಿಣಾಮವನ್ನೂ ನಾವು ಕಂಡುಕೊಳ್ಳಬಹುದು.

ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಂಪೂರ್ಣ ಪ್ರತಿಬಂಧವನ್ನು ತಾನಕ್ಕೆ ಹೇರುವಂತೆ ರಾಜ್ಯ ಸರಕಾರಗಳಿಗೆ ಅವಶ್ಯಕ ಆದೇಶವೀಯಲಾಗುತ್ತಿದೆಯೆಂದು ತಿಳಿಯುತ್ತದೆ. ಕಾಂಗ್ರೆಸ್ ಸರಕಾರವು ಒಂದು ಘನೋದ್ದೇಶದಿಂದ ಕಾರ್ಯಾರಂಭಿಸಿರುವ ಈ ಯೋಜನೆಯು ಸಾಧ್ಯಷ್ಟು ಯಶಸ್ವಿಯಾಗಿಲ್ಲವೆಂಬುವುದನ್ನು ಎಲ್ಲರೂ ಒಪ್ಪುತ್ತಾರೆ. ಈ ಅಸಫಲತೆಗೆ ಕೆಲವಾರು ಕಾರಣಗಳವೆ. ಅಧಿಕಾರಕ್ಕೆ ಬಂದ ಹೊಸತನಲ್ಲಿ ಆದರ್ಶದಹೆಸರನಲ್ಲಿ ವಾಸ್ತವಿಕಾಂಶಗಳನ್ನು ಗುಮನಿಸದೆ ಈ ಶಾಸನ ವ್ಯವಹೃತವಾದುದರಿಂದಲೇ ಇದು ಕಾಗದ ಪತ್ರಗಳಲ್ಲಿ ಮಾತ್ರವುಳಿಯುವಂತಾಯಿತೆನ್ನುವವರೂ ಇದ್ದಾರೆ. ಇದರಿಂದಾಗಿಯೇ ಕೆಜ್ಜಾಗಿ ಕಾಂಗ್ರೆಸ್ ಸರಕಾರವನ್ನು ಟೀಕೆಗೆ ಗುರಿಮಾಡಲು ಮದ್ಯಪಾನ ಪ್ರತಿಬಂಧ ಶಾಸನವನ್ನೇ ಮುಂದೆಮಾಡಿ, "ಸರಕಾರವಲ್ಲಿ ಶಕ್ತಿಯಿಲ್ಲ; ಶಾಸನವನ್ನು ಸರಿಯಾಗಿ ಜ್ಯಾರಿಗೊಳಿಸುವ ತಾಕತ್ತು ಸರಕಾರಕ್ಕಿಲ್ಲವಾದರೆ, ಜನತೆಯು ಇಚ್ಛೆಗೆ ವಿರೋಧವಾಗಿರುವ ಈ ಶಾಸನವನ್ನು ಹಿಂತೆಗೆದು ಕೊಳ್ಳಲಿ", ಎಂಬ ಪಂಥಾಹ್ವಾನವನ್ನಿತ್ತು ಕುಡುಕಪ್ರಿಯರ ಮೆಚ್ಚುಗೆಯನ್ನು ವಿರೋಧಿ ಪಕ್ಷಗಳವರು ಗಿಟ್ಟಿಸಿಕೊಳ್ಳುತ್ತಿರುತ್ತಾರೆ.

ಆದರ್ಶದ ಹೆಸರಲ್ಲಿ ಈ ಶಾಸನವು ಸಾಕಷ್ಟು ಪೂರ್ವರಂಗವಿಲ್ಲದೆ ವ್ಯವಹೃತವಾಯಿತೆಂಬುದನ್ನು ಅಂಶಿಕವಾಗಿ ಒಪ್ಪಬಹುದು. ಜನತೆಯು ಹೃದಯ ಪರಿವರ್ತನೆಯಿಂದ ಇಂತಹ ನೈತಿಕ ದುರ್ಭ್ಯಸಗಳನ್ನು ದೂರೀಕರಿಸಬೇಕೇ ಹೊರತು ಶಾಸನಗಳಂದಲ್ಲ ಎಂಬುದು ಅಷ್ಟು ಉಚಿತವಾಗಿ ತಾಣುವುದಿಲ್ಲ. ಆ ಚಾರ್ಯ ವಿನೋಬಾ ಜಿಯವರು ಮಧ್ಯಪ್ರದೇಶದ ದರೋಡೆಗಾರರ ಮನಃ ಪರಿವರ್ತನೆಯು ಮಾತಾ ಸಾಹಸಕ್ಕೆ ಕೈಹಾಕಿದರೇನೋ ಸಹಜವೇ; ಆದರೆ, ಅದರಲ್ಲಿ ಆವರಿಗೆ ಸಫಲತೆಯೆಷ್ಟು ದೊರೆಯಿತು? ಹಾಗಿರುವಾಗ ಎಲ್ಲರ ಮನಸ್ಸನ್ನು ಒಲಿಸಿಕೊಳ್ಳುವುದು ಸಾಧ್ಯವಿಲ್ಲ; ಒಲಿಸಿಕೊಂಡರೂ ಕಾನೂನಿನ ಸಹಾಯವಿಲ್ಲದೆ ಅದು ಸಫಲವಾಗಲಿಕ್ಕಿಲ್ಲ.

ಕಳವುದು ಅಪರಾಧವೆಂಬುದನ್ನು, ಖೂನಿಮಾಡ ವುದು ದ್ರೋಹವೆಂಬುದನ್ನು ಎಲ್ಲರೂ ಕೆಲವೊಮ್ಮೆ ಸ್ವಯಂ ಅಪರಾಧಿಗಳೂ ಒಪ್ಪಿಕೊಳ್ಳುತ್ತಾರೆ. ಇದನ್ನು ತಡೆಗಟ್ಟಲು ಹಾಗೂ ಅಪರಾಧಿಗಳಿಗೆ ಯೋಗ್ಯ ದಂಡನೆಯಿಯಲು ಕಾನೂನುಗಳ ಬೆಂಬಲವೂ ಇರುವುದು. ಅಪರಾಧ ಮನೋಭಾವನೆಯನ್ನು ಹೃದಯ ಪರಿವರ್ತನೆಯಿಂದ ದೂರೀಕರಿಸುವುದು ಸಾಧ್ಯವಿರುವುದಾದರೆ, ಸೃಷ್ಟಿಯಾದಿಯಿಂದಲೂ ಈ ಹವ್ಯಾಸವು ಬೆಳೆದು ಬಂದಿರುವ ವಾದರೂ ಏಕೆ? ಸುಳ್ಳು ಹೇಳಬಾರದೆನ್ನುವವರೇ ಸಂದರ್ಭವೊದಗಿದಾಗ ಆಡುವುದೂ, ಸಂಬಂಧಿಸಿದಾಗ ಹಿಗ್ಗಬಾರದು; ದುಃಖಬಂದಾಗ ಕುಗ್ಗಬಾರದೆನ್ನುವ ಮೇಧಾವಿಗಳೇ ಸ್ವಯಂ ಇವಕ್ಕೆ ಪಕ್ಕಾದಾಗ ಹಿಗ್ಗುವುದೂ ಕುಗ್ಗುವುದೂ ಏಕೆ? ತಿಳಿ ತಿಳಿದೂ ಅಪರಾಧವೆಸಗುವುದಕ್ಕೆ ಮನವೇಕೆ ಎಳಸುತ್ತದೆ? ಇವನ್ನೆಲ್ಲಾ ಪರ್ಯಾಲೋಚಿಸುವಾಗ, ಪರೋಪದೇಶಕ್ಕೆ ಮಾತ್ರ ಇವು ಯೋಗ್ಯವೆಂದು ಅನ್ನಬೇಕಾಗುತ್ತದೆ. ಕಳವು-ಖೂನಿಗಳಿಗೆ ಪ್ರತಿಬಂಧಕ ಶಾಸನವಿರುತ್ತಿಕಳವು ಖೂನಿಗಳು ದೇಶದಲ್ಲಿ ನಡೆಯುವಾಗ, ಈ ಶಾಸನವನ್ನು 'ಸರಿಯಾಗಿ' ನಿರ್ವಹಿಸುವ ಶಕ್ತಿಯಿಲ್ಲದಿರುವಾಗ, ಅಂತಹ ಶಾಸನವೇಕೆ ಎಂದು ಯಾರೂ ಇದುವರೆಗೆ ಸವಾಲುಹಾಕಿದಂತಿಲ್ಲದಿರುವುದು ಸದ್ಯ ಅಭಿಮಾನದ ಮಾತು.





ಆಧುನಿಕ ಆಕಾಶಬಾಣ ಜನಕ

೧. ಆಧುನಿಕ ಆಕಾಶಬಾಣ ಜನಕ ಡಾ। ರಾಬರ್ಟ್ ಎಚ್. ಗೋಡಾರ್ಡರು ೧೯೦೬ ರಲ್ಲಿ ಪಾವ್ ಕಾಲೇಜು ವಿದ್ಯಾರ್ಥಿಯಾಗಿರುವಾಗಲೇ ಸಂಶೋಧನಾಶೀಲರಾಗಿದ್ದರು. ಅಂತರಿಕ್ಷದಲ್ಲಿ ವಿಹರಿಸುವ ಉಪಗ್ರಹರಚನೆಗೆ ಇವರ ಸಂಶೋಧನೆಯೇ ಮೂಲಾಧಾರ. ೨. ಆಕಾಶ ಬಾಣವು ತನ್ನೊಳಗೆ ಉರಿಯುವ ಇಂಧನಗಳ ಒತ್ತಡದಿಂದ ಮುಂದುವರಿಯುವುದೆಂಬುದು ಇವರ ಸಿದ್ಧಾಂತ. ೩. ೧೯೨೬ ರಲ್ಲಿಯೇ ದ್ರವರೂಪದ ಉರುವಲಿನ ಪ್ರಥಮ ಆಕಾಶಬಾಣವನ್ನು ಇವರು ರಚಿಸಿ ೧೫೪ ಅಡಿ ಸಂಚರಿಸಿದ್ದರು.

ಖೂನಿಮಾಡುವುದು ಅಪರಾಧವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ, ಇಸ್ರೇಲ್ ಮತ್ತು ಈಜಿಪ್ಟ್ ಗಡಿಯಲ್ಲಿ ಸಂಭವಿಸಿದ ಘರ್ಷಣೆಯಲ್ಲಿ ಸತ್ತವರ ಸಂಖ್ಯೆಯನ್ನು ಕೇಳಿದಾಗ ಅಥವಾ ಅಮೆರಿಕದ ಸೈನಿಕರು ಕೊರಿಯಾದಲ್ಲಿ ಕೊಂದ ಕೊರಿಯನ್ನರ ಸಂಖ್ಯೆಯನ್ನು ಕೇಳಿದಾಗ ಅಥವಾ ಕಾಂಗೋದಲ್ಲಿ ಬೆಲ್ಜಿಯನ್ನರು ಕೊಂದ ಕಾಂಗೋ ನಿವಾಸಿಗಳ ಸಂಖ್ಯೆಯನ್ನು ಕೇಳಿದಾಗ ಅಥವಾ ಅಲ್ಜೀರಿಯಾದಲ್ಲಿ ಫ್ರೆಂಚರು ಕೊಂದ ಅಲ್ಜೀರಿಯನ್ನರ ಸಂಖ್ಯೆಯನ್ನು ಕೇಳಿದಾಗ ಅಥವಾ ಕಾಂಗೋದಲ್ಲಿ ಬೆಲ್ಜಿಯನ್ನರು ಕೊಂದ ಕಾಂಗೋ ನಿವಾಸಿಗಳ ಸಂಖ್ಯೆಯನ್ನು ಕೇಳಿದಾಗ ಅಥವಾ ಅಲ್ಜೀರಿಯಾದಲ್ಲಿ ಫ್ರೆಂಚರು ಕೊಂದ ಅಲ್ಜೀರಿಯನ್ನರ ಸಂಖ್ಯೆಯನ್ನು ಕೇಳಿದಾಗ ಅಥವಾ ಟಿಬೆಟ್ ಮೇಲೆ ಚೀನಾ ಆಕ್ರಮಣ ಮಾಡಿದಾಗ ಅಲ್ಲಿ ಸತ್ತವರ ಸಂಖ್ಯೆಯನ್ನು ಕೇಳಿದಾಗ ಅಥವಾ ಹಂಗೇರಿಯಲ್ಲಿ ರಷ್ಯನ್ನರು ಕೊಂದ ಹಂಗೇರಿಯನ್ನರ ಸಂಖ್ಯೆಯನ್ನು ಕೇಳಿದಾಗ ಅಥವಾ ಇಂಡೋನೇಶ್ಯದಲ್ಲಿ ಡಚ್ಚರು ಕೊಂದ ಇಂಡೋನೇಶ್ಯನ್ನರ ಸಂಖ್ಯೆಯನ್ನು ಕೇಳಿದಾಗ ಅಥವಾ ಇಂಡೋನೇಶ್ಯದಲ್ಲಿ ಡಚ್ಚರು ಕೊಂದ ಇಂಡೋನೇಶ್

ESTD. 1924

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ರೂ. 0-13

ಜಾಹೀರಾತುಗಳ ಬಗ್ಗೆ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಅಳಿಸಿ ಮರೆಯದ ಕುರುಹು

ವಿವಾಹ ಮುಂಟಪದಲ್ಲಿ ಮಂಡಿಸಿದ್ದ ಶಾಮುವಿಗೆ ರಾಮು ತಿಳಿಸಿದ ಸಂಗತಿ ತನ್ನ ಕಾಲೇಜ ಶಿಕ್ಷಣದ ಸಮಯವನ್ನು ನೆನಪಿಸಿತು. ಸ್ವರ್ಣಸುಂದರಿ ಚಂಂರಳ ಮುಖದಲ್ಲಿ ತನ್ನಿಂದಾಗಿ ಆದ ಕುರುಹು ತನ್ನ ಮಡದಿಯ ಮುಖದಲ್ಲೂ ಕಾಣಿಸತು! ಅಂದಿನ ಆ ಕಲೆ ಅಳಿಸಿ ಮರೆಯದ ಕುರುಹಾಯಿತು!

ಶ್ರೀ ಎಚ್. ರಾಮಕೃಷ್ಣ ಅಡಿಗ.

ಮಂಗಳ ವಾದ್ಯಗಳು ಮೊಳಗಿ ಮನೆಯ ಕಲ್ಲುಗೋಡೆಗೆ ಬಡಿದು, ಪ್ರತಿಧ್ವನಿ ಸೈದು ಒಂದೆರ್ಕೆರಡು, ಎರಡಕ್ಕೆ ನಾಲ್ಕು, ನಾಲ್ಕಕ್ಕೆ ಎಂಟಾಗಿ ಕೇಳಿಸುತ್ತಿವೆ. ಜೊತೆಗೆ ಬ್ರಾಹ್ಮಣರ ಮಂತ್ರಘೋಷಣೆ—ಹಿತ ಜನರ ಪರಸ್ಪರ ಮಾತುಕತೆಗಳು—ಒಟ್ಟಿನಿಂದ ಮನೆಗೆ ಮನೆಯೇ ಮಂಗಳಮಯವಾಗಿ, ಆನಂದದಿಂದ ತುಂಬಿ ತುಳುಕಾಡುತಿತ್ತು. ಅಲ್ಲಿನ ಪ್ರತಿ ಕಣಕಣಗಳೂ ಉತ್ಸಾಹದ ಹೊನಲನ್ನು ಹರಿಸುವಂತಿತ್ತು. ಪ್ರತಿ ಮೊಗವೂ ಸಂತಸದ ಅಣಕದ ಕಿರುನಗೆಯ ಕಳೆಗೂಡಿತ್ತು!

ಆದರೆ ಮದುಮಗ ಶಾಮು ಇದೊಂದರ ಗೊಡವೆಗೂ ಮನಸರಿಸದೆ ಮಹಾ ಸನ್ಯಾಸಿಯಂತೆ ತದೇಕಚಿತ್ತನಾಗಿ ಕುಳಿತಿದ್ದಾನೆ ತಲೆಯಲ್ಲಿನ ನೂರಾರು ಆಲೋಚನೆಗಳು, ಮನಸ್ಸಿನ ಸಾವಿರಾರು ಚಿಂತೆಗಳು ಅವನನ್ನು ಆ ಲೋಕದಿಂದ ಸೆಳೆದುಕೊಂಡು ಹೋಗಿದ್ದುವು. ಬ್ರಾಹ್ಮಣರು ನುಡಿದಂತೆ, ಯಜ್ಞೇಶ್ವರನಿಗೆ ಆಹುತಿ!ಹಾಕುವ, ಹೆಣ್ಣಿನ ಕೊರಳಿಗೆ ತಾಳಿ ಬಿಗಿಯುವ, ಹೋಮಕ್ಕೆ ಸುತ್ತು ಬರುವ, ಹಿರಿಯರಿಗೆ ನಮಸ್ಕರಿಸುವ! ಅವೆಲ್ಲವೂ ರೂಢಿ ಕ್ರಿಯೆಗಳಂತಾಗಿತ್ತು. ಅವನಿಗೆ ಅದೊಂದರಲ್ಲೂ ಪರಿವೆಯಿಲ್ಲ. ಗೆಳೆಯರ ಹಾಸ್ಯದ ಕಿರಿ-ನುಡಿಗಳ ಗೊಡವೆಯೂ ಇಲ್ಲ. ಭಕ್ತರ ಹಲವು ತರದ ನಮಸ್ಕಾರಗಳನ್ನು ಸ್ವೀಕರಿಸಿ, ಬೇಡಿಕೆಗಳನ್ನು ಕೇಳಿ ತಲೆಯೂ ತಗ್ಗಿಸದ ಕಲ್ಲು ಮೂರ್ತಿ ಆತ. ಗೆಳೆಯ ಅಂದು ಸುರಿದ ಕತೆ ಅವನ ಮನವನ್ನು ಮತ್ತೆ ಮತ್ತೆ ಕೆಣಕುತಿತ್ತು, ಕೆರಳುತಿತ್ತು:—

ರಾಮು, ಅವನ ಗೆಳೆಯ, ಅಂದು ಬೆಳಿಗ್ಗೆ ಅವರು ಲಗ್ನದ ಮನೆಯತ್ತ ಗಾಡಿಯಿಂದ ಬರುವಾಗ ಆತ ಹೇಳಿದ್ದ, ಅವನ ಭಾವಿ ಪತ್ನಿಯ ಕತೆಯನ್ನು! "ಹೆಸರು ಬಹು ಸುಂದರ ಶಾಮೂ, ಚಂಪಾ! ನೋಡಲಿಕ್ಕೇನೋ ಸುಂದರಿಯು ಹಾಗಿದ್ದಾಳೆ. ಆದರೆ ಹಿಂದಿನ ನಾಲ್ಕೈದು ಜನರು "ಮುಖ ಚಿಂದವಿಲ್ಲ, ಹುಡುಗಿಯೇ ನೋ ಆದೀತು" ಎಂದು ಹಿಂದೆ ಸರಿದಿದ್ದರಂತೆ. ಪಾಪ, ಆಕೆಯ ಮುಖ ತುಂಬಾ ನೊಂದಿತ್ತು. ನಾವೂ ಹಾಗೇ ಮಾಡುತ್ತೇವೆಂದು ಅವರು ನಂಬಿದ್ದರು. ಆದರೆ ಒಪ್ಪಿದ್ದು ತಿಳಿದ ಆಕೆ ತುಂಬಾ ಸಂತಸಗೊಂಡಳು. ಮುಖವೇನೋ ತುಸು ಕಳೆಗೆಟ್ಟಿಂತಿತ್ತು! ಹುಡುಗಿ ಚೆನ್ನಾಗಿದ್ದಾಳೆ" ಎಂದಿದ್ದ.

ಶಾಮುವಿನ ಮನಕ್ಕೆ ಮುಂದಿನ ಕತೆ ಬೇಕೆನಿಸಲಿಲ್ಲ. ಅವನಿಗೆ ಆಗ ನೆನಪಾದುದು ಕಾಲೇಜಿನ ಗೆಳತಿದ್ದು!

ಹಾಮ. ಶಾಮು ಇಂಟರ್ ಮುಗಿಸಿ ಬಿ. ಎ ಕ್ಲಾಸಿಗೆ ಬಂದು ಹೊಸತಾಗಿ ಸೇರಿದಾಗ ಅವನೊಬ್ಬ ತರುಣಿಯನ್ನು ಕಂಡಿದ್ದ. ಮೂತ್ರವಲ್ಲ ಮನವಾರೆ ಮೆಚ್ಚಿದ್ದ. ಹೆಣ್ಣಿನ ಮನ ಚಂಚಲವೆಂಬುದನ್ನು ಸೂಚಿಸುವಂತೆ, ಅತ್ತಿಂದಿತ್ತ ತೂಗಾಡುವ ನಾಲ್ಕಾರು ಮುಂಗುರುಳು! ಎಂಥ ತಾಪಸಿಯನ್ನೂ ಮೊದಲನೆಯ ನೋಟಕ್ಕೆ ಬೆಚ್ಚುಬೆರಗಾಗಿ ನಿಲ್ಲಿಸುವಂಥ ಮೊಗ! ಕಾರಣ ಆತನೂ ಈ ತನಕ ಒಬ್ಬಳನ್ನು ಅತಿಯಾಗಿ ಪ್ರೀತಿಸಿಲ್ಲ, ಸ್ನೇಹಭಾವದಿಂದ ಕಾಣಲಿಲ್ಲ! ಒಂದೇ ಒಂದು ಕಲಿಯುವಿಕೆಯ ದೃಷ್ಟಿಯತ್ತ ಮಾತ್ರ ಮನ ಸಾಗುತಿತ್ತು, ಆದರೆ ಇವಳದು ಅಂತಹ ತನ್ನ ಮನವನ್ನೂ ಅರಿಗಳಿಗೆ ಸೆಳೆದಿತ್ತು. ಗಂಪಿನೆಯನ್ನು ಹೋಲುವ ಮೂಗು, ಕಪ್ಪಾದ ಕೊಂಕು ಹುಬ್ಬಿನ ಕೆಳಗೆ ಚಂಚಲವ ಕಿರುಗಣ್ಣು, ಮಧ್ಯೆ ಉದ್ದವಾದ ಕಿರು ಕುಂಕುಮ. ಸ್ನೋ ಹಾಕಿನ ಬಳಿಕ ಪೌಡರ್‌ಜಿನ ನೊಸಲು ಕೆನ್ನೆ! ನಿಸರ್ಗ ನಿಯಮದಂತೆ ನಗು ಕೆಂಪಾದ ತುಟಿ. ಎಲ್ಲಕ್ಕಿಂತಲೂ ಅತಿ ಸುಂದರವೆಂದರೆ ಪ್ರತಿ ಮಾತಿಗೂ ಮುಗುಳ್ನಗೆ ಸುರಿಸುವ ಆ ದಿಟ್ಟತನ! ಆಗ ಮಲ್ಲಿಗೆ ಮೊಗ್ಗೆಯೂರಾರದೆ ಆ ದಂತಪಂಕ್ತಿ ಪ್ರೇಕ್ಷಕರನ್ನು ಸ್ವರ್ಗಕ್ಕೆಳೆದೊಯ್ಯುವಂತಹದು! ಅಂದಕ್ಕೆ ಸರಿಯಾಗಿ ಸೀರೆ ಕುಪ್ಪಸ ತೊಟ್ಟು, ಚಪ್ಪಲಿ ಮೆಟ್ಟಿದ್ದಳು.

ಮೊದಲದೆಯ ಬಾರಿ ಅರೆಕ್ಷಣ ಕಂಡು ಶಾಮು ಕೋಣೆಗೆ ನಡೆದ. ಕಾಲೇಜಿನ ಹುಡುಗರಿಗೆ ನಾಚಿಕೆಯಿಲ್ಲೆಂದು ತಿಳಿದು ತಾನೂ ಮರುದಿನ ಅವಳನ್ನು ಕಂಡ. ಆಕೆಯೂ ಅವನನ್ನು ಕಂಡು ಮುಗುಳ್ನಗೆಗೆ ನಕ್ಕಳು. ಶಾಮು ಆಗ ತನ್ನ ಸೌಂದರ್ಯದ ಮೇಲೆ ತಾನೇ ಮೋಹಪಟ್ಟದ್ದ. ಪಡುವಂತಹದೇ ಅವನ ಸೌಂದರ್ಯ! ನೀಳವಾದ ಗುಂಗುರಿಳಿನ ತಲೆ. ಅಗಲವಾದ ಹಣೆ, ಕಣ್ಣು, ಮೂಗು, ಗಲ್ಲ. ಕನ್ನಡಿಯಲ್ಲಿ ದಿನಕ್ಕೆ ಹತ್ತು ಹತ್ತು ಬಾರಿ ನೋಡಿದರೂ ಬೇಸರ ತರದಂತಹ ಮುಖ. ಉಡುವ ಉಡಿಗೆಯೂ ಜೊಂದಕ್ಕೆ ತಕ್ಕ ಆಯ್ಕೆ. ಅದಕ್ಕೇ ಆಕೆ ಪ್ರತಿ ನಕ್ಕದ್ದಿರಬೇಕೆಂದು ಶಾಮು ತಿಳಿದಿದ್ದ.

ರೀಡಿಂಗ್ ರೂಮಿನಲ್ಲಿ ಲಗ್ಗೆ ಗಂಟೆಗೇ ಶಾಮು ಅಂದು ತೆರಳಿದ್ದ. ಆಗ ಕಾಲೇಜು ಇನ್ನೂ ಹುಡುಗರ ಮುಖ ಕಾಣುವುದರಲ್ಲಷ್ಟೆ ಇತ್ತು. ಆಕೆಯೂ ಆಕಸ್ಮಾತ್ ಆ ಕ್ಷಣಕ್ಕೆ ಬಂದಳು. ಶಾಮು ನೋಡಿಯೂ ನೋಡದವನಂತೆ ಕುಳಿತ ಅವಳೇ ಮುಂದು ಬಂದು ಮಾತಾಡಿಸಿದಳು.

"ನೀವು ಯಾವ ಕ್ಲಾಸು"ಬಿ. ಎ. Ist year", ನೀವು? "ನಾನು ಇಂಟರ್ ಜಸ್ಟ್‌ಸಿದು"

"ಓಹೋ ಹಾಸ್ಟೆಲಿನಲ್ಲಿದ್ದೀರಾ" ಶಾಮುವೆಂದ. "ಹಾಮು ನೀವು ಹೋಟೆಲಿನಲ್ಲೆಂದು ಕಾಣಿಸುತ್ತೆ." "ಹಾದು.ನಾನೂ ಹುಡುಗರ ಹಾಸ್ಟೆಲಿಗೆ ಸೇರೋಣವೆಂದಿದ್ದೆ. ತುಂಬಾ ಪೋಲಿ ಹುಡುಗರು. ಅವರ ಸಹವಾಸ ಬಿಟ್ಟು ಬಿಡೋಣವೆಂದು ಹೋಟೆಲಿನಲ್ಲಿದ್ದೇನೆ."

"ನಿವ್ಮೂರು?" ಶಾಮುಮೌನಿಯೂ ದುದನ್ನು ಕಂಡು ಆಕೆಯೇ ಪ್ರಶ್ನೆ ಮಾಡಿದಳು.

"ಜೇಲೂರಿನತ್ತ.....ಹಳ್ಳಿ ಊರು" "ಓಹೋ....ನಂದು ಬೆಳಂಗಾಂ. ನಾವು ನೀವು ತುಂಬಾ ದೂರದವರು" ಆದಿಟ್ಟಿ ಶಾಮು ಕೇಳಬೇಕಾದರೂ ತನ್ನೂರಿನ ಪರಿಚಯ ಹೇಳಿದ್ದಳು.

(೧೧ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)
ಸಂಪಾದಕರು: **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧೯ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕೆಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೦೪.

ಮಹಾಸತಿ—ಮಹಾಮಾಯಿ

ತನ್ನ ಬೀರುತನದಿಂದ ಕರ್ತವ್ಯತತ್ಪರನಾಗಿದ್ದ ಪತಿ ಸಿದ್ಧ ವರ್ಮನಲ್ಲಿ ಕರ್ತವ್ಯ ಜಿಜ್ಞಾಸೆಯು ಉದಯಿಸುವಂತೆ ತಾನು ಆತ್ಮ ಬಲಿದಾನ ಮಾಡಿದ ಕುಂದೂರಿನ ಮಹಾರಾಣಿ ಮಹಾಮಾಯಿಯು ಸವಿ ಸಂಸ್ಮರಣೆ ಇಂದಿಗೂ ಉಳಿದಿದೆ.

ಶ್ರೀ ಕೊತ್ವಾಲ, ಕುಂದಾಪುರ.

ಕನ್ನಡ ನಾಡಿನ ಕೆಳನಾಡು ಮಂಗಣಿಗಳೆಲ್ಲ ಬಾರಕೂರಿನ ಆಡಳಿತಕ್ಕೆ ಒಳಗೊಂಡ ಕಾಲ. ಬೀರ ನಾಯಕನ ಆಡಳಿತೆಗೆ ತಲೆಬಾಗಿ ಕುಂದೂರು ಗಂಗಾವಳಿ, ವಸುಪುರದ ತುಂಡರಸರು ತಪ್ಪದೆ ಕಪ್ಪುಕಾಣಿಕೆಗಳನ್ನು ಸಲ್ಲಿಸುತ್ತ ತಮ್ಮ ಜನರನ್ನು ಆಳಿಕೊಂಡಿದ್ದರು. ಬೀರ ನಾಯಕನು ವಿಶೇಷ ಆಸಕ್ತಿ ವಹಿಸದೆ, ಬರುವ ಕಾಣಿಕೆಗಳಿಂದ ಸಂತೃಪ್ತನಾಗಿದ್ದನು. ಕುಂದೂರಿನಲ್ಲಿ ಕುಂದ ವರ್ಮನ ಮಗ ಸಿದ್ಧ ವರ್ಮನು ಏದು ಹೋಬಳಿಗಳ ಒಡೆಯನಾಗಿದ್ದನು. ತಂದೆ ಕುಂದ ವರ್ಮನ ತೇಜಸ್ವಿ ಆಡಳಿತೆಯು ಸಿದ್ಧ ವರ್ಮನ ಕಾಲದಲ್ಲಿ ಕಂದಿ ಕುಂದಿತ್ತು. ಆತನು ಸ್ವತಃ ಭೀರುವಾದುದರಿಂದ ಸ್ವಾರ್ಥಿ ಹೋಬಳಿಗರು ಆಗಾಗ್ಗೆ ಇಲ್ಲದ ಕೇಟಲೆಗಳನ್ನುಂಟುಮಾಡುತ್ತಿ ಸಿದ್ಧ ವರ್ಮನ ಅಧಿಕಾರವನ್ನು ಕೊನೆಗೊಳಿಸಲು ಹವಣಿಸುತ್ತಿದ್ದರು.

ಇದೇ ಕಾಲದಲ್ಲಿ ಅರಸು ಕುಲದ ಸಂಬಂಧವನ್ನು ಬಯಸಿ, ವಸುಪುರದ ಅರಸು ತನ್ನ ಕುವರಿಯನ್ನು ಸಿದ್ಧ ವರ್ಮನಿಗೆ ಧಾರೆಯೆರೆದು ಕೊಟ್ಟ. ವಸುಪುರವೂ ಕುಂದೂರೂ ನೆರೆಯೂರುಗಳಾದುದರಿಂದ ತನ್ನ ಒಬ್ಬಳೆ ಮುದ್ದಿನ ಮಗಳಾದ ಮಹಾಮಾಯಿಯನ್ನು ಆತ ದೂರದ ಊರಿಗೆ ಮದುವೆ ಮಾಡಿ ಕೊಡಲು ಹಿಂಜರಿದು ಆಗಾಗ್ಗೆ ಮಗಳ ಮುಖ ನೋಡಬಹುದೆಂಬ ಆಶೆಯೊಡನೆ ಸಿದ್ಧ ವರ್ಮನಿಗೆ ಮದುವೆ ಮಾಡಿಕೊಟ್ಟಿದ್ದ.

ಪ್ರತಿ ವರ್ಷ ಪಾಲ್ಗುಣ ಮಾಸದಲ್ಲಿ ಬಾರಕೂರಿಗೆ ಕಪ್ಪಕಾಣಿಕೆ ಸಲ್ಲಿಸಲು ಹೋಬಳಿಗರಲ್ಲೊಬ್ಬರು ಕುಂದೂರಿನಿಂದ ಹೋಗುವುದು ರೂಢಿ. ಈ ಬಾರಿ ಆ ಸರದಿ ಒಡೆಯರ ಮಾದಯ್ಯನವರಿಗೆ ಬಂತು. ಸಿದ್ಧ ವರ್ಮನಿಗೆ ಆಗತಾನೆ ಮದುವೆಯಾದ ಹೊಸ ಹುರುಪಿನ ಸಂತೋಷದ ಕಾಲ. ತುಂಡರಸರು ಮದುವೆಯಾದ ಮುಂದಿನ ಕಾಲದ ಕಪ್ಪಕಾಣಿಕೆಗಳ ಜೊತೆ ಪಟ್ಟಿ, ಫಲಕಾಣಿಕೆ ಕಳುಹಿಸುವುದು ಪದ್ಧತಿ. ಅಂತೆಯೆ ಸಿದ್ಧ ವರ್ಮ ಮಾದಯ್ಯನ ಜೊತೆ ಆಳಂಸರಿಗೆ ಸಲ್ಲಬೇಕಾದ ಸರಂಜಾಮುಗಳನ್ನು ಜೋಡಿಸಿ, ಬೇಹುಗಾರ, ಓಲೆಕಾರ, ಅಂಗರಕ್ಷಕರೊಡನೆ ಕಳುಹಿಸಿದ.

ಬಾರಕೂರಿನ ಆಸ್ಥಾನದಲ್ಲಿ ತೆಂಕು ಹೋಬಳಿಯ ಒಡೆಯರ ಮಾದಯ್ಯ ಕಪ್ಪ ಕಾಣಿಕೆಗಳನ್ನು ಸಮರ್ಪಿಸುತ್ತ ಕುಂದೂರಿನ ಸಿದ್ಧ ವರ್ಮನಿಗೆ ವಸುಪುರದ ರಾಜಕುಮಾರಿಯನ್ನು ಕೊಟ್ಟು ಮದುವೆಯಾದ ಸುಂಗಳ ವಾರ್ತೆಯನ್ನು ಅರುಹಿದ. ಬೀರ ನಾಯಕ ಈ ಸಂತೋಷದ ವಾರ್ತೆಯನ್ನು ಕೇಳಿ ಕಿಡಿಕಿಡಿಯಾದ. ಮಾಂಡಳಿಕ ಅರಸರು ಮದುವೆಯೊಗುವ ಮುನ್ನ ಆಳರಸರಿಂದ ಪದ್ಧತಿಯ ಪರವಾನಿಗೆ ಪಡೆಯಬೇಕಾಗಿತ್ತು. ಅದನ್ನು ಬಿಟ್ಟ, ಮದುವೆಯ ಶುಭಕಾರ್ಯಕ್ಕೆ ಒಂದು ಆಹ್ವಾನವನ್ನೂ ಕಳುಹಿಸದೆ ವಸುಪುರ—ಕುಂದೂರಿನ ತುಂಡರಸರು ಆಳುವ ಗದ್ದುಗೆಯ ಅವಮಾನವನ್ನು ಉದ್ದೇಶಪೂರ್ವಕ ಮಾಡಿರುವರೆಂದು ಬೀರ ನಾಯಕ ಹಾರಾಡಿದ. ಆಳರಸರು ಕುಪಿತರಾದ ಈ ಸಂದರ್ಭವನ್ನು ಮಾದಯ್ಯ ಜೆನ್ನಾಗಿ ಉಪಯೋಗಿಸಿಕೊಂಡ. "ಮದುವೆ ಪ್ರಸ್ತಾಪ ಬಂದಿದ್ದರೆ ಬೀರ ನಾಯಕರು ವಸುಪುರದ ಸುರಸುಂದರಿ ರಾಜಕನ್ನಿಕೆಯ ಕೊರಳಿಗೆ ಮಾಂಗಲ್ಯ ಕಟ್ಟಲು ತಾವೇ ಮುಂದಾಗಬಹುದೆಂಬ ಭಯದಿಂದ ಈ ವಿವಾಹದ ಸುದ್ದಿ ತಮಗೆ ತಿಳಿಸಲಿಲ್ಲ" ಎಂದು ಮಾದಯ್ಯ ಬೆಂಕಿಗೆ ತುಪ್ಪ ಎರೆದ.

ಮಹಾತ್ವಾಕಾಂಕ್ಷಿ ಬೀರ ನಾಯಕನಿಗೆ ಈ ಮಾತುಗಳನ್ನು ಸಹಿಸುವುದಾಗಲಿಲ್ಲ. ಈಗಿಂದೀಗಲೇ ಕುಂದೂರು ವಸುಪುರಗಳ ಮೇಲೆ ದಾಳಿಯಿಟ್ಟು ಆ ಎರಡೂ ತುಂಡರಸರನ್ನು ಇಲ್ಲದಂತೆ ಮಾಡಿ, ಮಹಾಮಾಯಿಯನ್ನು ಸೆರೆ ಹಿಡಿದು ಅರಮನೆಯ ಅಂತಃಪುರಕ್ಕೆ ಸೇರಿಸುವೆ ಎಂದು ಪಣ ತೊಟ್ಟ. ಮಾದಯ್ಯನೂ ಕುಂದೂರಿನಲ್ಲಿ ಆಡಳಿತ ಸಡಿಲಾಗಿರುವ ವಿಷಯ ಕೂಡಿಸಿ ನಾಯಕರೂ ಬಂದುದಾದರೆ ಸೇನೆ ತಾನಾಗಿ ದಾರಿಬಿಡುವುದೆಂದು ಸೂಚಿಸಿದ. ಈ ಬಗ್ಗೆ ಪ್ರಾಣಹಾನಿಯೊಗದೆ ಕೋಟೆ ಕೈವಶವಾಗಲು ತಾನು ಬೇಕಾದಂತೆ ಸಹಕರಿಸುವುದಾಗಿ ನಾಯಕರಿಗೆ ಮಾದಯ್ಯ ಗುಟ್ಟಾಗಿ ವಚನವಿತ್ತ.

ಕಪ್ಪು ಕಾಣಿಕೆಗಳೊಡನೆ ಹೋದವರು ಉಡುಗೊರೆ ಸಹಿತ ಹಿಂದೆ ಬರುವುದು ಕ್ರಮ. ಆದರೆ ಈ ಬಾರಿ ವಾದ್ಯವನ್ನು ಬರಿಗೈಯಿಂದ ಹಿಂತಿರುಗಿದ; ಸಿದ್ಧ ವರ್ಮರನ್ನು ಅರಮನೆಯ ಖಾಸಗಿ ಭೇಟಿಯಲ್ಲಿ ಭೇಟಿಯಾಗಿ ಬೀರ ನಾಯಕ ಕುಪಿತನಾಗಿರುವನೆಂದು ಉಪ್ಪು ಕಾರ ಹಚ್ಚಿ ಹೇಳಿದ. ಇದಕ್ಕೆಲ್ಲಾ ಕಾರಣ ಮಹಾಮಾಯಿಯೇ ಎಂದು ಕಿವಿಯೂದಿದ. ಭೀರುವಾದ ಸಿದ್ಧ ನಾಯಕ ಆರರರು ಕುಪಿತರಾದುದನ್ನು ಕೇಳಿ ಕಂಗಾಲಾದ. ಏನಾದರೂ ಸಂಧಾನ ಯತ್ನ ಮಾಡಬೇಕೆಂದು ಮಾದಯ್ಯನನ್ನು ಬೇಡಿಕೊಂಡ. ಧೂರ್ತ ಮಾದಯ್ಯ ಅದು ಆಗಾದ್ಯದ ಮಾತೆಂದು ತಲೆ ಅಲ್ಲಾಡಿಸಿದ.

ಮರೆಯಲ್ಲಿ ನಿಂತ ಸತಿ ಮಹಾಮಾಯಿ ಮಾದಯ್ಯನ ಮಾತುಗಳೆಲ್ಲವನ್ನೂ ಆಲಿಸಿದಳು. ಜೊತೆಗೆ ಪತಿಯ ಸಂಕಷ್ಟವನ್ನು ನೋಡಿ ವಿಷಾದಗೊಂಡಳು.

ಒಂದೇ ವಾರದಲ್ಲಿ ಬೀರ ನಾಯಕ ಸೇನೆ ಸಹಿತ ಬಾರಕೂರಿನಿಂದ ಹೊರಟು ಕುಂದೂರಿನಿಂದ ಕೆಲವೇ ಹರದಾರಿ ಕೊಂಳಿನದ ಕೋಟೆಲಿಂಗನ ಗದ್ದೆಯಲ್ಲಿ ಬೀಡು ಬಿಟ್ಟ. ಅಲ್ಲಿಂದ ಕೆಲವೇ ಗಾವುದ ದಾಟಿ ಒಡೆಯರಾದ ಮಾದಯ್ಯನ ಹೋಬಳಿ. ಮಾದಯ್ಯ ಗುಟ್ಟಾಗಿ ಬೀರ ನಾಯಕನ ಪಾಳೆಯವನ್ನು ಹೊಕ್ಕು ನಾಯಕನಿಗೆ ಭೇಟಿ ಕೊಟ್ಟು, ಮಹಾಮಾಯಿ ಪತಿ ಸಿದ್ಧ ವರ್ಮನಿಗೆ ಹೆದರಬಾರದೆಂದು ಪುಸಲಾಯಿಸುತ್ತಿರುವಳೆಂದು ಕಿವಿಯೂದಿದ ಬೀರನಾಯಕ ರೋಷಗೊಂಡು, ಓಲೆಕಾರನನ್ನು ಕರೆದು ಸಿದ್ಧ ವರ್ಮನಿಗೆ ಕೋಟೆಯನ್ನು ಕೈವಶ ಮಾಡಿ ಬರಿಗೈಯಿಂದ ಸಂಸಾರಸಹಿತ ಪಾಳೇಯಕ್ಕೆ ಬಂದು ಶರಣಾಗುವಂತೆ ಆಜ್ಞಾಪತ್ರ ಕಳುಹಿಸಿದ. ಓಲೆಕಾರನು ತಂದ ರಾಜಾಜ್ಞೆಯನ್ನು ಕಂಡು ಮೊದಲೇ ಹೆದರಿದ್ದ ಸಿದ್ಧ ವರ್ಮ ಪೌಹಾರಾದಿದ. ಮೂಡುದಿಕ್ಕಿನ ಹೊಳೆಯೂಟೆಯ ವಸುಪುರದ ಮೂವರಿಂದ ಸಹಾಯ ಕೇಳಿ, ಮಂತ್ರಾಲೋಚನೆ ಮಾಡಬೇಕೆಂದು ಮಹಾಮಾಯಿ ಸೂಚಿಸಿದಳು. ಆದರೆ ಅದಕ್ಕೂ ಆತ ಅನುಮಾನಿಸಿದ. ವಸುಪುರದ ಹೆಣ್ಣನ್ನು ತಂದುದರಿಂದಲೇ ಈ ಕಷ್ಟ ಬಂದಿತೆಂದು ಆತ ತೀರ್ಮಾನಿಸಿದ್ದ. ಕೊನೆಗೆ ಏನನ್ನೂ ಹೇಳಲು ತೋರದೆ ಸಿದ್ಧ ನಾಯಕ ದಿಗ್ಭ್ರಾಂತನಾಗಿ ಕೈತಲೆಯಮೇಲೆ ಕೈಹೊತ್ತು ಕುಳಿತುಬಿಟ್ಟ. ಕೊನೆಗೆ ಮಹಾಮಾಯಿಯೇ ಧೈರ್ಯ ತಂದುಕೊಂಡಳು. ಆಕೆಯೆ ದೊತನೆಂದನೆ ಸಿದ್ಧ ವರ್ಮರಿಗೆ ಜಡ್ಡಾಗಿದೆಯೆಂದೂ, ಒಂದೆರಡು ದಿನಗಳಲ್ಲೇ ಅವರು ಬೀರನಾಯಕರನ್ನು ಇದಿರುಗೊಳ್ಳಲು ಬರುವರೆಂದೂ ಹೇಳಿಕಳುಹಿಸಿದಳು.

ಮರುದಿನ ಬೆಳಗಾಗುವುದರೊಳಗೆ ಕುಂದೂರಿನ ಜನರಲ್ಲಿ ಹಾಹಾಕಾರವೆದ್ದಿತ್ತು. ಅತ್ತ ಬೀರನಾಯಕ ದಾಳಿಮಾಡಲು ಸನ್ನದ್ಧನಾಗಿ ಬೀಡುಬಿಟ್ಟ ವಾರ್ತೆ. ಇತ್ತ ಅರಸು ಸಿದ್ಧ ವರ್ಮ ಜಡ್ಡಿನಿಂದ ಪ್ರಾಣ ನೀಗಿದ ವಾರ್ತೆ. ಸದ್ದಿಕೇಳಿ ಇದರಲ್ಲೇ ನೋ ದ್ರೌಪದಿವಿದೆಯೆಂದು ಮಾದಯ್ಯ ಶಂಕಿಸಿ, ಕೂಡಲೇ ಬೀರನಾಯಕನ ಬೀಡಿಗೆ ಓಡಿದ. ಬೀರನಾಯಕನಿಗೆ ಕಿವಿಮಾತು ಹೇಳಿ ಇಂದೇ ಕುಂದೂರಿನ ಕೋಟೆಯನ್ನು ಕೈವಶ ಮಾಡಿಕೊಳ್ಳಬೇಕೆಂದೂ ವಸುಪುರದ ಭೂಪತಿಯು ಮಗಳ ಸಹಾಯಕ್ಕೆ ಎದುರು ಬಿದ್ದರೆ, ಅನಾವಶ್ಯಕ ಪ್ರಾಣಹಾನಿಯೊಗುವುದೆಂದೂ ಸೂಚಿಸಿದ. ಮಾದಯ್ಯನ ಮಾತಿಗೆ ಮರುಳಾಗಿ ಬೀರ ನಾಯಕ ಸೈನ್ಯದ ತಳಕೆತ್ತು ಕುಂದೂರಿನಕಡೆ ದೌಡಾಯಿಸಲು ಆಜ್ಞೆ ಇತ್ತ.

ಬೆಳಕು ಹರಿಯುವ ಹೊತ್ತಿಗೆ ಪುಷ್ಪಾಸ್ತ್ರಾಚ್ಛಾದಿತ ಚಟ್ಟವನ್ನು ಕುಂದೂರಿನ ಕೋಟೆಯ ಹೊರ ವಲಯದಲ್ಲಿ ಚಿತೆಯ ಮೇಲೆ ಇಟ್ಟಿದ್ದರು. ಚಿತೆಸತ್ತಿ ಉರಿಯಲಾರಂಭಿಸಿತು. ಮಹಾಮಾಯಿ ಅರಸಿನ ವಸ್ತ್ರಾಲಂಕೃತಳಾಗಿ ಹಣೆ ತುಂಬಾ ಕುಂಕುಮ ಹೆಚ್ಚಿಕೊಂಡು ಬೊಗಸೆ ಪುಷ್ಪ ಸ್ಥಾವರವನ್ನು ಹಿಡಿದು ಚಿತೆಯೆದುರು ನಿಂತಿದ್ದಳು. ಅಷ್ಟರಲ್ಲೇ ತೆಂಕಣ ದಿಕ್ಕಿನ ಆಗಸದಲ್ಲಿ ಕೆಂಧೂಳಿ ಗೋಚರಿಸಿತು. ಬೀರ ನಾಯಕನ ಸೈನ್ಯ ಭರದಿಂದ ಕುಂದೂರಿನ ಕಡೆ ಬರುತ್ತಿರುವ ಅಬ್ಬರ ದೂರದಿಂದ ಕೇಳಲಾರಂಭಿಸಿತು. ಬೆಂಕಿ ಹೊತ್ತಿ ಉರಿಯುತ್ತಿತ್ತು. ಮಹಾಮಾಯಿ ಪುರೋಹಿತರನ್ನು ಕರೆದು ಕುಂದೂರು, ವ

(೧೦ನೇ ಪುಟ ನೋಡಿರಿ)



ಬಾಪೂಜಿಯವರು ಬಿಟ್ಟುಹೋದ ಅವರ ನಿತ್ಯೋಪಯೋಗಿ ಕೆಲವು ವಸ್ತುಗಳು.

ಬೆಚ್ಚನೆಯ ಮನೆ
ನೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ನಿಮಗೂ ಗೊತ್ತಿರಲಿ

ಪ್ರಕೃತಿ ಮನೋರಮ ಸನ್ನಿವೇಶಗಳು

ಹರಿಣೂತ್ಪನ್ನ ಸೃಷ್ಟಿಯಲ್ಲಿನ ಅದ್ಭುತಗಳನ್ನೀಕ್ಷಿಸುವಾಗ ಮೈ ರೋಮಾಂಚನವೇಳುವುದು. ಹಿಮಾಲಯದ ಹಿಮಾಚ್ಛಾದಿತ ಪರ್ವತ ಪ್ರದೇಶದಲ್ಲಿ ಚಳಿಯಿಂದ ನಮ್ಮ ರೋಮ ನಿಗುರಿಕೊಂಡರೆ, ಸಮೀಪದ ತಪ್ತನೀರ ಕುಂಡದಲ್ಲಿ ಮಿಂದಾಗ ಹರ್ಷಪುಲಕಿತ ಗಾತ್ರರಾಗುತ್ತೀವೆ!

ನಿರ್ಝರನೀಭೂತ ಹಿಮ ಸಮೂಹ ನೀರ ಧಾರೆಯು ಪ್ರವಹಿಸುವಲ್ಲಿ ಅತಿ ಉಷ್ಣೋದಕದ ನೀರ್ಜರಿಯು ಹರಿಯುವುದೆಂದರೆ ಆಶ್ಚರ್ಯದಲ್ಲಿ ಆಶ್ಚರ್ಯವಾಗಬೇಕು. ಹನ್ನೆರಡು-ಶತಮೂರು ಸಾವಿರ ಅಡಿ ಎತ್ತರದ ಪರ್ವತ ಶ್ರೇಣಿಯಿಂದ ಶ್ವೇತ ದುಗ್ಧ ನಿರ್ಮಲ ಪ್ರವಾಹ ಹರಿದು ಬಂದು ಮನವನ್ನಾಕರ್ಷಿಸುತ್ತಿರುವಾಗ, ಆ ದರ ಮೇಲೆ ಹಿಮದ ಶ್ವೇತ ಮಾಲೆಯು ಈ ಸೌಂದರ್ಯವನ್ನು ಇಮ್ಮಡಿಸುತ್ತದೆ. ಆ ಸನ್ನಿವೇಶದ ಮೇಲೆ ಬಹಳಷ್ಟು ಮೋಹಕತೆಯನ್ನು ಹುಟ್ಟಿಸುತ್ತದೆ. ಪ್ರಭಾತ ಸಮಯದಲ್ಲಿ ಸೂರ್ಯ ಕಿರಣಗಳು ಇದರ ಮೇಲೆ ಬಿದ್ದಾಗ ಪ್ರಕೃತಿ ಮಾತೆಯು ರಜತ ಕಿರೀಟವನ್ನು ತೊಟ್ಟುಕೊಂಡು ಶೃಂಗಾರಿತಳಾದಂತೆ ಭಾಸವಾಗುತ್ತದೆ. ಸಂಧ್ಯಾ ಸಮಯದಲ್ಲಿ ಈ ಹಿಮ ಶೃಂಖಲೆಯು ಸ್ವರ್ಣಮಯವಾಗಿ ಗೋಚರಿಸುತ್ತದೆ. ಉಷಃಕಾಲದಲ್ಲಿನ ನಸು ಅರುಣ ವರ್ಣದ ಕಿರಣಗಳೆಡೆಯಲ್ಲಿ ಇದನ್ನು ನಾವು ವೀಕ್ಷಿಸುವುದಾದರೆ, ಲಕ್ಷ್ಮಿಯು ಸ್ವರ್ಣ ಮುಕುಟಧಾರಣೆ ಮಾಡಿದಂತೆನಿಸುತ್ತದೆ.

ದಶಸಹಸ್ರ ಅಡಿಯೆತ್ತರದಲ್ಲಿ ಹಿಮೋದಕ ಪ್ರವಾಹ ಹರಿಯುತ್ತಿರುವ ಸಮೀಪದಲ್ಲಿಯೇ ಕುದಿಯುವ ನೀರಿನ ಸ್ರೋತವೂ ಮುಂದರಿಯುತ್ತದೆ. ಯಮುನೋತ್ರಿಯಲ್ಲಿ ಯಾತ್ರಿಕರು ಬಿಸಿ ನೀರಿನ ಊಟಿಗಳಲ್ಲಿ ಅಕ್ಕಿ—ಆಲೂಗೆಡ್ಡೆಗಳನ್ನು ಬೇಯಿಸಿತಿನ್ನುತ್ತಿರೆಂದು ಕೇಳಿದ್ದವರಿಗೆ ಆಶ್ಚರ್ಯವೆನಿಸಬಹುದಾದರೂ ಯಮುನೋತ್ರಿಯ ಯಾತ್ರೆ ಕೈಗೊಂಡರೆ, ಇದರ ಸತ್ಯತೆಯರಿವಾಗುವುದು. ಇವನ್ನು ಬೇಯಿಸುವ ಕ್ರಮವಾದರೂ ವಿಶೇಷ ರೀತಿಯದು: ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ನೀರಿನ ಊಟಿಯಲ್ಲಿ ತೇಲ ಬಿಡುತ್ತಾರೆ; ತುಸು ಹೊತ್ತಿನ ನಂತರ ಅದು ಬೆಂದು ಹೋಗುತ್ತದೆ. ಇನ್ನೂ ಸ್ವಲ್ಪಕಾಲ ಅಲ್ಲಿಯೇ ಇರಕೊಟ್ಟರೆ ಈ ಅಕ್ಕಿಯು ಬೆಂದು ಮಣ್ಣಿಗೂಗುವುದು. ಈ ಊಟಿಯು ಸಮುದ್ರ ತಳದಿಂದ ೧೦,೪೨೦ ಅಡಿ ಎತ್ತರದಲ್ಲಿದೆ.

ಗಂಗೋತ್ರಿಗೆ ಹೋಗುವ ದಾರಿಯಲ್ಲಿ ಗಂಗಾನಾನೀರ ಬೆಟ್ಟದ ಸಮೀಪದಲ್ಲಿಯೂ ಇದೇ ಮಾದರಿಯ ಒಂದು ಕುಂಡವಿದೆ. ಉತ್ತರಕಾಶಿಯಿಂದ ೩೭ ಮೈಲು ದೂರವಿರುವ ಇಲ್ಲಿ ಪರ್ವತಗಳ ಮಧ್ಯೆ ಬಿಸಿನೀರಿನ ಒಂದು ಧಾರೆಯು ಹರಿಯುತ್ತದೆ. ಇದರಲ್ಲಿ ಕೈ ಮುಳುಗಿಸಿದರೆ, ಸುಟ್ಟುಹೋಗುವುದು. ಸ್ವಲ್ಪ ಮೇಲಕ್ಕೆ ಸೋದರೆ, ಚಿಲ್ಲಿಯೂ ಅನ್ನ ಬೇಯಿಸಿಕೊಳ್ಳಬಹುದು. ಮುಂದಕ್ಕೆ ಈ ಜರಿಯು ಹರಿದು ಒಂದು ಕುಂಡದಲ್ಲಿ ದುಮುಕುವುದು; ಆದರೆ, ಇದರಲ್ಲಿ ಸ್ನಾನಮಾಡುವುದು ಸಾಧ್ಯವಿಲ್ಲ. ಅಷ್ಟು ನೀರು ಬೆಚ್ಚಗಿದೆ. ಇದಕ್ಕೆ ನಿಕಟವಾಗಿಯೇ ಇರುವ ಇನ್ನೊಂದು ಕುಂಡದ ನೀರು ಇಷ್ಟು ಬಿಸಿಯಿಲ್ಲದಿರುವುದರಿಂದ ಮಜ್ಜನವನ್ನು ಪೂರೈಸಿಕೊಳ್ಳಬಹುದು. ಪರಂಶರ ಮುನಿಯು ತಪಸ್ಸು ಮಾಡುತಿದ್ದ ಸ್ಥಳವಿದು ಎನ್ನುತ್ತಾರೆ.

ಬದರೀನಾಥದಲ್ಲಿಯೂ ಇಂತಹುದೇ ಒಂದು ಕುಂಡವಿದೆ. ಇಲ್ಲಿ ಸ್ನಾನವನ್ನೂ ಮಾಡಬಹುದು. ಅತ್ಯುನ್ನತ ಪರ್ವತಮಾಲೆಯಿಂದ ಉಷ್ಣೋದಕ ಪ್ರವಾಹಪೊಮ್ಮುವ ಪರ್ವತ ಪಾಷಾಣಗಳೆಡೆಯಿಂದ ಹರಿಯುತ್ತ ಬರುವುದು. ೧೦,೫೦೦ ಅಡಿ ಎತ್ತರದಲ್ಲಿರುವ ಈ ಸ್ಥಳದಿಂದ ಆದೆಷ್ಟೋ ಎತ್ತರದಲ್ಲಿ ಈ ಧಾರೆಯ ಮೂಲವಿದೆ ಎನ್ನುತ್ತಾರೆ. ಬದರೀನಾಥ ಕುಂಡದ ನೀರಿನ ಉಷ್ಣತೆಯು ಅನ್ನ ಬೇಯುವಷ್ಟಿಲ್ಲ; ಆದರೆ, ಸ್ನಾನ ಮಾಡುವುದಕ್ಕೀನೂ ಆತಂಕವಿಲ್ಲ, ಕೆಲವೊಮ್ಮೆ ಈ ನೀರಿನ ತಾಪಮೂನವು ಏರಿ ವಿಷಕ್ಕೆ ಅಯೋಗ್ಯನೆನಿಸುವುದೂ ಇದೆ. ಭಕ್ತಿಭಾವಭರಿತರುಗಿಂವ ಯಾತ್ರಿಕರು ಇದಕ್ಕೆ ಹೆದರದೆ, ಆತ್ಮಸಂತೋಷದಿಂದ ಇದರಲ್ಲಿಯೇ ಸ್ನಾನ ಮಾಡುತ್ತಾರೆ. ಬಹು ದೀರ್ಘೆ ಯಾತ್ರೆಯ ಆಯಾಸವೆಲ್ಲವನ್ನೂ ಈ ಬಿಸಿ ನೀರ ಸ್ನಾನವು ಪರಿಹರಿಸಿ ಯಾತ್ರಿಕನಲ್ಲಿ ನವೋತ್ಸಾಹವನ್ನೂ ನವ ಸ್ಫೂರ್ತಿಯನ್ನೂ ಹೊಮ್ಮಿಸುತ್ತದೆ.

ಯಮುನಾ ಪ್ರವಾಹವನ್ನು ಪಾರು ಮಾಡಿ ಇನ್ನೊಂದು ದಡವನ್ನು ಸೇರಿದಾಗ ವಿಶಾಲವಾದ ಪರ್ವತ ಬಂಡೆಗಳ ಇಡುಕುರಲ್ಲಿ ಬಿಸಿ ನೀರ ಧಾರೆಯೊಂದು ಹರಿದು ಬರುವುದನ್ನು ಕಾಣಬಹುದು. ಈ ಉಷ್ಣೋದಕ ಪ್ರವಾಹವು ಯಮುನೆಯ ಶೀತಲ ನೀರನ್ನು ಸೇರುವುದು. ಅಲ್ಲಯೇ ಕೆನಾರೆಯುಲ್ಲಿ ರಚಿಸಲ್ಪಟ್ಟ ಒಂದು ಕುಂಡದಲ್ಲಿನ ಉಗುರು ಬೆಚ್ಚಗಿನ ನೀರಿನಲ್ಲಿ ಯಾತ್ರಿಕರು ಸ್ನಾನ ಮಾಡಬಹುದಾಗಿದೆ.

ಈ ಸ್ಥಳದಿಂದ ತುಸು ಮೇಲೇರಿದರೆ, ಬಂಡೆಕಲ್ಲುಗಳ ನಡುವೆಯೊಂದು ಕಾರಂಜಿಯು ಪುಟಿನೆಗೆದು ಬರುವುದು ಕಣ್ಣಿಗೆ ತೋರುವುದು. ಉಗಿಯು ಮೋಡವು ನಾಲ್ಕೂನಿಟ್ಟುಗಳನ್ನು ಕವಿದಿರುವುದು. ಸಮೀಪದಲ್ಲಿನ ಯಮುನೋತ್ರಿ ಮಂದಿರದ ಮಾಡಿನ ಮೇಲ್ಗಡೆ ಇಬ್ಬನಿಯ ಹೊದಿಕೆಯಂತೆ ಕೆಲವೊಮ್ಮೆ ಇದು ಕಂಡು ಬಂದರೆ, ಮತ್ತೆ ಕೆಲವೊಮ್ಮೆ ಮೋಡಗಳು ಕರಗಿ ಹೋಗಿ ಸೂರ್ಯನ ತೀವ್ರ ಕಿರಣಗಳು ಸರ್ವತ್ರ ಹರಡಿ ಬಿಡುತ್ತವೆ. ಇಂತಹ ಮನೋರಮ ದೃಶ್ಯವನ್ನು ಕಣ್ಣಾರೆ ಸವಿಯಬೇಕೆ ನಿಸಲೇಬೇಕು.

ಇಲ್ಲಿಯ ತಪ್ತನೀರ ಕುಂಡದ ಸಮೀಪದಲ್ಲಿನ ವಿಶಾಲ ಬೆಟ್ಟಗಳಲ್ಲಿ ಅಲ್ಲಲ್ಲಿ ಹಿರಿಯ ಕಿರಿಯ ತೂತುಗಳಿವೆ. ಇವುಗಳನ್ನು ಪಂಡ ಜನರು ಕಲ್ಲು ಬೆಣಿಗಳಿಂದ ಮುಚ್ಚಿಡುತ್ತಾರೆ. ಪಂಡದವರು ಅವಶ್ಯಕತೆಬಿದ್ದಾಗ್ಗೆಈ ಬೆಣಿಗಳನ್ನು ಕಿತ್ತು ತೆಗೆಯುತ್ತಾರೆ ಆಗ ಬಿಸಿನೀರು ಊಟಿಯಾಗಿ ಮೇಲೆ ಚಿಮ್ಮುತ್ತದೆ. ಇವು ಅತ್ಯಂತ ರಭಸದಿಂದ ಸೀಟಿಯೂದುತ್ತ ಬರುವಂತೆ ತೋರುತ್ತವೆ

ಬಿಸಿನೀರಿನ ಸ್ರೋತಗಳು ಪ್ರಪಂಚದ ಅನ್ಯ ದೇಶಗಳಲ್ಲಿಯೂ ಇವೆ. ಧ್ರುವ ಸ್ಥ ದೇಶಗಳಂತಹ ಅತಿ ಶೀತಲ ಸ್ಥಾನಗಳಲ್ಲಿಯೂ ತಪ್ತನೀರ ಸ್ರೋತಗಳಿರುವುದುಂಟು; ಸಮಶೀತೋಷ್ಣ ತಾಪಮಾನವಿರುವಲ್ಲಿಯೂ ಇವುಗಳಿವೆ. ಉಕ್ಕಿ ಚಿಮ್ಮುವ ಈ ಬಿಸಿನೀರಿನ ಊಟಿಗಳ ಬಗ್ಗೆ ವೈಜ್ಞಾನಿಕರು ಬಹಳಷ್ಟು ವಿಶ್ಲೇಷಣೆಮಾಡಿ, ಅವುಗಳಲ್ಲಿ ಅನೇಕ ರೋಗನಾಶಕ ಗುಣಗಳಿವೆಯೆಂದು ಒಪ್ಪಿಕೊಂಡಿದ್ದಾರೆ. ಇವುಗಳಲ್ಲಿ ಮಿಯುವುದರಿಂದ ನಾನಾಪ್ರಕಾರದ ಚರ್ಮರೋಗಗಳು ದೂರವಾಗುತ್ತವೆ; ಉದರರೋಗಕ್ಕೂ ಪರಿಣಾಮಕರ ಚಿಕಿತ್ಸೆಯೆದಗಿಸುವ ಕೆಲವೊಂದು ಚಿಲುಮೆಗಳೂ ಸೃಷ್ಟಿಯಲ್ಲಿವೆ.

ಭೂಗರ್ಭದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬಿಸಿ ನೀರು ತುಂಬಿದೆಯೆಂಬುದು ಭೂಗರ್ಭಶಾಸ್ತ್ರವೇತ್ತರ ಹೇಳಿಕೆಯಾಗಿದೆ. ಇವರು ಸಾಕಷ್ಟು ಆಳದ ವರೆಗೆ ಭೂಮಿಯನ್ನು ಅಗೆದು ಈ ತಥ್ಯವನ್ನು ಪ್ರೋಕ್ಷಿಸಿದ್ದಾರೆ. ಅಲ್ಲದೆ ಇನ್ನೂ ಆಳವನ್ನಗೆಯುವುದರಲ್ಲಿ ತತ್ಪರರಾಗಿದ್ದಾರೆ. ಜ್ವಾಲಾಮುಖಿ ಪರ್ವತಗಳಿರುವಲ್ಲಿ ಇಲ್ಲವೇ ಇವುಗಳಿಗೆ ಸಮೀಪದಲ್ಲಿಯೇ ಬಿಸಿನೀರ ಪ್ರವಾಹಗಳಿರುವುವೆಂದು ವೈಜ್ಞಾನಿಕರ ಅಭಿಮತ. ಪರ್ವತ ಮಧ್ಯದಲ್ಲಿ ಚಿಮ್ಮಿ ಬರುವ ಈ ಊಟಿಗಳು ಭೂಗರ್ಭದಲ್ಲಿಯೇ ಬಿಸಿಗೊಂಡು ಬಂದಿರುವೆನೆಂದು ನಾರಿ ಹೇಳುತ್ತವೆ. ಶ್ವೇತ ಹಿಮಾಚ್ಛಾದಿತ ಹಿಮಾಲಯದ ಅಡಿ ಅಸೆಸ್ಟು ತಪ್ತ ನೀರ ಸ್ರೋತಗಳಿರುವುವೆಂದು ಯಾರಿಗೆ ಗೊತ್ತು? ಯಮುನೋತ್ರಿ ಗಂಗಾನಾಥಿ ಹಾಗೂ ಬದರೀನಾಥದ ಬಿಸಿ ನೀರ ಸ್ರೋತಗಳಿಂದ ಹಿಮಾಲಯವು ಜ್ವಾಲಾಮುಖಿ ಪರ್ವತ ಶ್ರೇಣಿಯೆಂದು ತಿಳಿಯಬಹುದು.

ಸೃಷ್ಟಿಯ ಆರಂಭದಿಂದಲೂ ಭೂಮಿಯ ಒಂದೆಲ್ಲೊ ಒಂದು ಭಾಗದಲ್ಲಿ ಬಿಸಿನೀರಿನ ಪ್ರವಾಹಗಳು ದೊರೆಯುತ್ತವೆಯೆಂದು ಭೂಗೋಳ ಶಾಸ್ತ್ರಗಳ ಹೇಳಿಕೆಯಾದೆ. ಬಿಸಿನೀರ ಊಟಿಗಳೇಳುವಲ್ಲಿ ಕಲ್ಲಿದ್ದಲು ಹಾಗೂ ಕಲ್ಲೆಣ್ಣೆಯ ನಿಕ್ಷೇಪಗಳು ಅವಶ್ಯ ಇರಲೇ ಬೇಕೆಂದು ಭೂಗರ್ಭ ಶಾಸ್ತ್ರಗಳು ಈಗ ಸಿದ್ಧಾಂತಿಸಿದ್ದಾರೆ. ಹಿಮಾಲಯದ ವಿಷಯದಲ್ಲಿಯೂ ಹೀಗೆ ಎಲ್ಲಿದೆ ಎಂದು ಹೇಳುವುದು ಮಾತ್ರ ಕಷ್ಟ ಸಾಧ್ಯ.

ಭಾರತದಲ್ಲಿರುವ ತಪ್ತನೀರ ಸ್ರೋತವು ಅನೇಕ ರೋಗನಿವಾರಕ ಶಕ್ತಿ ಪಡೆದಿದೆ. ಧಾರ್ಮಿಕ ಸ್ಥಾನಗಳಲ್ಲಿರುವ ತಪ್ತ ನೀರಕುಂಡ ಸ್ನಾನಕ್ಕೆ ವಿಶೇಷ ಪ್ರಾಧಾನ್ಯವಿದೆ. ಬದರೀನಾಥದ ಕುಂಡದಲ್ಲಿ ವಿಷಯುಕ್ತವರಿಂದ ಅನೇಕ ಚರ್ಮ ರೋಗಗಳು ದೂರವಾಗುತ್ತವೆಯೆಂದು ಅನ್ನುತ್ತಾರೆ. ಸಂಜೀವಿನೀ ಬೇರಿನ ಕೆಲವನ್ನಿದು ಮಾಡುತ್ತದೆಯೆಂದು ಉತ್ತರ ಭಾರತದ ಜಾನಪದಗೀತೆಯಲ್ಲಿ ಹೇಳಲಾಗುತ್ತದೆ. ಇದೇನೀತಿ ಅನೇಕ ರೋಗಗಳನ್ನು ನಿರ್ಮೂಲನಗೊಳಿಸುವ ಅದ್ಭುತಶಕ್ತಿ ಯಮುನೋತ್ರಿಯ ಬಿಸಿನೀರ ಪ್ರವಾಹಕ್ಕಿದೆ.

ಹಿಮಾಲಯದುದ್ದದಲ್ಲಿ ಹಂದು ಬರುತ್ತಿರುವ ನೂರಾರು ಬಿಸಿನೀರ ನದಿಗಳ ಮೂಲವೆಲ್ಲಿಯೆಂದು ಹೇಳುವುದು ಕಷ್ಟ. ಈ ಸ್ರೋತಗಳ ಪ್ರಕೃತಿಯ ಮಹಾನತೆಯ ದ್ಯೋತಕವೆಂದು ಮಾತ್ರ ನಿಸ್ಸಂಶಯವಾಗಿ ಹೇಳಬಹುದು.

(ಹಿಂದಿಯಿಂದ)

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ

ದಿ ಪೊಂಗಾಳ ನಾಯಕ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ತೊಡಗಿಸಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕವಾಯಿದೆ, ನಿರಖು ತೊವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

(ಸ್ಥಾಪನೆ: 1920)

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

ಪೆದರಬೇಡಿ

ಹೃದಯ ಬಗಿಯುವುದೂ ಸಾಮಾನ್ಯ ಮಾತು!

ಹೃದಯ ಬಗಿಯುವುದು, ಬಗಿಸಿಕೊಳ್ಳುವುದು ಎರಡೂ ಭಯಭೀತಗೊಳಿಸುವ ಸಂಗತಿಗಳಾಗಿವೆ. ಆದರೆ ಇನ್ನು ಕೆಲವೇ ವರ್ಷಗಳಲ್ಲಿ ಇದು ಗೊಂಬೆಯಾಟದಂತೆ ಸರ್ವೇಸಾಮಾನ್ಯವಾಗಬಹುದು ಖಂಡಿತ. ಆಧುನಿಕ ವಿಜ್ಞಾನವು ನಮಗಿತ್ತ ಹೃದಯ ಶಲ್ಯ ಚಿಕಿತ್ಸಾ ವಿಧಾನದ ಅಮೂಲ್ಯ ಕೊಡಗೆಯಿದು.

(ಸಂಗ್ರಹಿತ ಲೇಖನ)

ಆಧುನಿಕ ಚಿಕಿತ್ಸಾವಿಜ್ಞಾನವು ಹೃದಯ ಶಲ್ಯ ಚಿಕಿತ್ಸೆಯನ್ನು ಕನ್ನ ದೇಣಿಗೆಯಾಗಿ ನಮಗೆ ಇತ್ತಿದೆ. ಹಲವು ಶತಮಾನಗಳಿಂದಲೂ ಶಲ್ಯ ಚಿಕಿತ್ಸಕರು ನೂನನ ಶರೀರದ ಮಹತ್ವಪೂರ್ಣಾಂಗವಾದ ಹೃದಯವನ್ನು ಕತ್ತರಿಸುವುದೆಂದರೆ ಅವಾಯಕ್ಕೆ ಕರೆಕೊಟ್ಟಂತೆ ಎಂದು ಭಾವಿಸುತಿದ್ದರು. ಈ ಬಗ್ಗೆ ಕೆಲವೊಂದು ಪ್ರಯತ್ನಗಳು ನಡೆದರೂ ಅವು ನಿಷ್ಫಲಗೊಂಡುವು. ಆದರೂ ಮುಂದೆ, ಎಡತಾಕಿದ ಅನೇಕಾನೇಕ ವಿಘ್ನ ವಿಡ್ಡೂರಗಳನ್ನು ಸಹಿಸಿಕೊಂಡು ಮುಂದುವರಿದಾಗ ಕೊಟ್ಟ ಕೊನೆಗೆ ಸಫಲತೆ ಪ್ರಾಪ್ತವಾಯಿತು. ನೊತ್ತಮೊದಲಿಗೆ ಸೋವಿಯತ್ ದೇಶವು ಹೃದಯ ಶಲ್ಯ ಚಿಕಿತ್ಸೆಗೆ ಕೈಹಾಕಿ ಅದನ್ನು ಸಂಭವನೀಯವನ್ನಿಸಿತು.

ಕಳೆದ ಶತಮಾನಂತ್ಯದಲ್ಲಿ ಶಲ್ಯ ಚಿಕಿತ್ಸಕರು ಹೃದಯದ ಗಾಯಗಳನ್ನು ಹೊಲಿಯುವ ಪ್ರಯತ್ನವನ್ನು ಪ್ರಥಮ ಬಾರಿಗೆ ನಡೆಸಿದರು. ಆದರೆ, ಹೃದಯ ಚಿಕಿತ್ಸೆ ಸದೆಬೆದೆ ಹೋದರೆ ರೋಗಿಯು ಖಂಡಿತಕ್ಕೂ ಮೃತ್ಯುಮುಖನಾಗುವನೆಂದು ತೋರಿಬಂದರೆ ಮಾತ್ರ ಈ ಚಿಕಿತ್ಸೆ ನೂಡುತಿದ್ದರು. ಇದಾದ ಹಲವು ವರ್ಷಾನಂತರ ಮಾನವನ ರೋಗಗ್ರಸ್ತ ಹೃದಯವನ್ನು ಕತ್ತರಿಸಿ ಹೊಲಿಯುವುದು ಸುಲಭ ಸಾಧ್ಯವೆನಿಸಿತು.

ಹೃದಯ ಶಲ್ಯ ಚಿಕಿತ್ಸೆಯ ಫಲಸ್ವರೂಪವಾಗಿ ರೋಗಿಗುಂಟಾಗುವ ಆಘಾತವೇ ಈ ಚಿಕಿತ್ಸೆಯಲ್ಲಿನ ದೊಡ್ಡ ಭಾದೆಯಾಗಿತ್ತು. ಹೃದಯ ಚಿಕಿತ್ಸೆಯಿಂದಾಗಿ ರೋಗಿಯ ರಕ್ತ ಚಾಪವು ಆತಿ ಶೀಘ್ರದಲ್ಲಿ ಕಡಿಮೆಯಾಗುವುದು; ಹೃದಯದ ಗತಿ ವಿಧಿಯು ಆತಿ ಕ್ಷೀಣವಾಗುವುದು; ಕೆಲವೊಮ್ಮೆ ಮರಣ ಸಂಭವಿಸುವುದೂ ಇದೆ.

ಮೂರ್ಚ್ಛಾಕಾರಕ ಔಷಧಿಗಳಿಂದಲೂ ರೋಗಿಯನ್ನು ಈ ಆಘಾತದಿಂದ ಉಳಿಸುವುದು ಸಾಧ್ಯವಾಗಿರಲಿಲ್ಲ. ಆದುದರಿಂದ ಇದಕ್ಕೆ ಪ್ರಭಾವಶಾಲಿ ವಿಧಾನಗಳು ಅನಿವಾರ್ಯವಾಗಿದ್ದುವು. ಈಗ ಮೂರ್ಛಾಕಾರಕ ಔಷಧಿಯನ್ನು ಒಂದು ನಾಳದ ಮೂಲಕ ನೇರವಾಗಿ ರೋಗಿಯ ಶ್ವಾಸನಾಳಕ್ಕೆ ಮುಟ್ಟಿಸುತ್ತಾರೆ. ಇದರಿಂದ ರೋಗಿಯು ಸಂಪೂರ್ಣ ಮೂರ್ಛಿತಾವಸ್ಥೆಗೆ ಬರುವಂತೆ ಸಗುತ್ತಾರೆ ಇಷ್ಟು ಮಾತ್ರವಲ್ಲದೆ ವಿಶೇಷ ಔಷಧಿಗಳ ಪ್ರಯೋಗದಿಂದ ರೋಗಿಯ ಚೇತನಾ ಕೇಂದ್ರದ ಮೇಲೆ ಪ್ರಭಾವ ಬೀರುವಂತೆ ಮಾಡುತ್ತಾರೆ.

ಹೃದಯ ಶಲ್ಯ ಚಿಕಿತ್ಸೆಯಲ್ಲಿದ್ದ ಇನ್ನೊಂದು ತೊಡಕೆಂದರೆ, ಶ್ವಾಸಕೋಶಗಳಲ್ಲಿ ವಾಯುವನ್ನು ತುಂಬಿಸುವುದಾಗಿ ಕತ್ತರಿಸಿದ ಶಲ್ಯ ಚಿಕಿತ್ಸೆಯ ಸಮಯ. ರೋಗಿಯ ಶ್ವಾಸಕೋಶಗಳನ್ನು ನಿಷ್ಕ್ರಿಯಗೊಳಿಸುತಿದ್ದರು; ಇವುಗಳು ಉಚ್ಛ್ವಾಸ—ನಿಶ್ವಾಸ ಕ್ರಿಯೆಯನ್ನು ನೂಡುತ್ತಿರಲಿಲ್ಲ. ಈಗಲಾದರೋ ಶ್ವಾಸ ನಾಳಕ್ಕೆ ಸಿಕ್ಕಿಸಿದ ನಾಳಗಳಿಂದ ಶ್ವಾಸಕೋಶಗಳಲ್ಲಿ ಒತ್ತಡವನ್ನು ಹೆಚ್ಚಿಸುವುದು ಸಾಧ್ಯವೆನಿಸಿದೆ. ಇದರಿಂದ ಶ್ವಾಸಕೋಶಗಳು ಹಿಗ್ಗುತ್ತವೆ; ಚಿಕಿತ್ಸೆಯ ವೇಳೆಯಲ್ಲೂ ಇವಕ್ಕೆ ಗಾಳಿ ಸಿಗುತ್ತದೆ. ಈ ಕ್ರಮವನ್ನು "ನಿಯಂತ್ರಕ ಶ್ವಾಸ ಕ್ರಿಯೆ" ಎಂದು ಹೇಳುತ್ತಾರೆ. ಇದನ್ನು ಶಿಥಿಲಗೊಳಿಸುವ ವಿಶೇಷ ಔಷಧಿಗಳಿಂದ ಸಾಧಿಸುವುದು ಸಾಧ್ಯವಾಗಿದೆ. ಈ ಔಷಧಿಗಳು ಮಾಂಸ ಪೇಶಿಗಳನ್ನು ಶಿಥಿಲಗೊಳಿಸುತ್ತವೆ.

ಆಧುನಿಕ ಶಲ್ಯ ಚಿಕಿತ್ಸೆಯಲ್ಲಿ ಪರ್ಫೂಸ್ಪ ಪ್ರವಾಣದಲ್ಲಿ ರಕ್ತವನ್ನು ಕೊಡುವ ಮಹತ್ವಪೂರ್ಣ ಕೆಲಸ ನಡೆಯುವುದರಿಂದ ರಕ್ತದ ಅಭಾವನಿಷ್ಟಿದ್ದರೂ ಅದು ತುಂಬಿ ಒರುವುದು; ಶರೀರದ ಮುಖ್ಯಾಂಗ ಹೃದಯವು ತನ್ನ ಕೆಲಸಕ್ಕೆ ತೊಡಗುವುದು. ಶಲ್ಯ ಚಿಕಿತ್ಸಕನು ರಕ್ತವನ್ನು ಸಿರಗಳಿಗೆ ಮಾತ್ರವಲ್ಲ, ಅವಶ್ಯಕತೆ ಎನ್ನುದು ತೋರಿದಾಗ ನೇರವಾಗಿ ಧಮನಿಗಳಿಗೇ ನೇ ಮುಟ್ಟುವಂತೆ ಕೊಟ್ಟು ಹೃದಯಕ್ಕೆ ನಿರಂತರವಾಗಿ ರಕ್ತ ದೊರೆಯುವಂತೆ ಮಾಡುತ್ತಾನೆ. ರಕ್ತ ಪರಿಚಲನೆಯು ಪರಿಯಾಗಿ ನಡೆಯುವಂತೆ ಎಚ್ಚರಿಕೆ ವಹಿಸುತ್ತಾನೆ.

ಶಲ್ಯಚಿಕಿತ್ಸೆ ನೂಡುವಾಗ, ರಕ್ತ ಪರಿಚಾಲನೆಯಿತರ ಅಂಗಗಳಿಂದ ಹೃದಯವನ್ನು ಪ್ರತ್ಯೇಕಿಸಿಡಬೇಕಾಗಿದೆ; ಪುಪ್ಪು ಕಾಲದವರೆಗೆ ಹೃದಯವನ್ನು ಬೇರ್ಪಡಿಸಲು ಕೃತ್ರಿಮ ಹೃದಯವನ್ನು ಅವರ ಸ್ಥಾನದಲ್ಲಿರಿಸುವುದು ಈಗ ಸಾಧ್ಯವೆನಿಸಿದೆ. ಈ ಕೃತಕ ಹೃದಯವು ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ಮುಕ್ಕಾಲು ತಾಸುಗಳವರೆಗೆ ನಿರ್ವಹಿಸಬಲ್ಲುದು.

ಹೃದಯ ಶಲ್ಯ ಚಿಕಿತ್ಸೆಯಲ್ಲಿ ಇನ್ನೊಂದು ವಿಧಿಯಿದೆ. ಇದನ್ನು 'ಹೈಪೊಥರ್ಮಿ' ಎನ್ನುತ್ತಾರೆ. ಶರೀರದ ಉಷ್ಣತೆಯಿಳಿಕೆ ನ್ಯಾಣಗಳನ್ನು ನಿರೀಕ್ಷಿಸಿದಾಗ ಅವುಗಳ ಉಷ್ಣತೆ ಕಡಿಮೆಯಾಗಿರುವಷ್ಟು ಕಡಿಮೆ ಅವ್ಲಜನಕವು ಅವುಗಳಿಗೆ ಸಾಕೆಂದು ಗೊತ್ತಾಗಿದೆ. 'ಒಂದು ಆರೋಗ್ಯವಂತ ಸಾಮಾನ್ಯ ಶರೀರದ ಪ್ರತಿಯಿನ ರಕ್ತ ಪರಿಚಲನೆಯನ್ನು ಮೂರು—ನಾಲ್ಕು ನಿಮಿಷಗಳವರೆಗೆ ಕಡಿಮೆ ನಿಲ್ಲಿಸಬಹುದು; ಶರೀರದ ತಾಪಮಾನವು ೩೦ ಡಿಗ್ರಿಯಷ್ಟು ಇಳಿದರೆ, ಗರಿಷ್ಠ ೫೦ ನಿಮಿಷಗಳ ವರೆಗೆ ತಡೆಯಬಹುದು.

ಇದರಂತೆಯೇ ರೋಗಿಯ ಶರೀರದ ಉಷ್ಣತೆಯನ್ನು ಇಳಿಸುವ ಕ್ರಮಕ್ಕೆ 'ಹೈಪೊಥರ್ಮಿ' ಎನ್ನುತ್ತಿರಿ. ಮಸ್ತಿಷ್ಕದ ಕೋಶಗಳಲ್ಲಿ ಅವ್ಲಜನಕದ ಅಭಾವವನ್ನು ತಡೆಗಟ್ಟುವುದಕ್ಕೂ ಈಗ ಈ ಕ್ರಮವನ್ನು ಬಳಸಿಕೊಳ್ಳುತ್ತಾರೆ. ಅವ್ಲಜನಕದ ಅಭಾವದಿಂದ ರೋಗಿಯು ಮೃತ್ಯುಮುಖನಾಗುತ್ತಾನೆ. 'ಹೈಪರ್ಥೀಶನ್' ಎಂಬ ಇನ್ನೊಂದು ವಿಧಾನದಿಂದಲೂ ರೋಗಿಯ ಉಷ್ಣತೆಯನ್ನು ಕಡಿಮೆ ಮಾಡುವುದು ಈಗ ಸಾಧ್ಯವೆನಿಸಿದೆ. ರಕ್ತ ಪ್ರಸಾರವನ್ನು ನಿಯಂತ್ರಿಸಬಲ್ಲ, ರಕ್ತದ ಒತ್ತಡವು ಕಡಿಮೆಯಾಗದಲ್ಲ, ಶಲ್ಯ ಚಿಕಿತ್ಸೆಯ ಸಮಯ ನಿಯಮಿತರೂಪದಲ್ಲಿ ರಕ್ತ ಪ್ರಸಾರವನಾಗಬಲ್ಲಂತೆ ಮಾಡುವ ಔಷಧಿಗಳನ್ನು ಶಲ್ಯ ಚಿಕಿತ್ಸೆಯ ವೇಳೆ ಉಪಯೋಗಿಸಿಕೊಳ್ಳಲಾಗುತ್ತದೆ.

ಹೃದಯ ಶಲ್ಯ ಚಿಕಿತ್ಸೆಯನ್ನು ಸುಲಭಸಾಧ್ಯಗೊಳಿಸಿದ ಒಂದು ನಿರ್ದಿಷ್ಟ ಶರೀರವನ್ನಿಲ್ಲಿ ಉಲ್ಲೇಖಿಸಬಹುದು. ರಕ್ತ ವಾಹಿಗಳನ್ನು ಹೊಲಿಯುವ ಯಂತ್ರವೊಂದರಿಂದ ಇದು ಸಾಧ್ಯವಾಗಿದೆ. ಇದು ಮೊದಲು ರಬ್ಬರಿದಲ್ಲಿ ನಿರ್ಮಾಣಗೊಂಡಿತು. ಇದರ ಸಹಾಯದಿಂದ ಮಾನವನ ಕೆಟ್ಟ ನಾನಾಡಿಗಳನ್ನು ಕತ್ತರಿಸಿ ತೆಗೆದು ಅವುಗಳ ಸ್ಥಾನದಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಹೆಣಗಳ ನಾಡಿಗಳನ್ನು ಅಥವಾ ಪ್ಲಾಸ್ಟಿಕ್ಕಿನ ಕೃತಕ ನಾಡಿಗಳನ್ನು ಜೋಡಿಸುವುದು ಸಾಧ್ಯವಿದೆ.

ಈ ಚಿಕಿತ್ಸೆಯಲ್ಲಿ ಮುಖ್ಯವಾಗಿ ವಾಲ್ವ್ ಸ್ಟಿರ್, ನೈಲನ್, ವೋಲೀನಿನಾಮಲ್, ಅಲ್ಯಾಷಾಲ್ ಮೊದಲಾದುವುಗಳ ಪ್ರಯೋಗ ಅತ್ಯಧಿಕವಾಗುತ್ತಿದೆ. ಹೃದಯದ ಸ್ಥಾನದಲ್ಲಿ ಕೃತ್ರಿಮ ಗುಂಡಿಗೆಯ ರಚನೆ, ಮಹಾಧಮನಿ ಮತ್ತು ಅವರ ವಿವಿಧ ಶಾಖೋ

(ಇನೇ ಪುಟ ನೋಡಿರಿ)

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಶಿರ್ವಾ ಬ್ರಾಂಚ್, ದ. ಕ.
The Catholic Bank Ltd., Shirva Branch, S. K.
ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರೆ, ಸದ್ರಿ ಬ್ಯಾಂಕಿನಿಂದ ಪಿನ್ನಾಭರಣಗಳ ಈಡಿನ ಮೇರೆ, ಪಡಕೊಂಡ ಸಾಲವನ್ನು ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ನೂಡದಿರುವುದರಿಂದ ಸದ್ರಿಯವರಿಗೆ, ನ, ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರಿಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 24-11-60ರ ಒಳಗೆ ಬಿಡಿಸಿದಿದ್ದಲ್ಲಿ 26-11-60ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ, ಯಾ ನಂತರ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಶಿರ್ವಾ ನೋಟೀಸು ಕೊಡಮೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

G. L. No. & Date	Name and Address	Amount Advanced
34/1269 14- 7-58	ಶ್ರೀ ಈಶ್ವರ ಸೇರಿಗಾರ S/O ಕೀನ ಸೇರಿಗಾರ, ಮಾಬಿಟ್ಟು ಮಟ್ಟಾರ್ ಪೋಸ್ಟ್, ಶಿರ್ವ, ದ. ಕ.	30 = 00
34/1378 22- 7-58.	ಶ್ರೀ ಸಾಲು ದಿಸೋಜ, S/O ಸಾಲು ದಿಸೋಜ, ಮಟ್ಟಾರ್ ಪಾಲ್ಕೆ, ಮಟ್ಟಾರ್ ಪೋಸ್ಟ್, ಶಿರ್ವ, ದ. ಕ.	150 = 00
34/1585 11- 8-58.	ಶ್ರೀ ಕೆ. ಶ್ಯಾಮರಾಯ ಆಚಾರಿ, S/O ಸೇಸಪ್ಪ ಆಚಾರಿ, ಮೂಡಬೈಲು, ಪಾದೂರು ಪೋಸ್ಟ್, ದ. ಕ.	40 = 00
34/1560 13- 8-58.	ಶ್ರೀ ಬಾಲಕೃಷ್ಣ ಸೆಟ್ಟಿ, S/O ಜೋಗಪ್ಪ ಹೆಗ್ಡೆ, ಕಾರ್ಕಳೊಟ್ಟು, ಶಿರ್ವಾ ಪೋಸ್ಟ್, ದ. ಕ.	10 = 00
34/1629 22- 8-58.	ಶ್ರೀಮತಿ ಕರಗಿ W/O ಪದ್ದು ಮೇಸ್ತ್ರಿ, ತಂಕರೆ ಪಲ್ಕೆ, ಶಿರ್ವಾ ಪೋಸ್ಟ್, ದ. ಕ.	20 = 00
34/1862 20- 8-58.	ಶ್ರೀ ರಗುನಾಥ ಸೆಟ್ಟಿ, S/O ಬಾಬು ಸೆಟ್ಟಿ, ಕಲತ್ತೂರು ಹೊಸಮನೆ, ಪಾದೂರು ಪೋಸ್ಟ್, ದ. ಕ.	50 = 00
35/1258 18- 7-59.	ಶ್ರೀ ಕೃಷ್ಣಪ್ಪ ಪೂಜಾರಿ, N/O ಚಂದು ಪೂಜಾರಿ, ಬೋನಂಜಲು, ಅರಬಿಮನೆ, ಮಟ್ಟಾರ್ ಪೋಸ್ಟ್, ಶಿರ್ವಾ ದ. ಕ	35 = 00
35/1315 23- 7-59.	ಶ್ರೀ ಸಿಲ್ವಸ್ತೆರ್ ದಾಲ್ಮೆದಾ, S/O ರುಜಾರಿಯೋ ದಾಲ್ಮೆದಾ, ಕಂಜಾನ, ಪಿಲಾರ್ ಪೋಸ್ಟ್, ಶಿರ್ವಾ, ದ ಕ.	40 = 00
35/1413 3- 8-59.	ಶ್ರೀ ಬಿ. ವಿಠಲ ಹೆಗ್ಡೆ, N/O ಶೀನಪ್ಪ ಹೆಗ್ಡೆ, ನಂದಿಬೆಟ್ಟು, ಶಿರ್ವಾ ಪೋಸ್ಟ್, ದ. ಕ.	30 = 00
35/1432 6- 8-59.	ಶ್ರೀ ಶಿವಂಯ ಪ್ರಭು, S/O ಅನಂತ ಪ್ರಭು, ಪಿಲ್ಲಾನಡು ಮನೆ, ಕಡುತ್ತ ಕುಬೆರಿ ಪೋಸ್ಟ್, ಶಿರ್ವಾ, ದ. ಕ.	25 = 00
35/1572 22-8-59.	ಶ್ರೀ ಮರ್ಸೆಲ್ ಮಿನೇಜಸ್, S/O ಮಿಂಗೆಲ್ ಮಿನೇಜಸ್, ಕುಡುತ್ತ ಮಜಲ್, ಶಿರ್ವಾ ಪೋಸ್ಟ್, ದ. ಕ.	70 = 00
35/1565 24- 8-59.	ಶ್ರೀ ಜೋಜ ಸೆಟ್ಟಿ N/O ಕೊರಗು ಸೆಟ್ಟಿ, ಮಾಡಬೆಟ್ಟು, ಸೂಡ ಪೋಸ್ಟ್, ಶಿರ್ವಾ, ದ. ಕ.	30 = 00
35/1575 25- 9-59.	ಶ್ರೀ ಸಿಲ್ವಾಸ್ತೆರ್ ದಾಲ್ಮೆದಾ S/O ರುಜಾರಿಯೊ ದಾಲ್ಮೆದಾ, ಕಂಜಾನ, ಪಿಲಾರ್ ಪೋಸ್ಟ್, ದ. ಕ.	140 = 00

Office of The Catholic Bank Ltd, Shirva, S. K. 22—10—60.

(Sd.) M. Bhasker Shet, Agent.

ಹಾಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2 V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಸುಖ ಮತ್ತು ದುಃಖಗಳು ಮಾನವ ಜೀವನದ ಎರಡು ರೂಪಗಳು. ದುಃಖವು ನಮ್ಮನ್ನು ಕರ್ತವ್ಯದತ್ತ ಜಾಗ್ರತಗೊಳಿಸಿದರೆ, ಸುಖವು ಹಾಸಿಗೆಯ ಮೇಲೆ ನಿದ್ರಿಸುತ್ತದೆ.

ನವಯುಗ

ವರುಷ	ಉಡುಪಿ	ವಾರ
೪೦	೩೦-೧೧-'೬೦	೧೦

ಕರ್ನಾಟಕದ ದೌರ್ಬಲ್ಯ

ನವಂಬರ ಮೊದಲನೆಯ ದಿನ ಮರಳಿ ಬಂದು ಸೋಯಿತು. ಎರಡು ಕೋಟಿ ಕನ್ನಡಿಗರು ಈ ದಿನವನ್ನು ಉಳಿದ ದಿನಗಳಂತೆಯೇ ಕಂಡೂ ಕಾಣದಂತೆ ಕಳೆದು ಬಿಟ್ಟರು. ವಿಭಿನ್ನ ಆಸಕ್ತಿಗಳಲ್ಲಿ ಹರಿಹಂಚಿ ಹೋಗಿದ್ದ ಕರ್ನಾಟಕ ಮೈಸೂರು ನಾಮಕರಣ ಹೊಂದಿ ತಾತ್ವಿಕವಾಗಿಯಾದರೂ ಒಂದಾದ ಈ ಸುದಿನದ ಬಗ್ಗೆ ನಾಡ ಜನ—ನಾಡ ಸರಕಾರ ಅನಾಸ್ಥೆಯನ್ನೇ ಪ್ರದರ್ಶಿಸಿ ದೂರೀಕರಿಸಿದರು. ನಮ್ಮ ನಾಡಿನ ಬಗ್ಗೆ ನಮ್ಮಲ್ಲೇ ಗೌರವಾದರ ಭಾವನೆಗಳಿಲ್ಲವಾದರೆ ಯಾರಾದರೂ ಮಾಡುವುದೇನು? ನಮ್ಮ ಜನತೆ ಅಭಿಮಾನ ಶೂನ್ಯರಂತೆ, ನಮ್ಮ ಸರಕಾರ ಅಸತ್ವಯುತವಾಗಿರುವಂತೆ ವರ್ತಿಸಿಕೊಳ್ಳುತ್ತಿರುವುದು ನಾಡಿನ ಭವಿಷ್ಯದ ದೃಷ್ಟಿಯಿಂದ ಹಿತಕರವೆಂದು ಹೇಳುವಂತಿಲ್ಲ. ಇದೇ ಮೊದಲಾಗಿ ಮುಂದುವರಿದರೆ ಕರ್ನಾಟಕದ ಭವಿಷ್ಯ ಶೂನ್ಯವಾಗಿಯೇ ಇರುವುದು.

ಮೈಸೂರಿನ ಹೆಸರಿನಲ್ಲಿ ಕರ್ನಾಟಕ ರಾಜ್ಯವು ನಿರ್ಮಾಣಗೊಂಡು ನಾಲ್ಕು ವರ್ಷಗಳು ಕಳೆದು ಹೋದುವು. ಈ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ಒಗ್ಗಟ್ಟನ್ನು ಸಾಧಿಸುವ ಕೆಲಸದಲ್ಲಿ ಏನೇನೂ ಸಾಧನೆಯೂಗಿಲ್ಲದಿರುವುದುವಿಷಾದನೀಯವಾಗಿದೆ. ಕನ್ನಡ ಭಾಷೆಯನ್ನಾಡುವ ಜನರ ರಾಜ್ಯವು ನಿಜವಾಗಿಯೂ ಕರ್ನಾಟಕವೆಂದಾಗಬೇಕಾಗಿತ್ತು; ಆಗಲಿಲ್ಲ. ಮೊನ್ನೆ ಮೊನ್ನೆ ಸ್ಥಾಪಿತವಾದ ಮಹಾರಾಷ್ಟ್ರ ಮತ್ತು ಗುಜರಾತ್‌ಗಳ ಮಾದರಿಯಾದರೂ ನಾವು ಮುಂದಾದರೂ ಕಾರ್ಯಕೃತಗೊಳಿಸುವ ಅವಶ್ಯಕತೆಯಿದೆ. ನಾವು ಈ ಮೊದಲೇ ಹಲವಾರುಬಾರಿ ಹೇಳಿದಂತೆ ರಾಜ್ಯದ ಹೆಸರು 'ಮೈಸೂರು' ಎಂದಿರುವುದೇ ನಮ್ಮ ರಾಜ್ಯದ ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ. ನಮ್ಮ ಅನೈಕ್ಯ, ಭಿನ್ನಾಭಿಪ್ರಾಯ, ಸಂಕುಚಿತ ಮನೋವೃತ್ತಿ, ಅಕರ್ಮಣ್ಯತೆ ಎಲ್ಲವಕ್ಕೂ ಇದೇ ಹೇತುವೆಂದರೆ ಅತಿಶಯೋಕ್ತಿಯೆನಿಸದು. ನಮ್ಮ ರಾಜ್ಯಭಾಷೆಯನ್ನು ಕನ್ನಡವನ್ನಾಗಿ ತಾತ್ವಿಕವಾಗಿಯಾದರೂ ಒಪ್ಪಿಕೊಂಡು ಅದನ್ನು ಹಂತಹಂತವಾಗಿ ಯಾದರೂ ಕಾರ್ಯರೂಪಕ್ಕೆ ತರುವುದು ಈ ನಾಲ್ಕು ವರ್ಷಗಳಲ್ಲಿ ಶ್ಯವೆನಿಸಿಲ್ಲ; ಹೆಚ್ಚೇನು, ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದಕ್ಕೆ ತಕ್ಕ ಪೂರ್ವಸಿದ್ಧತೆಯನ್ನೂ ನಮ್ಮ ಸರಕಾರವು ಕೈಗೊಂಡಿಲ್ಲ. ವಿವಿಧ ಆಡಳಿತ ವಿಭಾಗಗಳು ಇನ್ನೂ ತಮ್ಮ ಹಳೆಯ ಹೆಸರಿನಿಂದಲೇ ಮದ್ರಾಸ ಕರ್ನಾಟಕ, ಬಾಂಬಯಿ ಕರ್ನಾಟಕ ಎಂದು ಮುಂತಾಗಿ ಹೆಸರಿಸಲ್ಪಡುವುದು, ವಿಲೀನ ಹೊಂದಿದ ಪ್ರದೇಶಗಳು, ಹಳೆಯ ಮೈಸೂರು ಎಂದು ಕರೆಯಲ್ಪಡುವುದು ನಮ್ಮ ಅನೈಕತೆಯ ದ್ಯೋತಕವಾಗಿ ಉಳಿದಿದೆ. ನಾಲ್ಕು ವರ್ಷಗಳು ಗತಿಸಿ ಹೋದರೂ ನಾವೆಲ್ಲರೂ ಒಂದೇ ನಾಡವರು ಎಂಬ ಭಾವನೆಯನ್ನು ನಮ್ಮ ಜನಮನದಲ್ಲಿ ಮೂಡಿಸುವುದು ಸರಕಾರಕ್ಕೂ ಜನತೆಗೂ ಸಾಧ್ಯವೆನಿಸಿಲ್ಲ. ಏಕರೂಪದ ಕಾಯದೆ-ಆಡಳಿತೆಯನ್ನು ಸ್ಥಾಪಿಸುವುದರಲ್ಲಿ ನಮ್ಮ ರಾಜ್ಯ ಸರಕಾರ ಕನ್ನ 'ಕುಂಭಕೋಣಂ' ನೀತಿಯನ್ನೇ ಶರಣು ಹೊಕ್ಕಿದೆ, ನಾಲ್ಕು ವರ್ಷಗಳಲ್ಲಿ ಕೈಗೂಡಿಸಿಕೊಳ್ಳದ ಸಮಸ್ಯೆಗಳಿವೆಯೆಂದು ಹೇಳುವುದು ಅಷ್ಟೊಂದು ಭೂಷಣಪ್ರಾಯವೆನ್ನುವಂತಿಲ್ಲ. ನಮ್ಮ ರಾಜ್ಯದ ಪ್ರಶಾಸನ ಪಕ್ಷದಲ್ಲಿ ತೀವ್ರ ಭಿನ್ನಾಭಿಪ್ರಾಯ ಹುಟ್ಟಿಕೊಳ್ಳಲು ಇದೂ ಒಂದು ಅನೈಕ್ಯದ ಭಾವನೆಯೇ ಮೂಲ ಕಾರಣವಾಗಿದೆ. ನಾವೆಲ್ಲ ಕನ್ನಡಿಗರು; ಒಮ್ಮತದಿಂದ ನಮ್ಮ ನಾಡು ನುಡಿಗಳ ಉನ್ನತಿಗಾಗಿ ದುಡಿಯಲು ಸೊಂಟಕಟ್ಟಬೇಕು ಎಂಬ ಭಾವನೆಯು ನಮ್ಮಲ್ಲಿ ಇನ್ನೂ ಬರಬೇಕಾಗಿತ್ತು; ಆದರೆ, ನಮ್ಮ ದುರ್ದೈವದಿಂದ ನಾಡು ಒಂದಾದರೂ ನುಡಿ ಒಂದಾಗಲಿಲ್ಲ, ಮನ ಒಂದಾಗಲಿಲ್ಲ.

ಈ ಅನೈಕ್ಯದಿಂದಾಗಿಯೇ ನಮ್ಮಲ್ಲಿ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳೂ ಹೆಮ್ಮಾರನ ಆಕಾರತಾಳಿ ಆಡಳಿತೆಯನ್ನು ಕುಸಿಯುವಂತೆ ಮಾಡುತ್ತವೆ; ಸಮರ್ಥ ಶಾಶ್ವತ ಸರಕಾರ ಸ್ಥಾಪನೆ ಮತ್ತದರ ಕರ್ತವ್ಯ ನಿಷ್ಠೆಗೆ ಭಂಗ ತರುತ್ತವೆ. ಹೀಗಾದಲ್ಲಿ ರಾಜ್ಯದ ಉದ್ಧಾರ ಆಗುವುದಾದರೂ ಹೇಗೆ? ನಮ್ಮ ರಾಜ್ಯೋದಯ ದಿನವನ್ನು ರಾಜ್ಯಸರಕಾರವು ರಜಾದಿನವಾಗಿ ಘೋಷಿಸಿಲ್ಲ; ಅದರ ಆಚರಣೆಯ ಬಗ್ಗೆ ಯಾವುದೇ ಆದೇಶವಿತ್ತಿಲ್ಲ. ಇತರ ಎಲ್ಲೆಲ್ಲಿಯದೋ ದಿನಾಚರಣೆಯೂಆಚರಿಸಬೇಕೆಂಬ ನಮ್ಮ ಶಿಕ್ಷಣ ಶಾಖೆಯೂದಲೂ ಶಾಲೆಗಳಲ್ಲಿ ಕರ್ನಾಟಕ ರಾಜ್ಯೋದಯ ದಿನವನ್ನು ಆಚರಿಸಲು ಶ್ಲೇಷಿಂತೆ ತೋರುವುದಿಲ್ಲ. ಈ ದಿನವನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡು, ಕಾರ್ಯವಾಗ್ನಿರಾಗುವುದರಿಂದ ನಮ್ಮ ನಾಡದೇವಿಯ ಸ್ಮರಣೆಯಾದರೂ ಆಗುತಿತ್ತೋ ಏನೋ ಆದರೆ ಎಲ್ಲವನ್ನೂ ತೊರೆದುನಿರಭಿಮಾನಿಗಳಂತಾದ ಕನ್ನಡಿಗರಿಗೆ ಇದೂ ಅಗತ್ಯವೆಂದುತೋರಲಿಲ್ಲ. ಇದು ಭಾಗ್ಯೋದ, ಯದ ಚಿಹ್ನೆಯೆನ್ನುವುದು ಸಾಧ್ಯವಿಲ್ಲ.

ಇನ್ನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದು. ಕನ್ನಡವೇನೋ ಹೆಸರಿಗೆ ಒಂದಾಗಿದೆ. ಆದರೆ, ಸೀಮಾ ಪ್ರದೇಶದ ಹಲವಾರು ಭಾಗಗಳು ಮಾತೃ ನ್ಯಾಯವಾಗಿ ನಮಗೆ ಬರಬೇಕಾಗಿದ್ದರೂ ನಮ್ಮ ಅನಾಸ್ಥೆಯಿಂದ ಅವುಗಳು ಮೃಗ ಮರೀಚಿಕೆಯೂಗಿವೆ. ಭಾರತ ಪಾಕಿಸ್ತಾನ ಸರಕಾರಗಳು ಕೆಲವೊಂದು ಭೂಭಾಗವನ್ನು ಕೊಡಕೊಳ್ಳಲು ಒಪ್ಪಿದ್ದರೂ ಭಾರತದೊಳಗಿನ ರಾಜ್ಯಗಳಿಗೆ ಅಂತಾರಾಜ್ಯವಿನಿಮಯಮಾಡಿಕೊಳ್ಳುವುದು ಅಸಾಧ್ಯವಾದುದು ವಿಸ್ಮಯಕಾರಿಯೆನಿಸಿದೆ. ಆದರಲ್ಲೂ ನಮ್ಮ ನಾಡಿನ ಎಲ್ಲೆಗಳಲ್ಲಿ ಕನ್ನಡ ಭೂವಿಭು ಅನ್ಯಾಯವಾಗಿ ರಾಜಕಾರಣದ ಕುತಂತ್ರದಿಂದ ಬೇರೆಯವರ ಕೈಯೂಗಿರುವಾಗ ಸೀಮಾ ಪ್ರದೇಶದಲ್ಲಿ ಅಲ್ಲಸಲ್ಲದ ಗಲಭೆಗೊಂದಲಗಳನ್ನೆಬ್ಬಿಸಿ ಕಾಯದೆ-ಸುವ್ಯವಸ್ಥೆಯನ್ನು ಕೆಡಿಸುತ್ತಿರುವಾಗ ನಮ್ಮ ಸರಕಾರ ಸ್ಥಿತಪ್ರಜ್ಞವಾಗಿರುವುದು ನ್ಯಾಯವೆಂದು ಹೂವ ವಿವೇಕಿಯೂ ಎನ್ನಲಾರನು. ರಾಜ್ಯದ ನಾಯಕತ್ವವು ದುರ್ಬಲವಾಗಿರುವುದರಿಂದಲೇ ಕಳೆದ ನಾಲ್ಕು ವರ್ಷಗಳಲ್ಲಿ ನಡೆಯಬಹುದಾದಷ್ಟು ಪ್ರಗತಿಯು ನಮ್ಮಲ್ಲಿ ನಡೆದಿಲ್ಲ; ನಮ್ಮ ಈ ಕೊರತೆಗಳು ಇನ್ನಾದರೂ ದೂರವಾಗಬೇಕು, ನಾವು ಅಭಿಮಾನಿಗಳೆನಿಸಬೇಕು; ನಮ್ಮ ಶಕ್ತವನ್ನು ಅವಕಾಶ ಬಂದಾಗ ನ್ಯಾಯೋಚಿತವಾಗಿ ತೋರಿಸಬೇಕು. ನಾವೆಲ್ಲರೂ ಏಕಮನದಿಂದ ನಾಡಿಗಾಗಿ ದುಡಿದು, ಭೇದಭಾವ ತೊರೆದು ರಾಜ್ಯದ ಮೇಲ್ಮೆಯನ್ನು ಸಾಧಿಸಿಕೊಳ್ಳಬೇಕು; ಭಾರತದ ಇತರ ಯಾವುದೇ ರಾಜ್ಯಕ್ಕಿಂತ ನಾವೂ ನಮ್ಮ ನಾಯಕರೂ ಸಣ್ಣವರು ಎಂದುಕೊಂಡು ನಮ್ಮ ಸಣ್ಣತನವನ್ನು ಎಂದಿಗೂ ಪ್ರದರ್ಶಿಸಬಾರದು.

ಎ. ಐ. ಸಿ. ಸಿ.

ರಾಯಪುರದ ರವಿಶಂಕರ ಶುಕ್ಲ ನಗರದಲ್ಲಿ ಅಖಿಲಭಾರತೀಯ ಕಾಂಗ್ರೆಸ್ ಸಮಿತಿಯು ಎರಡು ದಿನ ಸಭೆಸೇರಿ ತನ್ನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿತು. ನಾವೂನ್ಯವಾಗಿ, ವಿದೇಶನೀತಿ, ವಿಶ್ವ ಶಾಂತಿ, ತೃತೀಯ ಪಂಚವಾರ್ಷಿಕ ಯೋಜನೆ ಮೊದಲಾದುವುಗಳ ಬಗ್ಗೆ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಕಾಂಗ್ರೆಸ್ ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಆವಶ್ಯಕ ನಿರ್ಣಯಗಳು ಸ್ವೀಕೃತವಾದುದು ವಿಶೇಷವೇ ಎನ್ನಬೇಕು. ಇವುಗಳಲ್ಲಿ ಕಾಂಗ್ರೆಸ್ ಸಮಿತಿಗೆ ಮೂರರಲ್ಲೊಂದು ಭಾಗದಷ್ಟು ಸದಸ್ಯರನ್ನು ನೇರ ಚುನಾವಣೆಗಳಿಂದ ತುಂಬಿಸಬೇಕು ಎಂಬುದು ಅತಿ ಮಹತ್ವದ್ದಾಗಿದೆ. ಕಾಂಗ್ರೆಸ್ಸಿನಲ್ಲಿ ಹೊಸ ರಕ್ತಗಳಿಗೆ ಪ್ರವೇಶವಿಲ್ಲದೆ ಅದು ನವಯುವಕರನ್ನು ಆಕರ್ಷಿಸಲು ಅಸಮರ್ಥವಾಗುತ್ತಿದೆ; ಕಾಲ ಕ್ರಮದಲ್ಲಿ ಖಂಡಿತಕ್ಕೂ ನಿರ್ನಾಮವಾಗುವ ಹೆದರಿಕೆಯಿದೆ; ಆದುದರಿಂದ ಎಲ್ಲರಿಗೂ ಮುಕ್ತದ್ವಾರ ವಿಡುವುದು ೧/೩ ಅಂಶ ನಾಮಕರಣಕ್ಕಿಂತ ಸೂಕ್ತವೆಂದು ಸೂಚಿಸಿದ ಎ. ಐ. ಸಿ. ಸಿ.ಯಲ್ಲಿ ಶ್ರೀ ಕೆಂಗಲ್ ಹನುಮಂತಯ್ಯ ಸೂಚಿಸಿದ್ದರು. ಆಗ ತಿರಸ್ಕರಿಸಲ್ಪಟ್ಟಿದ್ದರೂ ಮುಂದೆ ಇದರ ಸತ್ಯತೆಯನ್ನು ಕಂಡುಕೊಂಡು ಈ ಬಾರಿ ಸ್ವೀಕೃತವಾದುದೊಂದು ಶುಭ ಸಮಾಚಾರ ಮಾತ್ರವಲ್ಲ, ಪ್ರಾಯೋಗಿಕವಾಗಿ ಈ ಚುನಾವಣೆ ಸದ್ಯನ ಡೆಯುವುದೆಂದೂ ಇದು ಯಶಸ್ವಿಯೆನಿಸಿದಲ್ಲಿ ಎಲ್ಲ ಸದಸ್ಯರನ್ನೂ ಚುನಾವಣೆಯ ಮೂಲಕ ತುಂಬಿಸಿಕೊಳ್ಳಲಾಗುವುದೆಂದೂ ಹೇಳಿದ ಶ್ರೀ ಸಂಜೀವ ರೆಡ್ಡಿಯವರ ಅಭಿಪ್ರಾಯದಂತೆ, ಚುನಾಯಿತ ಪ್ರತಿನಿಧಿಗಳ ಕಾಂಗ್ರೆಸ್ ಕಾರ್ಯಸಮಿತಿಯು ಸ್ಥಾಪನೆಯು ದೂರವಿಲ್ಲವೆನ್ನಬಹುದು; ಮತ್ತು ಇದರಿಂದ ಪಕ್ಷದಲ್ಲಿಹೊಸ ಬರಿಗೆ ಸೂಕ್ತ ಪ್ರವೇಶಾವಕಾಶಗಳನ್ನೂ ಒದಗಿಸಿಕೊಟ್ಟಂತಾಗುವುದು.

ಸಂಕ್ಷಿಪ್ತ ಸುದ್ದಿಗಳು

ರಾಜೀನಾಮೆ ಸ್ವೀಕೃತ

ಪ್ರ. ಸ. ವಾ. ಪಕ್ಷದಲ್ಲಿ ತಾಮರಶ ಜಲದಂತಿದ್ದ ಆಚಾರ್ಯಕೃಪಲಾನಿಯವರು ತಾವು ಸ್ಥಾಪಿಸಿದ ಪಕ್ಷದ ಮೇಲಿನ ಆಜೆಡೊರೆಗ್ಸು, ಅದಕ್ಕೆ ರಾಜೀನಾಮೆಯಿತ್ತಿದ್ದ ಪ್ರಸಂಗ ಇದೀಗ ಹಳೆಯವಾಯಿತು. ಕೇಂದ್ರ ಸರಕಾರಿ ನೌಕರರ ಸಂಸು—ಪಂಚವಾರ್ಷಿಕ ಯೋಜನೆ— ಮೊದಲಾದುವುಗಳ ಬಗ್ಗೆ ತಮಗೂ ಪಕ್ಷಕ್ಕೂ ಭಿನ್ನಾಭಿಪ್ರಾಯವಿರುವುದರಿಂದ ತಾನು ಪಕ್ಷ ಬಿಡುವುದಾಗಿ ಹೇಳಿದ್ದಾರೆ. ಪ್ರ. ಸ. ವಾ. ಪಕ್ಷವು ಇವರಿಗೆ ಈ ಮೊದಲು ಪಕ್ಷದ ಶಿಸ್ತಿನಿಂದ ಹೊರಗು ಪಡಿಸಿ ಸ್ವತಂತ್ರಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನಿತ್ತಿತ್ತು. ಆದರೂ ಆರಾಮವಾಗಿ ಗಾಳಿ ಬರುವಂತೆ ಮಾಡಿಟ್ಟ ಗೂಡಿನಲ್ಲಿ ಸ್ವಚ್ಛಂದ ವಿಹರಿಸುವ ಗಿಳಿ ಆದೆಷ್ಟು ದಿನ ಉಳಿದೀತು? ಆಚಾರ್ಯರು ಕಾಂಗ್ರೆಸ್ ಪಕ್ಷವನ್ನು ಬಿಡಬೇಕಾಗಿ ಬಂದ ಕಾರಣದಿಂದಲೇ ಪ್ರ. ಸ. ವಾ. ವನ್ನೂ ತ್ಯಜಿಸಿದರು. ಆದುದರಿಂದ ಸ್ವತಂತ್ರ ಪಕ್ಷಕ್ಕೆ ಸೇರುವರೆಂಬ ವಾರ್ತೆ ತೀರ ನಿರಾಧಾರವಿರಲೇ ಬೇಕು.

ಭಾರತ ಹಿತಚಿಂತಕ

ಭಾರತದ ಬಗ್ಗೆ ಅಹೋರಾತ್ರಿ ಚಿಂತಿಸುವ ನಾಯಕ ಭಾರತದಲ್ಲಿ ಯಾರಿಂದರೆ, ಪ್ರಧಾನಿ ನೆಹರು ಎಂದು ಯಾರೂ ಬೊಟ್ಟು ತೋರಿಸಬಹುದು. ತಾನು ಸ್ವಾತಂತ್ರ್ಯ ಚಳುವಳಿಯ ಅವಧಿಯಲ್ಲಿ ಗಳಿಸಿದ ಜನಪ್ರಿಯತೆಯಿಂದಾಗಿ ಬಹುಕಾಲ ಪ್ರಧಾನಿಯಾಗುಳಿಯಬಲ್ಲೆನೆಂಬ ವಿಶ್ವಾಸ ಇವರಿಗಿದೆ. ಜತೆಗೆ ಇದೇ ಅವಧಿಯಲ್ಲಿ ಭಾರತ ಬಹಳಷ್ಟು ಪ್ರಗತಿಗೊಳ್ಳಬೇಕೆಂಬ ಇರಾದೆಯೂ ಇದೆ. ಇದಕ್ಕಾಗಿಯೇ ಅವರು ಪಂಚವಾರ್ಷಿಕ ಯೋಜನೆಗೆ ರೂಪವಿತ್ತರು. ಅವರ ದೃಷ್ಟಿ ಈಗ ಔದ್ಯಮಿಕ ಕ್ಷೇತ್ರದತ್ತ ಹರಿದಿದೆ ಭಾರತದಲ್ಲಿನ ನಿರುದ್ಯೋಗ ಹೋಗಿ ಸಂಪತ್ತಿನ ಅಭಿಯಾಗಬೇಕಾದರೆ, ಕೃಷಿಯನ್ನೇ ನೆಮ್ಮಿನವರ ಸಂಖ್ಯೆಯನ್ನು ಇಳಿಸಬೇಕು; ಇದಕ್ಕಾಗಿ ಔದ್ಯಮೀಕರಣ ನಾಧಿಸಬೇಕೆನ್ನುತ್ತಾರೆ. ರವಿಶಂಕರ ಶುಕ್ಲ ನಗರದಲ್ಲಿ ಖಾಸಗಿ

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

S. C. 342/1960.

ದಾನಾಚಾರ್ಯ —ವಾದಿ.

ಮತ್ತು

ನಾರಾಯಣ ಪೂಜಾರಿ ಕೂಡಾ-ಪ್ರತಿವಾದಿರು ಇವರೊಳಗೆ

೨ನೇ ಪ್ರತಿವಾದಿ—ಕೂಕ್ಕ್ರು ಪೂಜಾರಿ, ಮುದರ ಪೂಜಾರಿಯ ಅಳಿಯ ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮವಾಸ್ತವ್ಯರಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ: ವಾದಿಯು ಪ್ರತಿವಾದಿರ ಮೇಲೆ ತೂಡಿದ ಮೇಲ್ಕಂಡ ದಾವೆಯು ತಾರೀಕು ೬—11—60ಕ್ಕೆ ನಿಮ್ಮ ಸೋಟಿಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order of the Court)

P. N. Krishnamurthi Rao

Advocate for Plaintiff

Udipi 20—10—60

ಅಲ್ಲಲ್ಲಿಯ ಸುದ್ದಿಸಾರ

ಸಂಯುಕ್ತ ರಾಷ್ಟ್ರ ದಿನಾಚರಣೆ

ಯು ಉಡುಪಿಯಲ್ಲಿ ಡಾ. ಯು. ಸುಂದರ ರಾವು ಸ್ಮಾರಕ ರಂಗಮಂಟಪದಲ್ಲಿ ತಾ. 24-10-60ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ತಹಸಿಲ್ದಾರ್ ಶ್ರೀ ಕೆ. ಕೊರಗ ಪ್ರಭುರವರು ಸ್ವಾಗತಿಸಿ ಈ ದಿನಾಚರಣೆಯು ಮಹತ್ವವನ್ನು ವಿವರಿಸಿದರು. ಅಧ್ಯಕ್ಷ ಶ್ರೀ ಪೈಗಳು ಸಂಯುಕ್ತ ರಾಷ್ಟ್ರಸಂಘದ ಮೂಲತತ್ವವನ್ನು ವಿವರಿಸಿ ಭಾರತಕ್ಕೆ ಯುದ್ಧ ಭೀತಿ ಇಲ್ಲವಾದರೂ ದಾರಿದ್ರ್ಯ ರಾಕ್ಷಸನ ಪೆಡಂಭಿಕಿ ಇದೆಯೆಂದೂ ಅದರ ಉಚ್ಚಾಟನೆಗಾಗಿ ನಾವು ಪ್ರಯತ್ನಿಸಬೇಕೆಂದೂ ಹೇಳಿದರು.

ಸ್ಮಾರಕ ಮನೆರಂಜನೆ—ಕಳದ ತಾ. 29ರಲ್ಲಿ ದಿ. ಡಾ। ಯು. ಸುಂದರ ರಾಯು ಪೈಗಳ ಸ್ಮಾರಕಾರ್ಥವಾಗಿ ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೃತ್ಯ ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳು ಜರಗಿದವು. ಶ್ರೀ ಯು ರಾಘವೇಂದ್ರ ಕೃಷ್ಣ ಭಟ್ಟರು ಆರಂಭದಲ್ಲಿ ಸ್ವಾಗತಿಸಿದರಲ್ಲದೆ ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಪಂಡಿತ್ ದೀನದಯಾಳರು—ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಪಂಡಿತ್ ದೀನದಯಾಳ ಉಪಾಧ್ಯಾಯರು ಕಳದ ತಾ. 25ರಂದು ಉಡುಪಿಗೆ ಆಗಮಿಸಿದರು. ನಗರ ಪ್ರವೇಶ ಮಾಡಿದಾಗ ತೆಂಕಪೇಟೆಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದ ಮೇಲೆ ಮೆರವಣಿಗೆಯಿಂದ ಸಂಘದ ಕಾರ್ಯಾಲಯಕ್ಕೆ ಕರೆದೊಯ್ಯಲಾಯಿತು. ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಂಡಿತ್ ದೀನ ದಯಾಳರು ಭಾಷಣಮಾಡುತ್ತಾ ಪಂಚವಾರ್ಷಿಕ ಯೋಜನೆಗಳ ವಿಫಲತೆ, ಕೃಷಿಗೆ ಪ್ರಾಮುಖ್ಯತೆಕೊಡುವ ಆವಶ್ಯಕತೆ ನಮ್ಮದೇಶದ ಪರಿಸ್ಥಿತಿಗೆ ಒಗ್ಗದ ಸಹಕಾರಿ ಕೃಷಿ ಪದ್ಧತಿಯ ಅನುಚಿತತೆ ಮೊದಲಾದ ಕುರಿತು ಮಾತನಾಡಿದರು. ಸಂಗ್ರಹಿಸಲಾದ ರೂ. ಸಾವಿರದ ಒಂದರ ನಿಧಿಯನ್ನು ಶ್ರೀ ನು. ವಿಠಲ ಕಿಣಿಯವರು ದೀನ ದಯಾಳರಿಗೆ ಸಮರ್ಪಿಸಿದರು. ರಾತ್ರಿ ಶ್ರೀ ಏರೋದಿ ರಾಘೇಶ್ವಷ್ಣ ಪೈಗಳು ದೀನದಯಾಳರಿಗೆ ಭೋಜನ ಸತ್ಕಾರವನ್ನೇರ್ಪಡಿಸಿದ್ದರು.

ತಾ. 26ರಂದು ಬೆಳಿಗ್ಗೆ ದೀನದಯಾಳರು ಮಣಿಪಾಲಕ್ಕೆ ಸಂದರ್ಶನಕ್ಕಿತ್ತು ಪ್ರಾಗಿ ಪ್ರಯತ್ನಗಳಿಂದ ಆಗಿರುವ ಅಭಿವೃದ್ಧಿಯ ಶಿಕ್ಷಣ ಸಂಸ್ಥೆಗಳ ಪ್ರಗತಿಯನ್ನು ಪಂತೀಲಿಸಿ ಸಂತೋಷ ಸೂಚಿಸಿದರು. ಎಂ. ಜಿ. ಯಂ. ಕಾಲೇಜಿನ ವಿದ್ಯಾರ್ಥಿಗಳ ಸಭೆಯಲ್ಲಿ ಯುಕ್ತರಾಷ್ಟ್ರ ಮತ್ತು ವಿಶ್ವಶಾಂತಿಯ ಕುರಿತು ಭಾಷಣ ನಿತ್ತರು.

ಉಡುಪಿ ಭಾರತೀಯ ಜನಸಂಘದವರು ಸ್ಥಳೀಯ ವಿದ್ಯೋದಯ ಜುಬಿಲಿ ಯೂನಿಯನ್ ಕ್ಲಬ್ಬಿನ ಸಭಾಂಗಣದಲ್ಲಿ ವರ್ಪಡಿಸಿದ ಸತ್ಕಾರ ಸಮಾರಂಭದಲ್ಲಿಯೂ ದೀನದಯಾಳರು ಭಾಷಣಮಾಡಿದರು.

ಶಾಲಾ ಉದ್ಘಾಟನಾ ಸಮಾರಂಭ

ಕಾ. 22-10-60ರಂದು ಕುಂದಾಪುರ ತಾಲೂಕು ಆಜ್ರಿ ಗ್ರಾಮದ ಯಡ್ಡಳ್ಳಿ ಎಂಬಲ್ಲಿ ಶ್ರೀ ದಾರಪ್ಪ ಶೆಟ್ಟರ ಮನೆಯ ಮುಳಿಗೆಯಲ್ಲಿ ಗವರ್ನಮೆಂಟ್ ಜೂನಿಯರ್ ಪ್ರೈಮರಿ ಶಾಲಾ ಉದ್ಘಾಟನಾ ಸಮಾರಂಭವು ಸ್ಥಳೀಯ ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ಎ. ಯಸ್. ವಿಠಲ ಶೆಟ್ಟರಿಂದ ನೆರವೇರಿಸಲ್ಪಟ್ಟಿತು. ಶ್ರೀ ಜಗನ್ನಾಥ ಪೈಡ್ಡೆಯವರೂ ಅಧ್ಯಕ್ಷರೂ ಜನತೆಯ ಸಹಕಾರವನ್ನು ಕೋರಿ ಶಾಲೆಯ ಪ್ರಯೋಜನವನ್ನು ಸ್ಥಳೀಯ ಮಕ್ಕಳು ಪಡೆಯುವಂತಾಗಲೆಂದರು. ಮುಖ್ಯೋಪಾಧ್ಯಾಯ ಶ್ರೀ ಬಸ್ರೂರು ಗಣಪಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹಸ್ತಲಿಖಿತ ಪತ್ರಿಕೆಯ ಉದ್ಘಾಟನಾ ಸಮಾರಂಭ—ಕಡಿಯಾಳಿ ಹಾಯರ್ ಎಲಿಮೆಂಟರೀ ಶಾಲೆಯ ಮಕ್ಕಳ ಸರಕಾರದ ಆಶ್ರಯದಿಂದ ಹೊರಡುವ 'ಕುಸುಮ' ಎಂಬ ಹಸ್ತಲಿಖಿತ ಪತ್ರಿಕೆಯ ಉದ್ಘಾಟನಾ ಸಮಾರಂಭವು ತಾ. 19ರಂದು ಉಡುಪಿಯ ಪೂರ್ಣಪ್ರಜ್ಞ ಆರ್ಟ್ಸ್ ಕೋಟೇಜಿನ ಪ್ರೊಫೆಸರಾದ ಶ್ರೀಯುತ ಶ್ರೀಪತಿ ಉಪಾಧ್ಯಾಯ ಎಮ್. ಎ. ಇವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಎಲ್. ನಾರಾಯಣ ಭಟ್ಟ ಇವರಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಿಸುತ್ತ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳ ಸ್ವರೂಪವನ್ನು ವಿವರಿಸಿದರು. ತರುವಾಯ ಸಾಂಸ್ಕೃತಿಕ ಮಂತ್ರಿ ಕುಸುಮ ಪತ್ರಿಕೆಯು ಗತ ಸಭೆಯ ನಡವಿನಯನ್ನೋದಿಬಳಿಕ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಮನರಂಜನೆ ಕಾರ್ಯಕ್ರಮಗಳೂ ಶಾಲಾ ಪಾರ್ಲಿಮೆಂಟಿನ ಅಧಿವೇಶನ ಪ್ರಶ್ನೋತ್ತರಗಳೂ ನಡೆದುವು. ಅಧ್ಯಕ್ಷರು ತಮ್ಮ ಪ್ರಜಾಪ್ರಭುತ್ವ ಸರಕಾರದ ರೂಪರೇಷೆಗಳನ್ನು ವಿವರಿಸಿ ಭಾಷಣಮಿತ್ತರು.

ಯಕ್ಷಗಾನ—ತಾ. 15-10-60ರಂದು ಮುಂಬಯಿಯ ಕೆ. ಯನ್. ಸೇವಾ ಸಂಘದ ನೇತೃತ್ವದಲ್ಲಿ ಶ್ರೀ ಗಜಾನನ ಅಬಿಲ ಕರ್ನಾಟಕ ಯಕ್ಷಗಾನ ಮಂಡಳಿ ಮತ್ತು ಕನ್ನಡ ಕಲಾ ಸಮಾಜ ಇವರು ವಿ. ಕ. ದಿಂದ ಬಂದ ಪ್ರಸಿದ್ಧ ಕಲಾವಿದರ ಸಮ್ಮಿಲನದಿಂದ ತಾಮ್ಪರ್ಧ್ಯಜಾಮತ್ತು ವೀರಮಣಿ ಕಾಳಗವೆಂಬ ಪ್ರಸಂಗಗಳನ್ನು ಮಣಿಪಾಲ ಕಾಸ್ಮಿಲರ್ ಪಿ. ಎಸ್. ಪೂಜಾರಿಯವರ ಅಧ್ಯಕ್ಷತೆಯಲ್ಲಿ ನವನೀತೋತ್ಸವಾಯಲ್ಲಿ ಆಭಿನಯಿಸಿದರು.

ಸಂಘದ ಅಧ್ಯಕ್ಷ ಶ್ರೀ ಬಿ. ವಿ. ಶೆಟ್ಟರು ಸ್ವಾಗತಿಸಿದರು. ಶ್ರೀ ಜೆ. ಎಸ್. ಹೆಗ್ಡೆ ಮತ್ತು ಆರ್. ಆರ್ ಮೀಲ್ಮನೆಯವರೂ ಆಧ್ಯಕ್ಷರೂ ಯಕ್ಷಗಾನದ ಮೇಲ್ಮೆಯ ವಿಷಯವಾಗಿ ಮಾತನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಕೆ. ಯನ್. ಕುಂದರರವರು ಧನ್ಯವಾದ ಸಮರ್ಪಣೆ ಗೈದರು.

ಶ್ರೀ ಎಚ್. ಎನ್. ರಾಯರಿಗೆ ಸತ್ಕಾರ—ಇಂಡಿಯನ್ ಬ್ಯಾಂಕರ್ಸ್ ಎಸೋಸಿಯೇಶನಿನ ಪ್ರತಿನಿಧಿಗಳೆಲ್ಲೊಬ್ಬರಾಗಿ ಹಾಲೆಂಡಿನಲ್ಲಿ ಜರಗಿದ ಪದಿಮೂರನೇ ಇಂಟರ್ ನೇಶನಲ್ ಸಮ್ಮರ್ ಸ್ಕೂಲ್ ಆಫ್ ಬ್ಯಾಂಕಿಂಗ್ ಇದರಲ್ಲಿ ಭಾಗವಹಿಸಿ ಹಿಂದಿರುಗಿ ಬಂದಿರುವ ಸಿಂಡಿಕೇಟಿನ ಡಿವಿಜನಲ್ ಮೆನೇಜರ್ ಶ್ರೀ ಎಚ್.ಎನ್. ರಾವ್, ಬಿ.ಕೋಮ್; ಎಲ್ಎಲ್. ಬಿ. ಇವರಿಗೆ ಸತ್ಕಾರವೀಯಲು ಕಳದ ತಾ. 26ರಂದು ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಾರ್ಯಾಲಯದಲ್ಲಿ ಡಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸನಮರಂಭವೊಂದನ್ನು ಏರ್ಪಡಿಸಲಾಗಿತ್ತು. ಉಪಾಧ್ಯಾರನಂತರ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳು ಸ್ವಾಗತಿಸಿದರು. ಶ್ರೀ ಎಚ್. ಎನ್. ರಾಯರು ತಾವು ತಿರುಗಾಡಿದ ಹಾಲೆಂಡ್, ಇಂಗ್ಲೆಂಡ್, ಜರ್ಮನಿ ಮೊದಲಾದ ರಾಷ್ಟ್ರಗಳ ಜನರ ರೀತಿ ನೀತಿ, ಜೀವನಮಟ್ಟ ಮೊದಲಾದ ಕುರಿತು ಮಾತನಾಡಿ ಯುವುದೇ ವಿಷಯವಲ್ಲಿ ನಮ್ಮ ದೇಶವೇ ಉತ್ತಮವೆಂದರು. ಆಧ್ಯಕ್ಷ ಟಿ. ಎಂ. ಎ. ಪೈಗಳು ನಮ್ಮ ದೇಶದ ಹಿಂದುಳಿಯುವಿಕೆಯನ್ನು ಪರದೇಶಗಳನ್ನು ಸಂದರ್ಶಿಸಿಕೊಳ್ಳುವುದು ಯೋಗ್ಯವೆಂದರು. ಅಸಿಸ್ಟಾಂಟ್ ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈಗಳು ಕೊನೆಗೆ ಧನ್ಯವಾದಗಳನ್ನರ್ಪಿಸಿದರು.

ಗ್ರಾಮ ಉದ್ಯೋಗಸ್ಥರ ಮಹಾಸಭೆ—ಉಡುಪಿ ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘದ ಮಹಾ ಸಭೆಯು ತಾ. 24—10—60ರಂದು ಉಡುಪಿ ಶ್ರೀರಾಮ ಕೃಷ್ಣ ಥಿಯೇಟರಿನಲ್ಲಿ ಶ್ರೀ ಎಸ್. ಶೆಂಕಟರಾಜ ಅಸ್ರಣ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವಿಕ್ಕಿಪತ್ರಗಳ ಅಂಗೀಕಾರಾನಂತರ ಬಳಿಕ ಗ್ರಾಮ ಉದ್ಯೋಗಸ್ಥರ ಹಕ್ಕು ರಕ್ಷಣೆಯ ಕುರಿತು ಸಿಲೆಕ್ಟ್ ಕಮಿಟಿಯ ಮುಂದೆ ಇರಿಸಬೇಕಾದ ಸಲಹೆಗಳ ಬಗ್ಗೆ ಅಲ್ಲದೆ ಇತ್ತೀಚಿಗಿನ ಗ್ರಾಮ ಪಂಚಾಯತ ಚುನಾವಣೆ ವ. ಕಾರ್ಯದರ್ಶಿ ನೇಮಕದಲ್ಲಿನ ಲೋಪದೋಷಗಳ ಕುರಿತು ಸಹ ವಿಮರ್ಶಿಸಿ, ಗ್ರಾಮ ಉದ್ಯೋಗಸ್ಥರನ್ನು ಕಾರ್ಯದರ್ಶಿಗಳಾಗಿ ನೇಮಕಗೊಳಿಸುವಾಗ ಈಗ ತಳೆದಿರುವ ಮೂರು ವರ್ಷದ ಸರ್ವಿಸಿನ ನಿರ್ಣಯವನ್ನು ಸಂಪೂರ್ಣ ಲೋಪಗೊಳಿಸಬೇಕು, ಸಾಧ್ಯವಿದ್ದಲ್ಲಿ ಅಲ್ಲಾ ಪತ್ರಿಕೆಯ ಪಂಚಾಯತಿನೇ ನೇಮಕಾವಾಗಬೇಕು. ಈಗ ನೇಮಕಗೊಂಡಿರುವ ಗ್ರಾಮ ಉದ್ಯೋಗಸ್ಥ—ಪಂಚಾಯತ ಕಾರ್ಯದರ್ಶಿಗಳಿಗೆ ಕಾಯಂ ಆಗುವ ತನಕ ಯಾ ಗ್ರಾಮ ಉದ್ಯೋಗವು ವೃದ್ಧಾಗುವ ತನಕ ಮೂಲ ಸಂಬಳ ಸಹ ದೊರೆಯು ತಕ್ಕದ್ದು, ಗ್ರಾಮ ಉದ್ಯೋಗಸ್ಥರಿಗೆ ಸಿಗುವ ಪರಿಹಾರವು ವಾರ್ಷಿಕ ಸಂಬಳವು ಸಾಲಿಯೂರ್ ನೇಕ ಡಾ। ತಕ್ಕ ಬಡ್ತಿ ಸಿಗಬಹುದಾದ ಖಾಲ್ಪತೆ ಪ್ರಮಾಣಪತ್ರವಲ್ಲಾಗಲೀ 25 ವರ್ಷಗಳ ವೇತನದ ಪೂರ್ಣ ಪ್ರಮಾಣದಲ್ಲಿ ನಿಕಗಂಟಿನಿಂದ ಸಗದಿಯಾಗಿ ಯೊಗಲೀ ಕೊಡತಕ್ಕದ್ದು ಇತ್ಯಾದಿ ನಿರ್ಣಯಗಳಾಮವು ಬಳಿಕ ಹಿಂದಿನ ಮೆಂಬರರನ್ನೇ ಈ ವರ್ಷಕ್ಕೂ ಕಾರ್ಯಕಾರೀ ಸಮಿತಿಗೆ ಆರಿಸಿಪುದರೊಂದಿಗೆ ಧನ್ಯವಾದ ಸಮರ್ಪಣೆ ಸಭೆ ಮುಕ್ತಾಯವಾಯಿತೀ

ಕೊಪ್ಪೋರೇಶನಿನ ಆಧ್ಯಕ್ಷರಾಗಿ ಶ್ರೀ ಬಾಳಿಗರ ಆಯ್ಕೆ—ಉಡುಪಿಯ ದಿ ಕೆನರಾ ಬ್ಯಾಂಕಿಂಗ್ ಕೊಪ್ಪೋರೇಶನಿನ ಅಧ್ಯಕ್ಷರಾಗಿ ಸುಪ್ರಸಿದ್ಧ ವಕೀಲರೂ, ಮಾಜಿಗಳೂ, ಹಿರಿಯ ಕಾಂಗ್ರೆಸ್ ಕಾರ್ಯಕರ್ತರೂ ಆದ ಶ್ರೀ ಬಿ. ವೈಕುಂಠ ಬಾಳಿಗ ಎಂ.ಎಲ್.ಎ. ಆವರು ಕಳದ ತಾ. 31ರಲ್ಲು ಜರಗಿದ ಡ್ಯಾರೆಕ್ಟರರ ಸಭೆಯಲ್ಲಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 347/1960

ರಾಮಕೃಷ್ಣ ನ್ಯಾಕ —ವಾದಿ.

ಮತ್ತು

1. ಮುತ್ತ ನ್ಯಾಕ - ಯೆಲ್ಲ ನ್ಯಾಕನ ಮಗ,
2. ಯೆಲ್ಲ ನ್ಯಾಕ - 1ನೇ ಯವನ ಮಗ — ಉಡ್ಪಿ ತಾಲೂಕು ಹಲುವಳ್ಳಿ ಗ್ರಾಮದವರು —ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಈ ಮೂಲಕತಿಳಿಯಪಡಿಸುವುದೇನೆಂದರೆ:—

ವಾದಿಯು ಪ್ರತಿವಾದಿರ ಮೇಲೆ ಮೂಡಿದ ಮೇಲ್ಕಂಡ ದಾವೆಯು ತಾ. 5—11—60ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಯಿಟ್ಟಿದೆ ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಆ ದಿವಸ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಬ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order of the Court)

P. N. Krishnamurthi Rao
Advocate for Plaintiff

Udipi 20—10 60.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 368/1958;
R. E. P. 593/1959;
R. E. A. 427/1960.

ಕೃಷ್ಣಮ್ಮ ಪೆಗ್ಡಿತ್ತಿ ....ಅರ್ಜಿದಾರೆಳು.

ಮತ್ತು

K. ಸಂಜೀವ ಪೆಗ್ಡೆ ಕೊಡಾ ಇನರೊಳಗೆ —ಎದ್ರಿರು.

ಗಾರ್ನಿಶಿಯವರು:—

೬. ಬುಕ್ಕಿ ಕೆಡ್ಡಿ - ರಂಗು ಶೆಟ್ಟಿರ ಮಗಳು ವ ಅಣ್ಣಯ್ಯ ಶೆಟ್ರ ಹೆಂಡತಿ. 6 ಸಾದು ಶೆಟ್ಟಿ - ಪಿಲಿಯ ಶೆಟ್ರ ಮಗ ಉಡ್ಪಿ ತಾಲೂಕು ಹಾವಂಜೆ ಗ್ರಾಮದಲ್ಲಿರುವವರು ಯಿವರಿಗೆ

ನಮ್ಮ ಬಾಬ್ತು ಜಪ್ತಾದ ಗೇಣಿಯನ್ನು ತಾರೀಕು 10—11—60 ನೇ ದಿನಸ ಸೂರ್ಯಾಸ್ತ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರುಪಡಿಸಬೇಕಾಗಿಯೂ ತಪ್ಪಿದ್ದಲ್ಲಿ ನಿಮ್ಮ ಮೇಲೆ ಆಗತ್ಯವಿರುವ ಮುಂದಿನ ಕ್ರಮಗಳ ಕುರಿತು ನುಸುಂ ಕೊಡಿಸಬೇಕಾಗಿ ನಿಗೈರೆ ಅರ್ಜಿದಾರಳು ಮೇಲ್ಕಂಡ ಅರ್ಜಿದಾಕ್ಷಾ ಮೂಡಿರುವುದಾಗಿ ನಿಮಗೆ ಈ ಮೂಲಕ ತಿಳಿಯಪಡಿಸಿಯವೆ.

K. Ramakrishna Rao
Vakil for Petitioner.

Udipi 31—10—1960.

ಮಹಾರಾಷ್ಟ್ರ ಏಜಿಕ್ಸ್ ಕಾರ್ಪೊರೇಶನ್ ಲಿಮಿಟೆಡ್

ಉಪೇಂದ್ರ ಬಾಗ್, ಕೆನರಾ ಮ್ಯೂಚುವಲ್ ಸ್ಟ್ರೀಟ್, ಉಡುಪಿ.

ಪ್ರಕಟಣೆ

ನಮ್ಮ ಕಂಪೆನಿಯ ಕಾರ್ಯಾಲಯವನ್ನು 1960ನೇ ನವಂಬರ ಒಂದರಿಂದ ನಮ್ಮ ನೂತನ ಸ್ವಂತ ಕಟ್ಟಡ

"ಉಪೇಂದ್ರ ಬಾಗ್"

ಕೆನರಾ ಮ್ಯೂಚುವಲ್ ಸ್ಟ್ರೀಟ್, ಉಡುಪಿ,

ಇಲ್ಲಿಗೆ ಸ್ಥಳಾಂತರಿಸಲಾಗಿದೆ.

ಈ ಬದಲಾವಣೆಯನ್ನು ದಯವಾಡಿ ಗಮನಿಸಬೇಕಾಗಿ ವಿನಂತಿ

ಉಪೇಂದ್ರ ಬಾಗ್,
ಕೆನರಾ ಮ್ಯೂಚುವಲ್ ಸ್ಟ್ರೀಟ್, ಉಡುಪಿ.
2—11—1960.

ಟಿ. ರಮೇಶ ಯು. ಪೈ,
ಜನರಲ್ ಮೆನೇಜರ್.

ಸುಖ ಮತ್ತು ದುಃಖಗಳು ಮೂಸವ ಜೀವನದ ಎರಡು ರೂಪಗಳು. ದುಃಖವು ನಮ್ಮನ್ನು ಕರ್ತವ್ಯದತ್ತ ಜಾಗ್ರತಗೊಳಿಸಿದರೆ, ಸುಖವು ಹಾಸಿಗೆಯ ಮೇಲೆ ನಿದ್ರಿಸುತ್ತವೆ.

ನವಯುಗ

ವರುಷ	ಉಡುಪಿ	ವಾರ
೪೦	೩--೧೧--'೬೦	೧೦

ಕರ್ನಾಟಕದ ದೌರ್ಬಲ್ಯ

ನವಂಬರ ಮೊದಲನೆಯ ದಿನ ಮರಳಿ ಬಂದು ಸೇರುತ್ತಿತು. ಎರಡು ಕೋಟಿ ಕನ್ನಡಿಗರು ಈ ದಿನವನ್ನು ಉಳಿದ ದಿನಗಳಂತೆಯೇ ಕಂಡೂ ಕಾಣದಂತೆ ಕಳೆದು ಬಿಟ್ಟರು. ವಿಧಿನ್ನ ಅರಸೊತ್ತಿಗೆಗಳಲ್ಲಿ ಹರಿಹಂಚಿ ಹೋಗಿದ್ದ ಕರ್ನಾಟಕ ಮೈಸೂರು ನಾಮಕರಣ ಹೊಂದಿ ತಾತ್ವಿಕವಾಗಿಯೊದರೂ ಒಂದಾದ ಈ ಸುದಿನದ ಬಗ್ಗೆ ನಾಡ ಜನ—ನಾಡ ಸರಕಾರ ಅನಾಸ್ಥೆಯನ್ನೇ ಪ್ರದರ್ಶಿಸಿ ದೂರೀಕರಿಸಿದರು. ನಮ್ಮ ನಾಡಿನ ಬಗ್ಗೆ ನಮ್ಮಲ್ಲೇ ಗೌರವಾದರ ಭಾವನೆಗಳಿಲ್ಲವಾದರೆ ಯಾರಾದರೂ ಮಾತುಬುದೇನು? ನಮ್ಮ ಜನತೆ ಅಭಿಮಾನ ಶೂನ್ಯರಂತೆ, ನಮ್ಮ ಸರಕಾರ ಅಸತ್ವಯುತವಾಗಿರುವಂತೆ ವರ್ತಿಸಿಕೊಳ್ಳುತ್ತಿರುವುದು ನಾಡಿನ ಭವಿಷ್ಯದ ದೃಷ್ಟಿಯಿಂದ ಹಿತಕರವೆಂದು ಹೇಳುವಂತಿಲ್ಲ. ಇದೇ ಮಾದರಿ ಮುಂದುವರಿದರೆ ಕರ್ನಾಟಕದ ಭವಿಷ್ಯ ಶೂನ್ಯವಾಗಿಯೇ ಇರುವುದು.

ಮೈಸೂರಿನ ಹೆಸರಿನಲ್ಲಿ ಕರ್ನಾಟಕ ರಾಜ್ಯವು ನಿರ್ಮಾಣಗೊಂಡು ನಾಲ್ಕು ವರ್ಷಗಳು ಕಳೆದು ಹೋದುವು. ಈ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ಒಗ್ಗಟ್ಟನ್ನು ಸಾಧಿಸುವ ಕೆಲಸದಲ್ಲಿ ಏನೇನೂ ಸಾಧನೆಯಾಗಿಲ್ಲದಿರುವುದುವಿಷಾದನೀಯವಾಗಿದೆ. ಕನ್ನಡ ಭಾಷೆಯನ್ನಾಡುವ ಜನರ ರಾಜ್ಯವು ನಿಜವಾಗಿಯೂ ಕರ್ನಾಟಕವೆಂದಾಗಬೇಕಾಗಿತ್ತು; ಆಗಲಿಲ್ಲ. ಮೊನ್ನೆ ಮೊನ್ನೆ ಸ್ಥಾಪಿತವಾದ ಮಹಾರಾಷ್ಟ್ರ ಮತ್ತು ಗುಜರಾತಗಳ ಮಾದರಿಯನ್ನಾದರೂ ನಾವು ಮುಂದಾದರೂ ಕಾರ್ಯಕ್ಕಿಳಿಸುವ ಅವಶ್ಯಕತೆಯಿದೆ. ನಾವು ಈ ಮೊದಲೇ ಕಲವಾರುಬಾರಿ ಹೇಳಿದಂತೆ ರಾಜ್ಯದ ಹೆಸರು 'ಮೈಸೂರು' ಎಂದಿರುವುದೇ ನಮ್ಮ ರಾಜ್ಯದ ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ. ನಮ್ಮ ಐಕ್ಯತೆ, ಭಿನ್ನಾಭಿಪ್ರಾಯ, ಸಂಕುಚಿತ ಮನೋವೃತ್ತಿ, ಅಕರ್ಮಣ್ಯತೆ ಎಲ್ಲವಕ್ಕೂ ಇದೇ ಹೇತುವೆಂದರೆ ಅತಿಶಯೋಕ್ತಿಯೆನಿಸದು. ನಮ್ಮ ರಾಜ್ಯಭಾಷೆಯನ್ನು ಕನ್ನಡವನ್ನಾಗಿ ತಾತ್ವಿಕವಾಗಿಯಾದರೂ ಒಪ್ಪಿಕೊಂಡು ಅದನ್ನು ಹಂತಹಂತವಾಗಿಯಾದರೂ ಕಾರ್ಯರೂಪಕ್ಕೆ ತರುವುದು ಈ ನಾಲ್ಕು ವರ್ಷಗಳಲ್ಲಿ ಶಕ್ಯವಿಲ್ಲ; ಡಿಚ್ಚೀಸನು, ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದಕ್ಕೆ ಶಕ್ಯ ಪೂರ್ವಸಿದ್ಧತೆಯನ್ನೂ ನಮ್ಮ ಸರಕಾರವು ಕೈಗೊಂಡಿಲ್ಲ. ವಿವಿಧ ಅಡಳಿತ ವಿಭಾಗಗಳು ಇನ್ನೂ ತಮ್ಮ ಹಳೆಯ ಹೆಸರಿನಿಂದಲೇ ಮುದ್ರಾಸ ಕರ್ನಾಟಕ, ಮುಂಬಯಿ ಕರ್ನಾಟಕ ಎಂದು ಮುಂತಾಗಿ ಹೆಸರಿಸಲ್ಪಡುವುದು, ವಿಲೀನಗೊಂಡಿದ ಪ್ರದೇಶಗಳು, ಹಳೆಯ ಮೈಸೂರು ಎಂದು ಕರೆಯಲ್ಪಡುವುದು ನಮ್ಮ ಅನೈಕತೆಯ ಧ್ಯೋತಕವಾಗಿ ಉಳಿದಿದೆ. ನಾಲ್ಕು ವರ್ಷಗಳು ಗತಿಸಿ ಹೋದರೂ ನಾವೆಲ್ಲರೂ ಒಂದೇ ನಾಡವರು ಎಂಬ ಭಾವನೆಯನ್ನು ನಮ್ಮ ಜನಮನದಲ್ಲಿ ಮೂಡಿಸುವುದು ಸರಕಾರಕ್ಕೂ ಜನತೆಗೂ ಸಾಧ್ಯವೆನಿಸಿಲ್ಲ. ಏಕರೂಪದ ಕಾಯದೆ-ಆಡಳಿತೆಯನ್ನು ಸ್ಥಾಪಿಸುವುದರಲ್ಲಿ ನಮ್ಮ ರಾಜ್ಯ ಸರಕಾರ ತನ್ನ 'ಕುಂಭಕೋಣ' ನೀತಿಯನ್ನೇ ಶರಣು ಹೊಕ್ಕಿದೆ, ನಾಲ್ಕು ವರ್ಷಗಳಲ್ಲಿ ಕೈಗೂಡಿಸಿಕೊಳ್ಳದ ಸಮಸ್ಯೆ ಗಳಿವೆಯೆಂದು ಹೇಳುವುದು. ಅಷ್ಟೊಂದು ಭೂನಭಣಾಯವೆನ್ನುವಂತಿಲ್ಲ. ನಮ್ಮ ರಾಜ್ಯದ ಪ್ರಶಾಸನ ಪಕ್ಷದಲ್ಲಿ ತೀವ್ರ ಭಿನ್ನಾಭಿಪ್ರಾಯ ಹುಟ್ಟಿಕೊಳ್ಳುವುದಕ್ಕೂ ಈ ಅನೈಕ್ಯದ ಭಾವನೆಯೇ ಮೂಲ ಕಾರಣವಾಗಿದೆ. ನಾವೆಲ್ಲ ಕನ್ನಡಿಗರು; ಒಮ್ಮತದಿಂದ ನಮ್ಮ ನಾಡು ನುಡಿಗಳ ಉನ್ನತಿಗಾಗಿ ದುಡಿಯಲು ಸೊಂಟಕಟ್ಟಬೇಕು ಎಂಬ ಭಾವನೆಯು ನಮ್ಮಲ್ಲಿ ಒಮೂಡಿ ಬರಬೇಕಾಗಿತ್ತು; ಆದರೆ, ನಮ್ಮ ದುರ್ದೈವದಿಂದ ನಾಡು ಒಂದಾದರೂ ನುಡಿ ಒಂದಾಗಲಿಲ್ಲ, ಮನ ಒಂದಾಗಲಿಲ್ಲ. ಈ ಅನೈಕ್ಯಕಿಂದಾಗಿಯೇ ನಮ್ಮಲ್ಲಿ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳೂ ಹೆಮ್ಮರದ ಆಕಾರತಾಳಿ ಆಡಳಿತೆಯನ್ನು ಕುಸಿಯುವಂತೆ ಮಾಡುತ್ತವೆ; ಸಮರ್ಥ ಶಾಶ್ವತ ಸರಕಾರ ಸ್ಥಾಪನೆ ಮತ್ತದರ ಕರ್ತವ್ಯ ನಿಷ್ಠೆಗೆ ಭಂಗ ತರುತ್ತವೆ. ಹೀಗಾದದ್ದಲ್ಲಿ ರಾಜ್ಯದ ಉದ್ಧಾರ ಆಗುವುದಾದರೂ ಹೇಗೆ? ನಮ್ಮ ರಾಜ್ಯೋದಯ ದಿನವನ್ನು ರಾಜ್ಯಸರಕಾರವು ರಜಾದಿನವಾಗಿ ಘೋಷಿಸಿಲ್ಲ; ಆದರ ಆಚರಣೆಯ ಬಗ್ಗೆ ಯಾವುದೇ ಆದೇಶವಿಕ್ಕಿಲ್ಲ. ಇತರ ಎಲ್ಲೆಲ್ಲಿಯದೋ ದಿನಾಚರಣೆಯಾಚರಿಸಬೇಕೆಂಬ ನಮ್ಮ ಶಿಕ್ಷಣ ಶಾಖೆಯಾದರೂ ಶಾಲೆಗಳಲ್ಲಿ ಕರ್ನಾಟಕ ರಾಜ್ಯೋದಯ ದಿನವನ್ನು ಆಚರಿಸಲು ಕೇಳಿದಂತೆ ತೋರುವುದಿಲ್ಲ. ಈ ದಿನವನ್ನು ಯುವಕಾಗಲೂ ನೆನಪಿನಲ್ಲಿಟ್ಟುಕೊಂಡು, ಕಾರ್ಯಪ್ರವೃತ್ತರಾಗುವುದರಿಂದ ನಮ್ಮ ನಾಡದೇವಿಯ ಸ್ಮರಣೆಯಾದರೂ ಆಗುತಿತ್ತೋ ಏನೋ ಆದರೆ ಎಲ್ಲವನ್ನೂ ತೊರೆದುನಿರಭಿಮಾನಿಗಳಂತಾದ ಕನ್ನಡಿಗರಿಗೆ ಇನೂ ಆಗತ್ಯವೆಂದುತೋರಲಿಲ್ಲ. ಇದು ಭಾಗ್ಯೋದ, ಯದ ಚಿಹ್ನೆಯೆನ್ನುವುದು ಸಾಧ್ಯವಿಲ್ಲ.

ಇನ್ನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದು. ಕನ್ನಡವೇನೋ ಹೆಸರಿಗೆ ಒಂದಾಗಿದೆ. ಆದರೆ, ಸೀಮಾ ಪ್ರದೇಶದ ಜಿಲವಾರು ಭಾಗಗಳು ಮಾತ್ರ ನ್ಯಾಯವಾಗಿ ನಮಗೆ ಬರಬೇಕಾಗಿದ್ದರೂ ನಮ್ಮ ಅನಾಸ್ಥೆಯಿಂದ ಅವುಗಳು ಮೃಗ ಮರೀಚಿಕೆಯಾಗಿವೆ. ಭಾರತ ಪಾಕಿಸ್ತಾನ ಸರಕಾರಗಳು ಕೆಲವೊಂದು ಭೂಭಾಗವನ್ನು ಕೊಡತೊಳ್ಳಲು ಒಪ್ಪಿದ್ದರೂ ಭಾರತದೊಳಗಿನ ರಾಜ್ಯಗಳಿಗೆ ಅಂತಾರಾಜ್ಯವಿನಿಮಯಮಾಡಿಕೊಳ್ಳುವುದು ಅಸಾಧ್ಯವಾದುದು ವಿನ್ಯಾಸಕಾರಿಯೆನಿಸಿದೆ. ಆದರೆ ಲ್ಲೂ ನಮ್ಮ ನಾಡಿನ ಎಲ್ಲೆಗಳಲ್ಲಿ ಕನ್ನಡ ಭೂವಿಯು ಅನ್ಯಾಯವಾಗಿ ರಾಜಕಾರಣದ ಕುತಂತ್ರದಿಂದ ಬೇರೆಯವರ ಕೈಯಾಗಿರುವಾಗ ಸೀಮಾ ಪ್ರದೇಶದಲ್ಲಿ ಅಲ್ಲಲ್ಲದ ಗಲಭೆ ಗೊಂದಲಗಳನ್ನೆಬ್ಬಿಸಿ ಕಾಯದೆ-ಸುವ್ಯವಸ್ಥೆಯನ್ನು ಕೆಡಿಸುತ್ತಿರುವಾಗ ನಮ್ಮ ಸರಕಾರ ಸ್ಥಿತಪ್ರಜ್ಞವಾಗಿರುವುದು ನ್ಯಾಯವೆಂದು ಯಾವ ವಿವೇಕಿಯೂ ಎನ್ನಲಾರನು. ರಾಜ್ಯದ ನಾಯಕತ್ವವು ದುರ್ಬಲವಾಗಿರುವುದರಿಂದಲೇ ಕಳೆದ ನಾಲ್ಕು ವರ್ಷಗಳಲ್ಲಿ ನಡೆಯಬಹುದಾದಷ್ಟು ಪ್ರಗತಿಯು ನಮ್ಮಲ್ಲಿ ನಡೆದಿಲ್ಲ; ನಮ್ಮ ಈ ಕೊರತೆಗಳು ಇನ್ನಾದರೂ ದೂರವಾಗಬೇಕು, ನಾವು ಅಭಿವೃದ್ಧಿನಿಗಳೆನಿಸಬೇಕು; ನಮ್ಮ ಸತ್ವವನ್ನು ಅವಕಾಶ ಬಂದಾಗ ನ್ಯಾಯೋಚಿತವಾಗಿ ತೋರಿಸಬೇಕು. ನಾವೆಲ್ಲರೂ ವಿಕಸನದಿಂದ ನಾಡಿಗಾಗಿ ದುಡಿದು, ಭೇದಭಾವ ತೊರೆದು ರಾಜ್ಯದ ಮೇಲ್ಮೈಯನ್ನು ಸಾಧಿಸಿಕೊಳ್ಳಬೇಕು; ಭಾರತದ ಇತರ ಯಾವುದೇ ರಾಜ್ಯಕ್ಕಿಂತ ನಾವೂ ನಮ್ಮ ನಾಯಕರೂ ಸಣ್ಣವರು ಎಂದುಕೊಂಡು ನಮ್ಮ ಸಣ್ಣತನವನ್ನು ಎಂದಿಗೂ ಪ್ರದರ್ಶಿಸಬಾರದು.

ಎ. ಐ. ಸಿ. ಸಿ.

ರಾಯಪುರದ ರವಿಶಂಕರ ಶುಕ್ಲ ನಗರದಲ್ಲಿ ಅಖಿಲಭಾರತೀಯ ಕಾಂಗ್ರೆಸ್ ಸಮಿತಿಯು ಎರಡು ದಿನ ಸಭೆಸೇರಿ ತನ್ನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿತು. ಸಾಮಾನ್ಯವಾಗಿ, ವಿದೇಶನೀತಿ, ವಿಶ್ವ ಶಾಂತಿ, ಕೃತೀಯ ಪಂಚವಾರ್ಷಿಕ ಯೋಜನೆ ಮೊದಲಾದುವುಗಳ ಬಗ್ಗೆ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಕಾಂಗ್ರೆಸ್ ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಆವಶ್ಯಕ ನಿರ್ಣಯಗಳು ಸ್ವೀಕೃತವಾದುದು ವಿಶೇಷವೇ ಎನ್ನಬೇಕು. ಇವುಗಳಲ್ಲಿ ಕಾಂಗ್ರೆಸ್ ಸಮಿತಿಗೆ ಮೂರರಲ್ಲೊಂದು ಭಾಗದಷ್ಟು ಸದಸ್ಯರನ್ನು ನೇರ ಚುನಾವಣೆಗಳಿಂದ ತುಂಬಿಸಬೇಕು ಎಂಬುದು ಅತಿ ಮಹತ್ವದ್ದಾಗಿದೆ. ಕಾಂಗ್ರೆಸ್ಸಿನಲ್ಲಿ ಹೊಸ ರಕ್ತಗಳಿಗೆ ಪ್ರವೇಶವಿಲ್ಲದೆ ಅದು ನವಯುವಕರನ್ನು ಆಕರ್ಷಿಸಲು ಅಸಮರ್ಥವಾಗುತ್ತಿದೆ; ಕಾಲ ಕ್ರಮದಲ್ಲಿ ಖಂಡಿತಕ್ಕೂ ನಿರ್ನಾಮವಾಗುವ ಕೆದರಿಕೆಯಿದೆ; ಅದುದರಿಂದ ಎಲ್ಲರಿಗೂ ಮುಕ್ತದ್ವಾರ ವಿಡುವುದು ೧/೩ ಅಂಶ ನಾಮಕರಣಕ್ಕಿಂತ ಸೂಕ್ತವೆಂದು ಪೂನಾದ ಎ. ಐ. ಸಿ. ಸಿ.ಯಲ್ಲಿ ಶ್ರೀ ಕೆಂಗಲ್ ಹನುಮಂತಯ್ಯ ಸೂಚಿಸಿದ್ದರು. ಆದಾಗ ತಿರಸ್ಕರಿಸಲ್ಪಟ್ಟಿದ್ದರೂ ಮುಂದೆ ಇದರ ಸತ್ಯತೆಯನ್ನು ಕಂಡುಕೊಂಡು ಈ ಬಾರಿ ಸ್ವೀಕೃತವಾದುದೊಂದು ಶುಭ ಸಮಾಚಾರ ಮಾತ್ರವಲ್ಲ, ಪ್ರಯೋಗಿಕವಾಗಿ ಈ ಚುನಾವಣೆ ಸದ್ಯ ನಡೆಯುವುದೆಂದೂ ಇದು ಯಶಸ್ವಿಯೆನಿಸಿದಲ್ಲಿ ಎಲ್ಲ ಸದಸ್ಯರನ್ನೂ ಚುನಾವಣೆಯ ಮೂಲಕ ತುಂಬಿಸಿಕೊಳ್ಳಲಾಗುವುದೆಂದೂ ಹೇಳಿದ ಶ್ರೀ ಸಂಜೀವ ರೆಡ್ಡಿಯವರ ಅಭಿಪ್ರಾಯದಂತೆ, ಚುನಾಯಿತ ಪ್ರತಿನಿಧಿಗಳ ಕಾಂಗ್ರೆಸ್ ಕಾರ್ಯಸಮಿತಿಯು ಸ್ಥಾಪನೆಯು ದೂರವಿಲ್ಲವೆನ್ನಬಹುದು; ಮತ್ತು ಇದರಿಂದ ಪಕ್ಷದಲ್ಲಿಹೊಸ ಬರಿಗೆ ಸೂಕ್ತ ಪ್ರವೇಶಾವಕಾಶಗಳನ್ನೂ ಒದಗಿಸಿಕೊಟ್ಟಂತಾಗುವುದು.

ಸಂಕ್ಷಿಪ್ತ ಸುದ್ದಿಗಳು

ರಾಜೀನಾಮೆ ಸ್ವೀಕೃತ

ಪ್ರ. ಸ. ವಾ. ಪಕ್ಷದಲ್ಲಿ ತಾವರೆಗೆ ಜಲದಂತಿದ್ದ ಆಚಾರ್ಯ ಕೃಪಲಾನಿಯವರು ತಾವು ಸ್ಥಾಪಿಸಿದ ಪಕ್ಷದ ಮೇಲಿನ ಆಲೆದೊರೆನು, ಅದಕ್ಕೆ ರಾಜೀನಾಮೆಯಿತ್ತಿದ್ದ ಪ್ರಸಂಗ ಇದೀಗ ಹಳೆಯದಾಯಿತು. ಕೇಂದ್ರ ಸರಕಾರಿ ನೌಕರರ ಸಂಬಂಧ— ಪಂಚವರ್ಷಿಕ ಯೋಜನೆ— ಮೊದಲಾದುವುಗಳ ಬಗ್ಗೆ ತಮಗೂ ಪಕ್ಷಕ್ಕೂ ಭಿನ್ನಾಭಿಪ್ರಾಯವಿರುವುದರಿಂದ ಪಂಡಿತ ನೆಹರು ಬಿಡುವುದಾಗಿ ಹೇಳಿದ್ದಾರೆ. ಪ್ರ. ಸ. ವಾ. ಪಕ್ಷವು ಇವರಿಗೆ ಈ ಮೊದಲು ಪಕ್ಷದ ಶಿಸ್ತಿನಿಂದ ಹೊರಗು ಪಡಿಸಿ ಸ್ವತಂತ್ರಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನಿತ್ತಿತ್ತು. ಆದರೂ ಆರಂಭವಾಗಿ ಗಾಳಿ ಬರುವಂತೆ ಮಾಡಿಟ್ಟ ಗೂಡಿನಲ್ಲಿ ಸ್ವಚ್ಛಂದ ವಿಹರಿಸುವ ಗಿಳಿ ಅದೆಷ್ಟು ದಿನ ಉಳಿದೀತು? ಆಚಾರ್ಯರು ಕಾಂಗ್ರೆಸ್ ಪಕ್ಷವನ್ನು ಬಿಡಬೇಕಾಗಿ ಬಂದ ಕಾರಣದಿಂದಲೇ ಪ್ರ. ಸ. ವಾ. ವನ್ನೂ ತ್ಯಜಿಸಿದರು. ಆದುದರಿಂದ ಸ್ವತಂತ್ರ ಪಕ್ಷಕ್ಕೆ ಸೇರುವರೆಂಬ ವಾರ್ತೆ ತೀರ ನಿರಾಧಾರವಿರಲೇ ಬೇಕು.

ಭಾರತ ಹಿತಚಿಂತಕ

ಭಾರತದ ಬಗ್ಗೆ ಆಹೋರಾತ್ರಿ ಚಿಂತಿಸುವ ನಾಯಕ ಭಾರತದಲ್ಲಿ ಯಾರೆಂದರೆ, ಪ್ರಧಾನಿ ನೆಹರು ಎಂದು ಯಾರೂ ಬೊಟ್ಟಿಟ್ಟು ತೋರಿಸಬಹುದು. ತಾನು ಸ್ವಾತಂತ್ರ್ಯ ಚಳುವಳಿಯ ಅವಧಿಯಲ್ಲಿ ಗಳಿಸಿದ ಜನಪ್ರಿಯತೆಯಿಂದಾಗಿ ಬಹುಕಾಲ ಪ್ರಧಾನಿಯಾಗುಳಿಯಬಲ್ಲೆನೆಂಬ ವಿಶ್ವಾಸ ಇವರಿಗಿದೆ. ಜತೆಗೆ ಇದೇ ಅವಧಿಯಲ್ಲಿ ಭಾರತ ಬಹಳಷ್ಟು ಪ್ರಗತಿಗೊಳ್ಳಬೇಕೆಂಬ ಇರಾದೆಯೂ ಇದೆ. ಇದಕ್ಕಾಗಿಯೇ ಅವರು ಪಂಚವಾರ್ಷಿಕ ಯೋಜನೆಗೆ ರೂಪವಿತ್ತರು. ಅವರ ದೃಷ್ಟಿ ಈಗ ಔದ್ಯಮಿಕ ಕ್ಷೇತ್ರದತ್ತ ಹರಿದಿದೆ ಭಾರತದಲ್ಲಿನ ನಿರುದ್ಯೋಗ ಹೋಗಿ ಸಂಪತ್ತಿನ ಆಭಿವೃದ್ಧಿಗೆ ಸಂಪತ್ತಿನ ಆಭಿವೃದ್ಧಿಗೆ ಕೈಗಾರಿಕೆಯನ್ನೇ ನೆಚ್ಚಿಕೊಳ್ಳಬೇಕಾದರೆ, ಕೃಷಿಯನ್ನೇ ನೆಚ್ಚಿಕೊಂಡಿರುವ ಜನರ ಸಂಖ್ಯೆಯನ್ನು ಇಳಿಸಬೇಕು; ಇದಕ್ಕಾಗಿ ಔದ್ಯೋಗೀಕರಣ ಸಾಧಿಸಬೇಕೆನ್ನುತ್ತಾರೆ. ರವಿಶಂಕರ ಶುಕ್ಲ ನಗರದಲ್ಲಿ ಖಾಸಗಿ

ಉಡ್ಪಿ. ಡಿ. ಮು. ಕೋರ್ಟಿನಲ್ಲಿ
S· C· 342/1960·
ದಾಸಾಚಾರ್ಯ —ಪಾದಿ.
ಮತ್ತು
ನಾರಾಯಣ ಪೂಜಾರಿ ಕೂಡಾ-ಪ್ರತಿವಾದಿರು
ಇವರೊಳಗೆ
೩ನೇ ಪ್ರತಿವಾದಿ—ಕೂಳ್ಕ್ಯ ಪೂಜಾರಿ. ಮುದರ ಪೂಜಾರಿಯ ಆಳಿಯ ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದಲ್ಲಿರುವವ.
ಸದ್ರಿ ಪ್ರತಿವಾದಿಗೆ ತಿಳಿಯುಪಡಿಸುವುದೇನೆಂದ್ರೆ:
ವಾದಿಯು ಪ್ರತಿವಾದಿರ ಮೇಲೆ ಮೂಡಿದ ಮೇಲ್ಕಂಡ ದಾವೆಯು ತಾರೀಕು ೬—೧೧—೬೦ಕ್ಕೆ ನಮ್ಮ ನೋಟಿಸಿನ ಬಗ್ಗೆ ಯಿಟ್ಟಿದೆ. ಆ ಕಛೇರಿಯ ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಈ ಕೋರ್ಟು ಮುಂದೆ ಬಂದು ಹಾಜರ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.
(By order of the Court)
P. N· Krishnamurthi Rao
Advocate for Plaintiff
Udipi 20—10—60

ಅಲ್ಲಲ್ಲಿಯ ಸುದ್ದಿಸಾರ

ಸಂಯುಕ್ತ ರಾಷ್ಟ್ರ ದಿನಾಚರಣೆ

ಯು ಉಡುಪಿಯಲ್ಲಿ ಡಾ. ಯು. ಸುಂದರ ರಾವು ಪೈ ಸ್ಮಾರಕ ರಂಗಮಂಟಪದಲ್ಲಿ ತಾ. 24-10-60ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ತಹಸಿಲ್ದಾರ್ ಶ್ರೀ ಕೆ. ಕೊರಗ ಪ್ರಭುವರು ಸ್ವಾಗತಿಸಿ ಈ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಅಧ್ಯಕ್ಷ ಶ್ರೀ ಪೈಗಳು ಸಂಯುಕ್ತ ರಾಷ್ಟ್ರಸಂಘದ ಮೂಲತತ್ವವನ್ನು ವಿವರಿಸಿ ಭಾರತಕ್ಕೆ ಯುದ್ಧ ಭೀತಿ ಇಲ್ಲವಾದರೂ ದಾರಿದ್ರ್ಯ ರಾಕ್ಷಸನ ಹೆದರಿಕೆ ಇದೆಯೆಂದೂ ಆದರ ಉಚ್ಚಾಟನೆಗಾಗಿ ನಾವು ಪ್ರಯತ್ನಿಸಬೇಕೆಂದೂ ಹೇಳಿದರು.

ಸ್ಮಾರಕ ಮನರಂಜನೆ—ಕಳೆದ ತಾ. 22ರಲ್ಲಿ ದಿ. ಡಾ। ಯು. ಸುಂದರ ರಾಮು ಪೈಗಳ ಸ್ಮಾರಕಾರ್ಥವಾಗಿ ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೃತ್ಯ ನಾಟಿಕಾದಿ ಮನರಂಜನೆಯ ಕಾರ್ಯಕ್ರಮಗಳು ಜರಗಿದವು. ಶ್ರೀಯು ರಾಘವೇಂದ್ರ ಕೃಷ್ಣ ಭಟ್ಟರು ಆರಂಭ

ಕ್ಷೇತ್ರಗಳು ಲಾಭಗಳಿಸುವ ಇರಾದೆಯಿಂದಿರುವುದರಿಂದ ಆವು ಭಾರತವಲ್ಲಿ ಔದ್ಯೋಗೀಕರಣ ಸಾಧಿಸಲು ಅಸಮರ್ಥವಾಗಿವೆ ಯೆಂದುಹೇಳಿದರು; ಆಲ್ಲದೆ ಸರಕಾರದಿಂದ ಮಾತ್ರ ಭಾರವಾದ ಉದ್ದಿಮೆಗಳನ್ನು ನಿರ್ಮಿಸುವುದು ಸಾಧ್ಯವೆಂದೂ ಅಂದರು. ಇದು ಇಂದಿನ ನೆಹರೂರ ದೃಷ್ಟಿಕೋಣ.

(ಅ) ಸ್ವಾಭಾವಿಕ ಊಹೆ

ಪೂರ್ವಾ ಅಧಿವೇಶನದಲ್ಲಿ ಶ್ರೀ ಕೆಂಗಲ್ಲರು ತಂದ ಕಾಂಗ್ರೆಸ್ ಘಟನೆಯ ತಿದ್ದುಪಡಿ ನೆಹರುರವರ ಬೆಂಬಲವಿದ್ದರೂ ಬಿದ್ದು ಹೋಯಿತು. ಈ ತಿದ್ದುಪಡಿಯನ್ನು ನೆಹರು ಖಂಡಿಸಿ ಮಾಡಿದ ಭಾಷಣ ಕೇಳಿ ತಲೆದೂಗಿದ ವರಿಷ್ಠರು ಸ್ವಂತ ಬುದ್ಧಿಯಲ್ಲಿ ವಿವೇಚಿಸದಷ್ಟೂ ಆಸ್ಥಿತಿಯಲ್ಲದ್ದರು. ಮುಂದೆ ನೆಹರು ಮತವಾನದಲ್ಲಿ ಸೋಲುಂಡುದು ಇವರಿಗೆ ತಾವೂ ಸೋಲುಂಡ ಕಹಿ ಗುಳಿಗೆಯಾಯಿತು. ಇದಕ್ಕೇ ಅಂದು ಬೇಡವೆಂದಿದ್ದ ವಿಷಯವನ್ನು ಇಂದು ಬೇಕೆಂದು ಮುತ್ತಿಟ್ಟರು. ನಮ್ಮ ಕಾಂಗ್ರೆಸ್ ವರಿಷ್ಠರು ನೆಹರೂರವರನ್ನು ಮೆಚ್ಚಿಸುವುದೇ ತಮ್ಮುದ್ಧೇಶವನ್ನಾಗಿರಿಸಿರುವಂತೆ ಇದರಿಂದ ಊಹಿಸಲು ಆಸ್ಪದವಿದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ
S. C. 347/1960

ರಾಮಕೃಷ್ಣ ನ್ಯಾಕ —ವಾದಿ.

ಮತ್ತು

1. ಮುತ್ತ ನ್ಯಾಕ - ಯೆಲ್ಲ ನ್ಯಾಕನ ಮಗ.
2. ಯೆಲ್ಲ ನ್ಯಾಕ - 1ನೇ ಯವನ ಮಗ — ಉಡ್ಪಿ ತಾಲೂಕು ಹಲುವಳ್ಳಿ ಗ್ರಾಮದಲ್ಲಿರುವವರು —ಪ್ರತಿವಾದಿಗಳು

ಸದ್ರಿ ಪ್ರತಿವಾದಿಗಳ ಈ ಮೂಲಕತಿಳಿಯಪಡಿಸುವುದೇನೆಂದರೆ:—

ನಾದಿಯು ಪ್ರತಿವಾದಿರ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 5—11—60ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಯಟ್ಟಿದೆ ಆ ಕುರಿತು ನಿಮಗೇನಾದರೂ ಉದಾಸಹರಿಸುವಂತಾದಿದ್ದರೆ ಆ ದಿವಸ ಪಗಲು ಗಂಟಿ 11ಕ್ಕೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order of the Court)

P. N. Krishnamurthi Rao
Advocate for Plaintiff

Udipi 20—10—60.

ದಲ್ಲಿ ಸ್ವಾಗತಿಸಿದರಲ್ಲದೆ ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಪಂಡಿತ್ ದೀನದಯಾಳರು—ಭಾರತೀಯ ಜನಸಂಘದ ಸ್ಥಾಪಕ ಕಾರ್ಯದರ್ಶಿ ಪಂಡಿತ್ ದೀನದಯಾಳ ಉಪಾಧ್ಯಾಯರು ಕಳೆದ ತಾ. 25ರಂದು ಉಡುಪಿಗೆ ಆಗಮಿಸಿದರು ನಗರ ಪ್ರವೇಶ ಮಾಡಿದಾಗ ತೆಂಕಪೇಟೆಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದ ಮೇಲೆ ಮೆರವಣಿಗೆಯಿಂದ ಸಂಘದ ಕಾರ್ಯಾಲಯಕ್ಕೆ ಕರೆದೊಯ್ಯಲಾಯಿತು. ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಂಡಿತ್ ದೀನ ದಯಾಳರು ಭಾಷಣಮಾಡುತ್ತಾ ಪಂಚವಾರ್ಷಿಕ ಯೋಜನೆಗಳ ವಿಫಲತೆ, ಕೃಷಿಗೆ ಪ್ರಧಾನ್ಯತೆಕೊಡುವ ಅವಶ್ಯಕತೆ ನಮ್ಮದೇಶದ ಪರಿಸ್ಥಿತಿಗೆ ಒಗ್ಗದ ಸಹಕಾರೀ ಕೃಷಿ ಪದ್ಧತಿಯ ಆನುಚಿತತೆ ಮೊದಲಾದ ಕುರಿತು ಮಾತನಾಡಿದರು. ಸಂಗ್ರಹಿಸಲಾದ ರೂ. ಸಾವಿರದ ಒಂದರ ಥಲಿಯನ್ನು ಶ್ರೀ ಮ. ವಿಠಲ ಕಿಣಿಯವರು ದೀನ ದಯಾಳರಿಗೆ ಸಮರ್ಪಿಸಿದರು. ರಾತ್ರಿ ಶ್ರೀ ವರದೇಂದ್ರ ರಾಘವೇಂದ್ರ ಪೈಗಳು ದೀನದಯಾಳರಿಗೆ ಭೋಜನ ಸತ್ಕಾರವನ್ನೇರ್ಪಡಿಸಿದ್ದರು.

ತಾ. 26ರಂದು ಬೆಳಿಗ್ಗೆ ದೀನದಯಾಳರು ಮಣಿಪಾಲಕ್ಕೆ ಸಂದರ್ಶನವಿತ್ತು ಪಾಸಾಗಿ ಪ್ರಯತ್ನಗಳಿಂದ ಆಗಿರುವ ಅಧಿಯ ಶಿಕ್ಷಣ ಸಂಸ್ಥೆಗಳ ಪ್ರಗತಿಯನ್ನು ಪರಿಶೀಲಿಸಿ ಸಂತೋಷ ಸೂಚಿಸಿದರು. ಎಂ. ಜಿ. ಯಂ. ಕಾಲೇಜಿನ ವಿದ್ಯಾರ್ಥಿಗಳ ಸಭೆಯಲ್ಲಿ ಯುಕ್ತರಾಷ್ಟ್ರ ಸಂಘ ಮತ್ತು ವಿಶ್ವಶಾಂತಿಯ ಕುರಿತು ಭಾಷಣ ವಿತ್ತರು.

ಉಡುಪಿ ಭಾರತೀಯ ಜನಸಂಘದವರು ಸ್ಥಳೀಯ ವಿಕ್ಕೋದೀಯೂ ಜುದಿಲಿ ಯೂನಿಯನ್ ಕ್ಲಬ್ಬಿನ ಸಭಾಂಗಣದಲ್ಲಿ ಏರ್ಪಡಿಸಿದ ಸತ್ಕಾರ ಸಮಾರಂಭದಲ್ಲಿಯೂ ದೀನದಯಾಳರು ಭಾಷಣಮಾಡಿದರು.

ಶಾಲಾ ಉದ್ಘಾಟನಾ ಸಮಾರಂಭ

ತಾ. 22-10-60ರಂದು ಕುಂದಾಪುರ ತಾಲೂಕು ಆಜ್ರಿ ಗ್ರಾಮದ ಯಡ್ಯಾಳಿ ಎಂಬಲ್ಲಿ ಶ್ರೀ ದಾರಪ್ಪ ಶೆಟ್ಟರ ಮನೆಯ ಪೂಳೆಯಲ್ಲಿ ಗವರ್ನಮೆಂಟ್ ಜೂನಿಯರ್ ಪ್ರೈಮರಿ ಶಾಲಾ ಉದ್ಘಾಟನಾ ಸಮಾರಂಭವು ಸ್ಥಳೀಯ ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ಎ. ಯಸ್. ವಿಠಲ ಶೆಟ್ಟರಿಂದ ನೆರವೇರಿಸಲ್ಪಟ್ಟಿತು. ಶ್ರೀ ಜಗನ್ನಾಥ ಹೆಗ್ಡೆಯವರೂ ಅಧ್ಯಕ್ಷರೂ ಜನತೆಯ ಸಹಕಾರವನ್ನು ಕೋರಿ ಶಾಲೆಯ ಪ್ರಯೋಜನವನ್ನು ಸ್ಥಳೀಯ ಮಕ್ಕಳು ಪಡೆಯುವಂತಾಗಲೆಂದರು. ಮುಖ್ಯೋಪಾಧ್ಯಾಯ ಶ್ರೀ ಬಸ್ರೂರು ಗಣಪಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹಸ್ತಲಿಖಿತ ಪತ್ರಿಕೆಯ ಉದ್ಘಾಟನಾ ಸಮಾರಂಭ—ಕಡಿಯಾಳಿ ಪಾಯರ್ ಎಲಿಮೆಂಟರೀ ಶಾಲೆಯ ಮಕ್ಕಳ ಸರಕಾರದ ಕಡೆಯಿಂದ ಪೊರಡುವ 'ಕುಸುಮ' ಎಂಬ ಹಸ್ತಲಿಖಿತ ಪತ್ರಿಕೆಯ ಉದ್ಘಾಟನಾ ಸಮಾರಂಭವು ತಾ. 19ರಂದು ಉಡುಪಿಯ ಪೂರ್ಣಪ್ರಜ್ಞ ಆರ್ಟ್ಸ್ ಕೋಲೇಜಿನ ಪ್ರೊಫೆಸರರಾದ ಶ್ರೀಯುತ ಶ್ರೀಪತಿ ಉಪಾಧ್ಯ ಎಮ್. ಎ. ಇವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಎಲ್. ನಾರಾಯಣ ಭಟ್ಟ ಇವರಿಂದ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಿಸುತ್ತ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳ ಸ್ವರೂಪವನ್ನು ವಿವರಿಸಿದರು. ತರುವಾಯ ಸಾಂಸ್ಕೃತಿಕ ಮಂತ್ರಿ ಕುಮಾರಿ ವಸಂತಿಯು ಗತ ಸಭೆಯ ನಡವಳಿಯನ್ನೋದಿದಳು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಮೆನೆರಿಂಜನೆ ಕಾರ್ಯಕ್ರಮಗಳೂ ಜರುಗಿದವು. ಪ್ರಧಾನ ಪಾರ್ಲಿಮೆಂಟಿನ ಅಧಿವೇಶನ ಶ್ರಶ್ನೋತ್ತರಗಳೂ ನಡೆದುವು. ಅಧ್ಯಕ್ಷರು ತಮ್ಮ ಪ್ರಜಾಪ್ರಭುತ್ವ ಸರಕಾರದ ರೂಪರೇಖೆಗಳನ್ನು ವಿವರಿಸಿ ಭಾಷಣಮಿತ್ತರು.

ಯಕ್ಷಗಾನ—ತಾ. 15-10-60ರಂದು ಮುಂಬಯಿಯ ಕೆ. ಯನ್. ಸೇವಾ ಸಂಘದ ನೇತೃತ್ವದಲ್ಲಿ ಶ್ರೀ ಗಜಾನನ ಅಖಿಲ ಕರ್ನಾಟಕ ಯಕ್ಷಗಾನ ಮಂಡಳಿ ಮತ್ತು ಕನ್ನಡ ಕಲಾ ಸಮಾಜ ಇವರು ವೆ. ಕೆ. ದಿಂಪಟ ಬಂದ ಪ್ರಸಿದ್ಧ ಕಲಾವಿದರ ಸಮ್ಮಿಲನದಿಂದ 'ತಾಮ್ರಧ್ವಜ'ಮತ್ತು 'ವೀರಮಣಿ' ಕಾಳಗಯಿರಬ ಪ್ರಸಂಗಗಳನ್ನು ಮುನಿಸಿಪಲ್ ಕೌನ್ಸಿಲರ್ ಪಿ. ಎಸ್. ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸವಿಸನಭೀತಿಯಲ್ಲಿ ಅಭಿನಯಿಸಿದರು.

ಸಂಘದ ಅಧ್ಯಕ್ಷ ಶ್ರೀ ಬಿ. ವಿ. ಶೆಟ್ಟರು ಸ್ವಾಗತಿಸಿದರು. ಶ್ರೀ ಜೆ. ಎಸ್. ಹೆಗ್ಡೆ ಮತ್ತು ಆರ್. ಆರ್ ಮೇಲ್ಮನೆಯವರೂ ಅಧ್ಯಕ್ಷರೂ ಯಕ್ಷಗಾನವ ಮೇಲ್ಮೆಯ ವಿಷಯವಾಗಿ ಮಾತನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಕೆ. ಯನ್. ಕುಂದರವರು ಧನ್ಯವಾದ ಸಮರ್ಪಣೆ ಗೈದರು.

ಶ್ರೀ ಎಚ್. ಎನ್. ರಾಯರಿಗೆ ಸತ್ಕಾರ—ಇಂಡಿಯನ್ ಬ್ಯಾಂಕರ್ಸ್ ಎಸೋಸಿಯೇಶನಿನ ಪ್ರತಿನಿಧಿಗಳಲ್ಲೊಬ್ಬರಾಗಿ ಹೊಲ್ಲೆಂಡಿನಲ್ಲಿ ಜರಗಿದ ಹದಿಮೂರನೇ ಇಂಟರ್ ನೇಶನಲ್ ಸಮ್ಮೇಳನ ಸ್ಕೂಲ್ ಆಫ್ ಬ್ಯಾಂಕಿಂಗ್ ಇದರಲ್ಲಿ ಭಾಗವಹಿಸಿ ಹಿಂದಿರುಗಿ ಬಂದಿರುವ ಸಿಂಡಿಕೇಟ್ ಡಿವಿಜನಲ್ ಮೆನೇಜರ್ ಶ್ರೀ ಎಚ್. ಎನ್. ರಾವ್, ಬಿ.ಕೋಮ್; ಎಲ್ಎಲ್. ಬಿ. ಇವರಿಗೆ ಸತ್ಕಾರವೀಯಲು ಕಳೆದ ತಾ. 26ರಂದು ಸಿಂಡಿಕೇಟ್ ಬ್ಯಾಂಕಿನ ಪ್ರಧಾನ ಕಾರ್ಯಾಲಯದಲ್ಲಿ ಡಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸನಮರಂಭವೊಂದನ್ನು ಏರ್ಪಡಿಸಲಾಗಿತ್ತು. ಉಪಾಹಾರನಂತರ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗರು ಸ್ವಾಗತಿಸಿದರು. ಶ್ರೀ ಎಚ್. ಎನ್. ರಾಯರು ತಾನು ತಿರುಗಾಡಿದ ಹೊಲ್ಲೆಂಡ್, ಇಂಗ್ಲೆಂಡ್, ಜರ್ಮನಿ ಮೊದಲಾದ ರಾಷ್ಟ್ರಗಳ ಜನರ ರೀತಿ ನೀತಿ, ಜೀವನಮಟ್ಟ ಮೊದಲಾದ ಕುರಿತು ಮಾತನಾಡಿ ಯೂವುದೇ ವಿಷಯವಲ್ಲಿ ನನ್ನು ಕೇಳಬೇಕೆ ಉತ್ತಮವೆಂದರು. ಅಧ್ಯಕ್ಷ ಟಿ. ಎಂ. ಎ. ಪೈಗಳು ನಮ್ಮ ದೇಶದ ಹಿರಿಮೆಯನ್ನುಳಿಯಬೇಕಾದರೆ ಪರಾವೇಶಗಳನ್ನು ಸಂದರ್ಶಿಸಿಕೊಳ್ಳುವುದು ಯೋಗ್ಯವೆಂದರು. ಅಸಿಸ್ಟಾಂಟ್ ಜನರಲ್ ಮೆನೇಜರ್ ಶ್ರೀ ಕೆ. ಕೆ. ಪೈಗಳು ಕೊನೆಗೆ ಧನ್ಯವಾದಗಳನ್ನರ್ಪಿಸಿದರು.

ಗ್ರಾಮ ಉದ್ಯೋಗಸ್ಥರ ಮಹಾಸಭೆ—ಉಡುಪಿ ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘದ ಮಹಾ ಸಭೆಯು ತಾ. 24—10—60ರಂದು ಉಡುಪಿ ಶ್ರೀಕೃಷ್ಣ ಥಿಯೇಟರಿನಲ್ಲಿ ಶ್ರೀ ಎಸ್. ವೆಂಕಟರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ಲೆಕ್ಕಪತ್ರಗಳ ಅಂಗೀಕಾರವಾದ ಬಳಿಕ ಗ್ರಾಮ ಉದ್ಯೋಗಸ್ಥರ ಹಕ್ಕು ರಕ್ಷಣೆಯ ಕುರಿತು ಸಿರಿಲ್ ಕ್ರಾಸ್ತ ಕಮಿಟಿಯ ವರದಿಯ ಇರಿಸಬೇಕಾದ ಸಲಹೆಗಳ ಬಗ್ಗೆ ಅಲ್ಲಾಪ ಇತ್ತೀಚೆಗಿನ ಗ್ರಾಮ ಪಂಚಾಯತ ಚುನಾವಣೆ ವ. ಕಾರ್ಯದರ್ಶಿ ನೇಮಕದಲ್ಲಿನ ಲೋಪದೋಷಗಳ ಕುರಿತು ಸಭೆ ವಿಮರ್ಶಿಸಿ, ಗ್ರಾಮ ಉದ್ಯೋಗಸ್ಥರನ್ನು ಕಾರ್ಯದರ್ಶಿಗಳಾಗಿ ನೇಮಕಗೊಳಿಸುವಾಗ ಈಗ ತಳೆದಿರುವ ಮೂರು ವರ್ಷದ ಸವಿಸನಿನ ನಿರ್ಣಯವನ್ನು ಸಂಪೂರ್ಣ ಲೋಪಗೊಳಿಸಬೇಕು, ನಾಧ್ಯಪಿದ್ದಲ್ಲಿಲ್ಲಾ ಹತ್ತಿರದ ಪಂಚಾಯತಿಗೇ ನೇಮಕ ಮಾಡಬೇಕು. ಈಗ ನೇಮಕಗೊಂಡಿರುವ ಗ್ರಾಮ ಉದ್ಯೋಗಸ್ಥ—ಪಂಚಾಯತ ಕಾರ್ಯದರ್ಶಿಗಳಿಗೆ ಕಾಯಂ ಆಗುವ ತನಕ ಯೂ ಗ್ರಾಮ ಉದ್ಯೋಗವ ವೃದ್ಧಾಗ್ವ ತನಕ ಮೂಲ ಸಂಬಳ ಸಹ ದೊರೆಯು ತಕ್ಕದ್ದು, ಗ್ರಾಮ ಉದ್ಯೋಗಸ್ಥರಿಗೆ ಸಿಗುವ ಪರಿಹಾರವು ವಾರ್ಷಿಕ ಸಂಬಳವು ಸಾಲಿಯೂನ್ ಸೇಕಡಾ 4 ಸರೆ ಬಡ್ಡಿ ಸಿಗಬಹುದಾದ ಶಾಶ್ವತ ಮೊತ್ತದ ಪ್ರಮಾಣದಲ್ಲಾಗಲೀ 25 ವರ್ಷಗಳ ವೇತನದ ಪೂರ್ಣ ಪ್ರಮಾಣದಲ್ಲಿ ಏಕಗಂಟಿನಿಂದ ನಗದಿಯೂಗಿ ಯಾಗಲೀ ಕೊಡತಕ್ಕದ್ದು ಇತ್ಯಾದಿ ನಿರ್ಣಯಗಳಾದುವು ಬಳಿಕ ಹಿಂದಿನ ಮೆಂಬರರನ್ನೇ ಈ ವರ್ಷಕ್ಕೂ ಕಾರ್ಯಕಾರೀ ಸಮಿತಿಗೆ ಆರಿಸಿ ಪುದರೊಂದಿಗೆ ಧನ್ಯವಾದ ಸನ್ನುರ್ಪಿಸಿ ಸಭೆ ಮುಕ್ತಾಯವಾಯಿತು.

ಕೊಪ್ಪೋರೇಶನಿನ ಅಧ್ಯಕ್ಷರಾಗಿ

ಶ್ರೀ ಬಾಳಿಗರ ಆಯ್ಕೆ—ಉಡುಪಿಯ ದಿ ಕೆನರಾ ಬ್ಯಾಂಕಿಂಗ್ ಕೊಪ್ಪೋರೇಶನ ಅಧ್ಯಕ್ಷರಾಗಿ ಸುಪ್ರಸಿದ್ಧ ವಕೀಲರೂ, ವಾಗ್ಮಿಗಳೂ, ದಕ್ಷ ಕಾಂಗ್ರೆಸ್ ಕಾರ್ಯಕರ್ತರೂ ಆದ ಶ್ರೀ ಬಿ. ವೈಕುಂಠ ಬಾಳಿಗ ಎಂ.ಎಲ್.ಎ. ಅವರು ಕಳೆದ ತಾ. 31ರಲ್ಲು ಜರಗಿದ ಡೈರೆಕ್ಟರರ ಸಭೆಯಲ್ಲಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ
O. S. 368/1958;
R. E. P. 593/1959;
R. E. A. 427/1960.

ಕೃಷ್ಣಮ್ಮ ಹೆಗ್ಗಡ್ತಿ ....ಅರ್ಜಿದಾರಳು.

ಮತ್ತು

K. ಸಂಜೀವ ಹೆಗ್ಡೆ ಕೂಡಾ —ಎದ್ರಿರು.

ಇವರೊಳಿಗೆ

ಗಾರ್ನಿಶಿಯವರು:—

ಕ. ಬುಕ್ಕಿ ಕೆಡ್ತಿ - ರಂಗು ಶೆಡ್ತಿರೆ ಮಗಳು ವ ಅಣ್ಣಯ್ಯ ಶೆಟ್ಟ ಹೆಂಡತಿ. 6 ಸಾದು ಶೆಟ್ಟ - ಪಿಣಿಯ ಶೆಟ್ಟ ಮಗ ಉಡ್ಪಿ ತಾಲೂಕು ಪಾವಂಜೆ ಗ್ರಾಮ ದಲ್ಲಿರುವವರು ಯಿವರಿಗೆ

ನಮ್ಮ ಬಾಬ್ತು ಜರ್ತಾದ ಗೇಣಿಯನ್ನು ತವರೀಕು 10—11—60 ನೇ ದಿನಸ ಪೂರ್ವಾಹ್ನೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರುಪಡಿಸಬೇಕಾಗಿಯೂ ತಪ್ಪಿದ್ರೆ ನಿಮ್ಮ ಮೇಲೆ ಆಗತ್ಯವಿರುವ ಮುಂದಿನ ಕ್ರಮಗಳ ಕುರಿತು ಹುಕುಂ ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ನೋಲ್ಕಂಡ ಅರ್ಜಿವಾಕ್ಯು ಮಾಡಿರುವುದಾಗಿ ನಿಮಗೆ ಈ ಮೂಲಕ ತಿಳಿಯಪಡಿಸಿಯನೆ.

K. Ramakrishna Rao
Vakil for Petitioner

Udipi 31—10—1960.

ಮಹಾರಾಷ್ಟ್ರ ಏಪೆಕ್ಸ್ ಕಾರ್ಪೊರೇಶನ್ ಲಿಮಿಟೆಡ್

ಉಪೇಂದ್ರ ಬಾಗ್, ಕೆನರಾ ಮ್ಯೂಚುವಲ್ ಸ್ಟಾರ್, ಉಡುಪಿ.

ಪ್ರಕಟಣೆ

ನಮ್ಮ ಕಂಪೆನಿಯ ಕಾರ್ಯಾಲಯವನ್ನು 1960ನೇ ನವೆಂಬರ ಒಂದರಿಂದ ನಮ್ಮ ನೂತನ ಸ್ವಂತ ಕಟ್ಟಡ

"ಉಪೇಂದ್ರ ಬಾಗ್"

ಕೆನರಾ ಮ್ಯೂಚುವಲ್ ಸ್ಟಾರ್, ಉಡುಪಿ, ಇಲ್ಲಿಗೆ ಸ್ಥಳಾಂತರಿಸಲಾಗಿದೆ.

ಈ ಬದಲಾವಣೆಯನ್ನು ದಯವಾಡಿ ಗಮನಿಸಬೇಕಾಗಿ ವಿನಂತಿ

ಉಪೇಂದ್ರ ಬಾಗ್,
ಕೆನರಾ ಮ್ಯೂಚುವಲ್ ಸ್ಟಾರ್, ಉಡುಪಿ.
2—11—1960.

ಟಿ. ರಮೇಶ ಯು. ಪೈ
ಜನರಲ್ ಮೆನೇಜರ್.

ಪುಸ್ತಕ ನಿಮರ್ಶೆ

(ನಿಮರ್ಶನಕ್ಕಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನಿ.)

ಬೆಗುರು ಹಾಸಿಗೆ— (ಕಾದಂಬರಿ)

ಬರೆದವರು: ಭಾರತೀಸುತ. ಪ್ರಕಾಶಕರು: ಸುಲಭ ಸಾಹಿತ್ಯ ಪ್ರಕಾಶನ, ಕುಮಟ. ಪುಟಗಳು: ೨೩೧. ಬೆಲೆ: ರೂ. ೨= ೫೦.

ಚೀನಾಕಾರುಬಲ ಕುಲದ ನಾಯಕ ಮತ್ತು ನಾಯಕ್ಕೂರ ವಂಶದ ಬಾಲ ವಿಧವೆ ಲಕ್ಷ್ಮಿಯ ವಿವಾಹದ ಪ್ರಣಯದಲ್ಲಿ ನಾಯಕನ ಮನಃಪರಿವರ್ತನೆ ಕೊನೆಗೊಳ್ಳುವ ಕಥಾ ವಸ್ತು ವಿನ 'ಬೆಗುರು ಹಾಸಿಗೆ' ವೈನಾಡಿನ ಹಿನ್ನೆಲೆಯಲ್ಲಿ ಕಾದಂಬರಿಯ ರೂಪ ಪಡೆದು ಗಾತ್ರದಲ್ಲಿ ಕನ್ನಡಿಗರ ಕೈಸೇರಿದೆ. ಲಕ್ಷ್ಮಿ ಮತ್ತು ನಾಯಕರ ಪ್ರಣಯದ ಸೋಗಸ್ಸನ್ನರಿತ ಲಕ್ಷ್ಮಿಯು ನಾಯಕ ಆಕೆಯನ್ನು ದೂರ ವಿರಿಸಿಕೊಂಡಿರುವ ವಿಧಿಸಲ್ಪಟ್ಟಿಂದ ಅವರ ಸಂಯೋಗವಾಯಿತು. ಇಲವಾರು ವರ್ಷ ನಾಯಕನ ಅಂಕುಶ ವಮಿಸಿ ವಿಶೇಷವಾಗಿದ್ದ ಆನೆ ಶಂಕರ ಅಕ್ಷಿ ಅಲೆವಾಯಿತ್ತ. ನೂತನ ಮರದಡಿ ಯಲ್ಲಿ ಚಿಗುರಿನ ಹಾಸಿಗೆಯಲ್ಲಿ ರಮಿಸುತಿದ್ದ ಅನಂತ ಪ್ರಣಯಿಗಳತ್ತ ತೋಸಾಲೇಶದಿಂದ ಸಂಚರಿಸುವ ಶಂಕರನ ಪಥದಲ್ಲಿ ಲಕ್ಷ್ಮಿ ಯನ್ನು ಕೆಸರೋಗಿ ನಾಯಕ ದಲಿತನಾಗಿಬಿಟ್ಟ; ಆ ಬೆಗುರು ಹಾಸೇ ನಾಯಕನ ಮೃತ್ಯುರಂಗ ವಾಗಿಬಿಟ್ಟಿತು.

ಮೂಲಕಥೆಯ ಹಿನ್ನೆಲೆಯಲ್ಲಿ ಆನೆಗಳನ್ನು ಸಾಕುವ, ಆವುಗಳಿಂದ ಕೆಲಸಮಾಡಿಸುವ ಕ್ರಮಗಳು, ಆನೆಗಳ ಮನಃಪ್ರಕೃತಿ ಹಾಗೂ ಉಸ್ಮೃತಿಗಳು, ನಬಿಸಾಡಿನ ನಾಯರ್, ನಂಬೂದರಿ ಕುಟುಂಬದ ಜೀವನಕ್ರಮಗಳು ಕಾದಂಬರಿಯಲ್ಲಿ ಉಚಿತರೀತಿಯಲ್ಲಿ ವರ್ಣಿಸಲ್ಪಟ್ಟಿವೆ. ನಸ್ಸರ್ಗದೃಶ್ಯಗಳಿಗೆ ಒಪ್ಪುವಂತಹ ಪಡಿನುಡಿಗಳ ಪೊರಣ, ಭಾಷೆಯ ಪರಿಶುದ್ಧತೆ ಮತ್ತು ಶೈಲಿಯ ಸೊಬಗು ಕಾದಂಬರಿಯ ಓದುಗರನ್ನು ಮುಗ್ಧರನ್ನಾಗಿಸುತ್ತದೆ. ವೈನಾಡಿನ ಪ್ರಕೃತಿಯ ವಿವರಣೆಯಲ್ಲಿ ಕೆಲವೊಂದು ಜಾನಪದ ಪದಗಳ ಅರ್ಥವನ್ನು ಪುಸ್ತಕದ ಕಡೆಯಲ್ಲಿ ಕೊಟ್ಟಿರುವುದು ಉಪಯುಕ್ತವಾಗಿದೆ. ಕನ್ನಡಿಗರಿಗೆ ಹೊಸತೆನಿಸುವ ಕಥಾವಸ್ತು ವ್ಯಾಪಾರ ಈ ಹೊಸತನದಲ್ಲೇ ಆಭಿನುತಿಯನ್ನು ಕೆರಳಿಸುವ ಶಕ್ತಿಯುತನಿದೆ; ಮತ್ತು ಇದರಿಂದಾಗಿಯೇ ಲೇಖಕರ ಶ್ರಮ ಸಾರ್ಥಕವಾಗಿದೆ. 'ಬೆಗುರು ಹಾಸಿಗೆ'ಯ ಕಥಾವಸ್ತು ಮತ್ತು ದುರಂತ ಚಿತ್ರಣವು ಸಹೀನವಿಸ್ಮಯಂತಿಲ್ಲವಾದರೂ ಅದಕ್ಕೆ ಉಪಯೋಗಿಸಿದ ಹಿನ್ನೆಲೆ, ಬಳಸಿಕೊಂಡ ಸನ್ನಿವೇಶ, ಮುಂದುವರಿದ ಕ್ರಮಗಳಲ್ಲಿ ಹೊಸತನವಿದೆ. ಈ ಹೊಸತನದ ಕಾರಣದಿಂದಲೇ ಕನ್ನಡಿಗರ ಆದರಾಭಿಮಾನಗಳಿಗೆ 'ಬೆಗುರು ಹಾಸಿಗೆ' ಪಾತ್ರವಾಗಬಲ್ಲದು. ಕಾದಂಬರಿಕಾರರ ಇನ್ನೊಂದು ಕೃತಿ 'ಯಲಿಯ ಜೋಸ' ನ್ನೂ ಕಾಣುವತಹತಪಪಡಿಸುವುದು ಪೆಟ್ಟಿಸುತ್ತದೆ. ಆತಿಸಿಲಟದಲ್ಲೇ ಇದನ್ನೂ ಪಡೆಯುವ ಸೌಭಾಗ್ಯ ಕನ್ನಡಿಗರದಾಗಲೆಂದು ಹಾರೈಸುತ್ತಬಹುದು.

ಜೀವನ ಜೋಕಾಲಿ —(ಕುತೂಹಲ ಕಾರಿಯಾದ ಸರಸ—ಸಾಮಾಜಿಕ — ಕಾದಂಬರಿ) ಲೇಖಕರು: ಎಸ್. ದಸ್ತಗೀರ್. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ೧೩೮. ಬೆಲೆ: ರೂ. ೧= ೫೦

ತಪ್ಪಿನಿಮಿತ್ತದಿಂದ ತಿರಸ್ಕೃತಳಾದ ಹೆಲನ್ ಕೃಷ್ಣಾ ಪೂಡುತಿದ್ದಾಗ್ಗೆ ರೇಲು ಅಪಘಾತಕ್ಕೆ ಸಿಲಿಯಾಗಿ ಆಕೆಯು ಜೊತೆಗಾತಿ ಬ್ರೀಟಿಶ್ ಸತಿಯೊಡನೆ ಕಾಲಭೀಸಲಾದಳು; ಪತಿಗೆ ಗಾಯವಾಗಿಸಿಕೊಂಡಳು. ಇಬ್ಬರೂ ತುಂಬು ಗರ್ಭಿಣಿಯಾಗಿದ್ದರು. ಆದೊಂದು ದುರ್ಘಟನೆಯಿಂದ ಆಸ್ಪತ್ರೆಗೆ ಸೇರಿಸಲ್ಪಟ್ಟ ಹೆಲನ್ ಆಸ್ಪತ್ರೆ ಪಿತ್ತಳು. ಅದಾವ ಸುದ್ದಿಯಿಂದಲೋ ಆಕೆ ಬ್ರೀಟಿಶ್ ಎಂದೇ ಎಲ್ಲರ ತಿಳುವಳಿಕೆಯಾಗಿತ್ತು. ಹೀಗೆ ಹೆಲನ್ ಬ್ರೀಟಿಶ್ ಆಗಿ ಬ್ರೀಟಿಶರ ನಾವಸ ಮನೆಯಲ್ಲಿ ಸೇರಿಕೊಂಡು ರಾಜಕೀಯ ರೀತಿಯಲ್ಲಿ ಬೆಳೆಸಿದಳು. ಆದರೂ ಆಕೆಯ ಅಂತರಂಗ ಸವೆಯುತಿತ್ತು, ಹಂಬರಿಯುತಿತ್ತು. ಆದರೆ, ದುಶ್ಚಿಸ್ತೆಗಳು ಇಲ್ಲಿಗೇ ಮುಗಿಯಲಿಲ್ಲ. ಒಂದಾದಮೇಲೊಂದರಂತೆ ನೂರಾರು ಸನುಸ್ಯೆಗಳನ್ನು ಆಕೆ ಎದುರಿಸಬೇಕಾಗಿ ಬಂತು. ಅವೆಲ್ಲವನ್ನೂ ಜಯಶೀಲಿಯೊವಾಕೆ ಬ್ರೀಟಿಸಳ ಮೈದುನ ಬೆಲ್‌ನನ್ನು ವಿವಾಹಿತಳಾಗಲೇ ಬೇಕಾಯಿತು— ಹೆಲನ್ ತನ್ನ ಜೀವನವನ್ನು ಜೋಕಾಲಿಯಂತೆ ಜೋಲಾಯಮಾನವಾಗಿಸಿಕೊಂಡೇ ತನ್ನ ಶೇಷ ಜೀವನವನ್ನು ಕಳೆಯಬೇಕಾಯಿತು.

ಆಮೆರಿಕೆಯ ಕಾದಂಬರಿಕಾರ ವಿಲಿಯಂ ಆಯರಿಷರ್ I married a dead man ಎಂಬ ಕಾದಂಬರಿಯ ಆಧಾರದಿಂದ ಬರೆದಿರುವ ಕಾದಂಬರಿಯಿದು. ಇದರಲ್ಲಿ ಒಂದು ವಿಚಿತ್ರ ಸನ್ನಿವೇಶದ ವರ್ಣನೆಯಲ್ಲಿದೆ ಅಂಗಿಕವಾಗಿ ಪತ್ತೇದಾರಿಯ ರಹಸ್ಯ ಭಯಾನಕತೆಯೂ ಇರುವುದು. ನಸ್ತುತೇ ಕುತೂಹಲಕಾರಿಯಾಗಿರುವುದು ಪ್ರಾರಂಭದಲ್ಲೇ ಗೊತ್ತಾಗಿರುವುದರಿಂದ ಮುಂದೇನು ಎಂಬ ಪ್ರಶ್ನೆಗೆ ಉತ್ತರವವನಬೇಕೆಂಬ ಹಂಬಲ ಕೊನೆಯ ವರೆಗೂ ಉಳಿಯುತ್ತದೆ. ಶ್ರೀ ವಸ್ತುನಿರ ಸರಳವಾದ ಭಾಷೆಯು ರೋಮಾಂಚನಕರ ಶೈಲಿಯು ವೇಗದ ಓಟವನ್ನು ಒಂದೇ ಸಮನೆ ಮುಂಗೊಯ್ಯುತ್ತಿದೆ. ಹೊಸ ದೆನಿಸಬಹುದಾದ ಕಥಾವಸ್ತು ಕನ್ನಡಿಗರ ಮನಸ್ಸನ್ನು ಖಂಡಿತಕ್ಕೂ ಸೆರೆಹಿಡಿಯಬಲ್ಲದು.

ಗುರುಗುಣ ಗಾನಾವೃತ—ಪ್ರಕಾಶಕರು: ಉಪಾಧ್ಯಾಯ ಪ್ರಕಟನಾಲಯ, ಆರ್ ಕೇಟೆಟ್, ಬೆಂಗಳೂರು-೨ ಪುಟಗಳು: ೫೨. ಬೆಲೆ: ೦= ೪೫.

'ಗುರುವಿನ ಗುಲಾಮನಾಗದ ತನಕ ಡೊರೆಯದೆಣ್ಣು ಮುಕುತಿ' ಎಂದು ಗುರುಮಹಿಮೆಯನ್ನು ದಾಸವರೇಣ್ಯರು ಹಾಡಿದ್ದಾರೆ. ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಗುರ್ವನುಗ್ರಹ ಬೇಕೇಬೇಕು. ಆದುದರಿಂದ ಕರ್ನಾಟಕದ ವೈಷ್ಣವ ದಾಸರೆಲ್ಲರೂ ಗುರುವಿಗೆ ಗಣನೀಯ ಸ್ಥಾನವನ್ನಿತ್ತಿದ್ದು ಅನುರನ್ನು ತ್ಯಂತಮ್ಯ ಕೀರ್ತನೆಗಳಲ್ಲಿ ನಾನಾ ಪರಿಯಾಗಿ ಹೊಗಳಿ ನುತಿಸಿದ್ದಾರೆ. ಭಕ್ತ ಪ್ರಹ್ಲಾದನ ಅನಂತರ ಸಂಭಗಳು ತಮ್ಮ ಉದ್ದೇಶಗಳನ್ನು ಪೂರೈಸುತ್ತ ಪ್ರಗತಿ ಪಥದಲ್ಲಿ ಸುಗ್ತಡೆದು ಬರುತ್ತಿವೆಂಬುದು ಇವುಗಳಿಂದ ತಿಳಿಯುವುದು. ಉದಾರಿಗಳ ಸಹಾಯದಿಂದ ಇವು ಮುಂದಕ್ಕೂ ಬೆಳೆದುಬರಲೆಂದೂ ತಮ್ಮ ಉದ್ದೇಶಗಳನ್ನು ಉತ್ತಮರೀತಿಯಲ್ಲಿ ನಿರ್ವಹಿಸಲು ಸರಕ್ತವಾಗಲೆಂದೂ ಹಾರೈಸುವೆವು.

ಗೋರಾ.

ಸಾದರ ಸ್ವೀಕಾರ

Canara Bank (Quarterly —Inaugural Issue-Auguest, 60.)Editor: Sri R G Phatak

ಕೆನರಾ ಬೇಂಕಿನ ಆಡ್ವಾನ್ಸ್‌ಟೀವ್ ಆಫೀಸಿನಿಂದ (ಬೆಂಗಳೂರು) ಹೊರಡುವ ಈ ಪತ್ರಿಕೆಯ ಪ್ರಥಮ ಸಂಚಿಕೆಯಿದು. ಬೇಂಕಿನ ಆಂತರಿಕ ವಿಚಾರಗಳನ್ನೂ, ಅದು ಜನಪ್ರಿಯತೆಯನ್ನು ಗಳಿಸುತ್ತಿರುವ ವಿವರಗಳನ್ನೂ ಸಚಿತ್ರವಾಗಿ ಈ ಪತ್ರಿಕೆಯಿಂದ ತಿಳಿಯಬಹುದು. ಇದು ಒಂದು "House Magazine" ಆಗಿರುವುದರಿಂದ ಬೇಂಕಿನ ಸಿಬ್ಬಂದಿಯವರಿಗೂ, ಬೇಂಕಿನ ಸಂಪರ್ಕವಿಟ್ಟು ಕೊಳ್ಳುವವರಿಗೂ ಉಪಯೋಗಕ್ಕೆ ಬೀಳಬಹುದು.

Rotary Club of Coondapoor—ಕುಂದಾಪುರ ರೋಟರಿ ಕ್ಲಬ್ಬಿನವರು ಸನದು ವಿತರಣಾ ಸಮಾರಂಭದ ಅಪಸರೆದಲ್ಲಿ ಪ್ರಕಟಿಸಿದ ಸ್ಮಾರಕ ಸಂಚಿಕೆ ನಮ್ಮ ಕೈಸೇರಿದೆ. ಇದರಲ್ಲಿ ರೋ ಟರಿಯ ಸಂಕ್ಷಿಪ್ತ ಪರಿಚಯದೊಡನೆ ಕುಂದಾಪುರದ ಮಾಹಿತಿಗಳು, ಹಂಚಿನ ಉದ್ಯಮ, ಕೈಮ್ಯಮಗ್ಗ ಸಾಧ್ಯಾಸಾಧ್ಯತೆಗಳ ಬಗ್ಗೆ ಲೇಖನಗಳೂ ಇವೆ.

ವರದಿಗಳು

● ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ೧೯೫೯ನೆ ವರ್ಷ ೪೧ನೆ ವರ್ಷಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯೂ ನಮ್ಮ ಹಸ್ತಗತವಾಗಿದೆ. ಈ ವರದಿಯ ನಸ್ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಬೀರ ನಾಯಕ ಶೈದ್ಧಾಂಜಲಿ ಬದ್ಧನಾಗಿ ಚಿತೆಗೆ ಪ್ರದಕ್ಷಿಣೆ ಬಂದು, ದೂತನನ್ನು ಕರೆದು, ಸಿದ್ಧನಾಯಕನಿಗೆ ಮೊಗತೋರಲು ತಾನು ನಾಚಿ:ವೆನೆಂದು, ಇನ್ನಾದರೂ ಭೀರುತನವನ್ನು ಬಿಟ್ಟು, ಆ ಮಹಾತಾಯಿ ಹಾಕಿಕೊಟ್ಟ ಮಾರ್ಗದಲ್ಲಿ ಜನರ ಅಭ್ಯುದಯವನ್ನು ಲಕ್ಷಿಸಿ ಆಳಿಕೊಂಡಿರಬೇಕೆಂದು ಹೇಳಿ ಕಳುಹಿಸಿದ.

ಬೀರ ನಾಯಕನ ಸೈನ್ಯ ಅಲ್ಲಿಂದ ಬಾರಕೂರಿಗೆ ಹಿಂತಿರುಗಿತು. ದಾರಿಯಲ್ಲಿ ಮೂದಯ್ಯನನ್ನು ಹಿಡಿದು ಹೆಡೆಮುರಿಗೆ ಕಟ್ಟಿ ಕೊಂಡೊಯ್ದಿತ್ತು. ಬೀರು ಸಿದ್ಧ ನಾಯಕ ಮಹಾತಾಯಿಯ ಬಲಿದಾನದ ನಂತರ ಕಣ್ಣು ತೆರೆದ. ತನ್ನ ವಿಲಾಸ ಭೋಗಗಳನ್ನು ಬಿಟ್ಟು ನಿಷ್ಕಾಮಂಕನಾದ ಊರನ್ನುಳಿಸಿದ ಆ ಮಹಾಸತಿ ಮಹಾತಾಯಿಯ ಬಲಿದಾನದ ಸ್ಥಳದಲ್ಲಿ ಒಂದು ಕಟ್ಟೆಯನ್ನು ಕಟ್ಟಿಸಿ ಅಪ್ಪತ್ತಿನ ಗಿಡವನ್ನು ನೆಡಿಸಿ, ಆದಕ್ಕೆ ಮಹಾಸತಿ ಕಟ್ಟೆ ಎಂದು ನಾಮಕರಣ ಮಾಡಿದೆ.

ಅರಮನೆಯಲ್ಲಿ ಮಹಾತಾಯಿಯ ನೆನಪನ್ನು ಕಡೆಯಲಾರದೆ, ಆಕೆ ಹಾಕಿಕೊಂಡ ಸ್ಥಳದಿಂದ ಬಡಗು ದಿಕ್ಕಿನ ನದಿದಂಡೆಯಲ್ಲಿ ಹೊಸತಾಗಿ ಕೋಟೆಯೊಂದನ್ನು ಕಟ್ಟಿಸಿ ರಾಜಧಾನಿಯನ್ನು ಅಲ್ಲಿಗೆ ಸ್ಥಳಾಂತರಿಸಿದ. ಹಿಂದಿನ ಅರಮನೆಯಲ್ಲಿ ಮಹಾತಾಯಿಯ ಸ್ಮಾರಕವನ್ನು ರಚಿಸಿದ.

ಈಗಲೂ ಕುಂದಾಪುರದಲ್ಲಿ ವಾಸ್ತಿಕಟ್ಟೆ, ಮೂಡಣದಲ್ಲಿ ಹಳೆ ಕೋಟೆ, ಬಡಗು ದಿಕ್ಕಿನ ಹೊಸ ಕೋಟೆಯ ಕೋಟೆ ಬಾಗಿಲು ಉಳಿಸುಕೊಂಡಿವೆ. ಮಹಾತಾಯಿಯ "ವಾಸ್ತಿ ಕಟ್ಟೆ"ಗೆ ಅನುದಿನವೂ ಪೂಜೆ ನಡೆಯುತ್ತಾ ಬಂದಿದೆ

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು
ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ನುಸುತ್ತಿರವಾಷ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗೆನುಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಆತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಆಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೦೫ನ್ನು ಮನಿಯಾರ್ಡರು ಮೂಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳನಿವೆ.

ನಿಬಂಧಕರು:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇತಿಹಾಸ ಪೃಷ್ಠ

(೩ನೇ ಪುಟದಿಂದ)

ಸುಪುರದ ಕುಲ ದೇವಿಯರು ಊರನ್ನು ರಕ್ಷಿಸುವರೆಂಬ ಭರವಸೆಯೊಡನೆ ತಾನು ಅಗ್ನಿ ತಾಯಿಯ ಪವಿತ್ರ ಗರ್ಭವನ್ನು ಸೇರಲು ಅಪ್ಪಣೆ ಕೊಡಬೇಕೆಂದು ಬೇಡಿ ಕೊಂಡಳು. ಪುರೋಹಿತರು ಮಂತ್ರಾಕ್ಷತೆಯಿತ್ತು ಹರಸಿದರು

ಕ್ಷಣದಲ್ಲಿ ಉರಿಯುತ್ತಿರುವ ಚಿತೆಗೆ ನುಹಾಮಾಯಿ ಧುಮುಕಿದಳು. ಕೆಲವೇ ನಿಮಿಷದಲ್ಲಿ ಬೀರ ನಾಯಕ ಅಂಗರಕ್ಷಕ ರೊಡನೆ ಚಿತೆಯ ಬಳಿ ಧರದಿಂದ ಸಾಗಿದ. ಉರಿಯುತ್ತಿರುವ ಬೆಂಕೆಯು ನಾಲಗೆಗಳ ನಡುವೆ ಸ್ತ್ರೀ ದೇಹ ಬೆಂದು ಕರಗುತ್ತಿರುವುದನ್ನು ಚಿತ ಕಂಡ.

ಬಿಸಿನೆತ್ತರದ ಆಳಿಕೆಯ ಆಮಲಿಗೆ ವೈರಾಗ್ಯ ಸೋಂಕಿತು. ಬೀರ ನಾಯಕನ ವೈಯಲ್ಲಿ ರೋಮಾಂಚವಾಯಿತು. ಕ್ಷಣ ದಲ್ಲಿ ಆತ ತಣ್ಣೀರಿಗಿಂತಲೂ ತಣ್ಣಗಾದ. ಆಗಿಹೋಗಿ ಅನಾಹತ ಆತನ ಬುದ್ಧಿಗೆ ಹೊಳೆದಿತ್ತು. ಮಂಡಿಯೂರಿ ಚಿತೆಗೆ ನಮಿಸಿದ ನಾಯಕ.

ಮೂದಯ್ಯನ ಗುಪ್ತಚಾರರಿಂದ ಸಿದ್ಧ ನಾಯಕ ಸತ್ತಿದ್ದು ಸುಳ್ಳೆಂಬ ಸುದ್ದಿಯನ್ನು ಪಡೆದು ಮಹಾತಾಯಿಯನ್ನು ಸೆರೆ ಹಿಡಿಯಲು ತ್ವರಿತ ಗತಿಯಿಂದ ಆತ ಮುಂದಾಗಿ ಬಂದಿದ್ದ. ಆದರೆ ಆ ಮಹಾತಾಯಿ ಊರಿಗಾಗಿ, ಕುಲ ಗೌರವಕ್ಕಾಗಿ ಕುಲ ದೇವಿಯರಿಂದ ರಕ್ಷಣೆಯನ್ನು ಕೋರಿ, ತನ್ನ ಪ್ರಾಣ ಬಲಿಯನ್ನಿತ್ತಿದ್ದಳು.

ಬೀರ ನಾಯಕ ಶೈದ್ಧಾಂಜಲಿ ಬದ್ಧನಾಗಿ ಚಿತೆಗೆ ಪ್ರದಕ್ಷಿಣೆ ಬಂದು, ದೂತನನ್ನು ಕರೆದು, ಸಿದ್ಧನಾಯಕನಿಗೆ ಮೊಗತೋರಲು ತಾನು ನಾಚಿ:ವೆನೆಂದು, ಇನ್ನಾದರೂ ಭೀರುತನವನ್ನು ಬಿಟ್ಟು, ಆ ಮಹಾತಾಯಿ ಹಾಕಿಕೊಟ್ಟ ಮಾರ್ಗದಲ್ಲಿ ಜನರ ಅಭ್ಯುದಯವನ್ನು ಲಕ್ಷಿಸಿ ಆಳಿ ಕೊಂಡಿರಬೇಕೆಂದು ಹೇಳಿ ಕಳುಹಿಸಿದ.

ಬೀರ ನಾಯಕನ ಸೈನ್ಯ ಅಲ್ಲಿಂದ ಬಾರಕೂರಿಗೆ ಹಿಂತಿರುಗಿತು. ದಾರಿಯಲ್ಲಿ ಮೂದಯ್ಯನನ್ನು ಹಿಡಿದು ಹೆಡೆಮುರಿಗೆ ಕಟ್ಟಿ ಕೊಂಡೊಯ್ದಿತ್ತು. ಬೀರು ಸಿದ್ಧ ನಾಯಕ ಮಹಾತಾಯಿಯ ಬಲಿದಾನದ ನಂತರ ಕಣ್ಣು ತೆರೆದ. ತನ್ನ ವಿಲಾಸ ಭೋಗಗಳನ್ನು ಬಿಟ್ಟು ನಿಷ್ಕಾಮಂಕನಾದ ಊರನ್ನುಳಿಸಿದ ಆ ಮಹಾಸತಿ ಮಹಾತಾಯಿಯ ಬಲಿದಾನದ ಸ್ಥಳದಲ್ಲಿ ಒಂದು ಕಟ್ಟೆಯನ್ನು ಕಟ್ಟಿಸಿ ಅಪ್ಪತ್ತಿನ ಗಿಡವನ್ನು ನೆಡಿಸಿ, ಆದಕ್ಕೆ ಮಹಾಸತಿ ಕಟ್ಟೆ ಎಂದು ನಾಮಕರಣ ಮಾಡಿದೆ.

ಅರಮನೆಯಲ್ಲಿ ಮಹಾತಾಯಿಯ ನೆನಪನ್ನು ಕಡೆಯಲಾರದೆ, ಆಕೆ ಹಾಕಿಕೊಂಡ ಸ್ಥಳದಿಂದ ಬಡಗು ದಿಕ್ಕಿನ ನದಿದಂಡೆಯಲ್ಲಿ ಹೊಸತಾಗಿ ಕೋಟೆಯೊಂದನ್ನು ಕಟ್ಟಿಸಿ ರಾಜಧಾನಿಯನ್ನು ಅಲ್ಲಿಗೆ ಸ್ಥಳಾಂತರಿಸಿದ. ಹಿಂದಿನ ಅರಮನೆಯಲ್ಲಿ ಮಹಾತಾಯಿಯ ಸ್ಮಾರಕವನ್ನು ರಚಿಸಿದ.

ಈಗಲೂ ಕುಂದಾಪುರದಲ್ಲಿ ವಾಸ್ತಿಕಟ್ಟೆ, ಮೂಡಣದಲ್ಲಿ ಹಳೆ ಕೋಟೆ, ಬಡಗು ದಿಕ್ಕಿನ ಹೊಸ ಕೋಟೆಯ ಕೋಟೆ ಬಾಗಿಲು ಉಳಿಸುಕೊಂಡಿವೆ. ಮಹಾತಾಯಿಯ "ವಾಸ್ತಿ ಕಟ್ಟೆ"ಗೆ ಅನುದಿನವೂ ಪೂಜೆ ನಡೆಯುತ್ತಾ ಬಂದಿದೆ

ಕಥಾವಿಹಾರ

(೨ನೇ ಪುಟದಿಂದ)

"ನನಗೆ ಹಳ್ಳಿಯವರೆಂದರೆ ಭಾರಿ ಇಷ್ಟ" ಶಾಮುವಿಗೆ ನಗೆ ಬಂತು. ಕಣ್ಣನ್ನು ಪೇಪರನೆತ್ತ ಸರಿಸಿದ. "ಹಳ್ಳಿಯ ಜನರು ನಿಷ್ಕಲ್ಮಶಹೃದಯಿಗಳು. ಎಲ್ಲಾ ಕಡೆಗಳಲ್ಲೂ ಪತ್ರಿಬಿಂಬಿಸುವ ಅನುಕಂಪ ದುಃಖಾರ್ದ್ರ ಹೃದಯಿಗಳು. ಆದರೆ ನೂತ ಮಾತ್ರ ಬಹುಕಮ್ಮಿನಮ್ಮಂತಲ್ಲ. ಪೇಟೆಯವರಾದರೆ ಗುರುತಿಲ್ಲದವರೊಡನೆಯೂ ಮಾತಾಡುತ್ತಾರೆ. ಗಡುಸುಗಾರೇರು.

ನಾಲ್ಕಾರು ಹುಡುಗರು ಬಂದರು. ಆಕೆ ಪೇಪರನ್ನು ಅಲ್ಲೇ ಎಸೆದು, ಬೀರಿ ಮೇಜಿಗೆ ಹೊಂಟಳು. ಶಾಮೂವೂ ಎದ್ದು ಮೆಲ್ಲನೆ ಕ್ಲಾಸಿಗೆ ನಡೆದ.

ಆದಾದ ಮೇಲೆ ಆಕೆ ನಾಲ್ಕೈದು ದಿನ ಕ್ಯೂನ್ಲೆ ಸಿಕ್ಕಿದಳು. ಇಲ್ಲದ ವಿಚಾರ, ಹೃದಯ ತೊರೆದಿಟ್ಟು ಹರಟೆ-ಹೊಡೆಯುತ್ತಿದ್ದಳು.... ಕಪ್ಪ ವಿಷಯಗಳಮ್ಮ ಕೇಳುತಿದ್ದಳು. ಶಾಮುವೂ ಆರ್ಥವತ್ತಾಗಿ ವಿವರಿಸುತ್ತಿದ್ದ. ಮತ್ತೆ ಮತ್ತೆ ಹೋಟೆಲಿನ ರೂಮಿಗೂ ಒಂದೆರಡು ಬಾರಿ ಬಂದಿದ್ದಳು. ಆದರೆ ಅವರ ಸ್ನೇಹಕ್ಕೆ ಧಕ್ಕೆ ತರುವ ಪ್ರಮೇಯ ಒಂದೊದಗಿ ಬಂತು.

ಮಳೆ ಬಂದು ಕಾಲೇಜಿನ ಮೆಟ್ಟಿಲು ನೀರಮಯವಾಗಿತ್ತು. ಶಾಮುವು ಅವಳನ್ನು ಕಾಣಲೆಂದು ಅವಸರವಸರದಿಂದ ಬಂದ. ಮೆಟ್ಟಿಲೇರುವಾಗ ಕಾಲು ಜಾರಿ ಬಿದ್ದ. ನೋಡುತ್ತಾನೆ, ಬಾಳೆ ಹಣ್ಣಿನ ಸಿಪ್ಪೆಗೆ ಅವನ ಕಾಲು ಜಾರಿತ್ತು. ಪುಣ್ಯಕ್ಕೆ ಮೈಕೈ ಗಾಯವಾಗಿರಲಿಲ್ಲ. "ಥೆ ಥಾಗೇ ಇಟ್ಟು ಬಂದ್ಬಿಡಿ. ಇವತ್ತು ಈ ಪ್ರಪಂಚನನ್ನು ಬಿಟ್ಟು ವಿಹರಿಸುವ ಜನರೆಲ್ಲ ಕಾಣಲೆಂದು ಈ ಉಪಾಯ ಹೂಡಿದ್ದೇವೆ" ಎಂದರು, ನಾಲ್ಕಾರು ಮಂದಿ.

ಶಾಮು ಮುಂದರಿಯದಿದ್ದರೂ ಇಡಲು ಮನಒಗ್ಗಲಿಲ್ಲ. ಆದರೆ ನಾಲ್ಕಾರು ಜನರೆದುರು ತನ್ನ ಪುಕ್ಕತನ ತೋರಿಸುವುದು ವಿಹಿತವಲ್ಲವೆಂದು ಬಗೆದು ಹಾಗೇ ನೀರೆರೆಚಿ ಅಂದವಾಗಿ ಇಟ್ಟ. ಒಳಗೆ ಹೋಗಿ ಎಲ್ಲರೂ ಕುಳಿತು ವೆಟ್ಟಲನ್ನೇ ದಿಟ್ಟಿಸುತಿದ್ದರು.

ಸ್ವಲ್ಪ ಹೊತ್ತಿನಲ್ಲಿ ಆಕೆ ಬಂದಳು. ಅವಳಂತೂ ಪಾರಾಗಿ ಬರುತ್ತಾಳೆ ಎಂದು ಶಾಮು ಎಣಿಸಿದ್ದ. ಆದರೆ ಆಕೆ ಬಿದ್ದೇ ಬಿಟ್ಟಳು. ಎಲ್ಲರೂ ಕೊರಗೋಡಿ ಬಂದರು. ಶಾಮು ಬಂದವನೇ ನೋಡಿದ, ಆಕೆ ಅಯ್ಯೋ ಅಯ್ಯೋ ಎಂದು ಅರಚುತಿದ್ದಳು. ತಲೆಯಲ್ಲಿ ರಕ್ತ ಸುರಿಯುತಿತ್ತು. ಕೈಹಿಡಿದು ಲಿಬೊರೆಟರಿಗೆ ಸಾಗಿಸಿದರು. ಸಾಯನ್ಸ್ ಅಸಿಸ್ಟಾಂಟ್ ಬ್ಯಾಂಡೇಜ್ ಬಿಗಿದರು. ಅಂತೂ ಅಂದು ಆಕೆ ಶಾಮುವೇ ಹಾಗೆ ಮಾಡಿದ್ದಂದು ಜನರ ಬಾಯಿಂದ ತಿಳಿದಳು.

ಇದಾದ ಎಂಟುಹತ್ತು ದಿನ ಆಕೆ ಕಾಲೇಜಿನ ಮಂಖ ಕಾಣಲಿಲ್ಲ. ಒಂದುದಿನ ಬಂದಳು. ಶಾಮುವೂ ಬೇಗ ಹೋಗಿದ್ದನಂದು. "ತಲೆಗೆ ತುಂಬಾ ಪೆಟ್ಟಾಗಿದೆ. ನಾನು ಮನೆಗೆ ಹೋಗುತ್ತೇನೆ. ಇನ್ನು ಶಾಲೆಗೆ ಬರುವುದಿಲ್ಲವೆಂದು ಕಾಣುತ್ತೆ. ನನಗೆ ಶಾಲೆಯಲ್ಲಿ ನಿಮ್ಮಿಂದ ಅಸ್ತ ಗೆಳೆಯರು ಮತ್ತಾರೂ ಇಲ್ಲ. "ಹ.ಂ ಒಂದು ವಿಷಯ ಕೇಳಲೇನು" ಎಂದು ಕೊರಳು ಕೊಂಕಿಸಿದ್ದಳು ಆಕೆ.

"ಹೋ" ಶಾಮು ನಗುತ್ತಾ ಮೂಕು ನಿರೀಕ್ಷಿಸಿದ.

"ನಾನು ವಿಧವೆ, ಮದುವೆಯೂಗುತ್ತಿರೇನು ನನ್ನನ್ನು" ಅದನ್ನು ನಗುತ್ತಾ, ಅಳುಕದೆ ಅಂದಿದ್ದಳು ಆಕೆ.

ಆದರೆ ಶಾಮು ಆ ಮೂತನ್ನು ನೀರೀಕ್ಷಿಸಿರಲಿಲ್ಲ. ಆದೂ ವಿಧವೆಯನ್ನು ಮದುವೆಯೂಗುವುದೆಂದರೆ ಮನೆಯವರು ಬಿಟ್ಟಾರೇ? ಎಂದೆಂದಿಗೂ. ಅಂದ ಮೇಲೇ ತಟ್ಟನೆ ಆತನ ಬಾಯಿಯಿಂದ ಉತ್ತರ ಬಂದಿತ್ತು. "ನನಗೆ ಮದುವೆ ಆಗಿಹೋಗಿತ್ತು! ನಿಮ್ಮಂತವಳೊಬ್ಬಳು ಮಡದಿಯಿದ್ದಾಳೆ." ಸುಳ್ಳಿನ ಕಂತೆ ಘಕ್ಕನೆ ಮುಂದರಿಸಲು ಆತ ಶಕ್ತನಲ್ಲ. ಆದ್ದರಿಂದ ಅದು ಅಲ್ಲಿಗೇ ನಿಂತಿತ್ತು.

"ಹುಂ. ಆದಾಗಲಿ-ನನ್ನನ್ನು ಮರೀಬೇಡಿ. ನೋಡಿ ಮದುವೆದಿನ ಕಾಗದ ಹಾಕುತ್ತೇನೆ, ಬರಲೇಬೇಕು. ನಾನಂತೂ ಮರೆಯುವುದಿಲ್ಲ. ನೋಡಿ" ಎಂದು ಹಣೆ ತೋರಿಸಿದ್ದಳು ಮಂಗಳವಾದ ಉದ್ದನೆಯ ಕೆರುಕುಂಕುಮ ಕೋಭಿಸುವ ಹಣೆ. ಬಿಳಿಯ ಬ್ಯಾಂಡೇಜ್ ಬಟ್ಟೆಯಿಂದ ತುಂಬಿ ಕೊಂಡಿದೆ. ಶಾಮುವಿಗೆ ತುಂಬಾ ದುಃಖವಾಯಿತು. ಕೈಜೋರಿ ಕೊಂದಿನಲ್ಲಾ ಸುಂದರ ರೂಪನ್ನು ಎಂದು ಮರುಗಿದ. ಆಕೆ "ನಿಮ್ಮ ವಿಳಾಸ ತಿಳಿಸುತ್ತೀರಾ" ಎಂದಳು ಆದರೆ ಕಾಗದ ಪೆನ್ನು ತೆಗೆಯುವುದರೊಳಗೇ, ನಾಲ್ಕಾರು ಜನರ ತಂಡ ಬಂದಿತ್ತು. ಆಕೆ ಪೇಪರಿನ ವಿಚಾರ ಬರೆಯುವಳಂತೆ ನಟಿಸಿ, ಅಂದು ಪಾರಾಗಿದ್ದಳು. ಮತ್ತೆ ಆಕೆಯ ಮೊಗ ಆತ ಕಾಣಲಿಲ್ಲ. ಮಧ್ಯಾಹ್ನ ಇವರಿಗೆ ಕಡವಾಗಿ ಕಾಲೇಜು ಬಿಟ್ಟಿತ್ತು. ಆಕೆ ಬೇಗ ಹೋಗಿರಬೇಕು. ಅಂತೂ ಆದರ ಮೇಲೆ ಆಕೆಯು ನೊಗವನ್ನು ಕಾಣದೆ ಶಾಮುವಿನ ಕಣ್ಣು ಸಂತಸ ತಾಳಲಿಲ್ಲ.

ಆದಾಗಿ ಒಂದು ವರ್ಷ ಕಳೆದಿದೆ. ಇಂದು ಶಾಮುವಿಗೆ ಮದುವೆ. ಯಾವುದೋ ಕಸ್ಮಿಕೆಯೊಡನೆ ಆದರೆ ಅವನ ಗೆಳೆಯರಾಮು, ನೊಗ ಅಂದವಿಲ್ಲೆಂದು ಬಂದವರು ಬಿಟ್ಟು ಬಿಟ್ಟು ಹೋದರು. ಅಷ್ಟೇ ನೂ ತೆಗಳುವಷ್ಟು ಅಂದಗಡಲಿಲ್ಲ" ಎಂದಿದ್ದ. ಇವಳನ್ನೇ ಬಿಟ್ಟರೆ, ತನ್ನ ಆಕೆ, ಇಡೀ ಹಣೆಯೇ ಗಾಯವಾದಾಕೆ. ಆಕೆಯ ಗತಿ! ತನ್ನಿಂದಾಗಿ ಆಕೆ ತನ್ನ ಕುರೂಪವನ್ನು ಅವಿದ್ಯಾವಂತನಿಗೆ ಮೂರುಗೊಂಡಳೇ ಇಲ್ಲ. ಆಕೆ ಬಯಸುತ್ತಿದ್ದುದು ವಿದ್ಯಾವಂತನನ್ನೆ. ವಿದ್ಯಾವಂತರು ಆಕೆಯನ್ನು ವರಿಸುವುದು ಸಾಧ್ಯವಿಲ್ಲ. ಎಷ್ಟು ನೆರಳುತ್ತಿದ್ದಾಳೋ ಮೇಲೆ ವಿಧವೆ ಮತ್ತೆ! ಇಂದು ಶಾಮುವಿನ ಮನಸ್ಸು ತಂದೆ ತಾಯಿಗಳ ಮಾತ್ರವಲ್ಲ ಜನಾಂಗವನ್ನೇ ಎದುರಿಸುವಂತಿದೆ. ಅಂತಹ ಚಿಂತೆಯ ತೆರೆಗಳು ಬಡಿದು ಬಡಿದು ಗಟ್ಟಿಯೂದ ದಡವಾಗಿತ್ತು ಅವನ ಮನಸ್ಸು. ಒಳಗೊಳಗೇ ಕೊರಗುತಿತ್ತು!

ರಾತ್ರಿ ವಿಧಿಯಿಲ್ಲ ತೀರಿತು! ಅವನಿಗೆ ಮದುಮಗಳ ಮುಖವೂ ನೋಡಲಿಕ್ಕಿಲ್ಲ ಬೇಡ. ಮಂಟಪದಲ್ಲಿ ಕುಳಿತಾದ "ಆಳ್ ಯ ಮೊಗವೇ ಕಣ್ಣಿಂದಿರು ಕಾಣಿಯುತಿತ್ತು ವಿನಃ ಬೇರಾವ ಸುಂದರ ಮೊಗವೂ ಆತ ಬಯಸಲಿಲ್ಲ. ಮುದುಮಗಳನ್ನು ಗೆಳೆಯೆರೇ ನೋಡಿಬಂದಿದ್ದರು. ರಾತ್ರಿ ಹೇ

ಭಾರತದಲ್ಲಿ ಸುಮಾರು ೩೦ ಲಕ್ಷ ಕುಷ್ಠರೋಗಿಗಳಿದ್ದಾರೆ. ಚಿತ್ರದಲ್ಲಿ ಮಹಿಬೀಗಿದ ಕುಷ್ಠರೋಗಿಯ ಅಮಾನುಷ ರೂಪವನ್ನು ನೋಡಬಹುದು.

ಗೂ ಹೊರಳಾಡಿ ಕಳೆದ ಶಾಮು. ಮರುದಿನ ಬೆಳಗ್ಗೆ ಕೆರೆಗೆ ಮೊಗತೊಳೆಯಲು ಹೋದಾಗ ಮದುಮಗಳು ಕಣ್ಣಿಗೆ ಬಿದ್ದಳು" ಹೆಣ್ಣೇನಾಯ್ತು?" ಶಾಮುವೆಂದ ಭಯದಿಂದ.

"ನಿನ್ನೆ ಬಿದ್ದುಬಿಟ್ಟೆ ಬಾವಿಕಟ್ಟೆಯಲ್ಲಿ" ಆಕೆ ಕೂಡಲೇ ಉತ್ತರ ಕೊಟ್ಟಳು.

"ತುಂಬಾ ನೋವಿದೆಯೇ" ಶಾಮು ಹಣೆ ದೈಯಿಂದೊತ್ತಿದ.

ಆಕೆಯ ಕೈ ಬಿಡಿಸಿಕೊಳ್ಳಲು ಆಣೆಯೂದಾಗ ಕೆಳಜಾರಿತು. ಬ್ಯಾಂಡೇಜ್ ಕೆಳಗೆ ಬಿತ್ತು.

"ಅಯ್ಯೋ" ಎಂದಳು ಆಕೆ.

"ಹಾಂ ಗಾಯವಿಲ್ಲಲ್ಲ" ಎಂದ ಶಾಮು ಗಾಬರಿಯಿಂದ.

ಆಕೆಯ ಭಯದಿಂದ ನಿಶ್ಚಲವಾದ ಮೊಗ, ಶಾಮು ಕಂಡು ಬೆಕ್ಕಸ ಬೆರಗಾದ. ಆತ ಯಾರಿಗಾಗಿ ಕನವರಿಸುತ್ತಿದ್ದನೋ 'ಆಕೆ'ಯೇ ಅವಳು. ವಿಸ್ಮಯದೊಡನೆ ಆನಂದಪ್ಪುಬೆರೆಯಿತು. "ಆಕೆನೋ ತಾನು ಮೆಚ್ಚಿದಾತ ಸಿಕ್ಕಿದ" ಎಂದು ಕೊಂಡಳು, "ನೀವು ವಿಧವೆಯೆಂದ ನೆನಪು' ಅರಿಯದೆ ಅಡಿದ ಶಾಮು.

"ಹಾಗು ನಿಮಗೆ ಮಾತ್ರ ವಿಧವೆ. ಅಂದರೆ ನಿಮ್ಮ ಮನಸ್ಸು ನೋಡುವ ಎಂದು ಸುಳ್ಳು ಹೇಳಿದ್ದೆ. ನೀವು ಮದುವೆ...." "ನಾನೂ ನಿನ್ನೆ ಹಾಗೇ...."

"ಮರೆಯದ ಕುರುಹು" ಎಂದೆಂದಿಗೂ ಮರೆಯುವುದು ಅಸಾಧ್ಯವಾದಂತಾಯಿತು, ಶಾಮುವಿಗೆ. ಮೊಗತೊಳೆದು ಆನಂದೋತ್ಸಾಹದಲ್ಲಿ ಮನೆಯತ್ತ ಕಾಲಿರಿಸಿದ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
10ಂದ 4 ತಿಂಗಳ ವರೆಗೆ 4%
5 ,, 12 ,, 4½%
13 ,, 24 ,, 4½%
೫. 8,000/- ಮತ್ತು ಮೇಲಣ ಡಿಪೋಸಿಟಿಗೆ ½% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ ಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯೆಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ನೋವುಗಳ ಅತ್ಯುತ್ತಮ ಸಂಜಾವಿಣೆ

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
3—11—1960

LICENSE NO. 31
Licensed to Post without Prepayment

ಶುದ್ಧ ಹರಟೆ:

ಭಾಷಣಂ ಜಿಯ್ವಾ ಭೂಷಣಂ

ನಮ್ಮಿಂದ ಮತ್ತೇನು ಕೊಡಲಾಗದಿದ್ದರೂ ಬೇರೆಯವರಿಗೆ ಉಪದೇಶ ಪೊಂದನ್ನು ಧಾರಾಳವಾಗಿ ನೀಡಬಹುದು. ಆದುದರಿಂದಲೇ 'ಭಾಷಣಂ ಜಿಹ್ವಾಭೂಷಣಂ' ಎಂಬ ಆಮರೋಕ್ತಿಯನ್ನು ಈಗ ಹೆಚ್ಚಿನವರು ಆಚರಣೆಗೆ ತಂದಿದ್ದಾರೆ.

ಶ್ರೀ ಕುಂಟಳಾಪ್ಯರು

"ಭಾಷಣವನ್ನು ಮಾಡಿ ಪುಣ್ಯವಂತರಾಗಿರಿ." ಎಂಬ ಉದ್ಗಾರ ಇಂದು ನನ್ನ ಬಾಯಿಯಿಂದ ತನ್ನಿಂದ ತಾನೆ ಹೊರ ಹೊಮ್ಮಿತು. ಕಾರಣವೇನೆಂದು ನೀವು ಬಲ್ಲಿರಾ? ಇಲ್ಲವೆಂದು ಹೇಳುತ್ತಿದೆ. ಏನಗೊಟ್ಟು ಆಲಿಸಿರಿ. ಕುಂಟಳಾಪ್ಯರು ಕರೆಗೆ ಓಗೊಟ್ಟು ನೀವು ಮಾಡುವ ಭಾಷಣಕಾರರಾಗಿರಿ. ಅಂದೇ ನಿಮಗೆ ಜೀವನ್ಮುಕ್ತಿ ಲಭಿಸುವುದು. ಅಂದೇ ನಿಮ್ಮ ಗುಟ್ಟುಗಳೆಲ್ಲಾ ಬಯಲಾಗುವುವು. ಅಂದೆ ನಿಮ್ಮ ವ್ಯಕ್ತಿತ್ವದ ಗುಣಾವಗುಣಗಳು ಬಿಚ್ಚಿಟ್ಟು ನಡೆಯುವುವು. ತುಂಬಿದ ಸಭೆಯಲ್ಲಿ ನೂತ್ರ ಭಾಷಣವನ್ನು ಕೊಡಿರಿ. ಜನರಲ್ಲಿ ಲೆಕ್ಕವಾಡಲು ನಿಮ್ಮವಾಗುವ ಸಭೆಗಳಲ್ಲಿ ಎಂದೂ ಭಾಷಣ ಮಾಡಬೇಡಿ. ಏಕೆಂದರೆ ನಿಮ್ಮ ವ್ಯಕ್ತಿತ್ವ ಇವರಿಂದ ಕುಗ್ಗಿ ಕಿರ್ಮುವುದು. ಭಾಷಣವನ್ನು ಮಾಡುವುದಕ್ಕೆಂತಲೂ ಅಧ್ಯಕ್ಷ ಪೀಠ ಅಲಂಕರಿಸುವ ಸಾಧಘ ಒದಗಲಿ ಎಂದೂ ಇವನ್ನು ಒಪ್ಪಿಕೊಳ್ಳಬೇಡಿರಿ. ಎಷ್ಟೊಜನರು ಹಣಕೊಟ್ಟು ಅಧ್ಯಕ್ಷಪದ ಪಡೆಯುತ್ತಿರುವಾಗ ಧರ್ಮಾರ್ಥವಾಗಿ ನಿಮ್ಮಿವ ಈ ಪದವಿಯನ್ನು ಕಳೆದುಕೊಳ್ಳಬೇಡಿ.

೦೦ ೦೦

ಮೊನ್ನೆ ನನ್ನೊಬ್ಬ ಮಿತ್ರರು ಭಾಷಣ ಮಾಡುತ್ತಿದ್ದ ಈ ರೀತಿಯಾಗಿ ಅಬ್ಬಣಿಕೊಡಿಸಿದರು—"ನನ್ನ ಮಿತ್ರರೊಬ್ಬರು ತನ್ನ ಬಗ್ಗೆ ಉಬ್ಬಿಕೊಂಡು ತನ್ನಲ್ಲಿರುವ ಗುಣವನ್ನು ತಾವೆ ಹೇಳಿಕೊಂಡರು. ಇದು ಬಹು ಆಸ್ಯಾಸ್ಪದ ಸಂಗತಿಯಾಗಿದೆ. ನಮ್ಮನ್ನು ನಾವು ಹೊಗಳಿಕೊಂಡರೆ ಆದರಲ್ಲೇನು ಸಂಸ್ಕೃತಿ ಬೆಳೆಯಿತು? ನಮ್ಮನ್ನು ಇನ್ನೊಬ್ಬರು ಹೊಗಳಬೇಕು." ಎಂದರು. ಹಿಂಬದಿಯಿಂದ ಒಬ್ಬರು ಮಹಾನುಭಾವರು ಅವಕ್ಕೆ ಈ ರೀತಿಯಾಗಿ ವ್ಯಾಖ್ಯಾನವನ್ನು ಸಜೆಸಿದರು—"ತನ್ನ ಸಂಗತಿಯನ್ನು ತಿಳಿದುಕೊಳ್ಳುವ ಕಣ್ಣನ್ನು ದೇವನು ಇನ್ನೊಬ್ಬನಿಗೆ ದಯಪಾಲಿಸಿದೆ ಹೋದರೆ ಆತನೆ ತನ್ನ ವಿಚಾರಗಳನ್ನು ಹೇಳುತ್ತಾ ಬರುವುದರಲ್ಲಿ ಆಶ್ಚರ್ಯವೇನಿದೆ?"

ನನ್ನ ಮಿತ್ರರ ಭಾಷಣದಲ್ಲಿ ನೇಲಿ ನೊಂದು ವಾಕ್ಯವನ್ನು ಮಾತ್ರ ಅವರು ಬೇರೆಯವರ ಬಗ್ಗೆ ಹೇಳಿದ್ದರು. ಪ್ರತ್ತೆ ಅರ್ಧಗಂಟೆಯ ಭಾಷಣದಲ್ಲಿ ಅವರು ತನ್ನ ಬಗ್ಗೆಯೆ ಹೆಚ್ಚಾಗಿ ಆಡಿಕೊಂಡಿದ್ದರು. ಅವರು ಅವರ ಬಗ್ಗೆ ಹೆಚ್ಚಾಗಿ ಆಡಿಕೊಂಡ ಮಾತುಗಳಿಗೆ ಮರುಳಾಗಿ ಅವರ ನಾಮಕಾರರು ಅವರಿಗೆ ಕೆಲಸಕೊಟ್ಟು ಈಗ ಪೇಚಾಟದಲ್ಲಿ ಸಿಕ್ಕಿದ್ದಾರು. ತನ್ನ ಬಗ್ಗೆ ತಾನು ಆಡಿಕೊಳ್ಳಬಹುದು. ನಿಮ್ಮ ಬಗ್ಗೆ ನೂತ್ರ ನೀವು ಆಡಿಕೊಳ್ಳಬೇಡಿ.' ಎಂಬುದೇ ಅವರ ಭಾಷಣದ ಸೂತ್ರವಾಗಿತ್ತು. ಪರೋಪದೇಶವನ್ನು ಕೊಡುವಲ್ಲಿ ಅವರು ಎತ್ತಿದ ಕೈಯಾಗಿದ್ದರು. ನೀವು ಭಾಷಣ ಮಂತರಂಗಬೇಕು. ಈಗ ಏಕೆಂದು ತಿಳಿಯಿತಷ್ಟೆ! ಇನ್ನೊಬ್ಬರಿಗೆ ಉಪದೇಶಕೊಡಲು ಉಪದೇಶವನ್ನೆಂದೂ ನೀವು ಇಟ್ಟುಕೊಳ್ಳುವುದನುಚಿತ. ಹಾಗಿಟ್ಟುಕೊಂಡಲ್ಲಿ ನೀವು ಮಾಮಾನ್ ಭಾಷಣಕಾರರಾಗಲಾರಿರಿ ಎಂದು ನಾನು ಸ್ಪಷ್ಟವಾಗಿಯೆ ಹೇಳುತ್ತೇನೆ. ಆಡಿದ್ದನ್ನೆಲ್ಲಾ ಕೇಳುವವರು ಇರುವಲ್ಲಿಗೆ ನೀವು ಭಾಷಣಕ್ಕಾಗಿ ಹೋಗಿರಿ. ಇಲ್ಲವಾದರೆ ಕೇಳುವವರ ಮನಸ್ಸಿಗೆ ಒಗ್ಗುವ ವಿಚಾರಗಳನ್ನು ಸಭೆಯಮುಂದೆ ಹೊರಗೆಡಹಿರಿ. ಇವೆರಡೂ ಸೂತ್ರಗಳನ್ನು ಮೀರುವವರೆಲ್ಲ ನನ್ನ ಮಿತ್ರ ಮಹಾನ್ ಭಾಷಣಕಾರರು. ಆದ್ದರಿಂದ ಭಾಷಣಕಾರರಾಗುವ ನೀವು ನನ್ನ ಮಿತ್ರರ ಅನುಸರಣೆ ಮಾಡುವುದದವಶ್ಯ. ವಿಷಯವಿಲ್ಲದೆ ಭಾಷಣ ಮಾಡಿ ನನ್ನ ಭಾಷಣದಲ್ಲಿ ವಿಷಯವೇ ಇಲ್ಲವೆಂದು ಜಂಭಕೊಚ್ಚುವ ನನ್ನ ಮಿತ್ರರಂತೆ ನೀವು ಕೂಡಾ ಆಗಬೇಕೆಂದು ಹಾರೈಸುತ್ತೇನೆ.

೦೦ ೦೦

ನನ್ನ ಇನ್ನೊಬ್ಬ ಮಿತ್ರರು ಅಧ್ಯಕ್ಷ ಪೀಠವನ್ನಲಂಕರಿಸಿದ ಉದಾಹರಣೆಯನ್ನು ತಮ್ಮ ಮುಂದಿಟ್ಟರೆ ತಮಗೆಲ್ಲ ಬಹು ಉಪಯೋಗವಾದೀತೆಂದೆಣಿಕೆ.

ನಾಡಹಬ್ಬದ ಆಚರಣೆಗಾಗಿ ಅವರು ಆ ದೂರದ ಊರಿಗೆ ಹೋಗಿದ್ದರು. ಮಧ್ಯಾಹ್ನವೆ ಊಟ ಮುಗಿಸಿಕೊಂಡ ಅವರು ಬಸ್ಸಿನಲ್ಲಿ ಪ್ರಯಾಣಿಸಿ ನಾಲ್ಕು ಗಂಟೆಗೆ ಸರಿಯಾಗಿ ಆ ಸ್ಥಳ ಸೇರಿದ್ದರು. ನಾಡ ಹಬ್ಬದ ಕಾರ್ಯಕರ್ತರು ಅವರನ್ನು 'ನಾಡದ ಪೂರ್ಣ ಕುಂಭ'ವಾಗಿ 'ಸುಸ್ವಾಗತಿಸಿ'ದರು. ಊಟವನ್ನು ಹೆತ್ತಿರದ ಹೋಟೆಲಿಂದ ತರಿಸುವ ಏರ್ಪಾಡನ್ನು ಮಾಡಿರುವೆವೆಂದೂ ಸರಕಾರಿಬಂಗ್ಲೆ ತಮಗಾಗಿ ರಿಜರ್ವ್ ಮಾಡಿರುವೆವೆಂದೂ ಆ ಕಾರ್ಯಕರ್ತರು ತಿಳಿಸಿದರು..

ಭಾಷಣವಾರಂಭವಾಯಿತು. ಮಳೆಯೂ ಆರಂಭವಾಯಿತು. ಅಧ್ಯಕ್ಷರಾದ ಅವರು ಕಚ್ಚೆ ಬಿಚ್ಚಿಸಿಕೊಂಡು ಎಲ್ಲಾ ಜನರೊಂದಿಗೆ ಮೂಡಿನೆಡಕೆಗೆ ಓಡಿದರು. ಸಭೆಯಂತೂ ಅಲ್ಲಿಗೆ ಮುಕ್ತಾಯಗೊಂಡಿತು. ಜನರು ಅಧ್ಯಕ್ಷರ ಪರಿಚಯವನ್ನು ಸವಾಪದಲ್ಲೆ ಮಾಡಿಕೊಂಡರು. "ಓಹ್! ಇವನೆಯೆ ಅಧ್ಯಕ್ಷ. ಕಲಿಮುಖದವನವನು." ಎಂದು ಅನೇಕರು ಹೇಳುವುದನ್ನು ಆವರು ಕೇಳಿ ಸುಮ್ಮನಿದ್ದರು. ರಾತ್ರಿ ಊಟ (ಸ್ಪೆಷಲ್—ಯಾರಿಂದಲೂ ಊಟಮಾಡಲಸಾಧ್ಯವಾದ್ದು) ವಾಯಿತು. ಆವರು ಬಂಗ್ಲೆಗೆ ತೆರಳಿದರು. ಬಂಗ್ಲೆ ನಾಯಿ ಇವರನ್ನು ಗದರಿಸಿತು. ಚಿಕ್ಕ ಒಬ್ಬ ಕಾರ್ಯಕರ್ತರು ಒಳಗೆ ನಡೆದರು. ನಾಯಿಯು ಗಲಾಟೆಗೆ ಬಂಗ್ಲೆ ವಾಚಮೇನ್ ಎದ್ದನು. 'ರೂಂಗೆ ಇಲ್ಲಿ ಯೂರು ಹೇಳಿಲ್ಲ'ವೆಂದನು. ಅಧ್ಯಕ್ಷ ಮಹಾಶಯರು ತಲೆಗೆ ಕೈಯಿಟ್ಟುಕೊಂಡು ಹೊರಟರು. ಸಣ್ಣ ಕಾರ್ಯಕರ್ತರು ಹೋಟೆಲೊಂದಕ್ಕೆ ನಡೆದು "ರೂಂ ಉಂಟೆ?" ಎಂದು ಕೇಳಿದರು. "ರೂಂ ಇಲ್ಲ. ಆದರೂ ಮಲಗಲು ಕಾಸಿಗೆ ಮತ್ತು ಜಾಗು ಕೊಡಬಹುದೆಂ"ದು ಸಾಹುಕಾರನು ಹೇಳಿದನು. ಆವನೆ ಮತಿಗೆಪ್ಪಿ ಕಾರ್ಯಕರ್ತರು ಅಧ್ಯಕ್ಷರನ್ನು ಅಲ್ಲೆ ಬಿಟ್ಟು ಹೊರಟರು.

ಅಧ್ಯಕ್ಷರು ಹೋಟೆಲು ಕೋಣೆಯ ಹೊರಜಗುಲಿಯಲ್ಲಿ ಕೆಲಸಗಾರರ ತಗಡಿನ ಹಾಸಿಗೆಯಲ್ಲಿ ಶಯನಿಸಿದರು. ನಿದ್ದೆಬರಲಿಲ್ಲ. ಒಂದೆಡೆ ಸುವಾಸನೆ. ಇನ್ನೊಂದೆಡೆ ರಕ್ತ ಶೋಷಣೆ. ಅಂತೂ ಬೆಳಗಾದೊಡನೆ ಅಧ್ಯಕ್ಷರು ಮನೆಗೆ ಹೊರಟುನಿಂತಾಗ ಊರಜನರೆಲ್ಲಾ ಬಂದು ಅವರ ಕೈ ಕುಲುಕಿದರು. ಮುಖ್ಯ ಕಾರ್ಯಕರ್ತರು ಬಸ್ ನಿಲ್ದಾಣದಲ್ಲೆ ಧನ್ಯವಾದವನ್ನರ್ಪಿಸಿ ಹತ್ತೈವತ್ತು ನಮಸ್ಕಾರಗಳನ್ನು ಕ್ರೋಢೀಕರಿಸಿ ಕೊಟ್ಟರು. ಅಧ್ಯಕ್ಷರು ಬಹು ಜನರಿಂದ ಸನ್ಮಾನಿತರಾದರು. ಅದಕ್ಕೆ ನಿಮ್ಮನ್ನು ಆಧ್ಯಕ್ಷರಾಗ ಬೇಕೆನ್ನುವುದು. ತಿಳಿಯಿತೆ? (ನಮ್ಮ ಅಧ್ಯಕ್ಷರಿಗೆ ಟಿ. ಎ. ಡಿ. ಎ. ಸಿಗಲೇಯಿಲ್ಲ. ನೆನಪಿರಲಿ.)

ಆದ್ದರಿಂದಲೆ ನಾನು ಭಾಷಣವನ್ನು ಮಾಡಿ ಪುಣ್ಯವಂತರಾಗಿರಿ ಎನ್ನುವುದು. ಮದುವೆಯಾಗದವರು ಹೆಣ್ಣನ್ನೊಲಿಸುವುದಕ್ಕಾಗಿಯಾದರೂ ಭಾಷಣಮಾಡಬೇಕು. ಮದುವೆಯಾದವರು ಊರವರನ್ನು ಒಲಿಸುವುದಕ್ಕಾಗಿ ಭಾಷಣ ಬಿಗಿಯಬೇಕು ಎಲ್ಲರನ್ನು ವೋಟುಪಡಿಸಬಲ್ಲ ಸುಲಭ ಸಾಧನವೆಂದರೆ ಭಾಷಣವಾಗಿದೆ.

೦೦ ೦೦

ಮಿತಿಮೀರಿ ದೀಪಾವಳಿಯನ್ನಾಚರಿಸಿದವರನ್ನು ಬಂಧಿಸಲಾಗಿದೆ ಕಲ್ಕತ್ತಾದಿಂದ ಬಂದ ವರದಿಗಳು ತಿಳಿಸಿವೆಯೆಂದು ಸುದ್ದಿ.

—ಮಿತಿಮೀರಿ ಮಾತಾಡುವವರನ್ನು ಮಿತಿಮೀರಿ ಕುಡಿಯುವವರನ್ನು (?) ಮಿತಿಮೀರಿ ಬರೆಯುವವರನ್ನು, ಮಿತಿಮೀರಿದು ಶ್ಚಕ್ತಿಯನ್ನು ಮಾಡುವವರನ್ನು ಏಕೆ ಬಂಧಿಸಬಾರದೆಂದು ಕುಂಟಳಾಪ್ಯರು ಕೇಳುವ ಪ್ರಶ್ನೆಯೂರ್ಜಿತ?

ನಿಮ್ಮ ಹಣಕ್ಕೆ ಹೆಚ್ಚಿನ ಬಡ್ಡಿಯನ್ನು ಪಡೆಯಲು

ಸಿಂಡಿಕೇಟ್ ಬೇಂಕ್

ಕೇಶ್ ಸರ್ಟಿಫಿಕೇಟುಗಳನ್ನು

ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ಏರಿನ ಅಳಾವವಿರುವ ರಾಜಸ್ತಾನದಲ್ಲಿ ಮಳೆ ನೀರನ್ನು ಮುಚ್ಚಿದ ಬೀಗ ಮುದ್ರೆಯ ಬಾವಿಗಳಲ್ಲಿ ಶೇಖರಿಸಲಾಗುವುದು. ಈ ನೀರನ್ನು ಅನಶ್ಯಕತೆ ಬಿದ್ದಾಗ, ಊರಿನ ಜನರು ಕೊಂಡೊಯ್ಯುವರು.

Edited, Printed & Published by K. H. Shetty, at the Navayuga Press, Udipi, S. India.

40th year of publication. 10-11-1960 ೪೦ನೇ ವರ್ಷ

ಸಂಪುಟ ೪೦ Vol. 40

ಸಂಚಿಕೆ ೧೧ No. 11

ಬೆಲೆ 0-13

ನವಯುಗ

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ರಾಜ್ಯದಲ್ಲಿ ಡಾಕ್ಟರರ ಅಭಾವ

ಮೈಸೂರು ಸರಕಾರವು ರಾಜ್ಯದಲ್ಲಿನ ಡಾಕ್ಟರರ ಅಭಾವವನ್ನು ನೀಗಿಸಲು ಸಂಕ್ಷಿಪ್ತ ವೈದ್ಯಕೀಯ ಶಿಕ್ಷಣ ಕ್ರಮವನ್ನು ವ್ಯವಹೃತಗೊಳಿಸಲು ನಿರ್ಧರಿಸುತ್ತಿದೆಯಂತೆ; ಹೀಗೆ ನೂಡುವುದಕ್ಕೆ ಮೊದಲು ಇದ್ದಿದ್ದ ಈ ಪದ್ಧತಿಯನ್ನು ಕೂನೆ ಗಾಣಿಸಿದುದೇಕೆಂದದು ಸಾಕಷ್ಟು ಪರ್ಯಾಲೋಚಿಸಬೇಕು.

ಶ್ರೀ ಗೋರಾ.

ಸುದೃಢ ಜನಾಂಗ ನಿರ್ಮಾಣದಲ್ಲಿ ಜನತೆಯ ಆರೋಗ್ಯ ರಕ್ಷಣೆಯು ಅಗ್ರಗಣ್ಯ ಪಾತ್ರ ವಹಿಸುತ್ತದೆ. ಆರೋಗ್ಯದ ಸೂತ್ರಗಳನ್ನು ಅನುಸರಿಸಿ, ನೀರೋಗಿಯಂತೆ ಬಾಳುವಂತೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು ಅವಶ್ಯವಾದರೆ, ಅಂತೆಯೇ ಕಾಣಿಸಿಕೊಳ್ಳುವ ರೋಗಗಳನ್ನು ದೂರೀಕರಿಸುವುದೂ ಅಷ್ಟೇ ಮುಖ್ಯವಾಗಿದೆ. ಆ ಜ್ಞಾ ಭಾರತೀಯರಲ್ಲಿ ಸಾಕ್ಷರತೆಯ ಪ್ರಸಾರವಾಗುತ್ತ ಬಂದಂತೆ ಈ ದಿಸೆಯಲ್ಲಿ ಕುಸು ಪ್ರಗತಿಯು ಕಾಣಿಸಿಕೊಂಡಿರಬಹುದಾದರೂ ರೋಗಿಗಳಿಗೇನೂ ಆಭಾವವೆಂಬುದು ತಲೆದೋರಲಾರದು. ದಿನದಿಂದ ದಿನಕ್ಕೆ ರೋಗಗ್ರಸ್ತರ ಸಂಖ್ಯೆಯು ಬೆಳೆಯುತ್ತ ಬರುತ್ತಿದೆ. ಇದಕ್ಕೆ ಜನತೆಯು ಆಹಾರ—ಅಭ್ಯಾಸಗಳು ಮೂಲ ಕಾರಣವಾದರೆ, ಆರೋಗ್ಯದ ಬಗ್ಗೆ ಹರಿಸಬೇಕಾದಷ್ಟು ಗಮನಹರಿಯುವ ಆಸಕ್ತಿ ನಮ್ಮಲ್ಲಿಲ್ಲದಿರುವುದೂ ಇನ್ನೊಂದು ಕಾರಣವಾಗಿದೆ.

ರೋಗಗಳು ಬಂದನಂತರ ಅವನ್ನು ಹಡೆಗಟ್ಟಲು ಹೆಣಗುವುದಕ್ಕಿಂತ ಅವು ಬಾರದಂತೆ ತಡೆಯುವುದು ಒಳ್ಳೆಯದೆಂದು ಎಲ್ಲರೂ ಒಪ್ಪುತ್ತಾರೆ. ಯಾವನೇ ಆದರೂ ತಾನು ರೋಗಿಯಾಗಿ ಹಾಸುಗೆ ಹಿಡಿಯಬೇಕೆಂದು ಬಯಸುವುದಿಲ್ಲ. ಆದರೂ ಜನರನ್ನು ಒಂದಲ್ಲ ಕಲವು ಬಗೆಯ ರೋಗಗಳು ಕಾಡುತ್ತ ಪೀಡಿಸುತ್ತಿರುವುದನ್ನು ಕಾಣುತ್ತೇವೆ. ಜನತೆಯು ರಕ್ಷಣೆಯ ಭಾರವನ್ನು ಹೊತ್ತ ಸರಕಾರ ಆದರ ಆರೋಗ್ಯ ರಕ್ಷಣೆಯತ್ತ ಗಮನ ಹರಿಸುವುದೂ ಅತ್ಯವಶ್ಯ ಎಂತಲೇ ನಮ್ಮ ರಾಜ್ಯ ಸರಕಾರಗಳು ಆರೋಗ್ಯ ರಕ್ಷಣೆಯತ್ತ ಧ್ಯಾನವೀಯುತ್ತಿವೆ.

ಸಾಮಾನ್ಯವಾಗಿ ಅನುಭವೈದ್ಧ ಹಾಗೂ ಇತ್ತೀಚೆಗೆ ಸ್ವತಂತ್ರವಾದ ರಾಷ್ಟ್ರಗಳಲ್ಲಿ ತೋರಿಬರುತ್ತಿರುವ ವೈದ್ಯರ ಅಭಾವ ನಮ್ಮ ದೇಶದಲ್ಲೂ ಕಂಡುಬರುತ್ತಿದೆ. ನಮ್ಮ ರಾಜ್ಯದಲ್ಲಿ ಈಗ ಇರುವ ಆಸ್ಪತ್ರೆಗಳಲ್ಲಿ ಪ್ರತಿಯೊಂದಕ್ಕೆ ಒಬ್ಬೊಬ್ಬ ಡಾಕ್ಟರರನ್ನು ನೇಮಿಸಬೇಕಾದರೆ, ೩೫೦ ಡಾಕ್ಟರರ ಅಭಾವವಿದೆ ಎಂದು ಮೈಸೂರು ಸರಕಾರದ ವಕ್ತಾರರೊಬ್ಬರು ತಿಳಿಸಿದರೆಂದು ವರದಿ ಬಂದಿದೆ. ಅಂದರೆ, ಸದ್ಯ ಕಡಿಮೆ ಪಕ್ಷಕ್ಕೆ ೩೫೦ ಆಸ್ಪತ್ರೆಗಳಾದರೂ ವೈದ್ಯರಿಲ್ಲದೆ ಇವೆ ಎಂದು ಈ ನೂತಿನಿಂದ ಅರ್ಥ ಮಾಡಿಕೊಳ್ಳಬಹುದು. ಹಾಗೆಯೇ ಮುಂದಿನ ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಾರಂಭಿಸಲಾಗುವ ಇನ್ನೂ ಹೆಚ್ಚಿನ ಆಸ್ಪತ್ರೆಗಳಲ್ಲಿ ದುಡಿಯಲು ಮತ್ತು ೧೫೧೦೦ ಡಾಕ್ಟರರು ಬೇಕೆಂದೂ ತಿಳಿದು ಬಂದಿದೆ. ಈ ಅಭಾವವು ಯಾವ ರೀತಿ ನೀಗಬಹುದು ಎಂಬುದಕ್ಕೆ ಶಕ್ಯ ಉತ್ತರ ಸದ್ಯ ಮುಂದಿಲ್ಲದಿರುವುದು ಶೋಚನೀಯ.

ಆದೇ ರೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವೈದ್ಯರುಗಳು ಹೋಗಿ ನಲೆನಿಲ್ಲಲು ಇಷ್ಟಪಡುವುದಿಲ್ಲ. ಎಲ್ಲರೂ ನಗರವಾಸವನ್ನೇ ಬಯಸುವವರು. ಇದರಿಂದಾಗಿ ನಗರವಾಸಿಗಳಿಗೆ ಪರ್ಯಾಪ್ತ ಪ್ರಮಾಣದಲ್ಲಿ ವೈದ್ಯಕೀಯ ಸೇವೆ ದೊರೆಯುವಂತಾದೆಯೆನ್ನ ಬಹುದಾದರೂ ಅಧಿಕ ಸಂಖ್ಯಾಕ ಗ್ರಾಮೀಣ ಜನತೆಯ ಬಾಳು ತೀರ ನಿಸ್ಸತ್ವಾವಸ್ಥೆಯಲ್ಲಿದೆ ಎಂಬುದು ಸರ್ವವಿದಿತ ಪ್ರತಿವರ್ಷ ರಾಜ್ಯದ ಮೆಡಿಕಲ್ ಹಾಗೂ ಆಯುರ್ವೇದ ಕಾಲೇಜುಗಳಿಂದ ಹೊರಬರುವ ಹೊಸ ಹೊಸ ವೈದ್ಯರಾದರೂ ನಗರವಾಸಿಗಳಾಗಲಿಚ್ಛಿಸುವರಲ್ಲದೆ ಹಳ್ಳಿಗಳತ್ತ ಕಣ್ಣೆತ್ತಿ ನೋಡಲು ಅಂಜುವರು. ಇದಕ್ಕೆ ಹಲವಾರು ಕಾರಣಗಳಿವೆ. ಅವನ್ನು ವಿಮರ್ಶಿಸುವುದು ಅನಗತ್ಯ. ಆದರೆ, ಸರಕಾರವು ತನ್ನ ರಾಜ್ಯದ ಗ್ರಾಮೀಣ ಜನತೆಯ ಆರೋಗ್ಯವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಇದಕ್ಕಾಗಿ ಅದು ಶತಪ್ರಯತ್ನ ಮಾಡಲೇಬೇಕಾಗಿದೆ.

ಇಂದು ಡಾಕ್ಟರರುಗಳು ಸರಕಾರಿ ನೌಕರಿಯನ್ನು ಅಪೇಕ್ಷಿಸುವುದು ಬಹಳ ಕಡಿಮೆ. ಖಾಸಗಿಯಾಗಿ ಚಿಕಿತ್ಸಾ ನುಂದಿರಗಳನ್ನು ತೆರೆಯುವುದರಿಂದಲೇ ಅವರ ಆದಾಯ ಹೆಚ್ಚುತ್ತದೆ. ಏಕೆಂದರೆ, ಸರಕಾರಿ ವೈದ್ಯಕೀಯ ಸೇವೆಯಲ್ಲಿರುವ ವೈದ್ಯರ ವೇತನ ಮಟ್ಟವು ಏನೇನೂ ಆಕರ್ಷಕವಿರುವುದಿಲ್ಲ. ವೈದ್ಯರಾದನರು ತಾವು ಅಭ್ಯಾಸ ಮಾಡಲು ವ್ಯಯಿಸಿದ ಕಾಲಮಾನ ಮತ್ತು ನ್ಯಾಯವಾದ ಆರ್ಥಿಕ ವ್ಯಯಗಳ ದಾವಾಶಯದಲ್ಲಿ ಈ ವೇತನ ಮಟ್ಟವಿಲ್ಲದಿರುವುದು ಮೊದಲನೆಯ ಕೊರತೆ. ಇದರಿಂದಾಗಿ ಸರಕಾರಿ ಚಿಕಿತ್ಸಾ ಮಂದಿರಗಳು ಡಾಕ್ಟರರುಗಳಿಲ್ಲದೆಯೇ ನಡೆದುಕೊಂಡು ಬರಬೇಕಾದ ದುರ್ದೈವ ಬಂದೊದಗಿದೆ. ಅದುದರಿಂದ ಸರಕಾರವು ಈಗಾಗಲೇ ವೈದ್ಯರ ವೇತನವನ್ನು ಹೆಚ್ಚಿಸಿದರೂ ಅದನ್ನು ಇನ್ನೂ ಆಕರ್ಷಕಗೊಳಿಸುವ ಆವಶ್ಯಕತೆಯಿದೆ.

ಹೀಗೆ ಸರಕಾರಿ ನೌಕರಿಯಲ್ಲಿ ಹೆಚ್ಚಿನ ವೈದ್ಯರು ಸೇರಿಕೊಂಡ ಮೂತ್ರ ಕ್ಕೆ ವೈದ್ಯರ ಅಭಾವ ನೀಗಿದಂತಾಗಲಿಲ್ಲ. ಈ ಕೊರತೆ ದೂರವಾಗಬೇಕಾದರೆ, ವೈದ್ಯಕೀಯ ಪದವೀಧರರ ಸಂಖ್ಯೆ ಹೆಚ್ಚಾಗಬೇಕು. ನಮ್ಮ ರಾಜ್ಯದಲ್ಲಿ ಈಗ ಮೂರು ಸರಕಾರಿ ಹಾಗೂ ಒಂದು ಖಾಸಗಿ ಮೆಡಿಕಲ್ ಕಾಲೇಜುಗಳಿವೆ, ಅಲ್ಲದೆ ನಾಲ್ಕಾರು ಆಯುರ್ವೇದ ಕಾಲೇಜುಗಳೂ ಇವೆ. ಇವುಗಳಿಂದ ಪ್ರತಿ ವರ್ಷ ಹಲವಾರು ಪದವೀಧರರು ಹೊರಬರುತ್ತಾರೆ, ಬರುತ್ತಿದ್ದಾರೆ. ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಎರಡು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ವಿಚಾರ ರಾಜ್ಯ ಸರಕಾರಕ್ಕಿದೆ. ಆದರೆ, ಅವುಗಳಿಂದ ನಾಲ್ಕನೆಯ ಯೋಜನೆಯ ಸುಮಾರಿಗೆ ವೈದ್ಯರು ದೊರೆಯಬಲ್ಲರೇ ಹೊರತು ತೃತೀಯ ಯೋಜನಾವಧಿಯಲ್ಲಲ್ಲ. ಆದುದರಿಂದ ರಾಜ್ಯ ಸರ

(೧೨ನೆಯ ಪುಟ ನೋಡಿರಿ)



ಒಕ್ಕಲುತನದಲ್ಲಿ ಅಭಿವೃದ್ಧಿ

೧. ಅಮೆರಿಕೆಯಲ್ಲಿ ರೈತ ಜನರಿಗೆ ಉಚಿತ ಶಿಕ್ಷಣದ ಸೌಲಭ್ಯವಿದೆ. ಪ್ರತಿ ರಾಜ್ಯದಲ್ಲೂ ಒಂದೊಂದು ಒಕ್ಕಲುತನ ಕಾಲೇಜು, ಇತರ ಕಾಲೇಜು ಹಾಗೂ ಪ್ರೌಢ ಶಾಲೆಗಳಿವೆ. ಸಂಘಕ್ಕೆ ವರ್ಗಗಳ ವ್ಯವಸ್ಥೆಯೂ ಇಲ್ಲಿರುವುದು. ೨. ಪ್ರತಿ ರಾಜ್ಯದಲ್ಲಿರುವ ಕೃಷಿ ಸಂಶೋಧನಾಲಯಗಳಲ್ಲಿ ಆಧುನಿಕ ಕೃಷಿ ಸಂಶೋಧನೆಗಳ ಲಾಭವು ಒಕ್ಕಲುಗಳಿಗೆ ದೊರೆಯುತ್ತಿದೆ. ೩. ಶಿಕ್ಷಣ ಮತ್ತು ವೈಜ್ಞಾನಿಕ ಕೃಷಿ ಪದ್ಧತಿಗಳಿಂದಾಗಿ ಅಮೆರಿಕೆಯು ಆಹಾರೋತ್ಪಾದನೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಅದು ವಿದೇಶಗಳಿಗೆ ಆಹಾರ ಧಾನ್ಯ ನಿರ್ಯಾತ ಮಾಡುತ್ತಿದೆ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ವಾರ್ಷಿಕ ಚಂದಾ ರೂ.

ಸಂಪಾದಕರು:
ಎಸ್. ಗೋಪೀಚಂದ ರಾವ್, ಎಂ.ಎ.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ವ್ಯವಸ್ಥಾಪಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಜಾಹೀರಾತು ದರಗಳು:
ಸಿಮೆಂಟಿತ (ಕವರ್ ಪೇಜ್)
ಕಾಲಂ ಇಂಚಿಗೆ ರೂ. 2-00
ಆನಿಮೆಟಿತ (ಕೆಜಿಎಲ್)
ಕಾಲಂ ಇಂಚಿಗೆ ರೂ. 3-00
ಕೆಲ್ಸಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆಪೆಜ್ಜು ಸೇರಿ) ರೂ. 6-25
ಪ್ರತಿ ರೂ. 0-13

ಚಂದಾಪಡಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಹಿಂದಿ ಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ವಿಚಾರ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಬಾಬ,.....ಏಕ್ ಪೈಸಾ ದೊ!

ಭಾರತದ ಹಿರಿಯ ಸಮಸ್ಯೆಗಳಲ್ಲಿಂದಾದ ಭಿಕ್ಷಾಟನೆಯನ್ನು ತಡೆಗಟ್ಟುವ ಪ್ರಯತ್ನವೇನೋ ನಡೆಯುತ್ತಿದೆ. ಆದರೆ ಬುಡಕ್ಕೇ ಕೊಡಲಿಯಿಡುವ ಕಾಲವಿನ್ನೂ ನನ್ನಿಹತವಾಗಿಲ್ಲವೆ? ಭಿಕ್ಷಾವೃತ್ತಿಗೆ ಶರಣುಹೋಗಲು ಹಲವು ಕಾರಣಗಳಿರಬಹುದು— ಆವುಗಳಲ್ಲಿ ಒಂದು ಇಲ್ಲಿದೆ. ಇದಕ್ಕೆ ಯಾರು ಏನು ಉತ್ತರ ಕೊಡುತ್ತಾರೆ?

ಶ್ರೀ ಪಾದೂರು ಜನಾರ್ಧನ ಆಚಾರ್ಯ.

"ಏಕ್ ಪೈಸಾ ದೋ ಬಾಬ"

ಬೀಸುತ್ತಿದ್ದ ತಂಗಾಳಿಯಲ್ಲಿ ನಿಲಿನೆವಾಗಿತ್ತು ಆ ಧ್ವನಿ. ಆದರೆ ಯಾರ ಲಕ್ಷ್ಯವನ್ನು ಸೆಳೆಯುವಷ್ಟೂ ಅದು ಪ್ರಬಲವಾಗಿದ್ದಿಲ್ಲ.

"ಏಕ್ ಪೈಸಾ ಬಾಬ"

ಮತ್ತೆ ಅದೇ ಧ್ವನಿ.

ಕಲ್ಲು ಬೆಂಚಿನ ಮೇಲೆ ರಮೇಶ ಕಲ್ಲು ಗೊಂಬೆಯಾಗಿದ್ದೇ ಕುಳಿತಿದ್ದ. ಜೀವನದ ಅವಿಚ್ಛಿನ್ನ ಕರುಣ ಕಥೆಗಳು ಆತನ ದೃಷ್ಟಿಪಟಲದಲ್ಲಿ ಮಿಂಚಿ ಮಾಯವಾಗುತಿದ್ದುವು. ದೃಷ್ಟಿಯು ದಿಗಂತದಲ್ಲಿ ನೆಟ್ಟಿತ್ತು. ಏನಿವನ ಸಿಡಿಲೂ ಆತನ ಲಕ್ಷ್ಯವನ್ನು ಸೆಳೆಯಮಂತಿತ್ತು.

'ಏಕ್ ಪೈಸಾ...ಬಾಬ'

ಮತ್ತಷ್ಟು ಆರ್ತತೆಯಿಂದ ಹೊರಟಿತ್ತು ಆ ಧ್ವನಿ. ರಮೇಶ ಒಮ್ಮೆಲೆ ಭಾವ ಸಮಾಧಿಯಿಂದ ಎಚ್ಚೆತ್ತ. ತಾನು ಕೂತಿದ್ದ ಕಲ್ಲು ಬೆಂಚು ಕಲ್ಲಾಗಿಯೇ ಇತ್ತು. ನಂಜೆತ್ತಲು ನಮಿಸಿಕುತಿದ್ದುದರಿಂದ ಗಾಳಿ ವಿಹಾರಕ್ಕೆ ಬಂದಿದ್ದ ಜನರೆಲ್ಲರೂ ಕೊರಟು ಹೋಗುತಿದ್ದರು. ಆ ವಿಶ್ವೋದಯ ತೋಟದಲ್ಲಿ ತಾನೊಬ್ಬನೇ ಕುಳಿತಿದ್ದಂತೆ ಭಾಸವಾಯಿತು ರಮೇಶನಿಗೆ ಆ ವೇಳೆ ಹೊದಿರುವಾಗ ನೋಡುತ್ತಲೆ ಕೊಳಕು ಬಟ್ಟೆಯುಟ್ಟ ವ್ಯಕ್ತಿಯೊಂದು ತನ್ನೆಡೆಗೆ ಕೈಚಾಚಿ ಏನೋ ಕೇಳುವಂತೆ ಹೋರಿ ಬಂದಿತು. ತಪ್ಪಗಾಗಿಯೇ ಆ ವ್ಯಕ್ತಿ ಅಂಗಲಾಚುತ್ತಿದ್ದಾನೆಂದು ತಿಳಿಯಲು ರಮೇಶನಿಗೆ ಕಷ್ಟವಾಗಲಿಲ್ಲ. ವ್ಯಕ್ತಿಯ ಅಂಗಾಂಗಗಳನ್ನೆಮ್ಮೆ ದಿಟ್ಟಿಸಿದ: ಆಕೆಯುಟ್ಟ ಹರಿದಳಿದ ಬಟ್ಟೆಯು ತಂಡು ಅವಳ ಅಂಗಾಂಗಗಳನ್ನು ಪೂರ್ತಿಯಾಗಿ ಮುಚ್ಚುತ್ತಿರಲಿಲ್ಲ. ಬತ್ತಿ ಬಡವಾಗಿದ್ದ ಆಕೆಯ ದೇಹದಲ್ಲಿ ಅನ್ನಸ್ಪವಾದ ಯೌವನವು ತೋರುತಿತ್ತು. ಒಂದು ಕೈಯಲ್ಲಿ ಹರಕು ಬಟ್ಟೆಯ ಗಂಟು; ಇನ್ನೊಂದರಲ್ಲಿ ಅವಳ ಸ್ವೇ ಕೃಶವಾಗಿದ್ದ ಮಗುವೊಂದು. ನಡೆದು ಹೋಗುವಷ್ಟು ತ್ರಾಣವೂ ಆಕೆಯ ಮೈಯಲ್ಲಿ ಉಳಿದಿಲ್ಲ. ಬತ್ತಿ ಗುಳಿಯೊಳಗೆ ತಾರಿದ್ದ ಕಣ್ಣುಗಳು ಆಕೆಯ ಬೆಂಡೆದೆಯ ನೋವನ್ನು ಪ್ರದರ್ಶಿಸುತಿದ್ದುವು.

ರಮೇಶ ಕಲ್ಲುಗೊಂಬೆಯಾಗಿ ನೋಡುತ್ತಲೇ ಯಿದ್ದ. ದೀರ್ಘವಾದ ನಿಟ್ಟುಸಿರೊಂದು ಅವನಿಗರಿವಿಲ್ಲದೆಹೊರಬಿದ್ದಿತು.

ರಮೇಶನ ಮನಃಪಟಲಲ್ಲಿ ಆಕೆಯೂ ಸೇರಿಹೋಗಿದ್ದಳು. ಆದರೆ ಇದಾವುದೂ ಅವಳಿಗೆ ಬೇಕಾಗಿರಲಿಲ್ಲ. ಅವಳಿಗೆ ಬೇಕಾದುದು ಒಂದು 'ಕಾಸು' ಅಷ್ಟೆ.

'ಅಮ್ಮಾ ನಿನ್ನ ಹೆಸರೇನು? ನಿನ್ನ ಊರೆಲ್ಲಿ? ಈ ಸ್ಥಿತಿಯು ನಿನಗೆ ಬಂದೊವಗಲು ಕಾರಣವೇನು?"

ಆ ಪ್ರಶ್ನೆಗಳನ್ನುತ್ತರಿಸಲು ಆಕೆ ಇಚ್ಛಿಸಲಿಲ್ಲ. ತನ್ನ ಕರುಣ ಕಥೆಯನ್ನು ಪುನಃ ನೆಲುಕು ಹಾಕಿ ನರಳಲು ಆಕೆ ಆಶಿಸಲಿಲ್ಲ ಆದರೆ ರಮೇಶನ ಮನಸ್ಸಿನಲ್ಲಾಗುತಿದ್ದ ಬಡಿದಾಟ ಆಕೆಗೂ ಅರ್ಥವಾಗದಿರಲಿಲ್ಲ.

"ನನ್ನ ಹೆಸರು ಸೀತಮ್ಮ. ನನ್ನೂರು ಮೈಸೂರು."

ಕ್ಷೀಣವಾದ ಧ್ವನಿಯು ಒತ್ತಿದ ಆಕೆಯ ಕಂಠದಿಂದ ಅಸ್ಪಷ್ಟವಾಗಿಯೇ ಹೊರ ಹೊಮ್ಮಿತ್ತು.

"ಬಾಲ್ಯದಲ್ಲೇ ತಂದೆತಾಯಿಯರನ್ನು ಕಳೆದುಕೊಂಡ ನಾನು ಜೀವನ ನಿರ್ವಹಣೆಗಾಗಿ ನನ್ನ ತಾಯಿಯು ತಮ್ಮನ ಮನೆ ಸೇರಿದೆ. ಅಳಿಯನಪದಲ್ಲಿ ಕಾಲಿರಿಸಿದ ನನಗೆ ಮದುಮೆಯನ್ನು ಮಡುವ ಯೋಚನೆಯಲ್ಲೇ ಇಲ್ಲದ ನೂವ ನನ್ನೆ ಬಾಳೆಮ್ಮು ಬೆಳಗಿಸಲಿಲ್ಲ. ಜೂಜು ಜುಗಾರಿಗೆ ಬಲಿ ಬಿದ್ದಿದ್ದ ಅವರ ಮಗ ಶಂಕರ್ ನನಗೆ ಸ್ವರ್ಗ ನುಖವನ್ನು ತೋರಿಸುವ ನೋಗಿನಿಂದ ಬೊಂಬಾಯಿಗೆ ಕರತಂದು ಅತನ ಆಶೆಗಳೆಲ್ಲ ತೃಪ್ತವಾದ ಮೇಲೆ ನನ್ನ ಕೈಬಿಟ್ಟ. ಈಗವನೆ ಪತ್ತೆಯೇ ತಿಳಿದಿಲ್ಲ. ಕಡೆಗೆ ಜೀವನಕ್ಕೆ ದಾರಿ ಕಾಣದೆ ಈ ಹೇಸಿಗೆ ವೃತ್ತಿಗೆ ಇಳಿದೆ. ಆಗಲೆ ಜನಿಸಿತು ಈ ಮಗು— ನನ್ನನ್ಯೇ ದಾರಿದ್ರ್ಯಪ್ಪಶಾಲಿ. ಈಗ ದಾರಿ ಗಾಣದೆ ಮಡಿದು ತಿನ್ನುವಷ್ಟು ಮೈಯಲ್ಲಿ ತ್ರಾಣ ವಿಲ್ಲದೆ ಈ ವೃತ್ತಿಯನ್ನು ಕೈಕೊಂಡೆ."

—ಕಣ್ಣೀರ ಹನಿಯೊಂದು ಆವಳಗರಿವಿಲ್ಲದೆ ಕೆಳಕ್ಕುರುಳಿತು.

ರಮೇಶ ಎವೆಯಿಕ್ಕದೆ ಆಕೆಯನ್ನೇ ನೋಡುತಿದ್ದ. ಇದ್ದಕ್ಕಿದ್ದಂತೆ ಅವನ ಕಂಠ ಗದ್ದದವಾಯಿತು. ಕೆನೆ ಬರಿದಾಗಿತ್ತು. ಈಕೆಯಂತೆ ತಾನೂ ಬೇರೆಯವರಿಗೆ ಕೈನೀಡುವ ಕಾಲ ಬಂದಿರುವಾಗ ದಾನ ಕೊಡುವುದಾದರೂ ಏನು.....?ಕೊಡುವುದಾನರೂ ಏನು? — ಮತ್ತೂ ಅದೇ ಪ್ರಶ್ನೆ.

ರಮೇಶನ ಈ ಅವಸ್ಥೆಯನ್ನು ಕಂಡು ಆಕೆ 'ಬರುತ್ತೇನೆ' ಎಂದು ಹೊರಟು ಹೋದಳು. ಆಕೆಯನ್ನು ಕರೆದು ಒಮ್ಮೆ ಪ್ಪವೆ. ಕೇಳಲೇ ಎನಿಸಿತು. ಆದರೆ ನಾಲಗೆ ಬರಲೊಲ್ಲದು. ಹೆಂಗಸು "ಬಾಬ.....ಬಾಬ" ಅನ್ನುತ್ತ ಮುಂದುವರಿದಳು. ರಮೇಶ ಕಣ್ಣು ಬಿಟ್ಟು ಕುಳಿತೇಯಿದ್ದ.

ಶೂಲದಿಂದ ತಿನಿದಂತೆ ಅದೇ ಕೂಗು ಅವನ ಮನಸ್ಸನ್ನು ಇರಿಯುತಿತ್ತು.

"ಬಾಬ.....ಬಾಬ."

ತನ್ನ ಸುತ್ತಲೂ ಆ ಕೂಗು ಸುಳಿದಾಡಿದಂತಾಯಿತು ರಮೇಶನಿಗೆ.

ಅಲ್ಲಲ್ಲಿ ಕುಳಿತಿದ್ದ ಒಬ್ಬಿಬ್ಬರ ಬಳಿ ಹೋಗಿ ಆಕೆ ಬೇಡುತಿದ್ದಳು. ರಮೇಶ ಕುಳಿತೇಯಿದ್ದ. ಭಾವ ಪ್ರಪಂಚದಲ್ಲಿ ನೇರ ಹೋಗುತ್ತಲೇ ಅವನ ದೃಷ್ಟಿಯು ದಿಗಂತದಲ್ಲಿ ನೆಟ್ಟಿತು. ಈಗವನಿಗೆ ತೋರುತಿದ್ದುದು ಬರೆಯೊಂದು ಶೂನ್ಯವಲ್ಲದೆ ಬೇರೇನಿಲ್ಲ. ತನ್ನ ಭಾವೀ ಜೀವನವೆಲ್ಲವೂ ಅಲ್ಲಿ ಇಡೀ ಪ್ರಪಂಚವೇ ಆ ಶೂನ್ಯದೊಳಗೆ ಒಡಕವಾಗಿತ್ತು.

"ಎಲ್ಲವೂ ಮಾಯೆ. ಜೀವನದ ಆಗು ಹೋಗುಗಳೆಲ್ಲವೂ ಈ ಶೂನ್ಯದೊಳಗೇ ಅಡಕವಾಗಿದೆ. ದಾರಿದ್ರ್ಯದ ಸುಳಿವಿಗೆ ಸಿಕ್ಕಿ ಬಾಳ ಕೋಟೆಲೆಯನ್ನಸುಭವಿಸುವವರಿಗೆ ಜೀವನದಲ್ಲಿ ತೋರುವುದು ಈ ವೊಂದು ಶೂನ್ಯವಲ್ಲದೆ ಬೇರೇನಿಲ್ಲ. ಬಾಳ ಬೇನೆಯಿಂದ ನರಳಿ ಎಷ್ಟು ಜನರು ಈ ರೀತಿ "ಬಾಬ.....ಬಾಬ" ಅನ್ನುತ್ತಿಲ್ಲ? ಆದರೆ ಪ್ರಪಂಚವು ಅವರೆಡೆಗೆ ಕಣ್ಣೆತ್ತಿ ನೋಡುವಷ್ಟು ತಾಳ್ಮೆಯನ್ನು ಪಡೆದಿಲ್ಲ. ಪಾಷಾಣ ಹೃದಯಗಳು ಕರಗಬೇಕಾದರೆ ಅವರ ಜೀವನದಲ್ಲಿಯೂ ಅಂತಹ ಸ

(ಇನ್ನೇ ಸುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ
ದಿ ಪಾಂಗಾಳ ನಾಯಕ್ ಬೇಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ರೂ. **87-00** **3** ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. **100-00** ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.
ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ
ನಮ್ಮ ತುಮಕೂರು ಶಾಖೆ
ತಾ. 14—11—1960ಕ್ಕೆ ತೆರೆಯಲ್ಪಡುವುದು.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
CANARA RUBBER STAMP CO.
BALMATTA ROAD, MANGALORE

ಪುದ್ದ ಹರಟೆ

ಸದಾ ಸುಮಂಗಲೆ ಯೂನೆ ಎಲ್ಲರ ಹೆಂಡತಿ

ಪುರುಷ ಜೀವಿ ಈ ಭೂಮಿಗೆ ಕಾಲಿಟ್ಟ ಕ್ಷಣದಲ್ಲಿಯೇ ನಿದ್ರಾದೇವಿಯ ಕೈ ಹಿಡಿಯುತ್ತಾನೆ. ಆ ನಂತರ ತನ್ನ ಈ ನಿತ್ಯ ಸಹಚರಿಯೊಡನೆ ರಮಿಸುತ್ತಾನೆ. ಆದರೆ, ಸ್ತ್ರೀಯೂ ತನ್ನ ಸಖಿ ನಿದ್ರಾದೇವಿಯ ಅಪ್ಪುಗೆಯಲ್ಲಿ ಮೈಮರೆಯುತ್ತಾಳೆ! ಇದು ಅನಧಿಕಾರ ಪ್ರವೇಶವಲ್ಲವೆ?

ಶ್ರೀ "ಭಯಂಕರ", ನೆಟ್ಟಣಿಗೆ.

ಜಗತ್ತು ಎಲ್ಲಿ? ಯಾವಾಗ ಯಾಕೆ? ಹೇಗೆ ಹುಟ್ಟಿತು? ಎಲ್ಲೋ, ಯಾಕೋ, ಹೇಗೋ, ಯಾವಾಗಲೋ ಹುಟ್ಟಿತು. ನಮಗೆ ಯಾ ನನಗೆ ಯಾಕೆ? ನನ್ನ ಜನ ಕ್ಕಿಂತ ಮೊದಲು ಜಗತ್ತಿನ ಜನನವಾ ಯಿತು ಖಂಡಿತ. ಏಕೆಂದರೆ, ಜಗತ್ತು ಜ ನಿಸಿದುದನ್ನು ನಾನು ನೋಡಲಿಲ್ಲ. ನೀವು ನೋಡಿದ್ದೀರೋ?—ಖಂಡಿತ ಇರಲಿಕ್ಕಿಲ್ಲ. ಹಿದ್ದರಿಂದ ಲೋಕ ನಮಗಿಂತ ಪೊದಲು ನಂಟಾಯಿತು. ನಮ್ಮಪ್ಪ, ಅವನಪ್ಪ ಅವನಜ್ಜ ಹೀಗೇ ಕೇಳುತ್ತಾ ಮನುವಿನ ನೆಕ ಹೋದರೂ ಅನರೆಲ್ಲರಿಗಿಂತ ಮೊ ಲು ಪ್ರಪಂಚ ಉಂಟಾಯಿತು. ಲೋಕ ಉಂಟಾಗಿ ಕೆಲಸಮಯದಲ್ಲೇ ಜೀವಿಗ ು ಉಂಟಾಗಿರಬೇಕು. ಈ ಜೀವಿಗಳೊಂ ಗೇ ನಿದ್ರಾದೇವಿಯೂ ಹುಟ್ಟಿರಬೇಕು. ದ್ರಾದೇವಿಯ ಪ್ರಾಯವನ್ನು ನಿಶ್ಚಿತವಾ ಹೇಳಲು ಸಾಧ್ಯವಿಲ್ಲದಿದ್ದರೂ ಭೂಮಾ ಯ ತಂಗಿ ಇವಳು ಎಂದು ಹೇಳ ಬಹುದು.

ಇಂತಹ ಮುದುಕಿ ನಿದ್ರಾದೇವಿಯೂ ಕ್ಷ ಪಾತ್ರ ಮೂಡುತ್ತಾಳೆಂದರೆ! ನುಡು ರಿಗೆ ಅತಿ ಕಡಿಮೆ ನಿದ್ರೆ ಸಾಕಂತೆ; ರಿಮು ದು ಕ ರಿ ಗೆ ಅವರಿಗಿಂತ ಚ್ಚು ನಿದ್ರೆ, ಯುವಕರಿಗೆ ಅವರಿಗಿಂತ ಚ್ಚು, ಅರೆ ಯುವಕರಿಗೆ ಯುವಕರಿಗಿಂತ ಚ್ಚು. ಹೀಗೇ ಹೆಚ್ಚುತ್ತಾ ಬಂದು ಈಗ ನಿಸಿದ ಬಿಸಿ ಬಿಸಿ ಮಗುವಿಗೆ ಅತಿ ಹೆ ಚ್ಚು ನಿದ್ರೆ ಬೇಕೆಂದು ನಾನು ಶಾಲೆಗೆ ಹೋಗುವಾಗ ಕಲಿತಿದ್ದೆನು.

ಒಂದು ಲೆಕ್ಕದಲ್ಲಿ ಸೊನ್ನೆಯು ಕಡಿಮೆ ಂಖ್ಯೆಯೂ ಆದಕ್ಕಿಂತಲೂ ಕಡಿಮೆ ಬೆಲೆಯ ೧-೨-೩-ಇತ್ಯಾದಿಗಳು ಸೊನ್ನೆ ಂತಲೂ ಕಡಿಮೆ ಬೆಲೆಯವುಗಳಿರುವ ಂತೆ.

ಸಣ್ಣ ಮಕ್ಕಳಿಗೆ ಸಾಮಾನ್ಯವಾಗಿ ಅಳು ುದು ಅಥವಾ ನಿದ್ರಿಸುವುದು. ಕೆಲಸ. ಹೊಟ್ಟೆಯೊಳಗಿಂದ ಅಳುವುದು ನಾನು ೀಳಲಿಲ್ಲ.

ಮೇಲಿನ ಎರಡು ಕಾರಣಗಳಂದ ಮ ವು ಹೊಟ್ಟೆಯೊಳಗೆ ನಿದ್ರಿಸುತ್ತಾ ಇರು ್ತದೆ, ಜನನವಾದೊಡನೆಯೇ ಎಚ್ಚರವಾ ಅಳಲು ಆರಂಭಿಸುತ್ತದೆ=ಎಂದು ನನ್ನ ಅಭಿಪ್ರಾಯ. ಈ ಕುರಿತು ತಜ್ಞ ಡಾಕ್ಟ ರುಗಳು ತಮ್ಮ ಅಭಿಪ್ರಾಯವನ್ನು ನೀಡು ವುದೊಳ್ಳೆಯದು.

ನಿದ್ರಿಸುವುದನ್ನು ಕವಿಗಳು, ಲೇಖಕ ರು ನಿದ್ರಾದೇವಿಯ ಪ್ಪುವುದು ಎನ್ನು ತ್ತಾರೆ. ಯಾವ ದೇವಿಯನ್ನಪ್ಪಬೇಕಾದ ರೂ ಮದುವೆಯಾಗಬೇಕಲ್ಲವೆ? ಆದೂ ನ ಮ್ಮ ಧಾ ರ ತ ದ ಲ್ಲಿ ಮದು ವೆ ಆದ ನಂತರವೇ ಸ್ತ್ರೀಸಾನ್ನಿಧ್ಯವುದಲ್ಲವೆ? ಪಾ ಶ್ಚಾತ್ಯ ದೇಶಗಳಲ್ಲಿ ಬಿಡಿ. ಮಗುವೆನ್ನು ವುದೊಂದು ಉಂಟಾದೊಡನೆಯೇ ನಿದ್ರೆ ಯೆನ್ನುವ ಹೆಂಗಸಿನೊಡನೆ ಮಗುವಿಗೆ ವ ದುಮೊಗುತ್ತದೆ. ಬಾಹ್ಯ ಜಗತ್ತಿಗೆ ಒಂದೇ ಮದುವೆಯಾದವರೂ "ಜೋಡು ಮೇಳ"ದನೆಂದು ಈಗ ಆರಿವಾಯಿತೆ?

ನಿದ್ರೆ ಬಾರದೆ ಕೆಲವರು ವಿದುರರಾದರೂ ಮುಂಡೆ ತಿಳಿಸುವ ಕೆಲವೂರ್ಗಗಳಂದ ಚದುರರಾಗಬಹುದು. ಆದರೆ ಯಾರೇ ಮ ರಣಿಸಿದರೂ ನಿದ್ರೆಯು ವಿಧವೆಯಾಗುವ ದಿಲ್ಲ. ಆ ಮೇಲೆ ಅವನ ನಿದ್ರೆಯು ಅವ ನ ಆತ್ಮವು ಎಲ್ಲಿಗೆ ಹೋಗುವುದೋ ಅಲ್ಲಿ ಗೆ ಹಿಂಡಿಸಲು ಹೋಗುವಳು. ಆದುದರಿಂ ದ ಇವಳು ವಿಧವೆಯಾಗುವ ಕ್ರಮವಿಲ್ಲವೆ ಸದಾ ಸುಮಂಗಲೆಯಾಗಿರುವಳು.

ನಿದ್ರೆಯೆನ್ನುವ ಸ್ತ್ರೀ ನಮ್ಮ ತಾಯಿ ಅಥವಾ ಸೋದರಿ ಎನ್ನುವವರೂ ಇದ್ದಾ ರೆ. ಅವರೊಡನೆ ಭಯಂಕರವಾದ ಸ ರಣಿ ಇಂತಿದೆ.

ತಾಯಿ ಅಥವಾ ಸೋದರಿಯನ್ನು ಪ್ರೀತಿಯಿಂದ ಆಲಿಂಗಿಸಬಹುದು. ಪ್ರತಿ ರಾತ್ರಿಯೂ, ಯಾರಿದ್ದರೂ, ಇಲ್ಲದಿದ್ದರೂ ಕೆಲವೊಮ್ಮೆ ಹಗಲೂ ಅವರನ್ನಪ್ಪು ವುದೇಕೆ? ಉಂಟೆ ಎಲ್ಲಿಯದರೂ! "ಜಾವತಾ ತಾ ದಶಮುಗ್ರಹೆ" ಎನ್ನುವುದ ನ್ನು "ನಿದ್ರಾ ದಶಮಗ್ರಹ" ಎನ್ನಬಹು ದು. ಏಕೆಂದರೆ ಎಲ್ಲರಿಗೂ ಅಳಿಯ ದೇವ ರುಗಳಿರುವುದಿಲ್ಲ. ಆದರೆ ನಿದ್ರೆಯಿಲ್ಲದವ ರಿದ್ದಾರೆಯೇ? ನವಗ್ರಹಗಳೆಲ್ಲರಿಗೂ ಇರು ವಂತೆ ಇದೊಂದು ಎಲ್ಲರಿಗೂ ಇದೆ. ಇ ವಳನ್ನು ಪ್ರತಿಯೊಬ್ಬರೂ ಎಚ್ಚಿದ್ದರೂ, ಹೇಗಿದ್ದರೂ ದಿನದಲ್ಲಿ ಕೆಲವು ಗಂಟೆ ತ ಮ್ಮ ಶಕ್ತ್ಯನುಸಾರ ಸೇವಿಸಲೇ ಬೇಕು. ಅವಳೊಡನೆ ಕೂಡದಿದ್ದರೆ ನಮ್ಮನ್ನೇನು ಮಾಡಲೂ ಮುರುದಿನ ಬಿಡುವುದಿಲ್ಲ. ಅಂ ತಹ ಹೆಂಡತಿ ಪ್ರಧಾನಿ ನೆಹರೂ ಕೂಡ ಅವಳೊಡನೆ ದಿನದಲ್ಲಿ ಒಂದೆರಡು ಗಂಟೆ ಸೇರುವರೆಂದರೆ ಎಂತಹ ನಾಚಿಕೆಗೇಡು!

ಕೆಲವೊಮ್ಮೆ, ಆಡಕೆ ತೋಟಗಾರರು ಮತ್ತು ಶಾರದಾ ದೇವಿಯ ಉಪಾಸಕರು ಈ ಹೆಂಡತಿಯ ಕಾಟ ತಡೆಯಲಿಕ್ಕಾಗಿ ಚಾ, ಕಾಫಿ, ಸಿಗರೇಟು, ಬೀಡಿಗಳೆಂಬ ಹನ್ನೊಂದನೇ ಗ್ರಹಗಳಿಗೆ ಬಲಿಹೋಗು ತ್ತಾರೆ. ಕುರುಡು ಕಣ್ಣಿಂಗಿತ ಕೋಸು ಕಣ್ಣು ಒಳ್ಳೆಯದು. ಹನ್ನೊಂದನೇ ಗ್ರಹ ಕ್ಕಿಂತ ಹತ್ತನೇ ಗ್ರಹವೇ ಜೆನ್ನು.

ಆದರೆ ಕೆಲವರು ಈ ಹೆಂಡತಿಯನ್ನೊ ಲಿಸಲು ಡಾಕ್ಟರುಗಳಿಗೆ ಶರಣು ಹೋಗು ತ್ತಾರೆ. ಅಂತಹವರಿಗೆ ನಿಜವಾಗಿಯೂ ಬುದ್ಧಿಯಿಲ್ಲ. ಅವರಿಗೆ ಧರ್ಮಾರ್ಥವಾಗಿ ನಾನು ಸಲಹೆ ಕೊಡುತ್ತೇನೆ.

ತಾವುಗಳು ಯಾವುದಾದರೂ ಪರೀ ಕ್ಷೆಗೆ ಹಣ ಕಟ್ಟಿ ಓದಲು ಸುರು ಮಾಡಿ ರಿ. ಇಲ್ಲವೆ ಕ್ಲಾಸು ರೂಮುಗಳಲ್ಲಿ ವಿದ್ಯಾ ರ್ಥಿಗಳಂತೆ ಹೋಗಿ ಪಾಠ ಕೇಳಲು ಕುಳಿ ತುಕೊಳ್ಳಿರಿ. ಇದೆರಡೂ ಸಾಧ್ಯವಿಲ್ಲದಿದ್ದ ರೆ "ಭಯಂಕರ"ರ ಹಂಟೆಗಳನ್ನೋದಿರಿ. ಒಡನೆಯೇ ನಿದ್ರೆಯು ಪ್ರತ್ಯಕ್ಷವಾಗು ವುದು.

ಈ ನಿದ್ರೆ ಹೇಗೆ ಬರುವುದೆಂಬ ನಿಯ ಮವಿಲ್ಲ. ಸ್ಥಳ, ಸಮಯಗಳ ಗೊಡವೆ ಇರಕ್ಕಿಲ್ಲ. ಬಸ್ಸಿನಲ್ಲಿ ತೂಕಡಿಸುವವರ ನ್ನು ನೋಡಿ ಆನಂದಿಸಲು ಭಾಗ್ಯ ಬೇ ಕು. ಬಸ್ಸು ನಿಂತಾಗ, ಹೊರಟಾಗ ಅವರ ಹ್ಯಾನ್ಸು ಮಾಡಲು ನೈ (Why) ಜಯಂತಿಮೂಲಳಿಗೆ ಸಾಧ್ಯವೇ?

ತಾಲೂಕಾಫೀಸುಗಳೇ ಮೊದಲಾದ ಸರಕಾರೀ ಕಚೇರಿಗಳಿಗೆ ಕಾರ್ಯಾರ್ಥಿ ಯಾಗಿ ತೆರಳಿದರೆ ನಮ್ಮ ಕೆಲಸವನ್ನು ಗುಮಾಸ್ತರು ಕೇಳುವಾಗ ನಮಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಸುಖ ನಿದ್ರೆ ಯಾಗುತ್ತದೆ.

ಕುದುರೆ ಮತ್ತೆ ಕೆಲವು ಪ್ರಾಣಿಗಳು ನಿಂತುಕೊಂಡೇ ನಿದ್ರಿಸುತ್ತವೆ. ಆದುದ ರಿಂದ ಇವಳನ್ನು ಸೇವಿಸಲು ತಕ್ಕ ಆಸನ ಗಳೇನಿಲ್ಲ.

ಎಲ್ಲರಿಗೂ ಬೇಕಾದ, ಯಾರಿಗೂ ಬೇ ಡದ ಈ ನಿದ್ರಾ ದೇವಿಯು ಎಲ್ಲ ರೊಡನೆಯೂ ಇದ್ದಾಳೆ. ಆವಳ ಪ್ರಭಾ ವವು ಅಕ್ಷಯಾಧಿಕ. ಆದರ ಸಂಪೂರ್ಣ ಅನುಭವ ಯಕ್ಷಗಾನ ಬಯಲಾಟ ವೇಷ ಧಾರಿಗಳಿಗಿದೆ. ಅಭ್ಯಾಸವಿಲ್ಲದೆ ರಾತ್ರಿ ನಿ ದ್ದೆಗೆಟ್ಟು ಆಟ ನೋಡಿದವರ ಅವಸ್ಥೆ ಮು ದಿನ ನೋಡಬೇಕು. ಕಳ್ಳು ಕುಡಿದವ ರಂತೆ ತೂರಾಡುತ್ತಾ ನಡೆಯುವ ಚಂದ!

ಕೆಲವರು ನಿದ್ರಿಸುತ್ತಿರುವಾಗ ಎಬ್ಬಿಸಿ ದರೆ, ಎಬ್ಬಿಸಿದವರಿಗೆ ಅವರು ಒಂದು ಯಾ ಹಚ್ಚು ಪೆಟ್ಟುಗಳ ಮೂಲಕ ಕೃತ ಜ್ಞತೆ ಸಲ್ಲಿಸುವರು. ಅಂತಹವರನ್ನು ಎಬ್ಬಿ ಸುವಾಗ ಒಂದು ಮುದ್ದಿನ ಮಗುವನ್ನು ಅಡ್ಡ ಹಿಡಿ ದು ಎಬ್ಬಿಸಬೇಕೆಂದೂ, ಒನ್ಮೆ ಅವರು ಮಣಿಗೆ ಪೆಟ್ಟು ಕೊಟ್ಟರೆ ಮತ್ತೆಂದೂ ಆ ಅಭ್ಯಾಸವನ್ನು ಪುನರಾವರ್ತಿಸಿದೆಂದೂ ಭ ಯಂಕರರು ಪುಕ್ಕಟೆ ಸಲಹೆ ಕೊಡು ತ್ತಾರೆ.

ನಿದ್ರಿಸುತ್ತಿರುವವರ ಮುಖದ ಮೇಲೆ ತಲೆಗೂದಲನ್ನು ಅಥವಾ ನೂಲನ್ನು ಅ ತ್ತಿತ್ತ ಎಳೆದರೆ ಅವರ ಮುಖಕ್ಕೇ ಅವರು ಕೊಡೆದುಕೊಳ್ಳುವರು.

ಕೆಲವರು ನಿದ್ರೆ ಮಾಡುವಾಗ ಮೂತ ನಾಡುತ್ತಲೂ ಇರುವರು ಆನದು ನಿಲ್ಲಿ ಸುವ ಮೊದಲೇ ನಾವು ಏನಾದರೂ ಹೇ ಳಿದರೆ ಅದಕ್ಕೆ ಉತ್ತರವನ್ನೂ ಕೊಡುವ ರು. ಜಾಗ್ರತವಾಗಿ ಮಾಡುವ ಕೆಲಸವ ನ್ನು ನಿದ್ರೆಯಲ್ಲೂ ಮಾಡುತ್ತಾರಂತೆ.

ವಿಜ್ಞಾನ ಲೋಕದೊಳಗೆ ಟೆಕ್ನೀರಿಯೋ ಲಜಿ ಎಂಬ ಇನ್ನೊಂದು ಲೋಕ ಇರುವಂ ತೆ ನಿದ್ರಾಲೋಕದೊಳಗೆ ಕನಸಿನ ಲೋಕ ವೆಂಬ ಇನ್ನೊಂದು ಪ್ರಪಂಚವಿದೆ. ಈ ಲೋಕದಲ್ಲಿ ನಾವು ನೈಜ ಲೋಕದಲ್ಲಿ ಮಾಡುವಂತೆ ಎಲ್ಲವನ್ನೂ ಮಾಡಬಹುದು.

ಕೆಲವರು ನಿದ್ರಿಸುವಾಗ ನಾಯಿಗಳು ಕಾದಾಡುವಾಗ ಮಾಡುವ ಸದ್ದಿನಂತೆ. ಮರ ಕ್ಕೆಯುವಾಗ ಆಗುವ ಸದ್ದಿನಂತೆ ಗುರ್ ಎಂಬ ಶಬ್ದ ಮಾಡುತ್ತಾರೆ.

ಇನ್ನೊಬ್ಬರು ಹೀಗೆಲ್ಲಾ ಮಾಡುತ್ತಾ ರೆಂದು ನಾನು, ನೀವು ಸಂತಸಪಡಬಹು ದು. ನಾವು? ನಮಗೆ ಗೊತ್ತಿಲ್ಲ. ಇನ್ನೊ ಬ್ಬರಿಗೆ ಕೇಳಿ.

ಅಂತೂ, ಮನುಜರು ಈ ಹೆಂಡತಿಯ ಅಧೀನದಲ್ಲಿರುವಾಗ ನಿಶ್ಚಿಂತರಾಗಿರಬಹು ದು. ಸಾಲ ಸೋಲಗಳನ್ನು ಮರೆಯ ಬಹುದು.

ಪುರುಷರಿಗೆ ಆಕೆ ವಂಚನೆಯಾದರೆ ಸ್ತ್ರೀಯರಿಗೆ? ನಿದ್ರಾದೇವಿ' ಎಂಬ ಉ ಲ್ಲೇಖ ಮಾತ್ರ ನಮ್ಮ ಸಾಹಿತ್ಯದಲ್ಲಿ ಲ ಭ್ಯವಿದೆಯಲ್ಲದೆ 'ನಿದ್ರಾದೇವ' ಎಂಬೆಲ್ಲಿ ಯೂ ತೋರುವುದಿಲ್ಲ. ಆದುದರಿಂದ ನಿದ್ರೆ ಮಾಡುವುದು ಪುರುಷರ ಅಧಿಕಾ ರ. ಸ್ತ್ರೀಯರು ಅನಧಿಕಾರ ಪ್ರವೇಶ ಮಾಡುತಿದ್ದಾರೆ—ಚೀನಿಯರಂತೆ!

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬ್ಯಾಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.

6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

NAVAYUGA' WEEKLY
s in the list of periodicals nd Newspapers approved r use in Secondarys chool as per proceedings Doc· No· 466 N/50 date -12-1950 of the Director f public Instruction Madras·

ಬೇಕಾಗಿದ್ದಾರೆ

ಕನಿಷ್ಟ ಎರಡು ವರ್ಷಗಳ ಅನುಭವ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ.

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ತರಬೇತಿ ಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊ ಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಜೀವನದ ಅವಶ್ಯಕತೆ—ಏಕಾಂತತೆ

ಪರಮಾತ್ಮನ ಸೃಷ್ಟಿಗು ಕೆಲವು ನಿಚಿತ್ರಗಳಲ್ಲಿ ಏಕಾಂತತೆಯೂ ಒಂದು. ಕಾರಣಾಂತರಗಳಿಂದ ಎಲ್ಲರೂ ಒಂದಲ್ಲ ಒಂದು ರೀತಿಯ ಏಕಾಂತತೆಯಿಂದ ಸಂತುಷ್ಟರಾಗುತ್ತಾರೆ.

ಶ್ರೀ ನಿರಿಪತಿ

ಏಕಾಂತತೆಯು ಪ್ರತಿಯೊಂದು ಜೀವಿಯ ಹಕ್ಕೆ? ಹೌದು!.... ಸೃಷ್ಟಿನಿಯಮದಂತೆ ಪ್ರಬೇಬ್ಬನೂ—ನುನೋಸ್ಪೇರಣಿಯಂತೆ—ದಿನದಲ್ಲಿ ಅವಶ್ಯಬಾರಿ ಏಕಾಂತದ ಸವಿಯನ್ನ ನುಭವಿಸುವನು ಕೆಲವರು ಮನಸ್ಸಿನಲ್ಲಿಚ್ಚಿನೂರಾರು ವಿಚಾರ ತರಂಗಗಳಿದ್ದಾಗಲೂ, ಕೆಲವರು—ಸುಖ ಸಾಮ್ರಾಜ್ಯದ ಗಾಳಿಗೋಪುರ ಕಟ್ಟುತ್ತಲೂ ಕೆಲವರು ಗಡುಚಾವ ವಿಷಯದಲ್ಲಿ ಮಗ್ನರಾಗಿ ಆದರಿಂದ ನಿವೃತ್ತರಾಗಲು ಹವಣಿಸುತ್ತಲೂ, ಹುಡುಗರು—ಆಟ-ವಾಠಗಳಲ್ಲಿಯೂ, ಯುವಕರು ತಮ್ಮ ಮುಂದಿನ ಜೀವನದ ಪ್ರಧರ ಕನ್ನಿವೇಷವನ್ನು ಎಣಿಸುತ್ತಲೂ- ಮುದುಕರು ತಮ್ಮ ಗತಕೃತ್ಯ ಗೃಹಕೃತ್ಯದ ವಿಚಾರದಲ್ಲಿಯೂ ಹೆಂಗಸರು—ಜಮ್ಮ ಊಟ ಉಡಿಗೆಯ ವಿಚಾರ, ಗೆಳತಿಯರು—ಸಂಘಂದಿಗಳ ವಿಚಾರದಲ್ಲಿಯೂ—ಗಂಡಂದಿರು, ಗಳಿಕೆಯ—ಸಳ್ಳಿಯ—ಸಂಬಂಧ ವಿಚಾರದಲ್ಲಿಯೂ, ಬೇರೆ ಬೇರೆಯವರು ಬೇರೆ ಬೇರೆ ವಿಚಾರಗಳಲ್ಲಿ ಮಗ್ನರಾಗಿ ತನ್ಮಯತೆಯನ್ನು ಪಡೆದು ಮನೋನಿಶ್ಚಿಂತೆ ಹೊಂದುವರು. ಇದೊಂದು ಜನರ ಹಕ್ಕೇ ಅಲ್ಲವೇ? ಈ ವಿಶ್ರಾಂತಿಕ್ಕೆ ವೇಳೆ—ಸ್ಥಳ—ವಯಸ್ಸು—ವಿಸ—ರಾತ್ರಿಯೆಂಬ ನಿಯಮವಿರುವುದಿಲ್ಲ!.

ನನ್ನ ಗೆಳೆಯರೊಬ್ಬರನ್ನು ಹತ್ತು ವರ್ಷಗಳ ನಂತರ ಭೆಟ್ಟಿಯಾಗಿದ್ದೆ!—ನಾವಿಬ್ಬರೂ ಭ್ರಾತೃವತ್ಸಿಯನ್ನು ಬಿಟ್ಟು ಗೃಹಶ್ಚರಂಗನನ್ನು ಸೇರಿದ್ದೆವು!--ಅಂದು ಅವರನ್ನು ನೋಡಿದಾಗ ವಯಸ್ಸಿಗೆ ಮಿರಿ ಮುದುಕರಂತಾಗಿದ್ದರವರು! ನಾವು ಸಿನೇಮಾಕ್ಕೆ ಹೋಗಿದ್ದೆವು!—ಥಿಯೇಟರಿನ ಹೊರಗೆ ಬಂದು ಅವರನ್ನು ಕೇಳಿದೆ "ಏನಯ್ಯ ಚಿತ್ರ ಹೇಗಿತ್ತು! ಕಥೆ ಚೆನ್ನಾಗಿತ್ತಲ್ಲವೆ?"—ಅವನೆಂದ "ಏನೋ ನನಗೇನೂ ತಿಳಿಯಲಿಲ್ಲ!—ನಾನೇನೋ ಯೋಚಿಸುತ್ತಿದ್ದೆ"— "ಚಿಲ್ಸ್ಯೆ, ಬೆಸ್ಟ್ ಚಿತ್ರ ನೋಡುವಾಗಲೂ ಬೇರೆ ಯೋಚನೆಯೆ! ನಾನೆಂದಿದ್ದೆ! ಜೀವನದ ಸಂಕಷ್ಟಗಳ ಯೂವಪೋ ಯೋಚನೆಯಲ್ಲಿ ಅವನು ಏಕಾಂತ ಅನುಸುತ್ತಲಿದ್ದನೋ ಏನೋ! ಆಂದಿನ ಚಿತ್ರನೋಡುವ ನೇಳೆಯು ಅವನ ಏಕಾಂತವಾಗಿತ್ತು!

ನಾನೊಮ್ಮೆ ಒಂದು ಕಾಫಿ ಹೊಟೆಲ್ಲಿಗೆ ಹೋದಾಗ ನಾನು ಕುಳಿತಲ್ಲಿಯೇ ಒತ್ತಿಗೆ ಕುಳಿತ ಒಬ್ಬನನ್ನು ಪ್ರಶ್ನಿಸಿದೆ "ತಾವು ಏನು ಮಾಡುತ್ತ ಇದ್ದೀರಿ-" ಅವನೊಬ್ಬ ಅಪರಿಚಿತ ವ್ಯಕ್ತಿ ನಾನೆಣಿಸದೆಯೇ ನಮ್ಮಲ್ಲಿ ಮಾತುಕತೆ ಪ್ರಾರಂಭವಾಗಿತ್ತು! ನನ್ನ ಪ್ರಶ್ನೆಗೆ ಅವನುತ್ತರಿಸಿದ್ದ! "ನನ್ನ ಬಹು ನೇಳೆ ಪೇಪರು (ವರ್ತಮಾನ ಪತ್ರ) ಓದುವದರಲ್ಲಿ ಕಳೆಯುತ್ತಿದೆ"—"ತಾವು ಯಾವ ಪೇಪರನ್ನು ಮೆಚ್ಚುತ್ತೀರಿ" ನಾನೆಂದಾಗ..."ಯಾವ ಪೇಪರೂ ನನಗೆ ಹಿಡಿಸುವದಿಲ್ಲ! ಪ್ರತಿಯೊಂದರಲ್ಲಿಯೂ 20 ರಿಂದ 30 ರ ವಳಗಿನ ಯುವಕರೇ ಬೇಕು" ಅನ್ನುತ್ತಾರೆ' ಎಂದ! ಸರಿ ಇವನೊಬ್ಬ ನೌಕರತಲಾಷೆಯಲ್ಲಿ ಪೇಪರು ಹಿಡಿದು ಏಕಾಂತವಾಸ ಬಯಸುವ ಯುವಕರ ಧೀರನೆಂದು ನಾನೆಣಿಸಿದೆ! ನಿರುದ್ಯೋಗಾವಸ್ಥೆ ಇವನನ್ನು ಏಕಾಂತಕ್ಕೆಳೆದಿದೆ!

ನಾನಿದ್ದ ಶಹರದಲ್ಲಿ ನನ್ನ ರೂಮಿನೊತ್ತಿಗೆ ಮನೆಯ ಮಾಲೀಕನಿದ್ದ! ಅವನಿನ್ನೂ ೬೦ ವರ್ಷದವನಿರಬೇಕು! ನಾನು ಕೋಲೇಜಿನಿಂದ ರೂಮಿಗೆ ಬರುವ ಮುಂಚೆಯೇ ಅವನು ಹಾಜರಿರುತ್ತಿದ್ದ—ಮನೆಯ ಮಾಲೀಕನಲ್ಲದೆ ದೂರದಿಂದ ನಮ್ಮ ಸಂಬಂಧಿಕ! ನಾನಾದರೋ ಕೆಲದಿನ ತಡೆದುಕೊಂಡೆ! ಮುಂದೆ ನನ್ನ ಅಭ್ಯಾಸಕ್ಕೆ-ಓದುಬರಹಕ್ಕೆ ತೊಂದರೆಯೆನಿಸಿ ತೊಡಗಿತು. ಮುಂಜಾನೆ ಆರಿಂದ ೯ ಘಂಟೆಯವರೆಗೂ ಸಂಜೆ ೫ರಿಂದ ೮ ಘಂಟೆಯವರೆಗೂ ಆ ಮುದುಕ ಊರ ಪುರಾಣ ಹೇಳುತ್ತ ಎಲೆಯಡಿಕೆ ಹಾಕುತ್ತ ದಿನ ಒಂದು ಕಟ್ಟು ನನ್ನ ರೂಮಿನಲ್ಲಿ ಬೀಡಿ ಸೇದುತ್ತಾ ಕುಳಿತು ಬಿಡುತ್ತಲಿದ್ದ! ಆ ಮುದುಕನಿಗೆ ಮನೆಯಲ್ಲಿ ಮುಕ್ಕಳ ಕಾಟ ಇಲ್ಲದೆ ಹೊಗಳ ಹೇಳಿದ್ದೇ ಹೇಳುವ ಪರಿಪಾಠ ಬೇಸರನೆನಿಸಿರಬೇಕು! ಏಕಾಂತಕ್ಕಾಗಿ ನನ್ನೆ ರೂಮಿಗೆ ಬರುತ್ತಿದ್ದ! ಆಗೊಂದು ಈಗೊಂದು ಮಾತಾನಾಡುತ್ತ ಅತ್ತಿತ್ತ ನೋಡುತ್ತ ಇಲ್ಲವೆ ಬೆರಳೆಣಿಸುತ್ತಾ ಕುಳಿತು ಬಿಡುತ್ತಿದ್ದ! ನಾನವನನ್ನು ಮಾತಾಡಿಸದೆ ಯೂ, ಅವನ ಮುಂದೆ ನಿಶ್ಚಿದೆ ನನ್ನ ಪಾಲಿಗೆ ಓದು ಬರಹ ಪ್ರಾರಂಭಿಸಿದರೆ ಏನೇನಾದರೂ ತಪ್ಪು ತಿಳಿದಾನೆಂದು ಮೂರು ತಿಂಗಳು ಎಣಿಸಿದೆ! ಆದರೆ ನನ್ನ ದು ತಪ್ಪು ಕಲ್ಪನೆ! ಮುಂದಿನ ವರ್ಷ ವಿಡೀ, ನಾನು ಅವನ ಗೊತವೇಗೇ ಹೋ ವದಿಲ್ಲ! ಅವನಿಗೆ ಮೊದಲೇ ನಾನು ಓದಲು ಕೂಡ್ರುವೆ ನೀವು ಕೂತುಕೊಳ್ಳಿಯೆಂದು ಹೇಳಿ ಬಿಡುತ್ತಿದ್ದೆ. ಅವನು ಮಾತ್ರ ಮೂಮೂಲಿನಂತೆ ಅದೇ ಕುರ್ಚಿಯಲ್ಲಿ ದಿನಾ ನಾಲ್ಕು ತಾಸು ಕುಳಿತುಕೊಂಡೇ ಹೋಗುತ್ತಿದ್ದ! ಏನೂ ಕೆಲಸವಿದ್ದಿಲ್ಲ! ಕೇವಲ ಒಂದರ ಹಿಂದೊಂದು ಎಲೆಯಡಿಕೆ ಜಗಿಯುವದು! ಬೀಡಿ ಸೇದುವದು ಇದೊಂದು ವಿಚಿತ್ರ ಏಕಾಂತತೆ.

ನನ್ನ ಗೆಳೆಯನೊಬ್ಬ ಚಿತ್ರಕಾರ! ಅವನು ಕಲಾಶಾಲೆಯ ಹೊರಗೆ "ಕರೆ ಘಂಟೆ" ಇಟ್ಟಿದ್ದ! ಅವನಿಗೆ ಗೊತ್ತು! ಈ ಏಕಾಂತತೆಗೆ ಬರುವ ಜನರ ಪ್ರಭಾವ! ಅವರು ತಾಸುಗಟ್ಟಲೆ ಕಲಾಶಾಲೆಯಲ್ಲಿ ಬಂದು ನಿಂತು ಚಿತ್ರ ನೋಡುವರು. ಕೆಲವರು ಏನಾದರೂ ಅನವಶ್ಯ ವಿಷಯದ ಮೇಲೆ ಮೂತೆತ್ತಿ ಕಲಾಕಾರನ ಕಾರ್ಯದ ಅಮೂಲ್ಯ ವೇಳೆಯನ್ನು ಹಾಳು ಮಾಡುವರು! ಆಂತೆಯೇ ನಮ್ಮ ಚಿತ್ರಕಾರ ತನಗೆ ಅವಕಾಶವಿದ್ದಾಗ ಮಾತ್ರ ಕರೆ ಘಂಟೆಗೆ ಮಾನ್ಯತೆಯಿತ್ತು ಆಗಂತುಕನನ್ನು ಸ್ವಾಗತಿಸುತ್ತಿದ್ದ! ಇಲ್ಲವಾದರೆ ಈಗ ಅವಕಾಶವಿಲ್ಲನೆಂದು ಅಷ್ಟಂದಲೇ ತಿಳಿಸಿ ಬಿಡುತ್ತಿದ್ದ! ಆವರನ್ನು ಒಳಕ್ಕೆ ಕರೆದು ಅವರಿಗೆ ಸಮರ್ಪಕವಾದ ಮಾನ್ಯತೆ ಕೊಡದೆ ತನ್ನ ಕೆಲಸಕ್ಕ ತೊಂದರೆಪಡಿಸಿಕೊಳ್ಳುವದಕ್ಕೆ ಅವನು ಸಿದ್ಧನಿದ್ದಿಲ್ಲ! ಏಕಾಂತತೆಯಲ್ಲಿ ಯೇ ಅವನ ಚಿತ್ರಗಳು ಯಶಸ್ವಿಯಾಗುತ್ತಿದ್ದುದು.

ನಾನು ಕಾಲೇಜು ವ್ಯಾಸಂಗ ಮುಗಿಸಿ ಊರಿಗೆ ಹಿಂತಿರುಗಿದ್ದೆ! ಮನೆಗೆ ಬಂದು ಕಾಲು ತೊಳೆದು ಕಾಫಿಗೆಂದು ಒಳಗೆ ಬಂದಾಗಲೂ ಅಡಿಗೆಯ ಕೋಣೆಯಲ್ಲಿ ಅಟದ ಗೊಂಬೆಗಳ ಮಧ್ಯದಲ್ಲಿ ತನ್ನಾಲೋಚನೆಯಲ್ಲಿ ಗೊಂಬೆಗಳ ವಿನೋದದಲ್ಲಿ ಮಗ್ನನಾದ ನನ್ನಣ್ಣನ ಮಗು ಸುಧಾಕರ ಇನ್ನೂ ಕೋಣೆಯ ಹೊರಬಿದ್ದಿದ್ದಿಲ್ಲ! ನನ್ನ ಸ್ವರಕ್ಕೆ ಅವನ ಕಿವಿನಟ್ಟಗಾಗುತ್ತಿತ್ತು! ಅತ್ತಿಗೆಯನ್ನು ವಿಚಾರಿಸಿದಾಗ ಅವನು ಹಾಗೆಯೇ ಆಟದಲ್ಲಿ ಮಗ್ನನಾದಾಗ "ತನ್ನದೇ ಜಗತ್ತನ್ನು ಕಲ್ಪಿಸಿ ಏನೇನೋ ಗೊಣಗುತ್ತ ಕೂಗುತ್ತಲಿರುತ್ತಾನೆ! ಆ ಮಧ್ಯೆ ಅವನಾಗಿ ಕರೆದಿನಿಸ ನಾನು ಅವನನ್ನು ಎಚ್ಚರಿಸುವದಿಲ್ಲ"! ಹುಡುಗರಿಗೆ ತನ್ನು ಕೈತ್ಯ ಕಮ್ಮ ಭವಿಷ್ಯತ್ಕಾರ್ಯಗಳ ಮೇಲೆ ವಿಶ್ವಾಸ ಹುಟ್ಟಲು ಆ ಬಗ್ಯೆ ವಿಚಾರ ಮಾಡಲೂ ಅವರಿಗೆ ಅವಶ್ಯವಾದ ಏಕಾಂತತೆ ಬೇಕೇ ಬೇಕು!

ಮದ್ರಾಸಿನಲ್ಲಿ ಆಂಗ್ಲೇಜಿ ಕುಟುಂಬವೊಂದರ ಆತಿಥಿಯಾಗಿ ನಿಲ್ಲುವ ಸಂದರ್ಭವೊದಗಿದಾಗ ಜವರ ಹಿರೇ ಹುಡುಗನಿಗೆ ತಂತಿಯೊಂದು ಬಂದಿತ್ತು! ಇಳಿ ವಯಸ್ಸಿನ ಮನೆಯ ಯಜಮಾನನು ಮಗನು ಓದಲುಕುಳಿತ ಕೊಣೆಯುಹೊರಬಾಗಿಲಿನಲ್ಲಿ ನಿಂತು ೫ ನಿಮಿಷ ಕಾಯುತ್ತ ಕುಳಿತ! ಅವರ ಮಗ ಏನೆಂದು ಕೇಳಿದಾಗಲೇ ಅವನು ತಂತಿ ಕಾಗದವನ್ನು ಅವನಿಗಿತ್ತ! ನಾನು ಅವರಿಗೆ ನಮ್ಮಲ್ಲಿಯ "ರಿವಾಜ" (ರೂಢಿ) ತಿಳಿಸಿದಾಗ ಅವರೆಂದರು "ಕಂತಿ ಬಂದರೆ ಮತ್ತೆ ಓದಬಹುದು ಆದರೆ ವಿಚಾರವೊಮ್ಮೆ ತಡೆದರೆ ಹಿಂದೆ ನೆನಪು ಮಾಡಿಕೊಳ್ಳುವದು ಸುಲಭವಲ್ಲ! ಆಲ್ಲದೆ ಏನಾದರೂ ವಿಷಯ ಅಮೂಲ್ಯವಾಗಿದ್ದರೆ ಅದನ್ನು ಕೆಡಿಸುವದೂ ಯೋಗ್ಯವಲ್ಲ! ಆಲ್ಲದೆ ಕಾರಣವಿಲ್ಲದೆ ಯಾರೂ ಏಕಾಂತದಲ್ಲಿ ಕೂಡ್ರುವದಿಲ್ಲ" ಎಂದರು.

ಕೆಲವರು ಹಲ್ಲು ಕಡಿಯುತ್ತಲಿರುವದು, ಕೆಲವರು ತಲೆ ತುರಿಸುತ್ತಿರುವದು, ಕೆಲವರು ಬೆರಳು ಅಲ್ಲಾಡಿಸುತ್ತಿರವದು ಕೆಲವರು ಒಂದೇ ಸ್ಥಳವನ್ನು ತೆರೆದ ಕಣ್ಣಿಂದ ನೋಡುತ್ತ ಕುಳಿತಲ್ಲಿಯೇ ಏಕಾಂತವನ್ನು ಅನುಭವಿಸುವದೂ ಇದೆ! ಇದೆಲ್ಲ ವಿಚಾರದಲ್ಲಿಯ ಏಕಾಂತತೆ! ಇಂಥ ಸಮಯ ಅವರಿಗೆ ತಮ್ಮ ಸಮೀಪ ಯಾರೇ ಬಂಲಿ ಹೋಗಲಿ ತಿಳಿವುದಿಲ್ಲ! ಇದೊಂದು ವಿಧಾತೃವಿನ ಸೃಷ್ಟಿಯ ಸ್ಥಿತಿಯ ವೈಶಿಷ್ಟ್ಯ.



ಮೆಟ್ರಿಕ್ ಪದ್ಧತಿಯಲ್ಲಿ ತೂಕವನ್ನು ಮಾಡಲು ಅನುಕೂಲವಾದ ಬ್ರಹತ್ತಮಾಡದ ತ್ರಾಸು.

ಬಸ್ಸಿನಿಂದ ಇಳಿದ ಕೂಡಲೇ
ನಿಮ್ಮ ಆಯಾಸ ಪರಿಹಾರ

ಲಕ್ಷ್ಮೀ ನಿವಾಸ ಬ್ರಾಹ್ಮಣರ ಊಟ ಮತ್ತು ಉಪಹಾರ ಗೃಹ
ಹೊಸ ಮೆನೇಜುಮೆಂಟಿನ ಹೊಸ ವ್ಯವಸ್ಥೆಗಳು

ಇದೇ ನವೆಂಬರ ತಾ. 1 ರಿಂದ ಉಡುಪಿ ಬಸ್ ಸ್ಟೇಂಡಿನ ಎದುರುಬದುರುವ ಲಕ್ಷ್ಮೀ ನಿವಾಸವು ಹೊಸ ಆಡಳಿತದಲ್ಲಿ ನಡೆಸಲ್ಪಡುವುದು.

ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ.

ಸಭೆ ಸಮಾರಂಭಗಳಿಗೆ ಚಹಾ ಕಾಫಿ ತಿಂಡಿ ಸತ್ಕಾರ ಕಾರ್ಯವನ್ನೂ ನಿರ್ವಹಿಸಲಾಗುವದು.

ತಿಂಗಳ ಊಟಗಳಿಗೆ ಆಕರ್ಷಕ ರಿಯಾಯಿತಿ.

"ಲಕ್ಷ್ಮೀ ನಿವಾಸ" ಉಡುಪಿ

ಊಟ ಕಾಫಿ ಹಾಗೂ ವಸತಿ ಸೌಕರ್ಯಗಳುಳ್ಳ ಹೋಟೆಲು
ಉಡುಪಿ ಬಸ್ ನಿಲ್ದಾಣದ ಎದುರು

ವ್ಯವಸ್ಥಾಪಕ:— ಕೆ. ವಿ. ಕಾಮತ್

ನಿಮಗೂ ಗೊತ್ತಿರಲಿ

ಅಂಧಯುಗ ಸದೃಶ ನಿವೃತ್ತಿವೇತನ

ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪೆನ್‌ಶನ್ ಕಾನೂನುಗಳಿವೆ. ಅವುಗಳಲ್ಲಿ ಸೋವಿಯತ್ ರಶ್ಯದವು ಅತಿ ಉದಾರವಿವೆ ಇಲ್ಲಿ ಪೆನ್‌ಶನ್‌ದಾರರಲ್ಲ ದವರು ಯಾರೂ ಇಲ್ಲ. ಸರಕಾರದ ರಾಷ್ಟ್ರೀಕರಣದ ನೀತಿಯೇ ಈ ಪರಿಸ್ಥಿತಿಗೆ ಕಾರಣವಲ್ಲವೆ?



ಪೆಟ್ರಿಕ್ ಕೃಮದ ತೂಕದ ಕಲ್ಲುಗಳಲ್ಲಿ ಸಾಮಾನುಗಳನ್ನು ತೂಕ ಮಾಡುತ್ತಿರುವ ದೃಶ್ಯವಿದು.

ನಿವೃತ್ತಿ ವೇತನ ಅಥವಾ ಪೆನ್‌ಶನ್ ವೃದ್ಧರಿಗೆ ಊರುಗೋಲಿನಂತೆ. ನಿವೃತ್ತಿ ವೇತನ ಪಡೆಯುವವರು ತಮ್ಮ ಜೀವನವನ್ನು ಸುಖವಾಗಿ ಕಳೆಯಬಲ್ಲರು ಎಂತಲೇ ಎಲ್ಲರಿಗೂ ಪೆನ್‌ಶನ್‌ನ ಮೇಲೆಯೇ ಕಣ್ಣು!

ಬೇರೆ ಬೇರೆ ದೇಶಗಳು ತಮ್ಮ ದೇಶದ ನಾಗರಿಕರು ವೃದ್ಧಾವಸ್ಥೆಯಲ್ಲಿ ಸುಖಮಯವೆನಿಸಿದ ಬದುಕನ್ನು ನಾಗಿಸಲು ಅನುಕೂಲವಾಗುವಂತೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿರುತ್ತವೆ. ಸೋವಿಯತ್ ದೇಶವು ಒಂದು ವಿಚಿತ್ರ ರೀತಿಯ ವಿಧಾನಗಳನ್ನು ಅಂಗೀಕರಿಸಿದೆ. ಅಲ್ಲಿನ ಸರಕಾರ ಇನ್ನಾನ್ಯ ನಾಗರಿಕನಿಗೂ ಕನ್ನ ಬೊಕ್ಕಳದಿಂದ ಪೆನ್‌ಶನ್ ಕೊಡುತ್ತದೆ. ಶ್ರಮಜೀವಿ ವರ್ಗಗಳಿಗೆ ತನ್ನಿಡೆಯಿಂದ ಸ್ವಲ್ಪವೂ ಯೋಗ ನೀಡದೇನೇ ಪೆನ್‌ಶನ್ ಪಡೆಯುವ ಅಧಿಕಾರ ದೊರೆಯುತ್ತದೆ. ಯಾವುದೇ ದುರ್ಘಟನೆಯಿಂದಾಗಿ ಆತನು ಅಂಗವಿಕಲನಾದರೆ ಇಲ್ಲವೇ ಕಾರ್ಯನಿರ್ವಹಣೆಗಲು ಅಸಮರ್ಥನಾದರೆ, ಅವನಿಗೆ ಈ ನಿವೃತ್ತಿ ವೇತನವು ಸಿಗುತ್ತದೆ. ಯಾವುದಾದರೂ ಒಂದು ಕುಟುಂಬದ ಯಜಮಾನನು ಮೃತನಾದರೆ, ಅಂತಹ ಕುಟುಂಬಕ್ಕೆ ಸರಕಾರದವರು ಪೆನ್‌ಶನ್ ನೀಡುತ್ತಾರೆ.

೧೯೫೬ನೆಯ ಅಕ್ಟೋಬರ ಮೊದಲನೆಯ ದಿನ ಪೆನ್‌ಶನ್‌ನ ಬಗ್ಗೆ ಒಂದು ಹೊಸ ಕಾನೂನು ಇಲ್ಲಿ ಜಾರಿಯಾಯಿತು. ಇದರನ್ವಯ ಪೆನ್‌ಶನ್‌ಗಳ ಸಂಖ್ಯೆಯನ್ನು ಅಧಿಕಗೊಳಿಸಲಾಯಿತು. ೧೯೫೯ರಲ್ಲಿ ೬೭॥ ಅರಬ ರೂಬಲ್‌ಗಳನ್ನು ರಶ್ಯವು ಪೆನ್‌ಶನ್‌ಗಳ ರೂಪದಲ್ಲಿ ಕೊಟ್ಟಿರುತ್ತದೆ. ವೃದ್ಧಾವಸ್ಥೆಯ ನಿವೃತ್ತಿ ವೇತನವು ಅರುವತ್ತು ವರ್ಷ ವ್ಯಾಯಾನಂತರ ಸಿಗಲು ಪ್ರಾರಂಭವಾಗುತ್ತದೆ. ಆದರೆ, ಮಹಿಳೆಯರಿಗೆ ಮಾತ್ರ ೫೫ನೆ ವರ್ಷದಿಂದ ದೊರೆಯುತ್ತದೆ. ಪೆನ್‌ಶನ್ ಸೌಲಭ್ಯ ಲಭಿಸಬೇಕಾದರೆ, ಕನಿಷ್ಠ ಪಕ್ಷ ಪುರುಷರು ೫೫ ವರ್ಷ ಮತ್ತು ಸ್ತ್ರೀಯರು ೨೦ ವರ್ಷ ಸೇವೆ ಸಲ್ಲಿಸಿರಬೇಕಾಗುತ್ತದೆ. ಆದರೂ ನಿಶ್ಚಿತ ಅವಧಿಯ ತನಕ ಸೇವೆ ಸಲ್ಲಿಸದಿರುವವರಿಗೂ ವಿಭಿನ್ನ ಪರಿಸ್ಥಿತಿಗಳಲ್ಲಿ ಅಂಶಿಕವಾಗಿ ಪೆನ್‌ಶನ್ ಪಡೆಯುವ ಸೌಲಭ್ಯವನ್ನು ಈ ಕಾನೂನುಗಳು ಒದಗಿಸಿವೆ.

ಕಠಿಣ ಮತ್ತು ಆಪಾಯಕಾರಕ ಪರಿಸ್ಥಿತಿಗಳಲ್ಲಿ ದುಡಿಯುವವರಿಗೆ ಅನೇಕ ಸೌಕರ್ಯಗಳಿವೆ. ಗಣಿಗಳು ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಗಳು ಹಾಗೂ ರಸಾಯನ ಶಾಲೆಗಳಲ್ಲಿ ಕೆಲಸ ಮಾಡುವ ಕರ್ಮಚಾರಿಗಳಿಗೆ ಅನುಕೂಲ ಶರತ್ತುಗಳ ಮೇಲೆ ಪೆನ್‌ಶನ್ ಕೊಡಲಾಗುವುದು. ಈ ವರ್ಗದ ನೌಕರರು ೫೦ನೆ ವರ್ಷದಲ್ಲಿ ನಿವೃತ್ತಿ ವೇತನದಾರರಾಗುತ್ತಾರೆ.

ಐದು ಅಥವಾ ಅಧಿಕ ಮಕ್ಕಳಿರುವ ತಾಯಂದಿರಿಗೂ ಇಲ್ಲಿ ಅನೇಕ ಸೌಲಭ್ಯಗಳಿವೆ. ಇವರು ೧೫ ವರ್ಷ ಸೇವೆಯ ಬಳಿಕ ೫೦ನೆ ವರ್ಷದಿಂದ ಪೆನ್‌ಶನ್ ಪಡೆಯಲು ಅರ್ಹರಾಗಿದ್ದಾರೆ.

ಪೆನ್‌ಶನಿನ ದರವು ವೇತನದ ಆಧಾರದ ಮೇಲೆ ಸಾಮಾನ್ಯವಾಗಿ ಮಾಸಿಕ ವೇತನದ ಐವತ್ತರಿಂದ ನೂರರಷ್ಟು ||ಪ್ರತಿಶತದ ನರೆಗೂ ಇರುವುದುಂಟು ವೇತನವು ಕಡಿಮೆಯಾಗಿದ್ದರೆ, ಆದರ ಹೆಚ್ಚಿನಂಶವು ಪೆನ್‌ಶನ್ ರೂಪದಲ್ಲಿ ಕೊಡಲಾಗುವುದು. ನೌಕರನು ತನ್ನ ಕೊನೆಯ ಹತ್ತು ವರ್ಷಗಳ ಸೇವೆಯಲ್ಲಿ ಯಾವುದಾದರೂ ಐದು ವರ್ಷಗಳ ಸರಾಸರಿ ವೇತನವು ಪೆನ್‌ಶನ್‌ಗಾಗಿ ನಿಯತವಾಗುತ್ತದೆ. ಪ್ರಾರ್ಥಿಗೆ ತಾನು ಅತ್ಯಧಿಕವಾಗಿ ಗಳಿಸಿದ ಐದು ವರ್ಷಗಳನ್ನು ಆರಿಸಲು ಅಧಿಕಾರವಿರುತ್ತದೆ. ಪೆನ್‌ಶನಿನ ಮೊತ್ತ ಕನಿಷ್ಠವೆಂದರೆ ಮಾಸಿಕ ನೂರು ರೂಬಲ್ಲುಗಳು, ಗರಿಷ್ಠವೆಂದರೆ ಮಾಸಿಕ ೧೨೦೦ ರೂಬಲ್ಲುಗಳಾಗಿವೆ.

ಒಬ್ಬನ ಪ್ರಾಯವು ಪೆನ್‌ಶನ್ ಪಡೆಯುವ ಮಿತಿಯನ್ನು ಮುಟ್ಟಿದ್ದರೆ ಮತ್ತು ಆತನು ತನ್ನ ಉದ್ಯೋಗವನ್ನು ಮುಂದುವರಿಸುತ್ತ ಇರುವನಾದರೆ ಆತನ ನಿವೃತ್ತಿ ವೇತನಪ್ರಮಾಣವು ಕಡಿಮೆಯಾಗುವುದು. ಪೆನ್‌ಶನ್ ಪಡೆಯುವವನು ವರ್ಷದಲ್ಲಿ ಎರಡು ಮಾಸಗಳಿಗಿಂತ ಹೆಚ್ಚು ಅನಾಶ್ಯಯಿ ಕೆಲಸವನ್ನು ನೂಡಬಾರದು. ಹೀಗೆ ಮಾಡಿದರೆ, ಆತನಿಗೆ ಇಡಿ ಪೆನ್‌ಶನ್ ಸಿಗುವುದು.

ಅಂಗಹೀನ ಅಥವಾ ರೋಗಿಯಾದವರಿಗೆ ಯಾವುದೇ ಪ್ರಾಯದಲ್ಲಿ ನಿವೃತ್ತಿ ವೇತನವು ದೊರೆಯುತ್ತದೆ. ಆವು ಅಸಮರ್ಥತೆಗೆ ಉದ್ಯೋಗ, ಕಾರಖಾನೆಯಲ್ಲಿನ ದುರ್ಘಟನೆಗಳೇ ಕಾರಣವಾದರೆ ಪೆನ್‌ಶನ್ ನೀಡಲು ಆವರು ಸಲ್ಲಿಸಿದ ಸೇವಾ ಅವಧಿಯನ್ನೂ ಗಣಿಸುವುದಿಲ್ಲ. ಆದರೆ, ಬೇರೆ ರೀತಿಯಿಂದಾದಲ್ಲಿ ಆವರು ಸಲ್ಲಿಸಿದ ಸೇವೆಯನ್ನು ಹೊಂದಿಕೊಂಡು ಪೆನ್‌ಶನ್ ನೀಡುವ ಅವಧಿಯನ್ನು ನಿರ್ಣಯಿಸುತ್ತಾರೆ.

ಯಜಮಾನನನ್ನು ಕಳೆದುಕೊಂಡ ಕುಟುಂಬದವರು ಪೆನ್‌ಶನ್ ಪಡೆಯಲು ಅರ್ಹರಾಗಿದ್ದಾರೆ. ತಾಯ್ತಂದೆಯರು ಮಡಿದು ಹೋದಲ್ಲಿ ಅವರು ಇಬ್ಬರ ಜುಲ್ಮೆ ಆದಾಯದ ಆಧಾರದಿಂದ ೧೮ ವರ್ಷಗಳವರೆಗೆ ಅನಾಥ ಮಕ್ಕಳಿಗೆ ಪೆನ್‌ಶನ್ ಸಿಗುತ್ತಿರುವಿದು.

ದೀರ್ಘಕಾಲೀನ ಸೇವೆಗಳ ಪೆನ್‌ಶನ್ ವಿಶೇಷ ಪ್ರಕಾರದ್ದಿದೆ. ಇವು ನೈದ್ಧಾವಸ್ಥೆ ಅಥವಾ ಆಯೋಗ್ಯತೆಗಳ ಪೆನ್‌ಶನ್‌ಗಳಂತಲ್ಲ. ಪ್ರಾಯ ಇಲ್ಲವೇ ಕೆಲಸ ಮಾಡುವ ಯೋಗ್ಯತೆಯನ್ನು ಹೊಂದಿಕೊಂಡಿದು ಇವುದಿಲ್ಲ. ಶಿಕ್ಷಣ ಮತ್ತು ಆರೋಗ್ಯ ವಿಕಾಶದಲ್ಲಿ ಸುಕತ್ವ ನೀಡುವ ಸಲುವಾಗಿ ಸರಕಾರವು ಅಧ್ಯಾಪಕ ಮತ್ತು ಶಿಕ್ಷಣ ಕರ್ಮಚಾರಿಗಳಿಗೆ ಈ ವಿಧಾನದ ಪೆನ್‌ಶನ್ ಪದ್ಧತಿಯನ್ನು ಮಾಡಿದೆ. ಈ ಕ್ಷೇತ್ರಗಳಲ್ಲಿ ೨೫ವರ್ಷ ಸೇವೆ ಸಲ್ಲಿಸಿದ ಬಳಿಕ ವೇತನದ ೪೦ ಶೇಕಡಾ ನಿವೃತ್ತಿವೇತನ ದೊರೆಯುವುದು. ಈಗಾಲೆ ಲಕ್ಷಾಧ್ಯಾಪಕ ಮತ್ತು ಆರೋಗ್ಯಇಲಾಖೆಯ ನೌಕರರು ದೀರ್ಘಕಾಲೀನ ಪೆನ್‌ಶನ್ ಪಡೆಯುತಿದ್ದಾರೆ.

ಯಾವನೇ ನಾಗರಿಕನಿಗೆ ತನಗೆ ಮೊರೆಯುವ ಪೆನ್‌ಶನ್‌ನ ಮೊತ್ತವು ಸಾಲದೆಂದು ಅನ್ನಿಸಿದರೆ, ಆವರು ಸರಕಾರಕ್ಕೆ ಮನವಿ ಸಲ್ಲಿಸಬಹುದು. ೧೯೬೩ರ ಸುಮಾರಿಗೆ ನ್ಯೂನತಮ ವೃದ್ಧಾವಸ್ಥೆಯ ಪೆನ್‌ಶನ್ ನಗರಗಳಲ್ಲಿ ೫೦೦ರಿಂದ ೪೦೦ ರೂಬಲ್ ಹಾಗೂ ಹಳ್ಳಿಗಳಲ್ಲಿ ೫೫ರಿಂದ ೩೫ರ ವರೆಗೆ ಎಂದು ನಿಗದಿ ಮಾಡುವ ವಿಚಾರವಿದೆ.

ಜನರಲ್ ಸ್ಟೋರ್ಸ್ ಉಡುಪಿ

ಸ್ಥಾಪನೆ 1929 ಟೆಲಿಫೋನ್ ನಂಬ್ರ: 95

ಇನ್ನೊಂದು ಹೊಸ ಹೆಜ್ಜೆ!.... ಸಂತೋಷದ ಸುದ್ದಿ!!

ನಮ್ಮ ಎಲ್ಲಾ ಗ್ರಾಹಕರಿಗೂ ಹಿತಚಿಂತಕರಿಗೂ ಉತ್ತಮ ಮತ್ತು ಸಕಾಲಿಕ ಸೇವೆಯನ್ನು ಸಲ್ಲಿಸುವ ಬಗ್ಗೆ—ನಮ್ಮ ಸವಿೂಪದ ಸ್ವಂತ ಕಟ್ಟೋಣದಲ್ಲಿ:
ಕಬ್ಬಿಣ, ಕಟ್ಟೋಣ ಸಾಮಾಗ್ರಿ, ಪೈಂಟ್ಸ್, ವೈರ್ಸ್, ಫಿಟ್ಟಿಂಗ್ಸ್, ಮೆಶಿನರಿ, ಮತ್ತು ಅಕ್ಕಿ ಮಿಲ್ಲಿನ ಸಾಮಾಗ್ರಿ ಮೊದಲಾದುವುಗಳ ಪ್ರತ್ಯೇಕ ಡಿಪಾರ್ಟ್‌ಮೆಂಟನ್ನೂ ಮತ್ತು
ಡಾಲ್ಡಾ ಡಿಪಾರ್ಟ್‌ಮೆಂಟ್ (ಹಿಂದುಸ್ಥಾನ ಲೀವರ ಲಿಮಿಟೆಡ್) ಆಹಾರ ಸಾಮಾಗ್ರಿಗಳ ವಿಭಾಗವನ್ನೂ ಪ್ರಾರಂಭಿಸಿದ್ದೇವೆ.

ಗ್ರಾಹಕರು ಮುಂದಕ್ಕೂ ಎಂದಿನಂತೆ ಪ್ರೋತ್ಸಾಹ, ಸಹಕಾರಗಳನ್ನು ನೀಡಬೇಕಾಗಿ ಕೋರುತ್ತೇವೆ.

ದಿ. ಜನರಲ್ ಸ್ಟೋರ್ಸ್,
ಪೋಸ್ಟಾಫೀಸು ರಸ್ತೆ, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪತಾಳ, ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಪರಿವ್ರಾಜಕನಾಗಿ ಸರ್ವಸಂಗ ಪರಿತ್ಯಜಿಸಿ ತನ್ನ ಜೀವನವನ್ನು ನಿಷ್ಕಳಂಕಗೊಳಿಸಿದವನು ಧನ್ಯನು: ಸಂಸಾರದ ಕಷ್ಟ ಕಾರ್ಪಣ್ಯಗಳನ್ನು ಸಾಹಸದಿಂದೆದುರಿಸಿ ತನ್ನ ಜೀವನವನ್ನು ನಿಷ್ಕಳಂಕವಾಗಿಸಿದವನು ಇವನಿಗಿಂತ ನೂರು ಪಟ್ಟು ಧನ್ಯನು.

ನವಯುಗ

ವರುಷ ೪೦	ಉಡುಪಿ ೧೦-೧೧-'೬೦	ವಾರ ೧೮

ಪ್ರಾಥಮಿಕ ಶಿಕ್ಷಣ

ರಾಜ್ಯ ಶಿಕ್ಷಣ ಮಂತ್ರಿಗಳ ಸಮ್ಮೇಳನವು ಇತ್ತೀಚೆಗೆ ಸೇರಿ ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಶಿಕ್ಷಣ ಪ್ರಸಾರವನ್ನು ಯಾವ ರೀತಿ ಮತ್ತು ಹೇಗೆ ಮಾಡಬಹುದು, ಶಿಕ್ಷಣ ಕ್ಷೇತ್ರದಲ್ಲಿ ಯಾವ ವಿಧದ ಸುಧಾರಣೆ ಹೇಗೆ ಕಾರ್ಯರೂಪಕ್ಕೆ ಬರಬೇಕು ಎಂಬಿತ್ಯಾದಿಯಾಗಿ ವಿಚಾರವಿನಿಮಯ ಮಾಡಿತು. ಈ ಅವಧಿಯಲ್ಲಿ ಉಚಿತ ಜಾಗೂ ಅನಿವಾರ್ಯ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕು; ರಾಷ್ಟ್ರೀಯ ಭಾವನೆಯು ಬಾಲ್ಯಾವಸ್ಥೆಯಲ್ಲಿಯೇ ಮೂಡುವಂತೆ ಮಾಡಬೇಕು; ಎಲ್ಲ ಹುಡುಗ–ಹುಡುಗಿಯರೂ ಶಾಲೆಗೆ ಹೋಗಲು ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬಿತ್ಯಾದಿಗಳ ಕುರಿತು ವಿವರವಾದ ವಿಚಾರವಿನಿಮಯವು ನಡೆಯಿತು ಕೆಲವೊಂದು ನಿರ್ಧಾರಕ್ಕೆ ಬರಲಾಯಿತು. ಈ ನಿರ್ಧಾರಗಳು ವಾಸ್ತವಿಕವಾಗಿ ಕಾರ್ಯರೂಪಕ್ಕೆ ಬಂದಾಗಲೆಂದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರಮಪ್ರಗತಿಯ ಕೊರತೆ ದೂರ ಸರಿಯುವುದೆಂದು ಆಶಿಸಬಹುದು.

ನಮ್ಮ ದೇಶದಲ್ಲಿನ ಮಿಷ್ಯ ಸಮಸ್ಯೆಗಳಲ್ಲಿ ವೈಜ್ಞಾನಿಕ ಪ್ರಶ್ನೆಯೂ ಸಿಗೂಢವಾದುದು. ವಯಸ್ಕ ಮತದಾನ ಪದ್ಧತಿಯನ್ನೇನೋ ನಾವು ಗಣರಾಜ್ಯದಿನದಂದೇ ವ್ಯವಹಾರಕ್ಕೆ ತಂದೆ. ಪ್ರಗತಿಪರ ರಾಷ್ಟ್ರಗಳಿಗೆ ಎಣೆಯಾಗಿರಬೇಕೆಂದು ಕೊಳ್ಳುವೆವಾದರೂ ಸಾಕ್ಷರತೆಯ ಅಭಾವದಿಂದಾಗಿ ಜನಾವಣಾಸೇಗೆ ಅನೇಕ ವಿಘ್ನವಿಡ್ಡೂರಗಳು ಕಾಣಿಸಿಕೊಳ್ಳುವುದನ್ನು ನಿರೀಕ್ಷಿಸಬೇಕಾಗುವುದು ಅನಿವಾರ್ಯವೇ ಸರಿ. ಈ ದಿಸೆಯಲ್ಲಿಯೂ ನಿಜವಾದ ರೀತಿಯಲ್ಲಿ ಮತದಾನದ ಹಕ್ಕನ್ನು ಸದುಪಯೋಗಪಡಿಸಿಕೊಳ್ಳುವ ಶಕ್ತಿ ನಮ್ಮ ನಾಗರಿಕರಿಗೆ ಬರುವಂದೇ ನಿಜವಾದ ಜನತಂತ್ರ ಸ್ಥಾಪನೆಗೊಳ್ಳುವಂತಾಗುವುದು. ಇದಕ್ಕಾಗಿ ಶಿಕ್ಷಣ ವಿಸ್ತರಣೆಯನ್ನು ವಿಶಾಲೋದ್ದಾರ ನೀತಿಯಿಂದ ಒದಗಿಸಬೇಕಾದ ಅಗತ್ಯವಿದೆ. ಅನಿವಾರ್ಯ ಉಚಿತ ಪ್ರಾಥಮಿಕ ಶಿಕ್ಷಣ ಯೋಜನೆಯು ಈ ದಿಶೆಯಲ್ಲಿಡುವ ಮೊದಲನೆಯ ಹೆಜ್ಜೆಯೆಂದರೆ ಅತಿಶಯೋಕ್ತಿಯಲ್ಲ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವಾಗ ಪ್ರಾಥಮಿಕ ಶಿಕ್ಷಕರ ಕುರಿತಾಗಿಯೂ ಕೆಲವೊಂದು ವಿತ್ಯಾಶನವನ್ನು ಅನ್ನೇಬೇಕಾಗುತ್ತದೆ. ಜಾಡಮಾಲಿಗಳ ಕೆಲಸಕ್ಕೂ ಅಧಿಕ ನೇತನ ದೊರೆಯುವುದೆಂಬ ಆಶೆಯಿಂದ ತೆರಳಲಿಚ್ಛಿಸುವ ಶಿಕ್ಷಕರು ಭಾರತದ ಕೆಲವು ರಾಜ್ಯಗಳಲ್ಲಿದ್ದಾರೆಂಬುದನ್ನು ನಾವು ಗಮನಿಸುವಾಗ, ಮದ್ರಾಸು, ಮೈಸೂರು ರಾಜ್ಯಗಳ ಪ್ರಾಥಮಿಕ ಶಿಕ್ಷಕರು ಇತರ ಕೆಲವೆಡೆಯ ಸಹೋದ್ಯೋಗಿಗಳಿಗಿಂತ ಸುಖವಾಗಿದ್ದಾರೆನ್ನಬೇಕಾಗುವುದು. ಪ್ರಾಥಮಿಕ ಶಿಕ್ಷಣವು ವ್ಯಕ್ತಿಯ ಜೀವನದ ಬುನಾದಿ ರಚಿಸುವಂತೆಯೇ ಪ್ರಾಥಮಿಕ ಶಿಕ್ಷಕರೂ ದೇಶದ ಬೆಂಗೋಲು; ದೇಶದ ಸಂಸ್ಕೃತಿ ಪ್ರಸಾರಕ, ದೇಶ ರಕ್ಷಕ, ದೇಶದ ಸರ್ವಸ್ವವಾಗಿದ್ದಾರೆ. ಇದರಿಂದಾಗಿ, ಆಲಪ್ಪಿಸುವುದೆಂದರೆ, ರಾಷ್ಟ್ರವನ್ನು ಅಧಃಪತನಕ್ಕೊಯ್ಯುತ್ತಿದೆ ಎನ್ನದೆ ಗತ್ಯಂತರವಿಲ್ಲ. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣ ಶಾಖೆಯು ಕೇಳಿದಷ್ಟು ಹಣ ದೊರೆಯಿಲ್ಲ; ಬದಲು ಕೇಳಿಕೆಯು ಸೇ. ೪೦ರಷ್ಟು ಮಾತ್ರ ಲಭಿಸಿದೆ. ಆದರೂ ಉಚ್ಚ ಶಿಕ್ಷಣಕ್ಕಿಂತ ಪ್ರಾಥಮಿಕ ಶಿಕ್ಷಣದ ಪ್ರಾಧಾನ್ಯವನ್ನು ಮನಗಂಡು, ಈ ಬಗ್ಗೆ ಅಧಿಕ ಹಣ ವಿನಿಯೋಗಿಸಬೇಕು; ಶಿಕ್ಷಕರ ವೇತನಸ್ತರವನ್ನು ಹೆಚ್ಚಿಸಿ ಅವರೂ ಇತರರಂತೆಯೇ ವರ್ಯಾದಯುತ ಜೀವನವನ್ನು ಬದುಕುವಂತೆ ಮಾಡಬೇಕು; ಅವರಲ್ಲಿ ತಾವು ಬೇರೆಯುರಿಗಿಂತ ಕಡಿಮೆಯಲ್ಲವೆಂಬ ವಿಶ್ವಾಸ ಮೂಡಬೇಕು; ಸ್ವತಂತ್ರ ರಾಷ್ಟ್ರದ ಭಾವಿ ಪ್ರಜಾ ನಿರ್ಮಾಪಣೆಯ ತಮ್ಮ ಕರ್ತವ್ಯವನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸುವ ತಕ್ಕತಹ ಮಾಡಿಬರಬೇಕು; ತಮ್ಮು ಕೆಲಸದಲ್ಲಿ ಆತ್ಮ ವಿಶ್ವಾಸವಿಡುವಂತಾಗಬೇಕು—ಇಗೆನೆಗಸುವುದು ಶಿಕ್ಷಣ ಪ್ರಸಾರಕ್ರಿಯರ ಆದಿಮ ಕರ್ತವ್ಯ. ಸಮ್ಮೇಳನವಾದರೂ ಈ ಕುರಿತಾಗಿ ಒಂದಲ್ಲ ಸಾಹಸ ಪೂರ್ಣ ನಿರ್ಣಯಕ್ಕೆ ಬಂದಿದೆ.

ವಿದ್ಯಾರ್ಥಿಗಳಲ್ಲಿ ಎಳವೆಯಲ್ಲಿಯೇ ಜವಾಬ್ದಾರಿಯುತವಾಗಿ ನಡೆಯುವ; ರಾಷ್ಟ್ರೀಯ ಭಾವನೆಯು ಬಲಿಯುವ; ಆತ್ಮ ವಿಶ್ವಾಸ, ಕರ್ತವ್ಯ ನಿಷ್ಠೆ, ಪರಿಶ್ರಮ ಶೀಲತೆಯ ಭಾವಗಳು ಹೆಚ್ಚುವ ಬಗ್ಗೆ ಆಸಕ್ತಿ ತೋರಿಬರುವುದು ಆಗತ್ಯವಿದೆ. ಈ ಭಾವಗಳನ್ನು ಪ್ರಾಥಮಿಕ ಅಧ್ಯಾಪಕರು ಮಾತ್ರ ಅವರಲ್ಲಿ ಮೂಡಿಸಬಲ್ಲರು. ಆದರೆ, ಅಧ್ಯಾಪಕರು ತಮ್ಮ ಕರ್ತವ್ಯದಲ್ಲಿ ನಿಷ್ಠಂಗಿರಬೇಕು; ಕ್ಲಪ್ತತೆಯನ್ನು ಪರಿಪಾಲಿಸಿಕೊಂಡು ಬರಬೇಕು ಎಂದು ಆಶಿಸುವ ಸರಕಾರಗಳೂ ಅದರ ಶಿಕ್ಷಣ ಶಾಖೆಯ ಅಧಿಕಾರಿಗಳೂ ಕೆಲವೊಮ್ಮೆ ಬೇಜವಾಬುದಾರಿತನದಿಂದ ವರ್ತಿಸುವುದನ್ನು ಕಾಣುವಾಗ ಸಂಪೂರ್ಣ ನಿರಾಶೆಯೆನಿಸುತ್ತದೆ. ಸರಕಾರವು ಎಳೆಯ ಮಕ್ಕಳ ಮೇಲೆ ತುಂಬ ಪ್ರಭಾವ ಬೀರುವ ಪ್ರಾಥಮಿಕ ಶಿಕ್ಷಣದ ವ್ಯವಹಾರದಲ್ಲಿ ಅದೆಷ್ಟು ಎಚ್ಚರಿಕೆ ವಹಿಸಿದರೂ ಸಾಲದು. ಆದರೆ, ಪ್ರಾಥಮಿಕ ಶಿಕ್ಷಣದ ಮೇಲಿರುವಷ್ಟು, ಹತೋಟಿ ಸರಕಾರಕ್ಕೆ ಪ್ರೌಢ ಅಥವಾ ಉಚ್ಚ ಶಿಕ್ಷಣದ ಮೇಲಿಲ್ಲದಿರುವುದರಿಂದ ಪ್ರಾಥಮಿಕ ಶಿಕ್ಷಣವು ಕೊಳಕು ಹರಿಯುವ ಜರಂಡಿಯಂತೆಯೇ ಆಗಿದೆಯೆಂದರೆ ಅತಿಶಯೋಕ್ತಿಯಾಗದು. ರಾಷ್ಟ್ರೀಯ ಭಾವನೆಯನ್ನು ಬೆಳೆಸಲು ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಲು ಒಂದು ಸಮಿತಿಯನ್ನು ಸಮ್ಮೇಳನವು ರಚಿಸಿದುದು ಅವಶ್ಯ ಮತ್ತು ಅನಿವಾರ್ಯವೇ ಆಗಿದೆ.

ಅನಿವಾರ್ಯ ಶಿಕ್ಷಣದ ಬಗ್ಗೆ ಪ್ರತಿಮಾತನ್ನು ಯಾರೂ ಆಡಲಾರರು. ಆದರೆ, ಇದನ್ನು ಈಯುವಾಗ ತುಂಬ ಎಚ್ಚರಿಕೆ ವಹಿಸಬೇಕೆಂದು ಪ್ರತ್ಯೇಕ ಜ್ಞೇಳಬೇಕಾಗಿಲ್ಲ. ಈಗಾಗಲೇ ಧರ್ಮಾರ್ಥವಾಗಿ ಕೆಲವೆಡೆ ಪ್ರಾಥಮಿಕ ಶಿಕ್ಷಣ ನೀಡುತ್ತಿದೆ; ವಿವಿಧ ರೀತಿಯಲ್ಲಿ ಛಾತ್ರ ವೃತ್ತಿಯನ್ನೂ ಕೊಡುತ್ತಿದೆ. ಆದರೆ, ಇಷ್ಟರಿಂದಲೇ ಕೆಲಸ ಪೂರೈಸುವಂತಿಲ್ಲ. ಗ್ರಾಮಗ್ರಾಮಗಳಲ್ಲಿ ಶಾಲೆಗಳು ಸ್ಥಾಪನೆಯಾಗಬೇಕು; ಶಾಲಾ ಪ್ರಾಯದ ಎಲ್ಲ ಮಕ್ಕಳೂ ಅವುಗಳಿಗೆ ಹೋಗುವಂತಾಗಬೇಕು. ಇದಕ್ಕೆ ಮಧ್ಯಾಹ್ನ ಊಟದ ಯೋಜನೆ, ಪುಸ್ತಕ ವಿತರಣೆ, ಬಟ್ಟೆಬರಿಗಳ ಪೂರಯ್ಕೆ ಮೊದಲಾದುವುಗಳೂ ಅವಶ್ಯವಿನಿಸಿದರೂ ಎಲ್ಲರೂ ಶಾಲೆಗೆ ಬರುವರೆಂದುಹೇಳುವಂತಿಲ್ಲ. ಮುಖ್ಯವಾಗಿ ಬಡತನ–ಅಜ್ಞಾನಗಳಿಂದ ನರಳುತ್ತಿರುವ ಜನತೆಯ ಕಷ್ಟಕಾರ್ಪಣ್ಯಗಳನ್ನು ಅರಿತುಕೊಂಡು ವ್ಯಕ್ತಿಗತ ಅಭಾವತೆಯನ್ನು ನೀಗಿಸಿದರೆ ಮಾತ್ರ ಎಲ್ಲರೂ ಶಾಲೆಗೆ ಬರುವಂತಾದೀತು. ಅದು ಹೊರತು ಕಾಯದೆ ಕಾನೂನುಗಳನ್ನು ವ್ಯವಹೃತಗೊಳಿಸಿದ ಮಾತ್ರಕ್ಕೆ ಅನಿವಾರ್ಯ ಶಿಕ್ಷಣ ಯಶಸ್ವಿಯಾಗುವಂತಿಲ್ಲ. ಕೇಂದ್ರ ಶಿಕ್ಷಣ ಮಂತ್ರಿಗಳು ದೇಶದ ಪ್ರಾಥಮಿಕ ಶಿಕ್ಷಣದ ಬಗ್ಗೆ ಈಗ ವಹಿಸುತ್ತಿರುವ ಕಾಳಜಿಯನ್ನು ಮುಂದಕ್ಕೂ ಇರಿಸಿಕೊಂಡು ರಾಜ್ಯ ಮಂತ್ರಿಗಳಿಗೆ ಸೂಕ್ತ ನಿರ್ದೇಶನವನ್ನೂ ಮಾರ್ಗದರ್ಶನವನ್ನೂ ನೀಡುವ ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳಾದರೂ ಅವಶ್ಯಕವಾದ ಪ್ರಾಥಮಿಕ ಶಿಕ್ಷಣದಲ್ಲಿ ಗೊಂದಲವನ್ನೆಬ್ಬಿಸಿದೆ ಸಮಾಧಾನಕರವಾಗಿ ಯೋಜನೆಯನ್ನು ಕಾರ್ಯಕೃತ ಮಾಡುವುದು ಅಗತ್ಯ. ಹೀಗಾದಲ್ಲಿ ನಿಜೀ ಗಣರಾಜ್ಯ ಸ್ಥಾಪನೆಯ ಧ್ಯೇಯ ಸಾರಯ್ಸುವಲ್ಲಿ ನಾವು ಪ್ರಗತಿಪರ ಹೆಜ್ಜೆಯಿಟ್ಟಂತಾಗುವುದು.

ನೆಹರು ಬಯಸುತ್ತಾರೆ....

ಭೋಪಾಲದ ಕಾಲೇಜೊಂದರಲ್ಲಿ ಭಾಷಣ ಮಾಡುತ್ತ ಪ್ರಧಾನಿ ನೆಹರುರವರು ದೇಶದ ಯುವಕ—ಯುವತಿಯರು ಸಾಹಸ ಶೀಲರೂ ಆದರ್ಶವಾದಿಗಳೂ ಮಹತ್ವಾಕಾಂಕ್ಷೆಗಳೂ ಆಗಬೇಕೆಂದು ಕರೆಯುತ್ತಿದ್ದಾರೆಂದು ವರದಿಗಳು ಬಂದಿವೆ. ನಮ್ಮ ಇಂದಿನ ಯುವಕ—ಯುವತಿಯರಲ್ಲಿ ಸಾಹಸವಿಲ್ಲವೆನ್ನುವಂತಿಲ್ಲ. ಕಾಲೇಜುಗಳ ಮೆಟ್ಟಿಲು ಹತ್ತಿದೊಡನೆಯೇ ಇವರಲ್ಲಿ ಒಂದು ಬಗೆಯ ವಿಲಕ್ಷಣ ಸಾಹಸ ತನ್ನಿಂದ ತಾನಾಗಿಯೇ ಮೂಡುವುದು; ಆದರೆ ಪ್ರಕಟವಾಗುವ ಕ್ರಮವನ್ನು ಕಂಡು ಇದನ್ನು ದುಸ್ಸಾಹಸವೆಂದು ಆಡ್ಡ ಹೆಸರಿನಿಂದ ಕರೆಯುವ ದಾಷ್ಟ್ರ್ಯ ನಮ್ಮ ವರ್ಷದ್ದು. ಹಾಗೆಯೇ ಆದರ್ಶ ವಾದಗಳಿಗೂ ಕೊಡಮೆಯಿಲ್ಲ; ಈ ಆದರ್ಶಗಳೆಲ್ಲವೂ ಕಾಲೇಜಿನ ಮೆಟ್ಟಿಲಿಳಿದು ವಿಶಾಲ ಪ್ರಪಂಚ ಸಾಗರಕ್ಕೆ ದುಮುಕುವಾಗ ತಾವೂ ಮುಳುಗಿ ಬಿಡುವುವು. ಇನ್ನು ಮಹತ್ವಾಕಾಂಕ್ಷೆಯಂತೂ ಇದ್ದೇ ಇದೆ. ಪ್ರಾಣ ದೇಹತ್ಯಾಗ ಮಾಡಿದರೂ ಈ ಮಹತ್ವಾಕಾಂಕ್ಷೆ ಎಂದಿಗೂ ದೂರವಾಗಲಾರದು. ಪಿಶಾಚಿಯಾಗಿ ಕಾಡಿಯೂದರೂ ತನ್ನ ವ್ಯಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುವ ಕೆಲವು ಯುವಕ—ಯುವತಿಯರ ಕಥೆ ಕೇಳುವಾಗ, ಅವರಲ್ಲಿ ಸಾಹಸ, ಆದರ್ಶ, ಮಹತ್ವಾಕಾಂಕ್ಷೆಗಳು ಅವಶ್ಯ ಮುಳ್ಳುರಿಗೊಂಡೇ ಇರಬೇಕೆನ್ನಿಸುತ್ತದೆ. ರಾಷ್ಟ್ರೀಯ ದೃಷ್ಟಿಯಿಂದ ಪ್ರತಿಯೊಂದು ವಸ್ತುವನ್ನೂ ವಿಶೇಷಿಸುವ ಪ್ರಧಾನಿ ನೆಹರುರವರಿಗೆ ಈ ಯುವಕ—ಯುವತಿಯರ ಸಾಕಾರಾದರ್ಶ ಮಹತ್ವಾಕಾಂಕ್ಷೆಗಳು ಶುದ್ಧ ಮರುಳುತನವೆಂದು ಕಂಡು ಬಂದಿರಬೇಕು ಮರುಳಿನಿಂದ ತಗಲದಿರೆ ಮನುಜ ಪೋಲ್ಕದಲಾರನಾದುದರಿಂದ ಯುವಕ—ಯುವತಿಯರ ಪ್ರಕೃತದ ವರ್ತನೆ ಸ್ವಾಭಾವಿಕನೇ ಎನ್ನಬೇಕು. ಆದರೂ ಈ ಕುಚ್ಚು ಸಾಹಸ, ವ್ಯರ್ಥ ಆದರ್ಶವಾದ ಮತ್ತು ಅಧಿಕ ಮಹತ್ವಾಕಾಂಕ್ಷೆಗಳಿಗೊಂದು ಲಗಾಮು ಹಾಕದಿರೆ ನೆಹರು ಮೆಚ್ಚುವರೋ ಏನೋ!

ಸಂಕ್ಷಿಪ್ತ ಸುದ್ದಿಗಳು

ಶ್ರೀ ನಾಗೇಶರು ಲಂಡನ್ನಿಗೆ

ಸಂಧಿಗ್ಧ ಪರಿಸ್ಥಿತಿಯಲ್ಲಿ ಗಡಿರಾಜ್ಯ ಅನಾಮದ ರಾಜ್ಯಪಾಲ ಪದವಿಯನ್ನು ಅಲಂಕರಿಸಿದ ಜ| ಶ್ರೀ ನಾಗೇಶರು ಉತ್ತಮ ಸೈನಿಕರಿರುವಂತೆಯೇ ಆದರ್ಶ ಆಡಳಿತಗಾರರೆಂದು ಹೆಸರು ಪಡೆದಿದ್ದಾರೆ. ಇವರು ಅನಾಮದ ವರಿಷ್ಠರಾದಂದಿನಿಂದ ಉತ್ತರದ ಸೀಮೆಯ ಪರಿಸ್ಥಿತಿಯೇ ಬದಲಾಯಿಸಿಬಿಟ್ಟಿತು. ಸದ್ಯ ಎರಡು ತಿಂಗಳ ರಜೆಯ ಮೇಲೆ ಇರುವ ಇವರು ತನ್ನ ದೇಹಸ್ಥಿತಿಯನ್ನು ಸದಪಡಿಸಿಕೊಳ್ಳಲು ಇಂದೇ ಗಾಗಂದು ಬ್ರಿಟನ್ನಿಗೆ ತೆರಳಿರುವರು. ಇವರ ಅನುಪಮ ಸ್ಥಿತಿಯಲ್ಲಿ ಶ್ರೀ ವಿಷ್ಣು ಸಹಾಯರು ತಾತ್ಕಾಲಿಕ ರಾಜ್ಯಪಾಲರಾಗಿ ನೇಮಿತರಾಗಿಯುವರು.

ಉಂಬ ಜಂಗಮ ಬಂದರೆ...

ಸವದತ್ತಿಯ ಬಸ್ ಸ್ಟೇಂಡ್ ಉದ್ಘಾಟನೆಯನ್ನು ನೂಡಿದ ಮೈಸೂರು ಮುಖ್ಯ ಮಂತ್ರಿ ಜತ್ತಿಯವರು ಎಲ್ಲಮ್ಮನಿಗೆ ಬರುವ ಕಾಣಿಕೆಗಳಿಂದ ಶಾಲೆ ಕಾಲೇಜುಗಳನ್ನು ಸ್ಥಾಪಿಸಿ ಎಲ್ಲಮ್ಮ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಸೂಚಿಸಿದಂತೆ! ದಕ್ಷಿಣ ಕನ್ನಡ ಮತ್ತು ಕೊಡಗುಗಳಲ್ಲಿ ಈಗಾಗಲೇ ಸಾಕಷ್ಟು ಕಾಲೇಜುಗಳು ಇದ್ದು ರಾಜ್ಯದ ಪಶ್ಚಿಮದ ಜಿಲ್ಲೆಗಳಿಗೆ ಒಂದೆರಡಾದರೂ ವಿಶ್ವವಿದ್ಯಾಲಯ ಬೇಕೆಂದು ಕೇಳಿಕೊಂಡಾಗ, ಸರಕಾರ ಅನುಕೂಲ ಮತವೀಯದಿದ್ದುದನ್ನು ಗಮನಿಸಿದರೆ, 'ಉಣ್ಣಾದಲಿಂಗಕ್ಕೆ ಬೋನವ ಹಿಡಿಯೆಂಬರು; ಉಂಬ ಜಂಗಮ ಬಂದರೆ ಹೊಡೆಯೆಂಬರು' ಎಂಬ ವಚನ ನೆನಪಾಗುವುದು.

ಶಿಥಿಲತೆಗಿಂತ ವಿಸರ್ಜನೆ ಲೇಸು

ಕಾಂಗ್ರೆಸ್ ಅಧ್ಯಕ್ಷರು ಸಂಜೀವ ರೆಡ್ಡಿಯವರೂ ಅದರ ಬಗ್ಗೆ, ಕಾಳಜಿ ವಹಿಸುವುದರಲ್ಲಿ ಪ್ರಧಾನಿ ನೆಹರೂ ಒಬ್ಬರು. ನೆಹರೂ ಯಾವುದೇ ಪಕ್ಷದಲ್ಲಿರಲಿ, ಅವರ್ಯಗೆದ್ದು ಬರುತ್ತಾರೆ; ಜತೆಗೆ ಪಕ್ಷವನ್ನೂ ಗೆಲ್ಲಿಸುವ ಜಾದು ಅವರಲ್ಲಿದೆ. ಆದರೆ, ನೆಹರು ಎಂದರೆ ಕಾಂಗ್ರೆಸ್‌ನ ಜೀವನಾಡಿ, ಎಂತಲೇ ಅವರು ತನ್ನ ನಂತರ

ವೂ ಕಾಂಗ್ರೆಸ್ ಸತ್ವಯುತವಾಗಿ ಉಳಿಯಬೇಕೆಂದು ಬಯಸುತ್ತಾರೆ. ಇದಕ್ಕಾಗಿ ಕಾಂಗ್ರೆಸ್ಸು ಒಳಜಗಳಗಳನ್ನು ನಡೆಸಿ ಸ್ವಾರ್ಥ ಸಾಧಕರ ಕೈಗೊಂಬೆಯಾಗಿ ಶಿಥಿಲವಾಗುವುದಕ್ಕಿಂತ ಅದನ್ನು ವಿಸರ್ಜಿಸುವುದು ಶ್ರೇಯಸ್ಕರವೆಂದು ಹೇಳಿದ್ದಾರೆ. ಸ್ವಾತಂತ್ರ್ಯ ಸಿಕ್ಕಿ ಸಮುಹೂರ್ತದಲ್ಲಿಯೇ ಮಹಾತ್ಮಾ ಗಾಂಧಿ ಅಂದಿದ್ದರು— "ಕಾಂಗ್ರೆಸಿನ ಧ್ಯೇಯ ಫಲಿತವು, ಅದನ್ನು ವಿಸರ್ಜಿಸಬೇಕು." ಆದರೆ, ಅಂದದು ಸರಿಯಲ್ಲವೆಂದವರೇ ಇಂದಿಗೆ ಅದೇ ಸರಿ ಎನ್ನುತ್ತಾರೆ!

ಅತಿರೇಕಾಭಿಮಾನ ಬೇಡ

ಅತೋಕ ಮೆಹತಾರು ಪಕ್ಷಗಳನ್ನು ಹುಡುಕಿಕೊಂಡು ಹೋಗುವುದು ಅಪರೂಪ; ಆದರೆ, ಪಕ್ಷನೇ ಅವರನ್ನು ಅರಸುತ್ತದೆ. ಪದ್ಮ ಅವರು ಪ್ರ. ಸ. ಪಾ.ದ ಅಧ್ಯಕ್ಷರಾಗಿದ್ದಾರೆ, ಅದು ಪಕ್ಷಕ್ಕೊಂದು ಅಭಿಮಾನ. ಭಾಷಾವಾರು ರಾಜ್ಯ ನಿರ್ಮಾಣ ಮಾಡಲು ಶ್ರಮಿಸಿದವರ ಇನ್ನೊಂದು ಕರ್ತವ್ಯವನ್ನವರು ಈಗ ತೋರಿಸಿಕೊಟ್ಟಿದ್ದಾರೆ. ದೇಶದಲ್ಲಿ ಎಲ್ಲೆಯೇ ಆಗಲಿ ಭಾಷಾಭಿಮಾನವು ಮಿತಿ ಮೀರದಂತೆ ಇವರು ನೋಡಿಕೊಳ್ಳಬೇಕೆಂಬುದೇ ಈ ಸಲಹೆ ಅಲ್ಲದೆ ಭಾಷಾ ಅಲ್ಪ ಸಂಖ್ಯಾಕರ ಹಿತರಕ್ಷಣೆಯನ್ನು ತಮ್ಮ ಪಕ್ಷ ಮರೆಯಬಾರದೆಂದು ಉಲ್ಲೇಖಿಸಿದರು. ಕಾಂಗ್ರೆಸ್ ಪಕ್ಷದಲ್ಲಿದ್ದಿದ್ದರೆ, ಅದೆಂದೋ ಮಂತ್ರಿಪದವಿಗಡರು ತಿದ್ದ ಮೆಹತಾರ ನೀತಿ ಉದಾರವಿರುವಂತೆಯೇ ಹೃದಯವು ವಿಶಾಲವಿದೆ.

ಅಧಿಕಾರಿಗಳ ಗೊಂಬೆಯಾಟ!

ಮಕ್ಕಳು ಗೊಂಬೆಯನ್ನು ಮಗುವೆಂದು ಭ್ರಮಿಸಿ ಆಟವಾಡುವುದಕ್ಕೂ ಕಾಲ ಮಿತಿಯೊಂದಿದೆ. ಆದರೆ, ಅಧಿಕಾರ ಸಂಪನ್ನರು ಯಾವಾಗಲೂ ಗೊಂಬೆಯಾಟವಾಡುತ್ತ ಇರುತ್ತಾರೆ! ಬಂಟ್ವಾಳದಲ್ಲಿ ನೇರಿದ ಶೈಕ್ಷಣಿಕ ಸಮ್ಮೇಳನದಲ್ಲಿ ಒಂದೇ ಪ್ರಾಥಮಿಕ ಶಾಲೆಯಲ್ಲಿ ಮೂರು ತರದ ಗಂಟೆ ಬಾರಿಸುವ ಕ್ರಮ ಅಸಾಕರ್ಯವೆಂದೂ ಅದನ್ನು ಹೋಗಲಾಡಿಸಬೇಕೆಂದೂ ತೋಡಿಕೊಂಡಾಗ ಅಧ್ಯಕ್ಷಸ್ಥಾನದಿಂದ ಶ್ರೀ ಎನ್. ಆರ್. ಹೀರೇಮಠರೂ ಇದೇ ರೀತಿಯ ಗೊಂಬೆಯಾಟವನ್ನು ಆಡಿದರಂತೆ. ಪ್ರಾರ್ಥಮಿಕ ಅಧ್ಯಾಪಕರು ಸ್ವತಂತ್ರರು. ಪಾಠದ ಅವಧಿಯು ತುಸು ಹೆಚ್ಚು ಕಡಿಮೆಯಾದರೂ ತೊಂದರೆಯಿಲ್ಲ; ಗಂಟೆ ಬಾರಿಸುವ ಆಗತ್ಯವೇ ಇಲ್ಲ ಎಂದರಂತೆ. ಆಗ, ಇನ್ಸ್ಪೆಕ್ಟರರು ಬಂದಾಗ ಹೀಗಾದರೆ ಕಾಲ ನಿಯಮಿಕ ಪಟ್ಟಿಯನ್ನು ಕಟ್ಟು ನಿಟ್ಟಾಗಿ ಏಕೆ ಅನುಸರಿಸಿಲ್ಲ ಎಂದು ಗದರಿಸುವರೆಂದಾಗ, ಹಿಂದಿನ ಇನ್ಸ್ಪೆಕ್ಟರರು ಜೋರು ಮಾಡಿರಬಹುದು, ಇಂದಿನವರಲ್ಲ ಎಂದು ನಗೆಯಾಟ ಆಡಿದರಂತೆ!

ಭದ್ರತಾ ಮಂಡಳದಲ್ಲಿ ಸ್ಥಾನ

ಭಾರತದಲ್ಲಿ ನೆಹರು, ಘಾನಾದಲ್ಲಿ ನ್ಕ್ರುಮಾ ಆದ್ವಿತೀಯ ನಾಯಕರು. ಇವರ ಕಣ್ಣು ಮುಂದೆ ತಂತಮ್ಮ ದೇಶವೇ ಕುಣಿಯುತ್ತಿರುತ್ತದೆ; ಎಂತಲೇ ದೇಶದಲ್ಲಿ ಇವರ ಪ್ರತಿ ಮಾತಿಗೂ ಬೆಲೆಯುಳಿದಿದೆ. ಭದ್ರತಾಮಂಡಳದಲ್ಲಿ ಇಂದು ಸದಸ್ಯ ರಾಷ್ಟ್ರಗಳ ಸಂಖ್ಯೆ ಕಚ್ಚಿಸಬೇಕೆಂಬ ವಿಧಾಯಕ ಸೂಚನೆಯನ್ನು ಹಲವು ರಾಷ್ಟ್ರಗಳು ಮುಂದೂಡಿದ್ದರೂ ಇವರಲ್ಲಿ ಭಾರತಕ್ಕೆ ಸ್ಥಾನ ಕೊಡಬೇಕೆಂದು ನುಕ್ರುಮಾರವರ ವಾದ. ಒಳ್ಳೆಯವರು ಒಳ್ಳೆಯ ವಿಚಾರವನ್ನೇ ಹೊರಗೆಡಹುತ್ತಾರೆ; ಆದರೆ, ಅದರ ಒಳ್ಳೆಯತನವನ್ನು ಗ್ರಹಿಸುವ ಶಕ್ತಿ ಇತರರಲ್ಲಿ ಇರಬೇಕು, ಅಷ್ಟೆ.

ಕ್ರುಶ್ಚೇವರ ಸಿಂಹಾಸನಕ್ಕೆ ಕಂಪನ?

ಸೋವಿಯತ್ ರಶ್ಯದಲ್ಲಿ ಅಧಿಕಾರಕ್ಕಾಗಿ ನಡೆಯುವ ಒಳಜಗಳ ಕಣ್ಣಿಗೆ ಕಾಣದು; ಇತರೆಡೆ ಕಾಣುವುದು. ಮೆಲಂಕೋವರನ್ನು ಗದ್ದುಗೆಯಿಂದ ಕೆತ್ತುಹಾಕಿ ಕ್ರುಶ್ಚೇವರು ಪ್ರಧಾನಿಯಾಗಿ ಅವರಿಗಿಂತ ಹೆಚ್ಚು ಕಾಲ ಉಳಿದಿರುವುದಾದರೆ, ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿತನವನ್ನು ತಾವೇ ಉಳಿಸಿಕೊಂಡುದು ಕಾರಣ ವಿಯನ್ನಾನಲ್ಲಿ, ಕ್ರುಶ್ಚೇವರು ಪದಚ್ಯುತಿ ಹೊಂದಿ ಮರಳಿ ಮಲಂಕೋವರು ಪ್ರಧಾನಿಯಾದರೆಂಬ ವಾರ್ತೆ ಹರಡಿ ಗೊಂದಲವೇಳತೇನೋ ನಿಜ; ಆದರೆ, ನೋಸ್ಕೊದಲ್ಲಿ ಕ್ರುಶ್ಚೇವರು ಇನ್ನೂ ಪ್ರಧಾನಿಯಾಗಿಯೇ ಉಳಿದಿದ್ದಾರೆ ಇಲಿಯಾದ ರೂ ಓಡದೆ ಹುಲಿಯೋಡಿದ ವಾರ್ತೆ ಹುಟ್ಟಿಲಾರದು ಪ್ರಾಯಃ ಒಳಗಿಂಜೊಳಗೆ ಮರಳಿ ಅಧಿಕಾರಕ್ಕಾಗಿ ಹೋರಾಟ ಪ್ರಚ್ಛನ್ನವಾಗಿ ನಡೆಯುತ್ತಿರಬಹುದು.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ— ವತಿಯಿಂದ ಪೈಕೂರು ಹಿಂದೀ ಪ್ರಚಾರ ಪರಿಷತ್ತಿನ ಆಗಸ್ಟ್ ೬೦ ರ ಪರೀಕ್ಷೆಗಳಿಗೆ ಕುಳಿತ ವಿದ್ಯಾರ್ಥಿಗಳು ಪ್ರಥಮದ ಮಧ್ಯಮ ಮತ್ತು ಪ್ರವೇಶಗಳಲ್ಲಿ ನೂರಕ್ಕೆ ನೂರರಷ್ಟು, ಉತ್ತಮಾ (ಡಿಪ್ಲೊಮಾ) ದಲ್ಲಿ ನೂರಕ್ಕೆ ೯೦ರಷ್ಟು ಮತ್ತು ಹಿಂದೀ ರತ್ನ ಉಪಾಧಿ ಪರೀಕ್ಷೆಯಲ್ಲಿ ನೂರಕ್ಕೆ ೮೭ ಜನರಷ್ಟು ಉತ್ತೀರ್ಣರಾಗಿರುತ್ತಾರೆ. ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ನೂಮ್ಯತೆಪಡೆದ ಈ ಪರೀಕ್ಷೆಗಳಿಗೆ ಉಡುಪಿಯಿಂದ ಒಟ್ಟು ೫೩ ವಿದ್ಯಾರ್ಥಿಗಳು ಕುಳಿತಿದ್ದರು. ನುಂದಿನ ಪರೀಕ್ಷೆಗಳು ಫೆಬ್ರವರಿ ೬೧ಕ್ಕೆ ಜರಗಲಿರುವುವು.

ಎ. ಬಿ. ಸೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಎಫೇರ್ಸ್— ಇದರ ಉದ್ಘಾಟನೆಯು ಕಳೆದ ತಾ. 31ರಂದು ನುಂಗಂಕೂಡಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಸೂಂಜ ಸಭಾ ಸದಸದಲ್ಲಿ ಶ್ರೀ ಸಿ. ಎಸ್. ತಿನ್ನಪ್ಪ ಸೆಟ್ಟಿಯಿಂದ ನೆರವೇರಿಸಲ್ಪಟ್ಟಿತು. ಪ್ರಸ್ತಾವನಾ ಭಾಷಣ ಕರ್ತರಾದ ಶ್ರೀ ಪಿ. ಶ್ರೀಧರ ಹೆಗ್ಡೆ, ಸೀನಿಯರ್ ಸೈಂಟಿಫಿಕ್ ಆಫೀಸರ್, ಆರ್ಮೆಮೆಂಟ್ ಸ್ಟಡೀಸ್ ಕರ್ಕಿ, ಪೂನಾ ಇವರು ದಿವಂಗತ ಎ. ಬಿ. ಸೆಟ್ಟರ ಜೀವನದಿಂದ ತಾನು ಕಲಿತ ಹಲವಾರು ವಿಷಯುಗಳನ್ನು ಹೇಳಿ ತಮ್ಮ ಇಂಗ್ಲೆಂಡ್ ಪ್ರವಾಸದ ಅನುಭವಗಳನ್ನು ವಿವರಿಸಿದರು ಆರಂಭದಲ್ಲಿ ಶ್ರೀ ರವೀಂದ್ರ ಹೆಗ್ಡೆಯವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಕೆ. ಉಗ್ಗಪ್ಪ ಸೆಟ್ಟಿ ಧನ್ಯವಾದಗಳನ್ನರ್ಪಿಸಿದರು. ಅದೇ ದಿನ ಸಂಜೆ ಎಸ್. ಆರ್ ಎಸ್, ಹೋಮಿನ ಕಮಿಟಿಯ ಸಭೆಯು ಅಧ್ಯಕ್ಷೆ ಶ್ರೀ ಕೆ. ಜಿ. ಭಂಡಾರಿಯವರ ನೇತೃತ್ವದಲ್ಲಿ ನೆರವೇರಿತು

ಅನಾವರಣ ಸಮಾರಂಭ— ಇದೇ ತಾ. ೭ರಂದು ಉಡುಪಿ ವಿಕ್ಟೋರಿಯ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಲಕ್ಷ್ಮೀನಾರಾಯಣ ರಾಯರೆ ಭವನ ಚಿತ್ರವನ್ನು ಶ್ರೀ ಜಿ. ಸೋಮಶೇಖರ ರಾಯರು ಡಾ। ಕೆ. ಎಲ್ ಏತಾಳರ ಅಧ್ಯಕ್ಷತೆಯಲ್ಲಿ ಅನಾವರಣ ಮಾಡಿ ಅತಿಥಿಗಳಿಗೆ ಸಾಮಾದಿ ಸೇವೆಯನ್ನು ಪ್ರಾರಂಭಿಸಿದರು. ಡಾ। ಟಿ. ಎಂ. ಎ. ಪೈ, ಎಂ. ಡಿ. ಕಾಮತ್, ಶ್ರೀ ಜಿ. ಎಸ್. ನಾಗಶೇತಿ, ಡಾ. ಟಿ. ಎನ್. ಕಣ್ಣನ್ ನಂಬಿಯೂರ್ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಡಾ। ಪಿ. ಆರ್. ನಾಯಕರು ಕೃತಜ್ಞತೆಗಳನ್ನರ್ಪಿಸಿದರು. ಅದೇ ದಿನ ಉಡುಪಿ ರೋಟರಿ ಮತ್ತು ಲಾಯನ್ಸ್ ಕ್ಲಬ್ಬಿನ ಸದಸ್ಯರಿಗೂ ವಿಕ್ಟೋರಿಯೂ ಜುಬಿಲಿ ಯೂನಿಯನ್ ಕ್ಲಬ್ಬಿನ ಮೆಂಬರರಿಗೂ ಇತರ ಮಿತ್ರರಿಗೂ ಡಾ। ಪಿ. ಆರ್. ನಾಯಕರು ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು ಭೋಜನಾನಂತರ ಡಾ। ಸುಂದರಂರಾಮ್ ಮೆನೋರಿಯಲ್ ರಿಂಗಮಂಟಪದಲ್ಲಿ ಕುಮಾರಿ ನಿಜಯ ಲಕ್ಷ್ಮೀಯವರ ಉತ್ತಮ ನೃತ್ಯಪ್ರದರ್ಶನವು ನಡೆಯಿತು. ಅಂತ್ಯದಲ್ಲಿ ಡಾ: ನಾಯಕರು ಆಭಾರ ಸೂಚಿಸಿದರು.

ಉಪಾಹಾರ ಸತ್ಕಾರ— ಶ್ರೀ ಪಡುಬಿದ್ರಿ ಹೊಸಮನೆ ವಿಠಲ ಸೆಟ್ಟರು ತಮ್ಮ ಪುತ್ರಿ ಸಾ। ಸೌಧಾಮಿನಿ ಮತ್ತು ಶ್ರೀ ಪೆರಾರ ಬ್ಯಾಣಬೆಟ್ಟು ಪತೇಲ್ ಶ್ರೀ ಕಾಂತಪ್ಪ ಸೇಮಿತರ ಪುತ್ರ ಶ್ರೀ ವಿಶ್ವನಾಥ ಸೇಮಿತ ಬಿ. ಕೋಂ., ಬಿ. ಎಲ್. ಇವರ ತಾ. ೮೦ಕ್ಕೆ ಜರಗಿದ ವಿವಾಹ ಮಹೋತ್ಸವದ ಸಲುವಾಗಿ ತಾ. ೫ನೇ ಸಂಜೆ ಉಡುಪಿ ಜಳಕಾಡಿನ ತಮ್ಮ ಮನೆಯಲ್ಲಿ ಉಪಾಹಾರ ಸತ್ಕಾರ ಕೂಟ ಒಂದನ್ನು ಏರ್ಪಡಿಸಿದ್ದರು.

ತಾಲೂಕು ಬೋರ್ಡು ಸದಸ್ಯರ ಸಮ್ಮೇಲನ—ಇದೇ ತಾ. ೬ರಂದು ಮೂಡಬಿದ್ರಿ ಸಮೂಜ ಮಂದಿರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಬೋರ್ಡು ನಗರ ಸಭೆ ಪಟ್ಟಣ ಸಭೆ ಮತ್ತು ಪಂಚಾಯತುಗಳ ಸದಸ್ಯರ ಸಮ್ಮೇಲನವೊಂದು ಜಿಲ್ಲಾ ಕಾಂಗ್ರೆಸ್ಸಿನ ಆಧ್ಯಕ್ಷ ಶ್ರೀ ಟಿ. ಎ ಪೈಗಳ ಆಧ್ಯಕ್ಷತೆಯಲ್ಲಿ ಮೈಸೂರು ರಾಜ್ಯದ ಸ್ಥಳೀಯ ಆಡಳಿತ ಹಾಗೂ ಕಾನೂನು ಮಂತ್ರಿಗಳಾದ ಶ್ರೀ ಟಿ. ಸುಬ್ರಹ್ಮಣ್ಯ ಬಿ. ಎ. ಬಿ. ಎಲ್. ಇವರಿಂದ ಉದ್ಘಾಟನೆಗೊಳ್ಳಲ್ಪಟ್ಟಿತು. ಸ್ವಾಗತ ಸಮಿತಿಯ ಆಧ್ಯಕ್ಷ ಶ್ರೀ ಯಸ್. ಬಿ ಸಾಮ್ರಾಜ್ಯರು ಸ್ವಾಗತಿಸುತ್ತಾ ಜಿಲ್ಲೆಯ ಹಲವು ಸಮಸ್ಯೆಗಳನ್ನು ವಿವರಿಸಿದರು. ಶ್ರೀ ಟಿ. ಎ. ಪೈಗಳ ಪ. ಕ. ಜಿಲ್ಲೆಯ ತಾಲೂಕು ಬೋರ್ಡುಗಳು ಸಮಸ್ಯೆಗಳೇನೆಂಬುದನ್ನೂ ಈಗಿನ ತಾಲೂಕು ಬೋರ್ಡು ಕಾನೂನಿನಲ್ಲಿ ಹೆಲವು ಮಾರ್ಪಾಟುಗಳು ಬೇಕಾಗಬಹುದೆಂದೂ ಹೇಳಿ ಸಮ್ಮೇಲನ ಉದ್ಘಾಟಿಸುವಂತೆ ಮಂತ್ರಿಗಳನ್ನು ಕೇಳಿಕೊಂಡರು. ಮಂತ್ರಿಗಳು ಸಮ್ಮೇಲನವನ್ನು ಉದ್ಘಾಟಿಸುತ್ತಾ ತಾಲೂಕು ಬೋರ್ಡುಗಳಿಹೊಡೆ, ಹಣದ ಅನುಕೂಲತೆ,ಮೊದಲಾದುವನ್ನು ವಿವರಿಸಿ ತಾಲೂಕು ಬೋರ್ಡು ಆಕ್ಟಿನಲ್ಲಿ ಜೋಸಗಳಿದ್ದಲ್ಲಿ ಬದಲಾಯಿಸಿಕೊಳ್ಳಬಹುದೆಂದೂ ಕಾನೂನು ವೇದವಾಕ್ಯವೇನೂ ಅಲ್ಲವೆಂದೂ ಹೇಳಿದರು. ಅಂತ್ಯದಲ್ಲಿ ಶ್ರೀ ಎಸ್. ಧರ್ಮ ಸಾಮ್ರಾಜ್ಯನವರು ಧನ್ಯವಾದಗಳನ್ನರ್ಪಿಸಿದರು ಸ್ವಾಗತ ಸಮಿತಿಯವರು ಭೋಜನದ ವ್ಯವಸ್ಥೆ ಮಾಡಿದ್ದರು.

ರಾಷ್ಟ್ರೀಯ ಹೊಸ ಸಹಕಾರಿ ಸಪ್ತಾಹ— ಮಂಗಳೂರಿನ ಎಸ್. ಸಿ. ಸಿ. ಬೇಂಕಿನ ಸಭಾಮಂದಿರದಲ್ಲಿ ತಾ ೨ರಂದು ಜಿಲ್ಲಾ ಕಾಂಗ್ರೆಸ್ ಆಧ್ಯಕ್ಷ ಶ್ರೀ ಟಿ. ಎ. ಪೈಗಳ ಆಧ್ಯಕ್ಷತೆಯಲ್ಲಿ ಜರಗಿದ ರಾಷ್ಟ್ರೀಯ ಸಹಕಾರಿ ಸಪ್ತಾಹದ ಉದ್ಘಾಟನೆಯನ್ನು ನಗರ ಸಭಾಪತಿ ಮಣೇಲ್ ಶ್ರೀನಿವಾಸ ನಾಯಕರು ನೆರವೇರಿಸಿದರು. ಪ್ರಾರಂಭದಲ್ಲಿ ಶ್ರೀ ಎಂ ಎನ್. ಟೌಟರು ಸ್ವಾಗತಿಸಿದರು ಕೊನೆಯಲ್ಲಿ ಶ್ರೀ ಕೆ. ವಿಶ್ವನಾಥ ಕಾಮತರು ಆಭಾರ ಸೂಚಿಸಿದರು.

ಸುಬ್ರಹ್ಮಣ್ಯ— ನುಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಇದೇ ತಾ. ೧೫ರಿಂದ ೨೬ರ ವರೆಗೆ ಪೂರ್ವ ಶಿಸ್ಟ ಸಂಪ್ರದಾಯದಂತೆ ಉತ್ಸವಾದಿಗಳು ನೆನೆವೇರುವುವೆ. ಚಂಪಾಷಷ್ಠಿ ಮಹಾ ರಥೋತ್ಸವವು ತಾ. ೨೪ರಂದು ನೆರವೇರುವುದು. ಭಕ್ತಾದಿಗಳು ಬಂದು ಗದಿಪ್ರಸಾದ ಸ್ವೀಕರಿಸ ಬೇಕಾಗಿ ಆಡಳಿತ ಮಂಡಳಿಯವರು ಅಪೇಕ್ಷಿಸುತ್ತಾರೆ.

ಕುಂದಾಪರದಲ್ಲಿ ಪದ್ಮಶ್ರೀ ಡಾ. ನೋಡಿಯವರ ದನರ್ಮಾಥ್ರ ನೇತ್ರ ಚಿಕಿತ್ಸಾ ತಿಬಿರವು ಬರುವ ದಶಂಬರ ತಿಂಗಳಲ್ಲಿ ನಡೆಯಲಿರುವುದೆಂದೂ ಖ್ಯಾರಂಭದ ತಾರೀಕನ್ನು ಮುಂದಿನಿಂದ ಪ್ರಕಟಿಸಲಾಗುವುದೆಂದೂ ಹೆಚ್ಚಿನ ವಿವರಗಳನ್ನು ಶ್ರೀ ಕೆ. ಗಣಪತಿ ಶೆಟ್ಟಿ, ಪ್ರೆಸಿಡೆಂಟ್, ಟೌನ್ ಪಂಚಾಯತ್ ಕುಂದಾಪುರ ಇವರಿಂದ ತಿಳಿಯಬಹುದೆಂದೂ ಶಿಬಿರಕ್ಕಾಗಿ ಪ್ರಯತ್ನಿಸಿದ ಟೌನ್ ಪಂಚಾಯತ್ ಅಧ್ಯಕ್ಷರು ತಿಳಿಸುತ್ತಾರೆ.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಆನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ವಿಶಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟಿಮಾರಾ (ಅನು: ಕು ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅಧ್ಯಪ್ಪಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಹಾಮ್ಯೋನಿಯನ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು ನವ್ಯಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P.ಮಾಡುವುದಿಲ್ಲ. ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಪರಿಚಯ

ಕುಶಲ ಕ್ರೀಡಾಪಟು--ಶ್ರೀ ವಿಜಯ ಹಜಾರೆ

ನುರಿತ ಕ್ರಿಕೆಟ್ ಆಟಗಾರರೆಂದು ಕಳೆದ ಇಪ್ಪತ್ತೈದು ವರ್ಷಗಳಿಂದ ಪ್ರಸಿದ್ಧರಾದ ಹಜಾರೆಯವರು ಪಾಕಿಸ್ತಾನದೊಡನೆ ಆಡಹೋಗುವ ಭಾರತೀಯ ಕ್ರಿಕೆಟ್ ದಳದ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ.

ಪಾಕಿಸ್ತಾನದೊಡನೆ 'ಟೆಸ್ಟ್‌ಮ್ಯಾಚ್' ಆಡಲು ತೆರಳುವ ಭಾರತೀಯ ಆಟಗಾರರ ತಂಡದ ಕಪ್ತಾನರಾಗಿ ಚುನಾಯಿತರಾದ ಶ್ರೀ ವಿಜಯ ಹಜಾರೆಯವರ ಹೆಸರನ್ನು ಎಲ್ಲ ಕ್ರೀಡಾಪ್ರೇಮಿಗಳೂ ಬಲ್ಲರು. ಹಜಾರೆಯವರು ಕಳೆದ ೩೫ ವರ್ಷಗಳಲ್ಲಿ ಭಾರತವಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ನುರಿತ ಆಟಗಾರರೆಂದು ಸನ್ಮಾನಿತರಾಗಿದ್ದಾರೆ. ಆಟಗಾರರ ನಾಯಕ ಪದಕ್ಕೆ ಶ್ರೀ ಹಜಾರೆಯವರನ್ನು ಆರಿಸಿದುದಿಂದ ಕ್ರಿಕೆಟ್ ಆಟಗಾರರು ಸಂತೋಷಗೊಂಡರೆನ್ನಬಹುದು.

ಸಾರ್ವಜನಿಕ ಸಭೆ–ಸಮಾರಂಭಗಳು, ವಿವಿಧ ಪದವಿಗಳು, ಚುನಾವಣೆಗಳು ಮೊದಲಾದುವುಗಳಿಂದ ದೂರವಿರುವುದೆನ್ನೇ ಶ್ರೀ ಹಜಾರೆ ಮೆಚ್ಚುತ್ತಾರೆ. ಕ್ರಿಕೆಟ್ ಕ್ಷೇತ್ರದಲ್ಲಿ ಸರ್ವಾಸ್ತ್ರ ಪ್ರಸಿದ್ಧಿಯನ್ನು ಪಡೆದ ಇವರು ಈಗಲೂ ೩೫ ವರುಷಗಳಿಗೆ ಮೊದಲಿದ್ದಷ್ಟೆ ಸಂಕೋಚಶೀಲ ಸ್ವಭಾವವನ್ನು ಪ್ರದರ್ಶಿಸುತ್ತಾರೆ. ಇವರ ಬಳಿ ಕೈಮುಗಿದು ಬಂದ ವ್ಯಾಕ್ತಿಮತ್ತು ಸಾಧ್ಯಸ್ಥಗಳು ಅವರಲ್ಲಿ ನೊದಲೇ ಅವಾಸ ಮಾಡಿಕೊಂಡಿದ್ದ ವಿನಮ್ರತೆಯನ್ನು ಬಡಿದೋಡಿಸಲಿಲ್ಲ. ಅವರು ವಿನಮ್ರಂಗಿರುವಂತೆಯೇ ನಿರ್ಭೀತ ವ್ಯಕ್ತಿಯೂಗಿದ್ದಾರೆ ಅನೇಕ ಟೆಸ್ಟ್ ಮ್ಯಾಚುಗಳಲ್ಲಿ ವಿಕಟ ಪರಿಸ್ಥಿತಿಗಳು ಪಲಿದೋರಿದ್ದರೂ ಇವರು ತಮ್ಮ ಮನಸ್ಸಿನ ಸ್ಥೈರ್ಯವನ್ನು ಕಳೆದುಕೊಳ್ಳಲಿಲ್ಲ. ಸಂಕಟದ ಸಂದರ್ಭದಲ್ಲಿ ಸ್ಥೈರ್ಯದೊಡನೆ ಕೈತೊಳೆನುಕೊಳ್ಳದೆ ಸಹನಾಪೂರ್ವಕವಾಗಿ ಪ್ರತಿಪಕ್ಷಿಯರನ್ನು ಎದುರಿಸುವ ಪೌರುಷವನ್ನಿತ್ತರು. ಇಂತಹ ಸಂದರ್ಭಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಪ್ರದರ್ಶಿಸಿದರು.

ಕುಶಲ ಕ್ರೀಡಾಪಟುಗಳಲ್ಲಿ ಶ್ರೀ ವಿಜಯ ಹಜಾರೆಯವರು. ಗಣನೀಯರು. ಆಸ್ಟ್ರೇಲಿಯಾದೊಡನಾದ ಟೆಸ್ಟ್ ಮೇಚಿನಲ್ಲಿ ಇವರು ಎರಡು ಶತಕಗಳನ್ನು ಗಳಿಸಿದ್ದರು. ಇದರಲ್ಲಿಯೇ ಎರಡನೆಯ ಪಾಳಿಯಲ್ಲಿ ಭಾರತೀಯ ದಳವು ೨೨೭ ಓಟಗಳನ್ನು ಗಳಿಸಿದ್ದು ಇವುಗಳಲ್ಲಿ ೧೫೫ ಓಟಗಳನ್ನು ಶ್ರೀ ಹಜಾರೆಯವರೊಬ್ಬರೇ ಸಂಪಾದಿಸಿದ್ದರು.

೧೯೫೯ರಲ್ಲಿ ಶ್ರೀ ಹಜಾರೆಯವರು ಮಹಾರಾಷ್ಟ್ರದ ರಣಜೀಟ್ರೊಫೀ ಮ್ಯಾಚುಗಳಲ್ಲಿ ಸೊಕ್ತಮೊದಲಿಗೆ ಕ್ರಿಕೆಟ್ ಕ್ರೀಡಾಂಗಣದಲ್ಲಿ ಪಾದಾರ್ಪಣೆ ಮಾಡಿದರು. ಆನಂತರ ಮಧ್ಯಭಾರತದ ಕಡೆಯಿಂದ ಆಡತೊಡಗಿದರು. ೧೯೫೯ರಲ್ಲಿ ಮಹಾರಾಷ್ಟ್ರದ ದಳದಲ್ಲಿ ಸೇರಿಕೊಂಡರು. ಶ್ರೀ ಹಜಾರೆಯವರ ನಾಯಕತ್ವದಲ್ಲೇ ಮಹಾರಾಷ್ಟ್ರವು ಮೊದಲನೆಯ ಬಾರಿಗೆ ರಣಜೀಟ್ರೊಫೀಯಲ್ಲಿ ವಿಜಯಶಾಲಿಯಾಯಿತು. ಇದಾದ ಕೆಲವೇ ಸಮಯದಲ್ಲಿ ಇವರು ಮಹಾರಾಷ್ಟ್ರ ಸಕ್ರವನ್ನು ಬಿಟ್ಟು ಬರೋಡಾ ಪಕ್ಷದಲ್ಲಿ ಸಮ್ಮಿಲಿತರಾದರು.

೧೯೫೯ರಲ್ಲಿ ಶ್ರೀ ವಿಜಯ ಹಜಾರೆ ಲಂಕೇಶಯರ್ ಲೀಗ್‌ನ ರಾಟನ್ ಸ್ಟೋಲ್ ಕ್ರಿಕೆಟ್ ಕ್ಲಬ್‌ನ ಕಡೆಯಿಂದ ಆಡಲು ಒಪ್ಪಂದಬಡಿಕೆಗೆ ಹಸ್ತಾಕ್ಷರ ಹಾಕಿದರು. ೧೯೬೦ ರಲ್ಲಿ ಈ ಆಟವಾಡಲು ಲಂಡನ್‌ಗೂ ಪಯಣಿಸಿದರು.

ಎಂ. ಸಿ. ಸಿ. ಟೀಮಿನ ವಿರುದ್ಧವಾಗಿ ೧೯೫೯ರಲ್ಲಿ ನಡೆದ ಟೆಸ್ಟ್ ಮ್ಯಾಚುಗಳಲ್ಲಿ ಭಾರತೀಯ ದಳದ ಧುರೀಣತ್ವವನ್ನಿವರು ವಹಿಸಿಕೊಂಡರು. ಮುಂದಿನ ವರ್ಷ ಇಂಗ್ಲೆಂಡಿನ ವಿರುದ್ಧವಾಗಿ ಮ್ಯಾಚುಗಳು ಜರಗಿದಾಗಲೂ ಇವರೇ ಭಾರತೀಯ ಕ್ರೀಡಾಪಟುಗಳ ನಾಯಕತನವನ್ನು ಹೊತ್ತುಕೊಂಡರು.

೧೯೫೯ನೆಯ ಮಾರ್ಚಿ ೧೫ರಂದು ಶ್ರೀ ವಿಜಯ ಹಜಾರೆ ಜನಿಸಿದರು. ಸಾಂಗಲಿಯು ಇವರ ಜನ್ಮ ಭೂಮಿ. ಈ ವರ್ಷ ಪ್ರಜಾರಾಜ್ಯೋತ್ಸವದ ಸಂದರ್ಭದಲ್ಲಿ ರಾಷ್ಟ್ರಪತಿಯವರು ಶ್ರೀ ಹಜಾರೆಯವರಿಗೆ 'ಪದ್ಮವಿಭೂಷಣ' ಪದವಿಯನ್ನು ಕೊಟ್ಟು ಭಾರತೀಯರ ಪರವಾಗಿ ಸಮ್ಮಾನಿಸಿದ್ದಾರೆ.



ಮೇಲಿನ ಚಿತ್ರದಲ್ಲಿ ಸೂರತಗಡನೆಂಬಲ್ಲಿ ಕಾಲುವೆಯಲ್ಲಿ ನೀರು ಹರಿದು ಬರುತ್ತಿರುವುದನ್ನೂ ಕೆಳಗಿನ ಚಿತ್ರದಲ್ಲಿ ಸಂಬಳಪುರನೆಂಬ ಒಣ ಭೂಮಿಯಲ್ಲಿ ಇಂದು ರೈತರು ಉತ್ಸಾಹದಿಂದ ದುಡಿಯುತ್ತಿರುವುದನ್ನೂ ಕಾಣಬಹುದು.

ವಿನೋದ ವಿಹಾರ

ನಕ್ಕು ನಗಿಸುವ ನುಡಿ ಲೇಸು

ಶ್ರೀ ಕೆ. ರಮೇಶ ಪೈ

ಪ್ರಾಕ್ಟಿಕಲ್ ಟೀಚಿಂಗ್

ಸೆಕೆಗಾಲ: ಮೇಷ್ಟ್ರು ಸುಬ್ಬ ಕ್ಲಾಸಿನಲ್ಲಿ ನೆಬೆ ತಾಳಲಾರದೆ ಕೋಟು ಗಿಟುಕಳಚಿ ಕುರ್ಚಿಯಲ್ಲಿ ಒರಗಿದ್ದ! ಅನಿರೀಕ್ಷಿತವಾಗಿ, ಸುಬ್ಬನ ಗ್ರಹಚಾರಕ್ಕೆ ಸರಿಯಾಗಿ ಇನ್‌ಸ್ಪೆಕ್ಟರ್ ಸಾಹೇಬರು ಕ್ಲಾಸಿನೊಳಕ್ಕೆ ಬಂದರು ಅಷ್ಟರಲ್ಲೆ ಸುಬ್ಬ ಮಕ್ಕಳೊಡನೆ– "ನೋಡಿ, ಇದು ಬೆನ್ನೆಲುಬು, ಇಲ್ಲಿಂದ ಲೇ ನಮ್ಮ ಮೂಳೆರ ಹೊರಡುತ್ತೆ." ಎಂದು ಪಾಠಹೇಳುತ ಮೂಡಿದ "ನೋಡಿ ಗೂಡ್. ಯೂ ಆರ್ ಟೀಚಿಂಗ್ ವೆರಿ ಪ್ರಾಕ್ಟಿಕಲೀ, ಎಂದರು ಇನ್‌ಸ್ಪೆಕ್ಟರ್ ಸಾಹೇಬರು.

ಪರಿಚಯವಿಲ್ಲ

ಟೀ—"ನಿನ್ನ ತಂದೆಗೆ, ನಾನು ೧೦೦೦ ರೂ. ಕೊಟ್ಟು, ಅವರು ತಿಂಗಳಿಗೆ ೧೦೦ ರಂತೆ ಹಿಂದೆ ಕೊಡುತ್ತ ಬಂದರೆ ಯಾವಾಗ ನನ್ನ ಹಣ ನನಗೆ ಹಿಂದೆ ಬರುತ್ತದೆ?"

ಸುಬ್ಬ—"ಇಲ್ಲ, ಹಿಂದೆ ಬರುವದಿಲ್ಲ ಸಾರ್."

ಟೀಚರ್—"ನಿನಗೆ ಲೆಕ್ಕದ ಪರಿಚಯವಿಲ್ಲ."

ಸು— "ನಮಗೆ ನನ್ನ ತಂದೆಯ ಪರಿಚಯವಿಲ್ಲ ಸಾ....ರ್."

ಹೋಟೆಲು ಮಾಲಿಕರ ದುಃಸ್ಥಿತಿ.

ಸುಬ್ಬ ಹೋಟೆಲಿಗೊಮ್ಮೆ ಹೋಗಿದ್ದ. ಮ್ಹಾಲಿಕರು ಕುಳಿತುಕೊಳ್ಳುವಲ್ಲಿ ದೊಡ್ಡ ಬೋರ್ಡೊಂದು ತೂಗ ಹಾಕಲ್ಪಟ್ಟಿತ್ತು. ಸುಬ್ಬ ಅದನ್ನು ಓದಿದ. ಅದರಲ್ಲಿ ಈ ರೀತಿ ಬರೆದಿದ್ದ ಆ ಮ್ಹಾಲಕ.

"ಬಂಧುಗಳೇ,

ಈ ಹೋಟೆಲಲ್ಲಿ ಕಾಫಿ ಕುಡಿದು ಕಡ ಮಾಡಕೂಡದು. ಎಷ್ಟೋ ಜನರು ಸರಾಗ ಕಾಫಿ ಕುಡಿದು ಆನಂತರ ದುಡ್ಡಿಲ್ಲ, ತರಲಿಲ್ಲವೆಂದು ನೆಪ ಹೇಳಿ ಜ್ಯಾರಿ ಕೊಳ್ಳುತ್ತಾರೆ. ಅದಕ್ಕಾಗಿ ಮ್ಹಾಲಿಕ ಮಂಡಲಿಯು ಮೊನ್ನೆ ಅವಸರದ ಸಭೆ ಸೇರಿ ಇದನ್ನು ತಡೆಯುವರೆ ಯತ್ನಿಸಿತು. ಅದು ಹೇಗತೇನೆಂದರೆ:—ದುಡ್ಡು ಕೊಡದ ಇಂತಹವರನ್ನು ತಡೆಹಿಡಿದು ಅವರ ಕೈಲಿ ಕೊಡಪಾನವೊಂದನ್ನು ಕೊಟ್ಟು ಆಣೆಗಾರು ಕೊಡ ಪಾನವೆಂಬಂತೆ, ಹತ್ತಿರದ ಬಾವಿಯಿಂದ ನೀರು ತಂದು ಈ ಬ್ರಹತ್ ಪಾತ್ರೆಗೆ ಸುರಿಸುವಂತೆ ಮಾಡಬೇಕೆಂದಾಯಿತು. ಆದರೆ ಮೊನ್ನೆ ಮೊನ್ನೆ ಒಬ್ಬನ ಇಂಥಹದೇ ತಪ್ಪಿಗಾಗಿ, ಅವನ ಬಳಿ ಕೊಡಪಾನವಿತ್ತು- ಆಚ್ಚೆ ಕೊಟ್ಟೆವು. ಆದರೆ, ದುರ್ದೈವಕ್ಕೆ ನಮ್ಮ ಕೊಡಪಾನ ನಮಗೆ ಹಿಂದಕ್ಕೆ ಬರಲಿಲ್ಲ!

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

ಸಂಸ್ಮರಣೆ

ನೆಹರು ಮೂಡಿದ ವಿಕಟಾಟ್ಟಹಾಸ

ಸ್ವಾಭಾವಿಕ ಹಸನ್ಮುಖಿಯಾದ ಪಂಡಿತ ಜವಾಹರರು ಅಟ್ಟಹಾಸ ಮೂಡಿದುದನ್ನು ಹೆಚ್ಚಿನವರು ಕಂಡಿರಲಾರರು. ೧೯೪೫ನೆಯ ಇಸವಿಯಲ್ಲಿ ನಡೆದ ಒಂದು ಘಟನೆಯಲ್ಲಿ ಇವರು ಅತಿಹರ್ಷಿತರಾದುದಕ್ಕೆ! ಈ ಸನ್ನಿವೇಶದ ಶಬ್ದಚಿತ್ರವನ್ನು ಇಲ್ಲಿ ನೋಡಿರಿ.

೧೯೪೫ನೆಯ ಜುಲಾಯಿ ಪೂರ್ವಾರ್ಧ್ಯದಲ್ಲಿ ನಡೆದ ಘಟನೆಯಿದು. ಕೆಲವೇ ತಿಂಗಳಿಗೆ ಮೊದಲು ದ್ವಿತೀಯ ಜಾಗತಿಕ ಸಮರ ಮೊದಲಾಗಿತ್ತು. ಸರಕಾರದೊಡನೆ ಯುದ್ಧದ ಉದ್ದೇಶಗಳನ್ನು ಘೋಷಿಸಬೇಕೆಂದು ಕೇಳಿಕೊಳ್ಳಲು ಪೂನಾದಲ್ಲಿ ಎ. ಐ. ಸಿ. ಸಿ.ಯ ಸಭೆ ಕರೆಯಲಾಗಿತ್ತು. ಆದರ ಜಪೆಯಲ್ಲಿಯೇ ದೇಶೀ ರಾಜ್ಯ ಲೋಕ ಪರಿಷತ್ತನ್ನೂ ಅಲ್ಲಿಯೇ ಆಡೇ ಸಮಯದಲ್ಲಿ ಏರ್ಪಡಿಸಲಾಗಿತ್ತು. ಆ ಸಮಯದಲ್ಲಿ ಅದರ ಅಧ್ಯಕ್ಷರಾಗಿದ್ದ ಪಂ. ಜವಾಹರಲಾಲ ನೆಹರು ಹಾಗೂ ಮತ್ತಿತರ ಕಾಂಗ್ರೆಸ್ ಶಕ್ತಿಯ ಪದಾಧಿಕಾರಿಗಳ ಉಪಸ್ಥಿತಿಗೂ ಇದರಿಂದ ಅನುಕೂಲವಾಗಿತ್ತು. ಜುಲಾಯಿ ೨೮, ೨೯ರಲ್ಲಿ ಎ. ಐ. ಸಿ. ಸಿ. ಮತ್ತು ೩೦ರಂದು ದೇಶೀ ರಾಜ್ಯ ಲೋಕ ಪರಿಷತ್ತು ಸೇರಿರಬೇಕು. ಇವು ಪೂನಾದ ತಿಲಕ ಮಂದಿರದಲ್ಲಿ ಏರ್ಪಟ್ಟಿದ್ದುವು. ಲೋಕ ಪರಿಷತ್ತಿಗೆ ಆ ಆಧಿವೇಶನದಲ್ಲಿ ಸ್ಥಾಯಿ ಸಮಿತಿಯ ಕಾರ್ಯಕರ್ತರು ನೂತ್ರವಲ್ಲ ಪ್ರತಿಯೊಂದು ಪ್ರಜಾಮಂಡಳದಿಂದಲೂ ಒಂದೆರಡು ಪ್ರತಿನಿಧಿಗಳನ್ನೂ ಕಳಿಯಲಾಗಿತ್ತು. ಇದರಿಂದಾಗಿ ಆ ದಿನ ಪ್ರಾಯಃ ಎಲ್ಲ ದೇಶೀ ರಾಜ್ಯಗಳಿಂದ ಬಂದಿರುವ ಕಾರ್ಯಕರ್ತರು ಗುಂಪು ಸೇರಿದ್ದರು.

ಭರತಪುರ ರಾಜ್ಯ ಪ್ರಜಾ ಪರಿಷತ್ತಿನ ವತಿಯಿಂದ ನಾನು ಮತ್ತು ಶ್ರೀ ಸಂ. ರೇವತೀಶರಣ ಶರ್ಮಾ ಇದರಲ್ಲಿ ಭಾಗವಹಿಸಿದೆವು. ಪೂನಾದಲ್ಲಿ ಕಚ್ಚಿನ ದೇಶೀ ರಾಜ್ಯ ಕಾರ್ಯಕರ್ತರಿಗೆ ಒಂದು ವಿಶಾಲ ಭವನದಲ್ಲಿ ಉಳಕೊಳ್ಳುವ ವ್ಯವಸ್ಥೆ ಮಾಡಿದ್ದುದರಿಂದ, ಇವರಿಗೆ ಪರಸ್ಪರ ಪರಿಚಯ ಮಾಡಿಕೊಳ್ಳುವ ಅವಕಾಶ ಲಭಿಸಿತು. ಇದೇ ಸಮಯದಲ್ಲಿ ಗಢವಾಲದ ಉತ್ಸಾಹಿ ಯುವಕ ಸ್ವರ್ಗೀಯ ದೇವ ಸುಮನ ರೊಡನೆ ನನಗೆ ಪರಿಚಯವಾಯಿತು.

ಮೊದಲನೆರಡು ದಿನಗಳವರೆಗೆ

ಎ. ಐ. ಸಿ. ಸಿ. ಯ ಸಭೆ ಜರಗಿತು. ಮೂರನೆಯದಿನ ಆ. ಭಾ. ದೇಶೀ ರಾಜ್ಯ ಲೋಕ ಪರಿಷತ್ತು ಸೇರಿತು. ಇದರಲ್ಲಿ ಸುಮಾರು ೩೦೦ ಪ್ರತಿನಿಧಿಗಳೂ ಅಷ್ಟೇ ಸಂಖ್ಯೆಯ ಪ್ರೇಕ್ಷಕರೂ ಭಾಗವಹಿಸಿದ್ದರು. ದಿವಂಗತ ಸೇಠ್ ಜಮುನ್‌ಲಾಲ ಬಜಾಜ ಹಾಗೂ ಒಂಧಿನ ಯುವರಾಜರು ಇವರಲ್ಲಿ ವಿಶಿಷ್ಟ ವ್ಯಕ್ತಿಗಳು. ಶ್ರೀ ಬಜಾಜರು ಲೋಕ ಪರಿಷತ್ತಿನ ಹಣದ ಆಥಾವವನ್ನು ಹೋಗಲಾಡಿಸುವಂತೆ ವಿನಂತಿಸಿದರು. ಪಂ. ನೆಹರುರವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಆತಿ ಸೂಕ್ಷ್ಮಾಕ್ಷರಗಳಿಂದ ಬರೆದಿದ್ದ ಅಂಜೆ ಕಾರ್ಡ್ ರೂ. ಲಂಚಕ್ಕೆ ಏಲಂನಲ್ಲಿ ದೂರ ಹೋಗಿತ್ತು. ಆ ಸಮಯದಲ್ಲಿ ಒಂಧಿನಲ್ಲಿ ತುಸು ರಾಜ್ಯ ಸುಧಾರಣೆ ಜಾರಿಗಿತ್ತು. ಜನತೆಯಿಂದ ಚುನಾಯಿತ ದಿವಾನರಾದ ಆ ಬ್ಲಿನ ಯುವರಾಜರು ನೆಹರುಗಳನ್ನು ಸ್ವ ರಾಜ್ಯಕ್ಕೆ ಕರೆದುಕೊಂಡು ಹೋಗಿ ಆ ಸುಧಾರಣೆಗಳನ್ನು ತೋರಿಸ ಬಯಸುತಿದ್ದರು.

ಅನೇಕ ದೇಶೀರಾಜ್ಯಗಳಲ್ಲಿ ಪ್ರಜಾಮಂಡಲಪ್ರಜಾಪರಿಷತ್ತು ಹೊದಲಾದುವು ಅಗಾಗಲೇ ಸ್ಥಾಪಿತವಾಗಿದ್ದುದರಿಂದ ಅಲ್ಲಿನ ಕಾರ್ಯಕರ್ತರು ಮತ್ತು ಪ್ರಶಾಸನಾಧಿಕಾರಿಗಳನಡುವೆ ಆಗಾಗ ಘರ್ಷಣೆಯೇಳುವುದು ಸ್ವಾಭಾವಿಕವಾಗಿಯೇ ಇತ್ತು. ಕೆಲವೊಮ್ಮೆ ಇದು ಉಗ್ರರೂಪವನ್ನು ಪಡೆಯುತಿತ್ತು. ಒಂದೆಡೆ ತಮ್ಮ ಸ್ವತ್ವವನ್ನು ಉಳಿಸಿಕೊಳ್ಳಲು ಗಂಡೋಲಸ ನಡೆಯುತಿದ್ದರೆ ಸುತ್ತೊಂದೆಡೆ ಜನತ್ವವನ್ನು ಮೆಟ್ಟಿ ಹಾಕಲು ಪ್ರಯತ್ನ ನಾಗುತಿತ್ತು. ಆದುದರಿಂದ ಅಲ್ಲಿಗೆ ಆಗಮಿಸಿದ್ದ ಪ್ರತಿ ಪ್ರತಿನಿಧಿಯೂ ತನ್ನ ರಾಜ್ಯದಿಂದ ಒಂದೊಂದು ಸಮಸ್ಯೆಯನ್ನೇ ಹಿಡಿದುಕೊಂಡು ಬಂದು ಅದರ ಪರಿಹಾರಕ್ಕೆ ಸಲಹೆ ಹಾಗೂ ಮುಂದಿನ ಮಾರ್ಗದರ್ಶನವನ್ನು ನೆರೆದಿರುವ ನಾಯಕರಿಂದಲೇ ಪಡೆಯಬಯಸಿದ್ದರು. ಸಮಯಾಭಾವದಿಂದ ಇದು ಅಸಾಧ್ಯವೆನಿಸವಂತಿತ್ತು. ಆಂತ್ಯದಲ್ಲಿ ಪ್ರತಿ ರಾಜ್ಯದ ಬಗ್ಗೆ ಇಡಿ ಪ್ರಾದೇಶಿಕ ಸಂಘಟನೆಯಕುರಿತಾಗಿ ಒಬ್ಬೊಬ್ಬರು ವಿಚಾರ ಪ್ರಕಟಗೊಳಿಸಬೇಕು; ಇದರಲ್ಲಿ ಎಲ್ಲಾ ಸಂಬಂಧಿತ ರಾಜ್ಯಗಳ ಸಮಸ್ಯೆಗಳ ಮೇಲೆ ಸಂಕ್ಷೇಪವಾಗಿ ದೃಷ್ಟಿಪಾತ ಹರಿಸಬೇಕೆಂದು ನಿರ್ಣಯವಾಯಿತು.

ಈ ಪ್ರಕಾರ ರಾಜಸ್ಥಾನದ ಎಲ್ಲ ರಾಜ್ಯಗಳ ಕುರಿತಾಗಿ ಪೂರ್ತನಾಡುವ ಭಾರವನ್ನು ನನಗೆ ಒಪ್ಪಿಸಿದರು. ನಾನು ಕ್ರಮವಾಗಿ ಜಯಪುರ, ಜೋಧಪುರ, ಉದಯಪುರ ಮೊದಲಾದ ಕೆಲವು ರಾಜ್ಯಗಳಿಗೆ ಸಂಬಂಧಿಸಿದ, ಆ ಕಾಲಕ್ಕೆ ವಿಶೇಷವಾದ ಮಹತ್ವಪೂರ್ಣ ಘಟನೆಗಳನ್ನು ಉಲ್ಲೇಖಿಸುತ್ತ ಅಂತ್ಯದಲ್ಲಿ ಭರತಪುರದ ಪರಿಸ್ಥಿತಿಯ ಮೇಲೆ ಸ್ಫುರಾಶ ಬೀರಲು ಆರಂಭಿಸಿದೆ. ಇಲ್ಲಿ ಸ್ವಲ್ಪ ಸಮಯಕ್ಕೆ ಮೊದಲು ರಾಷ್ಟ್ರೀಯ ಧ್ವಜದ ಪ್ರಶ್ನೆಯ ಮೇಲೆ ಪ್ರಜಾಪರಿಷತ್ತು ಮತ್ತು ರಾಜ್ಯ ಸರಕಾರಗಳ ನಡುವೆ ತುಸು ಜೊಯ್‌ಕಯ್ ನಡೆದಿತ್ತು. ಕೆಲವೊಮ್ಮೆ ಇದೇ ಬಿಳಿದ, ಭೀಷಣ ರೂಪವನ್ನೂ ಪಡೆಯುತಿತ್ತು; ಈ ಬಗ್ಗೆ ನಾನು ವಿಶೇಷ ಮಾತನಾಡಲು ಇಚ್ಛಿಸುತಿದ್ದೆ. ಆದರಿಂದ ಧ್ವಜ ಸಂಬಂಧೀ ಘಟನೆಯನ್ನು ವಿಸ್ತಾರವಾಗಿ ಹೇಳುವುದು ಉಚಿತವೆಂದುಕೊಂಡೆ. ಒಂಭತ್ತು ತಿಂಗಳುಗಳ ಭೀಷಣ ಘೋರಣೆಯ ಬಳಕ ೨೪-೧೨-೪೯ರಂದು ಪ್ರಜಾಪರಿಷತ್ತು ಮತ್ತು ರಾಜ್ಯ ಸರಕಾರಗಳ ನಡುವೆ ಸಂಧಾನಪೂರ್ಣ ಒಡಂಬಡಿಕೆಯು ನಡೆದು, ಪ್ರಜಾಪರಿಷತ್ತು ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ನಿರ್ಬಾಧವಾಗಿ ಉಪಯೋಗಿಸಬಹುದೆಂದಾದರೂ ಕೆಲಕಾಲಾನಂತರ ರಾಜ್ಯ ಸರಕಾರವು ಇದಕ್ಕೆ ವಿಘ್ನತಂದೊಡ್ಡಿತು. ಆ ಸಮಯದ ದಿವಾನ ಸರ್ ಬಿಜಾರ್ಡ್ ಟಾಟನ್ ಹಮ್ಫ್‌ರಿ ಒಂದು ಆದೇಶವನ್ನು ಹೊರಡಿಸಿ, ರಾಜ್ಯದಲ್ಲಿ ಸೇನೆ, ಪೋಲೀಸ್, ದೇವಾಲಯಗಳು ಹಾಗೂ ಮಹಾರಾಜರ ಖಾಸಗಿ ಧ್ವಜಗಳ ಹೊರತು ಬೇರೆ ಯಾವುದನ್ನೂ ಸಾರ್ವಜನಿಕ ರೂಪದಲ್ಲಿ ಹಾರಿಸಬಾರದೆಂದು ವಿಧಿಸಿದರು. ಪ್ರಜಾಪರಿಷತ್ತು ತನ್ನ ಕಾರ್ಯಾಲಯದಲ್ಲಿ ಹಾಗೂ ಸಾರ್ವಜನಿಕ ಸಭಾ ಸಂದರ್ಭಗಳಲ್ಲಿ ತ್ರಿವರ್ಣ ಧ್ವಜವನ್ನು ಉಪಯೋಗಿಸಬಾರದೆಂದೇ ಈ ಆದೇಶದ ಸ್ಪಷ್ಟಾರ್ಥ. ಈ ನಿರಂಕುಶತೆಯಿಂದ ಕಾರ್ಯಕರ್ತರಲ್ಲಿ ಸ್ವಲ್ಪ ರೋಷ ಹಾಗೂ ಕ್ಷೋಭೆಗಳು ತಲೆದೋರಿದುದು ಸ್ವಾಭಾವಿಕವಾಗಿತ್ತು; ಆದುದರಿಂದ ರಾಜ್ಯಸಂಕಾರದೊಡನೆ ಈ ಸಂಬಂಧ ಪತ್ರವ್ಯವಸಡುತ್ತಾ ತೊಡಗಿತು. ಇದರ ಪರಿಣಾಮ ಸ್ವರೂಪವಾಗಿ, ಮಹಾರಾಜರು ತಮ್ಮ ಅಂಗರಕ್ಷಕರಿಂದ ಪ್ರಯೋಗಿಸಲ್ಪಡುವ ಎರಡು ತ್ರಿಕೋಣ ಭಾಗಗಳಲ್ಲಿ ವಿಭಜಿತವಾದ ಒಂದು ಬಣ್ಣಬಣ್ಣದ ಧ್ವಜವನ್ನು ಪ್ರಜಾಪರಿಷತ್ತಿಗೆ ಕಳಿಸಿಕೊಟ್ಟರು. ನಾವು ಇದನ್ನು ಸ್ವೀಕರಿಸಲು ಸಂಪೂರ್ಣವಾಗಿ ನಿರಾಕರಿಸಿದೆವು.

ಈ ಘಟನೆಯನ್ನು ಉಲ್ಲೇಖಿಸುತ್ತ ನಾನು ಎರಡು ಬೆಳುಗಳನ್ನು ಎತ್ತಿ ಸಾಂಕೇತಿಕವಾಗಿ, "ತ್ರಿವರ್ಣಧ್ವಜದ ಬದಲಿಗೆ ರಾಜ್ಯಕರಕಾರವು ನನಗೆ ಈ ಪ್ರಕಾರದ 'ಜೂಡೀಯಾರಪೈಜಾಮಾ' ವನ್ನು ಧ್ವಜವೆಂದುಕೊಟ್ಟಿದೆ" ಎಂದೊಡನೆಯೇ ಎಲ್ಲ ಶ್ರೋತರೊಡನೆ ಆಧ್ಯಕ್ಷ ಸ್ಥಾನದಲ್ಲಿ ವಿರಾಜಿಸುತಿದ್ದ ಪಂಡಿತ ಜವಾಹರಲಾಲ ನೆಹರು ಕೂಡ ಸ್ಫೋಟಿಸಿದ ನಕ್ಕು ಬಿಟ್ಟರು. ನಗುವ ಭರದಲ್ಲಿ ಅವರು ಮುಂಡಿಸಿದ್ದ ಕುಚ್ಚಿಯೂ ಬಹುಕಾಲ ಕಂಪಿಸುತಿತ್ತು! ನೆಹರುರವರು ಇಷ್ಟೊಂದು ಗಟ್ಟಿಯಾಗಿ ನಕ್ಕುದನ್ನು ತಾವೇ ಮೊದಲು ನೋಡಿದ್ದಿಲ್ಲ ವೆಂದು ಜನರಾಡಿಕೊಳ್ಳುತಿದ್ದರು. ಅವರ ಆ ಅಟ್ಟಹಾಸದ ಸ್ಮರಣೆ ಈಗ, ೨೦ ವರ್ಷಗಳ ನಂತರವೂ ನನ್ನ ಮನೋಪಟಲದಲ್ಲಿ ಅಚ್ಚಳಿಯದೆ ಅಂಕಿತವಾಗಿದೆ!

(ಶ್ರೀ ಯುಗಲಕಿಶೋರ ಚತುರ್ವೇದಿಯವರ ಒಂದು ಸಂಸ್ಮರಣೆ)

ಶಾಲೆಗಳಿಗೆ ಬೇಕಾಗುವ
ಯೂನಪತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ಮನೆಯಿಂದಾದಲ್ಲಿ ಇರಲೇಬೇಕಾದ ಗೃಹನೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಸುಸಂಯಾರ್ಡರು ಕೂಡಿದರೆ ಪುಸ್ತಕಗಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ನಿಗರ್ಸ್ಯರಿ ನನಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಅನುಭವ

ಮನೆಯಲ್ಲಿ ಕಾಣದ ಸಂಮಾನ

ಭಾರತದಲ್ಲಿಲ್ಲದ ಕೆಲವೊಂದು ವಿಶೇಷತೆಗಳು ವಿದೇಶಗಳಲ್ಲಿವೆ. ಅವುಗಳನ್ನು ನಮ್ಮಲ್ಲೂ ಒದಗಿಸಿದರೆ, ಜನತೆಗೆ ಉಪಕಾರವಾಗುವುದು; ಆದೆಷ್ಟೋ ಜನರ ಸಮಯವೂ ಉಳಿತಾಯವಾಗುವುದು.

ಲಂಡನ್ನಿನ ರಸ್ತೆಗಳು ಬಹಳಷ್ಟು ಅಗಲವಿರುವುದಾದರೂ ಯುರೋಪಿನ ಬೇರೆ ನಗರಗಳಷ್ಟು ಸುಂದರವಾಗಿಲ್ಲ. ಪ್ಯಾರಿಸಿನ ಸೌಂದರ್ಯವು ಲಂಡನ್ ಸೌಂದರ್ಯಕ್ಕಿಂತ ನಾವಿರಪಟ್ಟು ಹೆಚ್ಚಿದೆ. ಬರ್ಲಿನ್ ನಗರದ ರಸ್ತೆಗಳಷ್ಟು ಸೌಂದರ್ಯಯುಕ್ತ ಮಾರ್ಗಗಳು ಇಡಿ ಯುರೋಪಿನಲ್ಲಿ ದುರ್ಲಭ. ಪ್ಯಾರಿಸಿನ ರಸ್ತೆಗಳು ನಡುವೆ ಅಲ್ಲಲ್ಲಿ ಮರಗಳನ್ನು ನಾಟಿರುವುದರಿಂದ ವಿಭಜಿತವಾಗುವಂತಿವೆ. ಆದರೆ, ಬರ್ಲಿನಿನದಲ್ಲಿ ನಡುವೆ ಕಾರಂಜಿ, ಪುಟ್ಟ ಹುಲ್ಲು ಹೂತೋಟಗಳಿರುವುದರಿಂದ ಮತ್ತಷ್ಟು ಶೋಭನೀಯವೆನಿಸುತ್ತವೆ. ಯಾತ್ರಿಕರ ಮನೋರಂಜನೆಗೆ ಹಾಗೂ ಆಕರ್ಷಣೆಗೆ ಇವು ಕಾರಣವಾಗುತ್ತವೆ. ಇವುಗಳ ನಡುವೆ ಬೆಂಚುಗಳೂ ಇರುತ್ತವೆ; ಯಾತ್ರಿಕರು ಆರಾಮವಾಗಿ ತ್ರಾಸವನ್ನು ತಿಳಿಸಿಕೊಳ್ಳುವುದು ಸಾಧ್ಯವಿವೆ.

ಇಂಗ್ಲೆಂಡಿನ ಪ್ರಮುಖ ಬೀದಿಗಳ ನಡುವೆ ಸೊಂಟೆತ್ತರದ ಬೇಲಿಗಳನ್ನು ಹಾಕಿರುತ್ತಾರೆ. ಇದರ ಒಂದೆ ಏನೆಂದರೆ ಜನರು ಬೇಕಾಬಿಟ್ಟಿ ಬಂದೆಲ್ಲೆ ಮತ್ತೊಂದು ಬಾಲಿಕ್ಕಿ. ಇದರಿಂದ ವಾಹನಗಳು ಬರುವಾಗ ಅಪಾಯ ಸಂಭವಿಸುವುದಿಲ್ಲ; ಅರ್ಧಾ ಬೇಕು ಎಮರು ಗಡಿಬಿಡಿಯವರ ಕಣ್ಣು ಕೋರೈಸುವುದಿಲ್ಲ. ಈ ವ್ಯವಸ್ಥೆಯು ವಾಹನ ಚಾಲಕರಿಗೆ ಮಾತ್ರವಲ್ಲ, ದಾರಿಹೋಕರಿಗೆಗೂ ಉಪಯುಕ್ತವಾಗಿದೆ.

ನಾಲ್ಕಾರು ರಸ್ತೆಗಳು ಒಂದುಸೇರುವಲ್ಲಿ ಲಂಡನ್ ನಗರದಲ್ಲಿ ದಾರಿಹೋಕರಿಗೆ ದಾಟಲು ಕೆಲವು ವ್ಯವಸ್ಥೆಗಳಿವೆ. ಸಂದಿಸ್ಥಳಗಳಲ್ಲಿ ರಸ್ತೆಯು ಬಿಳಿಯ ವರ್ಣಗಳಿಂದ ಪ್ರತ್ಯೇಕಿಸಿರುತ್ತದೆ. ಈ ಬಿಳಿ ಬಣ್ಣದ ಭಾಗದಲ್ಲಿ ರಸ್ತೆಯನ್ನು ದಾಟಬೇಕು. ಆಗ ವಾಹನಗಳು ಬಂದು ಪ್ರಯಾಣಿಕರಿಗೇನಾದರೂ ಆಘಾತವಾದರೆ, ಇದರ ಹೊಣೆಜವಾಬ್ದಾರಿ ವಾಹನಚಾಲಕನ ತಲೆಯಮೇಲೆ ಬೀಳುವುದು. ಆದರೆ, ಈ ದಾಟುವ ಗಟ್ಟೆಪನ್ನು ಬಿಟ್ಟು ಇತರೆಡೆಯಲ್ಲಿ ರಸ್ತೆ ದಾಟಲು ಪ್ರಯತ್ನ ಮಾಡಿದರೆ, ಆಗ ದುರ್ಘಟನೆ ಸಂಭವಿಸಿದರೆ, ಇದರ ಹೊಣೆ ಯಾತ್ರಿಕರ ಮೇಲೆಯೇ ಸರಿ. ಈ ದಾಟುವ ದಾರಿಯನ್ನು ಎಗಡು ಗಡ ಅಗಲವಾಗಿ ಬಿಳಿ ಬಣ್ಣದಿಂದ ಪ್ರತ್ಯೇಕಿಸುತ್ತಾರೆ. ಈ ಬಿಳಿ ಗೆಟ್ಟಾದರೂ ಐದಂಗುಲ ಅಗಲವಿದೆ.

ಲಂಡನ್ ನಗರದಲ್ಲಿ ಪಾದಚಾರಿಗಳಿಗೆ ಒಂದು ಅಧಿಕಾರವಿದೆ. ನೀವು ರಸ್ತೆ ಕೂಡುವಲ್ಲಿ ನಿಂತುಕೊಂಡು ನೋಡುತ್ತೀರಿ, ಮಾರ್ಗದಲ್ಲಿ ಒಂದೇ ಸಹಸ್ರ ವಾಹನಗಳು ಓಡಾಡುತ್ತಿವೆ; ದಾಟಲ್ಲು ಉಪಾಯವಿಲ್ಲ; ಆದರೆ, ನಿಮಗೆ ಅವಶ್ಯ ರಸ್ತೆ ದಾಟು ಮಾಡಬೇಕಾಗಿದೆ ಎಂದಿಟ್ಟು ಕೊಳ್ಳಿ, ಆಗ ನೀವೇನು ಮಾಡಬೇಕು ಗೊತ್ತೆ? ನಿಮ್ಮ ಕಕ್ಷದಲ್ಲಿಯೇ ಒಂದು ಕಂಬವಿದೆ; ಅದರಲ್ಲೊಂದು ಗುಬ್ಬಿಯಿದೆ. ಅದನ್ನು ಒತ್ತಿಬಿಡಿರಿ, ತತ್‌ಕ್ಷಣ ಕೆಂಪು ದೀಪ ಆಗುವುದು. ಆಗ ಪಥಸೂದರ್ಶಕನು ವಾಹನಗಳನ್ನು ನಿಲ್ಲಿಸಿ ನಿಮಗೆ ನುಸುಮುರಿಯಲು ಆಜ್ಞೆಯಿಯಿತ್ತಾನೆ. ಲಂಡನ್ ಜನತೆಗೆ ದೊರೆತಿರುವ ಈ ಪ್ರಕ್ಕನ್ನು ಆವರು ಎಂದಿಗೂ ದುರುಪಯೋಗ ಪಡಿಸುವುದಿಲ್ಲ. ಇದು ವರೆಗೆ ದುರುಪಯೋಗವಾಗುತಿದ್ದರೆ, ಈ ಸುವ್ಯವಸ್ಥೆಯನ್ನು ಎಂದೋ ನಿಲ್ಲಿಸಿಬಿಡಬೇಕಾಗಿತ್ತು. ನಗರದ ಕೆಲವೊಂದು ಕೂಡುದಾರಿಗಳಲ್ಲಿ ಈ ವ್ಯವಸ್ಥೆಯಿದೆ. 'ನಮ್ಮ ಐದು ತಿಂಗಳ ಲಂಡನ್ ಮೊಕ್ಕಾಂನಲ್ಲಿ ಯಾರೂ ಈ ಸೌಲಭ್ಯವನ್ನು ಉಪಯೋಗ ಮಾಡಿದ್ದಿಸ್ಸು ಕಾಣಲಿಲ್ಲ' ಎಂದೊಬ್ಬರು ಸಂಚಾರಾನುಭವಿಗಳು ಬರೆದಿದ್ದಾರೆ.

ಭಾರತದಂತೆಯೇ ಇಂಗ್ಲೆಂಡಿನಲ್ಲಿಯೂ ಜನತೆ ಅಂಚೆಕಟ್ಟೆಯಲ್ಲಿ ರಕ್ಷಣಾಖಾತೆಯನ್ನು ತೆರೆಯುತ್ತಾರೆ. ಇವರಿಗೆ 'ಪಾಸ್ ಬುಕ್' ದೊರೆಯುತ್ತದೆ; ಬಡ್ಡಿ ಸಿಗುತ್ತದೆ. ಆದರೆ, ನಮ್ಮ ಪ್ರಥಮ ಹಾಗೂ ದ್ವಿತೀಯ ಯೋಜನಾವಧಿಯಲ್ಲೂ ದೊರೆಯದಿರುವ ಕೆಲವು ಸೌಕರ್ಯಗಳು ಇಂಗ್ಲಿಷ್ ಜನತೆಗೆ ಲಭಿಸುತ್ತವೆ.

ಜನತೆಯು ಹಣವನ್ನುಳಿಸಿ ಸರಕಾರಕ್ಕೆ ನಾಲಲೂಪದಲ್ಲಿ ಕೊಡಬೇಕೆಂದು ಭಾರತ ಸರಕಾರದ ಆಪೇಕ್ಷೆ. ಇದಕ್ಕಾಗಿ ಬಹಳ ಆಂದೋಲನವೂ ನಡೆಯುತ್ತಿದೆ. ಅಂಚೆ ಮನೆಯಲ್ಲಿ ಬೇಂಕಿಗೆ ಕಟ್ಟಿದ ಹಣವನ್ನೂ ಸರಕಾರ ಸಾಲವೆಂದು ತಿಳಿಯುತ್ತದೆ. ಆದರೆ, ಇಂಗ್ಲೆಂಡಿನಲ್ಲಿ ಜನತೆಗೆ ದೊರೆಯುತ್ತಿರುವ ಸೌಲಭ್ಯವನ್ನು ನಮ್ಮ ದೇಶದಲ್ಲಿಯೂ ಸರಕಾರ ಒದಗಿಸುವುದರಿಂದ ಅದು ಜನಪ್ರಿಯವಾಗುವುದು; ಮಾತ್ರವಲ್ಲ ಜನರು ಅಧಿಕಾಧಿಕ ರೂಪಾಯಿಯನ್ನು ತೇವು ಮಾಡುವರು.

ಇಂಗ್ಲೆಂಡಿನಲ್ಲಿ ೫೦,೦೦೦ ಅಂಚೆಮನೆಗಳಿವೆ. ಅಲ್ಲಿ ಈ ಅಂಚೆ ಮನೆಗಳಲ್ಲಿ ನಿಮ್ಮ ಲೆಕ್ಕ ಯಾವುದೇ ಒಂದರಲ್ಲಿರಬಹುದು;; ಆದಕ್ಕೆ ಎಲ್ಲಾ ಅಂಚೆ ಮನೆಗಳ ಮೂಲಕ ಹಣ ಜಮೆ ಮಾಡಬಹುದು ಮತ್ತು ಹಾಗೆಯೇ ಎಲ್ಲಿಂದಲೂ ಹಣ ತೆಗೆಯಬಹುದು. ಭಾರತದಲ್ಲಾದರೂ ಲೆಕ್ಕನಿರುವಲ್ಲಿ ಮಾತ್ರ ನಿಮ್ಮ ವ್ಯವಹಾರ! ಪಾಸು ಬುಕ್ಕೊಂದನ್ನು ತೋರಿಸಿ ನಿಮಗೆ ಬೇಕಾದ ಹಣವನ್ನು ಬೇಕಾದಲ್ಲಿ ಕೊಡುವ ವ್ಯವಸ್ಥೆಯಿದ್ದರೆ, ನಮ್ಮಲ್ಲಿ ಬೇಂಕುಗಳಿಗಿಂತ ಅಂಚೆ ಮನೆಗಳು ಈ ಬಗ್ಗೆ ಉಪಯುಕ್ತವಾಗುವುದು. ಪಾಸು ಬುಕ್ಕನ್ನು ನಿನ್ನೊಡನೆ ಹಿಡಿದುಕೊಂಡು ಇಡಿ ದೇಶದಲ್ಲಿಸಂಚರಿಸುವಾಗ,ಆಗತ್ಯಬಿದ್ದಾಗ ನೀವಿರುವ ಊರಿನ ಅಂಚೆ ಮನೆಯಿಂದ ಹಣ ಪಡೆಯಬಹುದು. ಅಲ್ಲಿ ದಿನಕ್ಕೆ ಐದು ಪೌಂಡನ್ನು ತೆಗೆಯಬಹುದು. ಇದಕ್ಕಿಂತ ಹೆಚ್ಚು ತೆಗೆಯಬೇಕಾದರೆ, ನೋಟೀಸು ಕೊಡಬೇಕಾಗುವುದು. ಪ್ರತಿ ದಿನವೂ ಐವೈದು ಪೌಂಡುಗಳನ್ನು ತೆಗೆದು ನಿಮ್ಮ ಆವಶ್ಯಕತೆಯನ್ನು ಪೂರಯ್ಸಿಕೊಳ್ಳಬಹುದು.

ಅಲ್ಲಿನ ಅಂಚೆ ಮನೆಗಳಲ್ಲಿ ಚಿಕ್ಕುಗಳನ್ನೂ ನೀವು ಜಮೆಮಾಡಬಹುದು. ನಿಮಗೆ ದೊರೆತಿರುವ ಚಿಕ್ಕನ್ನು ಇಲ್ಲಿ ವಟಾಯಿಸಬಹುದು. ಆದರೆ, ಭಾರತದಲ್ಲಿ ನಗದಿ ರೂಪಾಯಿಗಳ ವ್ಯವಹಾರ ಮಾತ್ರ ಇರುವುದು. ಡ್ರಾಫ್ಟುಗಳನ್ನೂ ಸ್ವೀಕರಿಸುವುದಿಲ್ಲ. ಹಣ ಮುರಿಗೆ ಪಡೆಯುವುದಕ್ಕಾದರೂ ಅಲ್ಲಿ ಕೇವಲ ಎರಡೇ ನಿಮಿಟುಗಳು ತಗಲುವುವು. ಈ ವ್ಯವಸ್ಥೆ ನಮ್ಮ ಅಂಚೆ ಮನೆಗಳಲ್ಲೂ ಬಂದಿತೆಂದರೆ, ಬೇಂಕುಗಳಿಗಿಂತ ಅಂಚೆಮನೆಗಳು 'ಸೇವಿಂಗ್ಸ್ ಬೇಂಕ್' ಪ್ರೀತಿ ಪಾತ್ರವಾಗುವುದು.

ಜನತೆಯ ಸೌಕರ್ಯಕ್ಕಾಗಿ ಯುರೋಪಿನ ದೇಶಗಳಲ್ಲಿ ಅನೇಕ ಕಾರ್ಯಗಳು ಮಾಡಲ್ಪಟ್ಟಿವೆ. ಕೆಲವನ್ನು |ಮೆಶಿನುಗಳಿಂದ ಮೂಡಿಸಿ ಸಮಯವನ್ನೂ ಸ್ಥಳವನ್ನೂ ಉಳಿಸಿಕೊಳ್ಳುತ್ತಾರೆ. ಹಲನೆಡೆಯಲ್ಲಿ ಹಾಲು, ಚಾಕಲೆಟ್, ಸಿಗರೇಟು ಮೊದಲಾದುವನ್ನು ಮಾರುವ ಮೆಶಿನುಗಳು ಬಳಕೆಗೆ ಬಂದಿವೆ.

ರೇಲ್ವೆ ಸ್ಟೇಶನ್ ಮತ್ತು ಪ್ಲಾಟ್ ಫಾರಂಗಳಲ್ಲಿ ವಿವಿಧ ರೀತಿಯ ಚಾಕಲೇಟು, ಸಿಗರೇಟು ಮೊದಲಾದುವನ್ನು ಮಾರುವ ಯಂತ್ರಗಳಿವೆ. ನೀವು ಅವರಲ್ಲಿ ಹಣವನ್ನು ಸುರಿದು ಎಳೆದರೆ ಸರಿ, ಆ ವಸ್ತು ಹೊರಗೆ ಬರುವುದು. ಪ್ರತಿಯೊಂದು ವಸ್ತುವಿನ ಬೆಲೆ ಆದರಲ್ಲೇ ಬರೆದಿರುತ್ತದೆ; ಯಾವ ಖಾನೆಯಲ್ಲಿ ಏನಿದೆಯೆಂದೂ ತೋರುತ್ತದೆ. ಒಂದು ಯಂತ್ರದಲ್ಲಿ ವಿವಿಧ ಪ್ರಕಾರದ ವಸ್ತುಗಳನ್ನು ಇಟ್ಟಿರುತ್ತಾರೆ; ನಿಮಗೆ ಬೇಕಾದ ವಸ್ತುವನ್ನು ಅದರ ಬೆಲೆಯನ್ನು ಯಂತ್ರಕ್ಕೆ ಹಾಕಿ ಪಡೆಯಬಹುದು.

ಪನ್ನಿ ಹಾಕುವುದರಿಂದ ಡಬ್ಬಿಯಲ್ಲಿ ಹಾಲು ತುಂಬಿಸುವ ಯಂತ್ರಗಳು ಲಂಡನ್ನಿನಲ್ಲಿವೆ. ಈ ಯಂತ್ರಗಳಲ್ಲಿ ಅರ್ಧಾಂಶ ಹಾಗೂ ಪೂರ್ಣಾಂಶ ಹಾಲು ತುಂಬಿಸುವ ಎರಡು ಅಂಗಗಳವೆ. ನಿಮಗೆ ಬೇಕಾದಷ್ಟು ಹಾಲಿನ ಬೆಲೆಯನ್ನು ಯಂತ್ರದಲ್ಲಿ ಸುರಿದರೆ, ನಿಮ್ಮ ಡಬ್ಬಿಗೆ ಹಾಲು ಸುರಿಯುವುದು. ನಮ್ಮ ಸ್ಟೇಶನುಗಳಲ್ಲಿ ಸ್ತ್ರೀ ಪುರುಷರು ಟಿಕೇಟು ಮಾರುತ್ತಾರೆ. ಆದರೆ, ಅಲ್ಲಿ ಬೇರೆ ಬೇರೆ ಮೌಲ್ಯದ ಟಿಕೇಟು ಮಾರುವ ಯಂತ್ರಗಳು ಸಾಲಾಗಿರುತ್ತವೆ. ಅವು ಯಾವ ಮೌಲ್ಯದ ಟಿಕೇಟು ಮಾರುವವೆಂದು ಆ ಯಂತ್ರಗಳಲ್ಲಿಯೇ ನಮೂದಿಸಿರುತ್ತದೆ. ಆ ಯಂತ್ರದ ಬಳಿ ಹೋಗಿ ಆಷ್ಟು ಬೆಲೆ ಸುರಿದು ಟಿಕೇಟು ಕೊಳ್ಳಬಹುದು. ನಿಮಗೆ ಎಷ್ಟು ಮೌಲ್ಯದ ಟಿಕೇಟು ಬೇಕೆಂದು ಗೊತ್ತಿಲ್ಲವಾದರೆ, ಅಥವಾ ಅಷ್ಟು ಬೆಲೆಯ ಟಿಕೇಟು ಮಾರುವ ಯಂತ್ರವಿಲ್ಲವಾದರೆ ಮಾತ್ರ ಕಿಟಿಕಿಯ ಬಳಿ ಹೋಗಿ ಟಿಕೇಟು ಪಡೆಯಬೇಕಾಗುವುದು. ಕಿಟಿಕಿಯಬಳಿ ಭದ್ರವಾದ ಬೇಲಿಗಳಿವೆಯೊದರೆ, ಯಂತ್ರಗಳೆ ಸಮೂಹವಿಲ್ಲ. ಅಲ್ಲಿನ ಯಾತ್ರಿಕರು ಯಂತ್ರದ ಸಮೀಪ ಬರುತ್ತಾರೆ, ಪೆನ್ನಿ ಸುರಿಯುತ್ತಾರೆ, ಟಿಕೇಟು ಪಡೆಯುತ್ತಾರೆ; ಎರಡೇ ನಿಮಿಟುಗಳಲ್ಲಿ ಬೂಟು ಮೆಟ್ಟಿ ನಡೆದುಬಿಡುತ್ತಾರೆ. ಯಂತ್ರಗಳಿಂದಾಗಿಯೇ ಸಮಯದ ಉಳಿತಾಯವಾಗುವುದು.

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯೆಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜವ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವಪೆಂಬದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರೂಪ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ. 1—12—0 (1.75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮಧುವೆ ಸೀರೆ

ಮಧುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ,ಉಡುಪಿ.

ಕಥಾವಿಹಾರ
(೨ನೇ ಪುಟದಿಂದ)

ನ್ನಿವೇಶಗಳು ಬಂದೊಡಗಬೇಕು. ಎಷ್ಟು ಜನರು ಜೂಜು, ಜುಗಾರಿ, ಸಟ್ಟಾ, ವೈಭಿಚಾರಗಳಿಗಾಗಿ ಹಣ ಸುರಿಯುತ್ತಿಲ್ಲ? ತಮ್ಮ ಸುಖಕ್ಕಾಗಿ ಎಷ್ಟೊಂದು ಸುವ್ಯವಯನ್ನು ಮಾಡುತ್ತಿಲ್ಲ? ಆದರೆ ಹಸಿವೆಯಿಂದ ನರಳಿ ನಡೆಯಲು ಜ್ಞೇಕನವಿಲ್ಲದೆ ಚಿಕಿತ್ಸೆಗಾಗಿ ಕೈ ನೀಡಿದಾಗ ಛೀಮಾರಿ ಮಾಡಿ ಕಳುಹಿಸುವ ಜನರಾದರೋ ಜಗತ್ತಿನ ಕಷ್ಟವನ್ನು ಹೇಗೆ ನೋಡುವರು. ಎಲ್ಲರ ಪಾಲಿಗೆ ಸಂತೋಷದ ದಿನವಾದ ಈ 'ದೀಪಾವಳಿ' ಈಕೆಯ ಪಾಲಿಗೆ ಬರಿ 'ಹಾವಳಿ' ಮಾತ್ರ. ಹೀಗೆ ಎಷ್ಟು ಜನರು ಈ ರೀತಿ ಕಷ್ಟಪಡುತ್ತಿಲ್ಲ? ಹಸಿದವನ ಹಸಿವೆಯನ್ನು ತಣಿಸುವವರು ಈ ಜಗತ್ತಿನಲ್ಲಿ ಯಾರೂ ಇಲ್ಲ ಸ್ವಸುಖಕ್ಕಾಗಿ ಆಸಹಾಯಕಳಾದ ಹೆಣ್ಣಿನ ಜೀವನವನ್ನು ಬೀದಿಗೆಳೆದು ಜೀವಿಸುವ ಸಮಾಜ ಆಕೆಯನ್ನು ತಪ್ಪು ದೃಷ್ಟಿಯಿಂದಲೇ ನೋಡುತ್ತದೆ. ಅವಳಿಗೆ ಸಮಾಜದಲ್ಲಿ ಸ್ಥಾನವಿಲ್ಲ. ಎಲ್ಲ ವಿಧದಲ್ಲಿಯೂ ಆಕೆ ಸಮಾಜ ಬಾಹಿರೆ. ಆದರೆ ಅದಕ್ಕೆ ಕಾರಣವಾದ ವಿಷ ಬೀಜವನ್ನು ಕಿತ್ತೊಗೆಯಲು ಸಮಾಜ ಸಿದ್ಧವಿಲ್ಲ. ಹೊಟ್ಟೆಯುರಿಯನ್ನು ತಣಿಸಲಿಕ್ಕಾಗಿ ಹಾಳು ಹಾದಿಗೆ ಬಿದ್ದ ಆಕೆ ಸಮಾಜದ ದೃಷ್ಟಿಯಲ್ಲಿ 'ಸೂಳೆ' ಅಥವಾ 'ಭಿಕಾರಿ'. ಕಡೆಗೊಂದು ದಿನ ಈ ದಾರುಣ ಪರಿಸ್ಥಿತಿಯಲ್ಲಿಯೇ ಆಕೆಯ ಜೀವನವು ಅಂತ್ಯವಾಗಬೇಕಲ್ಲವೆ ಅವಳಿಗೆ ಬೇರೆ ಗತಿಯಿಲ್ಲ. ಎಷ್ಟು ಜನ ಅಕ್ಕತಂಗಿಯರು ಈ ಬರಡು ಬಾಳಲ್ಲಿ ಬೇಯುತ್ತಿಲ್ಲ! ಉದರಾಗ್ನಿಯೇ ಇದಕ್ಕೆಲ್ಲಕ್ಕೂ ಕಾರಣ. ಹಸಿವೆಯೇ ಪ್ರಪಂಚವನ್ನು ಸುಡುವ ಬಡಬಾಗ್ನಿ. ಆದರೆ ಜಗತ್ತು ಆ ಬೆಂಕಿಯ ಕಿಗಳ ನೋವನ್ನು ನೋಡುವಷ್ಟು ತಾಳ್ಮೆಯನ್ನು ಪಡೆದಿಲ್ಲ. ಇಂತಹವರ ಕೂಡಿ ಜಗತ್ತಿನ ಅಲಕ್ಷ್ಯ' ಛೀಮಾರಿಗಳ ಹೊರತು ಬೇರೇನಿಲ್ಲ."

—ರಮೇಶ ಭಾನಪರವಶವಾಗಿದ್ದ. ಗಂಟೆ ಹನ್ನೆರಡಾದರೂ ಅವನು ಕುಳಿತಲ್ಲಿಂದ ಕದಲಲಿಲ್ಲ. ಆ ತೋಟದಲ್ಲಿ ಅವನ ಹೊರತು ಬೇರೆಯಾರೂ ಇದ್ದಿಲ್ಲ. ದೂರದಲ್ಲಿ ಓಡಾಡುವ ವೋಟಾರುಗಾಡಿಗಳ ಸದ್ದು ಮಾತ್ರ ಕೇಳುತಿತ್ತು. ಒಡನೆ ಗೂಡಿನಲ್ಲಿ ಬಂಧಿತವಾಗಿದ್ದ ಹುಲಿಕರಡಿಗಳ ಕರ್ಕಶ ಕೂಗು. ಆದರೆ ಆ ಹೆಂಗಸಿನ ಆರ್ತ ಧ್ವನಿಯು ಮಾತ್ರ ಕರ್ಣಪಟಲವನ್ನು ಕುಕ್ಕುತ್ತಿತ್ತು. ಆಕೆ ಎಲ್ಲಿಯೊ ಕಣ್ಮರೆಯಾಗಿದ್ದಳು. ಆದರೆ ಆ ಕೂಗು ಮಾತ್ರ ರಮೇಶನ ಹೃದಯದಲ್ಲಿ ಮಕ್ತೂ ಮತ್ತು ಪ್ರತಿಧ್ವನಿಸುತಿತ್ತು; ಬೇಡವೆಂದರೂ ಮಾರ್ದನಿಸುತಿತ್ತು:

"ಬಾಬ....ಏಕ್ ಪೈಸಾ ದೊ"

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ವಿವೇಚನೆ

ದಿವ್ಯೌಷಧ—ಗಂಗಾಸಲಿಲ

ಭಾರತೀಯರಲ್ಲಿ ಗಂಗೆಯ ಬಗ್ಗೆ ಸದ್ಭಾವನೆ ಬೆಳೆದು ಬಂದುದು ಅನಾದಿಯಿಂದ. ಈಗ ಈಗ, ವಿದೇಶೀಯರೂ ಅದರ ಪಾವಿತ್ರ್ಯವನ್ನು ಒಪ್ಪುತ್ತಾರೆ. ಸರ್ವ ರೋಗನಾಶಕ ಗುಣ ಗಂಗಾಸಲಿಲದಲ್ಲಿರುವುದೇ ಈ ಮುಕ್ತಕಂಠದ ಶುಪ್ರಶಂಸೆಗೆ ಮೂಲಕಾರಣವಾಗಿದೆ.

(ವಿವಿಧ ಮೂಲಗಳಿಂದ)

'ಗಂಗಾಜಲದಲ್ಲಿ ವ್ಯಾಧಿದಾನ ನೂಡುವ ಅನುಪನು ಶಕ್ತಿಯಿದೆ' ಎಂದು ಧಾರ್ಮಿಕ ಶ್ರದ್ಧಾವೇತ್ತರ ಹೇಳಿಕೆಯಿದೆ. ಧರ್ಮ ಶಾಸ್ತ್ರದ ಈ ಕಥನವನ್ನು ಆಯುರ್ವೇದವೂ ಸಮರ್ಥಿಸಿದೆ. ಇಂದಿಗೆ ಸುಮಾರು ಎರಡು ಸಾವಿರ ವರ್ಷಗಳಿಗೆ ಮೊದಲಿದ್ದಿದ್ದ ಚರಕನು ಗಂಗಾಜಲವನ್ನು ಪಥ್ಯವೆಂದು ಉದ್ಘೋಷಿಸಿದ್ದಾನೆ; ಕ್ರಿ. ಶ. ೧೦೬೦ರ ಸುಮಾರಿಗೆ ಇದ್ದ ಚಕ್ರಪಾಣಿದತ್ತನೂ ಚರಕನ ಈ ಅಭಿಪ್ರಾಯಕ್ಕೆ ಮತ್ತಷ್ಟು ಬೆಲೆಯಿತ್ತಿದ್ದಾನೆ. ಭಂಡಾರಕರ ಸುಂತತ್ವ ಸಂಸ್ಥೆಯಲ್ಲಿ ದೊರೆತ ಒಂದು ಪ್ರಾಚೀನ ಹಸ್ತಲಿಖಿತ ಗ್ರಂಥದಲ್ಲಿ ಗಂಗಾಜಲದ ಉಲ್ಲೇಖವೂ ಇದೆ. ಇದರಲ್ಲಿ ಗಂಗಾತೋಯದ ಸುವಿವರ ವರ್ಣನೆಯಿದೆ. ''ಗಂಗಾಜಲವು ಪಥ್ಯವಾಗಿದೆ; ಆಹಾರ ಬೇಯಿಸುವುದಕ್ಕೆ ಯೋಗ್ಯವಿದೆ; ಪಾಚನಶಕ್ತಿಯನ್ನಿದುಹೆಚ್ಚಿಸುತ್ತದೆ; ತೃಪ್ತಿಯನ್ನು ದೂರಮಾಡುತ್ತದೆ; ಹಸಿವೆಯನ್ನು ಹೆಚ್ಚಿಸುತ್ತದೆ; ಅಲ್ಲದೇ ಬುದ್ಧಿಶಕ್ತಿಯನ್ನು ತೀವ್ರಗೊಳಿಸುತ್ತದೆ" ಎಂದು ಹೇಳಿದೆ.

ಗಂಗಾಜಲವನ್ನು ರಾಸಾಯನಿಕ ರೀತಿಯಿಂದ ವಿಶ್ಲೇಷಣೆ ಮಾಡಿ ಈ ಬಗ್ಗಿನ ಸತ್ಯಾಂಶಗಳನ್ನು ಈಗ ಹೊರಗೆಡಹಲಾಗಿದೆ. ''ಇದರಲ್ಲಿ ಶಾರೀರಿಕ ಶಕ್ತಿವರ್ಧಕ ಕ್ಷಮತೆಯಿದೆ; [ಗಂಗಾಜಲವನ್ನು ಕುಡಿಯುತ್ತಿರುವ ರೋಗಿ ಹಾಗೂ ದುರ್ಬಲ ವ್ಯಕ್ತಿಗಳು ಡಾಕ್ಟರರ 'ಟಾನಿಕ್' ಅನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿರುವುದಿಲ್ಲ. ಅಜೀರ್ಣ, ಜ್ವರ, ಸಂಗ್ರಹಣಿ, ಪಚನೇದಿಕೆ, ದವಡೆ ಇತ್ಯಾದಿ ರೋಗಗಳು ಶೀಘ್ರದಲ್ಲೇ ಮಾಯವಾಗುತ್ತವೆ; ಪ್ಲೇಗು, ಸಿಡುಬು, ವೆಲೇರಿಯಾ ಮೊದಲಾದ ಸಾಂಕ್ರಾಮಿಕ ರೋಗಗಳು ಗಂಗಾಜಲ ಸೇವನೆಯಿಂದ ಅದೃಶ್ಯವಾಗುವುದು. ರೋಗ ಕೀಟಾಣುಗಳನ್ನು ನಾಶಪಡಿಸುವ ಅಪೂರ್ವ ಶಕ್ತಿಯು ಇದರಲ್ಲಿ ಅನಾಮಾನ್ಯವಾಗಿದೆ" ಎಂದು ತಿಳಿದುಬಂದಿದೆ.

ಈ ಕಥನಗಳಿಗನ್ನು ಪುಷ್ಟೀಕರಿಸಲು ಅನೇಕ ಪಾಶ್ಚಾತ್ಯ ಚಿಕಿತ್ಸಕರು ಹಾಗೂ ವೈಜ್ಞಾನಿಕರು ಅನುಭವವನ್ನು ನಾವು ಉಲ್ಲೇಖಿಸಬಹುದು. ''ಗಂಗಾ ಜಲವನ್ನು ಹಿಂದೂ ಜನರು ಪವಿತ್ರವೆಂದು ತಿಳಿಯುತ್ತಾರೆ; ಆದರೆ, ನಾವಿದನ್ನು ಒಪ್ಪುವುದಿಲ್ಲ ಭಾರತದ ಒಂದು ನಗರವಾದ ಕಾಶಿಯಲ್ಲೇ ಲಕ್ಷಾಂತರ ಜನರು ತಮ್ಮ ಧಾರ್ಮಿಕ ಭಾವನೆಯಿಂದ ಸ್ನಾನ ಮಾಡುತ್ತ ಅದನ್ನು ಕೊಳಕು ಮಾಡುತ್ತಿರುವುದೇ ಇದಕ್ಕೆ ಕಾರಣ. ಚರಂಡಿಗಳ ಕೊಳಕು ನೀರು, ಶವ, ಚಿತಾಭಸ್ಮ ಮೊದಲಾದುವನ್ನು ಇದರಲ್ಲಿ ಎಸೆಯುತ್ತಾರೆ. ಆದರೂ ಗಂಗಾ ಜಲದಲ್ಲಿ ಒಂದು ಅದ್ಭುತ ಶಕ್ತಿ ಅವಶ್ಯ ಇದ್ದೇ ಇದೆ. ಗಂಗೆಯ ಉಪನದಿ ಹುಗ್ಲಿ ನದಿಯ ನೀರನ್ನು ಕೊಂಡು ಕಲಕತ್ತೆಯಿಂದ ಹೊರಟ ಹಡಗು ಲಂಡನ್ ಮುಟ್ಟುವ ವರೆಗೂ ಆ ನೀರು ಕಡುವುದಿಲ್ಲ. ಆದರೆ, ಲಂಡನ್ನಿನ ನೀರು ಮುಂಬಯಿ ಸೇರುಮಷ್ಟರಲ್ಲೇ ಕಟ್ಟು ಹೋಗುವುದು. ಲಂಡನ್ನಿನಿಂದ ಹೊರಟ ಹಡಗುಗಳು ಸುಯೇಜ ಅಥವಾ ಎಡನ್ನಿನಲ್ಲಿ ಮತ್ತೆ ಒಳ್ಳೆಯ ನೀರನ್ನು ಸಂಗ್ರಹಿಸಬೇಕಾಗುವುದು. ಇದಕ್ಕೆ ಗಂಗಾ ನದಿಯ ನೀರು ಪವಿತ್ರವಾಗಿರುವುದು ಇಲ್ಲವೇ ಥೇವ್ಸ್ ನದೀ ನೀರು ಅಪವಿತ್ರವಿರುವುದೇ ಕಾರಣವೆ? ಇದು ಅದ್ಭುತ ಸಂಗತಿಯೂದರೂ ಬೆಕ್ಟೀರಿಯೂ ಸಂಬಂಧಿಯೂ ನಡೆದ ಅನ್ವೇಷಣೆಯಿಂದ ಮೇಲಿನ ನೂತು ಸುಪ್ಟೀಕೃತವಾಗಿದೆ' ಎಂದು ಬ್ರಿಟಿಷ ಚಿಕಿತ್ಸಕ ಡಾ. ಸಿ. ಇ. ನೆಲ್ಸನ್ ಎಂಬವರು ಸೇಳಿದ್ದಾರೆ.

ಪಾಶ್ಚಾತ್ಯ ವೈಜ್ಞಾನಿಕರು ಆಧುನಿಕ ಚಿಕಿತ್ಸಾ ಶಾಸ್ತ್ರದ ಒರೆಗಲ್ಲಿಗೆ ಗಂಗಾಜಲವನ್ನು ಒರೆದು ನೋಡಿದರೂ ಅದರ ಉಪಯೋಗಿತೆಯಲ್ಲಿ ಆಶ್ಚರ್ಯವನ್ನೇ ವ್ಯಕ್ತಪಡಿಸಿದರು. ಒಂದು ಬಾರಿ ಕಾಶಿಯಲ್ಲಿ ಸಿಡುಬು ಹರಡಿತು; ಆದರೆ, ಆಸುಪಾಸಿನ ಗ್ರಾಮಗಳಲ್ಲಿ ಇದರ ದುಷ್ಪ್ರಭಾವವನ್ನೂ ಪಸರಿಸಲಿಲ್ಲ. ಈ ರಹಸ್ಯದ ಬಗ್ಗೆ ಸಂಶೋಧನೆ ಪಡೆಸಲು ಅಧಿಕಾರಿಗಳು ಆಗ್ರಾ ಸರಕಾರಿ ರಸಾಯನ ಪರೀಕ್ಷಕ ಡಾ। ಇ. ಎಚ್. ಹೈಂಕೆನ್ಸ್‌ರನ್ನು ಕಳಿಸಿದರು. ಅವರು ಈ ನೆಲೆಯಲ್ಲಿ ಕೂಲಂಕಷ ಪರಿಶೀಲನೆಯಿಂದ ಮೇಲಿನ ಸತ್ಯವನ್ನು ಕಂಡುಹಿಡಿದರು. ಅವರು ಈ ನೀರನ್ನು ಪರೀಕ್ಷಿಸಿದಾಗ ಸಿಡುಬಿನ ರೋಗಾಣುಗಳು ತೋರಿಬಂದುವು. ಈ ನೀರು ಗಂಗೆಯಲ್ಲಿ ಲೀನವಾದ ಕೆಲವೇ ಕ್ಷಣಗಳಲ್ಲಿ ರೋಗಾಣುಗಳು ನಾಶವಾಗುತಿದ್ದವು. ಅದೇ ಕ್ಷಣದಲ್ಲಿ ಸಿಡುಬಿನಿಂದ ಮೃತ್ಯುಮುಖನಾದ ಒಬ್ಬನ ಶವವನ್ನು ನೆಲೆದೊಯ್ಯುವ ನೀರನ್ನು ಪರೀಕ್ಷಿಸಿದರು. ಆ ಕ್ಷಣದಲ್ಲಿ ಆ ನೀರಲ್ಲಿ ರೋಗಾಣುಗಳಿದ್ದುವು; ಆದರೆ, ನೋಡು ನೋಡುತಿದ್ದಂತೆಯೇ ಆವು ತಾವಾಗಿಯೇ ನಾವಾವಶೇಷವಾದುವು. ಅನಂತರ ಇವರು ಗಂಗಾಜಲ ತುಂಬಿದ ಪಾತ್ರೆ ಮತ್ತು ಶುದ್ಧನೀರಿನ ಬಾವಿಗಳಲ್ಲಿ ರೋಗಾಣುಗಳನ್ನು ಹಾಕಿ ನೋಡಿದರು. ಗಂಗಾಜಲದಲ್ಲಿ ನವು ಮೂರೇ ತಾಸುಗಳಲ್ಲಿ ನಿರ್ನಾಮವಾಗಿದ್ದರೆ, ಬಾವಿಯಲ್ಲಿ ಅವು ಹಲವು ಪಟ್ಟು ಬೆಳೆದಿದ್ದುವು. ಇದನ್ನು ಕಂಡುಕೊಂಡ ಡಾ। ಹೈಂಕಿನ್ಸನು ಘೋಷಿಸಿದರು: ''ಗಂಗಾಜಲದಲ್ಲಿ ಕೀಟಾಣು ನಾಶಕ ವಸ್ತು ಇದೆ; ಇದರಲ್ಲಿ ಹೂವುದೇ ರೋಗಾಣು ಬೆಳೆಯಲಾರದು." ಇವರು ಮತ್ತೂ ಮುಂದುವರಿಸಿ, ''ನನ್ನ ಅನುಭವದಷ್ಟು ಹಿಂದೂ ಜನರು ಗಂಗಾಜಲವನ್ನು ಪವಿತ್ರವೆಂದು ಭಾವಿಸುವುದರಲ್ಲಿ ತಥ್ಯಾಂಶವಿದೆ; ಆದರೆ, ಕೀಟಾಣು ವಿಜ್ಞಾನದ ಈ ಸೂಕ್ಷ್ಮ ಜ್ಞಾನ ವ್ಯಾಪೀನ ಕಾಲದ ಹಿಂದುಗಾಗೆ ಅದುದಾದರೂ ಹೇಗೆ?" ಎಂದು ತಮ್ಮ ವಿಸ್ಮಯವನ್ನೂ ಪೋಷಿಸಿರುವರು.

ವೈಜ್ಞಾನಿಕ ಹೈಂಕಿನ್ಸರನಂತರ ಅನೇಕ ಪಾಶ್ಚಾತ್ಯ ವಿದ್ವಾಂಸರ ಗಮನ ಗಂಗಾ ಜಲದತ್ತ ಹರಿಯಿತು. ಇವರೂ ಹಲವು ಪ್ರಕಾರದ ರಾಸಾಯನಿಕ ವಿಶ್ಲೇಷಣೆಗೆ ತೊಡಗಿದರು. ಪ್ರಸಿದ್ಧ ಫ್ರೆಂಚ ವೈದ್ಯ ಡಾ| ಜೆರೀಲರು ಗಂಗಾಜಲದ ಮೇಲೆ ಅನುಸಂಧಾನ ಪ್ರಾರಂಭಿಸಿದರು. ಇವರು ಸಿಡುಬು ಮತ್ತು 'ಅಂಬ' ರೋಗಗಳಿಂದ ಮೃತರಾದ ಶವಗಳನ್ನು ಗಂಗಾಜಲದಲ್ಲೆನೆದ ಈ ರೋಗ ಸೀಡೆಯಿಂದ ಮೃತಂರವರ ಹೆಣಗಳಡಿಯಿಟ್ಟು ಪರೀಕ್ಷಿಸಿದಾಗ, ಹಲವಾರು ರೋಗಾಣುಗಳಿಬೇಕಾಗಿದ್ದರೂ ಒಂದೇ ಒಂದು ರೋಗಾಣುವಿರಲಿಲ್ಲ ಈ ಪರೀಕ್ಷಣೆಯ ನಂತರ ಅವರು ಸಿಡುಬು ಮತ್ತು 'ಅಂಬ' ರೋಗಗಳಿಗೆ ಗಂಗಾಜಲವು ದಿವ್ಯೌಷಧಿಯೆಂದು ಅಭಿಪ್ರಾಯಪಟ್ಟರು. ಗಂಗಾಜಲದಿಂದ ಒಂದು ಆ ಔಷಧಿಯನ್ನೂ ತಯಾರಿಸಿ, ಅದಕ್ಕೆ 'ವಿಕ್ಟೋರಿಯಾ ಸಿಡುಬು' ಎಂದ ನಾಮಕರಣ ಮಾಡಿದ



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶಲ್), ರೂ. 8=00 (ಎಕ್ಸ್‌ಟ್ರಾ ಸ್ಪೆಶಲ್).

P. DEVEE & Co. (M. I.) CALCUTTA—40

ಸ್ವಾತಿಕರ್ತರು: ಷಾ ಕಂಪೆನಿ, ಮಂಗಳೂರು—1.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

10ಂದ 4 ತಿಂಗಳ ವರೆಗೆ 4%

5 ,, 12 ,, 4½%

13 ,, 24 ,, 4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ವಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.

NAVAYUGA
REGD. NO. M. 3619

UDIPI, THURSDAY
10—11—1960

LICENSE NO. 31
Licensed to Post without Prepayment

ರು. ಇದನ್ನು ಅನೇಕ ಸಾಂಕ್ರಾಮಿಕ ರೋಗಗಳಿಗೆ ಉಪಯೋಗಿಸಲಾಗುತ್ತಿದೆ.

ಕೆನೆಡಾದ ಮೆಕ್‌ಗಿಲ್ ವಿಶ್ವವಿದ್ಯಾಲಯದ ಡಾ. ಎಫ್. ಡಿ. ಹೆಮಿಲ್ಟನ್ನರು ಈ ರೀತಿ ಬರೆದಿದ್ದಾರೆ: "ಗಂಗಾಜಲದಲ್ಲಿ ಸಿಡುಬು ಕೀಟಾಣುಗಳನ್ನು ನಾಶಪಡಿಸುವ ಅದ್ಭುತ ಶಕ್ತಿಯಿರಬಹುದು; ಆದರೆ, ಈ ಶಕ್ತಿ ಎಲ್ಲಿಂದ ಹೇಗೆ ಬಂತು ಎಂಬುದು ಅಗೋಚರವಿದೆ."

ಇಷ್ಟೇ ಅಲ್ಲ, ಗಂಗಾಜಲದಲ್ಲಿ ಗಾಯ, ಕಜ್ಜಿ, ಕುರುಗಳನ್ನು ಗುಣಪಡಿಸುವ ಅದ್ಭುತ ಶಕ್ತಿಯೂ ಇದೆ. ಈ ಬಗ್ಗೆ 'ಸ್ಪೆಕ್ಟ್ಯೇಟರ್' ಪತ್ರಿಕೆಯಲ್ಲಿ ಒಬ್ಬ ಪ್ರಖ್ಯಾತ ನೈಸರ್ಗಿಕ ಚಿಕಿತ್ಸಕರು, "ಗಂಗಾಜಲದ ಪ್ರವಾಹವು ಹರಿದುಬರುವ ಭೂಮಿಯಲ್ಲಿ ರೇಡಿಯಂನಂತಹ ಒಂದು ವಸ್ತು ವಿರಬೇಕು; ಇದರ ಮೇಲೆ ಹರಿಯುವ ನೀರಿನಲ್ಲಿ ವ್ರಣನಾಶಕಗುಣ ತೋರಿಬರುತ್ತದೆ" ಎಂದು ಬರೆದಿದ್ದಾರೆ.

'ನಾವಿರ ಹರದಾರಿ ದೂರವಿರುವ ಒರ್ವ ವ್ಯಕ್ತಿ 'ಗಂಗಾ ಗಂಗಾ' ಎಂದು ಉಚ್ಚರಿಸಿದರೆ, ಆತನ ಪಾಪಗಳು ದೂರವಾಗುವುವು', ಎಂದು ಹಿಂದೂ ಧರ್ಮ ಶಾಸ್ತ್ರಗಳು ಸಾರುತ್ತವೆ. ಈ ಉಲ್ಲೇಖವನ್ನು [illegible]ಕ್ಕೆ ವಿದ್ವಂಸರೂ ಈಗ ಒಪ್ಪತೊಡಗಿದ್ದಾರೆ. 'ಪದೇ ಪದೇ ಗಂಗಾ ನಾಮೋಚ್ಚಾರಣೆ ಮತ್ತು ಗಂಗಾ ದರ್ಶನ ಮಾಡುವುದರಿಂದ ಮಾನವಕ್ಕದಲ್ಲಿ ಅತ್ಯುತ್ತಮ ಪ್ರಭಾವ ಬೀಳುವುದೆಂದು ಡಾ: ರಿಚರ್ಡ್‌ಸನ್ನರು ಬರೆದಿದ್ದಾರೆ. ಸುಪ್ರಸಿದ್ಧ ಜಗದ್ಯಾತ್ರಿಕ ಮೋರ್‌ಟ್ಯೂನ್ ಎಂಬವರು, ತಮ್ಮ 'ಜಗದ್ಯಾತ್ರೆ' ಜೀವನ ಪುಸ್ತಕದಲ್ಲಿ, 'ಗಂಗಾಜಲವನ್ನು ನಾನೇ ಪರೀಕ್ಷೆ ಮಾಡಿದ್ದೇನೆ. ಇದರಲ್ಲಿ ರೋಗಕೀಟಾಣುಗಳನ್ನು ಕೊಲ್ಲುವ ಮಹಾನ್ ಶಕ್ತಿಯಿದೆ. ಇದು ಅತ್ಯಂತ ಶುದ್ಧ ಕಾಗೂ ಪವಿತ್ರವಾಗಿದೆ. ಇದರಿಂದಲೇ ಗಂಗಾಜಲಸ್ನಾನ ಮತ್ತು ಸ್ನಾನಮಾಡ್ಸುವುದರಿಂದ ಪಾಪೀ ಮನುಷ್ಯನ ವಿಚಾರವು ಶುದ್ಧವೂ ಪವಿತ್ರವೂ ಆಗುವುದು.' ಎಂದು ಬರೆಸಿದ್ದಾರೆ. ಈ ಕಥನವನ್ನು ಸ್ಕಾಂಡ್ ಯಾತ್ರಿಕ ಹೈಬರ್ನಿಯರು ಸಮರ್ಥಿಸಿದ್ದಾರೆ.

ಗಂಗಾಜಲದ ಮಜ್ಜನವನ್ನು ಮೈಗೆ ತಿಕ್ಕಿ ಕೊಳ್ಳುವುದರಿಂದ ಸರ್ವ ಪ್ರಕಾರದ ಚರ್ಮ ರೋಗಗಳು ದೂರವಾಗುತ್ತವೆಯೆಂದು ಚಿಕಿತ್ಸಕರ ಅಂಬೋಣವಿದೆ. ಮಧ್ಯಕಾಲೀನ ಮುಸಲ್ಮಾನ ಆರಸರೂ ಜಾಹ್ನವೀ ತೋಯದ ಈ ಗುಣದಿಂದ ವಶೀಭೂತರಾಗಿದ್ದರೆಂಬುದಕ್ಕೆ ಹಲವಾರು ಉದಾಹರಣೆಗಳು ಇತಿಹಾಸದಲ್ಲಿ ನಮಗೆ ದೊರೆಯುತ್ತವೆ.

ಗಳನೆಯ ಶತಮಾನದಲ್ಲಿ ಇಬ್ನಬತೂತನು ಭಾರತಕ್ಕೆ ಬಂದಿದ್ದನು. ಮಹಮ್ಮದ ತೊಗ್ಲಕನು ಯಾವಾಗಲೂ ಗಂಗಾಜಲ 'ಪ್ರಯೋಗಮಾಡುತಿದ್ದನೆಂದಾತ ತನ್ನ ಯಾತ್ರಾ ಪುಸ್ತಕದಲ್ಲಿ ಬರೆದಿದ್ದಾನೆ. ಹದಿನಾರನೆಯ ಶತಮಾನದ ಅಕ್ಬರನ ಬಗ್ಗೆ ಬರೆಯುತ್ತ ಅಬುಲ್ ಫಜಲನು ತನ್ನ ಇತಿಹಾಸಗ್ರಂಥ 'ಅಯಿನೀ ಅಕ್ಬರಿ'ಯಲ್ಲಿ "ನಾನ್ಯೂಟ್ ಅಕ್ಬರ ಗಂಗಾಜಲವನ್ನು ಅಮೃತವೆಂದು ತಿಳಿಯುತ್ತಾನೆ. ಮನೆಯಲ್ಲಿ ಮೂತ್ರವಲ್ಲ ಸಂಚಾರಾವಧಿಯಲ್ಲಿಯೂ ಇವನು ಗಂಗಾಜಲವನ್ನೇ ಉಪಯೋಗಿಸುತ್ತಾನೆ. ಆತನ ಅಡುಗೆಗೆ ಯಮುನಾ ಜಲವನ್ನು ಬಳಸುತಿದ್ದರೂ ಇದರಲ್ಲಿ ಸ್ವಲ್ಪ ಗಂಗಾತೋಯವನ್ನೂ ಕೂಡಿಸುತ್ತಾರೆ." ಎಂದು ಬೇಳಿಪ್ಪಾನೆ.

ಅಕ್ಬರನು ಹಿಂದೂಗಳ ಬಗ್ಗೆ ಉದಾರ ನೀತಿಯನ್ನನುಸರಿಸಿ ತಿನ್ನುದರಿಂದಾತ ಹೀಗೆ ಮಾಡುತ್ತಿದ್ದನೆಂದು ಹೇಳಬಹುದು. ಆದರೆ, ಅಕ್ಬರ ನೂತ್ರವಲ್ಲ, ಅವರಂಗ ಜೇಬನು ಕೂಡ ಜೀವಿತಾಂತ್ಯನ ವರೆಗೆ ಇದೇ ಪರಂಪರೆಯನ್ನನುಸರಿಸುತಿದ್ದನು. ಈತನು ಅಡುಗೆಯಲ್ಲಿ ಗಂಗಾಜಲವನ್ನೇ ಉಪಯೋಗಿಸುತಿನ್ನನೆಂದು ಆ ಕಾಲದಲ್ಲಿ ಭಾರತ ಯಾತ್ರೆ ಮಾಡಿದ್ದ ವರ್ನಿಯರನು ಬರೆದಿದ್ದಾನೆ.

ಕೇಸ್ಟನ್ ಎಸ್ಟೆರ್ಡ್ ಮೂರನು ಭಾರತದಲ್ಲಿನ ಆಂಗ್ಲ ಸೇನೆಯ ದೊಡ್ಡ ಅಧಿಕಾರಿಯನು. ಟಿಪ್ಪು ಸುಲ್ತಾನನೊಡನಾಡಿಯುದ್ಧದಲ್ಲಿ ಈತ ಭಾಗವಹಿಸಿದ್ದಾನೆ. 'ಟಿಪ್ಪು ಸುಲ್ತಾನನು ಗಂಗಾಜಲವನ್ನೇ ಕುಡಿಯುತಿದ್ದನು; ಈ ನೀರನ್ನು ಒಂಟೆಗಳ ನೇರಿಂದ ಹೊರಿಸಿ ತರಿಸುತಿದ್ದನು' ಎಂದು ಈತನ ಲೇಖನವಿದೆ.

ಜಗತ್ತಿನ ಇತಿಹಾಸವಾದ 'ರಿಯೂ ಡಿ-ಲಾ-ಪ್ಲಾತಿನ್' ಎಂಬ ಗ್ರಂಥದಲ್ಲಿ ಗುಲಾಮು ಹುಸೇನನು, 'ತನ್ನ ರೆಜಿಸಿಡೆನ್ಸಿಯಿಂದ ಯಮುನೆಯ ನೀರು ಗಂಗಾಜಲಕ್ಕೆ ಸಮಜೋಡಿಯಾಗಲಾರದು' ಎಂದು ಬರೆದಿದ್ದಾನೆ. ಮುಂಗಲ ಪ್ರಶಾಸನ ಕಾಲದಲ್ಲಿ ಎಲ್ಲ ರಾಜ, ಗೃಹಗಳಲ್ಲಿಯೂ ಗಂಗಾಜಲವೆ ಬಳಸಲ್ಪಡುತಿತ್ತೆಂದು ಮೇಲಿನ ಉಕ್ತಿಗಳಿಂದ ತಿಳಿಯಬಹುದು.

ಭಾಗೀರಥಿಯು ಈ ಪ್ರವಾಹವು ಹರಿಯುತ್ತಿರುವ ಪ್ರದೇಶದಲ್ಲಿ ಅನೇಕ ಪ್ರಕಾರದ ರೋಗನಿವಾರಕ ಗುಣಗಳುಳ್ಳ ವನಸ್ಪತಿಗಳು ಬೆಳೆದಿರುತ್ತವೆ. ಇದರಿಂದ ಇವುಗಳ ಸೂಕ್ಷ್ಮ ಅಂಶಗಳು ಸಮ್ಮಿಲಿತವಾಗಿರುತ್ತವೆ. ಈ ಕಾರಣದಿಂದಲೇ ನಮ್ಮ ಪೂರ್ವಜರಾದ ಮಹರ್ಷಿಗಳು, "ಶರೀರ ವು ಜರ್ಜರಿತವಾಗಿ ವ್ಯಾಧಿಗ್ರಸ್ತವಾದಾಗ ಗಂಗಾಜಲ ಸೇವನೆ ಮಾಡಬೇಕು. ಏಕೆಂದರೆ, 'ಔಷಧಂ ಜಾಹ್ನವೀ ತೋಯಂ' (ಗಂಗಾಜಲ ಶ್ರೇಷ್ಠ ಔಷಧಿಯಾಗಿದೆ)" ಎಂದು ಉಪದೇಶಿಸಿದ್ದಾರೆ.

ಪ್ರಚಲಿತ ಪ್ರಸಂಗ

(ಗತೆಯ ಮುಂದುವರಿದಂತೆ)

ಕಾರವು ವೈದ್ಯರ ಅಭಾವ ನಿವಾರಣೆಗಾಗಿ ಎಚ್. ಎಂ. ಪಿ. ವ್ಯಾಸಂಗ ಕ್ರಮವನ್ನು ರಾಜ್ಯದ ಎಲ್ಲ ಮೆಡಿಕಲ್ ಕಾಲೇಜುಗಳಲ್ಲೂ ಮುಂದಿನ ವರ್ಷದಿಂದ ಪ್ರಾರಂಭಿಸುವ ಯೋಜನೆ ಮಾಡುತ್ತಿದೆಯಂತೆ.

'ಕಡಿಮೆ ಖರ್ಚಿನಲ್ಲಿ ಅಲ್ಪಾವಧಿ ವೈದ್ಯಕೀಯ ವ್ಯಾಸಂಗ'ವನ್ನು ಪಡೆಯುವಂತೆ ವ್ಯಾಸಂಗ ಪದ್ಧತಿಯನ್ನು ರೂಪಿಸಿ ಅವನ್ನು ವ್ಯವಹಾರತಗೊಳಿಸುವುದು ರಾಜ್ಯ ಸರಕಾರದ ದೃಷ್ಟಿಯಲ್ಲಿ ವೈದ್ಯರ ಅಭಾವ ನೀಗಿಸಲು ಒಂದು ಉಪಯುಕ್ತ ಸಾಧನ ವೆನಿಸಬಹುದು. ಆದರೆ, ಈ ಮೊದಲು ಇದ್ದ ಎಲ್. ಎಂ. ಪಿ. ವ್ಯಾಸಂಗ್ರ ಪ್ರಣಾಳಿಯನ್ನು ತೆಗೆದು ಹಾಕಿದುದರ ಕಾರಣವೇನೆಂಬುದನ್ನು ಮುರಳಿ ಪ್ರಾರಂಭಿಸುವುದಕ್ಕೆ ಮೊದಲು ಗಂಭೀರವಾಗಿ ಪರ್ಯಾಲೋಚಿಸಬೇಕಾಗಿದೆ. ವೈದ್ಯರು ಪರ್ಯಾಪ್ತ ಪ್ರಮಾಣದಲ್ಲಿ ಲಭಿಸಿದರೆಂಬುದರಿಂದ ಈ ಪದ್ಧತಿಯನ್ನು ಕೊನೆಗೊಳಿಸಿದುದಲ್ಲವೆಂಬುದನ್ನೂ ಅವಶ್ಯ ಗಮನಿಸಬೇಕು. ಅಲ್ಲದೇ ಇತ್ತೀಚೆಗೆ ಮಂಡಿಪಾಲದಲ್ಲಿ ಸೇರಿದ ರಾಜ್ಯ ವೈದ್ಯ ಕೀಯ ಸಮ್ಮೇಳನವು ಈ ಬಗ್ಗೆ ತನ್ನ ಬಲವಾದ ವಿರೋಧ ವ್ಯಕ್ತಪಡಿಸಿರುವುದನ್ನೂ ರಾಜ್ಯಸರಕಾರ ವಿಮರ್ಶಿಸಬೇಕು.

'ವೈದ್ಯ'ರೆಂಬ ಬಿರುದು ಇತ್ತು, ಸರಕಾರ ನಡೆಸುವ ಚಿಕಿತ್ಸಾ ಮಂದಿರಗಳಲ್ಲಿ ವೈದ್ಯರ ನೇಮಕವಾಡುವುದರಿಂದ 'ಡಾಕ್ಟರರಿಲ್ಲದ ಆಸ್ಪತ್ರೆ'ಗಳು ಇಲ್ಲದಂತಾಗಬಹುದು. ಆದರೆ, ಜನತೆಗೆ ಸಮರ್ಥ ಸೇವೆ ಸಲ್ಲಿಸಬಲ್ಲ, ಯೋಗ್ಯ ಚಿಕಿತ್ಸೆ ನಡೆಯಿಸಬಲ್ಲ, ಸೂಕ್ತ ಸಲಹೆಯಿಯಬಲ್ಲ ವೈದ್ಯರು ಬೇಕೇ ಹೊರತು ವೈದ್ಯಬಿರುದು ಧಾರಿಗಳಲ್ಲ. 'ಹೊಸ ವೈದ್ಯನಿಗಿಂತ ಹಳೆ ರೋಗಿಯೇ ವಾಸಿ' ಎಂಬಂತೆಯೇ ಅರೆ ತಿಳಿದ ವೈದ್ಯನ ಕೈಯಲ್ಲಿ ಸಾವಿರಾರು ಜನತೆಯ ಆರೋಗ್ಯ ರಕ್ಷಣೆಯ ಭಾರವನ್ನು ಒಪ್ಪಿಸಿಬಿಡುವುದೂ ಅವಿವೇಕ ಮತ್ತು ಅನುಚಿತವೆಂದೆನ್ನಲು ಅಡ್ಡಿಯಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಅಭಾವವನ್ನು ಹೋಗಲಾಡಿಸಲು ಸರಕಾರವು ಒಂದು ಹೊಸ ಯೋಜನೆಯನ್ನು ರೂಪಿಸುವಂತಿದೆ. ವೈದ್ಯಕೀಯ ಕಾಲೇಜಿಗೆ ಪ್ರವೇಶ ನೀಡುವುದಕ್ಕೆ ಮೊದಲು ಕೆಲವು ವರ್ಷ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವಂತೆ ಕರಾರುಪತ್ರ ಬರೆದು ತೆಗೆದುಕೊಳ್ಳುವರಂತೆ. ಈ ಪ್ರಣಾಳಿ ಎಷ್ಟರ ಮಟ್ಟಿಗೆ ಸಫಲವಾದೀತೆಂದು ಈಗಲೇ ಹೇಳಲಾಗದು. ಒಂದು ವೇಳೆ ಎಲ್ಲರೂ ಇದಕ್ಕೆ ಒಪ್ಪಿ ವ್ಯಾಸಂಗ ಪೂರ್ತಿಯಾದ ನಂತರ ಗ್ರಾಮೀಣ ಪ್ರದೇಶಗಳಿಗೆ ತೆರಳುವರು ಎಂದು ಭಾವಿಸುವುದಾದರೂ ವಾಸ್ತವಿಕವಾಗಿ ಆಲ್ಲರಲು ಒಲ್ಲದ ಮನಸ್ಕರಾದರೆ, ಅವರಿಂದ ಸಲ್ಲುವ ಸೇವೆ ಅಷ್ಟಕ್ಕಷ್ಟೇ ಇರುವುದು. 'ಒಲ್ಲದ ನಲ್ಲನಿಗೆ ಹೊಸರಲ್ಲಿ ಕೆಲ್ಲು' ಎಂಬಂತೆ ಇವರ ವರ್ತನೆ ಕಂಡು ಬಂದರೆ ವಿಸ್ಮಯಪಡಬೇಕಾಗಿಲ್ಲ. ಖಾಸಗಿಯಾಗಿ ಇಂತಹ ಸ್ಥಳಗಳಲ್ಲಿ ವೈದ್ಯಾಲಯ ತೆರೆಯುವವರಿಂದ ಬಹು ಮೆಚ್ಚಬರುವ ಅಲ್ಲೋಪಥಿ ಚಿಕಿತ್ಸೆಯನ್ನು ಮಾಡಿಸುವಷ್ಟು ಸಂಪನ್ನರು ಭಾರತೀಯರಲ್ಲ. ಹಾಗಾಗಿ, ಅಲ್ಲಿ ನೆಲೆನಿಂತ ವೈದ್ಯರು ಸ್ವಯಂ ಅನ್ಯಮನಸ್ಕರಾಗುವ ಸಂಭವವೇ ಹೆಚ್ಚು.

ಸರಕಾರವು ವೈದ್ಯಕೀಯ ಶಿಕ್ಷಣವನ್ನು ನೀಡಲು ತುಂಬ ಹಣ ವೆಚ್ಚಮಾಡುತ್ತಿದೆ; ಮಾಡಬೇಕಾದುದೂ ನ್ಯಾಯವೇ. ಈ ಹಣಕ್ಕೆ ತಕ್ಕ ಸ್ಪತಿಫಲ ಆದಕ್ಕೆ ದೊರೆಯಬೇಕಾದುದೂ ಸಹಜವೇ. ಆದರೆ, 'ಯಮರಾಜ ಸಹೋದರ'ರೆಂದು ಕರೆಯಲ್ಪಡುವ ಈ 'ವೈದ್ಯರಾಜ'ರ ಬಗ್ಗೆ ವ್ಯವಹರಿಸುವಾಗ ಅವರ ಮತ್ತು ಮುಖ್ಯವಾಗಿ ಜನತೆಯ ಹಿತವನ್ನು ಅಲಕ್ಷಿಸುವುದು ಎಂದೆಂದಿಗೂ ಸರಿಯಲ್ಲ. ಮೂಢನೆಂಬ ಜೀವನ ಮರಣ ಪ್ರಶ್ನೆಗೆ ಉತ್ತರವೀಯುವ ಈ ವೈದ್ಯಕೀಯ ಶಿಕ್ಷಣವನ್ನು ಗಾಂಭೀರವಾಗಿ ಸರಕಾರ ವಿಮರ್ಶಿಸಬೇಕಾಗಿದೆ.

ಅಮೆರಿಕೆಯ ಸ್ವಾಸ್ಥ್ಯ ಜತೆಸ್ಪಧಾನಾಧಿಕಾರಿ. ಏಳರಿಂದ ನಿರ್ವಾಚಿತರಾದ ಜನರಲ್ ಲೈಮನ್ ಎಲ್. ಬೆಮ್ಮಿಟ್ಸರ್. ಇವರ ಸ್ಥಾಯಿಬಲ.

5 ರೂ. ಮಾತ್ರ

- ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ?
- ಹಾಗಾದರೆ ಇನ್ನು ತಡಮಾಡಬೇಡಿರಿ.
- ಕೇವಲ ಐದು ರೂಪಾಯಿಗಳಿಂದ ನೀವು ಸೇವಿಂಗ್ಸ್ ಬೇಂಕ್ ಖಿಕ್ಷವನ್ನು ಸ್ವಾರಂಭಿಸಬಹುದು.
- ನಿಮಗೆ ಸಾಧ್ಯವಿದ್ದಷ್ಟನ್ನು—25 ನಯಾಪೈಸೆಯಷ್ಟನ್ನು ಸಹಾ—ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
- ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳೆರಡು ನಿಮ್ಮ ಗೌರವದ ಸೊತ್ತುಗಳಾಗುವುವು.
- ಮೂತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ ಸಿಗುವುದು.
- ಇಂದೇ ನಿಮಗೆ ಸವಿೂಪವಿರುವ ನಮ್ಮ ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 17-11-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೧೨ No. 12

ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಅಮೆರಿಕೆಯ ಆಯ್ಕೆಗೆ ವಿವಿಧ ಪ್ರತಿಕ್ರಿಯೆ

ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಕೆನೆಡಿಯವರಿಗೆ ಸ್ವದೇಶ ವಿದೇಶಗಳೆರಡರಲ್ಲೂ ಸನ್ನಿಧಿಕ—ವಿರೋಧಿಕರು ಇದ್ದಾರೆ. ತಮ್ಮ ಎಳೆಯ ವಯಸ್ಸು, ಕಥೋಲಿಕ್ ಧರ್ಮ, ಮತ್ತು ಐಸನ್ ಹಾವರರ ಜನಪ್ರಿಯತೆಗಳನ್ನು ಮೆಟ್ಟಿ, ಪ್ರಶಾಸನ ಸೂತ್ರ ಹಿಡಿದು ಮುನ್ನಡೆಯುವ ಹೊಣೆ ಇವರ ಮೇಲಿದೆ.



ಅಮೆರಿಕೆಯ ಸ್ವಾತಂತ್ರ್ಯ ಘಂಟೆ

೧. ೧೭೭೬ನೆ ಜುಲೈ ೪ರಂದು ಅಮೆರಿಕೆಯ ಸ್ವಾತಂತ್ರ್ಯ ಘೋಷಣೆಯ ದೇಶ ಬಾರಿ ಸಲಾಯಿ ''ಸ್ವಾತಂತ್ರ್ಯ ಘಂಟೆ''ಯು ಮಹತ್ತರ ಸ್ವಾನವನ್ನು ಪಡೆದಿದೆ. ೨. ಈ ಘಂಟೆಯು ಇಂಗ್ಲೆಂಡಿನಲ್ಲಿ ಮೊತ್ತ ಮೊದಲಿಗೆ ೧೭೫೨ರಲ್ಲಿ ನಿರ್ಮಿತವಾಯಿತು. ೧೭೫೨ರಲ್ಲಿ ಇದೊಮ್ಮೆ ಬಿರಿಯಿತು. ಆಗ ಇದನ್ನು ಸರಿಪಡಿಸಿದರೂ ೧೭೫೩ರಲ್ಲಿ ಮರಳಿ ಒಡೆಯಿತು. ೩. ಸ್ವಾತಂತ್ರ್ಯ ದಿನದ ಮಧ್ಯರಾತ್ರಿಯ ಹೊತ್ತಿನಲ್ಲಲ್ಲದೆ ಉಳಿದ ಸಮಯದಲ್ಲಿ ಬಾರಿಸಲು ಬಾರದಷ್ಟು ನಿರ್ಬಲವಾಗಿದೆ, ಈ ಘಂಟೆ!

ಅಮೆರಿಕೆಯಲ್ಲಿನ ಅಧ್ಯಕ್ಷ ಚುನಾವಣೆಯು ಸಡಗರವೀಗ ಮುಕ್ತಾಯಗೊಂಡು ಡೆಮೊಕ್ರೆಟಿಕ್ ಪಕ್ಷದ ಮಧ್ಯ ವಯಸ್ಸಿನ ರೋಮನ್ ಕಥೋಲಿಕ ಶ್ರೀ ಜಾನ್ ಕೆನೆಡಿಯವರು ಬಹುಮತದಿಂದ ಆರಿಸಿ ಬಂದಿದ್ದಾರೆ ಶ್ವೇತ ಭವನದ ಶಾಸಕಗಲ್ಲಾದ ಈ ಪರಿವರ್ತನೆಯತ್ತ ವಿಶ್ವದ ಲಕ್ಷ್ಯವೆಲ್ಲವೂ ಆಕೃಷ್ಟವಾಗಿರುವುದು. ಇದರಿಂದ, ಅಮೆರಿಕೆಯ ಮಹತ್ವ ಮತ್ತು ಶಕ್ತಿಯ ಅರಿವು ನಮಗಾಗುವುದು. ಜಾನ್ ಕೆನೆಡಿಯವರು ಚುನಾವಣೆಯಲ್ಲಿ ಯಶಸ್ವಿಯಾದರೆಂಬ ಘೋಷಣೆ ಹೊರಟೂಡನೆಯೇ ವಿಭಿನ್ನಾಭಿಪ್ರಾಯಗಳು ಹೊರಸಟ್ಟಾಗ, ಇದು ನಮಗಿನ ಯಾವನೇ ಅಧ್ಯಕ್ಷರು ಈ ರೀತಿಯ ಪ್ರತಿಕ್ರಿಯೆಯನ್ನು ಎದುರಿಸಬೇಕಾಗಿರಲಿಲ್ಲವೆಂದೆನಿಸುತ್ತದೆ. ಈ ಅಭಿಪ್ರಾಯವು ಕೇವಲ ದೇಶದೊಳಗೆ ಅಲ್ಲ ಹೊರಗೆಯೂ ಇರುವುದೆಂಬುದನ್ನು ಅನುಲಕ್ಷಿಸಬೇಕು. ಇವುಗಳೆಡೆಯಲ್ಲಿ ಹೊಂದಿಕೊಂಡು ಮುಂದುವರಿಯುವುದೇ ಮುಂದಿನ ಅಮೆರಿಕೆಯ ಶಾಸಕರ ಮುಂದಿರುವ ಮಹಾ ಪ್ರಶ್ನೆಯಾಗಿದೆ.

ಶ್ರೀ ನಿಕೀಟಾ ಕ್ರುಶ್ಚೇವರು ಅತಿ ಶೀಘ್ರದಲ್ಲಿಯೇ ಒಂದು ಸಂದೇಶವನ್ನು ಶ್ರೀ ಕೆನೆಡಿಯವರಿಗೆ ಕಳಿಸಿದ್ದಾರೆ. ಇದು ವಸ್ತುತಃ ವರಿಷ್ಠ ಸಮ್ಮೇಳನವನ್ನು ಪುನಃ ಸೇರಿಸುವುದು, ಬರ್ಲಿನ್ ಪ್ರಶ್ನೆಯನ್ನು ತನಗೆ ಬೇಕಾದಂತೆ ಇತ್ಯರ್ಥಗೊಳಿಸುವುದು. ಎರಡು ಜರ್ಮನೀಯ ರಾಜ್ಯಗಳನ್ನು ಸ್ಥಾಯಿಗೊಳಿಸುವುದು ಮತ್ತು ನಿಶ್ಶಸ್ತ್ರೀಕರಣವನ್ನು ತನ್ನ ಶರ್ತಗಳಿಗನುಸಾರವಾಗಿ ಕಾರ್ಯಾನ್ವಿತಗೊಳಿಸಲು ಹೂಡಿದ ಒಂದು ತಂತ್ರವೆಂದು ಕೇಳಲಾಗುತ್ತದೆ. ನೋವಿಯತ್ ಪ್ರಧಾನ ಮಂತ್ರಿಯವರು ಒಂದೇ ಬಾಣದಲ್ಲಿ ನಿಯುಕ್ತ ಅಧ್ಯಕ್ಷರೊಡನೆ ತಮ್ಮ ಸಂಬಂಧವನ್ನು ಒಳ್ಳೆಯದಾಗಿಟ್ಟುಕೊಂಡರು. ಏಕೆಂದರೆ, ಶ್ರೀ ಕೆನೆಡಿಯವರು ಹಾರ್ಡಿಕ ಶುಭ ಕಾಮನೆ ಮತ್ತು ಉತ್ಸಾಹಪೂರ್ಣ ಸಂದೇಶಕ್ಕೆ ಧನ್ಯವಾದಗಳನ್ನೀಯಲು ವಿಲಂಬ ಮಾಡಲಿಲ್ಲ; ಉತ್ತರದಲ್ಲಿ ಶಾಂತಿಯ ಸಾಮಾನ್ಯ ಉದ್ದೇಶವನ್ನು ಪುಷ್ಟೀಕರಿಸದೆ ಬಿಡಲಿಲ್ಲ. ಶ್ರೀ ಕ್ರುಶ್ಚೇವರು ಸದ್ಯ ಹೇಳಿದ ಮಾತುಗಳನ್ನೇ ಸಂದರ್ಭವೊದಗಿದಾಗ ಮತ್ತೂ ಪುನರುಚ್ಚರಿಸಲು ಎಂದಿಗೂ ಹಿಂಜರಿಯಲಾರರು. ಆದರೆ, ಅಮೆರಿಕೆಯ ವಿಳಂಬ ವಿಮೋನದ ಇರ್ವರು ಚಾಲಕರು ಇಂದಿಗೂ ರಶ್ಯದಲ್ಲಿ ಬಂಧಿಗಳಾಗಿದಿನ ದೂಡುತ್ತಿರುವುದು ಮಾತ್ರ ದೌರ್ಭಾಗ್ಯದ ಸಂಗತಿ. ಐಸನ್ ಹಾವರರ ನೇತೃತ್ವ ಈ ಬಂದಿಗಳನ್ನು ಬಿಡುಗಡೆ ಮಾಡುವುದರಿಂದ ಯಾವುದೇ ಪ್ರಭಾವ ಬೀಳಲಾರದಾದುದರಿಂದ ಕ್ರುಶ್ಚೇವರು ಹಾಗೆ ಮಾಡಲಿಲ್ಲ; ಆದರೆ, ಕೆನೆಡಿಯವರ ವಿಚಾರ ಮಾತ್ರ ಬೇರೆಯಿರುವುದು.

ಪಶ್ಚಿಮ ಜರ್ಮನಿಯ ಚಾನ್ಸೆಲರ್ ಡಾ। ಆದೇನಾವರರು ಬೇರೆಯೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಇವರು ಮೊದಲು ನಿಕ್ಸನರ ಮೇಲೆ ಸದ್ಭಾವನೆ ತೋರಿಸಿದರೂ ಅನಂತರ ತಕ್ಷಣದಲ್ಲೇ ತಮ್ಮ ಪಿಕಾನುಸಾರ ವಾತ್ಸಲ್ಯವನ್ನು ಕೆನೆಡಿಯವರ ಮೇಲೆ ಪ್ರಕಟಿಸಿದರು. ಚಾನ್ಸೆಲರ್ ಮಹಾಶಯರು ಚುನಾವಣಾ ವೈಖರಿಯನ್ನು ಪರಿಶೀಲಿಸಲು ಒಬ್ಬ ಪರ್ಯವೇಕ್ಷಕನನ್ನು ನಿಯೋಜಿಸಿದ್ದರು; ಜರ್ಮನಿಯ ಭವಿಷ್ಯದ ಬಗೆ ಶ್ರೀ ಕೆನೆಡಿಯವರ ವಿಚಾರಗಳೇನೆಂದು ತಿಳಿಯುವುದೇ ಇದರ ಉದ್ದೇಶವಾಗಿತ್ತು. ಪರ್ಯವೇಕ್ಷಕನು, ''ಕೆನೆಡಿಯವರು ಅಪಾಯಕರವಲ್ಲ; ಜರ್ಮನಿಯ ಬಗ್ಗೆ ಇವರ ವಿಚಾರವು ಶ್ರೀ ಐಸನ್ ಹಾವರರ ವಿಚಾರಗಳಿಗಿಂತಲೂ ಅಪೇಕ್ಷೋ ಪಾಲು ಸುದೃಢವಿದೆ" ಎಂದು ತಿಳಿಸಿದ್ದನು. ಅಧ್ಯಕ್ಷ ಐಸನ್ ಹಾವರರು ಶ್ರೀ ಕ್ರುಶ್ಚೇವರೊಡನೆ ಮಾತುಕತೆಯು ನಡುವೆ ಬರ್ಲಿನಿನ ಸ್ಥಿತಿಯನ್ನು 'ಅನಾಮಸ್ಯ'ವೆಂದು ಒಪ್ಪಿದ್ದರು. ಇದನ್ನು ಡಾ। ಆದೇನಾವರರು ಇಂದಿಗೂ ಮರೆತಿರಲಾರರು. ಡಾ। ಆದೇನಾವರು ತಮ್ಮ ಮಿತ್ರರ ಸಮರ್ಥನೆಯ ಬಗ್ಗೆ ಪ್ರತಿದಿನ ಆಶ್ವಾಸನೆ ಪಡೆಯ ಬಯಸುತ್ತಿರುವುದರಿಂದ ಸಧ್ಯವೇ ಶ್ವೇತ ಭವನಕ್ಕೆ ಹಾರಿ, ಶ್ರೀ ಕೆನೆಡಿಯವರನ್ನು ಕಾಣಲಿರುವರು. ಕೆನೆಡಿಯವರ ಯುವಾವಸ್ಥೆಯ ಮೇಲೆ ತನ್ನ ವೃದ್ಧಾವಸ್ಥೆಯ ಪ್ರಭಾವವನ್ನು ಅವಶ್ಯ ಬೀರಬಲ್ಲೆನೆಂಬ ವಿಶ್ವಾಸ ಡಾ। ಆದೇನಾವರರಿಗಿದೆ.

ಆದೇನಾವರರಿಗೆ ಕೆನೆಡಿಯವರ ಮನೋಸ್ಥಿತಿಯ ಪರಿಚಯವೆಷ್ಟರ ಮಟ್ಟಿಗಿದೆಯೆಂಬುದಿನ್ನೂ ವಿವಾದಾಸ್ಪದವಿದೆ. ಡಾ। ಆದೇನಾವರರು ಬಯಸುವಂತೆ ದಿ। ಜಾನ್ ಫಾಸ್ಟರ್ ಡಲ್ಲಸರು ತೋರ್ಪಡಿಸುತ್ತಿದ್ದ ದೃಢತೆಯನ್ನು ಇನ್ನು ಶ್ರೀ ಕೆನೆಡಿಯವರು ಪ್ರದರ್ಶಿಸುವರೇ ಎಂಬುದೂ ಸಂದೇಹಾಸ್ಪದವಿದೆ. ಶ್ರೀ ಕೆನೆಡಿಯವರೆನ್ನನ ನಕಾರೋತ್ತರದಿಂದಾಗಿ ಕ್ರುಶ್ಚೇವರು ಜರ್ಮನಿಯು ಬಗ್ಗೆ ತನ್ನ ಬಲಾತ್ಕಾರ ಹಾಗೂ ಯೋಜನೆಯನ್ನು ಹಿಂದೆಗೆದು ಕೊಳ್ಳಬೇಕಾಗಬಹುದು. ಈ ವಿಷಯದಲ್ಲಿ ಬ್ರಿಟನ್ನಿನ ಅಭಿಪ್ರಾಯವು ಭಿನ್ನವಾಗಿರಬಹುದು; ಅದು ವಸ್ತುತಃ ಬರ್ಲಿನಿನ ಕೀಲಿಕೈ ಸೋವಿಯತ್ ದೇಶದೊಡನಿದೆಯೆನ್ನಬಹುದು.

ಕೆನೆಡಿಯವರ ಆಯ್ಕೆಯ ಬಗ್ಗೆ ಬ್ರಿಟನ್ನಿನ ಪ್ರತಿಕ್ರಿಯೆ ತನ್ನ ಪರಂಪರೆಯನ್ನು ಳಿಸಿದೆ. ಸುಯೇಜ್ ಪ್ರಕರಣದ ನಂತರ ಬ್ರಿಟಿಷ್ ಪ್ರಧಾನಿ ಶ್ರೀ ಹೆರಾಲ್ಡ್ ಮ್ಯಾಕ್ಮಿಲನರು ಬ್ರಿಟನ್-ಅಮೆರಿಕೆಗಳ ಸಂಬಂಧವನ್ನು ಉತ್ತಮೀಕರಿಸಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಆಗಾಗ ಅಮೆರಿಕೆಯಯಾತ್ರೆ ಮಾಡಿಳಿದಿರಬಹುದಾದ ಭಿನ್ನಾಭಿಪ್ರಾಯಗಳನ್ನು ದೂರೀಕರಿಸುವ ಪ್ರಯತ್ನ ಮಾಡುತಿದ್ದಾರೆ. ಏಕ್ – ಬ್ರಿಟನ್ನಿನ ನಡುವಣ ಸಂಬಂಧವು ಸೈದ್ಧಾಂತಿಕ ರೂಪವಾಗಲ್ಲದಿರುವುದರಿಂದ ಈಗಿನ ಪರಿಸ್ಥಿತಿಯು ಬದಲಾಗುವ ಪ್ರಸಂಗ ಕಡಿಮೆ. ಈಗಿನಂತೆಯೇ ಮುಂದಕ್ಕೂ ಬ್ರಿಟನ್ನಿನ ಉದ್ದೇಶವು ತನ್ನ ಕಾರ್ಯಸಾಧನೆ ಮಾತ್ರವಿರುವುದಂಥ ವಿಶೇಷವೇನೂ ಘಟಿಸದು.

(ಅನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty.
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಪ್ರಕಟವಾಗುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ.
ಬಿ. ಎ., ಎಲ್. ಟಿ.

ಸಾಧಾರಣ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ಸಾಮಾನ್ಯ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅಸಾಮಾನ್ಯ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ಪ್ರತಿ ರೂ 0-13

ಚಂದಾಧನವನ್ನಾಗಲೀ ಜಾಹೀರಾತಿನ ಹಣಬಂಗಾರ್ಡಗಳಲೀ ಹಿಂದಿ ಕೇರ್ಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಂತೆ ಕಾರ್ಯವಿರುವುದು.

ಕಥಾವಿಹಾರ

ಪೇಜಿನಿಂದ ಪಾರಾಗಿಯೇ ಬಿಟ್ಟ!

ಜುನಾವಣೆಯ ಉರಿಗಾಳಿ ಹಬ್ಬಿದಾಗ, ಹುರಿಯಾಳುಗಳು ಓಟು ಒಳಗೆ ಹಾಕುವ ಸಂಚು ನಡೆಸುತಿದ್ದಾಗ ರಾಯರ ಒಕ್ಕಲು ಬಚ್ಚ ಧರ್ಮಸಂಕಟದಲ್ಲಿ ಬಿದ್ದು ಬಿಟ್ಟ. ಬಚ್ಚ ಹಳ್ಳೀಮುಕನಾದರೂ ಅವನ ಬುದ್ಧಿ ಮುಕ್ಕಲ್ಲ; ಎಂತಲೆ ಆತ ಪೇಜಿನಿಂದ ಪಾರಾಗಿಯೇ ಬಿಟ್ಟ!

ಶ್ರೀ "ನೀರಜ", ಮತ್ಯಾಡಿ.

ರಾಯರು ಬಚ್ಚನನ್ನು ಕಂಡು ಗುಡುಗಿದರು—"ನಿನ್ನೆ ಸಾಯಂಕಾಲ ಎಲ್ಲಿಗೆ ಹೋಗಿದ್ದಿ?"—ವ್ಯಂಗ್ಯ ಕರ್ಕಶವಾಗಿ ಗಡುಸು ತೋರಿತ್ತು.

ಬಚ್ಚ ನಡುಗಿದ—ರಾಯರ ಅನಿರೀಕ್ಷಿತ ಗುಡುಗಿನ ನುಡಿಯನ್ನು ಕೇಳಿ—"ಪೇಟೆಗೆ ಹೋಗಿದ್ದೆ ಧಣಿ!...."—ತೊದಲುತ್ತಾ ಬೆವರುತ್ತಾ ಅಂಗಳದಲ್ಲಿ ನಿಂತು ನೆಲವನ್ನು ಕಾಲಿನಿಂದ ಕೆದರುತ್ತಾ ಹೇಳಿದ! ಸುಳ್ಳು ಕೇಳಬಾರದೆಂದು ಆತಗೆ ಗೊತ್ತು. ಈಗಿನ ಕಾಲದಲ್ಲಿ ಸತ್ಯ ಹರಿಶ್ಚಂದ್ರನ ಪೀಳಿಗೆಯೆಲ್ಲಾ ಪಡುಪ್ಪಿರುವ ವಾಡನ್ನೂ ಆತನು ಬಲ್ಲ—ಸುಳ್ಳು ಹೇಳಿದ.

"ಪೇಟೆಗೆ ಹೋಗು....ಸುಡುಗಾಡಿಗೆ ಹೋಗು, ನಿನ್ನೆ ಯಾರ ಕಾರು ಹತ್ತಿದ್ದಿ ನೊವಲು ಬೊಗಳು!" ಎಂದು ರಾಯರು ಮೊದಲಿನ ಸ್ವರ, ತರದಲ್ಲೆ ಕೂಗಿದರು.

ಈಗ ಸುಳ್ಳು ಹೇಳಲು ದಾರಿಯಿರಲಿಲ್ಲ! "ಕೆ....ಕೆ...ಕೆಟ್ಟು ಕಾರು ಹತ್ತು ಅಂದರು...." ಎಂದು ತಡವರಿಸಿದ. ತಪ್ಪಿತಸ್ಥನಂತೆ ಅಧೋಮುಖನಾದ.

ಭಯ ವಿಹ್ವಲನಾದ ಬಚ್ಚನನ್ನು ಕಂಡು ರಾಯರ ಓಟ್ಟು ಉಲ್ಬಣಕ್ಕೇರಿತು. ಅವರೆಂದರು, "ಅವರು ಹತ್ತು ಅಂದರು ನೀಹತ್ತಿ ಅಲ್ವೆನೊ ಬಡ್ಡೀ ಮಗನೆ!... ಮನೆಯಲ್ಲಿರು ಅಂದ್ರೆ ದೊಡ್ಡ ರಾಜನ ಹಾಗೆ ಆ ಲೆಟ್ಟ ಕಾರು ಹತ್ತಿದ್ದಂತೆ. ಅವರೂರು, ನಾನು ಯಾರು...ಅಂತ ತಿಳಿಕೊಳ್ಳುವಷ್ಟು ಜ್ಞಾನವಿದೆಯೆ, ಈ ಬೆಪ್ಪು ಬೇವಾರ್ಸಿಗೆ!....ಹಿಂದೆ ನಿನಗೆ ಹೇಳಿದ್ದೆಲ್ಲಾ ನೆನಪಿದೆಯಷ್ಟೆ...ಮುಂದಕ್ಕೂ ಆಷ್ಟೆ, ಅವರ ಕಾರು ಹತ್ತುವುದು ನಿನಗೆ ಒಳ್ಳೆಯದಲ್ಲ. ಅವರ ಸವಿಾಪ ಸುಳಿಯುವುದು ನನಗೆಲ್ಲಿಯಾದರು ತಿಳಿಯಿತಾದ್ರೆ; ಹೆಚ್ಚೇಕೆ...ಅವರೊಡನೆ ಎಲ್ಲಿಯಾದರೂ ಪುಟ್ಟ ಬಿಚ್ಚಿದಿಯಾದ್ರೆ,ನಿನ್ನ ಬೆನ್ನ ಚರ್ಮ ಸುಲಿಸಿ.... ಮೂಗಿಗೆ ಮೂರು ನಾಮ (?) ಬರಿಸಿ ನನ್ನ ಜಾಗೆಯಿಂದ ಓಡಿಸುತ್ತೇನೆ ....ಜಾಗ್ರತೆ!...." ದೀಪಾವಳಿಯಲ್ಲಿ ಮಕ್ಕಳು ಪಟಾಕಿ ಸುಟ್ಟಂತೆ ಮಾತುಗಳು ಪಟಪಟನೆ ಉದುರಿದುವು.

ಹಿಂದಿನ ದಿನ ಶೆಟ್ರು ಕಾರನ್ನೇನೊ ಬಚ್ಚ ಹತ್ತಿದ್ದ. 'ಶೆಟ್ರು ಕಾರನ್ನು ನಾನೇರಿದರೆ, ರಾಯರಿಗೆ ಒಂದಿಷ್ಟೂ ನಷ್ಟವಾಗಿರಲಿಕ್ಕಿಲ್ಲ. ಆದಕ್ಕೆ ಇಷ್ಟೊಂದು ಸಿಟ್ಟಾದರೆ....' ಹೌದು, ರಾಯರು ಮೂಕನಾಡುವಾಗ ಅಥವಾ ಭಾಷಣ ಮಾಡುವಾಗ ಮಾತು ನಿರರ್ಗಳವಾಗಿ, ನಿರ್ದಾಕ್ಷಿಣ್ಯವಾಗಿ ಹೊರಡಬೇಕಾದ್ರೆ, ಚಿಕ್ಕ ಪುಟ್ಟಸಿಟ್ಟು ಬಂದರೇನೆ ಚಂದ! ಅವರಿಗೆ ಸಿಟ್ಟೇ ಸ್ಫೂರ್ತಿ!

ಬಚ್ಚ ಕಂಗೆಟ್ಟ—ರಾಯರ ಸಿಟ್ಟು ನವಿಸುವ ಮೋರೆಕಂಡು. ಕವಿಯಲ್ಲಿ ವೀರೆ ಅವರ ಭೀಷಣ ಭಾಷಣವು ಗೊಯಿಗುಡುತಿತ್ತು. ಎಲ್ಲಿಯಾದರು ಅವರ ಕಾರು ಹತ್ತಿದರೆ...ಹತ್ತಿರ ಸುಳಿದರೆ....ಮೂತನಾಡಿದರೆ ತನಗೆ ಮುಂದೊದಗ ಬಹುದಾದ ಗಂಡಾಂತರಗಳನ್ನು ಎಣಿಸಿ ಗುಣಿಸುವ ತಾಪತ್ರಯವೆ ಉಳಿದಿಲ್ಲ! ಯೋಚಿಸಿದಂತೆ ಆತನ ದೃಷ್ಟಿ ವಿದುಳುಗಳೆರಡು ಶೂನ್ಯವಾದವು.

"ಏನೆಂದು ತೀರ್ಮಾನಿಸಿದಿ?..." ಎಂದು ರಾಯರು ಕತ್ತಿತ್ತಿ ಪ್ರಶ್ನಾರ್ಥಕ ದೃಷ್ಟಿಯಲ್ಲಿ ಕೇಳಿದರು.

ಅವ್ಯಕ್ತ ಗುಂಗಿನೊಳಗಿದ್ದ ಬಚ್ಚ ಎಚ್ಚತ್ತು ಹೇಳಿದ, "ನೀವು ನನ್ನ ಧಣಿ!... ನಾನಿನ್ಮ ಒಕ್ಕಲು ಮಗ. ನೀವು ಹೇಳಿದಂತೆ ನಿಮ್ಮನ್ನು ಬಿಟ್ಟು ಇನ್ನೊಬ್ಬನಿಗೆ ಓಟಿತ್ತರೆ ನನ್ನ ಗತಿಯೇನಾಗಬಹುದೆಂದು ಗೊತ್ತಿಲ್ಲವೆ?" ಎಂದು.

ಬಚ್ಚನ ಮಾತನ್ನು ಕೇಳಿ ರಾಯರಿಗೆ ನಿಜಕ್ಕೂ ಸಂತೋಷವಾಯಿತು ಆದರೆ ಮುಖ ಭಾವೆಯನ್ನು ಬದಲಿಸದೆ ಹೇಳಿದರು, "ಖಂಡಿತವಾಗಿಯೂ ನಿನ್ನ ಓಟುಗಳನ್ನು ನನಗೆ ಹಾಕುತ್ತೀಯೂ?" ಎಂದು. ಮಾತಿನಲ್ಲಿ ಅನುಮಾನವಿದ್ದರೂ ಅತೃಪ್ತಿಯಿದ್ದಿಲ್ಲ.

"ದೇವರಾಣೆಗೂ ನಿಮಗೆ ಹಾಕುತ್ತೇನೆ, ನನ್ನೊಡೆಯೂ!..." ಎಂದು ಬಚ್ಚದೀನನಾಗಿ ದೇವರ ಮೇಲೆ ಆಣೆ ಇಟ್ಟು ಹೇಳಿದ! ಮನಸ್ಸು ಹೇಗೂ ಇರಲಿ. ಮಾತಂತೂ ಹೀಗೆ ಹೊರಬಿತ್ತು—ಬಡ ಬಚ್ಚನ ಬಾಯಿಯಿಂದ. ಜುನಾವಣೆಯ ಕಾಲದಲ್ಲಿ ದೊಡ್ಡವರ ಕೈಯೊಳಗಿರುವ ಬಡವರು ನೂಡುವ 'ಜಪ' ಇದೊಂದೆ— ನಿಮಗೇ ಹಾಕುತ್ತೇನೆ!' ಪಾಪ!....ಬಚ್ಚನೂ ತನ್ನೊಡೆಯರಿಗೆ ಅದೇ ಆಶ್ವಾಸನೆ ಇತ್ತ.

"ನೋಡು ಬಚ್ಚಾ!...ನೀನು ಬಡವ, ಕ್ಷಲ್ಪ ಹುಶಾರಾಗಿರು. ನಾನು ಹೇಳಿದ್ದೆಲ್ಲಾ ನೆನಪಿದೆಯಷ್ಟೆ?...." ಎಂದರು ರಾಯರು. ಇದೇ ಹೊರಡುವ ಸೂಚನೆಯೆಂದರಿತ ಬಚ್ಚ, ರಾಯರ ಮಾತು ಮುಗಿಯುವ ಮೊದಲೆ ಲಗುಬಗನೆ ಮನೆಯತ್ತ ಕಾಲ್ಕಿತ್ತ.

ಬಚ್ಚ ಕಣ್ಮರೆಯೊಡೊಡನೆ ರಾಯರು ಆರಾಮಾಸನದ ಮೇಲೆ ವಿರಮಿಸಿದರು. ಹಾಗೆ ಎಳೆ ನಗುವೊಂದು ಅವರ ಮುಖದಲ್ಲಿ ಮೂಡಿ ಮರೆಯಾಯಿತು. 'ಬಚ್ಚ ನನ್ನು ಇಷ್ಟು ಸುಲಭವಾಗಿ ಕೆಸೆಗೆ ಸೇರಿಸಿದೆನಲ್ಲ' ಎಂದೊ ಏನೊ, ಆ ನಗುವಿನ ಅರ್ಥ! "ಖಂಡಿತವಾಗಿಯೂ ನಿಮಗೆ ಹಾಕ.ತ್ತೇನೆ ನನ್ನೊಡೆಯ....." ಎಂದು ಬಚ್ಚ ಹೇಳಿದ ಮಾತನ್ನು ನೆನೆದು ರಾಯರು ಹಿಗ್ಗಿ ಹೀರೆಕಾಯಿಯಾದರು. ಆ ಕ್ಷಣ ಅವರು ಕೇವಲ ದುಡ್ಡಿದ್ದವರನ್ನು ದೊಡ್ಡವರೆನ್ನಲು ಒಪ್ಪಲಿಲ್ಲ. ಬವಲು, ದೊಡ್ಡವರಾಗಲು ಕೆಲವು ಗತ್ತುಗಳು ಅವಶ್ಯಕವೆಂದು ಮನಗಂಡರು.

"ಸುಬ್ಬಾ!.... ಹೇಗೆ ಬಚ್ಚನ ಕತೆ?" ಎಂದು ಹೆಣ್ಮಯಿಂದ, ಮೂಲೆಯಲ್ಲಿ ಮುದುಡಿ ಕುಳಿತಿದ್ದ ತನ್ನೆ 'ಖಾಸಗಿ ಕಾರ್ಯದರ್ಶಿ' ಸುಬ್ಬನನ್ನು ಪ್ರಶ್ನಿಸಿದರು—ರಾಯರು.

"ಅದನ್ನೆ ಹೇಳಬೇಕೆಂದಿದ್ದೆ ಧಣಿ... ನನಗೇನೊ ಆತನ ಮೇಲೆ ಅನುಮಾನ. ಅವನೊ ಸಂತೆ ನಾಯಿ ಹಾಗೆ. ತಿಂಡಿ ಇತ್ತವರ ಬೆಂಬಲಿಗ. ಶೆಟ್ರೆನೊ ಆತೆ ತೋರಿಸಿದ್ದಾರೆಂತ ಕಾಣುತ್ತೆ ಆದೂ ಅಲ್ಲದೆ ಹೆಂಡ್ತಿ ಒಡೆಯರಿಂದ ಮೇಲೆ ಕೇಳಬೇಕೆ?....ನನಗಂತೂ ಅನುಮಾನ!..."

(೧೧ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)
ಸಂಪಾದಕರು: ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧೫ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ನಿಮಗೂ ತಿಳಿದಿರಲಿ

೨೦ನೆ ಶತಮಾನದ ಮಹಾರಾಣಿ ಜುಲಿಯೂನಾ

ನೆದರ್‌ಲೇಂಡಿನ ಮಹಾರಾಣಿ ಜುಲಿಯೂನಾ ಸಾಮಾನ್ಯ ಜನತೆಯಿಂದ ಪ್ರತ್ಯೇಕಿತಳಾಗಿಲ್ಲ; ಆಕೆ ತನ್ನೆಲ್ಲ ಕೆಲಸಗಳನ್ನೂ ತಾನೇ ಮಾಡಿಕೊಳ್ಳುತ್ತಾಳೆ; ಜನರೊಡನೆ ಬೆರೆಯುತ್ತಾಳೆ. ತನ್ನ ಸ್ವತಂತ್ರತೆ, ಪಾಂಡಿತ್ಯ, ಸಾರ್ವಜನಿಕ ಜೀವನಗಳಿಂದ ಗೌರವಾದರಕ್ಕೆ ಪಾತ್ರಳಾಗಿವ್ದಾಳೆ. ಆದರೂ ಈಕೆ "ಮಹಾರಾಣಿ"!

ಮಹಾರಾಣಿಯೆಂದೊಡನೆಯೇ ಜನ ಸಾಮಾನ್ಯರ ಮುಂದೆ ವಿಶಿಷ್ಟ ಉತ್ಸವ ಮೂರ್ತಿಯಂತಹ ರೂಪವೊಂದು ಬಂದು ನಿಲ್ಲುವುದು. ಒಬ್ಬಾಕೆ ರೂಪಸಿಯು ಚಂದ್ರಕಾಂತ ಶಿಲೆಯ ಭವ್ಯ ರಾಜಮಂದಿರದಲ್ಲಿ ಪ್ರಪಂಚದ ಯಾವುದೇ ಸುಖ ದುಃಖಗಳ ಗೊಡವೆಯಿಲ್ಲದೆ ಇರುವಳೆಂದೂ ಆಕೆಯ ನಾಲಗೆಯಿಂದ ಆಜ್ಞೆಯು ಹೊರಬಿದ್ದದ್ದೇ ತಡ ಎಲ್ಲ ಕೆಲಸ ಕಾರ್ಯಗಳೂ ಪೂರಯಿಸ್ಸುವೆಂದೂ ನಾವು ಊಹಿಸುತ್ತೇನೆ. ತನಗೆ ಹೊರಗೆಲ್ಲಾದರೂ ಹೋಗಬೇಕೆಂದಿದ್ದರೆ, ತನ್ನ ಬಂಗಾರದ ರಥದಲ್ಲಿ ನಗರ ಭ್ರಮಣ ಮಾಡುವಳೆಂದೂ ಆಗ ದೂರದಲ್ಲಿ ಆಕೆಯ ದರ್ಶನ ಲಾಭ ಜನರಿಗೆ ದೊರೆಯುವುದೆಂದೂ ನಮ್ಮ ಕಲ್ಪನೆಯಿರುವುದು.

ಆದರೆ, ನೆದರ್‌ಲೇಂಡಿನ ರಾಣಿ ಜುಲಿಯೂನಾಳ ಜೀವನ ಇದಕ್ಕಿಂತ ತೀರ ಭಿನ್ನವಾದುದೆಂದರೆ ನೀವು ಆಶ್ಚರ್ಯಪಡಬಹುದು. ಈಕೆ ನಮ್ಮಂತೆಯೇ ಸಾಮಾನ್ಯ ರೀತಿಯ ಮನೆಯೊಂದರಲ್ಲಿ ವಾಸಿಸುತ್ತಾಳೆ; ಆಕೆಗೂ ಪ್ರಪಂಚದ ಸುಖದುಃಖಗಳ ಅರಿವಿದೆ; ತನ್ನ ಹೆಚ್ಚಿನ ಕೆಲಸಗಳನ್ನು ತನ್ನ ಕೈಯಿಂದಲೇ ಮಾಡಿಕೊಳ್ಳುತ್ತಾಳೆ; ಕೆಲವೊಮ್ಮೆ ಸೈಕಲ್ ಹತ್ತಿ ಪೇಟೆಯಿಂದ ತರಕಾರಿಗಳನ್ನೂ ತಂದುಕೊಳ್ಳುತ್ತಾಳೆ. ಇಷ್ಟರಿಂದಲೇ ೨೦ನೆ ಶತಮಾನದಲ್ಲಿರುವ ಈ ರಾಣಿಯು ನಿಮ್ಮ ಪಾಲಿನ ಕಾಲದ ಕಾಲ್ಪನಿಕ ರಾಣಿಗಿಂತ ತೀರ ಭಿನ್ನಳೇದು ನೀವು ತಿಳಿಯಬಹುದು. ಈ ಕಾರಣದಿಂದಲೇ ಜುಲಿಯೂನಾ ಲೋಕಪ್ರಿಯಳಾಗಿದ್ದಾಳೆಯೆಂದರೆ ಅತಿಶಯೋಕ್ತಿಯಲ್ಲ.

ಪ್ರಜಾಪ್ರಭುತ್ವದ ಇಂದಿನ ಯುಗದಲ್ಲಿಯೂ ಬೆರಳೆಣಿಕೆಯಷ್ಟು ದೇಶಗಳಲ್ಲಿ ರಾಜಪ್ರಭುತ್ವ ನಡೆಯುತ್ತಿರುವುದು ಆಸಮಂಜಸವೆನಿಸಬಹುದು. ಆದರಲ್ಲೂ ಇಂಗ್ಲೆಂಡ್, ನೆದರ್‌ಲೇಂಡಿನಂತಹ ನಾಗರಿಕ ಸಭ್ಯ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ರಾಣಿಯರೇ ರಾಜ್ಯಭಾರ ಮಾಡುತ್ತಿರುವುದು ವಿಲಕ್ಷಣವೆನಿಸಬಹುದು. ನೆದರ್‌ಲೇಂಡಿನಲ್ಲಿ ಮೂರು ತಲೆಮಾರುಗಳಿಂದಲೂ ರಾಣಿಯರೇ ರಾಜ್ಯವಾಳಿದ್ದಾರೆ. ಮೊದಲು ಜುಲಿಯೂನಾಳ ತಾಯಿಯು ರಾಣಿಯಾದಳು; ಈಗಿನ ರಾಣಿಗೂ ನಾಲ್ವರು ಪುತ್ರಿಯರಿರುವರು. ಇದರಲ್ಲಿ ಹಿರಿಯವಳೇ ಜುಲಿಯೂನಾಳ ಉತ್ತರಾಧಿಕಾರಿಣಿಯಾಗಿದ್ದಾಳೆ.

ನೆದರ್‌ಲೇಂಡಿನ ಜನಪ್ರಿಯ ರಾಣಿಯ ಕಥೆಯಾದರೂ ಬಹುರೋಚಕವಾಗಿದೆ. ರಾಜ ಕುಟುಂಬದಲ್ಲಿ ವಿವಾಹವಾದಾಗ ಆವೋದ ಪ್ರಮೋದದಿಂದ ಜನತೆ ಪ್ರಸನ್ನವಾಗುವಂತೆಯೇ ೧೯೦೧ರಲ್ಲಿ ನೆದರ್‌ಲೇಂಡಿನ ರಾಣಿ ವಿಲ್ಹೆಮಿನಾಳು ರಾಜಕುಮಾರಿ ಹೆಸ್ರಿಯನ್ನು ಮದುವೆಯಾದಾಗ ಜನರು ಸಂಭ್ರಮಿಸಿದರು. ರಾಣಿ ವಿಲ್ಹೆಮಿನಾಳು ಓರೆಂಜ್ ಸಾಮ್ರಾಜ್ಯದ ಅಂತಿಮ ಕೂಸಾಗಿದ್ದಳು. ಆದುದರಿಂದ ಜನರು ಈಕೆಯು ವಿವಾಹಕ್ಕೆ ಮೊದಲು ಈ ವಂಶವೆಲ್ಲ ನಿರ್ನಾಮವಾಗುವುದೋ ಎಂದು ಹೆದರುತಿದ್ದ ಜನತೆ ವಿವಾಹಾನಂತರ ಬಹು ಪ್ರಸನ್ನವಾಯಿತು. ರಾಜ ವಂಶವು ಮುಂದೆ ಬೆಳೆಯುವುದೆಂಬ ಆಶೆಯನ್ನಿವರು ಇಟ್ಟು ಕೊಂಡಿದ್ದರು.

ಜನತೆಯ ಆಶೆ ಆಕಾಂಕ್ಷೆಯೂ ಹೂರ್ಣವಾಗಲು ಹೆಚ್ಚುಕಾಲ ಹಿಡಿಯಲಿಲ್ಲ. ೧೯೧೮ನೆಯ ಎಪ್ರಿಲ್ ೩೦ನೆಯ ದಿನ ಹಗ ತೋಪುಗಳು ಹಾರಿ, ರಾಜ ಮಂದಿರದಲ್ಲಿ ಒಬ್ಬಾಕೆ ಕುವರಿ ಅವತರಿಸಿದ ಶುಭವಾರ್ತೆಯನ್ನು ಸಾರಿದುವು. ಜುಲಿಯೂನಾ ಎಂದು ಈ ಕುವರಿಗೆ ನಾಮಕರಣವೂ ಆಯಿತು. ರಾಜಕುವರಿ ಜುಲಿಯೂನಾಳ ಜನ್ಮದಿಂದಾಗಿ ಜನರ ಆನಂದಕ್ಕೆ ವಾರವೇ ಉಳಿಯಲಿಲ್ಲ. ಕೆತ್ತಳೆ ಬಣ್ಣದ ಕುದುರೆಗಳೂ ನಾಯಿಗಳೂ ವಂಶಪಾರಂಪರ್ಯ ವಿಧಾನದಿಂದ ಶೃಂಗಾರಿತ ರಾಜಮಂದಿರದ ನಾಲ್ಕೂ ನಿುಟ್ಟಗಳಲ್ಲಿ ಕಮ್ಮ ಕಾವಲು ಭಾರನ್ನು ಪ್ರದರ್ಶಿಸಿವು. ಒಬ್ಬಾತ ಗ್ರಾಮ ನಿವಾಸಿ ಆನಂದೋನ್ಮತ್ತನಾಗಿ ಕುಣಿದಾಡಿದ, ಆಗ, ಆತನ ಕೊರಳಿಗೆ ಜೋತು ಹಾಕಿದ್ದ ಕಿರುಗಂಟೆ ಕೆಳಗೆ ಬಿದ್ದು ಪುಡಿಪುಡಿಯಾಯಿತಂತೆ; ರಾಣಿಯು ಬದಲಿಗಂಟೆಯಿತ್ತಳಂತೆ!

ರಾಜಕುಮಾರಿಯರಲ್ಲಿ ಅಖಂಡ ದೇಶದ ಆಕೆ-ಆಕಾಂಕ್ಷೆಗಳು ಕೇಂದ್ರಿಕೃತವಾಗಿರುವುದರಿಂದ ಇವರ ಪ್ರಾರಂಭಿಕ ಜೀವನ ಉಳಿದ ಬಾಲಕ-ಬಾಲಕಿಯರಿಗಿಂತ ಬೇರೆ ರೀತಿಯಲ್ಲಿರುತ್ತದೆ. ರಾಜಕುಮಾರಿ ಜುಲಿಯೂನಾಳ ಬಾಲ್ಯಕಾಲದ ಚಿತ್ರಗಳು ಅತಿ ಸುಂದರವಿನೆ. ಕೆಲವಲ್ಲಿ ಈಕೆ ತನ್ನ ತಂದೆಯೊಡನೆ ಆಡುತ್ತಿರುವಳಾದರೆ, ಮತ್ತೆ ಕೆಲವಲ್ಲಿ ಪ್ರಾಣಿ-ಸಾಮಾನ್ಯ ಬಾಲಕ ಬಾಲಿಕೆಯರೊಡನೆ ಆಡುತ್ತಿರುವಳು. ಆಂತೂ ರಾಜ ಕುವರಿ ಜುಲಿಯೂನಾಳ ಬಾಲ್ಯವು ಬೂವ್ವದೇ ಸಂಕಟಗಳಲ್ಲದೆ ಬಹುರಂತೋಷದಲ್ಲಿಯೇ ಕಳೆಯಿತು.

ಸುಪ್ರಸಿದ್ಧ ಶಿಕ್ಷಣವೇತ್ತನಾದ ಜಾನ್ ಲಿಗಾವರ್ಟನ ಮಾರ್ಗದರ್ಶನದಲ್ಲಿ ರಾಜ ಕುಮಾರಿಯ ವಿದ್ಯಾಭ್ಯಾಸ ನಡೆಯಿತು. ಜೊತೆಗೆ ಆಟ, ವಿನೋದಾಂಜನೆಗಳೂ ಆಗುತಿದ್ದುವು. ಕುದುರೆ ಸವಾರಿ, ಸೈಕಲ್ ಪ್ರಯಾಣ, ಹಿಮದಲ್ಲಿ ನಡಿಗೆ ಮೊದಲಾದುವುಗಳಲ್ಲಿ ಪ್ರಾವೀಣ್ಯ ಪಡೆದಳು. ೧೯೩೦ರಲ್ಲಿ ಆಕೆಗೆ ಆಧುನಿಕ ಭಾಷೆಗಳು ಹಾಗೂ ಲೇಟಿನ್ ಮತ್ತು ಗ್ರೀಕ ಭಾಷೆಗಳನ್ನು ಕಲಿಸಿದರು. ೧೪ನೆಯ ವರ್ಷಕ್ಕೆ ಪಾದಾರ್ಪಣ ಮಾಡಿದೊಡನೆಯೇ ನೆದರ್‌ಲೇಂಡಿನ ಸಾಹಿತ್ಯವನ್ನು ಅಭ್ಯಸಿಸಿದ

(೧೦ನೇ ಪುಟ ನೋಡಿರಿ)

ತೀರಿದ ಆಶೆ

ಬಹಳ ಸಮಯದಿಂದ ಆತನು ತೀರ್ಥ ಯಾತ್ರೆಯನ್ನು ಮಾಡಬೇಕೆಂದು ಬಯಸಿದ್ದನು. ಆದರೆ ಅವನಿಗದು ಸಾಧ್ಯವಾಗಲಿಲ್ಲ. ಸಮಯವಿದ್ದರೆ ಹಣವಿರಲಿಲ್ಲ, ಹಣವಿದ್ದರೆ ಸಮಯವಿರಲಿಲ್ಲ, ಅಥವಾ ಇವೆರಡೂ ಇರಲಿಲ್ಲ. ಕೊನೆಗೆ ಯೇಗೂ ಆ ಶುಭಸಮಯ ಬಂದು ಆತನು ತೀರ್ಥಯಾತ್ರೆಗೆ ಹೊರಟಿದ್ದಾನೆ.

ಯಾತ್ರೆಯಿಂದ ಆತನು ಸುಖವಾಗಿ ಮತ್ತು ಕ್ಷೇಮದಿಂದ ಹಿಂತಿರುಗಿ ಬರಲೆಂದು ಎಲ್ಲರೂ ಹಾರೈಸುತ್ತಾರೆ.

ಈ ವೃದ್ಧನಿಗೆ ಇದು ಹೇಗೆ ಸಾಧ್ಯವಾಯಿತು? ಹೌದು, ಅವನು ಒಂದು ಜೀವ ವಿಮಾ ಪಾಲಿಸಿಯನ್ನು ಪಡೆದಿದ್ದುದರಿಂದ ಅವನಿಗಿದು ಸಾಧ್ಯವಾಯಿತು. ಆ ಪಾಲಿಸಿ ಆತನಿಗೆ ಇಂದು ಸ್ವಯಾರ್ಜಿತವಾಗಿ ಹಣವನ್ನು ಒದಗಿಸಿದ್ದು ಮಾತ್ರವಲ್ಲದೆ, ವೃದ್ಧಾಪ್ಯದಲ್ಲಿ ಬೇಕಾಗಿರುವ ಇತರ ಅವಶ್ಯಕತೆಗಳನ್ನೂ ಆತನಿಗೆ ಒದಗಿಸಿರುತ್ತದೆ. ಭದ್ರವಾಗಿ ಮತ್ತು ಸುಲಭ ರೀತಿಯಲ್ಲಿ ಹಣವನ್ನು ಉಳಿಸಿ, ನಿಮ್ಮ ಆಶೆಗಳನ್ನು ನೆರವೇರಿಸಲು ಜೀವ ವಿಮೆಯ ಮೂಲಕ ಸಾಧ್ಯವಾಗುತ್ತದೆ. ಇದರ ಹೆಚ್ಚಿನ ವಿವರಗಳನ್ನು ತಿಳಿಸಲು ಒರ್ವ ಜೀವ ವಿಮಾ ಏಜಂಟನಿಗೆ ಹೇಳಿರಿ.

ಜೀವ ವಿಮೆ

ಗಿಂತ ಶ್ರೇಷ್ಠ ಉಳಿತಾಯ ಇನ್ನೊಂದಿಲ್ಲ.

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಸೂರ್ಯನ ಸಂಸಾರದಲ್ಲಿರುವ ವಿವಿಧ ಗ್ರಹಗಳು ಹೇಗೆ ಜನಿಸಿದುವು ಎಂಬುದರ ಬಗ್ಗೆ ಈಗ ಬಳಕೆಯಲ್ಲಿರುವ ಸಿದ್ಧಾಂತ ಹಳೆಯದಾಯಿತು. ಇತ್ತೀಚೆಗೆ ನಡೆದ ಹೊಸಹೊಸ ಸಂಶೋಧನೆಗಳಿಂದ ಹೊಸ ಸಿದ್ಧಾಂತ ಏರ್ಪಟ್ಟಿದೆ. ಇದನ್ನು ವಿವರಿಸುವ ಶ್ರೀ ಜೋರಿಸ್ ಲೆವಿನ್‌ರವರ ಸುಸ್ತಕದ ಅನುವಾದವನ್ನು ಸಂಕ್ಷೇಪವಾಗಿ 'ನವಯುಗ'ನ ವಾಚಕರಿಗೆ ಸುಪರಿಚಿತರಿರುವ ಶ್ರೀ ಎಂ. ರಂಗ ರಾವು ಮಾಡಿಕೊಟ್ಟು ಉಪಕರಿಸಿದ್ದಾರೆ.

೧. ಪ್ರಸ್ತಾವನೆ

ಬ್ರಹ್ಮಾಂಡದಲ್ಲಿ

ಆಕಾಶದಲ್ಲಿರುವ ನಕ್ಷತ್ರಗಳನ್ನು ಲೆಕ್ಕ ಮಾಡಲು ಸಾಧ್ಯವುಂಟೆ? ಇಲ್ಲ. ಕಮುದ್ರದ ದಂಡೆಯಲ್ಲಿರುವ ಮರಳು ಕಣಗಳನ್ನೂ, ಆಕಾಶದಲ್ಲಿರುವ ನಕ್ಷತ್ರಗಳನ್ನೂ ಲೆಕ್ಕಿಸುವುದಿಲ್ಲವೆಂದು ಸಾಮಾನ್ಯವಾಗಿ ಹೇಳುತ್ತಾರೆ. ಆದರೆ ನಾವಾರೂ ನಕ್ಷತ್ರಗಳನ್ನು ಲೆಕ್ಕಮಾಡಲು ಪ್ರಯತ್ನ ಪಟ್ಟವರಲ್ಲ. ಒಂದು ವೇಳೆ ಪಟ್ಟು ಹಿಡಿದು ಯಾರಾದರೂ ಆ ಕೆಲಸ ಮಾಡಿದರೆಂದುಕೊಳ್ಳೋಣ. ಆಗ ಅವರಿಗೊಂದು ಆಶ್ಚರ್ಯಕರವಾದ ವಿಷಯ ಗೊತ್ತಾಗುತ್ತದೆ; ಅವರಿಗೆ ೩೦೦ಕ್ಕಿಂತ ಹೆಚ್ಚು ನಕ್ಷತ್ರಗಳು ಕಾಣಿಸಲಾರವು!

ಆಂದರೆ ಆಕಾಶದಲ್ಲಿ ನಕ್ಷತ್ರಗಳು ೩೦೦ಂ, ಇಪ್ಪತ್ತೇ ಇವೆಯೆಂಬ ಆರ್ಥವಲ್ಲ. ಅವುಗಳನ್ನು ಬರಿಗಣ್ಣಿನಿಂದ ಲೆಕ್ಕ ಮಾಡಲು ಸಾಧ್ಯವಿಲ್ಲ. ದೂರದರ್ಶಿನಿ (ಟೆಲಿಸ್ಕೋಪು)ಯ ಸಹಾಯದಿಂದ ಆಕಾಶದ ಕಡೆಗೆ ನೋಡಿ ಲೆಕ್ಕ ಮಾಡಿದರೆ, ಸುಮಾರು ೫೦೦ ಕೋಟಿ ನಕ್ಷತ್ರಗಳು ಕಾಣಿಸುತ್ತವೆ! ಆಷ್ಟುಮಾತ್ರವಲ್ಲ ಟೆಲಿಸ್ಕೋಪಿನ ಸಹಾಯದಿಂದ ನಾವು ನಕ್ಷತ್ರಗಳಿಗಿಂತಲೂ ವಿಚಿತ್ರವಾದ ವಿಷಯಗಳನ್ನು ಆಕಾಶದಲ್ಲಿ ಕಾಣಬಹುದು. ಅವೆಲ್ಲವೂ ಬ್ರಹ್ಮಾಂಡಗಳು. "ಗೆಲಾಕ್ಸಿ"ಗಳೆಂದು ಇವುಗಳಿಗೆ ಹೇಳುತ್ತಾರೆ. ಈ ಒಂದೊಂದು ಬ್ರಹ್ಮಾಂಡದಲ್ಲಿಯೂ ಅನೇಕ ಕೋಟಿ ನಕ್ಷತ್ರಗಳಿವೆ. ಇಂತಹ ಬ್ರಹ್ಮಾಂಡಗಳುವಿಶ್ವದಲ್ಲಿ ಅನೇಕ ಕೋಟಿಗಳಷ್ಟಿವೆಯೆಂದು ಟೆಲಿಸ್ಕೋಪುಗಳು ನಮಗೆ ತಿಳಿಸುತ್ತವೆ.

ಪ್ರಸ್ತುತ ಶ್ರಮಂಜದೊಳಗೆಲ್ಲಕ್ಕಿಂತಲೂ ದೊಡ್ಡದಾದ ಟೆಲಿಸ್ಕೋಪು ಅಮೇರಿಕದ ಸಾಲೋಮೊಕ ಪರ್ವತದ ಮೇಲೆ ಜುಪಿಂ ಪಡಿ ಎತ್ತರದಲ್ಲಿ ನಿರ್ಮಿಸಲ್ಪಟ್ಟಿದೆ. ೨೦,೦೦೦ ಮೈಲು ದೂರದಲ್ಲಿ ಒಂದು ಸಾಮಾನ್ಯ ಮಯಣದ ಬತ್ತಿ ಉರಿಯುತ್ತಿದ್ದರೆ ಅದರ ಕಾಂತಿಯ ಜಾಡನ್ನು ಈ ಟೆಲಿ ಸ್ಕೋಪು ಕಂಡು ಹಿಡಿಯಬಲ್ಲುದಂತೆ. ಇದು ಆಕಾಶದಲ್ಲಿ ಎಷ್ಟು ದೂರದವರೆಗೆ ನೋಡಬಲ್ಲುದೆಂಬುದಕ್ಕೆ ಆ ದೂರವನ್ನು ಮೈಲಿಗಳ ಲೆಕ್ಕದಲ್ಲಿ ಹೇಳಲು ೬ ಅಂಕೆಯನ್ನು ಬರೆದು ಅದರ ಪಕ್ಕದಲ್ಲಿ ೨೦ ಸೊನ್ನೆಗಳನ್ನಿಡಬೇಕು!

ಖಗೋಳ ಶಾಸ್ತ್ರಜ್ಞರು ಇಷ್ಟು ದೊಡ್ಡ ದೂರವನ್ನು ಮೈಲುಗಳ ಲೆಕ್ಕದಲ್ಲಿ ಹೇಳುವುದಿಲ್ಲ. "ಕಾಂತಿ ಸಂವತ್ಸರ"ಗಳೆಂದು ಬದಲಾಯಿಸಿಕೊಂಡು ಹೇಳುತ್ತಾರೆ. ಏಕೆಂದರೆ, ಕಾಂತಿ ಗಂಟೆಗೆ ೬೭ ಕೋಟಿ ಮೈಲು ವೇಗದಲ್ಲಿ ಪ್ರಕಾಶಿಸುವಂಥಾದ್ದು. ಪಾಲೋಮಾರ್ ಟೆಲಿಸ್ಕೋಪು ೧೦೦೦ ಕಾಂತಿ ಸಂವತ್ಸರಗಳ ದೂರದವರೆಗಿರುವ ಬ್ರಹ್ಮಾಂಡಗಳನ್ನು ನೋಡಬಲ್ಲುದು!

ನಮ್ಮ ಈ ಭೂಮಿಯೂ, ಸೂರ್ಯನೂ, ನಾವು ಬಿಡಿಬಿಡಿಯಾಗಿ ನೋಡುವ ನಕ್ಷತ್ರಗಳೂ, 'ಕ್ಷೀರಸಾಗರ'ವೂ ಇವೇ ನೊದಲಾದುವೆಲ್ಲಾ ಕೂಡಿ ಒಂದು ಬ್ರಹ್ಮಾಂಡದಲ್ಲಿವೆ. ಇದರಂತೆಯೇ ಇನ್ನೊಂದು ಬ್ರಹ್ಮಾಂಡ. ಒಂದು ಬ್ರಹ್ಮಾಂಡದ ಪಕ್ಕದಲ್ಲಿರುವ ಇನ್ನೊಂದು ಬ್ರಹ್ಮಾಂಡವು ಎಷ್ಟು ದೂರದಲ್ಲಿಲ್ಲರುವುದೆಂದು ನಮ್ಮಿಂದ ಊಹಿಸಲಿಕ್ಕಾಗದು. ನಮ್ಮ ಬ್ರಹ್ಮಾಂಡದ ಕಾಂತಿ ಆ ಬ್ರಹ್ಮಾಂಡಕ್ಕೆ ಸೇರಲಿಕ್ಕೆ ಸುಮಾರು ೭ ಲಕ್ಷ ವರ್ಷಗಳು ಬೇಕು.

ಒಂದು ಬ್ರಹ್ಮಾಂಡಕ್ಕೂ ಇನ್ನೊಂದು ಬ್ರಹ್ಮಾಂಡಕ್ಕೂ ಇರುವ ದೂರವು ಈ ಪ್ರಮಾಣದಲ್ಲಿರುವುದೆಂದು ನಾವು ಭಾವಿಸಬಹುದು.

ಹಾಗೆಯೇ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಮಧ್ಯದಲ್ಲಿರುವ ದೂರವನ್ನು ಕೂಡಾ ನಿಮ್ಮಿಂದ ಊಹಿಸಲಿಕ್ಕಾಗುವುದಿಲ್ಲ. ಗಂಟೆಗೆ ೬೭ ಕೋಟಿ ಮೈಲು ವೇಗದಿಂದ ಪ್ರಯಾಣ ಮಾಡಬಲ್ಲ ಬೆಳಕು ಸೂರ್ಯನ ಬದಿಯಲ್ಲಿರುವ ಇನ್ನೊಂದು ನಕ್ಷತ್ರವನ್ನು ಮುಟ್ಟಲಿಕ್ಕೆ ಸುಮಾರು ನಾಲ್ಕುವರೆ ವರ್ಷ ಹಿಡಿಯುತ್ತದೆ. ನಕ್ಷತ್ರ-ನಕ್ಷತ್ರಗಳ ಮಧ್ಯದಲ್ಲಿ ಸಾಧಾರಣವಾಗಿ ಇಷ್ಟೊಂದು ದೂರವಿರುವುದೆಂದು ನಾವು ಭಾವಿಸಬಹುದು. ಈ ಬಗೆಯ ನಕ್ಷತ್ರಗಳು ಎಷ್ಟೋ ಕೋಟಿ ಸಂಖ್ಯೆಯಲ್ಲಿ ಸೇರಿ ಒಂದು ಬ್ರಹ್ಮಾಂಡ ಎನಿಸುತ್ತದೆ. ಸೂರ್ಯನು ನಮಗೆ ಬಹಳ ಸಮೀಪದಲ್ಲಿರುವ—ಅಂದರೆ ೯೩೦ ಲಕ್ಷ ಮೈಲು ದೂರದಲ್ಲಿರುವ—ನಕ್ಷತ್ರವಾದುದರಿಂದಲೇ ಇಷ್ಟು ದೊಡ್ಡದಾಗಿಯೂ ಕಾಂತಿಯುತವಾಗಿಯೂ ಕಾಣಿಸುತ್ತದೆ. 'ಕ್ಷೀರಸಾಗರ'ದೊಳಗಿರುವ ನಕ್ಷತ್ರಗಳ ಗುಂಪು ನಮ್ಮ ಬ್ರಹ್ಮಾಂಡಕ್ಕೆ ಸೇರಿದುವೇ ಆದರೂ ಅವುಗಳನ್ನು ನಾವು ಬೇರೆ ಬೇರೆಯಾಗಿ ನೋಡಲಾಗದಷ್ಟು ದೂರದಲ್ಲಿವೆ. ಆವುಗಳ ಕಾಂತಿ ನಮಗೆ ಸೇರಲು ೬೦ ಸಾವಿರ ಕಾಂತಿ ಸಂವತ್ಸರಗಳು ಬೇಕು.

ಇವುಗಳಿಂದ ಒಂದೊಂದು ಬ್ರಹ್ಮಾಂಡವೂ ಎಷ್ಟು ದೊಡ್ಡದಾಗಿರುವುದೆಂದು ನಾವು ಊಹಿಸಬಹುದು. ಆದರೆ ಬ್ರಹ್ಮಾಂಡದ ಪ್ರಮಾಣದೊಂದಿಗೆ ಹೋಲಿಸಿದರೆ ಬ್ರಹ್ಮಾಂಡಗಳ ನಡುವಿನಲ್ಲಿರುವ ದೂರವು ಇನ್ನೂ ಎಷ್ಟೋ ಪಾಲು ದೊಡ್ಡದು. ಆದರಂತೆಯೇ ಸೂರ್ಯನಿಗೂ ಸೂರ್ಯನ ಸುತ್ತಲೂ ತಿರುಗುವ ಗ್ರಹಗಳಿಗೂ ನಡುವಿನಲ್ಲಿರುವ ದೂರದೊಂದಿಗೆ ಹೋಲಿಸಿದರೆ ನಕ್ಷತ್ರಗಳ ನಡುವಿನಲ್ಲಿರುವ ದೂರವು ಬಹಳ ಹೆಚ್ಚು.

ಸೂರ್ಯ ಕುಟುಂಬ — ಸೂರ್ಯನೂ ಸೂರ್ಯನ ಸುತ್ತಲೂತಿರುಗುವ ಗ್ರಹಗಳೂ, ಈ ಗ್ರಹಗಳ ಸುತ್ತೂ ತಿರುಗುವ ಉಪಗ್ರಹಗಳೂ, ಸಾವಿರಾರು ಸೂಕ್ಷ್ಮ ಗ್ರಹಗಳೂ, ಧೂಮ ಕೇತುಗಳೂ—ಇವುಗಳೆಲ್ಲಾ ಸೇರಿ "ಸೂರ್ಯ ಕುಟುಂಬ"ವೆನಿಸಿವೆ.

ಎಲ್ಲಕ್ಕಿಂತಲೂ ಸೂರ್ಯನ ಪಕ್ಕದಲ್ಲಿದ್ದು ಸೂರ್ಯನ ಸುತ್ತಲೂ ತಿರುಗುವ ಗ್ರಹವು ಬುಧ. ಇದು ಸೂರ್ಯನಿಗೆ ೩೬೦ ಲಕ್ಷ ಮೈಲಿನಲ್ಲಿದೆ. ಇದು ಬಹಳ ಚಿಕ್ಕದು. ಭೂಮಿಯ ಇಪ್ಪತ್ತನೇ ಒಂದು ಭಾಗದಷ್ಟಿದೆ.

ಆದರ ತರುವಾಯ ಬರುವ ಗ್ರಹ ಶುಕ್ರ. ಸೂರ್ಯನಿಂದ ಶುಕ್ರನಿಗಿರುವ ದೂರ ೬೭೦ ಲಕ್ಷ ಮೈಲು. ಈ ಗ್ರಹವು ಸುಮಾರಾಗಿ ಭೂಮಿಗೆ ಸಮಾನವಾದ ಪ್ರಮಾಣವುಳ್ಳದ್ದು. ಇದು ನಮಗೆ ಆಕಾಶದಲ್ಲಿ ಉಜ್ವಲವಾಗಿ ಕಾಣಿಸುತ್ತಿದರಿಂದು, ಇದನ್ನು 'ಬೆಳ ಚುಕ್ಕೆ' ಎನ್ನುತ್ತೇವೆ.

ಸೂರ್ಯನಿಂದ ಇನ್ನಿಷ್ಟು ದೂರ ಹೋದರೆ ತಗಲುವ ಗ್ರಹವೇ ನಾವಿರುವ ಈ ಭೂಮಿ. ಇದು ಸೂರ್ಯನಿಗೆ ೯೩೦ ಲಕ್ಷ ಮೈಲು ದೂರದಲ್ಲಿದೆ. ಇದಕ್ಕೆ ಉಪಗ್ರಹ ಚಂದ್ರ; ಇದು ಭೂಮಿಗೆ ೨೪೦,೦೦೦ ಮೈಲು ದೂರದಲ್ಲಿದ್ದು ಭೂಮಿಯ ಸುತ್ತಲೂ ತಿರುಗುತ್ತದೆ. ಚಂದ್ರನ ಪ್ರಮಾಣ ಭೂಮಿಯ ಪ್ರಮಾಣದ ೫೦ನೇ ಒಂದಂಶವಾಗಿದೆ.

ಭೂಮಿಗಿಂತಲೂ ಸೂರ್ಯನಿಗೆ ದೂರವಾಗಿರುವ ಗ್ರಹವು ಕುಜ—ಅಥವಾ ಅಂಗಾರಕ. ಈ ಗ್ರಹವು ಸೂರ್ಯನಿಗೆ ೧೪ ಕೋಟಿಗಳ ಮೇಲೆ ಚಿಲ್ಲರೆ ಮೈಲು ದೂರದಲ್ಲಿದೆ. ಈ ಕುಜ ಗ್ರಹವು ಭೂಮಿಗಿಂತಲೂ ಬಳಕೆ ಚಿಕ್ಕದು. ಇದರ ಪ್ರಮಾಣವು ಭೂಮಿಯ ಪ್ರಮಾಣದ ಕಾಲಂಶ. ಭಾರ, ಭೂಮಿಯ ಭಾರದ ಹತ್ತನೇ ಒಂದಂಶ. ಈ ಗ್ರಹವು ಇತ್ತೀಚೆಗೆ ಭೂಮಿಗೆ ಸಾಧ್ಯವಾದಷ್ಟು ಹತ್ತಿರಕ್ಕೆ ಬಂತು. ಆಗ ಪ್ರಪಂಚದ ಶಾಸ್ತ್ರವೇತ್ತರು ಇದನ್ನು ಬೃಗರೂಕಶಿಯಿಂದ ಗಮನಿಸಿದರು. ಈ ಗ್ರಹಕ್ಕೆ ಕೂಡಾ ಬಹಳ ಚಿಕ್ಕ ಹತ್ತು ಹತ್ತು ಮೈಲು ವ್ಯಾಸವಿರುವ ಉಪಗ್ರಹಗಳವೆಯೆಂದು ಗೊತ್ತಾಯಿತು.

ಕುಜನನ್ನು ಕೂಡಾ ದಾಟಿ ಇನ್ನೂ ದೂರಕ್ಕೆ ಹೋದರೆ ಗುರು ಗ್ರಹವು ಸಿಕ್ಕುತ್ತದೆ. ಆದರೆ ಕುಜನಿಗೂ ಗುರುವಿಗೂ ಮಧ್ಯದಲ್ಲಿ 'ಆಸ್ಟರಾಯಿಡ್ಸ್' ಎಂಬ ಅಲ್ಪ ಗ್ರಹಗಳ ಸಮೂಹವು ಸೂರ್ಯನ ಸುತ್ತಲೂ ಪರಿಭ್ರಮಿಸುವುದು ಕಾಣಿಸುತ್ತದೆ. ಈ ಅಲ್ಪ ಗ್ರಹಗಳು ಸುಮಾರು ೫೦೦೦ ಇವೆಯೆಂದು ಅಂದಾಜು ಮಾಡಲಾಗಿದೆ. ಇವುಗಳಲ್ಲಿ ಸ್ವಲ್ಪ ದೊಡ್ಡವು ಟೆಲಿಸ್ಕೋಪಿನಲ್ಲಿ ಕೂಡಾ ಕಾಣಿಸುತ್ತವೆ. ಗುರು ಗ್ರಹವು ಸೂರ್ಯನಿಗೆ ೫೦ ಕೋಟಿ ಮೈಲ್ಕ್ ದೂರದಲ್ಲಿದೆ ಇದು ಗ್ರಹಗಳೊಳಗೆಲ್ಲಾ ಬ್ರಹ್ಮಾಂಡವಾಗಿದೆ. ಉಳಿದ ಗ್ರಹಗಳೆಲ್ಲ ಕೂಡಿಕೊಂಡರೂ ಅದರ ಪ್ರಮಾಣಕ್ಕೆ ಸಾಲದು. ಇದು ಭೂಮಿಗೆ ೧೪೦೦ ಮಡಿಯಷ್ಟಿರುವ ಗ್ರಹ. ಈ ಗ್ರಹಕ್ಕೆ ೧೨ ಚಂದ್ರರು ಉಪಗ್ರಹಗಳಾಗಿವೆ. ಶುಕ್ರನಿಗಿಂತ ಸುಮಾರು ಎಂಟು ಮಡಿ ದೂರದಲ್ಲಿದ್ದರೂ ಈ ಗ್ರಹವು ಸೂರ್ಯ ಕಾಂತಿಯಲ್ಲಿ ಸ್ವಲ್ಪ ಹೆಚ್ಚು ಕಡಮೆ ಶುಕ್ರನಿಗೆ ಸಮಾನವಾಗಿಯೇ ಆಕಾಶದಲ್ಲಿ ಬೆಳಗುತ್ತದೆ.

ಗುರುವಿಗಿಂತಲೂ ದೂರವಿರುವ ಗ್ರಹವು ಶನಿ. ಇದು ಕೂಡಾ ಬಹಳ ದೊಡ್ಡ ಗ್ರಹ; ಇದು ಪ್ರಮಾಣದಲ್ಲಿ ಭೂಮಿಗಿಂತ ೯೦೦ ಮಡಿ ಹೆಚ್ಚು; ಭಾರದಲ್ಲಿ ಭೂಮಿಗಿಂತ ೧೦೦ ಮಡಿಯಿದೆ ಈ ಗ್ರಹಕ್ಕೆ ೯ ಚಂದ್ರಗಳವೆ. ಈ ಗ್ರಹದ ವಿಶೇಷ ಸೌಂದರ್ಯವೇನೆಂದರೆ, ಇದರ ಸುತ್ತಲೂ ಮೂರು ವಲಯಗಳಿವೆ. ಈ ವಲಯಗಳಲ್ಲಿ ಅಸಂಖ್ಯವಾದ ಕಣಗಳ ಹೊರತು ಮತ್ತೇನೂ ಇಲ್ಲವೆಂದು ಶಾಸ್ತ್ರವೇತ್ತರು ಹೇಳುತ್ತಾರೆ. ಟೆಲಿಸ್ಕೋಪಿನಿಂದ ನೋಡಿದಾಗ ಇವು ಅತ್ಯಂತ ಮನೋಹರವಾಗಿ ಕಾಣಿಸುತ್ತವೆ. ಈ ಗ್ರಹವು ಸೂರ್ಯನಿಗೆ ಹೆಚ್ಚು ಕಡಮೆ ೯೦ ಕೋಟಿ ಮೈಲು ದೂರದಲ್ಲಿದೆ. ಈ ಗ್ರಹದಲ್ಲಿ ನಿಂತು ನೋಡಬಲ್ಲ

(೯ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ಪಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ನಮ್ಮ ತುಮಕೂರು ಶಾಖೆ
ತಾ. 14—11—1960ಕ್ಕೆ ತೆರೆಯಲ್ಪಡುವುದು.

ಆಸ್ತಮಾ ರೋಗಿಗಳೆ
ತಿಳುನಳಿಕೆಗಾಗಿ—

ಪ್ರಖ್ಯಾತವಾದ ಆಸ್ತಮಾ ಹಿಮಾಲಯನ್ ಮೂಲಿಕೆಯನ್ನು ಹಾಲು ಮತ್ತು ಅನ್ನದಿಂದ ತಯಾರಿಸಿದ ಔಷಧಿಯೊಂದಿಗೆ 3.12.60 ಪೂರ್ತಿಯೆಯ ರಾತ್ರಿ ಸೇವಿಸಿದರೆ ಆಸ್ತಮಾ, ನೆಗಡಿ, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ಕಷ್ಟವಾಗುವಿಕೆ, ಉಸಿರು ಕಟ್ಟುವಿಕೆ ಇವು ಗುಣವಾಗುವುದು ಕೂಡಲೇ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Sri Mahatma Sidh Baba Seva Ashram, P. O. Chitrakot, U. P.

ರೋಗನಿದಾನ

ಸಿಡುಬು ರೋಗವನ್ನು ಹೇಗೆ ತಡೆಗಟ್ಟಬಹುದು?

ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿಶಾಖೆಯ ಆರೋಗ್ಯ ಶಿಕ್ಷಣ ವಿಭಾಗದವರು ಪ್ರಕಟಿಸಿರುವ ಲೇಖನವಿದು. ಸಿಡುಬು ರೋಗ ಹೇಗೆ ಹರಡುವುದು, ಈ ರೋಗದ ಲಕ್ಷಣಗಳೇನು, ಯಾವ ಯಾವ ಘಟ್ಟಗಳಲ್ಲಿ ಬರುತ್ತವೆ, ಸಿಡುಬಿನ ದಾಕು ಹಾಕಿಸಿಕೊಂಡು ಈ ರೋಗದಿಂದ ಸುಲಭವಾಗಿ ಮುಕ್ತರಾಗುವುದು ಹೇಗೆ? ಮೊದಲಾದ ವಿಷಯಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಸಿಡುಬು ರೋಗವು ಪ್ರಬಲವಾದ ಸಾಂಕ್ರಾಮಿಕರೋಗ. ಆಂತೆಯೇ, ಅದು ಸುಲಭವಾಗಿ ನಿವಾರಣೆಮಾಡಿಕೊಳ್ಳಬಹುದಾದ ರೋಗ. ಈ ರೋಗವು ವೈಸುಡುವ ಜ್ವರದಿಂದ ಆರಂಭವಾಗುತ್ತದೆ. ವಿಶಿಷ್ಟ ಮಾದರಿಯ ಗುಳ್ಳೆಗಳು ಮೈಯಲ್ಲಿ ಉಕ್ಕಿದ ನಂತರ ಜ್ವರ ಇಳಿಯುತ್ತದೆ. ರೋಗಿಯು ಈ ಸಿಡುಬು ರೋಗದಿಂದ ಮುಕ್ತನಾದರೂ, ಸಿಡಬಿನ ಕಲೆ ಮಾತ್ರ ಹಾಗೆಯೇ ಉಳಿದುಕೊಳ್ಳುತ್ತದೆ.

ಈ ರೋಗವು ಸಿಡುಬಿನ ದಾಕು ಹಾಕಿಸದೇ ಇದ್ದ ಮಕ್ಕಳಿಗೆ ಬಹು ಸುಲಭವಾಗಿ ಬರುವುದು. ದಾಕು ಹಾಕಿಸದೇ ಇದ್ದ ಕಡೆಗಳಲ್ಲಿ ಅದು ಉಸದ್ರವದ ಮಾದರಿಯಲ್ಲಿ ಹರಡಿ ನೂರಕ್ಕೆ ೩ರಿಂದ ೩೦ರ ವರೆಗೆ ಮರಣವನ್ನು ತರುವುದು.

ವರಿಯೋಲ — ಅಥವಾ ಸಿಡುಬು ರೋಗಾಣು ಎಂಬ ವಿಷಾಣುವಿನಿಂದ ಈ ರೋಗ ಹರಡುವುದು. ಈ ರೋಗಾಣುವನ್ನು ಬಹು ಸುಲಭವಾಗಿ, ಬೆಂಕಿ ಮತ್ತು ಬಿಸಿಲಿನಿಂದ ನಾಶಪಡಿಸಬಹುದು. ಆದರೆ ಈ ರೋಗಾಣು ಶುಷ್ಕ ಪರಿಸ್ಥಿತಿಯಲ್ಲಿ ತಂಪಿನ ಸ್ಥಳದಲ್ಲಿದ್ದರೆ ಬಹು ಕಾಲದ ನರೆಗೆ ಇರಬಲ್ಲದು. ಸಾಮಾನ್ಯ ಕ್ರಿಮಿ ನಾಶಕಗಳು ಅವರ ಮೇಲೆ ಜಾಸ್ತಿಯಾಗಿ ಯಾವ ಪರಿಣಾಮವನ್ನೂ ತೋರಲಾರವು.

ರೋಗ ಲಕ್ಷಣಗಳು

ಛಳಿ ಮತ್ತು ಜ್ವರದಿಂದ ಸಿಡುಬು ರೋಗವು ತನ್ನ ಆಗಮನವನ್ನು ಸಾರುವುದು. ಜ್ವರವು ೧೦೨ ಡಿಗ್ರಿಯಿಂದ ೧೦೫ ಡಿಗ್ರಿಯ ವರೆಗೆ ಕಾಣಬಹುದು. ಇದರ ಜೊತೆಗೆ ಭಯಂಕರ ತಲೆ ನೋವು ಮೈ ಕೈ ಮತ್ತು ಕೀಲುಗಳ ನೋವು ಕಾಣಿಸಿಕೊಳ್ಳಬಹುದು. ಬೆನ್ನು ನೋವು ತಡೆಯಲಾರದಷ್ಟಿರುವುದು. ವಾಂತಿಯೂ ಆಗಬಹುದು. ಈ ಲಕ್ಷಣಗಳು ೨ರಿಂದ ೪ ದಿನಗಳ ವರೆಗೆ ಇದ್ದು ಸಿಡುಬಿನ ಗುಳ್ಳೆಗಳು ಅನಂತರ ಕಾಣಿಸಿಕೊಳ್ಳುತ್ತವೆ. ಈ ಗುಳ್ಳೆಗಳು ಕಂಡ ನಂತರ, ಜ್ವರ ಇಳಿಯುತ್ತದೆ.

ವಿವಿಧ ಘಟ್ಟ

ಈ ಗುಳ್ಳೆಗಳು ನಿಯಮಾನುಸಾರ ಮೂರನೆಯದಿನ ಕಾಣಿಸಿಕೊಳ್ಳುವುದಕ್ಕೆ ಆರಂಭವಾಗುವುದು. ೨ ಅಥವಾ ೩ ಕೆಲವು ಸಂದರ್ಭಗಳಲ್ಲಿ ೪ ದಿನಗಳ ನಂತರ, ಈ ಗುಳ್ಳೆಗಳು ಏಳುವುದು. ಸಿಲ್ಲುವುದು ಈ ಗುಳ್ಳೆಗಳು ಮೊದಮೊದಲು ಸಣ್ಣ ಸಣ್ಣ ಕೆಂಪು ಕಲೆಗಳಂತಿರುತ್ತವೆ. ಆಮೇಲೆ ಮುಂದೆ ಗುಳ್ಳೆಗಳಾಗುತ್ತವೆ. ಈ ಗುಳ್ಳೆಗಳು ಕ್ರಮವಾಗಿ ಹಣ್ಣೆ, ಮುಖ ಮತ್ತು ತಲೆ, ಮೊಣಕೈ, ಕೈಗಳ ಒಂಭಾಗ, ಎದೆ, ಬೆನ್ನು ಮತ್ತು ಹೊಟ್ಟೆ, ಕಾಲುಗಳು ಮತ್ತು ಪಾದಗಳ ನೋಲೆ ಏಳುತ್ತವೆ. ಗಂಟಲು ಮತ್ತು ಬಾಯಿಯ ಒಳಗಡೆಯೂ ಅವು ಏಳಬಹುದು. ಕೆಲವು ಸಂದರ್ಭಗಳಲ್ಲಿ ಕಣ್ಣಿನ ಒಳಭಾಗದಲ್ಲಿಯೂ ಏಳಬಹುದು. ಕೆಲವು ಸ್ಥಳ ಅಥವಾ ಒತ್ತಿದ ಸ್ಥಳಗಳಲ್ಲಿ ಅವು ವಿಪುಲವಾಗಿ ಏಳುತ್ತವೆ. ಮುಖ ಮತ್ತು ಕೈಗಳು ಇಂತಹ ಸ್ಥಳಗಳಲ್ಲಿ ಈ ಗುಳ್ಳೆಗಳು ಹೆಚ್ಚಾಗಿರುವುವು.

ಕ್ರಮೇಣ ಈ ಗುಳ್ಳೆಗಳಲ್ಲಿ ನೀರು ತುಂಬಿಕೊಂಡು ಎರಡು ದಿನಗಳಲ್ಲಿ ಹಣ್ಣಾಗುವುವು.

ಗುಳ್ಳೆಗಳಲ್ಲಿನ ನೀರು ಕೀವಿನ ರೂಪ ತಳೆಯುವುದು. ಈ ಘಟ್ಟ ಪೂರ್ಣವಾಗಲು ಳರಿಂದ ೫ ದಿನ ಹಿಡಿಯುವುದು. ಈ ಘಟ್ಟದಲ್ಲಿ ಮತ್ತೆ ಜ್ವರ ಬರಬಹುದು.

ಇವಾದನಂತರ ಸಿಡುಬಿನ ಗುಳ್ಳೆಗಳು ಕ್ರಮೇಣ ಕುಗ್ಗಿ, ಒಣಗುತ್ತವೆ. ಮೂರರಿಂದ ನಾಲ್ಕು ವಾರಗಳ ಅವಧಿಯಲ್ಲಿ ಅವೆಲ್ಲಾ ಜೆನ್ನಾಗಿ ಒಣಗಿ ಸಿಪ್ಪೆ ಕಳಚಿ ಬೀಳುತ್ತದೆ.

ಸಾಧಾರಣ ಪ್ರಸಂಗಗಳಲ್ಲಿ ಈ ಗುಳ್ಳೆಗಳು ದೂರ ದೂರವಿರುವುವು. ಕೆಲವು ಪ್ರಸಂಗಗಳಲ್ಲಿ ಅತಿ ಹತ್ತಿರ ಹತ್ತಿರವೂ ದಪ್ಪವಾಗಿಯೂ ಇರಬಹುದು. ಈ ಗುಳ್ಳೆಗಳು ಪಕ್ವವಾದಾಗ ಒಂದು ರೀತಿಯ ಅಸಹ್ಯಕರ ವಾಸನೆಯು ಹೊರಬರುವುದು. ಜೊತೆಗೆ ನವೆಯು ಹತ್ತಿಕೊಳ್ಳುವುದು. ಆ ಕಾಲದಲ್ಲಿ ಅವನ್ನು ಕೆರೆದರೆ ಇನ್ನೂ ರಂಪವಾಗುವುದು. ಕೆಲವಾಗ ಒಂದಗುವ ರಂಪನಿಂದ ಸಾಮಾನ್ಯವಾಗಿ ಜರ್ಮ ಮತ್ತು ರಕ್ತ ಕೆಡುವುದು. ಅದರಿಂದ ಕೆವಿ, ಕಣ್ಣುಗಳನ್ನೂ ಕಳೆದುಕೊಂತೆ ಪ್ರಸಂಗಗಳವೆ.

ರೋಗದ ಪ್ರಸರಣೆ

ಸಾಮಾನ್ಯವಾಗಿ ಈ ರೋಗವು ರೋಗಿಯು ಕಮ್ಮಿದಾಗ ಅಥವಾ ಶೀತಾಗ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ರೋಗಿಯು ಉಪಯೋಗಿಸಿದ ಮಗ್ಗಲು ಹಾಸಿಗೆ ಹಾಗೂ ಇತರ ವಸ್ತುಗಳ ಮೂಲಕವೂ ಅದು ಇನ್ನೊಬ್ಬರಿಗೆ ಹರಡಬಹುದು. ಎಲ್ಲಾಗೂ ಎಲ್ಲಾ ವಯಸ್ಸಿನಲ್ಲಾ ಹರಡಬಹುದಾದಂತಹ ಈ ರೋಗ ಒಂದು ಸಾರಿತಗುಲಿ ವಾಸಿಯಾದನಂತರ ಮತ್ತೆ ಮತ್ತೆ ಈ ರೋಗಕ್ಕೆ ಬಲಿಯಾಗುವುದು ಕಡಿಮೆ. ಸಿಡುಬಿನ ದಾಕು ಹಾಕಿಕೊಂಡರೆ, ಕೊನೆಯ ಪಕ್ಷ ಮೂರು ವರ್ಷಗಳ ತನಕ ಭಯವಿರುವುದಿಲ್ಲ.

ಈ ರೋಗವು ಉಷ್ಣದೇಶಗಳಲ್ಲಿ ಚಳಿಗಾಲ ಮತ್ತು ವಸಂತಕಾಲದಲ್ಲಿ ಆರಂಭವಾಗುತ್ತದೆ. ಬೇಸಿಗೆಯಲ್ಲಿ ತುಟ್ಟತುದಿಯನ್ನು ತಲುಪುತ್ತದೆ. ಜೂನ್ ವೇಳೆಗೆ ಅದು ಇಳಿಮುಖವಾಗುತ್ತದೆ. ಬಂಗಾಳದಲ್ಲಿ ಈ ರೋಗವು ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಾಮಾನ್ಯವಾಗಿ ಸಂಭವಿ

(೧೫ನೇ ಪುಟ ನೋಡಿರಿ)

ಕ್ಷಯರೋಗವು ಟ್ಯೂಬರ್‌ಕ್ಲೆ ಬೆಸಿಲಸ್ ಎಂಬ ರೋಗಾಣುವಿನಿಂದ ಉಂಟಾಗುತ್ತದೆ. ಈ ರೋಗಾಣುವು ನಿಮ್ಮ ದೇಹದೊಳಗೆ ಪ್ರವೇಶಿಸದೆ ನಿಮಗೆ ಕ್ಷಯರೋಗವು ತಗಲಲಾರದು. ಈ ರೋಗಾಣುವು ದೇಹದೊಳಗೆ ಪ್ರವೇಶಿಸಿದರೂ ಕೂಡಾ ನಿಮಗೆ ಸೌಖ್ಯವಿಲ್ಲವೆಂದು ಮೊದಲ ಹಂತದಲ್ಲಿ ನಿಮಗೆ ತಿಳಿಯಲಾರದು. ನೀವು ವಿಶೇಷವಾಗಿ ಶ್ರಮಿಸಿದರೆ, ಪೋಷಣೆ ಕಡಿಮೆಯಾದರೆ, ಅಥವಾ ನೀವು ಜನನಿಬಿಡ ವಾತಾವರಣದಲ್ಲಿ ವಾಸಿಸಿದರೆ, ಈ ರೋಗವು ಬೆಳೆಯಬಹುದು.

ಕ್ಷಯರೋಗವು ಹಲವು ವಿಧಾನಗಳಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ಟಿ. ಬಿ. ರೋಗಾಣುಗಳಿಂದ ಕೂಡಿದ ಗಾಳಿಯನ್ನು ಸೇವಿಸುವುದರಿಂದ ಅದು ಹರಡುತ್ತದೆ ನೀರು ಕುಡಿಯುವ ಲೋಟಾಗಳು, ಊಟದ ಬಟ್ಟಲುಗಳು, ಹಾಸು ಬಟ್ಟೆ, ಟವೆಲ್ ಮೊದಲಾದ ಎಲ್ಲರೂ ಉಪಯೋಗಿಸುವ ವಸ್ತುಗಳನ್ನು ಕ್ಷಯರೋಗಿಯು ಉಪಯೋಗಿಸುವುದರಿಂದ, ಅಥವಾ ಅವನ ಎಂಜಲು ಯಾ ಉಗುಳಿನಿಂದ ಕೂಡಿದ ವಸ್ತುಗಳನ್ನು ಉಪಯೋಗಿಸುವುದರಿಂದ ಇದು ಹರಡುತ್ತದೆ. ಕ್ಷಯ ರೋಗಾಣುಗಳಿಂದ ಕೂಡಿದ ಧೂಳಿನ ಮೂಲಕವೂ ಅದು ಹರಡುತ್ತದೆ.

ಭಾರತದ ಪ್ರತಿ ಮನೆಯವರ ಅವಗಾಹನೆಗೂ ಈ ವಿಚಾರವನ್ನು ತರಬೇಕಾಗಿದೆ. ಇದಕ್ಕೆ ಪ್ರಶಸ್ತವಾದ ಆರೋಗ್ಯ ಬೋಧೆಯು ಆಗತ್ಯವಿದೆ. ಟಿ. ಬಿ. ಮೊಹರು ಮೊರಾಟ ಚಳವಳವು ಜಂತಪ ಜ್ಞಾನ ಪ್ರಸಾರದ ಒಂದು ಅಂಗವಾಗಿದೆ.



ಟಿ. ಬಿ. ಮುದ್ರೆಗಳನ್ನು ಪಡಕೊಂಡು ಟಿ. ಬಿ. ನಿವಾರಣೆಗೆ ನೆರವಾಗಿರಿ.

ಒಂದು ಟಿ. ಬಿ ಮುದ್ರೆಯು ಬೆಲೆ ಹತ್ತು ನಯೇಪೈಸೆ ಮಾತ್ರ.

ಮುದ್ರೆಗಳು ಸಿಗುವ ಸ್ಥಳಗಳು— (೧) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಗವರ್ನಮೆಂಟ್ ಟಿ. ಬಿ. ಸೆನಿಟೋರಿಯಂ, ಓಲ್ಡ್ ಮದ್ರಾಸ್ ರೋಡು, ಬೆಂಗಳೂರು-೨. (೨) ಮಹಿಳಾ ಮಂಡಲ, ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣ ಸ್ಟ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸೇವಾಜ, ಪೇಪರ್. (೩) ಮೈನಜ್ಜ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟಿಂಬ್ಸ್ ಕಂಪೌಂಡು, ಬಸವನಗುಡಿ ಮಂಗಳೂರು. (೪) ಗೌರವ ಕಾರ್ಯದರ್ಶಿ, ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (೫) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (೬) ಅಧ್ಯಕ್ಷರುಗಳು ಮಹಿಳಾ ಸಮಾಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಆಳಿಯೂರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಟಿ. ಬಿ. ಮುದ್ರೆ ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:

NAVAYUGA

ಬುದ್ಧಿವಂತರು ಆಡುವುದಕ್ಕೆ ಮೊದಲು ಆಲೋಚಿಸುತ್ತಾರೆ; ಮೂರ್ಖ ಜನರು ಆಲೋಚಿಸುವುದಕ್ಕೆ ಮೊದಲು ಆಡುತ್ತಾರೆ.

ನವಯುಗ

ವರುಷ ೪೦	ಉಡುಪಿ ೧೭-೧೧-'೩೦	ವಾರ ೧೩

ಅಮರ ಸಂದೇಶ

ಭಾರತೀಯ ಪ್ರಧಾನಿ ಪಂಡಿತ ನೆಹರುರವರ ಜನ್ಮ ದಿನವಾದ ನವಂಬರ್ ೧೪ನೆ ದಿನವನ್ನು ಮಕ್ಕಳ ದಿನಾಚರಣೆಯಾಗಿ ರಾಷ್ಟ್ರವ್ಯಾಪಿಯಲ್ಲಿ ದೇಶ ದಾದ್ಯಂತ ಆಚರಿಸಲಾಯಿತು. ಪತ್ರಿಕಾ ವರದಿಗಳಂತೆ ಈ ಆಚರಣೆ ಯಶಸ್ವಿಯಾಗಿಯೇ ಮುಗಿಯಿತು. ರಾಷ್ಟ್ರದಲ್ಲಿನ ಹಿಚ್ಚಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಆ ದಿನವನ್ನು ಆನೋದ-ಪ್ರಮೋದಗಳಿಂದ ಕಳೆದರು. ಮಕ್ಕಳ ಉತ್ಸಾಹ, ಹುರುಪು, ಸಂತೋಷಗಳನ್ನು ಕಂಡು ಆ ವರ ಹೆತ್ತವರೂ ಮುಗ್ಧರಾದರು; ಅವರಿಗೂ ತಮ್ಮ ಬಾಲ್ಯಾವಸ್ಥೆಯ ಸವಿ ಸ್ಮರಣೆಯಾಗಿರಬಹುದು. ತಾವೂ ಆವರೊಡನೆ ಕೂಡಿ ನಲ್ಮೆ ನಲಿದರು. ಈ ವರ್ಷದ ಮಕ್ಕಳ ದಿನಾಚರಣೆ ಮುಕ್ತಾಯಗೊಂಡಿತು. ಮಕ್ಕಳ ದಿನವನ್ನು ಆಚರಿಸುವುದು ಪ್ರಧಾನಿ ನೆಹರೂರವರ ಬಯಕೆಯಂತೆ; ಆದರೂ ಒಂದು ಸ್ವತಂತ್ರ ರಾಷ್ಟ್ರವು ಮಕ್ಕಳ ಕರ್ತವ್ಯದತ್ತ ಅಡಿಪ್ಪು ಗವನ್ನು ಹಾಕಿದೆಯೆಂದೂ ಸಾಕೆನಿಸುವುದಿಲ್ಲ.

"ನಮ್ಮ ರಾಜ್ಯದ ಏಳಿಗೆಯ ಬಗ್ಗೆ ಒಂದು ವರ್ಷದ ಯೋಜನೆ ಮಾಡುವುದಿದ್ದರೆ ಧೇನ್ಯವೆಂದು; ಹತ್ತು ವರ್ಷ ದಾದರೆ, ಮಂದಿರ ಕೋಟೆ ಎಬ್ಬಿಸುವ ಮಹತ್ಕಾರ್ಯವಾದರೆ, ಮಕ್ಕಳ ಉತ್ಕರ್ಷದಿಂದ ಕರ್ತವ್ಯವೂಡು" ಎಂದೊಂದು ಹಳೆಯ ಮಾತು ಇದೆ. ಮಕ್ಕಳು ಭೂಮಿಗೆ ಉಪ್ಪಿನಂತಿರುವವರು. ಉಪ್ಪು ಇಲ್ಲದ ಪಾಕ ಜೀಗೆ ರುಚಿಸುವುದಿಲ್ಲ; ಹಾಗೆ ರೀತಿಯಾಗಿ ಮಕ್ಕಳಿಲ್ಲದ ಮನೆಯು ಸುಖೋಕ್ತಿನದು; ಆದು ಹೆಕ್ಕಳಿಯಿಲ್ಲದ ಗೂಡಿನಂತೆ ಎಂದು ಜೀಯುತ್ತಾರೆ. ಮಕ್ಕಳನ್ನು ಅಡಿಸಿ ಮುದ್ದಾಡದ ಕೈ ಮಂಗೈ ಎಂಬುದನ್ನೂ ನಾವು ಮರೆಯು ಬಾರದು. ಭಾವಿ ಭವಿತವ್ಯದ ಜನತಾಂಗವನ್ನು ನಾವು ಸುದೃಢಗೊಳಿಸಬೇಕಾದರೆ, ಇಂದಿನ ಮಕ್ಕಳ ಕಡೆಗೆ ತೀವ್ರ ಗವನ ಹರಿಸುವುದು ಅತ್ಯವಶ್ಯ ಎಂತಲೇ ಮಕ್ಕಳ ದಿನಾಚರಣೆಗೆ ತನ್ನದೇ ಆದ ವೈತಿಷ್ಟ್ಯವೊಂದಿದೆ. ನಮ್ಮ ದೇಶದಲ್ಲಿನ ಜನಸಂಖ್ಯೆಯು ಏರುತ್ತ ಹೋಗುವುದನ್ನು ತಡೆಯಲು ಕುಟುಂಬ ಯೋಜನೆಯ ಪ್ರಚಾರವೊಂದೆಡೆ ಆಗುತ್ತಿದೆ. ಹುಟ್ಟಿದ ಮಕ್ಕಳನ್ನು ಉತ್ತಮ ನಾಗರಿಕರಾಗಿ ರೂಪಿಸಿ ದೇಶಕ್ಕೊಪ್ಪಿಸುವುದು ಇಂದಿನ ನಾಗರಿಕರ ಕರ್ತವ್ಯ. ಇಂದು ನಮ್ಮ ಮಕ್ಕಳಿಗೆ ಇಲ್ಲದಿರುವ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟು, ಅವರು ಸಮುನ್ನತ ನಾಗರಿಕರಾಗಿ ದೇಶಕ್ಕಾಗಿ, ಅದರ ರಕ್ಷಣೆಗಾಗಿ ಹೋರಾಡಲು ಸಿದ್ಧರಾಗುವಂತೆ ಮಾಡುವುದು ಇಂದಿನ ಹಿರಿಯರ ಕೆಲಸ. ಅನಕ್ಷರಸ್ಥರ ತವರೂರಾದ ನಮ್ಮ ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ಸೌಕರ್ಯವನ್ನು ಒದಗಿಸುವುದೇ ನಮ್ಮ ಇಂದಿನ ಆದಿಮ ಕರ್ತವ್ಯ. ಈ ಕರ್ತವ್ಯವನ್ನು ನಾವೆಷ್ಟರ ಮಟ್ಟಿಗೆ ನಿರ್ವಹಿಸುವೆವೋ ಅಷ್ಟರ ಮಟ್ಟಿಗೆ ರಾಷ್ಟ್ರೋದ್ಧಾರದ ಕಾರ್ಯ ಮುಂದುವರಿಯುವುದು. ಅಕ್ಷರ ವಿದ್ಯೆಯಿಲ್ಲವೆಂದಾದರೆ, ಅಂತಹ ಕೂಸು ತನ್ನ ಜೀವನದಲ್ಲಿ ಮುಂದೆ ಅದೇನೋ ಬಹ್ವಂಶವನ್ನು ಕಳೆದುಕೊಂಡಿದ್ದೇನೆಂದು ತಿಳಿಯುವುದು. ಕ್ಷಣಾನ್ವಿಷದಲ್ಲಿ ಪರಿವರ್ತನೆ ಹೊಂದುತ್ತಿರುವ ಈ ಸಂಕುಚಿತಗೊಂಡ ಪ್ರಪಂಚದ ಅರಿವನ್ನು ಮೂಡಿಕೊಳ್ಳಬೇಕಾದರೆ, ಅಕ್ಷರ ವಿದ್ಯೆ ಅತ್ಯಗತ್ಯ. ಅಮಂದೆಂದ ಶಿಕ್ಷಣ ಪ್ರಸಾರದತ್ತ ತೀವ್ರ ಗಮನ ಹರಿಸುವದು ಇಂದಿನ ಮಕ್ಕಳಿಗೆ ಸಕಲ ಶಿಕ್ಷಣ ಸೌಕರ್ಯಗಳನ್ನು ಒದಗಿಸುವುದು. ಮಕ್ಕಳ ದಿನಾಚರಣೆಯ ಸಂದೇಶಗಳಲ್ಲಿ ಒಂದು.

ಇದನ್ನು ಅನುಲಕ್ಷಿಸಿಯೇ ಪ್ರಧಾನಿಗಳಿಗೆ ಈ ವರ್ಷದ ಮಕ್ಕಳ ದಿನದಂದು ದೇಶದ ವಿವಿಧ ಭಾಗಗಳಲ್ಲಿಯ ಸಮೂಜ ವಿಕಾಸ ಕೇಂದ್ರಗಳಲ್ಲಿಯ ಜನತೆಯ್ಯು ಸುಮಾರು ೪೫ ಸಾವಿರ ಶಾಲೆಗಳನ್ನು ಕಾಡಿಕೆಯಾಗಿ ನೀಡಿದೆ; ಇವುಗಳಲ್ಲಿ ಕೇವಲ ಮೈಸೂರು ರಾಜ್ಯವೊಂದರಿಂದಲೇ ೧೭೦೮ ಇರುವುದು. ಮಕ್ಕಳ ಮನೋರಂಜನೆಯ ಕೇಂದ್ರಗಳು, ಉದ್ಯಾನಗಳು, ಆಟದ ಬಯಲುಗಳು ಮತ್ತು ವಾಚನಾಲಯಗಳು ಕೂಡ ಉಡುಗೊರೆಯಾಗಿ ಸಿಕ್ಕಿವೆ. ದಾನವಾಗಿ ೩೫ ಸಾವಿರ ಎಕ್ರೆ ಭೂಮಿಯೂ ದೊರೆತಿದೆ. ವಿಮೆ, ಚಿಕ್ಕ ಉಳಿತಾಯ ಯೋಜನೆಗಳು, ನಗದಿ ಹಣ ಕೂಡ ಬಹುಮೂಲ್ಯವಾಗಿ ಸಿಕ್ಕಿದ್ದು ಇವೆಲ್ಲವೂ ಮಕ್ಕಳ ಅಭಿವೃದ್ಧಿಗಾಗಿ ಉಪಯೋಗಿಸಲ್ಪಡುತ್ತವೆ. ಈ ಉಡುಗೊರೆಗಳನ್ನು ನೆಹರು ಪಡೆದರು, ನಿಜವೇ ಅವರು ತಮ್ಮ ಮೆಚ್ಚಿನ ಮಕ್ಕಳ "ಚಾಚಾ" ಆಗಿ ಮಕ್ಕಳನ್ನು ಪ್ರಸನ್ನಗೊಳಿಸುವ ಸಲುವಾಗಿ ಇವೆಲ್ಲವನ್ನೂ ಸ್ವೀಕರಿಸಿದರು. ಈ ದಾನ ವಸ್ತುಗಳ ಸದುಪಯೋಗವನ್ನು ಆಯಾ ಪಳ್ಳಿಯ ಜನರು ಮಾಡಿಕೊಳ್ಳುತ್ತಾರೆ. ಇದರಿಂದ ಮಕ್ಕಳ ಉನ್ನತಿ ಸಾಧ್ಯವೆನಿಸುವುದೆ. ಇದು ನೆಹರುರವರ ಆದರ್ಶವನ್ನು ಇತರ ಹೆತ್ತವರೂ ಅನುಸರಿಸಬೇಕು ಮಕ್ಕಳು ಉದಾರಚರಿತರಾಗಿ ಉನ್ನತನಾಗರಿಕರಾಗಿ ರೂಪಾಂತರಗೊಳ್ಳಲು ಅನುಕೂಲವಾದ ಸಾಧನ ಸಲಕರಣೆಗಳನ್ನು ಮಕ್ಕಳ ಕೇಂದ್ರಸ್ಥಾನವಾದ ಊರ ಶಾಲೆಗಳಿಗೆ ಒದಗಿಸಕೊಡಬೇಕು. ಶಾಲೆಯಿಲ್ಲದ ಪಳ್ಳಿಗಳಲ್ಲಿ ಅವನ್ನು ಸ್ಥಾಪಿಸುವುದು; ಸ್ಥಾಪಿತವಾದ ಶಾಲೆಗಳು ತಮ್ಮ ಸಂಸ್ಕೃತಿ ಪ್ರಸಾರ ಕೇಂದ್ರವೆಂದು ಭಾವಿಸಿ, ತಮ್ಮ ಮಕ್ಕಳಿಗಾಗಿ ಅವುಗಳ ಆವಶ್ಯಕತೆಗಳನ್ನು ಪೂರಯಿಸುವುದು; ಮಕ್ಕಳ ಆರೋಗ್ಯ, ಆಶನ, ವಸನಗಳತ್ತ ಸಾಕಷ್ಟು ಗವನವಿಡುವುದು—ಇಂತಹ—ಆಟ—ಕೂಟಗಳಲ್ಲಿ ಅವರು ಒಂದಾಗಿ ಸೋದರರಂತೆ ವರ್ತಿಸಿ, ಆಧ್ಯಯನಗಳಲ್ಲಿ ಆಸಕ್ತರಾಗುವಂತೆ ನೋಡಿಕೊಳ್ಳುವುದು—ಇದೇ ಮೊದಲಾದುವು ನಮ್ಮ ಇಂದಿನ ಹಿರಿಯರ ಕರ್ತವ್ಯ. ಈ ಕರ್ತವ್ಯ ಹೊರುವುದರಲ್ಲಿ ಹಿರಿಯರು ಯಶಸ್ವಿಯಾಗುತ್ತ ಬಂದಂತೆ ಭವ್ಯ ಭಾರತ ನಿರ್ಮಾಣ ಕಾರ್ಯವೂ ಯಶಸ್ವಿಯಾಗುತ್ತ ಬರುವುದು ಮಕ್ಕಳ ದಿನದ ಈ ಅಮರ ಸಂದೇಶವನ್ನು ಎಲ್ಲರೂ ಮನವರಿಕೆ ಮಾಡಿಕೊಂಡು ಕಾರ್ಯ ಪ್ರವೃತ್ತರಾಗುವುದು ಅನಿವಾರ್ಯ ಅಪೇಕ್ಷೆ.

ಗತಾಸು ಮುಖರ್ಜಿ

ಭಾರತೀಯ ವಿಮಾನಪಡೆಯ ಮಹಾದಂಡ ನಾಯಕ ಳ್ಳ ವರ್ಷದ ಸುವ್ರತ ಮುಖರ್ಜಿಯವರು ಜಪಾನದಲ್ಲಿ ಆಕಸ್ಮಿತ್ತಾಗಿ ನಿಧನರಾದುದು ನಮ್ಮ ದುರ್ದೈವ ಕಂಠನಾಳದಲ್ಲಿ, ಮೂಗಿದ ಆಗುಳಿಂದ ನ್ನು ಸಿಕ್ಕು ಬೀಳಿಸಿ ವಿಧಿ ಅವರನ್ನು ನಮ್ಮಿಂದ ಅಗಲಿಸಿದುದು ಶೋಚನೀಯ. ರ್ಗತಿಗಿರಲ್ಲಿ ವಿಮಾನ ಪಡೆಯನ್ನು ಸೇರಿದ್ದ ಮುಖರ್ಜಿಯವರು ಆಗ ಬ್ರಿಟಿಷರ ಅಧೀನವಿದ್ದ ಭಾರತೀಯ ವಿಮಾನ ದಳದಲ್ಲಿ ಹಲವಾರು ಪದವಿಗಳಲ್ಲಿ ವಿರಾಜಿಸಿದರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ, ಕರ್ತವ್ಯ ದಕ್ಷರೂ ಕಾರ್ಯನಿಷ್ಠರೂ ಆದ ಮುಖರ್ಜಿ ವಿಭಾಗ ನಾಯಕತ್ವದಿಂದ ಏರ್ ಮಾರ್ಶಲರಾಗಿ ಪ್ರಧಾನ ದಂಡ ನಾಯಕರಾದರು. ನಿರ್ಬಲವಾಗಿದ್ದ ಭಾರತೀಯ ವಿಮಾನ ಪಡೆಯನ್ನು ಆಧುನಿಕ ಮಾದರಿಯಲ್ಲಿ ಸುಸನ್ನಿರ್ಮಿಸುವ ತಮ್ಮ ಹೊಣೆಗಾರಿಕೆಯನ್ನು ಇವರು ಸಶಕ್ತರಾಗಿ ಸಮರ್ಥ ರೀತಿಯಿಂದ ನಿರ್ವಹಿಸಿದರು. ಆದುದರಿಂದಲೇ ಆಧುನಿಕ ಭಾರತೀಯ ವಿಮಾನ ಪಡೆಯ ನಿರ್ಮಾಪಕ ಎಂದು ಇವರನ್ನು ಉಲ್ಲೇಖಿಸಿದರೂ ಅತ್ಯುರ್ಯವಿಲ್ಲ. ವಿಮಾನ ಪಡೆಯಲ್ಲಿ ಜೆಟ್ ವಿಮಾನಗಳು ಓಡಾಡುವಂತೆ ಮಾಡಿದ ಪರಿವರ್ತನೆಗೆ ಇವರ ಸಾಹಸವೇ ಪ್ರಧಾನ ಕಾರಣವಾಗಿದೆ. ಸ್ನೇಹಶೀಲರೂ, ಸರಸ ಮನೋವೈಶಿಷ್ಟ್ಯವರೂ, ಕರ್ತವ್ಯದಕ್ಷರೂ ದೇಶಪ್ರೇಮಿಗಳೂ ಆಗಿರುವ ಮುಖರ್ಜಿಯವರು ಭಾರತೀಯ ಸೇನಾ ಪಡೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವೊಂದನ್ನು ಗಳಿಸಿದ್ದಾರೆ. ಇವರ ಅಕಾಲ ನಿಧನದಿಂದ ಭಾರತೀಯ ವಿಮಾನ ಪಡೆಯು ಒರ್ವ ಸಮರ್ಥ ಮಾರ್ಗದರ್ಶಕನನ್ನು, ಭಾರತವು ತನ್ನ ರಕ್ಷಣಾ ಬಲದ ಆಧಾರ ಸ್ತಂಭವೊಂದನ್ನು ಕಳೆದುಕೊಂಡಿತು. ಮೃತರ ಆತ್ಮವು ಚಿರಶಾಂತಿ ಪಡೆಯಲಿ; ಕುಟುಂಬದವರ ದುಃಖವು ಹದಕ್ಕೆ ಬರಲಿ ಎಂದು ಎಲ್ಲರೂ ಬಯಸುತ್ತಾರೆ.

ಸಂಕ್ಷಿಪ್ತ ಸುದ್ದಿಗಳು

ಯಶಸ್ವೀ ಸರಕಾರ

ಕಲ್ಯಾಣ ರಾಷ್ಟ್ರದ ಭದ್ರ ತಳಹದಿಯಾದ ಪಂಚಾಯತುಗಳ ಕಾರ್ಯಕ್ಷಮತೆಯ ಬಗ್ಗೆ ಅಲ್ಲಲ್ಲಿ ಎದ್ದಿರುವ ಅಪಸ್ವರಗಳನ್ನು ಕೇಳಿ ಕೆಡಿಯೂರದವರಲ್ಲಿ ಶ್ರೀ ಎಸ್. ಕೆ ಡೇ ಅವರೂ ಒಬ್ಬರು. ಸಮಾಜ ವಿಕಾಸ ಯೋಜನೆಯ ಮಂತ್ರಿಗಳಾದ ಡೇಯವರು ತಮ್ಮ 'ವಿಕಾಸ ಯೋಜನೆ'ಯಲ್ಲಿ ಪೋಲು ನಡೆಯುತ್ತಿದೆಯೆಂದು ತಿಳಿದಿದ್ದರೂ ತಾವು 'ಡೇ'ಯಲ್ಲಿಯೇ ಇದ್ದೇವೆ: "ನೈಟ್"ನಲ್ಲಲ್ಲ ಎಂದು ಛಾಟಿಸಿರಬಹುದು. ಅಸಕ್ತರವೇಳಿಸುವವರಿಗೆ ಅವರು, "ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಮಗೆ ನಂಬಿಕೆ ಇದ್ದರೆ, ನಮ್ಮ ಜನರನ್ನೂ ನಂಬಬೇಕು. ಚುನಾವಣೆಯಿಂದ ಆರಿಸಲ್ಪಟ್ಟ ಪಂಚಾಯತಿ ಸದಸ್ಯರಲ್ಲಿ ಒಂದು ಗ್ರಾಮದ ಆಡಳಿತ ನಿರ್ವಹಿಸುವ ಶಕ್ತಿ ಇಲ್ಲವೆಂದು ನೀವಂದರೆ, ಇಡಿ ರಾಜ್ಯದ ಆಡಳಿತ ನಡೆಸುವ ಶಾಸನ ಸಭಾ ಸದಸ್ಯರಲ್ಲಿ, ರಾಷ್ಟ್ರದ ಆಡಳಿತ ನಡೆಸುವ ಪಾರ್ಲಿಮೆಂಟಿನಲ್ಲಿ ಸಹ ವಿಶ್ವಾಸವಿಲ್ಲವೆಂದು ಹೇಳಬೇಕಾಗುವುದು. ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳು ತಮ್ಮ ಜವಾಬುದಾರಿಯನ್ನು ಸಮರ್ಥವಾಗಿ ನಿರ್ವಹಿಸುವವಾದರೆ, ಪಂಚಾಯತುಗಳೂ ಏಕಾಗಬಾರದು?" ಎಂದು ಆಹ್ವಾನವಿತ್ತರು. ತಮ್ಮನ್ನು ತಾವಾನಂಬದಜನತೆ ಸರಕಾರದಲ್ಲಿ ವಿಶ್ವಾಸವಿಟ್ಟದೆ ಎಂದು ಯಾರು ಹೇಳುತ್ತಾರೆ?

ಕಾರಖಾನರೋಗಬೇಡಿ

ಆಹರ್ನಿಶಿ ಭಾರತದ ಉನ್ನತಿಯ ಬಗ್ಗೆ ಚಿಂತಿಸುತ್ತಿರುವ ವೃಥಾನಿ ನೆಹರುರವರ ಮನಸ್ಸಿನಲ್ಲಿ ಸಮೃದ್ಧ ಭಾರತ ಕಟ್ಟುವುದೇ ಒಂದು ಚಿಂತೆ. ಇಂದಿನ ಯುಗದಲ್ಲಿ ವಿಜ್ಞಾನ ಮತ್ತು ತಂತ್ರ ಶಾಸ್ತ್ರಗಳು ಮಾಡಿ ತೋರಿಸಿರುವ ಅದ್ಭುತಗಳನ್ನು ನಾವೂ ಕಲಿಯಬೇಕು, ಆಚರಣೆಗೆ ತರಬೇಕು ಎನ್ನುತ್ತಾರೆ ಇವರು ಏಕೆ ಗೊತ್ತೆ? ಇವು ಸಾಧಿಸಿದ ಸಾಧಿಸುವ ಪ್ರಗತಿಯನ್ನು ತಡೆಯುವುದು ಸಮಸ್ತ ಮಾನವ ಶಕ್ತಿಯನ್ನು ಕೇಂದ್ರೀಕರಿಸಿದರೂ ಅಸಾಧ್ಯ; ಆದರೆ, ಅವು ಹರಿಯುವ ಪಥವನ್ನು ಮಾತ್ರ ನಾವು ಬದಲಿಸಬಲ್ಲೆವು. ಆವಶ್ಯಕತಾ ಇಂದಿನ ಯುವಕ—ಯುವತಿಯರು ಕಾರಖಾನ ರಾಗುವುದರಲ್ಲೇ ತೃಪ್ತಿಪಡದೆ ಉತ್ಪಾದಕ ವೃತ್ತಿಗಳಲ್ಲಿ ತೊಡಗಬೇಕು ಎಂದವರ ಅಭಿಲಾಷೆ. ಇದಕ್ಕಾಗಿ ನಮ್ಮ ಮಕ್ಕಳಿಗೆ ಯಾವ ಸ್ವರೂಪದ ಶಿಕ್ಷಣ ನೀಡಬೇಕೆಂಬುದನ್ನು ಈಗಿಂದೀಗಲೇ ನಿರ್ಧರಿಸಬೇಕಾಗಿದೆ ತಾನೆ?

ಎತ್ತ ಸಾಗುತ್ತಿದೆ....?

ಆದರ್ಶ ಗಾಂಧಿವಾದಿಗಳಾದ ಅನಂತಶಯನಂ ಐಯ್ಯಂಗಾರರು ಸದ್ಯ ಲೋಕ ಸಭೆಯ ಆಧ್ಯಕ್ಷರೇನೋ ನಿಜವೇ; ಆಧ್ಯಕ್ಷ ಪದವಿಗೆ ತಕ್ಕ ಭಾಷಣ ಮಾಡುವುದರಲ್ಲೂ ಇವರು ನಿಷ್ಣಾತರು. ಆದರೂ ಇವರ ಉನ್ನತಿಕೆ ಅಲಂಕರಿಸಿದ ಹುದ್ದೆಯಲ್ಲಿ ಅಡುವ ಮಾತುಗಳ ತೂಕದಲ್ಲದೆ. ಮಾನವ ವೈಜ್ಞಾನಿಕ ಸಂಶೋಧನೆಗಳಲ್ಲಿ ಯಶಸ್ವಿಯಾಗುತ್ತ ಪ್ರಕೃತಿಯನ್ನು ಗೆಲ್ಲುವುದರಲ್ಲಿಯೂ ಕೆಲವಂಶ ಸಫಲನಾಗಿದ್ದಾನೆ; ಆದರೆ ತನ್ನ ಮನಸ್ಸನ್ನು ಗೆಲ್ಲಲು ಆತ ಅಸಮರ್ಥನಿದ್ದಾನೆ ಎಂದ ಅವರ ಉದ್ಗಾರ ಹೃದಯದಾಳದಿಂದ ಬಂದುದು ನಿಸ್ವಾರ್ಥರಹಿತ ಸೇವೆಯ ಸರ್ವೋದಯ ಆದರ್ಶವನ್ನು ಸ್ವೀಕರಿಸುವುದರಿಂದ ಮಾತ್ರವೇ ಜಗತ್ತಿಗೆ ಶಾಶ್ವತ ಶಾಂತಿಯು ದೊರೆಯಬಲ್ಲುದು ಎಂಬುದು ನಿಜವೇ; ಆದರೆ, ಜಗತ್ತು ಈ ತತ್ವವನ್ನು ಸ್ವೀಕರಿಸುವ ಪರಿಸ್ಥಿತಿಯಲ್ಲಿದೆಯೆ?

ಉಡುಪಿ ಸಂಸ್ಕೃತ ಕಾಲೇಜಿನ—

ಹೈಸ್ಕೂಲು ವಿದ್ಯಾರ್ಥಿಗಳು ಮಕ್ಕಳ ದಿನಾಚರಣೆಯನ್ನು ಶ್ರೀ ವೈ. ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಇದೇ ಸಂದರ್ಭದಲ್ಲಿ ವಿದ್ಯಾದಾಯಿನಿ ಎಂಬ ಹಸ್ತಪತ್ರಿಕೆಯನ್ನು ಶ್ರೀ ಕೆ. ಕೃಷ್ಣ ಭಟ್ಟರು ಉದ್ಘಾಟಿಸಿದರು. ವಿನೋದಾವಳಿಗಳೂ ನಡೆದುವು.

ಅಲ್ಲಲ್ಲಿಯ ಸುದ್ದಿಸಾರ

ದೇವಾಡಿಗ ಸುಧಾರಕ ಸಂಘ, ಮುಂಬಾಯಿ— ಇದರ ೩೬ನೇ ವಾರ್ಷಿಕೋತ್ಸವವು ತಾ. 6-11-60ರಂದು ಸರ್ ಕಾವಾಸ್ಜಿ ಜಹಾಂಗೀರ್ ಸಭಾಸದನದಲ್ಲಿ ಶ್ರೀ ಶುಶೀಲ್ ಕುಮಾರ್ ಆರ್. ರುಯಿಯ ರವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯ ಪೂರ್ವಾಶ್ರಮದ ಸ್ವಾಮಿ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು, ಡಾ. ಯಸ್. ಯಸ್. ಉಗ್ರಾಣ್‌ಕರ್ ಮತ್ತು ಶ್ರೀ ಕೆ. ಯಸ್. ಧಾರಿಯಾ ಎಂ. ಎಲ್. ಎ. ರವರು ಮುಖ್ಯ ಅತಿಥಿಗಳಾಗಿದ್ದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಜಕ್ಕ ಪಾಣಿ ಡಿ ಉಳ್ಳಾಲ್‌ರು ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಶ್ರೀ ಭಾಸ್ಕರ್ ಕಣಂತೂರು ಸಂಘದ ಸಂಕ್ಷಿಪ್ತ ಚರಿತ್ರೆಯ ವಾಚನ ಮಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ವಿ ಉಳ್ಳಾಲ್‌ರು ಅಧ್ಯಕ್ಷೀಯ ಪರಿಚಯ ಮಾಡಿದರು ಶ್ರೀ ಪಿ. ರಾಮಣ್ಣ ಮೈಲಿಯವರು ಶುಭ ಸಂದೇಶಗಳ ವಾಚನಗೈದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಯಶೀಲರಾದ ಯುವಕ ಯುವತಿಯರಿಗೆ ಶ್ರೀಮತಿ ವಿಮಲಾ ಬಾಯಿ ಯಸ್. ರುಯಿಯವರು ಪಾರಿತೋಷಕಗಳನ್ನು ವಿತರಿಸಿದರು.

ಶ್ರೀಮದ್ ಸ್ವಾಮಿ ವಿಭುದೇಶ ತೀರ್ಥ ಶ್ರೀಪಾದಂಗಳವರೂ, ಶ್ರೀ ಕೆ. ಯಸ್. ಧಾರಿಯಾ ಮತ್ತು ಶ್ರೀಪತಿ ಸುಮಿತ್ರಾ ಯನ್. ರಾವ್ ಮೊದಲಾದವರು ಸಮಯೋಚಿತ ಭಾಷಣ ಗೈದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಅದರ ಉಜ್ವಲ ಧ್ಯೇಯಗಳ ಕುರಿತು ಮಾತನಾಡಿದರು.

ಶ್ರೀ ಪಿ. ರಾಮಣ್ಣ ಮೈಲಿಯವರು ಧನ್ಯವಾದಪತ್ರರು. ವಿವಿಧ ವಿನೋದಾವಳಿ ಹಾಗೂ ಸಾಮೂಹಿಕ ಕನ್ನಡ ನಾಟಕದೊಂದಿಗೆ ಸಭಾಂತ್ಯವಾಯಿತು.

ಕುಂದಾಪುರದಲ್ಲಿ ಡಾ| ಯಂ. ಶಿ. ಮೋದಿಯರ ಉಚಿತ ನೇತ್ರದಾನ ಶಿಬಿರವು— ತಾ. 20-12-60ರಿಂದ ಪ್ರಾರಂಭವಾಗುವುದೆಂದೂ ನೇತ್ರ ಚಿಕಿತ್ಸೆ ನೂಡಿಕೊಳ್ಳಲಿಚ್ಛಿಸುವವರು ಹೆಚ್ಚಿನ ವಿವರಗಳಿಗೆ ಶ್ರೀ ಕೆ. ಗಣಪತಿ ಕೇಟ್, ಟ್ರಸ್ಟಿ ಪಂಚಾಯತು ಅಧ್ಯಕ್ಷೆ, ಕುಂದಾಪುರ ಇವರಿಗೆ ಬರಿಕೊಳ್ಳಬಹುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ದಿ. ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಪೆಲ್, ಮೈಸೂರು— ಈ ವಿದ್ಯಾರ್ಥಿ ನಿಲಯದ ಸಮಿತಿಯ ಸಭೆಯೊಂದು ತಾ. 6-11-60ರಂದು ಶ್ರೀ ಎಸ್. ಬೈರಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಉಪಸಮಿತಿಯು ರಚಿಸಿದ ನಿಲಯಕ್ಕೆ ಸಂಬಂಧಿಸಿದ ಅಂಗರಚನೆಯನ್ನು ಪರಿಶೀಲಿಸಿ ಅಂಗೀಕರಿಸಿತು. ನಿಲಯವನ್ನು ಸೊಸ್ಯಾಟಿಗಳ ಕಾನೂನಿಗನುಸಾರವಾಗಿ ರಿಜಿಸ್ಟರ್ ಮಾಡಿಸತಕ್ಕದ್ದೆಂದು ತೀರ್ಮಾನಿಸಿ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಮೈಗೊಳ್ಳಲು ಕಾರ್ಯದರ್ಶಿ ಶ್ರೀ ಎ. ರಾಮಣ್ಣ ನವರಿಗೆ ಅಧಿಕಾರವನ್ನಿತ್ತಿತು.

ಹಾಂಗಾಳಿ ನಾಯಕ್ ಬೇಂಕ್— ಇದರ ಶಾಖೆಯೊಂದು ಮೈಸೂರು ರಾಜ್ಯದ ತುಮಕೂರಿನಲ್ಲಿ ಇದೇ ತಾ. 14ರಂದು ತೆರೆಯಲ್ಪಟ್ಟಿರುವುದು.

ಜಾನುವಾರು ಜಾತ್ರೆ— ದಕ್ಷಿಣ ಕನ್ನಡ ಜಿಲ್ಲಾ ಕಾರ್ಕಳ ತಾಲೂಕು ಸೋಮೇಶ್ವರದ ಬಳಿ ಸೀತಾನದಿ ಎಂಬಲ್ಲಿ ಈ ಜಿಲ್ಲೆಯ ರೈತರ ಅನುಕೂಲತೆಯ ಬಗ್ಗೆ ಹೆಬ್ರಿ-ಸೀತಾನದಿ-ಮಂಗಳೂರು ರಸ್ತೆಯು ಅಗುಂಬೆ ರಸ್ತೆಗೆ ಕೂಡುವಲ್ಲಿ ಅಂದರೆ ಸೋಮೇಶ್ವರ ಘಾಟಿಯಬುಡಕ್ಕೆಯ್ದಲು ಕಳಗೆಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ಈ ವರ್ಷ ತಾ. ೨೯-೧೧-೬೦ರಿಂದ ೧೦-೧೨ ೬೦ರ ವರೆಗೆ ಜರಗುವುದು.

ಈ ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನು ಕ್ರಮದಂತೆ ಮಾಡಲಾಗುವುದು. ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ ೨ ಫರ್ಲಾಂಗುಗಳಷ್ಟಿದ್ದು ಹತ್ತಿರವಿರುವ ಸುರಕ್ಷಿತ (ರಿಸರ್ವ್) ಕಾಡಿನಲ್ಲಿ ತಂಬಾಹುಲ್ಲುಗಾವಲಿದೆ. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಯೋಗ್ಯ ಬಹುಮಾನ ಕೊಡುವ ಏರ್ಪಾಡು ಮಾಡಲಾಗಿಯಿದೆ. ಸರ್ಕಾರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಿ ಈ ಜಾತ್ರೆಯನ್ನು ಯಶಸ್ವಿಗೊಳಿಸಬೇಕಾಗಿ ಕುಂದಾಪುರ ಅಸಿಸ್ಟಾಂಟ್ ಕಮಿಶನರ್ ಶ್ರೀ ಕೆ ನರಸಿಂಹ ಮೂರ್ತಿಯವರು ವಿನಂತಿಸುತ್ತಾರೆ.

ಮುಂಬಾಯಿ— ಕಳೆದ ತಾ. 28ರಂದು ಶ್ರೀ ಗಜಾನನ ಆಪಿಲ ಕರ್ನಾಟಕ ಯಕ್ಷಗಾನ ಮಂಡಳಿಯು ಅತಿಯಿಂದ ದ. ಕ. ಜಿಲ್ಲೆಯಿಂದ ಬಂದ ಪ್ರಮುಖ ಕಲಾವಿದರ ಸಮ್ಮಿಲನದಿಂದ ಸೀತಾರಾಂ ಪೋದ್ದಾರ್ ಬಾಲಿಕಾ ವಿದ್ಯಾಲಯ ಪನ್ವಾಡಿ ಘಾಟ್‌ಕೂರ್ ದ್ವಾರ್ ಎಂಬಲ್ಲಿ 'ಶಶಿ ಪ್ರಭಾ ಕಲ್ಯಾಣ' ಮತ್ತು 'ಕೊಲ್ಲೂರು ಮಹಾತ್ಮೆ' ಪ್ರಸಂಗಗಳನ್ನು ಯಶಸ್ವಿಯಾಗಿ ಆಡಿ ತೋರಿಸಿದರು. ಪ್ರಮುಖ ವೇಷಧಾರಿಗಳಾದ ಶ್ರೀಗಳಾದ ಎಂ. ನರಸಿಂಹದಾಸ, ಕೆ ತಿಮ್ಮಪ್ಪ ನಾಯ್ಕ, ರಾಮು ಐತಾಳ್, ಬಿ. ವೀರಭದ್ರ ನಾಯ್ಕ, ಮೂಗೋಲಿ ಗೋವಿಂದ, ಪಿ. ವೆಂಕಟ್ರಾವ್, ಪಿ. ರಾಮು, ಬಿ. ನಾರಾಯಣ, ಬಿ. ಕುಪ್ಪ, ವಿ. ಮುತ್ತ, ಎ. ಮಂಜು, ಯಸ್. ವಿ.ಂಜು, ಕೆ. ವೈಕುಂಠ ಮೊದಲಾದವರಿಗೆ ಕೆ. ಕೆ. ಎಜ್ಯುಕೇಶನ್ ಸೊಸ್ಯಾಟಿಯ ಅಧ್ಯಕ್ಷ ಶ್ರೀ ಬಿ. ವಿ. ಶೆಟ್ಟ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಿಸಿ ಮೂಡಲಾಯಿತು. ಕಾರ್ಯದರ್ಶಿ ಶ್ರೀ ಕೆ ಎನ್. ಕುಂದರರು ಧನ್ಯವಾದಗಳನ್ನರ್ಪಿಸಿದರು.

ಮೂರುದಿನಗ್ರಾಂಟ್‌ರೋಡ್ ರೋಷನ್‌ಸಿನೆಮಾ ಮಂದಿರದಲ್ಲಿ ಶ್ರೀ ಬಿ ವಿ. ಶೆಟ್ಟರು, ಡಾ. ಬಿ. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾವಿದರಿಗೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಭಾಷಣಗಳಾದ ಮೇಲೆ ಶ್ರೀ ಕೆ. ಜಯಶೀಲ ಕಡಂಬರು ಧನ್ಯವಾದ ಗಳನ್ನರ್ಪಿಸಿದರು.

ಮಕ್ಕಳ ದಿನಾಚರಣೆ— ಇದೇ ತಾ. 14ನೇ ನೆಹರೂ ಜನ್ಮದಿನದಂದು ಮಕ್ಕಳ ದಿನಾಚರಣೆಯು ಉಡುಪಿಯಲ್ಲಿ ಯಥಾಸಾನಗವಾಗಿ ಆಚರಿಸಲಾಯಿತು. ಬೆಳಿಗ್ಗೆ ಗಾಂಧೀ ಮೈದಾನದಲ್ಲಿ ಉಡುಪಿ ವಲಯದ ಶಾಲಾ ಮಕ್ಕಳು ನೆರೆದ ಕೂಟದಲ್ಲಿ ನಗರ ಸಭಾಪತಿ ಡಾ| ಕೆ. ಯಲ್ ಐತಾಳರು ಧ್ವಜಾರೋಹಣ ಮಾಡಿದರು. ಬಳಿಕ ಪ್ರಮುಖ ಜವುಳಿ ವ್ಯಾಪಾರಿ ನಾನಾಲಾಲ್ ಗೋವಿಂದಾಜೀ ಪಂಡ್ಯಾ ಎಂಡ್ ಸನ್ಸ್ ಇವರ ಪತಿಯಿಂದ ಸಿಹಿತಿಂಡಿ ವಿತರಣೆ ಮಾಡಲಾಯಿತು. ಬಳಿಕ ಮಕ್ಕಳ ವಿವಿಧ ಪದ್ಯಾಟಗಳು ಜರಗಿದವು. ಸಂಜೆ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ಸಂಬಂಧವಾಗಿ ಪೈ ಸ್ಮಾರಕ ರಂಗ ಮಂಟಪದಲ್ಲಿ ಸಾರ್ವಜನಿಕ ಸಭೆಯು ಡಾ| ಕೆ. ಯಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ ಭಾಷಣಗಳಾದವು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಬಳಿಕ ಉಡುಪಿ ಮಹಿಳಾ ಸಮಾಜದ ವತಿಯಿಂದ ನೆಹರೂ ಹುಟ್ಟು ದಿನಾಚರಣೆಯು ಕಾರ್ಯಕ್ರಮಗಳು ಶ್ರೀಮತಿ ಆನಂದಿ ಸದಾಶಿನ ರಾವ್, ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿದವು. ವಿದ್ಯಾರ್ಥಿನಿಯರಿಂದ ವಿವಿಧ ಮನರಂಜನೆಯ ಕಾರ್ಯಕ್ರಮಗಳೂ ಶ್ರೀಮತಿ ಆನಸೂಯ ಬಿ. ಶೆಟ್ಟಿಯವರಿಂದ ಮಧುರ ಸಂಗೀತವೂ, ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಜಲಜಾಕ್ಷಿಯಮ್ಮ ಆರೂರು ಇವರಿಂದ ಸ್ವಾಗತ ಭಾಷಣವೂ, ಕಾರ್ಯದರ್ಶಿನಿ ಆನಸೂಯಾ ಬಿ. ಶೆಟ್ಟಿಯವರಿಂದ ವರದಿ ವಾಚನವೂ, ಅದೇ ವೇಳೆ ಎಂ. ಜಿ ಎಂ. ಕಾಲೇಜಿನ ಪ್ರೊ| ಕುನೂರಿ ಲೀಲಾ ಭಟ್ಟರವರು ನೆಹರೂ ವ್ಯಕ್ತಿತ್ವದ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣ, ನಿರ್ದೇಶನದಿಂದ ನಾಟಕಾದಿ ಸುನರಂಜನೆಯ ಕಾರ್ಯಕ್ರಮಗಳಾದ ಮೇಲೆ ಶ್ರೀಮತಿ ಲೀಲಾ ಎಂ. ಪೈಯವರು ಧನ್ಯವಾದಗಳನ್ನರ್ಪಿಸಿದರು.

೪೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಮುಂಡಿಪಾಲ— ಇದರ ಸ್ವಾಗತ ಸಮಿತಿಯ ಸಭೆಯೊಂದು ತಾ. 15ರಲ್ಲಿ ಸ್ವಾಗತಾಧ್ಯಕ್ಷ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಮುಕುಂದ ನಿವಾಸದಲ್ಲಿ ಜರಗಿತು. ಅಧಿಕ್ಷರು ಈ ಸಮ್ಮೇಳನಕ್ಕೆ ಸಂಬಂಧಪಟ್ಟ ವಿಲ್ಲಿದ ಮತ್ತು ಕಾಲ್ಪನಿಕವಾದ ಬೇಡದ ಟೀಕೆ ಟಿಪ್ಪಣಿಗಳು ಬಂದು ಕಲುಷಿತ ವಾತಾವರಣ ಉಂಟಾಗಿರುವುದರಿಂದ ವಿಷಾದ ಸೂಚಿಸಿ ಸ್ವಾಗತ ಸಮಿತಿಯು ಇದಕ್ಕೆ ಯಾವುದೇ ರೀತಿಯಲ್ಲಿ ಹೊಣೆಯಲ್ಲವೆಂದೂ ಸಾಹಿತಿಗಳೊಳಗೆ ವಿನಾಕಾರಣ ವೈಷಮ್ಯಗಳಿದ್ದರೆ, ದ್ವೇಷಾಸೂಯೆಗಳಿದ್ದರೆ, ಪತ್ರಿಕಾರ ಭಾವನೆಯಿದ್ದರೆ ಅದನ್ನು ತೀರಿಸಿಕೊಳ್ಳಲು ಈ ಸಮ್ಮೇಳನವು ತಕ್ಕ ಸ್ಥಾನವಲ್ಲವೆಂದೂ ನಾವು ಎಲ್ಲ ಸಾಹಿತಿ ಅಭ್ಯಾಗತರನ್ನು ಪ್ರೀತ್ಯಾದರಗಳಿಂದ ಸ್ವಾಗತಿಸಿ ಗೌರವಿಸಿ ನಮ್ಮ ವಿಶಾಲ ಮನೋಭಾವವನ್ನು ವ್ಯಕ್ತಗೊಳಿಸ ಬೇಕೆಂದೂ ಎಲ್ಲರೂ ಈ ನೆಲೆಯಲ್ಲಿ ಪ್ರೀತಿ ಸಹಕಾರಗಳಿಂದ ದುಡಿದು ಪರಿಷತ್ತಿನ ಘನತೆ, ಗಾಂಭೀರ್ಯಗಳನ್ನು ಕಾಯ್ದು ಅದನ್ನು ಯಶಸ್ವಿಯಾಗಿಸಬೇಕೆಂದೂ ಕೇಳಿಕೊಂಡರು. ಕಾರ್ಯದರ್ಶಿ ಕು. ಶಿ. ಹರಿದಾಸ ಭಟ್ ಎಂ. ಎ. ಆವರು ಈ ವರೆಗಾದ ಕಾರ್ಯ ಪ್ರಗತಿಯನ್ನು ವಿವರಿಸಿ ನುಂದಿನ ಕಾರ್ಯರೇಖೆಯನ್ನು ಹೇಳಿದರು. ಆ ವಿಚಾರದಲ್ಲಿ ಅಭಿಪ್ರಾಯ ವಿನಿಮಯವಾಗಿ ತಾತ್ಕಾಲಿಕ ಕಾರ್ಯಕ್ರಮವನ್ನು ರೂಪಿಸಲಾಯಿತು.

ಕಿದಿಯೂರು— ಕಿರಿಯ ಬುನಾದಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆಯ ಸಂಬಂಧ ಡಾ. ಕೆ-ಪಿ. ಆರ್. ಹೆಬ್ಬಾರರು ರಾಷ್ಟ್ರ ಧ್ವಜವನ್ನರಳಿಸಿದರು. ಶ್ರೀ ಕೆ. ಗೋಪಾಲ ರಾಯರು ತಮ್ಮ ಪತ್ನಿಯ ಸ್ಮಾರಕವಾಗಿ ಮಕ್ಕಳಿಗೆ ಸಿಹಿತಿಂಡಿ ಹಂಚಿದರು. ಬಳಿಕ ಸ್ಪರ್ಧೆ ಶ್ರೀ ಕೆ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಭೆ ಬಹುಮಾನ ವಿತರಣೆ ಭಾಷಣಗಳಾದವು.



ಇದೇ ತಾ. 14 ರಂದು ನೆಹರೂ ಜನ್ಮದಿನವನ್ನು ಮಕ್ಕಳದಿನವಾಗಿ ರಾಷ್ಟ್ರಾದ್ಯಂತ ಆಚರಿಸಲಾಯಿತು. ಪ್ರಧಾನಿ ನೆಹರೂರವರು ಮಕ್ಕಳ ದಿನಾಚರಣಾ ಸಮಾರಂಭವೊಂದರಲ್ಲಿ ಭಾಗಿಗಳಾಗಿ ಸಂತೋಷದಿಂದ ಖಾನಿವಾಳಗಳನ್ನು ಹಾರಿಸುತ್ತಿರುವುದನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. No. 137.47

R. E. P. No. 192/60

ಬಿ. ಶಿವರಾಮ ಶೆಟ್ಟಿ — ಅರ್ಜಿದಾರ

ಮತ್ತು

ತೇಜಪ್ಪ ಶೆಟ್ಟಿ ಕೂಡಾ — ಯೆದ್ರಿರು.

ಯಿವರೊಳಗೆ

೩ನೆ ಯೆದ್ರಿ ರಘು ಯೂನೆ ರಘಾರಾಮ ಶೆಟ್ಟಿ ೩ನೆ ಯೆದ್ರಿ ಭುಜಂಗ— ತೇಜಪ್ಪ ಶೆಟ್ಟ ಮಕ್ಕಳು— ಕುಂದಾಪುರ ತಾಲ್ಲ್ಯ ಹಲಸಾಡು ಗ್ರಾಮದ ಮಕ್ಕಿಮನೆಯಲ್ಲಿರುವವರು—

ಮೇಲ್ಕಂಡ ಅಮ್ಜಾಜ್ಞಾರಿಯಲ್ಲಿ ಸದ್ರಿ ಯೆದ್ರಿರಿಗೆ ಅಗತಕ್ಕ ಸೇಲ್ ನೋಟೀಸು ತಾ. 3-12-60ಕ್ಕೆ ಯಿಟ್ಟಿರುವುದ್ರಿಂದ ಆ ದಿಜಿ ಸದ್ರಿ ಯೆದ್ರಿರು ತಮ್ಮ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಹೀರುಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioner.
Udipi, Dated 14-11-60.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ

ಹಾಜರಿ ರಿಜಿಸ್ಟ್ರಿಗಳೂ

ಕಛೇರಿಕಾದಂಬರಿ ಇತ್ಯಾದಿಪುಸ್ತಕಗಳೂ

ಸಿಗುತ್ತವೆ.

ವರ್ಗ-ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಳನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಣಿಪಾಲ

ಕಷ್ಣನ ಉಡುಪಿಗೆ ಬನ್ನಿ

ಉಡುಪಿ ಕನ್ನಡಿಗರಿಗೆ ಪ್ರಿಯವಾದ ಪರಿಚಿತವಾದ ಹೆಸರು. ಭಾರತೀಯ ತತ್ತ್ವ ಶಾಸ್ತ್ರದ ಪರಂಪರೆಗೆ ಒಂದು ಸತ್ತ್ವ ಪೂರ್ಣ ಕಾಣಿಕೆ ಸಲ್ಲಿಸಿದ ಆನಂದ ತೀರ್ಥರು ಅವತರಿಸಿರುವ ಉಡುಪಿಯು ಶ್ರೀ ಕೃಷ್ಣನ ಸನ್ನಿಧಾನದಿಂದ ಅಜಾರ್ಯರ ಅನುಗ್ರಹದಿಂದ ಅಂದಿನಿಂದ ಇಂದಿನ ವರೆಗೂ ತನ್ನದೇ ತೇಜಸ್ಸಿತೆಯಿಂದ ಬೆಳಗುತ್ತಿದೆ. ಇಂದಿಗೂ ಉಡುಪಿ ಆರ್ಟ್ಸ್, ಕಾಮರ್ಸ್, ಲಾ, ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳ ಮೂಲಕ ಆನಂದ ತೀರ್ಥರು ಹೊತ್ತಿಸಿದ ತಿಳಿವಿನ ನಂದಾದೀಪಕ್ಕೆ ತನ್ನ ಪಾಲಿನ ತಪ್ಪವನ್ನು ಸುರಿಸುತ್ತಲೆ ಇದೆ. ಅಜಾರ್ಯರು ಸ್ಥಾಪಿಸಿದ ಧರ್ಮಸೀಮೆಗಳು ಸನಾತನ ಧರ್ಮದ ಪತಾಕೆಯನ್ನು ಮೆರೆಸುತ್ತಲಿವೆ. ಜೊತೆಯಲ್ಲಿಯೆ ಬ್ಯಾಂಕು ಬುದ್ಧಿವೆ ಯೆ ಮೊದಲಾದ ಔದ್ಯಮಿಕ ರಂಗವಲ್ಲೂ ಸ್ವೈಚ್ಛೆಯ ಕಾರ್ಯನೆಸಗಿದ ಉಡುಪಿಯು ಧಾರ್ಮಿಕ—ಸಾಂಸ್ಕೃತಿಕ — ಕ್ಷೇತ್ರಗಳಲ್ಲಿಯಂತೆ ಲೌಕಿಕ ಕ್ಷೇತ್ರದಲ್ಲೂ ಎತ್ತರದ ಸ್ಥಾನವನ್ನೆ ಪಡೆದು ನಿಂತಿದೆಯೆಂದರೆ ತಪ್ಪಲ್ಲ.

ಪಶ್ಚಿಮದಲ್ಲಿ ನಿರ್ಗಾರಮಣೀಯವಾದ ಸಮುದ್ರತೀರ, ಪೂರ್ವದಲ್ಲಿ ವಿದ್ಯಾನಗರಿಯೂ ಕರ್ಮಕಾಂಡಲರ ನೆಲೆಬೀಡೂ ಎನಿಸಿದ ಮಣಿಪಾಲಗಳಿಂದ ಮನಸ್ಸಿಗೆ ಉಲ್ಲಾಸದಾಯಿಯೂದ ಈ ಪುಣ್ಯಕ್ಷೇತ್ರ ನಿಮ್ಮ ಸ್ವಾಗತವನ್ನ ಬಯಸುತ್ತಿದೆ.

ಇಲ್ಲಿ ನಿಮಗೆ ಪ್ರಗತಿಯ ಸಂಕೇತಗಳಾಗಿ ಮೇಲೆಯುವ ವಿದ್ಯಾಸಂಸ್ಥೆಗಳೇ ಅಲ್ಲದೆ ತುಳುನಾಡಿನ ಭವ್ಯ ಸಂಸ್ಕೃತಿಯ ಪ್ರತೀಕಗಳಾಗಿ ಕಂಗೊಳಿಸುವ ದೇವಾಲಯಗಳು, ನದಿಗಳು ಮನಸ್ಸಿಗೆ ನೆಮ್ಮದಿಯನ್ನೂ ಒದಗಿಸಿ ಸಾರ್ಥಕ್ಯವನ್ನೂ ನೀಡುತ್ತ ಕಂಗೊಳಿಸುತ್ತಿವೆ.

ಜಿಲ್ಲೆಯಲ್ಲೂ ಅನೇಕ ಮಹತ್ವದ ಪ್ರೇಕ್ಷಣೀಯ ಸ್ಥಳಗಳವೆ. ಸುಬ್ರಹ್ಮಣ್ಯ, ಧರ್ಮಸ್ಥಳ, ಕೊಲ್ಲೂರುಗಳಂಥ ಪುಣ್ಯ ಕ್ಷೇತ್ರ, ಮೂಡಬಿದರೆ-ಕಾರ್ಕಳಗಳಂಥ ಜೈನ ಸಂಸ್ಕೃತಿಯ ಪಾವನಸ್ಥಳ, ಜನಾರಣ್ಯಾದಿನಂಥ ಐತಿಹಾಸಿಕ ಸ್ಥಳ, ಜೋಗ್ ಫಾಲ್ಸ್‌ನಂಥ ಪ್ರಕೃತಿ ರಮ್ಯಸ್ಥಳ ಇವೆಲ್ಲ ಹಿರಿಯರ ತಪಸ್ಸನ್ನು ಹೊತ್ತು ಕನ್ನಡಿಗರಲ್ಲಿ ದೇವತತ್ವವನ್ನು ತುಂಬಲು ಸಜ್ಜಾಗಿ ಬೆಳಗುತ್ತಿವೆ.

ನೀವು ಈ ಸಲದ ಸಮ್ಮೇಳನಕ್ಕೆ ಬರಬೇಕು. ಉಡುಪಿಯ ಕೃಷ್ಣನ ಕರುಣೆಯನ್ನು ಪಡೆದು ಈ ಎಲ್ಲ ಸ್ಥಳಗಳ ಸೊಬಗು —ಸೌಭಾಗ್ಯಗಳನ್ನು ಸವಿಯಬೇಕು.

ಉಡುಪಿಗೆ ಬರುವ ದಾರಿ

ಉಡುಪಿ ಮಂಗಳೂರಿನಿಂದ 37 ಮೈಲು ಉತ್ತರದಲ್ಲಿರುವ ತಾಲೂಕು ಕೇಂದ್ರ. ಮೈಸೂರು ಹಾಸನ ಮಡಿಕೇರಿಗಳಿಂದ ಅಥವಾ ಮದ್ರಾಸ್ ರೈಲಿನಿಂದ ಮಂಗಳೂರಿಗೆ ಬಂದವರು ಕಾರ್ಕಳ ಮಾರ್ಗವಾಗಿಯೂ ಅಥವಾ ಮಲ್ಪೆ (ಕರಾವಳಿ) ಮಾರ್ಗವಾಗಿಯೂ ಉಡುಪಿಗೆ ಬರಬಹುದು. ಪ್ರತಿ ಅರ್ಧ ಘಂಟೆಗೆ ಬಸ್ಸು ಸೌಕರ್ಯವಿದೆ. ಮಂಗಳೂರಿನಿಂದ ರೂ. 1—75 ಚಾರ್ಜು. ಉಜಿರೆಯಿಂದ ವೇಣೂರು ಮಾರ್ಗವಾಗಿ ಕಾರ್ಕಳಕ್ಕೆ ಬಂದೂ ಉಡುಪಿಗೆ ಬರಲು ಸಾಧ್ಯವುಂಟು. ಶಿವಮೊಗ್ಗಾ ಕಡೆಯಿಂದ ಬರುವವರು ಆಗುಂಬೆ ಮೂಲಕ ಉತ್ತರಕ್ಕೆ ಬರಬಹುದಾಗಿದೆ. ಉತ್ತರ ಕರ್ನಾಟಕ-ಬಳ್ಳಾರಿ-ರಾಯಚೂರು ಈ ಭಾಗಗಳಿಂದ ಬರುವವರು ಹರಿಹರಕ್ಕೆ ಬಂದು ಅಲ್ಲಿಂದ ಶಿವಮೊಗ್ಗ ಮಾರ್ಗವಾಗಿ ಉಡುಪಿಗೆ ಬರುವುದಕ್ಕೆ ಅನುಕೂಲವಿದೆ. ಉತ್ತರ ಕನ್ನಡದ ಮೂಲಕ ಕುಂದಾಪುರಕ್ಕ್ಕಾಗಿಯೂ ಬರಬಹುದಾಗಿದೆ.

ಡಾ| ಟಿ.ಎಂ.ಎ.ಪೈ, ಎಂ.ಬಿ.ಬಿ.ಎಸ್.
—ಅಧ್ಯಕ್ಷ,
ಕು. ಶಿ. ಹರಿದಾಸ ಭಟ್ಟ, ಎಂ. ಎ.
—ಕಾರ್ಯದರ್ಶಿ,
ಮಣಿಪಾಲ ಸ್ವಾಗತ ಸಮಿತಿ,
(ಉಡುಪಿ) ಳನೇ ಕನ್ನಡ ಸಾಹಿತ್ಯ ಸಮ್ಮೇಳನ

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಭಾರತವಾದರೂ ಆಯ್ಕೆ ಹೊಂದಿದ ಕೆನೆಡಿಯವರ ಬಗ್ಗೆ ಸಮಾನತೆಯ ಭಾವವನ್ನೇತ್ತೋರ್ಪಡಿಸುವುದು. ಅಮೆರಿಕೆಯನ್ನು ಭಾರತವು ಮಿತ್ರನೆಂದು ತಿಳಿಯುತ್ತಿತು. ಜಾನ್ ಹಾವರ್ಡ್ ಭಾರತಕ್ಕೆ ನೀಡುತ್ತಿದ್ದಂತೆಯೇ ನಿಕುಂಕ್ತಾಧ್ಯಕ್ಷರೂ ನೆರವು ಸಲ್ಲಿಸುವರೆಂಬ ವಿಶ್ವಾಸವನ್ನಿಟ್ಟುಕೊಂಡಿದೆ. ಅದರೆ, ಪಾಕಿಸ್ತಾನ ಮಾತ್ರ ರಿಪಬ್ಲಿಕನ್ ಸ್ವಪ್ನೇ ಅಧಿಕಾರದಲ್ಲಿ ಉಳಿದಿದ್ದರೆ ಒಳ್ಳೆಯದಿತ್ತು ಎಂಬ ಭಾವವನ್ನು ಜೊರಗೆಡಹಿದೆ.

ಎಲ್ಲಕ್ಕಿಂತ ವಿಲಕ್ಷಣವಾದ ಪ್ರತಿಕ್ರಿಯೆ ಕವಿ ಸ್ಪೆನಿಸ್ಟ್ ಜೀನಾದಿಂದ ಹೊರಬಿದ್ದಿದೆ. ಅದಕ್ಕೆ ಜಿಮ್ಮಿಕಿಯಿ ಚುನಾವಣಾ ಪರಿಣಾಮವೆಂದು ಸಂತೋಷದ ಯಾವ ಕುರುಹೂ ಇಲ್ಲವಂತೆ. ರಶ್ಯದ ಮಾಜಿ ಪ್ರಧಾನಿ ಜೀನಾದ ಅಭಿಮತ ಈ ಬಗ್ಗೆ ಸಂಪೂರ್ಣ ವಿಪರೀತವಿದೆಯೆನ್ನಬಹುದು.

ಅಮೆರಿಕೆಯಲ್ಲಿನ ಶ್ರೀ ಕೆನೆಡಿಯವರ ಅನುದಾರ ಸಮರ್ಥಕರು ಇವರು ಗಳಿಸಿದ ಒಟ್ಟು ಬಹುಮತವು ಬಹಳ ದೊಡ್ಡ ಪರಿಣಾಮವೆಂದು ಬಣ್ಣಿಸಲು ಸಾಲದೆಂದು ಹೇಳಿದ್ದಾರೆ. ಅದುದರಿಂದ ಇವರು ತನ್ನ ಸರಕಾರಕ್ಕ್ಕೊಂದು ರಾಷ್ಟ್ರೀಯ ಆಧಾರ ಸ್ಥಾಪನೆ ಮಾಡುವುದವಶ್ಯವೆನ್ನೆತ್ತಿರಿ. ಇದಕ್ಕೆ ವಿರುದ್ಧವಾಗಿ, ಅಮೆರಿಕೆಯು ಕಾಂಗ್ರೆಸ್ ಮತ್ತು ಎರಡೂ ಸಭೆಗಳಲ್ಲಿ ಡೆಮಾಕ್ರಾಟಿಕ್ ಪಕ್ಷವು ಈ ಮೊದಲೇ ಬಹುಮತ ಪಡೆದಿರುವುದರಿಂದ ಯಾವುದೇ ಹೆದರಿಕೆಯಿಲ್ಲವೆಂದಿವರ ಉದಾರ ಸಮರ್ಥಕರ ಅಭಿಪ್ರಾಯವಿದೆ.

ಈ ಎಲ್ಲಾ ಕಡಚಣಿಗಳನ್ನು ಪಾರು ಮಾಡುವುದು ಹೇಗೆ ಎಂಬತ್ತ ಶ್ರೀ ಕೆನೆಡಿಯವರ ದೃಷ್ಟಿಯಿರಬೇಕು. ಅವರು ಪ್ರಾಮಾಯ, ಧರ್ಮ ಮತ್ತು ಏಸನ್ ಹಾವರರ ಲೋಕ ಪ್ರಿಯತೆಗಳನ್ನು ಎದುರಿಸಿಕೊಂಡೇ ಮುನ್ನಡೆಯ ಬೇಕಾಗಿದೆ. ೧೯೬೪ರಲ್ಲಿ ಮರಳಿ ತಾನು ಚುನಾವಣೆಗೆ ನಿಲ್ಲುವವರ್ಷದಲ್ಲಿ ಈ ಎಲ್ಲ ಭಾವಿಗಳೂ ಮೂರಾಗುವುದೆಂಬುದೇ ಶ್ರೀ ಕೆನೆಡಿಯವರ ಸದಾಶಯ.

ಹೀಗೆ ದೇಶದ ಒಳಗೂ ಹೊರಗೂ ಶ್ರೀ ಕೆನೆಡಿಯವರ ಆಯ್ಕೆಯನ್ನು ಒರೆಗಲ್ಲಿಗೆ ಹಚ್ಚಲಾಗುತ್ತಿದೆ. ಇವೆಲ್ಲವನ್ನೂ ಎದುರಿಸಿಕೊಂಡಿರಲು ಮುಂದುವರಿಯಬೇಕಾಗಿದೆ ಇವರ ಪ್ರಾರಂಭಿಕ ವರ್ತನೆ ಹಾಗೂ ರಾಷ್ಟ್ರಪತಿ ಪದವಿಯನ್ನು ಸ್ವೀಕರಿಸಲು ತೋರ್ಪಡಿಸುವ ತಪ್ಪರತೆಗಳು ಪ್ರಶಂಸನೀಯವೇ ಆಗಿದೆ. ಇವರ ಪ್ರಥಮ ಪತ್ರಿಕಾ ಪರಿಷತ್ತೇ ಉತ್ತಮ ವಾತಾವರಣವನ್ನು ನಿರ್ಮಿಸಿ ಬಿಟ್ಟಿದೆ.

ಶ್ರೀ ಕೆನೆಡಿಯವರು ಇನ್ನೊಂದು ತಿಂಗಳೊಳಗೆ ತಮ್ಮ ಸಚಿವ ಸಂಪುಟವನ್ನು ನಿರ್ವಿಸಬಹುದು. ಮಂತ್ರಿ ಮಂಡಲಿಯ ಆಯ್ಕೆಯಲ್ಲಿಯೇ ಅಧ್ಯಕ್ಷ ಪದದ ಸ್ಥಬ್ಧದ ಬಚ್ಚಿಂತೆ ಅಡಗಿರುವುದರಿಂದ, ಕೆನೆಡಿಯವರ ನೀತಿಯು ಆಗ ಬಹುವಟ್ಟಿಗೆ ತಿಳಿಯುವುದು ಸಾಧ್ಯವಿದೆ. ಪ್ರಮುಖವಾದ ವಿದೇಶೀ ಮಂತ್ರಿ ಸ್ಥಾನಕ್ಕೆ ಶ್ರೀ ಜೆಸ್ಟರ್ ಬೋಲ್ಸ್, ಸಿನೆಟರ್ ವಿಲಿಯಂ ಫುಲ್‌ಬ್ರಾಯಿಟ್, ಶ್ರೀ ಡೇವಿಡ್ ಬ್ರೂಸ್ ಹಾಗೂ ಶ್ರೀ ಎಡ್ಲಾಯಿ ಸ್ಟಿವೆನ್ಸನರೆ ಹೆಸರುಗಳು ಕೇಳಿಬರ ತ್ತವೆ. ಇದರಲ್ಲಿ ಯಾರೇ ನೇಮಿತರಾದರೂ ಅವರು ಸಫಲ ವಿದೇಶ ಮಂತ್ರಿಯಾಗುವುದರಲ್ಲಿ ಸಂದೇಹವಿಲ್ಲ.



. ಭಾರತದಲ್ಲಿ ಲಭ್ಯವಿರುವ ವಿವಿಧ ವಿದಿರುಗಳ ಮೂದರಿಯನ್ನು ಇಲ್ಲಿ ನೋಡಬಹುದು.

ರೋಗನಿದಾನ

(೫ನೇ ಪ. ಟದಿಂದ)

ಸುತ್ತದೆ. ಉತ್ತರ ಪ್ರದೇಶದಲ್ಲಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಈ ರೋಗವು ಭೀಕರವಾಗಿರುವುದು.

ರೋಗ ನಿರೋಧ

ಸಿಡುಬು ರೋಗದಿಂದ ಪಾರಾಗುವುದಕ್ಕೆ ಒಂದೇ ಒಂದು ಉಪಾಯ, ಅದೇ ಆಗಿಂದಾಗ್ಗೆ ಸಿಡುಬಿನ ದಾಕು ಹಾಕಿಸಿಕೊಳ್ಳುವುದು. ಈ ಉಪದ್ರವ ಹರಡಿದ ಕಡೆಗಳಲ್ಲಿ ಎಲ್ಲರಿಗೂ ದಾಕು ಹಾಕಿಸುವುದರಿಂದ ಇದನ್ನು ನಿಯಂತ್ರಿಸಬಹುದು. ದಾಕು ಹಾಕಿಸಿಕೊಂಡ ೮ ದಿನಗಳ ನಂತರ ರೋಗವು ಅಂಟಿದಂತೆ ತಡೆಯುವ ಶಕ್ತಿಯು ದೇಹಕ್ಕೆ ಬರುತ್ತದೆ.

ಮೊದಲನೆಯ ಸಲ ದಾಕನ್ನು ಮಗುವು ಮೂರು ತಿಂಗಳು ಇದ್ದಾಗ ಹಾಕಿಸಬೇಕು. ಈ ರೋಗದ ಸಿಡುಗು ಇದ್ದಲ್ಲಿ ಇನ್ನೂ ಮೊದಲೇ ಹಾಕಿಸಬಹುದು.

ಸಿಡುಬು ರೋಗ ಮನೆಯಲ್ಲಿ ಸಂಭವಿಸಿದರೆ, ಆ ಕೂಡಲೇ, ಆರೋಗ್ಯಾಧಿಕಾರಿಗಳಿಗೆ ತಿಳಿಸಬೇಕು. ರೋಗಿಯನ್ನು ಆಸ್ಪತ್ರೆಗೆ ಸೇರಿಸಬೇಕು. ಆ ಮನೆಯವರೆಲ್ಲಾ ದಾಕು ಹಾಕಿಸಿಕೊಳ್ಳಬೇಕು. ರೋಗಿಯ ಮೂಗು, ಬಾಯಿ ಮತ್ತು ದೇಹದಿಂದ ಬರುವ ದ್ರವವೆಲ್ಲವನ್ನೂ ಸುಟ್ಟು ನಾಶ ಮಾಡಬೇಕು. ಅವರು ಉಪಯೋಗಿಸಿದ ಕೊಳೆಯಾದ ವಸ್ತ್ರಗಳನ್ನೂ ಚೆನ್ನಾಗಿ ಕುದಿಸಿ ತೊಳೆಯಬೇಕು.

ಸಿಡುಬು ರೋಗ ಭಯಂಕರ ಉಪದ್ರವ. ಆದು ರೋಗಿಗೆ ಸಾವನ್ನೂ ತರಬಲ್ಲುದು. ಆದರಿಂದ ಚೇತರಿಸಿಕೊಂಡವರ ಮುಖ ಮತ್ತು ದೇಹದ ಮೇಲೆ ಮಚ್ಚೆಗಳು ಉಳಿದುಕೊಳ್ಳುವುವು.

ಕಾಲಕಾಲಕ್ಕೆ ಸಿಡುಬಿನ ದಾಕು ಹಾಕಿಸಿಕೊಳ್ಳುವುದರಿಂದ ಸುಲಭವಾಗಿ, ಈ ರೋಗದ ಉಪಟಳಗಳಿಂದ ಪಾರಾಗ ಬಹುದು.

ಬೆಚ್ಚನೆಯ ಮನೆ
ನೆಚ್ಚಿಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಆದರಂತೆ
ಕೊಪ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ವಿಚಾರವರ್ಷ

(೪ನೇ ಪುಟದಿಂದ)

ಅವಕಾಶವು ನನಗಿದ್ದರೆ, ಸೂರ್ಯನು ದೊಡ್ಡದೊಂದು ನಕ್ಷತ್ರದಂತೆ ಕಾಣಿಸಿಯಾನು.

ಸೂರ್ಯನಿಗೂ ಶನಿಗೂ ಎಷ್ಟು ದೂರವೋ ಅಷ್ಟು ದೂರ ಮುಂದೆ ಹೋದ ಹೊರತು ಇನ್ನೊಂದು ಗ್ರಹವು ಸಿಕ್ಕಲಾರದು. ಆ ಇನ್ನೊಂದು ಗ್ರಹಕ್ಕೆ ಯು.ರೇನಸ್ ಎನ್ನುವರು. ಇದನ್ನೂ ದೊಡ್ಡ ಗ್ರಹವೆಂದೇ ಜ್ಞೇಯಬೇಕು. ಇದು ಭೂಮಿಗಿಂತ ೬೦ ಮಡಿ ದೊಡ್ಡದು, ಇದರ ಸುತ್ತಲೂ ೫ ಚಂದ್ರರು ತಿರುಗುತ್ತಿವೆ.

ಯುರೇನಸ್ಸಿಗೆ ೧೯೦ ಕೋಟಿ ಮೈಲುಗಳಾಚೆಗೆ ಸುಮಾರಾಗಿ ಅಷ್ಟೇ ದೊಡ್ಡದಾದೊಂದು ಗ್ರಹವಿದೆ, ಅದೇ ನೆಪ್ಚ್ಯೂನ್. ಅದರ ಸುತ್ತಲೂ ೨ ಉಪಗ್ರಹಗಳು ತಿರುಗುತ್ತಿವೆ.

ಈ ಗ್ರಹವನ್ನು ದಾಟಿ ಇನ್ನೊಂದು ೧೩೦ಕೋಟಿ ಮೈಲುಗಳಾಚೆಗೆ ಪ್ಲೂಟೋ ಎಂಬ ಗ್ರಹವು ತಿರುಗುತ್ತಿದೆ. ಇದು ಬಹಳ ಚಿಕ್ಕ ಗ್ರಹ. ನಮಗೆ ತಿಳಿದ ಮಟ್ಟಿಗೆ ಸೂರ್ಯನ ಸುತ್ತಲೂ ತಿರುಗುವ ಕೊಟ್ಟ ಕೊನೆಯ ಗ್ರಹವು ಇದೇ. ಇದರಾಚೆಗೆ ಮತ್ತೆ ಗ್ರಹಗಳಿಲ್ಲ.

ಮೇಲೆ ಹೇಳಿದ ಗ್ರಹಗಳಲ್ಲಿ ಕೊನೆಯ ಮೂರು ಗ್ರಹಗಳು ಆಧುನಿಕ ಯುಗದಲ್ಲಿ ಟೆಲಿಸ್ಕೋಪುಗಳ ಸಹಾಯದಿಂದ ಕಂಡು ಹಿಡಿಯಲ್ಪಟ್ಟವು. ಇವು ಕಣ್ಣಿಗೆ ಕಾಣಿಸಲಾರವು.

ಹೀಗೆ ಸೂರ್ಯ ಕುಟುಂಬವೆಂಬುದು ಸೂರ್ಯನನ್ನು ಕೇಂದ್ರವಾಗಿಟ್ಟುಕೊಂಡು ಆಕಾಶದಲ್ಲಿ ಸುಮಾರು ೪೦ ಕೋಟಿ ಮೈಲು ಮೇರೆಗಳಲ್ಲೆಲ್ಲಾ ವಿಸ್ತರಿಸಿಕೊಂಡು ತಿರುಗುವಂತಹ ಒಂದು ಮಹಾ ವೈಜ್ಞಾನಿಕ ಚಕ್ರದಂತಹುದು.

ಮಾನವನ ಪರಿಜ್ಞಾನ

ಶಾಸ್ತ್ರಜ್ಞೇತ್ತರು ಈ ಸೂರ್ಯ ಕುಟುಂಬದ ಪೂರ್ವೋತ್ತರಗಳನ್ನು ತಿಳಿದುಕೊಳ್ಳಲು ಪ್ರಯತ್ನಮಾಡುತ್ತಲೇ ಇದ್ದಾರೆ ಇದು ಮಾನವನಿಗೆ ಅಗತ್ಯವಾಗಿರಬೇಕಾದ ಜ್ಞಾನ. ಉದಾಹರಣೆಗೆ, ಭೂಮಿ ಹೇಗೆ ಹುಟ್ಟಿತೆಂದು ತಿಳಿಯದೆ ಹೋದರೂ ಭೂಗರ್ಭದಲ್ಲಿ ಏನಿರುವುದೆಂಬುದು ತಿಳಿಯುವಾರದು. ಈ ಭೂ ಗರ್ಭವನ್ನು ಕುರಿತು ನೇರವಾಗಿ ತಿಳಿದುಕೊಳ್ಳಲು ಯಾವ ಅವಕಾಶವೂ ಇಲ್ಲ. ನಮ್ಮ ಪ್ರತ್ಯಕ್ಷ ಸಂಶೋಧನೆಗಳೆಲ್ಲಾ ಭೂಮಿಯು ಪರಿಗಳ ಕೆಲವೇ ಭಾಗದಲ್ಲಿ ಮಾತ್ರವೇ ಅಂಟಿಕೊಂಡಿವೆ. ಹೊರತು — ಹೆಚ್ಚು ಆಳಕ್ಕಿಳಿಯಲಾಗುವುದಿಲ್ಲ.

ಗ್ರಹಗಳನ್ನೂ ಅವುಗಳ ಉತ್ಪತ್ತಿಯನ್ನೂ ಗ್ರಹಗಳೊಳಗೆ ಸೇರಿಕೊಂಡಿರುವ ಪದಾರ್ಥಗಳನ್ನೂ ಕುರಿತು ನಮಗೆ ವಿವರಗಳು ತಿಳಿದು ಬಂದಷ್ಟೂ ಭೂಮಿಯನ್ನು ಕುರಿತು ಕೂಡಾ ಅನೇಕ ವಿಷಯಗಳು ತಿಳಿದು ಬರುತ್ತವೆ.

ಸೂರ್ಯ ಕುಟುಂಬದ ಉತ್ಪನ್ನವನ್ನು ಕುರಿತು ಮಾನವನ ಅಭಿಪ್ರಾಯವು ಯುಗದಿಂದ ಯುಗಕ್ಕೆ ಮಾರ್ಪಡುತ್ತಾ ಬಂದಿವೆ. ಆಧುನಿಕ ಯುಗದ ಶಾಸ್ತ್ರಪರಿಣಿತರು—ಮುಖ್ಯವಾಗಿ ಪಾಶ್ಚಾತ್ಯ ಶಾಸ್ತ್ರಜ್ಞರು ನೂಡುವ ಸಿದ್ಧಾಂತಗಳನ್ನೇ ನಾವು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಯಾವುದೋ ಒಂದು ಕಾರಣದಿಂದ ಸೂರ್ಯಗ್ರಹ ದೊಳಗಿನ ಉರಿಯುವ ಪದಾರ್ಥವು ಆಕಾಶದಲ್ಲಿ ಕೂರಿಕೊಂಡು ಹರಡಿತೆಂದೂ ಆ ಪದಾರ್ಥವೇ ಕಾಲಕ್ರಮದಲ್ಲಿ ಗ್ರಹಗಳಾಗಿ ಛಿನ್ನಭಿನ್ನವಿಸಿತೆಂದೂ ಇಂತಹ ಗ್ರಹಗಳಲ್ಲೊಂದಾದ ಭೂಮಿ ಕೂಡಾ ಮೊದಲು ಒಂದು ಉರಿಯುವ ಗೋಳವಾಗಿದ್ದು ಕ್ರಮವಾಗಿ ತಣಿದು ಹಪ್ಪುಗಟ್ಟಿತೆಂದೂ, ಭೂ ಗರ್ಭದೊಳಗೆ ಆ ಹಿಂದಿನ ಉಷ್ಣವು ಬಹಳ ಮಟ್ಟಿಗೆ ಹಾಗೇ ಯಿರುವುದೆಂದೂ ಹೇಳುವ ಸಿದ್ಧಾಂತವು ಪಾಶ್ಚಾತ್ಯ ದೇಶಗಳಲ್ಲಿ ಅವಲಂಬಿಸಲ್ಪಟ್ಟಿದೆ. ಜನ ಸಾಮಾನ್ಯರಿಗಾಗಿ ರಚಿಸುವ ಪ್ರತಿ ಪುಸ್ತಕದಲ್ಲಿಯೂ ಈ ಸಿದ್ಧಾಂತವೇ ನಮಗೆ ಕಾಣಿಸುತ್ತದೆ.

ಆದರೆ ಸೋವಿಯಟ್ ಶಾಸ್ತ್ರವೇತ್ತರು ಈ ಸಿದ್ಧಾಂತಗಳಲ್ಲಿ ಬಹಳ ಲೋಪಗಳನ್ನು ಹೇಳುತ್ತಾರೆ. ಅವರು ಸೂರ್ಯ ಕುಟುಂಬದ ಉತ್ಪನ್ನವನ್ನು ಕುರಿತು ಮೂಡಿದ ಸಿದ್ಧಾಂತದಲ್ಲಿ ಈ ಬಗೆಯ ಲೋಪಗಳಲ್ಲ; ಮಾತ್ರವಲ್ಲ, ಸೂರ್ಯಕುಟುಂಬಕ್ಕೆ ಸಂಬಂಧಿಸಿ ಈ ವರೆಗಿರುವ ಅನೇಕ ವಿಷಯಗಳನ್ನು ಈ ಸಿದ್ಧಾಂತವು ಸಮಾಯನ್ವಯ ಮೂಡಬಲ್ಲುದೆಂತಲೂ ಹೇಳುತ್ತಾರೆ.

ಶಾಸ್ತ್ರೀಯವಾದ ಯಾವುದೊಂದು ಸಿದ್ಧಾಂತವೂ ಎಂದೂ ಶಾಶ್ವತವಾಗಿರಲು ಸಾಧ್ಯವಿಲ್ಲ. ಏನೋ ಒಂದು ಬದಲಾವಣೆ ಯಾಗುತ್ತಿರುತ್ತದೆ. ಮಾನವನ ಜ್ಞಾನದ ಪರಿಮಿತಿ ಬಳೆದಷ್ಟೂ ತಿಳಿದು ಬರುವ ಹೊಸ ವಿಷಯಗಳನ್ನು ಹಳೆಯದರೊಂದಿಗೆ ಸಮನ್ವಯಿಸಿಕೊಳ್ಳಬೇಕಾದೀತು; ಅಥವಾ ಮೊದಲು ಆನೋದಿಸಲ್ಪಟ್ಟ ಸಿದ್ಧಾಂತಗಳನ್ನು ಸಂಸ್ಕರಿಸಿಕೊಳ್ಳಬೇಕಾದೀತು; ಇಲ್ಲವೇ ಒಂದೊಂದು ಸಾರಿ ಅವುಗಳನ್ನು ಪರಿಪೂರ್ಣವಾಗಿ ಬಿಡಲೂ ಬೇಕಾದೀತು.

ಈ ಗ್ರಹಗಳ ಉತ್ಪನ್ನವನ್ನು ಕುರಿತು ಸೋವಿಯೆಟ್ ಶಾಸ್ತ್ರವೇತ್ತರು ಏನು ಹೇಳುತ್ತಾರೆ? ಅವುಗಳ ಮೂಲಕವಾಗಿ ನಾವು ತಿಳಿದುಕೊಳ್ಳುವ ವಿಷಯಗಳೇನು? ಗ್ರಹಗಳ ವಿಷಯವಾದ ಪರಿಜ್ಞಾನವನ್ನು ಅವರು ಯಾವ ವಿಧವಾಗಿ ಸಮನ್ವಯ ಮಾಡುತ್ತಾರೆ? ಎಂಬವುಗಳನ್ನು ಕುರಿತು ಈಗ ಸ್ವಲ್ಪ ವಿವರಿಸೋಣ.

(ಮುಂದಿನವಾರ:— **ಸೌರಕೂಟದ ನಿರ್ಮಾಣ.**)

ವಿನೋಚನೆ

ಮಾನವನ ಸತ್‌ಶಿಕ್ಷಕ—ದುಃಖ

ಸುಖ ಮಾನವನನ್ನು ಪರಮಾತ್ಮನಿಂದ ದೂರವೆಳೆದರೆ, ದುಃಖಸಮೀಪಗತ ನನ್ನಾಗಿಸುವುದು; ಸರಿದಾರಿಯಲ್ಲಿ ನಡೆಸುವುದು.

ನಿಜವಾದ ಮಾನವ ದುಃಖಿಯೇ ಆಗಿರಬೇಕು; ಸುಖಿಯಲ್ಲಿ ಮಾನವತೆಗಿಂತ ದಾನವತೆಯ ಪ್ರಮಾಣ ಅಧಿಕವಿದೆ.

ಸುಖ ಮತ್ತು ದುಃಖಗಳು ಜೀವನದ ಎರಡು ಮಹಾ ಪ್ರಶ್ನೆಗಳು. ಯಾವುದು ಸುಖ, ಮತ್ತಾವುದು ದುಃಖವೆಂಬುದು ಅನುಭವಿಸುವ ಮಾನವನನ್ನೇ ಹೊಂದಿಕೊಂಡಿದೆ. ಸುಖ ದುಃಖಗಳೆಂದರೇನು ಎಂಬ ಬಗ್ಗೆ ಯಾವುದೇ ಪರಿಭಾಷೆಯನ್ನು ಇದು ವರೆಗೆ ಯಾರೂ ತಯಾರಿಸಿಲ್ಲ. ಸುಖವೆಂದರೇನು, ಅದು ಏಕರಿಂದ ಲಭಿಸುತ್ತದೆ ಎಂಬ ಪ್ರಶ್ನೆಗಳ ಉತ್ತರವು ಇನ್ನೂ ಸಂಕೋಚನೆಯಲ್ಲಿದೆ.

ಯಾರೋ ಒಬ್ಬ ಪ್ರಿಯತಮನ ಪ್ರೇಮದಲ್ಲಿ ಸುಖವಿದೆ ಎಂದು ಹೇಳಿದ. ಹಿಂದೀ ಭಾಷೆಯ ಪ್ರಸಿದ್ಧ ಕವಿ ಬಿಹಾರೀಲಾಲರು ಪ್ರಿಯತಮನ ಪ್ರೇಮದಲ್ಲಿ ವಿರಹಿಣಿಯ ಪರಿಸ್ಥಿತಿಯನ್ನು ಈ ರೀತಿ ವರ್ಣಿಸಿದ್ದಾರೆ:

ಬಿರಹ ಜ್ವಲ ಜರಿಜೋ ಲಖೇ
ಮರಿಬೋ ಭಯೂ ಅಸಿರ್ ॥ ಎಂದ.!

(ಪ್ರಿಯತಮನ ತನ್ನ ಪ್ರಿಯತಮೆಯನ್ನು ಕಂಡಾಗ ಆಕೆಯ ವಿರಹ ಜ್ವಾಲೆಗಳು ನಿಶ್ಯೇಷವಾಗಿ ಹೋದುವಂತೆ!)

ಇನ್ನೊಬ್ಬ ಸುಖವು ಪ್ರಿಯತಮನ ಪ್ರೇಮದಲ್ಲೇನೋ ಇದೆ; ಆದರೆ, ಆ ಪ್ರಿಯತಮ ಬೇರೊಬ್ಬ ಎಂದು ಹೇಳಿದ. ಈತನ ಅಭಿಪ್ರಾಯದಂತೆ ಭಕ್ತಿಯಲ್ಲಿಯೇ ಸುಖವಿದೆ. ಮತ್ತೊಬ್ಬನೆನ್ನುತ್ತಾನೆ, ಸುದಾವು ನಂತಹ ಸಂತೋಷಿಗೆ ದ್ವಾರಕೆಗೆ ಹೋದ ನಂತರವೇ ಸುಖ ಪ್ರಾಪ್ತಿಯಾಯಿತು. ಆದುದರಿಂದ ಲಕ್ಷ್ಮಿಯೇ (ಸಂಪತ್ತಿಯೇ) ನಮಗೆ ಸುಖವನ್ನು ನೀಡುತ್ತಾಳೆ ಎಂದು.

ಆದರೆ, ಒಂದರಿಂದ ಹತ್ತು, ಹತ್ತರಿಂದ ನೂರು, ನೂರರಿಂದ ಸಾವಿರ ಹೀಗೆ ತೃಷ್ಣೆಯು ಬೆಳೆಯುತ್ತ ಹೋಗುತ್ತದೆ. ಹಾಗಾಗಿ ಲಕ್ಷ್ಮಿಯಿಂದಲೂ ಸುಖವೇ ಬುದಿಲ್ಲ. ಲಕ್ಷ್ಮಿಯು ಪದವಿ ಮತ್ತು ಶಕ್ತಿಗಳ ಹಿಂದಿರುತ್ತಾಳೆ. ಆದುದರಿಂದ ರಾಜ ಶಕ್ತಿಯೇ ಸುಖ ಪ್ರದಾನ ಮಾಡಬಲ್ಲುದೆನ್ನುವವರು ಕೆಲವರು

ಚಕ್ರೇಶಃ ಸುರರಾಜತಾಂ ಸುರಪತಿ:
ಬ್ರಹ್ಮತ್ವಮಿ ವಾಂಛತಿ
ಬ್ರಹ್ಮಾ ವಿಷ್ಣುಪದಂ ಹರಿ: ತಿನಪದಂ
ಕೃಷ್ಣಾವಧಿಂ ಕೋ ಗತಃ?

ಮಹಾ ರಾಜನು ಇಂದ್ರನು, ಇಂದ್ರನು ಬ್ರಹ್ಮನು, ಬ್ರಹ್ಮನು ವಿಷ್ಣುವಿನ, ನಿಷ್ಣುವು ಶಿವನ ಪದವಿಯನ್ನು ಪಡೆಯಲು ಅಭಿಲಷಿಸುತ್ತಿರುವವರು; ತೃಷ್ಣೆಯನ್ನು ಪಾರುಮಾಡಿನವರು ಯಾರು? ಹಾಗಿರುವಾಗ ರಾಜಶಕ್ತಿಯಲ್ಲಾದರೂ ಸುಖವೆಲ್ಲಿಂದ ಬಂತು?

ದುಃಖವು ಮನುಷ್ಯನಣ್ಣಾಗುರುತಿಸುವ ಒರೆಗಲ್ಲು. ಹೇಡಿಯನ್ನು ಹೇಡಿಯೆಂದು ಸಿದ್ಧಮಾಡಿತೋರಿಸುವುದು ಇದೇ ಸತತೋದ್ಯೋಗಿಯ ಯಶಪ್ರಸಾರಕ್ಕೂ ಇದೇ ಕಾರಣ. ದುಃಖದಿಂದಲೇ ಮಾನವ ಧೈರ್ಯದ ಪಾಠಕಲಿಯುತ್ತಾನೆ.

ದುಃಖವೊಂದು ಗಾಯದಂತೆ. ಇದರಿಂದ ಹಗಲಿರುಳು ರಕ್ತಜಿನಿಯುತ್ತದೆ. ಪ್ರೀತಿಯಬೀಡೇಜು ಕಟ್ಟಿದೊಡನೆಯೇ ರಕ್ತಸ್ರಾವ ನಿಲ್ಲಬಹುದು, ಆದರೆ ಅದನ್ನು ಕಳಚಿನ ನಂತರ ಮರಳಿ ರಕ್ತಧಾರೆ ಪ್ರವಹಿಸುವುದು. ಆದರೆ ಇದರಿಂದ ಜೀವಕ್ಕೆ ಹಾನಿತಟ್ಟುವುದಿಲ್ಲ.

ಸಂತೋಷ ಹಾಸ್ಯಗಳು ಅನಿತ್ಯ. ಆದುದರಿಂದ ದುಃಖದ ಸ್ಥಾನವು ಅದೆಷ್ಟೋ ಪಟ್ಟು ಹೆಚ್ಚು. ದುಃಖವು ಘೋರಾಂಧಕಾರ ಪೂರ್ಣ ಮಧ್ಯರಾತ್ರೆಯನ್ನು ಪ್ರಾ

(೧೨ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ನಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ! ರೂ.೩ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಸಂಚಯಿತ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	8_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಕುಮಾರಿ ಬಿಲ್ಲಿಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶಲ್), ರೂ. 8=00 (ಎಕ್ಸ್ಟ್ರಾ ಸ್ಪೆಶಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: **ಸಾ ಕಂಪೆನಿ, ಮಂಗಳೂರು—1.**

ನಿಮಗೂ ತಿಳಿದಿರಲಿ

(೩ನೇ ಪುಟದಿಂದ)

ರು; ಇದರೊಡನೆ ಇತಿಹಾಸ, ಭೂಗೋಳ ಗಣಿತ, ವಿಜ್ಞಾನ ಮತ್ತು ಸಂಗೀತಗಳ ಅಧ್ಯಯನವು ನಡೆಯಿತು.

ಈಕೆಯ ಶಿಕ್ಷಣವು ಓದುವುದರಲ್ಲಿ ಮಾತ್ರ ಪರಿಮಿತವಾಗುಳಿಯಲಿಲ್ಲ. ಈಕೆ ತನ್ನ ದೇಶಬಾಂಧವರೊಡನೆ ಬೆರೆತು ಅವರ ಪರಿಚಯ ಮಾಡಿಕೊಳ್ಳುವುದಕ್ಕಾಗಿ ತನ್ನ ಹೆತ್ತವರೊಡನೆ ತಿರುಗಾಡಲು ತೆರಳುತಿದ್ದಳು. ರಾಜಕೀಯ ಸಮರೂಪಭಗಳಲ್ಲಿ ಭಾಗವಹಿಸುತಿದ್ದಳು. ಆ ವಿಳಯು ಹರೆಯದವಳ್ಳೇ ಈಕೆ ತೆಲವು ಬಾರಿ ವಿದೇಶ ಯಾತ್ರೆ ಮಾಡಿದ್ದಳು.

ಆ ವರ್ಷ ತುಂಬಿಮೊಡನೆಮೇ, ಎಂದರೆ ೩೦—೪—೧೯೧೯ರಂದು ರಾಜಕುಮಾರಿ ಜುಲಿಯಾನಾ ಸಂವಿಧಾನದ ನಿಯಮದಂತೆ 'ಯುವರಾಣಿ' ಆದಳು. ಆಕೆಗೆ ಪ್ರತ್ಯೇಕ ಕೋರ್ಟ್-ಭಂಡಾರ, ಸೇವಕ—ಸೇನಿಕ ಮುಂತಾದ ದೊರೆತರು. ೧೯—೬—೩೭ರಲ್ಲಿ ಆಕೆಯನ್ನು ಡಚ್ ಪ್ರೊಟೆಸ್ಟೆಂಟ್ ಚರ್ಚಿನ ಸದಸ್ಯಳನ್ನಾಗಿ ಮಾಡಲಾಯಿತು. ರಾಜಕೀಯ ಪರಿಷತ್ತಿನ ಸದಸ್ಯಳೂ ಆದಳು. ಆ ದಿನದಿಂದ ಪ್ರತಿ ವರ್ಷ ಸಪ್ಟಂಬರಿನ ಮೂರನೆಯ ಗುರುವಾರ ಯುವರಾಣಿ ಜುಲಿಯಾನಾ ಸಂವಿಧಾನದ ನಿಯಮದಂತೆ 'ಯುವರಾಣಿ' ಆಗಳು. ಆಕೆಗೆ ಪ್ರತ್ಯೇಕ ಕೋರ್ಟ್-ಭಂಡಾರ, ಸೇವಕ—ಸೇನಿಕ ಮುಂತಾ ದೊರೆತರು. ೧೯—೬—೩೭ರಲ್ಲಿ ಆಕೆಯನ್ನು ಡಚ್ ಪ್ರೊಟೆಸ್ಟೆಂಟ್ ಚರ್ಚಿನ ಸದಸ್ಯಳನ್ನಾಗಿ ಮಾಡಲಾಯಿತು. ರಾಜಕೀಯ ಪರಿಷತ್ತಿನ ಸದಸ್ಯಳೂ ಆದಳು. ಆ ದಿನದಿಂದ ಪ್ರತಿ ವರ್ಷ ಸಪ್ಟಂಬರಿನ ಮೂರನೆಯ ಗುರುವಾರ ಯುವರಾಣಿ ಜುಲಿಯಾನಾ ಸಂವಿಧಾನದ ನಿಯಮದಂತೆ 'ಯುವರಾಣಿ' ಆಗಳು. ಆಕೆಗೆ ಪ್ರತ್ಯೇಕ ಕೋರ್ಟ್-ಭಂಡಾರ, ಸೇವಕ—ಸೇನಿಕ ಮುಂತಾದ

ಕಥಾವಿಹಾರ

(೨ನೇ ಪುಟದಿಂದ)

ಎಂದು ಸುಬ್ಬ ಅನುಮಾನದ ಪಲ್ಲವಿ ಹಾಡಿದ. ಮೊದಲೆ ಕಾಗೆ-ಗೂಗೆಯಂತಿದ್ದರು—ಬಚ್ಚ-ಸುಬ್ಬ! 'ಈ ಚುನಾವಣೆಯ ಕಾಲಗತಿಯಲ್ಲಾದರೂ ಬಚ್ಚನಿಗೆ ಒಂದು ಬರೆಯಿಳೆಯಬಾರದೇಕ?' ಎಂದು ಸುಬ್ಬ ಹಟ ಸಾಧನೆಯ ಪೂರ್ವ ತಯಾರಿಯಲ್ಲಿದ್ದ. ಆ ಕಾಲವೂ ಬಂತು. ಹಾಗಾಗಿ ಇದ್ದದ್ದು ಇಲ್ಲದ್ದನ್ನೆಲ್ಲಾ ಬಂಣ ಬಳಿದು ರಾಯರ ಕಿವಿಗೂದಿದ. ಆ ಕಿವಿಯೊ, ಥೇಟ್ 'ಹಿತ್ತಾಳೆ' ಜಾತಿಯೆಂಬುದು ಆತನಿಗೆ ತಿಳಿಯದ ಸಂಗ್ತಿಯಲ್ಲ!

"ಹಾಗಾಂದ್ರೆ! ..?.... ದೇವಂತಾನೆಗೂ ಅಂದಿದ್ದನೆಲ್ಲ!" ರಾಯರು ಅನುಮಾನಿಸಿದರು.

"ಹ್ಞ' ಆತ ಹೆತ್ತೊಂಬತ್ತು ದೇವಂತಾನೆ ಕೊಡಬಲ್ಲ. ಶುದ್ಧ ದೇವರ ಕೈ ಬಿಟ್ಟ ಆಸಾಮಿ!.... ಇಲ್ಲಿನ ಕಾರ್ಯಕಲಾಪಗಳನ್ನು ಶೆಟ್ಟ್ರಿಗೆ ವರದಿ ಕೊಡುವವನಿವನಂತೆ. ನುಣ್ಣಗೆ ಮಾತಾಡುವುದರಲ್ಲಿ ಬಲು ಘಾಟಿ!....ನನಗೆ ತಿಳಿದಷ್ಟು ಕೇಳಿದೆ. ಮತ್ತೆ ಧಣಿ ಚಿತ್ತ!' ಎಂದು ಸುಬ್ಬ ತನ್ನ ಕಾರ್ಯ ಸಾಧನೆಯ ಕರ್ತವ್ಯದ ಹೊರೆಯನ್ನು ಉಪಾಯವಾಗಿ ರಾಯರ ಮೇಲೆ ಹೊರಿಸಿದ.

"ಅಂ!...ಇದೆಲ್ಲ ನಿಜ ತಾನೆ?.... ಇರಲಿ, ಆತ ಎಲ್ಲಿಗೆ ಹೋಗ್ತಾನೊ ನೋಡ್ತೇನೆ. ಸುಬ್ಬಾ! ಈಗಲೇ ಹೋಗಿ ಆತನನ್ನು ಬರಹೇಳು. ಒಬ್ಬೆನೆಂದರೆ ಕೈಕಾಲು ಬಿಗಿಸಿ ಹೊತ್ತು ತನ್ನಿ. ಹೂಂ....ಜಾಗ್ರತೆ!" ಎಂದು ರಾಯರು ಹೂಂಕರಿಸಿದರು. ಸುಬ್ಬನೂ ಅಷ್ಟಕ್ಕೆ ಕಾಯುತಿದ್ದ! ನಾಲ್ಕು ಮಂದಿ ಸಿಬಂದಿಯೊಡನೆ ಹೊರಟ—ಬಚ್ಚನನ್ನು ಬಿಗಿಸಿ, ಹೊರಿಸಿ ತರುವುದಕ್ಕೆ! ಹೇಗಾದ್ರೂ ಆತನಿಗೆ ಒಂದು ಗುಟುಕು ನೀರು ಕುಡಿಸುವುದು ಆತನ ಉದ್ದೇಶವಾಗಿತ್ತು.

ರಾಯರಿದ್ದು ಮುಖಾರವಿಲ್ಲ ಶತಪಥ ತಿರುಗ ಹೆತ್ತಿದರು. ಆವರ ಮೆದುಳು ಬಚ್ಚನ ಓಟನ್ನು ಗೆಲ್ಲುವ ದಾರಿಯನ್ನು ಹುಡುಕುತಿತ್ತು!

oo oo

ಸುಂದರ ರಾಯರೆಂದರೆ ಊರಿಗೆ ಸಿಂಹ ವ್ಯಾಯರು! ಎಂಥಾ ಸಂದರ್ಭದಲ್ಲೂ ರಾಯರಂದುದನ್ನು ಅಲ್ಲಗಳೆಯುವ ಭಟರಲ್ಲಿಲ್ಲ! (ಆಂತರಿಕವಾಗಿ ಹೇಗೂ ಇರಲಿ!) ರಾಯರು ಹಿಂದೆ ಎರಡಾವರ್ತಿ ಇಲೆಕ್ಷನ್ನಿಗೆ ನಿಂತು, ಮೈ ಕೈ ಸುಟ್ಟುಕೊಂಡರೂ, ಮನೂರನೆ ಬಾರಿ ನಿಂತು 'ಜನರು ವಿಚಾರ ಶೀಲರೊ ಅಥವಾ ಮೂರ್ಖ ಶಿಖಾಮಣಿಗಳೊ ಎಂದು ನಿರ್ಣಯಿಸಿ ಬಿಡುವೆನು' ಎಂದಿದ್ದರು.

ಈ ಸಲ ರಾಯರಿಗೆ ಗೆಲ್ಲುವ ಛಾನ್ಸಿದ್ದಿತು. ಆದರೆ ಬಚ್ಚನಂತಹ ಕೆಲವರು ಪರೋಕ್ಷ ಪ್ರಾತಿಬಂಧಕ ವ್ಯಕ್ತಿಗಳ ಕಾರಸ್ಥಾನವು ಸುಬ್ಬನಂತಹ 'ಸಿ. ಐ ಡಿ.'ಗಳ ಮುಖೇನ ಅವರಿಗೆ ವರದಿ ಬಂದಿತ್ತು! ಅದಕ್ಕಾಗಿ ಅವರು ಹೆಗಲಿರುಳು ಆ ಗುಪ್ತ ವಿರೋಧಿಗಳ ಬಗ್ಗೆ ತಲೆ ಬಿಸಿ ಮಾಡಿಕೊಳ್ಳುತಿದ್ದರು. ಹಾಗಾಗಿ ಸುಬ್ಬನನ್ನು ಬಚ್ಚನಲ್ಲಿಗಟ್ಟಿ ಬೇಕಾದ ಸ್ವಮೇಯ ರಾಯರೆಗೊದಗಿತು.

ರಾಯರು ಬಚ್ಚನನ್ನು ಕಾಣುತ್ತಲೆ "ಬಚ್ಚಾ!...." ಎಂದರು.

ಎರಡನೆ ಸಾರಿ ಕರೆಸಿದುದರ ಅರ್ಥ ತಿಳಿಯದೆ ತಬ್ಬಿಬ್ಬಾದ ಬಚ್ಚ, "ಧಣಿ!..." ಎಂದು ಆಧೀರನಾಗಿ.

"ನಿನ್ನನ್ನೇಕೆ ಕರೆಸಿದೆ ಗೊತ್ತೆ?...."—ಎನ್ನುವಾಗ ರಾಯರ ಹುಬ್ಬು ಮೇಲೆ ರಿತ್ತು.

ಪರಿಸ್ಥಿತಿಯೂ ವಾತಾವರಣವೂ ಬಚ್ಚನ ಕಣ್ಣು ಕಟ್ಟಿದಂತಿತ್ತು. ಹಾಗಾಗಿ "ನನಗೊಂದೂ ತಿಳಿಯದು!...." ಎಂದು ಬಚ್ಚ ನುಡಿದ.

"ಎಲ್ಲಾ ತಿಳಿಯುತ್ತೆ. ಈ ಕಾಯಿ ಮುಟ್ಟಿ ಹೇಳು!'— ಅಧಿಕಾರ ವಾಣಿಯೊಂದಿಗೆ ಸಿಪ್ಪೆ ತೆಗೆದ ತೆಂಗಿನ ಕಾಯಿಯೊಂದನ್ನು ಬಚ್ಚನೆಡೆಗು ತಂದಿಟ್ಟರು.

ಬಚ್ಚನನ್ನು ಕರೆಸಿ, ಜೈಲಿಗೆ ನಾಲ್ಕು ಬಿಗಿದು ನನ್ನ ಕಣ್ಣಿಗೆ ಹಬ್ಬನನ್ನುಂಟು ಮಾಡುತ್ತಾರೆಂದು ಬಗೆದ ಸುಬ್ಬ ಪೆಚ್ಚಾದ. ಆದರೂ ರಾಯರ ವರ್ತನೆಯು ಆತನಿಗೆ ವಿಚಿತ್ರವಾಗಿ ಕಂಡಿತು.

ಬಚ್ಚನಿಗಂತೂ ದಿಗ್ಭ್ರಮೆಯೂಯಿತು. ತನ್ನ ಇಡೀ ಜೀವವೂನದಲ್ಲಿ ಎಂದೂ ಆತ ತೆಂಗಿನ ಕಾಯಿ ಮುಟ್ಟಿ, ಸತ್ಯಾಸತ್ಯತೆಯ ಶೋಧೆಗೆ ನಿಲುಕುವಷ್ಟರ ಮಟ್ಟಿಗೆ 'ಕಳ್ಳ—ಸುಳ್ಳನಾಗಿರಲಿಲ್ಲ! 'ಹಾಗಾಗ್ರೆ ನೀನೇಕೆ ಕಾಯಿ ಮುಟ್ಟಬೇಕು!' ಎಂದು ಆತನ ಆಂತರ್ಗತ ಮನಸ್ಸು ಕಿರಿಚಿಕೊಂಡಿತಾದರೂ, ರಾಯರ ಬಿಗಿದ ಮೋರೆಯನ್ನು ಕಂಡು, "ಏನೆಂದು ಕಾಯಿ ಮುಟ್ಟಲಿ ಧಣಿ!...." ಎಂಬ ಶಬ್ದವು ಬಚ್ಚನ ಬಾಯಿಯಿಂದ ತಂತಾನೆ ಹೊರ ಬಿತ್ತು.

"ಕಲ್ಕುಟಿಗನ ಆಣೆಯಾಗಿಯೂ ನನ್ನ ಓಟನ್ನು ನಿನಗೆ ಹಾಕುತ್ತೇನೆ. ಕಪ್ಪಿದರೆ ಕಲ್ಕುಟಿಗನಿಗೆ ತಪ್ಪಿದಂತೆ!....ಎಂದು ಕಾಯಿ ಮುಟ್ಟು." ಎಂಬ ರಾಯರ ಬಿಂಕದ ಮಾತನ್ನು ಕೇಳಿ, ಬಚ್ಚ ಮಂಕನಾದ. ಆತ ಹೆಳೆಯು ಹುಂಬ ನಿಜ. ಆದರೆ ಆತ ಎಲ್ಲೂ ಇಂಥ ಅನ್ಯಾದೃಶ ಚುನಾವಣಾ ಪ್ರಚಾರಂವನ್ನು ಕಂಡು ಕೇಳಿದ್ದಿಲ್ಲ!

ಈಗೀಗ ಓಟಿಗೂ ಬೆಲೆ(ಗೆ) ಇತ್ತೆಂದು ಅವನಿಗೆ ತಿಳಿದಿತ್ತು. ಆದರೆ ಓಟಿನ ಭದ್ರತೆಗಾಗಿ ದೇವರ ಮೇಲೆ ಆಣೆ ಹಾತಿಸುವ, ಕಾಯಿ ಮುಟ್ಟಿಸುವ ಅಭಿನವ ಸಂಪ್ರದಾಯವೊಂದು ಉದಿಸಿತ್ತೆಂದು ರಾಯರ ಚುನಾವಣಾ ಕಾಲದಲ್ಲಿ ಮಾತ್ರ ಬಚ್ಚನ ಅನುಭವಕ್ಕೆ ಬಂತು!

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಜನರೂ ಸ್ವತಂತ್ರರು—ಆವರೇ ಶ್ರೇಯಂಕರರು! ಆದರೆ ಬಡವರು?...ಅವರು ದೊಡ್ಡವರು ಆಡಿಸಿದಂತೆ ಕುಣಿಯುವ ಸಜೀವ ಗೊಂಬೆಗಳು ಮಾತ್ರ!

"ಜನತೆಯು ಸ್ವಬುದ್ಧಿಯಿಂದ ಓಟು ಕೊಡುವುದು ಆವರ ಜನ್ಮಸಿದ್ಧ ಹಕ್ಕು!" ಎಂದು ಉದ್ದುದ್ದ ಭಾಷಣ ಬಿಗಿಯುವ ಈ ಭೂಸರು, ಒಂಬೊಂದು ಓಟಿಗಾಗಿ ಎಂತೆಂಥ ಗುಪ್ತ ಅಮಾನುಷ ಕೃತ್ಯವನ್ನೆ ಸಗುವರೊ!" ಎಂದು ಬತ್ತ ಬಚ್ಚ ತುಂಬಾ ವಿಷಾದಕ್ಕ್ಯೊಳಗಾದ.

ಬಲಾತ್ಕಾರ, ವಂಚನೆ, ಬೆದರಿಕೆ, ಹಂಗು, ಹಣ ಇವುಗಳಿಂದ ಓಟನ್ನು ಸೆಳೆಯುವುದಕ್ಕೆ ಚುನಾವಣೆಯೆನ್ನುವರೇ ಹ್ಞೂ!...ಇದರ ಜತೆಯಲ್ಲಿ ದೇವರ ಹೆಸರಲ್ಲಿ ಆಣೆ-ಭಾಷೆ ಮಾಡಿಸುವಷ್ಟು ನಮ್ಮ ಭಾವಿ ಪ್ರತಿನಿಧಿಗಳು ಕೀಳು ನುಟ್ಟಕ್ಕಿಳಿದು, ದೇವರ-ಶರಕಾರದ ಹೆಸರಲ್ಲಿ ಎಂತಹ ಅಪಚಾರವನ್ನೆಸಗುವರೊ!...' ಎಂದು ಈಗಿನ ಚುನಾವಣೆಯ ವಿಚಿತ್ರ ವೈವಿಧ್ಯವನ್ನು ನೆನೆದು ಬಚ್ಚನ ಮನಸ್ಸು ಕಕ್ಕಸಕ ಕುದಿಯ ತೊಡಗಿತು.

ಆದರೆ ರಾಯರ ಆಜ್ಞೆಯಂತೆ 'ಕಾಯಿ ಮುಟ್ಟದಿರಲು' ಆತ ಅನನ್ಯ ಪರಿಸ್ಥಿತಿಯಲ್ಲಿ ತೊಳಲುತಿದ್ದ! 'ಹೂಂ, ಬೇಗ!...." ಎಂದು ರಾಯರು ಹೂಂಕರಿಸಿದಾಗಲೆ ಬಚ್ಚನಿಗೆ ಅರಿವುಂಟಾಯತು. ರಾಯರ ನಿರ್ದೇಶನದಂತೆ ಕಾಯಿ ಮುಟ್ಟಿ ಬೇಕಾಯ್ತು— ಮುಟ್ಟಿದ!

ಒಂದೆರಡು ನಿಮಿಷ ತಡೆದು, "ನಾನಿನ್ನು ಹೋಗಲೆ?..." ಎಂದ. ಆತನಿಗೆ ಅಲ್ಲಿ ಮತ್ತೊಂದು ನಿಮಿಷ ನಿಲ್ಲುವುದು ಅಸಾಧ್ಯವಾಗಿತ್ತು, ಅಸಹನೀಯವಾಗಿತ್ತು!

"ಒಳ್ಳೇದು ನೆನಪಿರಲಿ!..."—"ಇನ್ನು ನಿನ್ನಿಂದಾಗ ಬೇಕಾದುದು ಏನೂ ಇಲ್ಲ, ನಡಿ' ಎಂಬ ತಾತ್ಪರ್ಯ ಪೂರ್ಣ ಆರ್ಥ ಅಡಕವಾಗಿತ್ತು. 'ಉಪಾಯವಾಗಿ ಓಟನ್ನ ಬೇಟೆಯಾಯಿತಲ್ಲ!' ಎಂಬ ಹೆಮ್ಮೆಗೂ ಅವಿತು ಕೊಂಡಿತ್ತು—ರಾಯರ ಮಾತಿನಲ್ಲಿ.

ಆ ಮಾತನ್ನು ಗಮನಿಸದೆ ನಿರ್ಗಮನ ನಾದ - ಬಚ್ಚ! ರಾಯರ ವಿಕಟ-ಕರ್ಕಶವಾದ ನಗುವೊಂದು ದೂರದಿಂದ ಅಸ್ಪಷ್ಟವಾಗಿ ಕೇಳಿಸಿತು ಅಷ್ಟೆ.

oo oo oo

ಬಚ್ಚನ ಮನಸ್ಸು ಹುಚ್ಚು ಕುದುರೆಯ ಓಟದಂತಾಗಿತ್ತು. ತನ್ನ ಮೂಸಾಭಿ ಮೂನಕ್ಕಿಂದು, ಈ ತರವ ಅಭಿಜಿತಿಯು ತನ್ನೊಡೆಯರಿಂದೊದಗಬಹುದೆಂದು ಆತ ನಿರೀಕ್ಷಿಸಿರಲಿಲ್ಲ. ತನ್ನ ಮನಸ್ಸನ್ನು ತಿಳಿಯದೆ ಹತ್ತು ಜನನನಗಾಗದೆವರ ಮುಂದೆ ಕಾಯಿ ಮುಟ್ಟಿಸಿ, ಮರ್ಯಾದೆಯ ಚಿತ್ರಹಿಂಸೆ ಮಾಡಿದ ರಾಯರನ್ನು ನೆನೆದು ಆತನ ಹೃದಯದಲ್ಲಿ ಸಿಟ್ಟಿಂಬ ಬೆಂಕಿಯು ಬಾಗಿಲ್ಲೆಂದು ಹೊತ್ತಿಕೊಂಡಿತು. 'ಈ ಜನ್ಮದಲ್ಲಿ ನಿಮಗೆ ಓಟೀಯೆನೆಂದು ಬದ್ಧ ಪ್ರತಿಜ್ಞೆ ತೊಟ್ಟ! ಆನರೆ....'ದೇವರನ್ನು ವಂಚಿಸಲೆ?....ಪ್ರತಿಜ್ಞೆ ಉಳಿಸಲೆ?...' ಬಚ್ಚ ಪೇಚಿಗೆ ಬಿದ್ದ.

ಬಚ್ಚ ಬಡನನಾದರೂ ಆತನ ಮಂಡೆಗೆ ಬಡಿಸ್ತಿಕೆಯುಂಟೆ?....ಕಾಯಿ ಮುಟ್ಟಿದ ತಪ್ಪಿಗಾಗಿ, ಊರ ಕಲ್ಕುಟಿಗನಿಗೆ ನಾಲ್ಕಾಣೆ ತಪ್ಪು ಕಟ್ಟಿದ. ಓಟನ್ನು ಮಾತ್ರ ವರಿಯದೆ ಸುಂದರ ರಾಯರ ಎದುರಾಳಿ ಶಿವಪ್ಪ ಶೆಟ್ಟರಿಗೆ ಹೃತ್ಪೂರ್ವಕವಾಗಿ ಆ ಪಿಸಿದ—ಗುಪ್ತವಾಗಿ!

ಇತ್ತ ಧಣಿಯೂವ ಸುಂದರ ರಾಯರಲ್ಲಿ ನಿಸ್ಕೂರವೂ ತಪ್ಪಿತ!...ಅತ್ತ ಗಟಾ ಗಟಿ ದೈವ ಕಲ್ಕುಟಿಗನ ಹಿಡಿತವೂ ಪಡಿಲಿಸಿತು!....

ಅಂತೂ....ಬಚ್ಚ ಖಾಂತಾದ!

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C.-312.60.

B. R ವಿಷ್ಣುಮೂರ್ತಿ ಜೋಶಿ ....ವಾದಿ.

ನಾರಾಯಣಯ್ಯ. ಪಲಮನೆರ್ ಸುಬ್ರಾಯರ ಮಗ. ಕುಟುಂಬದ ಯಜಮಾನ. ವರ್ಕಾಡಿ ಗ್ರಾಮ ಕಾಸರಗೋಡು ತಾಲೂಕು.P. O. Varkady —ಪ್ರತಿವಾದಿಗೆ.

ವಾದಿಯು ನಮ್ಮ ಮೇಲೆ ದಿ. ಜೂ. ನೋಟಿನ ಬಾಬ್ತು ಬಹಾ ಏನಬೆಗೆ ಮಾಡಿದ ಮೇಲಿನ ದಾವೆಯು ತಾ. 26—11—60 ಕೈಯಿರುವ ದ್ರಿಂದ ನೀವು ಆ ದಿನ 10 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸಿ ಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿಕ್ಷಾಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(By order of the court)

B. Sripathi Rao.

Advocate for plff.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
17-11-1960

LICENSE NO. 31
Licensed to Post without Prepayment

ಪರಿಚಯ

ದರಿದ್ರ ಶ್ರೀಮಂತ ಸಮರ್ಥಕ--ಕೆನೆಡಿ

ಅಮೆರಿಕೆಯ ನಿಯೋಜಿತ ಅಧ್ಯಕ್ಷ ಶ್ರೀ ಜಾನ್ ಕೆನೆಡಿಯವರು ಕೋಟ್ಯಧೀಶರ ಮಗನಷ್ಟ ಅಳಿಯ. ಹಾಗಿದ್ದರೂ ದೀನದಲಿತರ, ಪೀಡಿತರ ಬಗ್ಗೆ ಇವರಿಗೆ ಅನನ್ಯ ಪ್ರೀತಿ. ಮುಂದೆಯೂ ಇವರು ತಮ್ಮ 'ದರಿದ್ರರ ಶ್ರೀಮಂತ ಸಮರ್ಥಕ' ಎಂಬ ಉಪನಾಮಕ್ಕೆ ವ್ಯತಿರೇಕ ವರ್ತನೆ ಮಾಡಲಾರರು

ಳಿ ವರ್ಷದ ಪ್ರತಿಭಾಶಾಲಿ, ದೂರ ದರ್ಶಿ, ಸಾಹಸಿ ಮತ್ತು ಸಂಘಟನಾಶೀಲ ರಾದ ಒರ್ವ ವ್ಯಕ್ತಿಯನ್ನು ಕಮ್ಯೂನಿಸ್ಟ್ ರಾಷ್ಟ್ರಾಧ್ಯಕ್ಷನಾಗಿ ಅಮೆರಿಕದ ಜನತೆ ಆರಿಸಿಕೊಂಡಿತು. ಶ್ರೀ ಜಾನ್ ಕೆನೆಡಿಯವರು ಹಲವಾರು ರೀತಿಯಿಂದ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೆ. ದ್ವಿತೀಯ ಮಹಾಯುದ್ಧಾವಧಿಯಲ್ಲಿ ಇವರು ಸೇನೆಯಲ್ಲೂ ಇದ್ದರು. ಕುಶಲ ಪಾರ್ಲಿಮೆಂಟೇರಿಯನ್ನರೂ ಸಫಲ ಪತ್ರಿಕಾಕರ್ತರೂ ಸಾಹಿತ್ಯಕಾರರೂ ಎಂದಿವರು ಕೀರ್ತಿಗಳಿಸಿದ್ದಾರೆ.

ಒರ್ವ ಅಮೆರಿಕನ್ ಕೋಟ್ಯಧೀಶನ ಪುತ್ರರಾದ ಕೆನೆಡಿಯವರು ತಮ್ಮ ಸಂಪದೀಯ ಜೀವನದಲ್ಲಿ ಸದಾ ಸರ್ವದಾ ಸಾಕರ್ಯ ವಿಹೀನ ವರ್ಗದ ಪರವಾಗಿ ಧ್ವನಿಯೆತ್ತಿದ್ದರು; ಈ ವರ್ಗದ ಉನ್ನತಿಯಾಗಬೇಕೆಂದು ಪ್ರಾರ್ಥಿಸಿದರು. "ಬಡವರ ಶ್ರೀಮಂತ ಸಮರ್ಥಕ" ಎಂದಿವರಿಗೆ ಉಪನಾಮ ಬಂದಿರುವುದು ಇದರಿಂದಲೇ. ದೀನದಲಿತರ ಹಾಗೂ ಪೀಡಿತರ ಬಗ್ಗೆ ನಿಯುಕ್ತ ರಾಷ್ಟ್ರಪತಿ ಕೆನೆಡಿಯವರ ಉಪಯುಕ್ತ ಅಭಿಪ್ರಾಯವು ತಮ್ಮ ದೇಶದಲ್ಲಿ ಹೊತ್ರವಷ್ಟಲ್ಲ; ವಿಶ್ವವಾದ್ಯಂತದಲ್ಲಿಯೂ ಇವರು ಉನ್ನತರಾಗಬೇಕೆಂದು ಹಾರೈಸ್ಸುತ್ತಾರೆ. ಭಾರತದಂತಹ ಅನಭಿವೃದ್ಧ ರಾಷ್ಟ್ರಗಳ ಪರಿಸ್ಥಿತಿ ಸುಧಾರಿಸಲು ಇವರೂ ಪ್ರೇರಣೆಯಿತ್ತರು; ಎರಡು ವರ್ಷಗಳಿಗೆ ಮೊದಲು ಭಾರತದ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ವಿಕೇಷ 'ಮಿಶನ್' ನಿಯುಕ್ತಮಾಡಬೇಕೆಂದಿವರು ಪ್ರಸ್ತಾಪ ಮಂಡಿಸಿದ್ದರು.

ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರತಿಭಾಸಂಪನ್ನ ವಿದ್ಯಾರ್ಥಿ ಶ್ರೀ ಕೆನೆಡಿಯವರು ಆದರ ಬಹುಮಾನಿತ ಪದವೀಧರರು. ಗ್ರಾಜುಯೇಟ್ ಸ್ಕೂಲ್ ಆಫ್ ಇಕನೆಮಿಕ್ಸ್'ನಲ್ಲಿಯೂ ಶ್ರೀ ಜಾನ್ ಕೆನೆಡಿಯವರು ಶಿಕ್ಷಣ ಪಡೆದಿದ್ದರು.

ದ್ವಿತೀಯ ಲೋಕ ಸಂಗ್ರಾಮಾವಧಿಯಲ್ಲಿ, ಗ್ರಾಜುಯೇಟ್ ಆಗುವುದರಲ್ಲಿ ಅಮೆರಿಕೆಯ ನೌಕಾ ಸೇನೆಯಲ್ಲಿ ಸೇರಿಕೊಂಡ ಜಾನ್ ಕೆನೆಡಿಯವರು ಗ್ರಾಜುಯೇಟ್ ಆಗುವುದರಲ್ಲಿ ಲೆಫ್ಟಿನೆಂಟ್ ಹುದ್ದೆಗೇರಿದರು. ಒಂದೊಮ್ಮೆ ಮುಳುಗುತ್ತಿರುವ ಹಡಗಿನಲ್ಲಿನ ತನ್ನ ಸಂಗಾತಿಗಳನ್ನು ಉಳಿಸಿದ ಸಾಹಸಕ್ಕಾಗಿ ಇವರಿಗೆ 'ಪರ್ಪಲ್ ಹಾರ್ಟ್' ಪದಕವು ಲಭಿಸಿತ್ತು.

ಇಂದಿಗೆ ಕೇವಲ ೧೪ ವರ್ಷ ಮೊದಲು ರಾಜಕೀಯ ಪ್ರವೇಶಕ್ಕೆ ಕಾಲಿರಿಸಿದ ಶ್ರೀ ಕೆನೆಡಿಯವರು ಗ್ರಾಜುಯೇಟರ್ಲಿ ಪ್ರತಿನಿಧಿ ಸಭೆಗೆ ಬೋಸ್ಟನ್ ಮತದಾರ ಕ್ಷೇತ್ರದಿಂದ ಆರಿಸಿ ಬಂದರು. ಎರಡು ಬಾರಿ ಈ ಸಭೆಗೆ ಆಯ್ಕೆಯಾದ ನಂತರ ಡೆಮೊಕ್ರೆಟ್ ಕರಾಗಿ ಗ್ರಾಜುಯೇಟರ್ಲಿ ಮೆಸಚುಟೆಸ್ ಕ್ಷೇತ್ರದಿಂದ ಸೆನೇಟ್ ಸದಸ್ಯರಾದರು. ಗ್ರಾಜುಯೇಟರ್ಲಿ ತಮ್ಮ ಪಕ್ಷದಿಂದ ಅಮೆರಿಕೆಯ ಉಪರಾಷ್ಟ್ರಪತಿ ಸ್ಥಾನಕ್ಕೆ ಟಿಕೇಟು ಪಡೆಯಲು ಪ್ರಯತ್ನಿಸಿದರೂ ವಿಫಲರಾದರು. ಈ ವಿಫಲತೆಯಿಂದ ಅವರು ಹಿಂದರಿಯುಲಿಲ್ಲ. ಉಪರಾಷ್ಟ್ರಪತಿಯ ಬದಲಿಗೆ ರಾಷ್ಟ್ರಪತಿ ಪದವಿಯನ್ನೇ ತಮ್ಮ ಗುರಿಯನ್ನಾಗಿಸಿ ಸಫಲರಾದರು.

ಶ್ರೀ ಕೆನೆಡಿಯವರು 'ಗತಿಶೀಲ' ವ್ಯಕ್ತಿತ್ವವುಳ್ಳವರು. ಇವರ ಕುರಿತಾಗಿ ಅಮೆರಿಕೆಯ ಒಂದು ಪತ್ರಿಕೆ ಬರೆಯುತ್ತ ಇವರು ಪರಸ್ಪರ ವಿರೋಧಿಗುಣಯುಕ್ತ ವ್ಯಕ್ತಿ ಬರಲಿರುವ ಗಂಭೀರ ಸಂಕಟಗಳ ಬಗ್ಗೆ ವಿವೇಚಿಸುತ್ತ ಅವನ್ನು ಎದುರಿಸುವ ವಿಶ್ವಾಸವನ್ನು ಪ್ರದರ್ಶಿಸುವವರು" ಎಂದು ಬರೆದಿದೆ.

ಶ್ರೀ ಕೆನೆಡಿ ಭಾರತದ ಸನ್ಮಿತ್ರರು. ಡೆನೊಕ್ರೆಟಿಕ್ ಪಕ್ಷದ ತಮ್ಮ ಚುನಾವಣಾ ಘೋಷಣೆಯಲ್ಲಿ "ನಾವು ಭಾರತ ಮತ್ತು ಪಾಕಿಸ್ಥಾನಗಳನ್ನು ಸ್ವತಂತ್ರ ವ್ಯಕ್ತಿಯ ಪರೀಕ್ಷಣ ರಂಗವೆಂದು ತಿಳಿಯುತ್ತೇವೆ. ಇಲ್ಲಿನ ವಿಷಮ ಪರಿಸ್ಥಿತಿಗಳಲ್ಲಿ ಅನರಕ್ಷತೆ, ದರಿದ್ರತೆ ಮತ್ತು ಅನಾರೋಗ್ಯ ದಂತಹ ಯುಗ ಪುರಾತನ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ನಡೆಯುತ್ತಿರುವುದೇ ಇದಕ್ಕೆ ಕಾರಣ ನಾವು ಪ್ರತಿಕ್ರಿಯಾತ್ಮಕ ವ್ಯಾವಹಾರಿಕ ವಿಧಾನಗಳಿಂದ ಇವುಗಳ ಪ್ರಯತ್ನಗಳಲ್ಲಿ ಸಹಕಾರ ನೀಡುವೆವು ಎಂದು ಹೇಳಿದೆ.

ಪೌರ್ವಾತ್ಯ ರಾಷ್ಟ್ರಗಳ ನಾಯಕತ್ವ ಕ್ಕಾಗಿಯೇ ಭಾರತ—ಚೀನಾಗಳ ನಡುವೆ ಘರ್ಷಣೆ ಯೆದ್ದಿತೆಂದು ಹೇಳುವವರಲ್ಲಿ ನಿಯೋಜಿತ ರಾಷ್ಟ್ರಪತಿ ಕೆನೆಡಿಯೊಬ್ಬರು. ಈ ಎರಡೂ ರಾಷ್ಟ್ರಗಳು ತಂತಮ್ಮ ಜೀವನ ಮಾರ್ಗವನ್ನು ಸರ್ವೋತ್ಕೃಷ್ಟವೆಂದು ಜಗಜ್ಜಾಹೀರುಮಾಡ ಹೊರಟಿವೆ; ಸಂಘರ್ಷ ಸ್ಪರ್ಧೆಯ ಪರಿಣಾಮವು ಅಮೆರಿಕೆಯ ಭದ್ರತೆ ಮತ್ತು ಪ್ರತಿಷ್ಠೆಯ ಮೇಲೆಯೂ ಪ್ರಭಾವ ಬೀರುವುದೆಂದು ಶ್ರೀ ಕೆನೆಡಿಯವರಿಗೆ ಖಂಡೋಣ.

ಶ್ರೀ ಕೆನೆಡಿ ಕೋಟ್ಯಧೀಶರ ಮಗ ಮಾತ್ರವಲ್ಲ, ನ್ಯೂಯೂರ್ಕಿನ ಕೋಟ್ಯಧೀಶರೊಬ್ಬರ ಅಳಿಯನೂ ಹೌದು. ಇವರ ಪತ್ನಿ ಜೆಕ್ಟೆಲಿನ್ ತನ್ನ ತಂದೆಯ ಸಂಪತ್ತಿಗೆಲ್ಲಾ ಉತ್ತರಾಧಿಕಾರಿಣಿ ಧನರಾಶಿಯ ನಡುವೆಯಿದ್ದರೂ ಕೆನೆಡಿ ದಂಪತಿಗಳು ತಮ್ಮ ಮೂರು ವರ್ಷದ ಪುತ್ರಿಯೊಡನೆ ಸಾಧಾರಣ ರೀತಿಯಲ್ಲೇ ವಾಸಿಸುತ್ತಾರೆ. ವಿದೇಶ ಸಂಬಂಧದಲ್ಲಿ ವಿಶೇಷಜ್ಞರಾದ ಕೆನೆಡಿಯವರು ತಮ್ಮ ವಿವಿಧ ಭಾಷಣಗಳನ್ನು ಸಂಗ್ರಹಿಸಿ, 'ಡಿಸ್ಟೆಟೆಜೀ ಆಫ್ ಫೀಸ್' ಎಂಬ ಹೆಸರಿನಿಂದ ಪ್ರಕಾಶ ಪಡಿಸಿದ್ದಾರೆ.

ವಿವೇಚನೆ

(ಗೆಯೇ ಪುಟದಿಂದ)

ತಃ ಕಾಲವನ್ನಾಗಿ, ಬೇಸಗೆಯ ಉರಿಯುವ ಮಧ್ಯಾಹ್ನವನ್ನು ಮನೋರಮ ಸಂಧ್ಯಾಕಾಲವನ್ನಾಗಿ ಮಾಪಡಿಸಬಲ್ಲುದು.

ದುಃಖವನ್ನೆಲ್ಲರೂ ಶತ್ರುವಿನಂತೆ ಕಾಣುತ್ತಾರೆ. ಆದರೆ, ಮಿತ್ರತೆಯು ಸಂದೇಶ ಮುಟ್ಟಿಸಲು ದುಃಖವೇ ಸಾಧನ, ದುಃಖವು ಕೇವಲ ದುಃಖವಲ್ಲ; ಅದೊಂದು ಉತ್ತಮ ಪಾಠ; ಈ ಪಾಠ ನಮಗೆ ಸುಖದ ಭವಿಷ್ಯವನ್ನು ತೋರಿಸುತ್ತದೆ.

ದುಃಖವು ಜಿಜ್ಞಾಸನದಿಪಿಕೆಯನ್ನು ತೋರಿಸಿ ಕೊಡುತ್ತದೆ. ಪ್ರಪಂಚದ ಅರಿವು ಹೆಚ್ಚಿರುವವನು ಅತ್ಯಧಿಕ ದುಃಖಿಯೂ ಆಗಿರುವನು.

ಸುಖವು ಮಾನವನ ಅಸ್ತಿತ್ವವನ್ನೇ ಮರೆಸಿ ಬಿಡುತ್ತದೆ. ಏಕೆಂದರೆ ಸುಖಿಯು ತಾನೆಲ್ಲಿರುವೆನೆಂಬುದನ್ನು ತಿಳಿದಿರುವುದಿಲ್ಲ. ದುಃಖವು ಪಾಠ ಹೇಳಿಕೊಡಲು ಬರುತ್ತದೆ; ಪಾಠವನ್ನು ಗಟ್ಟಿ ಮಾಡಿಕೊಂಡೊಡನೆಯೇ ಅದು ಕೊನೆಗೊಳ್ಳುತ್ತದೆ. ಇದು ಮಾನವನಿಗೆ ಆತನ ನಿಜ ದರ್ಶನವನ್ನು ಮಾಡಿಸುತ್ತದೆ.

ದುಃಖಿಯು ಸದಾ ಅಧಿಕ ಬುದ್ಧಿವಂತನಾಗಿರುತ್ತಾನೆ; ಸಹೃದಯನಾಗುತ್ತಾನೆ; ನಿರ್ಮಲ ಹೃದಯಿಯೂ ಆಗುತ್ತಾನೆ. ದುಃಖದಲ್ಲೇ ಜನಿಸಿದವನ ಸಂಚಾರಾಂಗವು. ಗಟ್ಟಿಯಾಗಿರುತ್ತದೆ; ಆತ ಪ್ರಪಂಚವನ್ನು ತಿಳಿಯಬಲ್ಲವನಾಗುತ್ತಾನೆ. ದುಃಖಾನುಭವವಿಲ್ಲದವನು ಅಶುದ್ಧ ಕಬ್ಬಿಣದಂತಿರುತ್ತಾನೆ.

ದುಃಖವು ಮಾನವನಿಗೆ ನವಜೀವನವನ್ನೀಯುತ್ತದೆ; ಮುಗ್ಧರಿಸಿದವನನ್ನು ಎಚ್ಚರಿಸುತ್ತದೆ; ನಿದ್ರಿಸಿದವನನ್ನು ಜಾಗ್ರತೆಗೊಳಿಸುತ್ತದೆ, ಕುರುಡನಿಗೆ ಕಣ್ಣು ತೋರುವಂತೆ ಸಗುತ್ತದೆ; ಕರ್ತವ್ಯ ಮಾಡುವತ್ತ ಪ್ರೇರೇಪಿಸುತ್ತದೆ; ಮುಕ್ತಿಗೆ ಮಾರ್ಗದರ್ಶನ ಮಾಡುತ್ತದೆ.

ದುಃಖವನ್ನು ಅನುಭವಿಸಿದವನು ಪರಮಾತ್ಮನ ನಿಕಟವಾದನೆಂದರ್ಥ. ದುಃಖವನ್ನು ದುಃಖವೆಂದು ರೋದಿಸುತ್ತಿರುವವನಿಗೆ ಪರಮಾತ್ಮನು ಬಹುದೂರದ ಕೈಗೆ ನಿಲುಕದ ವಸ್ತು.

ದುಃಖದಲ್ಲಿಯೇ ಸುಖ ಕಾಣುವುದರಿಂದ ಮಾತ್ರ ಮಾನವ ಜೀವನ ನಿರ್ವಹ್ಯವಾಗಿ ಸಾಗಬಲ್ಲುದು; ಸಫಲವಾಗಬಲ್ಲುದು.

5 ರೂ. ಮಾತ್ರ

- ನೀವಿನ್ನೂ ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆದಿಲ್ಲವೆ?
- ಹಾಗಾದರೆ ಇನ್ನು ತಡಮಾಡದೆ ತೆರೆದಿ.
- ಕೇವಲ ಐದು ರೂಪಾಯಿಗಳಿಂದ ನೀವು ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
- ನಿಮಗೆ ಸಾಧ್ಯವಿದ್ದಷ್ಟು ಸ್ವಲ್ಪ—25 ನಯೆಪೈಸೆಯಷ್ಟನ್ನು ಸಹಾ—ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
- ಸಿಂಡಿಕೇಟ್ ಬ್ಯಾಂಕಿನ ಚಿಕ್ಕ ಮತ್ತು ಪಾಸ್ ಪುಸ್ತಕಗಳೆರಡು ನಿಮ್ಮ ಗೌರವದ ಸೊತ್ತಾಗಿರುವುವು.
- ಮಾತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ ಸಿಗುವುದು.
- ಇಂದೇ ನಿಮಗೆ ಸಮೀಪವರ್ತಿಯಾದ ನಮ್ಮ ಶಾಖೆಯೊಂದನ್ನು ದಯವಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನ್ನು ಗಳಿಸಲು

ಸೇವಿಂಗ್ಸ್ ಬ್ಯಾಂಕ್

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 24-11-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೧೩ No. 13

ಬೆಲೆ 0=13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಸರಕಾರ-ಪಕ್ಷಗಳ ನಡುವೆ ತೀವ್ರ ವಿರಸ!

ಮೈಸೂರು ರಾಜ್ಯಕೀಯದ ಬಿರುಕು ಬೆನೆಯಲಾರದಷ್ಟು ಬಿಟ್ಟಿದೆ. ವ್ಯಾದೇಶಿಕ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಸರಕಾರಗಳ ಈ ಹೊಯ್ ಕೈಯಿಂದ ರಾಜ್ಯ ಪಕ್ಷ ಹಿತಕ್ಕೆ ಧಕ್ಕೆ ತಟ್ಟುವುದು ಖಂಡಿತ. ವರಿಷ್ಠರ ಮೂತನ್ನೂ ಮಿರುವ ಸಾಹಸವನ್ನು ಪ್ರದೇಶ ಕಾಂಗ್ರೆಸ್ ಮಾಡಿದೆ. ಈ ಪ್ರತ್ಯಕ್ಷಕ್ಕೆ ಸಂಗ್ರಾಮಕ್ಕೆ ಕೊನೆಯಿರುವುದಾದರೆ, ಎಲ್ಲಿ?

ಶ್ರೀ ರಾಶಿ.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಮೈಸೂರು ಕಾಂಗ್ರೆಸ್ಸಿನ ರಾಜ್ಯಕೀಯ ಪರಿಸ್ಥಿತಿಯನ್ನು ಕುದೀರ್ಘವಾಗಿ ವಿಮರ್ಶಿಸಿ, ಸದ್ಯ ಅಧಿಕಾರದಲ್ಲಿರುವ ಜತ್ತಿಯವರ ಮಂತ್ರಿಮಂಡಳಿಯನ್ನು ಉರುಳಿಸುವುದು ಅನಗತ್ಯ ಹಾಗೂ ಅನಪೇಕ್ಷಣೀಯವೆಂಬ ಅಭಿಪ್ರಾಯಕ್ಕೆ ಬಂದಿತ್ತೆಂದು ಊಹಿಸಲಾಗಿತ್ತು. ಇದರಿಂದಾಗಿ ಒಮ್ಮೆ ಎದ್ದ ಚಂಡವೂರುತವು ಶಾಂತವಾಗುತ್ತಿದೆಯೆಂದೂ ತಿಳಿಯಲಾಗುತಿತ್ತು. ಆದರೆ, ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಜತ್ತಿಯವರು ರಾಜೀನಾಮೆ ಕೊಡಬೇಕು; ಇಲ್ಲವೇ ವಿಧಾನ ಸಭೆಯು ಕಾಂಗ್ರೆಸ್ ಪಕ್ಷದ ವಿಶ್ವಾಸಮತ ಪಡೆಯಬೇಕೆಂದು ನಿರ್ಣಯ ಮಾಡಿದ್ದನ್ನು ಮತ್ತು ಈ ಗೊತ್ತುವಳಿಗೆ ಪರ್ಯಾಪ್ತ ಮತಗಳು ದೊರೆತುದನ್ನು ಕೇಳಿ ಮರಳಿ ಗೊಂದಲವೆದ್ದಂತಾಗಿದೆ. ಮೈಸೂರು ಕಾಂಗ್ರೆಸ್ಸಿನಲ್ಲಿರುವ ಒಳಗುಂಪುಗಳು ಮತ್ತಷ್ಟು ಬಲ ಪ್ರದರ್ಶನ ಮಾಡಿದುದರ ದ್ಯೋತಕವಿದೆಂದು ತಿಳಿಯುವಂತಾಗಿದೆ. ಪ್ರಶಾಸನಾಧಿಕಾರಿಗಳು ಮತ್ತು ಸಾಮಾಜಿಕ ಕಾರ್ಯಕರ್ತರ ನಡುವೆ ಈ ರೀತಿಯಲ್ಲಿ ಹೊಯ್ದಾಟ ಕಾಂಗ್ರೆಸ್‌ನಲ್ಲಿ ಇನ್ನೂ ಮುಂದುವರಿಯುತ್ತಿರುವುದು ರಾಜ್ಯದ ದುರ್ದೈವವೆನ್ನಬೇಕು.

ಮುಖ್ಯಮಂತ್ರಿ ಜತ್ತಿಯವರು ಪರಮಾರ್ಥರೀತಿಯಲ್ಲಿ ಆಡಳಿತೆ ನಿರ್ವಹಿಸಲು ಅಸಮರ್ಥರೆಂಬುದನ್ನೂ ಈ ಕಾರಣದಿಂದ ಧುರೀಣತ್ವದಲ್ಲಿ ಪರಿವರ್ತನೆಯಾಗಬೇಕೆಂದೂ ಬಯಸುವ 'ಭಿನ್ನಾಭಿಪ್ರಾಯಿ'ಗಳು ಹೊರಿಸಿದ ಎಲ್ಲ ಆರೋಪಗಳೂ ಕ್ಷುಲ್ಲಕ ಹಾಗೂ ಸಾಮಾನ್ಯ ರೀತಿಯಲ್ಲಿವೆಯೆಂದು ಪ್ರಧಾನಿ ನೆಹರುರವರೇ ಅಭಿಪ್ರಾಯಪಟ್ಟಿದ್ದರಲ್ಲದೇ ಪ್ರಬಲ ಹಾಗೂ ಗಂಭೀರ ಆರೋಪಗಳಿಲ್ಲದೆ ನಾಯಕತನದಲ್ಲಿ ಬದಲಾವಣೆ ಮಾಡಬಾರದೆಂದೂ ಅವರು ಹೇಳಿದ್ದರು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರಾದರೂ, 'ಮೈಸೂರಿನ ಕಾಂಗ್ರೆಸ್ ಬಿಕ್ಕಟ್ಟನ್ನು ಹುಟ್ಟಿಸಿದವರೇ ಪರಿಹರಿಸಬೇಕೆಂ'ದು ಮೊದಲಿಗೇ ಆಂದಿದ್ದರು. ಕಾಂಗ್ರೆಸ್ ವರಿಷ್ಠರ ದೃಷ್ಟಿಯಲ್ಲಿ ಶ್ರೀ ಜತ್ತಿಯವರ ಮೇಲೆ ಯಾವುದೇ ವಿಶೇಷ ತರದ ಆರೋಪವಿಲ್ಲ

ಆದರೆ, ಭಿನ್ನಾಭಿಪ್ರಾಯಗಳು ಅದೇನೋ ಹೆಬ್ಬೊಂದನ್ನು ಇಟ್ಟುಕೊಂಡಂತಿದೆ. ಕುತ್ತಿಗೆಗೆ ಕೈ ಹಾತಿಯಾದರೂ ಜತ್ತಿಯವರನ್ನು ಹೊರ ದೂಡಬೇಬೇಕೆಂಬ ಭೀಷ್ಮ ಪ್ರತಿಜ್ಞೆಯನ್ನು ತೊಟ್ಟಂತೆ ತೋರುತ್ತಿದೆ. ಇದಕ್ಕಾಗಿ, ತಮ್ಮ ಉದ್ದೇಶ ಸಾಧನೆಗಾಗಿ ಇವರು ಭಗೀರಥ ಪ್ರಯತ್ನವನ್ನು ಮಾಡುತಿದ್ದಾರೆ. ಸದ್ಯ ಇವರ ಪ್ರಭಾವದಿಂದಲೇ ಪ್ರಾದೇಶಿಕ ಕಾಂಗ್ರೆಸ್ ವಿಚಿತ್ರ ತರದ ಗೊತ್ತುವಳಿಯೊಂದನ್ನು ಅಂಗೀಕರಿಸಿದೆ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಸ್ವಯಂ ಭಿನ್ನಾಭಿಪ್ರಾಯಗಳ ಪರೋಕ್ಷ ನಾಯಕತನವನ್ನು ವಹಿಸಿ ಬೆಂಗಳೂರಿಂದ ದಿಲ್ಲಿಗೆ ಹಾರಿ ಮರಳಿ ಪಂಡಿತ ನೆಹರುಗಳನ್ನು ಕಂಡು ಈ ಗೊತ್ತುವಳಿಯನ್ನರ್ಪಿಸಿದರೆಂದೂ ಶ್ರೀ ನೆಹರು ಇದಕ್ಕೆ ಅಸಮ್ಮತಿ ನ್ಯಕ್ಷಪಡಿಸಿದರೆಂದೂ ತಿಳಿಯತ್ತದೆ. ಈ ಬಗ್ಗೆ ಪುನಃ ವಿಚಾರಮಾಡಲು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯನ್ನು ಕರೆಯಲಾಗುವುದೆಂದೂ ಗೊತ್ತಾಗಿದೆ.

ಈ ನಡುವೆ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಶ್ರೀ ಬಿ. ಎಸ್. ಶಿವಪ್ರಸಾದರು ಒಂದು ಹೇಳಿಕೆ ಹೊರಡಿಸಿ ಸಮಿತಿಯು ಸ್ವೀಕರಿಸಿದ ಗೊತ್ತುವಳಿಯು ಅಕ್ರಮವಾದುದೆಂದಿದ್ದಾರೆ. ಅಧಿಕಾರ ವ್ಯಾಮೋಹವೇ ಈತರದ ವರ್ತನೆಗೆ ಪ್ರಬಲ ಕಾರಣನೆಂಬುದನ್ನು ವರು ಪ್ರತಿಪಾದಿಸಿದ್ದಾರೆ. ಮಂತ್ರಿಮಂಡಳಿಯ ವಿಸ್ತರಣೆಗೆ ಜತ್ತಿಯವರು ಸಿದ್ಧರಿದ್ದರೂ ವಿರೋಧಿಗಳು ಇದಕ್ಕೆ ಒಡಂಬಡದಿರುವುದಕ್ಕೆ ಈ ಮೋಹವೇ ಕಾರಣವೆಂದು ಸಾರಿದ್ದಾರೆ ಶ್ರೀ ಶಿವಪ್ರಸಾದರ ಹೇಳಿಕೆಗೆ ಇನ್ನು ಕೆಲವರ ಬೆಂಬಲವೂ ಇದೆಯೆಂದು ತಿಳಿಯುತ್ತದೆ. ಹೀಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಕಾಂಗ್ರೆಸ್ ಶಾಸಕರಲ್ಲನೆ ಬಿರುಕು ಪರಮಾವಧಿಗೇರಿದೆ. ಈ ಬಿರುಕು ಸುಲಭದಲ್ಲಿ ಬೆನೆದು ಹೋಗುವುದು ಅಸಾಧ್ಯವೆಂಬುದೂ ಈಗ ಬಹಿರಂಗವಾಗಿದೆ.

ಪ್ರಧಾನಿ ನೆಹರು ನಾಯಕತ್ವವನ್ನು ಬದಲಾಯಿಸುವುದರಿಂದ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮೇಲೆ ಪ್ರಬಲ ಪ್ರಭಾವ ಬೀಳುವುದೆಂದು ಕೇಳಿದರೆ, ಭಿನ್ನಾಭಿಪ್ರಾಯಿಗಳು ಈ ನಾಯಕತ್ವವಿರುವುದರಿಂದಲೇ ದುಷ್ಪರಿಣಾಮ ಕಾದಿದೆ ಎಂದು ಘೋಷಿಸುತ್ತಾರೆ. ಕಾಂಗ್ರೆಸ್ ವರಿಷ್ಠರು ಹಾಗೂ ಪ್ರಾದೇಶಿಕ ಸಮಿತಿಗಳ ನಡುವಿರುವ ಭೇದಭಾವನೆ ಇಲ್ಲಿಯೇ ಇದೆ. ಈ ಭೇದ ತೊಲಗುವುದೂ ಸಾಧ್ಯವಿದೆಯೆನಿಸುವುದಿಲ್ಲ. ಶ್ರೀ ನಿಜಲಿಂಗಪ್ಪನವರೂ ಈ ಬಗ್ಗೆ ಈಗ ಪ್ರತ್ಯಕ್ಷ ರೂಪದಲ್ಲಿಯೇ ಪಟ್ಟುಹಿಡಿಯಲು ತೊಡಗಿದ್ದು ಆಶ್ಚರ್ಯದಲ್ಲಿ ಆಶ್ಚರ್ಯವಾಗಿ ಪರಿಣಮಿಸಿದೆ. ಸದ್ಯ ಭಿನ್ನಾಭಿಪ್ರಾಯಿಗಳ ನಾಯಕತನವನ್ನು ವಹಿಸಿದ ಶ್ರೀಗಳಾದ ಕೆಂಗಲ್ ಹನುಮಂತಯ್ಯನವರೂ ನಿಜಲಿಂಗಪ್ಪನವರೂ ಮುಖ್ಯ ಮಂತ್ರಿ ಪದವಿಯ ರುಚಿನೋಡಿ ಬಿಟ್ಟವರು. ಇವರಿಬ್ಬರೂ ಕೆಲವೊಂದು ನಿರ್ದಿಷ್ಟ ಆರೋಪಗಳಿಂದಾಗಿ ಪತನಗೊಂಡವರು. ಅವೇ ಆರೋಪಗಳು ಶ್ರೀ ಜತ್ತಿಯವರ ಮೇಲಿರುವುದರಿಂದ ಇವರೂ ಕೆಳಗಿಳಿಯಬೇಕೆಂಬ ವಾದ ಇವರದು. ಕಾಂಗ್ರೆಸ್ ವರಿಷ್ಠರು ತಮ್ಮ ನೂತಿಗೆ ಎಂತಾದರೂ ಒಪ್ಪಬೇಕು; ಅವರ ಒಪ್ಪಿಗೆಯನ್ನು ಪಡೆಯಲು ಏನಾದರೂ ಮಾಡಬೇಕು ಎಂಬುದೇ ಇವರ ಕಾರ್ಯಕ್ರಮಗಳ ಉದ್ದೇಶವಿರುವಂತೆ ತೋರುತ್ತದೆ. ಇವರಿಬ್ಬರನ್ನೂ ಪದವಿಯಿಂದಿಳಿಸುವಾಗ ವರಿಷ್ಠರು ತಪ್ಪು ಮಾಡಿರಬಹು

(೧೩ನೇ ಪುಟ ನೋಡಿರಿ)

ಅಮೆರಿಕೆಯಲ್ಲಿ ಅಂಧ ಶಿಕ್ಷಣ.

೧. ಅಮೆರಿಕೆಯಲ್ಲಿ ಅಂಧರಿಗೆ ವಿಶೇಷ ಶಿಕ್ಷಣ ಸೌಕರ್ಯವಿದೆ; ಎಳೆಯವರು ಇತರರಂತೆ ಶಾಲೆಗಳಲ್ಲಿಯೇ ವಿದ್ಯಾಭ್ಯಾಸ ಪಡೆಯುವ ವ್ಯವಸ್ಥೆಯಿದೆ. ಪ್ರಾಯಸ್ಥರಿಗೆ ಸ್ವಾವಲಂಬಿ ಜೀವನ ನಡೆಸಲು ತಕ್ಕ ಶಿಕ್ಷಣ ಕೊಡಲಾಗುತ್ತಿದೆ. ಜೆಚ್ಚಿನ ಅಂಧರಿಗೆ ಟ್ರೈಲ್ಲೆ ಪ್ರಣಾಳಿಯಂತೆ ಶಿಕ್ಷಣ ಪಡೆಯುವ ಅವಕಾಶವಿದೆ. ೨. 'ದೃಷ್ಟಿ ಶ್ವಾನ'ಗಳ ಸಹಾಯದಿಂದ ಕುರುಡರು ಬೀದಿಗಳಲ್ಲಿ ಸಂಚರಿಸಬಲ್ಲರು. ಇದಕ್ಕಾಗಿ ಹಣ ತೆರಲು ಅಸಮರ್ಥರಿರುವವರಿಗೆ ಧನಸಹಾಯವಾಗಿ ಒದಗಿಸಲಾಗುವುದು. ಇತರರಿಗಾದರೂ ನ್ಯಾಯಬೆಲೆಯಲ್ಲಿ ದೊರೆಯುವುದು. ೩. ಅಮೆರಿಕನ್ ಕಾಂಗ್ರೆಸ್ ಲೈಬ್ರೆರಿಯು 'ವಾಚಾಲ ಪುಸ್ತಕ'ಗಳೆಂಬ ಮೊನೊಗ್ರಾಫ್ ರೆಕೋರ್ಡ್‌ಗಳನ್ನೂ ಎರವಲಾಗಿ ಕುರುಡರಿಗೆ ಕೊಡುವ ವ್ಯವಸ್ಥೆ ಮಾಡಿದೆ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೦.

ಗೌರವ ಸಂಪಾದಕರು:
ಎಸ್. ಗೋವಿಂದ ರಾವ್, ಬಿ.ಎ.
ಬಿ. ಶಾಮರಾಯ ಶೆಟ ್ಟಿ, ಬಿ. ಎ., ಎಲ್. ಟಿ.

ಸಂಪಾದಕೀಯ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ಸಾಮಾನ್ಯ (ಕಂಬ್ಯಾಕ್ಟ್)
ಕಲಂ ಇಂಚಿಗೆ ರೂ. 2-00
ಆಸಾಮಾನ್ಯ (ಕಲಾತ್ಮಕ)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ರೂ. 0-13

ಚಂದಾಪಾವತಿಗಳನ್ನಾಗಲೀ ಜಾಹೀರಾತಿನ ಪೊಬಲಗಳನ್ನಾಗಲೀ ಒಂದಿ ಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಕುಸುಮ ಶರನ ಆಕರ್ಷಕ ಜಾಲ!

ಸ್ವಾಭಾವಿಕ ಅರಸಿಕನೊಬ್ಬ ತನ್ನ ನಿಯಮಿತ ಕಾರ್ಯಕ್ರಮಗಳನ್ನು ಮೀರಿ ನಡೆಯುತ್ತಿರಲಿಲ್ಲ. ಆದರೆ, ಒಬ್ಬಾಕೆ ಗಂಟು ಮೂಗಿನ ಹೆಂಗಸು ಆತನನ್ನು ತನ್ನತ್ತ ಆಕರ್ಷಿಸಿಯೇ ಬಿಟ್ಟಳು. ಪಾಷಾಣ ಕಠೋರ ಹೃದಯವನ್ನೂ ಕುಸುಮ ಕೋಮಲಗೊಳಿಸುವ ಕುಸುಮ ಶರವ ಶರ ಜಾಲ ಯಾರ ಮೇಲೆ ಪ್ರಭಾವ ಜೆಸ್ಸಿದು?

(ಒಂದು ಬಲ್ಗೇರಿಯನ್ ಕಥೆ)

ಈಗ ನಾನು ಹೇಳಲಿರುವ ಕತೆಯು ವಿ. ಎಂಬ ಪಣ್ಣ ಆರೋಗ್ಯ ಧಾಮದಲ್ಲಿ ಸಂಭವಿಸಿತು. ಕಾಯದೆಯ ಪದವಿಂಜದಲ್ಲಿ ಹೇಳಲಾಗಿರುವಂತೆ, ಒಳ್ಳೆಯ 'ಗಂಡನಿ'ಗೊಪ್ಪುವ ಜಾಗರೂಕತೆಯಿಂದ ನಾನೀಕತೆಯನ್ನು ಹೇಳುತ್ತಿದ್ದೇನೆ. ಅವರ ಸತ್ಯತೆಯ ಬಗ್ಗೆ ಏನಾದರೂ ಸಂದೇಹವುಂಟಾದರೆ, ಅದು ಓದುಗರ ಮೇಲೆಯೇ ವಾರಲಿ ಬೀಳುವುದು.

ಕಳೆದ ವರ್ಷ ಜೂನ್ ದಿನಾಂಕ ೫ ರಂದು ನಾನು ನ್ಯತ್ತಿ ಸಂಘದ ವಿಶ್ರಾಂತಿ ಗೃಹಕ್ಕೆ ಬಂದಾಗ ನನ್ನ ಈ ಕತೆ ಪ್ರಾರಂಭವಾಯಿತು. ರೂಢಿಯ ಎಲ್ಲ ಶಿಷ್ಟಾಚಾರದ ಕಾರ್ಯಕ್ರಮಗಳೂ ಮುಗಿದ ತರುವಾಯ, ನನಗೆ ಕನೆಯ ನಂಬರಿನ ಕೋಣೆಯನ್ನು ಗೊತ್ತು ಪಡಿಸಲಾಯಿತು. ನನಗೆ ಯಾವ ಮೂಢ ನಂಬಿಕೆಗಳೂ ಇಲ್ಲ. ಆದುದರಿಂದಲೇ ನಾನು ನಿರ್ಭೀತನಾಗಿ ಆ ಕೋಣೆಯನ್ನು ಪ್ರವೇಶಿಸಿದೆನು.

ಇಲ್ಲಿ ಮೊದಲು ನನ್ನ ದೃಷ್ಟಿಗೆ ಬಂದ ವಿಷಯ, ಇನ್ನೊಬ್ಬಾತನ ಅಸ್ತಿತ್ವ. ಆತನಿಗೆ ಮೂವತ್ತೊ, ನಲವತ್ತೋ ಇಲ್ಲವೆ ಐವತ್ತೋ ವರ್ಷ ವಯಸ್ಸಾಗಿರಬಹುದು. ಆತನು ಒಂದೇ ಮನಸ್ಸಿನಿಂದ, ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಪರೀಕ್ಷಿಸುತ್ತ ನಿಂತಿದ್ದನು ನಾನು ಒಳಹೊಕ್ಕು, ಸ್ವಲ್ಪ ಜೋರಾಗಿಯೇ ನನ್ನ ಪೆಟ್ಟಿಗೆಯನ್ನು ಕೆಳಗಿಟ್ಟನು. ಆ ಶಬ್ದವೇನೆಂದು ನೋಡುವುದಕ್ಕೆ, ಆತ ಮಾತ್ರ ಹಿಂದಿರುಗಲಿಲ್ಲ. ನನ್ನ ಮನಸ್ಸಿಗೇ ವಿಪರೀತ ಕಿರಿಕಿರಿಯಾಗಿ —ನಾನು ನಾನೂನು ಒಪ್ಪ ನೂಡಿಕೊಳ್ಳುತ್ತಿದ್ದಾಗ ಪೆಟ್ಟಿಗೆಯನ್ನೆಡವಿ ಬಿದ್ದು, ನನ್ನ ಕನ್ನಡಕವನ್ನು ಒಡೆದು ಕೊಂಡುದರಿಂದ ಕಿರಿಕಿರಿಯಾಗಿ,—ಅವಸ್ಥೆಪಟ್ಟಾಗಲೂ ಆತನು ಹಿಂದಕ್ಕೆ ತಿರುಗಿ ನೋಡಲಿಲ್ಲ! ಆತನು ತನ್ನಲ್ಲಿ ತಾನೇ ಏನೊಂದು ಮಗ್ನನಾಗಿದ್ದನು.

ಆ ಮೂರನೆಯ ದಿನವೂ ನಾನು ನನ್ನ ಸವಿೂಕ್ಷೆಗಳನ್ನು ಮುಂದುವರಿಸಿದೆನು.

ಆತನು 'ರಾಬಿನ್‌ಸನ್ ಕ್ರೂಸೋ' ವಂಶಜನಂತೆ ಕಂಡು ಬರುತ್ತಿದ್ದನು. ಬೇರೊಬ್ಬರ ವಿಷಯದಲ್ಲಿ ಸ್ವಲ್ಪವಾದರೂ ಆಸಕ್ತಿ ವಹಿಸದಂತಹ ಸ್ವಭಾವ ಆತನದು. ಭೋಜನ ಶಾಲೆಯಲ್ಲಿ ಆತನು ಪ್ರತಿಸಾರಿಯೂ ಒಂಟೇ ಮೇಜಿನ ಬಳಿ, ಕೋಣೆಯ ತುದಿಯಲ್ಲಿ ತನ್ನ ಪಾಡಿಗೆ ತಾನು ಕುಳಿತು ಕೊಳ್ಳುತ್ತಿದ್ದನು. ಕೋಣೆಯಲ್ಲಿದ್ದಾಗಲೂ ಆಸ್ಟೇ ಕಿಟಿಕಿಯ ಬಳಿ ನಿಂತು ಎಲ್ಲಿಯೋ ಶೂನ್ಯದತ್ತ ನೋಡುತ್ತಿದ್ದನು. ದಿಗಂತದಲ್ಲಿ ಕಾಣದ ಹಾಯಿಗಾಗಿ ಕಾಯುತ್ತಿದ್ದಂತಿತ್ತು ಆತನ ನಡೆವಳಿಕೆಯು ವಿಚಿತ್ರವಾಗಿ, ಒಂದೇ ರೀತಿಯದಾಗಿತ್ತು. ತಾನು ಧರಿಸಲಿರುವ ಪ್ರತಿಯೊಂದು ಉಡುಪನ್ನೂ ಜಾಗರೂಕತೆಯಿಂದ ಮಡಿಕೆ ಬಿಚ್ಚಿ ನೋಡುವುದೂ, ಬಿಚ್ಚಿದುದನ್ನು ಆಷ್ಟೇ ಎಚ್ಚರಿಕೆಯಿಂದ ಒಪ್ಪವಾಗಿ ಮಡಿಸಿಡುವುದೂ ಆತನ ಪದ್ಧತಿಯಾಗಿತ್ತು. ಆತನು ತನ್ನ ನ್ನಾನಕ್ಕಂತೂ, ಆಷ್ಟೇ ಮಿತಿವಿಂರಿದ ಎಚ್ಚರಿಕೆ ವಹಿಸುತ್ತಿದ್ದನು.

ಪ್ರತಿದಿನವೂ ಏಕಪ್ರಕಾರವಾದ ನಡೆವಳಿಕೆ ಆತನದು. ರಾತ್ರೆ ಸರಿಯಾಗಿ ೯—೧೫ರ ಹೊತ್ತಿಗೆ, ಆತನು ಮಲಗಿ ಬಿಡುತ್ತಿದ್ದನು. ಆತನ ಈ ಕಾಲನಿಯಮವನ್ನು ಬದಲಾಯಿಸಲು ಯಾವ ನಾಮಾಂಕಿತ ಪ್ರಯತ್ನವೂ ಸಫಲತೆ ಸಡೆಯಲಾರದಾಯಿತು. ಒಮ್ಮೆಯಾದರೂ ಪ್ರಮಾದವಾಗಲಿಲ್ಲ. ಒಂದು ದಿನ ಒಂದು ಪಣ್ಣ ಭೂಕಂಪವಾಯಿತು. ಅಂದು ಕೂಡ ಆತನು ಆಗ ೯—೦೦ ರಾತ್ರಿಯ ಹೊತ್ತಿನಲ್ಲಿ ತನ್ನ ಸ್ನಾನವನ್ನು ನಿಶ್ಚಿಂತೆಯಿಂದ ಮೂಡಿ ಮುಗಿಸುವ ಹವ್ಯಾಸದಲ್ಲೇ ತೊಡಗಿದ್ದನು.

ನಿಜ ಹೇಳುವುದಾದರೆ, ಆತನು ನನು ನಕ್ಕುದನ್ನು ನಾನೆಂದೂ ನೋಡಲಿಲ್ಲ—ಒಮ್ಮೆಯಾದರೂ ಆತನೆಂದೂ ನನ್ನ ಕಡೆ ನೋಡಲಿಲ್ಲ. ತನ್ನ ಮನಸ್ಸಿನ ಉದ್ವೇಗವನ್ನು ಅಲ್ಪಾಂಶದಷ್ಟಾದರೂ ಎಂಮೊ ಪ್ರದರ್ಶಿಸಲಿಲ್ಲ. ಶಾಂತನಾಗಿ, ಸಮೂಧಾನ ಚಿತ್ತನಾಗಿ ಇರುತ್ತಿದ್ದನು. ಆತನ ಜೀವನವ ರೀತಿಯು ಅತ್ಯಸ್ಪ ನಡಿಗೆಯ ಮೇಲೆಯೂ ಪ್ರಭಾವನನ್ನು ಮೂಡಿಸಿತ್ತು. ಆತನು ನಿಧಾನವಾಗಿ, ಒಂದೇ ಅಳತೆಯ ಅಂತರದ ಹೆಜ್ಜೆಗಳನ್ನು ಹಾಕುತ್ತಿದ್ದನು. ಗಡಿಯಾರದ ಲೋಲಕ ದಂತೆ ಆತನ ಚಲನಗತಿಯೂ ಏಕಪ್ರಕಾರವಾಗಿರುತ್ತಿತ್ತು.

ಆತನೊಂದಿಗೆ ಕೆಲವು ದಿನ ಇದ್ದ ತರುವಾಯ—ಗಡಿಯಾರದ ಕಡೆ ನೋಡಿ, ಆತನು ಎಲ್ಲಿ, ಏನು ಕೆಲಸ ಮಾಡುತ್ತಿದ್ದಾನೆಂದು ನಾನು ಯಾರಿಗಾದರೂ ಯಾವಾಗಲಾದರೂ ಕರಾರುವಾಕ್ಕಾಗಿ ತಪ್ಪಿಲ್ಲದೆ ಹೇಳಬಹುದು ನನಗೆ ಸಾಧ್ಯವಾಯಿತು.

ಹತ್ತು ದಿನ ಹೀಗೆಯೇ ಕಳೆದ ಮೇಲೆ ಇಂತಹ ಅರಸಿಕ ವ್ಯಕ್ತಿಯ ಸಂಗಡ ಇರಬೇಕಾದ ಸನ್ನಿವೇಶ ಬಂದಿತಲ್ಲಾ ಎಂದು ನನಗೆ ನಿಜವಾಗಿಯೂ ಬೇಡವಾಯಿತು. ನನ್ನ ಸಿಟ್ಟನ್ನು ಸಮೂಧಾನ ಮಾಡಿಕೊಳ್ಳಲು, ನಾನು ಆ ಕೋಣೆಯನ್ನು ಪ್ರವೇಶಿಸುವುದಕ್ಕೆ ಮೊದಲೇ ಒಂದಾದ ಮೇಲೊಂದರಂತೆ ಐಶ್ವರ್ಯದ ಸಿಗರೇಟುಗಳನ್ನು ಸೇದುತ್ತಿದ್ದೆನು! ಗಂಟೆ—ಮೂಟೆ ಕಟ್ಟಿಕೊಂಡು ಬೇರೆ ಇನ್ನಾವುದಾದರೂ ಸ್ವಾಸ್ಥ್ಯ ಕೇಂದ್ರಕ್ಕೆ ಹೋಗಬೇಕೆಂಬ ಕಲ್ಪನೆಯು ಕೂಡ ನನ್ನ ಮನಸ್ಸಿನಲ್ಲಿ ಸುಳಿದು ಹೋಯಿತು. ಪ್ರಾಯಶಃ ಅದು ಸಂಭವಿಸುತ್ತಲೂ ಇತ್ತು. ಆದರೆ.....

ಒಂದು ದಿನ, ರಜಾ ಕಳೆಯಲು ಬಂದ ಒಂದು ಹೊಸ ತಂಡದೊಂದಿಗೆ ಗಂಟು ಮೂಗಿನ, ಹೊಳೆವ ಕಣ್ಣುಗಳ ಮಹಿಳೆಯೊಬ್ಬಾಕೆಯು ಬಂದಳು. ಆಕೆ ತನ್ನ ಕುರುಬಿಗೊಂದು ಬಣ್ಣದ ಬಟ್ಟೆ ಪಟ್ಟಿಯನ್ನು ಕಟ್ಟಿಕೊಂಡಿದ್ದಳು. ಸಹಜ ಸೌಂದರ್ಯವುಳ್ಳ ಸ್ತ್ರೀಯರಂತೆ, ಆಕೆಯೂ ಯಾವ ಬಗೆಯ ಅಲಂಕಾರಗಳನ್ನೂ, ಆಭರಣಗಳನ್ನೂ ಬಳಸುತ್ತಿರಲಿಲ್ಲ.

ಅಂದು ಆಕೆಯು ಊಟಕ್ಕೆ ಬಂದಾಗ ಎಲ್ಲ ಸೀಟುಗಳೂ ಭರ್ತಿಯಾಗಿದ್ದುವು. ನನ್ನ ಕೋಷ್ಟ-ಸಂಗಾತಿ ಕುಳಿತಿದ್ದ ಮೇಜಿನ ಬಳಿ ಮಾತ್ರ ಸ್ಥಳ ಖಾಲಿ ಇತ್ತು. ಮಹಿಳೆಯು ಆತನ ಒಳಗೆ ಹೋಗಿ ಕುಳಿತುಕೊಳ್ಳಲು ಅನುಮತಿ ಕೋರಿದಳು. ಆತನು ಸಮ್ಮತಿಯನ್ನು ಸೂಚಿಸುತ್ತ ತಲೆದೂಗಿಸಿದನು.

ವಿಚಿತ್ರವೇನೆಂದರೆ, ಅತ್ಯವಿಲ್ಲದ ಆಟದ ಗೊಂಬೆಯಂತೆ ಇದ್ದ ವ್ಯಕ್ತಿಯು ಈಗ ಸಜೀವನನಾಗಿ, ಆಕೆಯ ಪ್ರಶ್ನೆಗಳಿಗೆ ಉತ್ತರ ಕೊಡತೊಡಗಿದನು! ಒಮ್ಮೆ

(೧೧ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ
ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ರೂ. **87-00** **3** ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. **100-00** ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.
ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ
ನಮ್ಮ ತುಮಕೂರು ಶಾಖೆ
ತಾ. 14—11—1960ಕ್ಕೆ ತೆರೆಯಲ್ಪಟ್ಟಿರುವುದು.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಅಭಿಪ್ರಾಯ

ನಿಷ್ಕಾಮ ಪ್ರೇಮ ಪ್ರವಾಹ--ರಾಮಾಯಣ

ಆದಿಕಾವ್ಯ ರಾಮಾಯಣದಲ್ಲಿ ಉದ್ಘೋಷಿಸಿದ ಅಮರ ತತ್ವ ನಿಷ್ಕಾಮ ಪ್ರೇಮ. ಇದರಲ್ಲಿ ಬರುವ ಎಲ್ಲ ಪಾತ್ರಗಳಲ್ಲೂ ನಿಷ್ಕಾಮ ಪ್ರೇಮದ ಛಾಯೆ ಪರಿಪೂರ್ಣವಾಗಿ ತೆಎದ್ದು ಕಾಣುತ್ತದೆ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ರಾಮಾಯಣವೆಂದರೆ ನಿಷ್ಕಾಮ ಪ್ರೇಮ ಭಂಡಾರವು. ಗೀತೆಯು ನಿಷ್ಕಾಮ ಕರ್ಮವನ್ನು ಬೋಧಿಸುತ್ತದೆ. ರಾಮಾಯಣವು ನಿಷ್ಕಾಮ ಪ್ರೀತಿಯನ್ನು ಪ್ರಕಾಶಿಸುತ್ತಿದೆ. ರಾಮಾಯಣದಲ್ಲಿ ಸುಸ್ಥಿರವಾದ ನಿಷ್ಕಾಮ ಪ್ರೀತಿಯ ಬುಗ್ಗೆಗಳಿಂದ ಗೀತೆಯಲ್ಲಿ ಬೆಳಗಿದ ನಿಷ್ಕಾಮ ಕರ್ಮವು ಒಸರುತ್ತಿದೆ—ಈ ಎರಡಕ್ಕೂ ಆಧಾರ ಭೂತವಾದ ಶಂಕುಸ್ಥಾಪನೆಯನ್ನು ಒಂದೇ ಒಂದು ವಾಕ್ಯದಲ್ಲಿ ನಿವರಿಸಬಹುದು. ಆ ವಾಕ್ಯವು ಇದೇ:—

"ನಾನು ಹೋಗಬೇಕು, ನೀನು ಬರಬೇಕು." 'ನಾನು' ಎಂದರೆ ಆಹಂಕಾರ. 'ನೀನು' ಎಂದರೆ ಪರಮಾತ್ಮ. ನಾನು ಹೋಗದೆ ನೀನು ಬಾರನು ನೀನು ಬಾರದೇ ನಾನು ಹೋಗೆನು. ಇದಕ್ಕೆ ಉತ್ತರವು ನಿಷ್ಕಾಮ ಪ್ರೀತಿ ಮತ್ತು ಅದರ ಶಕ್ತಿಯಿಂದ ನಿಷ್ಕಾಮ ಕರ್ಮ—ರಾಮಾಯಣದಲ್ಲಿ ನಿಷ್ಕಾಮ ಪ್ರೇಮದ ಪ್ರಕಾಶ ವಿದೆ.

ದಶರಥನು ಶಂಬರನ ಎದುರಾಗಿ ಯುದ್ಧ ಮಾಡಿದ ಕಾಲದಲ್ಲಿ ಆತನ ದೇಹವಿಡಿಗಾಯಗಳಿಂದ ಜರ್ಜರಿತವಾಗಿ ಆತನು ಮೃತ್ಯು ಮುಖವನ್ನು ನೋಡುತ್ತಿದ್ದನು. ಆಗ ಅವನ ಅಂಗ ರಕ್ಷಕಳಾಗಿ ಅವನ ಬಳಿಯೇ ಇದ್ದ ಕೈಕೆಯು ತನ್ನ ಪ್ರಾಣ ದಾತೆಯನ್ನು ಬಿಟ್ಟು ಪತಿಯ ಶುಶ್ರೂಷೆಯನ್ನು ಮಾಡಿದಳು. ದಶರಥನು ಬದುಕಿದನು. ಪತಿಯ ತ್ಯಾಗಕ್ಕೆ ಮನವೊಲಿದು ತಾನಾಗಿಯೇ ಪ್ರೀತಿಯಿಂದ ಎರಡು ವರಗಳನ್ನು ಕೊಟ್ಟನು. 'ವರಗಳ ಆಶೆಯಿಂದ ನಾನು ನಿನ್ನ ಸೇವೆಮಾಡಲಿಲ್ಲ. ನನಗೆ ವರಗಳು ಅವಶ್ಯವಿಲ್ಲ'ವೆಂದಳು. ಅವನು ವರಗಳನ್ನು ಕೊಟ್ಟೇ ಬಿಟ್ಟನು. ಆ ಪ್ರೀತಿಯ ಪರಿಶೋಧನೆಯೆ ದಶರಥನ ಮುಂದಿನ ಕರ್ಮವಾಗಿ ಫಲಿಸಿತು. ಸತ್ಯಕ್ಕೆ ಭಂಗ ಬಾರದಂತೆ ಕರ್ಮಯುತನಾಗಿ ಕೈಕೆಯು ಮಂಥರೆಯು ಮಾಟಕ್ಕೊಳಗಾದಾಗ, ದಶರಥನು ಕೈಕೆಯು ಆಗ ಕೇಳಿದ ವರಗಳನ್ನು ಕೊಟ್ಟೇ ಬಿಟ್ಟನು. ಕೈತಪ್ಪುತೆಯನ್ನೆ ತನ್ನ ಧರ್ಮವೆಂದು ತಿಳಿದನು. ರಾಮನಲ್ಲಿರುವ ಅಗಾಧವಾದ ಪ್ರೀತಿಯ ಪ್ರಕಾಶವು ಆತನ ದೇಹವನ್ನು ನಹಿಷ ತೊಡಗಿತು. ಪುತ್ರ ಶೋಕದಿಂದ ದೈವಾಧೀನನಾದನು. ಸತ್ಯವನ್ನು ಬಿಡಲಿಲ್ಲ. ಪುತ್ರ ಪ್ರೇಮವನ್ನೂ ಅಡಗಿಸಲಿಲ್ಲ—ತ್ಯಾಗ ಬುದ್ಧಿಯಿಂದ ಪ್ರಾಣವನ್ನೇ ತ್ಯಜಿಸಿದನು.

ಅಣ್ಣನಿಂದಲೂ ಮಿಗಿಲಾದವನು ಜಗತ್ತಿನಲ್ಲಿ ಯಾರೂ ಇಲ್ಲವೆಂಬ ನಿಷ್ಕಾಮ ಪ್ರೇಮ ಮೂರ್ತಿಯು ಲಕ್ಷ್ಮಣನು. ಆವನು ಆ ಕುಟುಂಬದ ಭಾಗ್ಯ ದೇವತೆಯು. ರಾಮನ ಬೆಂಬಲಿಗನಾಗಿ ತಾನೂ ತನ್ನ ಇಚ್ಛೆಯಿಂದಲೇ ಹದಿನಾಲ್ಕು ವರ್ಷಗಳ ವರೆಗೆ ಅರಣ್ಯ ವಾಸವನ್ನು ಅನುಭವಿಸಿ ಅಣ್ಣನ ಯಾವತ್ತು ವಿಪತ್ತುಗಳಲ್ಲೂ ಭಾಗಿಯಾದನು. 'ಗಂಡನ ನೆರಳಿನಂತೆ ಬಾಳಿದ ಜಾನಕಿಯು ಪತಿಯ ಕಷ್ಟಗಳಲ್ಲಿ ಸಂಪೂರ್ಣ ಭಾಗಿಯಾಗಿ, ಮುನಿ ಪತ್ನಿಯ ಉಡುಪನ್ನು ತೊಟ್ಟು, ಅರಮನೆಯ ಸುಖ ಭೋಗವನ್ನು ಬಿಟ್ಟು ಪತಿಪ್ರೇಮ ಪರಾಯಣಳಾದಳು. ಜಟಾಯುವು ತನ್ನ ಹಳೆಯ ಗೆಳೆಯನಾದ ದಶರಥನ ಮಿತ್ರ ಪ್ರೇಮದ ಶಕ್ತಿಯಿಂದ ರಾವಣನೊಡನೆ ಕಾದಾಡಿ ಅಪಹರಿಸಿದ ಸೀತೆಯನ್ನು ರಾವಣನ ಬಂಧನದಿಂದ ತಪ್ಪಿಸಲಿಕ್ಕೆ ಸಾಧಿಸಿ ಕೊನೆಗೆ ತನ್ನ ಪ್ರಾಣವನ್ನೆ ತ್ಯಜಿಸಿದನು. ಇದು ನಿಷ್ಕಾಮ ಮಿತ್ರ ಪ್ರೇಮದ ಪ್ರಕಾಶವು.

ಸ್ವಾಮಿ ಭಕ್ತಿಯ ಮೇರು ಪರ್ವತವು ಹನುಮಂತನು. ಆತನಿಂದಲೇ ರಾಮಾಯಣವು ಬೆಳಗಿತು. ನಿಷ್ಕಾಮ ಸೇವೆಯ ಶಕ್ತಿಯಿಂದ ರಾಮನಲ್ಲಿ ತನ್ನ ರೂಪವನ್ನು ಕಂಡು, ತನ್ನ ಹೃದಯದಲ್ಲಿ ರಾಮನನ್ನು ನೆಲೆಮಾಡಿ ಸ್ಥಿರಂಜೀವಿಯಾದನು. ಮುಂದಿನ ಯುಗದಲ್ಲಿ ರಾಮನು ಶ್ರೀಕೃಷ್ಣನಾಗಿ ತನ್ನ ಪ್ರೇಮ ಬಂಧನಾದ ಅಂಜನೇಯನನ್ನು ಕಪಿಕೇತನನಾಗಿ ಮಾಡಿ ತಾನು ಸಾರಥಿಯಾದ ರಥದ ಮೇಲೆ ಮಂಡಿಸಿರುವನು. ಶ್ರೀರಾಮನೇ ಭಕ್ತ ವತ್ಸಲನಾದನು. ಅಂಜನೇಯನೇ ಧ್ವಜರೂಪಿಯಾದನು, ಅರ್ಜುನನು ಭಾರತ ಯುದ್ಧವನ್ನು ಗೆದ್ದನು. ಧರ್ಮವು ಹುಟ್ಟಿತು. ಅಧರ್ಮವು ನಾಶವಾಯಿತು. ಭ್ರಾತೃಪ್ರೇಮ, ಧರ್ಮಪ್ರೇಮಕ್ಕೆ ಭರತನು ತನ್ನ ಆತ್ಮವನ್ನು ಅರ್ಪಿಸಿ ಅಣ್ಣನ ಪಾದುಕೆಗಳನ್ನು ತಲೆಯಮೇಲೆ ಹೊತ್ತು ಕೊಂಡು ಬಂದು ಅಯೋಧ್ಯೆಯ ಸಿಂಹಾಸನದ ಮೇಲೆ ಇರಿಸಿ, ಸನ್ಯಾಸಿ ರೂಪವನ್ನ ಧರಿಸಿ ತಾನು ನಿಕಾಗ್ರಚಿತ್ತದಿಂದ ರಾಮಕ್ಕರಣೆ ಮಾಡುತ್ತಾ ಹದಿನಾಲ್ಕು ವರ್ಷಗಳ ತನಕ ಆಯೋಧ್ಯೆಯಿಂದ ದೂರವಿದ್ದ ನಂದಿಗ್ರಾಮವೆನ್ನುವ ಪಣ್ಣ ಹಳ್ಳಿಯಲ್ಲಿ ಯೋಗಿಯಾಗಿ ವಾಸಿಸಿದನು. ನಂದಿಗ್ರಾಮವು ಆತನ ಆರಣ್ಯವಾಯಿತು. ನ್ಯಾಯ (Justice)ಕ್ಕೇ ಪ್ರಥಮ ಸ್ಥಾನವನ್ನು ಕೊಟ್ಟ ನ್ಯಾಯಶೀಲನಾದ ವಿಭೀಷಣನು ಅನ್ಯಾಯಶೋರನಾದ ತನ್ನ ಅಣ್ಣನನ್ನು ನೆನೆಯದೇ ನ್ಯಾಯವಿಭವ ಶ್ರೀರಾಮನ ಸಂಘಕ್ಕೆ ಸೇರಿ ಲಂಕೆಯ ಪಟ್ಟವನ್ನೇರಿದನು. ಆವನು ಆ ಪಟ್ಟವನ್ನು ಅಪೇಕ್ಷಿಸಲಿಲ್ಲ. ರಾಮನೇ ಬಲಾತ್ಕಾರದಿಂದ ಆವನನ್ನು ಲಂಕಾಧಿಪತಿಯಾಗಿ ಏರಿಸಿದನು. ವಿಭೀಷಣನ ನ್ಯಾಯಪ್ರೀತಿಯೂ, ಉದಾರವಾದುದು. ನ್ಯಾಯಾಧಿಪತಿಯು ನ್ಯಾಯವನ್ನು ಬಿಟ್ಟಾಗ ದೇಶದಲ್ಲಿ ಕ್ಷೋಭೆಯಾಗುವುದು, ನ್ಯಾಯಾಧಿಪತಿಯನ್ನು ರಾಜನು ತುಚ್ಛೀಕರಿಸುವಾಗ ರಾಜ್ಯವು ಅವನತಿಗಿಳಿಯುವುದು.

ರಾಮಾಯಣದ ಇನ್ನೊಂದು ಲೀಲೆಯು ಆಯೋಧ್ಯೆಯ ಪುರಜನರ ರಾಜಪ್ರೇಮ

(ಗಣೇ ಪುಟ ನೋಡಿರಿ)

ನಿಮ್ಮ ವೃತ್ತಿಯ ಉಪಕರಣಗಳು

ನೀವು ನ್ಯಾಯವಾಯುಗಾರನಾಗಿರಲಿ, ಹಳ್ಳಿಯ ಬಡಗಿಯಾಗಿರಲಿ, ಅಥವಾ ಒಂದು ಚಿಕ್ಕ ಅಂಗಡಿಗಾರನಾಗಿರಲಿ, ನಿಮ್ಮ ವೃತ್ತಿಯ ಉಪಕರಣಗಳನ್ನು ಒದಗಿಸಿಕೊಳ್ಳಲು ಮತ್ತು ಆಗಾಗ್ಗೆ ಅವ್ಯಗಳನ್ನು ಒಟ್ಟಾಯಿಸುವ ಸಲುವಾಗಿ ನಿಮಗೆ ಧನವನ್ನು ಬರ್ಜು ಮಾಡಲೇ ಬೇಕಾಗುತ್ತದೆ.

ಆದರೆ ನೀವು ನೈಪ್ಯಾಪ್ಯದಲ್ಲಿ ದುರಿಯುವುದನ್ನು ನಿಲ್ಲಿಸಿದಾಗ ಅಥವಾ ನಿಮ್ಮ ಕುಟುಂಬವು ನಿಮ್ಮನ್ನು ಕಳಕೊಂಡಲ್ಲಿ, ನಿಮ್ಮ ಇಂದಿನ ಸಂಪಾದನೆಯನ್ನು ಯಾವ ವಿಧದಲ್ಲಿ ಭರ್ತಿ ಮಾಡಲು ಸಾಧ್ಯವಿದೆಯೆಂಬುದನ್ನು ನೀವು ಆಲೋಚಿಸಿರುವಿರಾ?

ನೈಪ್ಯಾಪ್ಯದಲ್ಲಿ ಒಂದು ಸಮಾನನನ್ನು ಪಡೆಯಲು ಅಥವಾ ನಿಮ್ಮ ಕುಟುಂಬಕ್ಕೆ ಭದ್ರತೆಯನ್ನು ಕೊಡಲು <u>ಜೀವ ವಿಮೆಯ ಮೂಲಕ ಮಾತ್ರ ಸಾಧ್ಯವಿದೆ.</u> ನಿಮ್ಮ ಅವಶ್ಯಕತೆಗಳಿಗೆ ಯೋಗ್ಯವಾಗಿರುವ ಯೋಜನೆಗಳನ್ನು ವಿವರಿಸಲು ಓರ್ವ ಜೀವ ವಿಮಾ ವಿಜಂಟನಿಗೆ ಹೇಳಿರಿ.

ನಿಮಗಿದು ಸೊತ್ತಿದೆಯೆ? ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನು ಪ್ರತಿ ವರ್ಷ ಕೊಡುವ ಒಟ್ಟು 'ಪ್ಲೈಸ್'ಗಳಲ್ಲಿ, ರೂಪಾಯಿಯಲ್ಲಿ 75 ನಯೇ ಪೈಸೆ ಜೀವಂತರಾಗಿರುವ ಪಾಲಿಸಿದಾರರಿಗೆ ಸೇರುತ್ತದೆ.

ಜೀವ ವಿಮೆ

—ಜೀವ ವಿಮೆ ಮಾಡಿದಂದಿನಿಂದ ನಿಮ್ಮ ಭವಿಷ್ಯದ ಬಗ್ಗೆ ನೀವು ನಿಶ್ಚಿಂತರಾಗಿರಬಹುದು.

ಕ್ಷಯರೋಗದ ಗೃಹ ಚಿಕಿತ್ಸೆಯಲ್ಲಿ ಆರೈಕೆ ಸಮಿತಿಗಳ ಪಾತ್ರ

ಕ್ಷಯರೋಗಿಗಳ ಗೃಹ ಚಿಕಿತ್ಸಾ ಕಾರ್ಯದಲ್ಲಿ ಸಮೂಹ ಕಾರ್ಯದಲ್ಲಿ ಅಸಕ್ತಿಯುಳ್ಳ ಪ್ರಭಾವೀ ಜನರಿಂದ ಕೂಡಿದ ಸಣ್ಣ ಕಮಿಟಿಗಳು ಟಿ. ಬಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಹಾಯಕ ಕೆಲಸವನ್ನು ಮಾಡಬಹುದು. ಅಂತಹ ಕಮಿಟಿಗಳಿಗೆ ಆರೈಕೆ ಸಮಿತಿಗಳೆಂದು ಹೆಸರು. ಅವರು ನಿಕಟ ಸಹಕಾರದಿಂದ ಅನರ ಆಸ್ಪತ್ರೆಯೊಡನೆ ಕೆಲಸ ಮಾಡಬಹುದು. ಅವರು ರೋಗಿಗಳಿಗೂ ಅವರ ಕುಟುಂಬಕ್ಕೂ ಮತ್ತವರ ಸಂದರ್ಶಕರಿಗೂ ಮತ್ತು ವೈದ್ಯರಿಗೂ ಆಶೆ ಮತ್ತು ಸಂತೋಷವನ್ನುಂಟುಮಾಡುವ ದೂತರಾಗಿ ಪರಿಣಮಿಸುವರು. ಅವರು ಆಸ್ಪತ್ರೆ ಮತ್ತವರ ಸಿಬಂಧಿಯೊಡನೆ ನಿಕಟ ಸಂಪರ್ಕವನ್ನು ಬೆಳೆಸುವವರಾಗಿದ್ದಾರೆ. ಅವರು ತಮ್ಮ ವರ್ಜಸ್ಸನ್ನೂ ಸಂಪರ್ಕವನ್ನೂ ರೋಗಿಗಳೊಡನೆ ಮತ್ತವರ ಕುಟುಂಬದವರೊಡನೆ ಬೆಳೆಸಿ ತಮ್ಮವರನ್ನಾಗಿ ಮಾಡಿಕೊಂಡು ಚಿಕಿತ್ಸೆ ಹಾಗೂ ಸೋಂಕಿನ ನಿರೋಧ ಕಾರ್ಯಗಳಲ್ಲಿ ಆಸ್ಪತ್ರೆಯ ಸಹಕಾರವನ್ನು ಉಪಯೋಗಿಸಬಹುದು.

ಇದಕ್ಕೆಲ್ಲಾ ನಿಧಿ ಬೇಕು. ಆರೈಕೆ ಸಮಿತಿಗಳಿಗೆ ಆವರಕೆಲಸಗಳನ್ನು ನಿರ್ವಹಿಸಲು ತಕ್ಕ ದ್ರವ್ಯಾನುಕೂಲತೆ ಬೇಕು. ಅವರು ಸಹಾಯಕ್ಕಾಗಿ ಆವರ ಟಿ. ಬಿ. ಸಂಘಗಳನ್ನು ಇದಿರು ನೋಡುತ್ತಾರೆ. ಮುದ್ರೆ ಮೂರಾಟ ಜಳವಳವ್ವ ಟಿ ಬಿ. ಸಂಘಗಳ ನಿಧಿ ಸಂಗ್ರಹಕ್ಕೆ ಸಹಾಯ ಮಾಡುತ್ತದೆ. ದಯವಾಡಿ ಏಪ್ರಿಲ ಸಂಖ್ಯೆಯಲ್ಲಿ ಈ ಮುದ್ರೆಗಳನ್ನು ಕೊಂಡುಕೊಂಡು ನಿಮ್ಮ ಟಿ. ಬಿ. ಸಂಘಗಳಿಗೆ ಸಹಾಯ ಮಾಡಿರಿ.

ಒಂದು ಟಿ. ಬಿ. ಮುದ್ರೆಯ ಬೆಲೆ ಬರೇ ಪಸ್ತು ನಯೀಪೈಸೆ ಮಾತ್ರ.

ಮುದ್ರೆಗಳು ಸಿಗುವ ಸ್ಥಳಗಳು— (೧) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಗವರ್ನಮೆಂಟ್ ಟಿ. ಬಿ. ಸೆನಿಟೋರಿಯಂ, ಒಲ್ಡ್ ಮದ್ರಾಸ್ ರೋಡು, ಬೆಂಗಳೂರು-೮. (೨) ಮಹಿಳಾ ಮಂಡಲ, ಮತ್ತು ಶ್ರೀ ಬಸವೇಶ್ವರ ಜೀವಸ್ಥಾನ, ಪಂಜಾ ಕಮಿಟಿ, ಕಲ್ಯಾಣಿ ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮೂಜ, ಬೀದರ. (೩) ಗೌರವ ಕಾರ್ಯದರ್ಶಿ ಜಿ. ಕ. ಜಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ಪೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (೪) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮೂಜ, ಕೆಸರಾ ಕಾಲೇಜು, ಕುಮಟಾ. (೬) ಅಧ್ಯಕ್ಷರುಗಳು ಮಹಿಳಾ ಸಮೂಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಆಳಿಯೂರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಟಿ. ಬಿ. ಮುದ್ರೆ ಮೂರಾಟ ಜಳವಳ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ದಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:
M/s. Stewarts & Lloyds of India Private Ltd.
Calcutta.

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಸೂರ್ಯನ ಸಂಸಾರದಲ್ಲಿರುವ ವಿವಿಧ ಗ್ರಹಗಳು ಹೇಗೆ ಜನಿಸಿದುವು ಎಂಬುದರ ಬಗ್ಗೆ ಈಗ ಬಳಕೆಯಲ್ಲಿರುವ ಸಿದ್ಧಾಂತ ಹಳೆಯದಾಯಿತು. ಇತ್ತೀಚೆಗೆ ನಡೆದ ಹೊಸಹೊಸ ಸಂಶೋಧನೆಗಳಿಂದ ಹೊಸ ಸಿದ್ಧಾಂತ ಏರ್ಪಟ್ಟಿದೆ. ಇದನ್ನು ವಿವರಿಸುವ ಶ್ರೀ ಬೋರಿಸ್ ಲೆವಿನ್‌ರವರ ಪುಸ್ತಕದ ಅನುವಾದವನ್ನು ಸಂಕ್ಷಿಪ್ತವಾಗಿ 'ನವಯುಗ'ದ ವಾಚಕರಿಗೆ ಸುಪರಿಚಿತರಿರುವ ಶ್ರೀ ಎಂ. ರಂಗ ರಾವು ಮಾಡಿಕೊಟ್ಟು ಉಪಕರಿಸಿದ್ದಾರೆ. ಇದರ ದ್ವಿತೀಯ ಅಭ್ಯಾಯವಿದು.

೨. ಸೌರಕೂಟದ ನಿರ್ಮಾಣ

ಕ್ರಮವಾದ ಭ್ರಮೆ—

ಸೌರಕೂಟದ ನಿರ್ಮಾಣದುವಿನಲ್ಲಿ ಸೂರ್ಯನಿದ್ದಾನೆ. ಸೂರ್ಯನ ಸುತ್ತಲೂ ಅಸಂಖ್ಯಾತ ಉಪಗ್ರಹಗಳು ಪರಿಭ್ರಮಣ ಮಾಡುತ್ತಿವೆ. ಸೂರ್ಯನೊಂದಿಗೆ ಹೋಲಿಸಿದಾಗ ಉಪಗ್ರಹಗಳೆಲ್ಲವೂ ಬಹಳ ಚಿಕ್ಕವು. ಆದರೆ ನರ್ಮೊಂದಿಗೆ ಹೋಲಿಸಿದರೆ ಇವುಗಳಲ್ಲಿ ಕೆಲವು ಅತ್ಯಂತ ದೊಡ್ಡವು. ಇವುಗಳಲ್ಲಿ ನವಗ್ರಹಗಳು ಪ್ರಧಾನವಾಗಿವೆ. ಈ ಭೂಮಿಯೂ ನವಗ್ರಹಗಳಲ್ಲೊಂದಾಗಿದೆ. ನಮ್ಮ ಜ್ಯೋತಿಷ ಶಾಸ್ತ್ರದಲ್ಲಿರುವ ನವಗ್ರಹಗಳಲ್ಲಿ ಸೂರ್ಯ ಚಂದ್ರರೂ, ರಾಹು ಕೇತುಗಳೆಂಬ ಛಾಯಾಗ್ರಹಗಳೂ ಇವೆಯಷ್ಟೆ? ಆಧುನಿಕ ಖಗೋಳ ಶಾಸ್ತ್ರದಲ್ಲಿರುವ ನವಗ್ರಹಗಳು ಬೇರೆಯಾಗಿರುವ ವಿಷಯವನ್ನು ಹಿಂದಿನ ಅಧ್ಯಾಯದಲ್ಲಿ ಕೇಳಿದ್ದೇವೆ ತಾನೆ! ಈಗ ಆಧುನಿಕ ದೃಷ್ಟಿಯಲ್ಲಿ ಹೇಳಲ್ಪಟ್ಟ ಆ ಗ್ರಹಗಳು ಮಾತ್ರವಲ್ಲದೆ, ಅಸ್ಟರಾಯಿಡ್ಸ್ ಎಂಬ ಅಲ್ಪಗ್ರಹಗಳೂ, ಧೂಮಕೇತುಗಳೂ, ಅತಿ ಸೂಕ್ಷ್ಮ ಪ್ರಮಾಣದಲ್ಲಿರುವ ಪದಾರ್ಥದಿಂದೊಡಗೂಡಿದ 'ಮಬ್ಬು'ಗಳೂ ಸಹಸ್ರ ಸಂಖ್ಯೆಯಲ್ಲಿ ಸೂರ್ಯನ ಸುತ್ತಲೂ ಪರಿಭ್ರಮಿಸಿಕೊಂಡಿವೆ. ಈ ಪದಾರ್ಥಕಣಗಳು ಒಂದೊಂದು ಸಾರಿ ಭೂಮಿಯಕಡೆಗೆ ಬರುತ್ತವೆ. ಇತ್ತ ಆಪಾರವೇಗದಿಂದ ಬರುತ್ತಾ ಭೂಮಿಯ ಸುತ್ತಲೂ ಇರುವ ವಾಯುಮಂಡಲದೊಳಗೆ ನುಗ್ಗಿ 'ಉಲ್ಕೆ'ಗಳಾಗಿ ಉರಿಯುತ್ತಾ ಬೆಳಗಿ ಮಸಿಯಾಗಿ ಹೋಗುತ್ತವೆ. ಎಂದೋ ಒಮ್ಮೆ ಪೂರ್ತಿ ಮಸಿಯಾಗದೆ ಹೋಗಿ ಉಳಿದ ಭಾಗಗಳು ಉಲ್ಕಾ ಶಿಲೆಗಳಾಗಿ ಭೂಮಿಯ ಮೇಲೆ ಬೀಳುವುದೂ ಉಂಟು.

ಆದರೂ ಗ್ರಹಗಳೆಲ್ಲಾ ಸೂರ್ಯನ ಸುತ್ತಲೂ ಪರಿಭ್ರಮಿಸುವುದರಲ್ಲಿ ಒಂದು ನಿರ್ದಿಷ್ಟವಾದ ಕ್ರಮವಿರುವುದೆಂದು ವ್ಯಕ್ತವಾಗುವ ಅಂಶಗಳು ಕೆಲವಿವೆ.

೧. ಗ್ರಹಗಳ ಕಕ್ಷೆಗಳು—ಅಂದರೆ ಗ್ರಹಗಳು ಸೂರ್ಯನ ಸುತ್ತಲೂ ತಿರುಗುವ ಮಾರ್ಗಗಳು ತುಸು ಹೆಚ್ಚು ಕಡಮೆ ವೃತ್ತಾಕಾರದಲ್ಲೇ ಇರುತ್ತವೆ. ಹಾಗೆಂದು ಭೂಮಿ ಕೇತುಗಳ ಕಕ್ಷೆಗಳನ್ನು ನೋಡಿದರೆ ಅವು ದೀರ್ಘ ವೃತ್ತವಾಗಿ ಕಾಣಿಸುತ್ತವೆ.

೨. ಎಲ್ಲಾ ಗ್ರಹಗಳ ಕಕ್ಷೆಗಳೂ ಹೆಚ್ಚು ಕಡಮೆ ಒಂದೇ ಸಮತಲದಲ್ಲಿರುವುವೇ ಹೊರತು, ಒಂದಕ್ಕೊಂದು ಅಡ್ಡಕಟ್ಟುವಂತೆ ಇಳಿಜಾರಾಗಿರುವುದಿಲ್ಲ. ಆದುದರಿಂದ ಸೂರ್ಯ ಕುಟುಂಬವೆಲ್ಲಾ ಒಂದು ಚಕ್ರಾಕಾರದಲ್ಲಿರುವುವಾಗಿ ಭಾವಿಸುವಾಗ ಆ ಚಕ್ರವ ದಪ್ಪವು ಅದರ ಪ್ರಮಾಣದೊಂದಿಗೆ ಹೋಲಿಸಿದರೆ ಬಹಳ ತೆಳುವಾಗಿಯೇ ಇರುತ್ತದೆ.

೩. ಚಿಕ್ಕದು ದೊಡ್ಡದೆಂಬ ಭೇದವೇನೂ ಇಲ್ಲದೆ ಗ್ರಹಗಳೆಲ್ಲವೂ ಸೂರ್ಯನ ಸುತ್ತಲೂ ಒಂದೇ ಕಡೆಗೆ ಪ್ರಯಾಣ ಮಾಡುತ್ತವೆ. ಭೂಮಿಯ ಉತ್ತರ ಧ್ರುವದ ಅತ್ಯಂತ ಎತ್ತರದಲ್ಲಿ ಆಕಾಶದಲ್ಲಿ ನಿಂತು ನೋಡಿದರೆ ಗ್ರಹಗಳೆಲ್ಲವೂ ಸವ್ಯವಾಗಿ ತಿರುಗುತ್ತಿರುವಂತೆ ಕಾಣಿಸುತ್ತವೆ.

ಸೂರ್ಯನೂ ಗ್ರಹಗಳೂ ತಮ್ಮ ಸುತ್ತಲೂ ತಾವು ತಿರುಗುತ್ತವೆ. ಈ ತಿರುಗುತನವೂ ಗ್ರಹಗಳ ನಡಿಗೆಯಂತೆಯೇ ಸವ್ಯವಾಗಿಯೇ ಇರುವುದನ್ನು ಗಮನಿಸಬಹುದು. ಇದಕ್ಕೆ ವ್ಯತಿರೇಕವಾಗಿ ಕಾಣಿಸುವುದೆಂದರೆ ಯುರೇನಸ್ ಗ್ರಹವೊಂದೇ ಇದಕ್ಕೆ ಕಾರಣವೂ ಇದೆ. ಉಳಿದ ಗ್ರಹಗಳಿಗೆಲ್ಲಾ ಅಕ್ಷವು ನೇರವಾಗಿದ್ದರೆ ಯುರೇನಸ್ಸಿನ ಅಕ್ಷವು ಅಡ್ಡವಾಗಿ ಮಲಗಿರುವಂತಿದೆ. ಅಂತೂ ಒಟ್ಟಿನ ಮೇಲೆ ಗ್ರಹಗಳ ತಿರುಗುವಿಕೆ ಸವ್ಯನೇ ಸರಿ. ಇದೇ ವಿಧವಾಗಿ ಗ್ರಹಗಳ ಸುತ್ತಲೂ ತಿರುಗುವ ಉಪಗ್ರಹಗಳಲ್ಲಿ ಅತ್ಯಧಿಕ ಭಾಗವೂ ಸವ್ಯವಾಗಿಯೇ ತಿರುಗುತ್ತವೆ.

ಇವೆಲ್ಲವುಗಳಿಂದ ನೋಡುವಾಗ ಸೂರ್ಯ ಕುಟುಂಬಕ್ಕೆ ಸೇರಿದ ಗ್ರಹೋಪಗ್ರಹಗಳೆಲ್ಲವೂ ಒಂದೇ ಕ್ರಮದಲ್ಲಿ ಉತ್ಪತ್ತಿಯಾದುವಾದರೂ, ಎಂದೆಂದೋ ಎಲೆಲ್ಲೋ ಹುಟ್ಟಿದುವೆಲ್ಲವೂ ಒಂದೆಡೆಯಲ್ಲಿ ಸೇರಿದುವಲ್ಲವೆಂದೂ ಸ್ಪಷ್ಟವಾಗುತ್ತದೆ.

ಗ್ರಹಗಳ ಭೌತಿಕ ಲಕ್ಷಣಗಳ ಮಧ್ಯ ದ್ದೆರುವ ಬಾಂಧವ್ಯವೂ ಸೌರ ಕೂಟದಲ್ಲಿ ಅವುಗಳಿಗಿರುವ ಸ್ಥಾನಗಳೂ ಈ ವಿಷಯವನ್ನೇ ರುಜು ಗೊಳಿಸುತ್ತವೆ.

ಸಾಂದ್ರತೆ—ನೇಗ.

ಸೂರ್ಯನಿಗೆ ಸಮೀಪದಲ್ಲಿರುವ ಬುಧ, ಶುಕ್ರ, ಭೂಮಿ, ಅಂಗಾರಕ ಈ ನಾಲ್ಕು ಗ್ರಹಗಳು ಪ್ರಮಾಣದಲ್ಲಿ ಚಿಕ್ಕವು. ಆದರೆ ಇವುಗಳ ಸಾಂದ್ರತೆ ಹೆಚ್ಚು; ನೀರಿಗಿಂತಲೂ ನಾಲ್ಕೈದು ಪಾಲು ಹೆಚ್ಚು. (ಸಾಂದ್ರತೆಯೆಂದರೆ ಒಂದು ನಿರ್ದಿಷ್ಟ ಪ್ರಮಾಣದ ಭಾರ) ಸೂರ್ಯನಿಗೆ ದೂರದಲ್ಲಿರುವ ಗುರು, ಶನಿ, ಯುರೇನಸ್, ನೆಪ್ಚ್ಯೂನ್ ಈ ನಾಲ್ಕು ಗ್ರಹಗಳೂ ದೊಡ್ಡವು; ಭಾರೀ ದೊಡ್ಡವು ಆದರೆ ಇವುಗಳ ಸಾಂದ್ರತೆ ಬಹಳ ಕಡಮೆ. ನೀರಿನ ಸಾಂದ್ರತೆಯನ್ನು ಹಚ್ಚೇನೂ ವಿಶೇಷವುದೂ ಇಲ್ಲ. ಶನಿಗ್ರಹದ ಸಾಂದ್ರತೆಯಂತೂ ನೀರಿನ ಸಾಂದ್ರತೆಗಿಂತಲೂ ಕಡಿಮೆಯೇ—

(ಇನೇ ಪುಟ ನೋಡಿರಿ)

ಬಾಲಹಿತಚಿಂತನೆ

ಮಕ್ಕಳ ವಿಕಾಸಕ್ಕೆ ಸೇವಾಸಂಸ್ಥೆಗಳು

ಮುಂದಿನ ಜನಾಂಗವೆನಿಸಿದ ಇಂದಿನ ಮಕ್ಕಳು ಸುವ್ಯವಸ್ಥಿತರೂ ಸಚ್ಚರಿತ್ರರೂ ವಿವೇಕಿಗಳೂ ಪ್ರತಿಭಾಶಾಲಿಗಳೂ ಆಗಬೇಕಾದರೆ, ಅವರಿಗೆ ಸೂಕ್ತ ಮಾರ್ಗದರ್ಶನೆ ಬೇಕಾಗಿದೆ. ಭಾರತದಲ್ಲಿ ವಿವಿಧ ಸರಕಾರಿ ಹಾಗೂ ಖಾಸಗಿ ಸಂಘ ಸಂಸ್ಥೆಗಳು ಹಲವಾರು ವರ್ಷಗಳಿಂದ ಬಾಲ ವಿಕಾಸ ಕಾರ್ಯಗಳನ್ನು ಕೈಗೊಳ್ಳುತ್ತಿವೆ.

ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತದ ಹತ್ತು ಕೋಟಿ ಬಾಲಕರ ವಿಕಾಸ ಕಾರ್ಯಕ್ರಮಗಳಿಗೆ ವಿಶೇಷ ಮಹತ್ವವನ್ನು ನೀಡಲಾಗಿದೆ. ತಾಯಿ ಆರೋಗ್ಯ, ಶಿಕ್ಷಣ, ಮನೋರಂಜನೆ ಮತ್ತು ಸುಧಾರಣೆಗಳಿಗಾಗಿ, ಭಾರತದಲ್ಲಿ ಹಲವಾರು ರಾಜಕೀಯ ಮತ್ತು ಸ್ವತಂತ್ರ ಸ್ವರೂಪದ ಸಂಸ್ಥೆಗಳಿದ್ದು ಇವು ಅಮೂಲ್ಯ ಕಾರ್ಯವೆಸಗುತ್ತಿವೆ. ಇವುಗಳಲ್ಲಿ ಕೆಲವು ಸಂಸ್ಥೆಗಳ ಪರಿಚಯ ಮಾಡಿಕೊಡುವುದೇ ಸದ್ಯದ ಲೇಖನದ ಉದ್ದೇಶವಾಗಿದೆ.

ಭಾರತೀಯ ಬಾಲಕ ವಿಕಾಸ ಸಮಿತಿ

ಭಾರತ ಸರಕಾರವು ೧೯೫೨ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿತು. ಪ್ರಧಾನಿ ನೆಹರುರವರ ಪುತ್ರಿ ಇಂದಿರಾ ಗಾಂಧಿಯವರು ಈ ಸಮಿತಿಯ ಅಧ್ಯಕ್ಷೆಯರು ಬಾಲಕರ ವಿಕಾಸಕ್ಕಾಗಿ ಇದು ಸವಿಸ್ತೃತ ಕಾರ್ಯಕ್ಷೇತ್ರವನ್ನಿಟ್ಟುಕೊಂಡಿದೆ. ಪ್ರತಿ ರಾಜ್ಯದಲ್ಲೂ ಇದರ ಕೇಂದ್ರವೊಂದಿದ್ದು ಇವುಗಳ ಮೂಲಕ ಅದು ಕಾರ್ಯಕ್ರಮಗಳನ್ನು ನಡೆಸುತ್ತದೆ. ಜಿನೇವಾದಲ್ಲಿನ ಅಂತಾರಾಷ್ಟ್ರೀಯ ಬಾಲಕ ವಿಕಾಸ ಸಂಘ ದೊಡನೆ ಈ ಸಮಿತಿಯು ಸಂಪರ್ಕವನ್ನಿಟ್ಟುಕೊಂಡಿದೆ.

ಶಿಕ್ಷಣಕ್ಕಾಗಿ ಭಾರತೀಯ ಬಾಲಕ ವಿಕಾಸ ಸಮಿತಿಯು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಸಾಮಾನ್ಯ ಮಕ್ಕಳಿಗಾಗಿ ಬೇಸಿಕ್, ಮೊಂಟೆಸರಿ, ಕಿಂಡರ್ ಗಾರ್ಟನ್, ನರ್ಸರಿ, ಪ್ರಾಥಮಿಕ ಶಾಲೆ ಹಾಗೂ ಕಲಾ ಕೇಂದ್ರಗಳನ್ನಿದು ತೆರೆದಿದೆ. ಕುರುಡು ಮತ್ತು ಕಿವುಡ ಹಾಗೂ ಮೂಕ ಮಕ್ಕಳಿಗಾಗಿ ಆಧುನಿಕ ಪದ್ಧತಿಯ ಪುಸ್ತಕಗಳನ್ನು ರಚಿಸಿ ಇವರನ್ನೂ ಸುಶಿಕ್ಷಿತರನ್ನಾಗಿ ಮಾಡಿದೆ. ಇವರಿಗೋಸ್ಕರ ಪ್ರತ್ಯೇಕ ವಿದ್ಯಾಲಯವನ್ನು ಕೂಡ ತೆರೆದಿದೆ. ಅಂಗಹೀನ ಅಥವಾ ಅಂಗ ವಿಕಲ ಬಾಲಕರಿಗಾಗಿ ವ್ಯಾಯಾಮ ಶಾಲೆಗಳನ್ನೂ ತೆರೆದಿದ್ದು, ಶಿಷ್ಟಣದೊಂದಿಗೆ ಅವರ ದೋಷಪೂರಿತಾಂಗಗಳು ಪುನಾರ್ಜಿತವಾಗುವಂತಹ ಕಾರ್ಯವನ್ನೂ ಕೈಗೊಂಡಿದೆ. ದೋಷವನ್ನು ಚಿಕಿತ್ಸೆಯ ಮೂಲಕ ಪರಿಪಡಿಸಿಕೊಳ್ಳುವ ಸಾಹಸವನ್ನು ನಡೆಸುತ್ತಿದೆ. ಅನಾಥಾರಣ ಮತ್ತು ಮಾನಸಿಕವಾಗಿ ಪೀಡಿತರಾದವರಿಗೆ ಸಮರ್ಥ ವೈದ್ಯಕೀಯ ಸೇವೆಯನ್ನೂ ಮನೋವೈಜ್ಞಾನಿಕರ ನೆರವನ್ನೂ ಪಡೆಯುವ ಪ್ರಯತ್ನವನ್ನು ಸಮಿತಿಯು ನೇಮಿಸಿದ ಇತರ ಕೆಲ ಸಮಿತಿಗಳು ನಡೆಸುತ್ತಿವೆ.

ಬಾಲಕರ ಮನೋವಿನೋದ ಮತ್ತು ಆಟ ಓಟಗಳತ್ತ ಸಮಿತಿಯು ವಿಶೇಷ ಗಮನಹರಿಸಿದೆ. ಕ್ರೀಡಾ ಕೇಂದ್ರ, ವಿಶ್ರಾಮಧಾಮ, ವ್ಯಾಯಾಮ ಶಾಲೆಗಳನ್ನು ಈ ಉಪಸಮಿತಿಯು ನಿರ್ಮಿಸಿದೆ. ೧೪ನೆಯ ನವಂಬರವನ್ನು ಮಕ್ಕಳ ದಿನವನ್ನಾಗಿ ಆಚರಿಸಿ, ಆ ದಿನದಂದು ಮಕ್ಕಳ ಮನೋರಂಜನೆ, ಆಟ ಓಟಗಳ ಬಗ್ಗೆ ವಿಶೇಷ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಜನವರಿ ೩೦ರಂದು ತಮ್ಮ ವಿಶೇಷ ಸಾಹಸಪೂರ್ಣ ಕಾರ್ಯ ಅಥವಾ ಸೇವೆಗಾಗಿ ರಾಷ್ಟ್ರೀಯ ಪುರಸ್ಕಾರವನ್ನು ಮಕ್ಕಳಿಗೆ ಕೊಡಲಾಗುತ್ತಿದೆ.

ಬಾಲಕರ್‌ಜೀ ಬಾರೀ

'ಬಾಲಕರ್‌ಜೀ ಬಾರೀ' ಎಂಬುದು ಸಿಂಧೀ ಭಾಷೆಯ ಶಬ್ದ. 'ಬಾಲೋದ್ಯಾನ'ವೆಂದು ಇದರ ಅರ್ಥ. ೧೯೫೮ರಲ್ಲಿ ಈಗ ಪಾಕಿಸ್ತಾನಕ್ಕೆ ಸೇರಿದ ಸಿಂಧ್‌ನ ಸಕ್ಕರ್‌ನಲ್ಲಿ ಸುಪ್ರಸಿದ್ಧ ಸಿಂಧಿ ನಾಯಕ ಶ್ರೀ ಶೇವಕ್ ಭೋಜರಾಜರು ಇದನ್ನು ಸ್ಥಾಪಿಸಿದರು. ಮಕ್ಕಳು ಈತನನ್ನು ಗೌರವ ಹಾಗೂ ಪ್ರೇಮದಿಂದ 'ಅಜ್ಜ' ಎನ್ನುತಿದ್ದರು. ೧೯೬೦ರಲ್ಲಿ ಇವನಿಗೊಬ್ಬಳು ಮಗಳು ಜನಿಸಿದಾಗ, ಮಕ್ಕಳು ಮನೆಯ ಸಂಕುಚಿತ ವಾತಾವರಣವನ್ನು ಬಿಟ್ಟು ಸ್ವತಂತ್ರವಾಗಿರಲು, ಆಡಲು ಮತ್ತು ತಮ್ಮ ಬುದ್ಧಿ, ಶರೀರ ಹಾಗೂ ಮನಸ್ಸುಗಳನ್ನು ವಿಕಸಿತಗೊಳಿಸಲು ಪುಟ್ಟ ಉತ್ತಮ ಶಿಕ್ಷಣ ಅಭ್ಯಾಸಗಳನ್ನು ಕಲಿತುಕೊಳ್ಳಲು ಅನುಕೂಲವೆನಿಸಿದ ಅವಕಾಶಗಳನ್ನು ಕಲ್ಪಿಸಿಕೊಡುವ ಸಂಸ್ಥೆಗಳು ಜೀವಂತವಾಗಿರಬೇಕೆಂಬ ಬಯಸಿದ್ದ. ಕಳೆದ ಇಳ ವರ್ಷಗಳಲ್ಲಿ ಈ ಸಂಸ್ಥೆಯು ಭಾರತದ ಹಲವಾರೆಡೆಗಳಲ್ಲಿ ಕೇಂದ್ರಗಳನ್ನು ತೆರೆದು ಸಾಕಷ್ಟು ಕಾರ್ಯ ನಡಾಯಿಸಿದೆ. ಪ್ರಸಿದ್ಧ ನಾಯಕರೂ ಲೋಕ ಸಭಾಸದಸ್ಯರೂ ಆದ ಶ್ರೀ ರಾಧಾರಮಣರು ಇದರ ಪ್ರಧಾನರಾಗಿದ್ದಾರೆ.

'ಬಾಲಕರ್‌ಜೀ ಬಾರೀ'ಯ ಕಡೆಯಿಂದ ಹಲವಾರು ಅಧ್ಯಾಪಕರಿಗೆ ಕೇಂದ್ರದ ಕೆಲಸಗಳನ್ನು ಮಾಡುವುದಕ್ಕಾಗಿ ಕೆಲವಾರ ಶಿಕ್ಷಣ ವೀಯಲಾಗುತ್ತಿದೆ. ಕೇಂದ್ರಗಳಿಗೆ ಸೇರಿದ ಸದಸ್ಯರು ವಾರದಲ್ಲೊಂದುದಿನ ಬಂದುಸೇರುತ್ತಾರೆ. ಈದಿನ ಶಿಕ್ಷಕರ ವರ್ಗದರ್ಶನದಲ್ಲಿ ಮಕ್ಕಳು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಹೃದಯಂಗಮವೂ ಶಿಕ್ಷಣಪ್ರದವೂ ಆದ ಕತೆಗಳನ್ನು ಶಿಕ್ಷಕರು ಇವರಿಗೆ ಹೇಳುತ್ತಾರೆ. ಪ್ರತಿ ಕೇಂದ್ರದಲ್ಲಿಯೂ ವಿಭಿನ್ನ ವಿಷಯಗಳ ಮೇಲೆ ಬರೆದ ಪುಸ್ತಕಗಳೂ ಪತ್ರಿಕೆಗಳೂ ಇರುವ ಒಂದೊಂದು ವಾಚನಾಲಯವಿದ್ದು ಇವುಗಳಿಂದ ಮಕ್ಕಳಿಗೆ ಲಾಭದೊರೆಯುತ್ತದೆ. ಅವರವರ ಅಭಿರುಚಿಗೆ ತಕ್ಕ ಆಟಗಳನ್ನೂ ಕಲೆಗಳನ್ನೂ ಕಲಿತುಕೊಳ್ಳುವ ಏರ್ಪಾಡು ಇಲ್ಲಿರುವುದು.

ಸುಮಾರು ಎರಡು ಸಾವಿರ ಸದಸ್ಯರನ್ನು ವಿಶೇಷ ರೀತಿಯಾಡಿಯ ಮೂಲಕ ಕಾಶ್ಮೀರ ಮತ್ತು ಜಯಪುರಗಳ ಸಂದರ್ಶನಾರ್ಥವಾಗಿ ಈ ಸಂಸ್ಥೆ ಕರೆದುಕೊಂಡು ಹೋಯಿತು. ಅಲ್ಲಿ ಅವರು ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ಕಂಡರು. ಸಂಗೀತ ಮತ್ತು ನೃತ್ಯದ ಕಾರ್ಯಕ್ರಮವು ಮಕ್ಕಳಿಗೆ ವಿಶೇಷ ಆಕರ್ಷಕವಾಗಿರುತ್ತದೆ. ಕಳೆದ ವರ್ಷ ೧೪ನೆಯ ನವಂಬರವನ್ನು ಸಂಗೀತ ನೃತ್ಯೋತ್ಸವದ ರೂಪದಲ್ಲಿ ಆಚರಿಸಲಾಗಿತ್ತು. ಇದರಲ್ಲಿ ನೂರು ಸಾವಿರ ಸದಸ್ಯರು ಭಾಗವಹಿಸಿದ್ದರು

ಬಾಲ ಚಿತ್ರ ಸಮಿತಿ

ಬಾಲಚಿತ್ರ ಸಮಿತಿ Children Film Society)ಯು ಬಾಲಲೋಕಕ್ಕಾಗಿ ಜಗತ್ತಿನ ಚಿತ್ರ ತಾರೆಯರಿಂದ ಏಕಮೇವ ಭಾರತೀಯ ಸರಕಾರಿ ಸಂಸ್ಥೆಯಾಗಿದೆ. ಸಮಿತಿಯು ವಿವಿಧ ರಾಜ್ಯಗಳ ವಿವಿಧ ಕೇಂದ್ರಗಳ ಶಾಲೆಗಳಲ್ಲಿ ಬೋಧಪ್ರದ ಚಿತ್ರಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡುತ್ತಿದೆ. ನವದೆಹಲಿಯ 'ಸಪ್ರೂ ಭವನ'ದಲ್ಲಿ ಪ್ರತಿ ಭಾನುವಾರ ಹಾಗೂ ಇನ್ನಿತರ ಕೆಲವು ರಜಾ ದಿನಗಳಲ್ಲಿ ಪೂರ್ವಾಹ್ನ ಎರಡು ಪ್ರದರ್ಶನಗಳನ್ನು ತೋರಿಸುತ್ತದೆ. ಬೊಂಬಾಯಿಯಲ್ಲಿ ಈ ಸಮಿತಿಯು ಚಿತ್ರಗಳ ನಿರ್ಮಾಣ ಮಾಡುತ್ತದೆ; ನವದೆಹಲಿಯಲ್ಲಿ ವಿತರಣೆಯು ಕಾರ್ಯ ನಡೆಯುತ್ತದೆ.

ಬಾಲಕರಿಗಾಗಿ ಈ ಸಮಿತಿಯು ಇದುವರೆಗೆ ೧೫ ಚಿತ್ರಗಳನ್ನು ತಯಾರಿಸಿದೆ. ಇವುಗಳಲ್ಲಿ ಅಂತಾರಾಷ್ಟ್ರೀಯ ೧೫ನೆಯ ಪ್ರದರ್ಶನದಲ್ಲಿ 'ಜಲಧೀಪ' ವೆಂಬುದು ಪ್ರಥಮ ಬಹುಮಾನಗಳಿಸಿದೆ. ಚಾರ್ ದೋಸ್ತ್, (ನಾಲ್ವರು ಮಿತ್ರರು), ಬಜ್ಞೋಂನೆ ಬಾತ್ (ಮಕ್ಕಳೆಡನೆ ಮಾತುಕತೆ), ಗಂಗಾಕೇ ಲಹರೇಂ (ಗಂಗೆಯ ತೆರೆಗಳು), ಗುಲಾಬ್‌ಕಾ ಫೂಲ್ (ಗುಲಾಬಿ ಹೂ) ಮೊದಲಾದುವು ಮಕ್ಕಳಿಂದ ಪ್ರಶಂಸೆಗೆ ಗುರಿಯಾಗಿವೆ. ಈಗ ಕೆಲವು ಚಿತ್ರಗಳು ತಯಾರಾಗುತಿದ್ದ ಪ್ರೇಮ ಜಂದರ 'ಈದ್ ಮುಬಾರಕ್' ಕೂಡ ಇವುಗಳಲ್ಲಿ ಒಂದಾಗಿದೆ. ಇದು ಕೆಲವೇ ನೆನೆಯದಲ್ಲಿ ಪ್ರದರ್ಶನಕ್ಕೆ ಬಿಡುಗಡೆಯಾಗಲಿದೆ. ಹಿಂದಿಯಲ್ಲದೆ ಹನ್ನೆರಡು ಭಾರತೀಯ ಭಾಷೆಗಳಲ್ಲೂ ಸಮಿತಿಯ ಚಿತ್ರ ನಿರ್ಮಾಣ ಕಾರ್ಯವು

(ಅನೇ ಪುಟ ನೋಡಿರಿ)

ಪ್ರಾರಂಭ ದಿನದಿಂದ ಈ ವರೆಗೆ ಉಡುಪಿಯ ಸಾರ್ವಜನಿಕರು ನಮಗಿತ್ತ ಸಹಕಾರಕ್ಕಾಗಿ ನಾವು ನಿಮಗೆ ಅತ್ಯಂತ ಕೃತಜ್ಞರಾಗಿದ್ದೇವೆ. ಮುಂದಕ್ಕೂ ಇದೇ ಮಾದರಿಯ ಸಹಕಾರವನ್ನು ಮತ್ತು ಪ್ರೋತ್ಸಾಹ ದೊರೆಯುವುದೆಂದು ಅತ್ಯಾದರಪೂರ್ವಕ ಹಾರೈಸುತ್ತೇವೆ.

ಸಿಟಿ ಬೇಕರಿ, ಉಡುಪಿ.

ಪ್ರಧಾನ ಕಚೇರಿ:

ಹೊ ನೂಕರ್‌ಟ್ ರಸ್ತೆ, ರಥಬೀದಿ, ಮಂಗಳೂರು. ಫೋನ್:897

ಶಾಖೆಗಳು:

1. ಸಿಂಡಿಕೇಟ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು. ಫೋನ್: 941

2. ಸಂತೆಕಟ್ಟೆ, ಉಡುಪಿ.

Notice

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 300/1960

ಬಿ. ಹಾವುದ್ ಕೋಯ — ವಾದಿ.

ಬಾಳು ಗೌಡ, ಪೂವಣಿ ಗಾಡರ ಮಗ, ಬೆಳ್ತಂಗಡಿ ತಾಲೂಕು, ಇಂದಬೆಟ್ಟು ಗ್ರಾಮದ ಮಜಲು — ಪ್ರತಿವಾದಿ.

ಪ್ರತಿವಾದಿಗೆ ತಿಳಿಸುವುದೇನೆಂದರೆ —

ಡಿ. ಪ್ರೊ. ನೋಟಿನ ಬಾಬ್ತು ನಿಮ್ಮಿಂದ ಬರತಕ್ಕ ಹಣದ ವಸೂಲಿಗೆ ವಾದಿಯು ನಿಮ್ಮ ಮೇಲೆ ದಾಕಲು ಮಾಡಿದ ಈ ದಾವೆಯು ತಾ. 25.11-60ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಖುದ್ದವಾಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Plaintiff.

ಪುತ್ತೂರು, ತಾ 12.11-60.

ನೋಟೀಸು

ಪುತ್ತೂರು ಡಿ. ಮುನ್ಸಿ. ಕೋರ್ಟಿನಲ್ಲಿ

O. S. 347/60

ನಗರ ರಮಾನಾಥ ಶೆಣೈ — ವಾದಿ

ಅಪ್ಪು ಹೆಂಗಸು ಕೂಡಾ — ಪ್ರತಿವಾದಿರು

3ನೇ ಪ್ರತಿವಾದಿ— ಸಂಕಮ್ಮ— ಜಾತಿ ಹೆಂಗಸಿನ ಮಗಳು — ವ — ಅಗ್ರಾಳ ಮಂಜಪ್ಪ ರೈಯ ಹೆಂಡತಿ— ಕೆದಂಬಾಡಿ ಗ್ರಾಮದ ತಿಂಗಳಾಡಿ

ಇವಳಿಗೆ ಕೋರ್ಟು ಸ್ಯುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ವಾದಿ, ನೀವು ಕೂಡಾ 3 ಜನರು ತಾ. 29—3—58ನೇಲ್ಲಾ ನೂಡಿಕೊಂಡ ಮೂಲಗೇಣಿ ಚೀಟು ಪ್ರಕಾರ, ನಿಮ್ಮಿಂದ ಕೂಡಾ ವಾದಿಗೆ ತಾ. 31—3—55; 31.3.56; 31.3.57; 31.3.58ಕ್ಕೆ ಬರಬೇಕಾದ ಮೂಲಗೇಣಿ ಬಾಕಿಗೆ ಮಾಡಿದ ಮೇರೆಗೆ ದಾವೆಯು ತಾ. 30—11—60ಕ್ಕೆ ಇಟ್ಟಿರುತ್ತದೆ. ಆದಿವಸ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ವಿನಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd·) M. Sadashiva Rao·
Vakil for Plaintiff·

ಪುತ್ತೂರು, ತಾ. 16—11—60.

ಪ್ರತ್ಯೇಕ ಮಾನವನ ಜೀವನವು ತೆರೆದ ಪುಸ್ತಕದಂತೆ, ವಿಕಸಿತ ಸುಪ್ತದಂತೆ ಇರಬೇಕು; ಇದರಿಂದ ಇತರರೂ ಶಿಕ್ಷಣ ಹಾಗೂ ಉಚ್ಚ ವಿಚಾರ ಮತ್ತು ಪವಿತ್ರತೆಯ ಬರಿಮಳವನ್ನು ಮೂಸುವಂತಾಗಬೇಕು.

ನವಯುಗ

ವರುಷ ೪೦	ಉಡುಪಿ ೨೪-೧೧-'೬೦	ವಾರ ೧೪

ಒಡಿಸ್ಸದ ರಾಜ್ಯಕಾರಣ

ಏಕ ಪಕ್ಷವಾಗಿ ಸರಕಾರ ರಚಿಸಲು ಅಸಮರ್ಥವಾಗಿ ಅಧಿಕ ಸ್ಥಾನಗಳನ್ನು ಪಡೆದ ಪಕ್ಷವು ಇತರ ಪಕ್ಷಗಳೊಡನೆ ಸೇರಿಕೊಂಡು ಸಮ್ಮಿಶ್ರ ಮಂತ್ರಿ ಮಂಡಳವನ್ನು ರಚಿಸುವುದು ಕ್ರಮ ಪ್ರಾಪ್ತ. ಇಂತಹುದೇ ರಚಿತ ಸಂಪುಟ ಗಾರ್ಜಾರ್ಲಲ್ಲಿ ಒಡಿಸ್ಸದಲ್ಲಿ ನಿರ್ಮಾಣಗೊಂಡಿತು. ಅಲ್ಲಿ ಕಾಂಗ್ರೆಸ್ ನಿಶ್ಚಿತ ಬಹುಮತವನ್ನು ಕಳೆದುಕೊಂಡುದರಿಂದ ಗಣತಂತ್ರ ಪರಿಷತ್ತಿನೊಡನೆ ಸೇರಿಕೊಂಡು ಸಮ್ಮಿಶ್ರ ಸರಕಾರ ರಚಿಸಿತು. ಈ ಮೈತ್ರಿಯನ್ನು ಒಪ್ಪಿದವರು ಇರುವಂತೆಯೇ ಬಲವಾದ ಟೀಕೆಗೂ ಗುರಿಮಾಡಿದವರಿದ್ದಾರೆ. ಅನೇಕರೇ ಇದ್ದರೂ ಇಷ್ಟರ ವರೆಗೆ ಸುಯೋಗ್ಯ ರೀತಿಯಲ್ಲಿ ಸಮ್ಮಿಶ್ರ ಸರಕಾರವು ಕಾರ್ಯವೆಸಗುತ್ತ ಬಂದಿದೆ. ಇದಾದ ನಂತರವೇ ಈ ವರ್ಷದ ಆದಿಯಲ್ಲಿ ಕೇರಳದಲ್ಲಿಯೂ ಸಮ್ಮಿಶ್ರ ಸರಕಾರವು ಅಡಳಿತ ನಿರ್ವಹಿಸುತ್ತಿದೆ. ಇದೂ ವಕ್ಷ ರೀತಿಯಲ್ಲೇ ಮುಂದುವರಿಯುತ್ತಿದೆ.

ಮುಂದಿನ ಸಾರ್ವತ್ರಿಕ ಚುನಾವಣೆಗಳು ಗಾರ್ಜಾನೆ ಮಾರ್ಚ್ ತಿಂಗಳೊಳಗೆ ಜರಗಲಿರುವುದು. ದೇಶದ ಎಲ್ಲ ರಾಜಕೀಯ ಪಕ್ಷಗಳೂ ಇವುಗಳಲ್ಲಿ ಸ್ಪರ್ಧಿಸುವ ಮುಂಜಾಗ್ರತೆಯನ್ನು ಇನ್ನೇನು, ಮಾಡತೊಡಗುತ್ತಿವೆ. ಗಣತಂತ್ರ ಪರಿಷತ್ತು ಕೂಡಾ ಸ್ವತಂತ್ರ ರೀತಿಯಲ್ಲಿ ಕಾಂಗ್ರೆಸ್ಸಿನ ವಿರುದ್ಧ ಪ್ರತ್ಯೇಕವಾಗಿಯೇ ಚುನಾವಣಾ ರಂಗಕ್ಕೆ ಧುಮುಕಲು ನಿರ್ಧರಿಸಿರುವುದರಿಂದ ಅದು ಕಾಂಗ್ರೆಸ್ಸಿಗೆ ವಿರುದ್ಧವಾಗಿ ಹೋರಾಡಿ ಬಹುಮತ ಪಡೆಯುವ ನಿರೀಕ್ಷೆಯಿಟ್ಟುಕೊಂಡಿರುವುದರಿಂದ, ಕಾಂಗ್ರೆಸ್ಸು ಅನಿವಾರ್ಯವಾಗಿ ಅದನ್ನು ಚುನಾವಣಾ ರಂಗಕ್ಕೆಳೆಯುವ ಮೊದಲೇ ಸ್ವತಂತ್ರ ಗೊಳಿಸಬೇಕಾದುದು ಅಗತ್ಯವಾಯಿತು; ಹಾಗಾಗಿ ಪ್ರಾದೇಶಿಕ ಕಾಂಗ್ರೆಸ್ ಅದನ್ನು ಬಿಟ್ಟುಕೊಡಲು ಒಪ್ಪಿಕೊಂಡಿದೆ; ಮುಂದಿನ ವರ್ಷದ ಮುಂಗಡ ಪತ್ರವು ಸ್ವೀಕಾರವಾದೊಡನೆಯೇ ಸದ್ಯದ ಮಂತ್ರಿಮಂಡಳಿಯನ್ನು ವಿಸರ್ಜಿಸಿಬಿಡಲು ಅದು ನಿರ್ಧರಿಸಿದೆ. ೧೪೦ ಜನ ಸದಸ್ಯಕಿರುವ ವಿಧಾನ ಸಭೆಯಲ್ಲಿ ಕೇವಲ ೬೪ ಸ್ಥಾನಗಳನ್ನು ಪಡೆದಿರುವ ಕಾಂಗ್ರೆಸ್ ಈ ಹಿಂದಿನಂತೆಯೇ ಮುಂದೆಯೂ ಸ್ವತಂತ್ರವಾಗಿ ಸರಕಾರ ನಡೆಸುವುದು ಅಸಾಧ್ಯವಾಗುವುದು ಸ್ವಾಭಾವಿಕವೇ. ಆದುದರಿಂದ ಮುಂದೇನು ಎಂಬುದೊಂದು ಪ್ರಶ್ನೆ ಎದುರು ನಿಲ್ಲುವುದು ವಾಸ್ತವಿಕ. ಇದಕ್ಕೆ ಉತ್ಕಲ ಪ್ರಾದೇಶಿಕ ಸಮಿತಿಯು ಸೂಚಿಸಿದ ಪರಿಹಾರವು ಏಕ ಪಕ್ಷೀಯವಾಗಿದೆಯೆಂದು ಹೇಳಲೇ ಬೇಕಾಗಿದೆ. ಸದ್ಯದ ಸರಕಾರದ ಧುರೀಣರು ರಾಜಿನಾಮೆಯಿತ್ತು, ಮುಂದೆ ಹೊಸ ಶಾಸನ ಸಭೆಯು ಅಧಿಕಾರ ಸೂತ್ರ ಪಡೆಯುವ ವರೆಗೆ, ರಾಷ್ಟ್ರಪತಿಗಳ ಆಳಿಕೆಯಿರಬೇಕೆಂದು ಅದು ಬಯಸುತ್ತದೆ. ಈಗಿನ ಧುರೀಣ ರಾದ ಹರಿಕೃಷ್ಣ ಮೆಹತಾಬರು ರಾಜಿನಾಮೆಯಿತ್ತರೆ, ಕಾಂಗ್ರೆಸ್ಸು ಸರಕಾರ ಸ್ಥಾಪಿಸಲು ಒಪ್ಪುವುದಿಲ್ಲವೆಂದೇ ಹೇಳಬೇಕು; ಏಕೆಂದರೆ, ಸ್ವತಂತ್ರಬಹುಮತವಿಲ್ಲದ ಅದು ಇತರ ಪಕ್ಷಗಳೊಡನೆ ಅವಶ್ಯ ಮೈತ್ರಿಮಾಡಿಕೊಳ್ಳಲೇ ಬೇಕಾಗುತ್ತದೆ; ಇದಕ್ಕೆ ಕಾಂಗ್ರೆಸ್ಸು ಸಿದ್ಧವಿರಲಾರದು; ಸಿದ್ಧವಿದ್ದರೂ ಗಣತಂತ್ರ ಪರಿಷತ್ತು ಅದನ್ನೊಡಸಿದ್ದ ಮೈತ್ರಿಯನ್ನು ಕೆಳೆದುಕೊಳ್ಳುವುದಕ್ಕೆ ಕಾರಣವಾದ ಸಿದ್ಧಾಂತವೇ ಇಲ್ಲಿಯೂ ಅಡ್ಡಬರುತ್ತದೆ. ಆದರೆ, ಈ ಸ್ಥಾನಗಳನ್ನು ಪಡೆದಿರುವ ಗಣತಂತ್ರ ಪರಿಷತ್ತು ಉಳಿದ ಪಕ್ಷಗಳೊಡನೆ ಸ್ನೇಹ ಮಾಡಿ ತಾನು ಸಮ್ಮಿಶ್ರ ಮಂತ್ರಿಮಂಡಳಿ ಸ್ಥಾಪಿಸುವುದಿಲ್ಲವೆಂದು ಹೇಗೆ ಗೊತ್ತು? ಬಹುಸಂಖ್ಯೆ ಈ ರೀತಿಯ ಸರಕಾರ ರಚನೆಯಾಗಲಾರದೆಂದು ನಂಬಿದರೂ ಪ್ರಾದೇಶಿಕ ಕಾಂಗ್ರೆಸ್ಸು ರಾಜ್ಯಪಾಲರಿಗೆ ಸಿಫಾರಸು ಮಾಡುವಾಗ ಏಕಪಕ್ಷೀಯ ವಾದವನ್ನು ಅವಲಂಬಿಸಿದಂತೆ ತೋರುತ್ತದೆ; ಹಾಗಾಗಿ ಅಭಾಸವಾದಂತಾಗಿದೆ. ಇದು ಸಮಂಜಸವೆಂದು ಹೇಳುವಂತಿಲ್ಲ. ಗಣತಂತ್ರ ಪರಿಷತ್ತಿನೊಡನೆ ತನ್ನ ಮುಂದಿನ ಕಾರ್ಯೋದ್ಧೇರಣೆ ವಿಚಾರಿಸುವಾಗ ಇದನ್ನೂ ತಿಳಿದುಕೊಳ್ಳಬೇಕೆತ್ತೆನಿಸುತ್ತದೆ.

ಚುನಾವಣೆಗೆ ೮—೯ ತಿಂಗಳು ಸೂರ್ವಧಾವಿಯಾಗಿ ನಡೆವ ಸಂಪುಟ ವಿಸರ್ಜಿತೆಗೊಳ್ಳುವ ನಿರೀಕ್ಷೆಯಿರುವುದರಿಂದ, ಅಲ್ಲಿನ ವಿವಿಧ ಪಕ್ಷಗಳಿಗೆ ಚುನಾವಣಾ ಪ್ರಚಾರವನ್ನು ಮಾಡುವುದಕ್ಕೆ ವಿಮುಕ್ತಾವಕಾಶ ನೀಡಿದಂತಾಗುವುದು. ಜನತೆಯು ನಿಷ್ಪಕ್ಷಪಾತದಿಂದ ತನ್ನ ಆಧಿಕಾರ ಚಲಾಯಿಸಬಲ್ಲುದು. ಈ ದೃಷ್ಟಿಯಿಂದ ಇದು ಅನಿವಾರ್ಯವಾದರೂ ವಿಭಿನ್ನಾಭಿಪ್ರಾಯದ ಪಕ್ಷಗಳಾದುದರಿಂದ ಸಮಂಜಸವೇ ಎಂದು ಹೇಳಬೇಕು, ಕೇರಳದಲ್ಲಿ ಮುಂದಿನ ವರ್ಷವಲ್ಲವಾದರೂ ನಾಲ್ಕು ವರ್ಷಗಳಲ್ಲಿ ಮರಳಿ ಯುತದಾನ ನಡೆಯಲಿದೆ. ಇಂದು ಒರಿಸ್ಸದಲ್ಲಿ ಅನುಸರಿಸುವ ನೀತಿಯನ್ನೇ ಕಾಂಗ್ರೆಸ್ಸು ಆಗ ಅಲ್ಲಿಯೂ ಜೊಂದಿಕೊಳ್ಳುವುದೇ ಎಂಬುದಕ್ಕೆ ಸಮಾಧಾನಕರವಾದ ಉತ್ತರವನ್ನು ಈಗಲೇ ನಿರೀಕ್ಷಿಸಬಾರದು.

ನೀರಿನ ತಂಟೆ

ಮೈಸೂರು ಮತ್ತು ಆಂಧ್ರ ಸರಕಾರಗಳ ನಡುವೆ ಹೊಯ್ಕೆಯ್ಯು ಕೃಷ್ಣಾ—ಗೋದಾವರೀ ನದಿಗಳ ನೀರಿನ ಬಗ್ಗೆ ನಡೆದಿದ್ದು ಈಗ ಅದು ಅರ್ಧವಿರಾಮದಲ್ಲಿ ನಿಂತಿದೆ. ಈ ಬಗ್ಗೆ ಅವೆಷ್ಟೋ ಪ್ರಕಾರದ ವಾದವಿವಾದಗಳು ನಡೆದುವು. ಇವುಗಳಿಗೆ ಪಹಾರಾಷ್ಟ್ರವೂ ತುಸು ತನ್ನ ಧ್ವನಿ ಸೇರಿಸಿತು. ಅಂತೂ ಮೈಸೂರು ಕೂಗಿಕೊಂಡು ಅದು ಅಸಫಲವೆಂಬಂತಾಗಲು ನೇರವಾಗಿ ದಿಲ್ಲಿಯ ಮರೆಹೊಕ್ಕಿತು; ಯೋಗ್ಯ ಆಶಾಸನೆ ಪಡೆಯಿತು. ಹೈದರಬಾದ—ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಭಾಗಗಳಿಗೆ ನೀರಾವರಿ ಸೌಕರ್ಯವನ್ನೊದಗಿಸುವ ಈ ನದಿಗಳು ಅಂತಾರಾಷ್ಟ್ರೀಯ ನದಿಗಳಾಗಿರುವೆಯೊದುದರಿಂದ ಈ ನೀರಿನ ಹಂಚಿಕೆಯು ನ್ಯಾಯೋಚಿತ ವಿಧಾನದಲ್ಲಿ ಆಗಬೇಕೆಂದು ಎಲ್ಲರೂ ಬಯಸುತ್ತಾರೆ. ಕೇಂದ್ರ ಸರಕಾರದಲ್ಲಿನ ನೀರಾವರಿ ಮಂತ್ರಿಗಳಾದ ಶ್ರೀ ಹಫೀಜ ಮಹಮ್ಮದ್ ಇಬ್ರಾಹಿಮರು ಸದ್ಯದಲ್ಲಿಯೇ ಗೋದಾವರಿ ಮತ್ತು ಕೃಷ್ಣಾ ನದಿಗಳು ಹರಿಯುವ ಪ್ರದೇಶಗಳನ್ನು ಪ್ರವಾಸಮಾಡಲಿದ್ದು ಪರಿಸ್ಥಿತಿಯನ್ನು ಸರಿಯಾಗಿ ಅಭ್ಯಸಿಸುವರೆಂದು ನಿರೀಕ್ಷೆಯಿದೆ. ಅಲ್ಲದೇ ಪ್ರಧಾನ ಮಂತ್ರಿಯವರಿಗೂ ಪ್ರಚಲಿತ ಸನ್ನಿವೇಶದ ಸಂಪೂರ್ಣ ಪರಿಚಯವನ್ನು ಮಾಡಿಕೊಟ್ಟಿರುವುದರಿಂದ ಈ ಸಂದರ್ಶನಾನಂತರ ಮುಖ್ಯಡೆಯವರಿಗೂ ಸಮಸ್ಯೆಯಂತಾಗಿದ್ದ ಈ ನೀರಿನ ಪ್ರಕರಣ ಬಗೆಹರಿಯುವುದಕ್ಕೆ ಉಚಿತ ಮಾರ್ಗದರ್ಶನ ಮಾಡಿಕೊಡುವರು ಎಂಬ ಆಶಯ ವಿದೆ. ಆಂಧ್ರನೀಗ ಕೃಷ್ಣಾನದಿಯ ನೀರನ್ನು ಅಧಿಕವಾಗಿ ಬಳಸಿಕೊಳ್ಳುತ್ತಿದ್ದರೂ ಮುಂದಕ್ಕಾದರೂ ನ್ಯಾಯ ತೀರ್ಮಾನ ಬರುವುದೆಂದು ವಿಶ್ವಾಸವಿಡಬಹುದು.

ಸಂಕ್ಷಿಪ್ತ ಸುದ್ದಿಗಳು

ಕೈಮಗ್ಗಗಳ ಉನ್ನತಿ

ಯೋಜನಾ ಮಂತ್ರಿಯಾಗಿ ಪಂಡಿತ ನೆಹರುರವರ ಕೃಪೆಯನ್ನು ಉಳಿಸಿಕೊಂಡವರು ಶ್ರೀ ಗುಲ್ಜಾರೀಲಾಲನಂದಾರವರು ಇವರು ಈಗ ಯೋಜನಾ ಶಾಖೆಯೊಡನೆ ಕೂಲಿಗಾರ ಶಾಖೆಯನ್ನೂ ನಿರ್ವಹಿಸುತಿದ್ದಾರೆ. ಈ ಎರಡು ಶಾಖೆಗಳ ನಡುವೆ ಪೂರ್ವಾಪರ ಸಂಬಂಧವಿಲ್ಲವಾದರೂ ಕೂಲಿಗಾರರಿಂದಲೇ ಯೋಜನೆಗಳ ಯಶಸ್ವಿಯೂಗುತ್ತವೆಂಬುದನ್ನು ಮರೆಯಬಾರದು. ಕೈಮಗ್ಗಗಳಲ್ಲಿ ಆಧುನಿಕ ವಿಜ್ಞಾನ ಹಾಗೂ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದಿವರ ಅಭಿಪ್ರಾಯ. ಇದರಿಂದ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವವನ್ನುಳಿಸಿಕೊಂಡು ಬಂದ ಕೈಮಗ್ಗಗಳಿಗೆ ಹೊಸ ಜೀವಕಳೆಯಾಗಬಹುದೆಂದು ಅವರ ಅಭಿಪ್ರಾಯ.

ದುರದೃಷ್ಟ ಯಾರದು?

ಮಾಜಿ ಗವರ್ನರ ಜನರಲ್ ರಾಜಗೋಪಾಲಾಚಾರಿ ಹೆಚ್ಚು ಕಮ್ಮಿ ತಾವೊಬ್ಬರಲ್ಲಿ ಒಬ್ಬರೆಂದು ಈಗ ತಿಳಿಯಲಾಗುತ್ತಿರುವ ವ್ಯಕ್ತಿ. ತುಂಬ ವಿಚಾರ ಮಾಡುವ ಪ್ರಾಯ:—ಆವಶ್ಯಕತೆಗಳು ದಾಟಿದವೆಂದೆ ಮೇಲೆ ಇವುಗಳ ಬಗ್ಗೆ ಚಿಂತಿಸಲು ಯಾರೂ ಕಷ್ಟಪಡಬೇಕಾಗಿಲ್ಲ. ಇವರೀಗ ಕಟುಸತ್ಯವನ್ನೇ ಆಡತೊಡಗಿರುವುದರಿಂದ ಹೆಚ್ಚಿನವರ ಅಪಕೃಪೆಗೆ ಒಳಗಾಗಿದ್ದಾರೆ. ಸಂವಿಧಾನವು ಕಲ್ಯಾಣರಾಷ್ಟ್ರ ಸ್ಥಾಪನೆಯನ್ನು ಹೇಳುತ್ತದೆ; ಸಮಾಜವಾದಿ ಮಾದರಿಯ ಸಮಾಜರಚನೆಯನ್ನಲ್ಲ ಎಂದಿವರು ಮೂಲವನ್ನೇ ಕೆದಕ ತೊಡಗಿದ್ದಾರೆ. ಆದರೆ, ಅವರ ಮಾತು ಇದೀಗ ಕಾಂಗ್ರೆಸ್ಸಿನ ಮೇಲೆ ಯಾವ ಪರಿಣಾಮವೂ ಮಾಡಲಾರದಂತಹ ಮನಸ್ಥಿತಿ ಬಂದೊದಗಿದೆ. ಇದು ದೇಶದ ದುರದೃಷ್ಟವೆ ಜಥವಾ ರಾಜಾಜಿಯದು ಮೂರ್ಖತ್ವ?

ಚಿಕ್ಕ ಪತ್ರಿಕೆಗಳು ಬೆಳೆಯಬೇಕು

ಗ್ರಾಮಾಂತರ ಪ್ರದೇಶದ ಜನರ ಆವಶ್ಯಕತೆಗಳನ್ನು ಪೂರೈಸುವಂತೆ ಪ್ರಾದೇಶಿಕ ಭಾಷೆಗಳಲ್ಲಿ ಚಿಕ್ಕ ಪತ್ರಿಕೆಗಳು ಹೆಚ್ಚಾಗಿ ಬೆಳೆಯಬೇಕು ಎಂಬುದು ಕೇಂದ್ರ ಸುದ್ದಿ ಹಾಗೂ ಪ್ರಸಾರ ಮಂತ್ರಿ ಡಾ. ಬಿ. ವಿ. ಕೇಸ್ಕರರ ಅಭಿಪ್ರಾಯ. ದೊಡ್ಡ ಪತ್ರಿಕೆಗಳ ಕೈಯಲ್ಲಿ ಇದ್ದ ಬದ್ದ ಒಂದಿರಡು ಚಿಕ್ಕವು ಉಸಿರು ಹಿಡಿಯುವುದೇ ಕಷ್ಟವಾಗಿರುವಾಗ, ಇದು ಹೇಗೆ ಸಾಧ್ಯವೆಂಬುದರ ಬಗ್ಗೆ ಅವರು ತಿಳಿಸಿದ್ದು ಸ್ಪಷ್ಟವಾಗಿ ಗಮನಪೂರ್ವಕವಾಗಿದಂತೆ ತೋರಲಿಲ್ಲ. ಸಣ್ಣ ಮೊತ್ತುಗಳನ್ನು ಸಂಗಿಯೇ ದೊಡ್ಡ ಮೊತ್ತುಗಳು ಬದುಕುವುದೆಂಬ ತಿಮಿಂಗಿಲ ನ್ಯಾಯವು ಪತ್ರಿಕಾಸ್ವಪಂಚದಲ್ಲಿ ಮಾಡುವ ಪ್ರಭಾವದ ಅರಿವಿಲ್ಲದಿದ್ದುದರಿಂದಲೇ ಅವರು ಹಾಗೆಂದಿರಬೇಕು.!

ವಚನಕಾರರು ನಾವು...

ಚೀನಾವು ಇನ್ನೂ ಆಕ್ರಮಣ ಮಾಡಿದರೆ, ಕೋಟಾಟ ಹೂಡಬೇಕಾಗುವುದು; ಭಾರತದ ವಾಯುಸೀಮೆಯನ್ನು ಉಲ್ಲಂಘಿಸಿದ ಯಾವುದೇ ವಿಮಾನವನ್ನು ಗುಂಡಿಕ್ಕಿ ಕೆಡಹಬಹುದು ಎಂದು ಮುಂತಾಗಿ ಪ್ರಧಾನಿ ನೆಹರು ಲೋಕಸಭೆಯಲ್ಲಿ ಸಾರಿದರು. ಅಂದಿನಿಂದಿನವರೆಗೂ ನಾವು, 'ವಚನ ಕಾರ' ರೆಂಬುದಕ್ಕೆ ಸಾಕಷ್ಟು ಪುರಾವೆನೀಡಬಲ್ಲ ವರ್ತನೆಯನ್ನು ತೋರಿಸಿದ್ದೇವೆ. 'ದೇಶದ ಜನತೆಯ ಮೇಲೆ ಹೂಡಿದ ಒಂದಾಯ' ವೆಂದು ವರ್ಣಿಸಿದ ಕೇಂದ್ರ ಸರಕಾರಿ ನೌಕರರ ಸಂಪಿನ ಕಾಲದಲ್ಲಿ ಮತ್ತು ಸಂಪು ಹೂಡಿದವರ ಮೇಲೆ ಜೆಗೆದುಕೊಂಡ ಕಾರ್ಯಕ್ರಮಗಳಲ್ಲಿ ಇದು ಮತ್ತಷ್ಟು ವ್ಯಕ್ತಪಟ್ಟಿದೆ. ನಮ್ಮ ಮಾತಿಗೆ ನಾವೇ ಮನ್ನಣೆಯಿಯದೆ ಹೋದರೆ, ಚೀನಿಯಾದರೂ ಬೇರೆ ಯಾರಾದರೂ ಏಕೆ ಮನ್ನಿಸಬೇಕು?

ಯಾವುದನ್ನು ಆರಿಸಿಯಾರು?

ಮುಂದಿನ ವರ್ಷದಿಂದ ಸರಕಾರಿ ಪೌಢಿಕಲ್ ಕಾಲೇಜುಗಳಿಗೆ ಪ್ರವೇಶ ನೀಡುವಾಗ ಶಿಕ್ಷಣಾನಂತರ ಐದು ವರ್ಷಗಳ ಕಾಲ ಸರಕಾರಿ ನೌಕರಿ ಮಾಡುವಂತೆ ವಿದ್ಯಾರ್ಥಿಗಳಿಂದ ಲೇಖಿ ಬರೆದುಕೊಡುವಂತೆ ವ್ಯವಸ್ಥೆ ಮಾಡಲಾಗುವುದೆಂದೂ ಇಂತಹ ಸೇವೆ ಸಲ್ಲಿಸಲು ನಿರಾಕರಿಸುವವರು ರೂ. ೨೫೦೦ ದಂಡ ತೆರಬೇಕಾಗುವುದೆಂದೂ ಮೈಸೂರು ಸರಕಾರ ನಿಯಮ ಮಾಡುವುದೆಂದು ತಿಳಿಯುತ್ತದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಅಭಾವವನ್ನು ನೀಗಿಸಬಹುದೆಂದು ಸರಕಾರದ ಆಲೋಚನೆ! ನಗರಗಳಲ್ಲಿ ಐವೇ ತಿಂಗಳುಗಳಲ್ಲಿ ಈ ೨೫೦೦ ಸಂಪಾದನೆ ಮಾಡುವ ಧೈರ್ಯವಿದ್ದವರು ಹಳ್ಳಿಯಲ್ಲಿ ಐದು ವರ್ಷ ಕೊಳೆಯುವರೆ? ಹಣದಿಂದ ವೈದ್ಯರ ಅಭಾವ ದೂರವಾಗದು ತಾನೆ?

ತೃತೀಯ ಯೋಜನೆ

ಮೈಸೂರು ರಾಜ್ಯದ ತೃತೀಯ ಪಂಚವಾರ್ಷಿಕ ಯೋಜನೆಯು ಮೊತ್ತವೆಷ್ಟು ಎಂಬುದು ಇನ್ನೂ ಅಂತಿಮವಾಗಿ ತೀರ್ಮಾನವಾಗಿಲ್ಲ. ಸದ್ಯ ಸರಕಾರವು ರೂ. ೩೫೦ ಕೋಟಿಯ ಪ್ರಮಾಣವನ್ನು ನಿಗದಿ ಮಾಡಿದೆ. ಕೇಂದ್ರವು ಮುಂದಿನ ತಿಂಗಳಲ್ಲಿ ನಿಗದಿ ಮಾಡುವ ಮೊತ್ತವನ್ನು ತಿಳಿದು ಆದಕ್ಕೆ ಸರಿಯಾಗಿ ರಾಜ್ಯ ಸರಕಾರದ ಪಾಲನ್ನು ಕೂಡಿಸಲಾಗುವುದೆಂದೂ ಈ ಮೊತ್ತವು ನೂರ ಹತ್ತು ಕೋಟಿ ರೂಪಾಯಿಯಿರಬಹುದೆಂದು ಊಹಿಸಲಾಗಿದೆ. ದೇಶದ ಯೋಜನೆಯ ಪ್ರಮಾಣಕ್ಕೆ ಹೊಂದಿಕೊಂಡು, ರಾಜ್ಯದ ಯೋಜನೆಯು ಕರಡಿನಲ್ಲಿ ಕಡಿತವಾಗುವುದೆಂದು ಯೋಜನಾ ಆಯೋಗವು ರಾಜ್ಯ ನಿಯೋಗಕ್ಕೆ ವಿವರಣೆಯಿತ್ತಿದೆ. ಕೃಷ್ಣಾ ಮೇಲ್ದಂಡೆಯ ನೀರಾವರಿ ಯೋಜನೆಯನ್ನು ಸಾಧ್ಯವಾದರೆ, ಈ ಯೋಜನೆಯಲ್ಲಿ ಸೇರಿಸುವ ನಿರೀಕ್ಷೆ ಇದೆ.

ಅಲ್ಲಲ್ಲಿಯ ಸುದ್ದಿಸಾರ

೪೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಣಿಪಾಲ.

ಕನ್ನಡಿಗರಿಗೆಲ್ಲ ಆಮಂತ್ರಣ.

ಉಡುಪಿಯಲ್ಲಿ ಇದೇ ದಶಂಬರ ತಿಂಗಳ ಕೊನೆಯಲ್ಲಿ ಕನ್ನಡದ ಪ್ರಸಿದ್ಧ ಕಾದಂಬರಿಕಾರ ಶ್ರೀ ಅ. ನ. ಕೃಷ್ಣರಾಯರ ಹಿರಿತನದಲ್ಲಿ ನಡೆಯಲಿರುವ ೪೫ನೆಯ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಕನ್ನಡಿಗರನ್ನೆಲ್ಲ ಸಾಹಿತ್ಯ ಸಪ್ತಿಹಿಯು ಅತ್ಯಾದರದಿಂದ ಬರಮಾಡಿಕೊಳ್ಳುವುದು.

ಆಧುನಿಕ ಉಡುಪಿಯ ಕಾರಣ ಪುರುಷರೆನಿಸುವ ಡಾ| ತೋನ್ಸೆ ಮಾಧವ ಪೈ ಅವರ ಅಧ್ಯಕ್ಷತೆಯಲ್ಲಿ ಸಂಘಟಿತವಾಗಿರುವ ಸ್ವಾಗತ ಸಮಿತಿಯು ಸಮ್ಮೇಳನಕ್ಕೆ ಬರುವ ಅತಿಥಿ ಅಭ್ಯಾಗತರನ್ನು ಅತ್ಯಂತ ಸಂಭ್ರಮದಿಂದ ಕರೆಸಿಕೊಳ್ಳುವುದು.

ಮಣಿಪಾಲ ಉಡುಪಿಯ ಹೊರವಲಯದಲ್ಲಿರುವ ಒಂದು ವಿದ್ಯಾನಗರವಾಗಿದೆ. ಒಂದು ಕಡೆ ಪಡುಗಡಲಿನ ಭವ್ಯದೃಶ್ಯ; ಇನ್ನೊಂದು ಕಡೆ ನೋಡಿದರೆ ಸಹ್ಯಾದ್ರಿಯ ಜೆಲುವು; ಸುತ್ತಲೂ ಹಸಿರು ಗುದ್ದು, ತೋಟ, ಬಯಲು. ಇಂಥ ರಮಣೀಯ ಗ್ರಾಮಾಂತರದಲ್ಲಿ ನಗರದ ಎಲ್ಲ ಸೌಕರ್ಯಗಳನ್ನೂ ಒಳಗೊಂಡ ವಿದ್ಯಾರ್ಥಿ ನಿಲಯಗಳನ್ನು ಪ್ರತಿನಿಧಿ.ಆತಿಥ್ಯ.ಸಂದರ್ಶಕರ ವಸತಿಗಾಗಿ ತೆರೆಯಲ ಮಾಡಲಾಗಿರುವುದು.

ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧರಾದ ಅನೇಕ ಲೇಖಕರು ಸಮ್ಮೇಳನಕ್ಕೆ ಬರುವ ನಿರೀಕ್ಷೆ ಇದೆ. ಸರ್ವಶ್ರೀ ಅ. ನ. ಕೃ., ಕೀ. ರಂ. ಶ್ರೀ. ದ. ರಾ. ಬೇಂದ್ರೆ, ಶಿವರಾಮ ಕಾರಂತ, ಕೃಷ್ಣಮೂರ್ತಿ ಪುರಾಣಿಕ, ಎಲ್. ಎಸ್. ಶೇಷಗಿರಿ ರಾವ, ಡಾ| ಆರ್. ಸಿ. ಹಿರೇಮಠ, ಜೆನ್ನವೀರಿ ಕಣವಿ, ದಿನಕರ ದೇಸಾಯಿ, ಸು. ರಂ. ಯಕ್ಕುಂಡಿ, ಜಿ. ಎಸ್. ಶಿವರುದ್ರಪ್ಪ, ಕುಮ್ಕಾರ ಕೆಂಪಣ್ಣ ರೈ; ಬಿ. ಎಚ್. ಶ್ರೀಧರ, ಸೇಡಿಯಾಪು ಮುಂತಾದ ಅನೇಕ ಖ್ಯಾತನಾಮ ಸಾಹಿತಿಗಳು, ವಿಮರ್ಶಕರೂ, ಸಮ್ಮೇಳನದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಬರುವ ನಿರೀಕ್ಷೆಯಿದೆ. ಕನ್ನಡದ ಕಾದಂಬರಿಗಳು, ಕನ್ನಡದ ಗದ್ಯ ಸಾಹಿತ್ಯ ಮತ್ತು ಕನ್ನಡದ ಮಕ್ಕಳ ಸಾಹಿತ್ಯ — ಈ ಮೂರು ವಿಷಯಗಳ ಕುರಿತು ವಿದ್ವಾಂಸರು ಸಾಹಿತ್ಯ ಚರ್ಚೆ ನಡೆಸುವಂತೆ ವಿಚಾರಿಟು ಮಾಡಲಾಗಿದೆ.

ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಗಳ ಪ್ರದರ್ಶನವೂ, ಸಂಗೀತ, ಕಾವ್ಯ ವಾಚನ, ನಾಟಕ ಇತ್ಯಾದಿ ಉತ್ತಮ ಮನರಂಜಕ ಯೋಜನೆಗಳೂ ಇವೆ.

ಸ್ವತಿನಿಧಿಗಳಾಗ ಬಯಸುವವರು ಪತ್ರ ವ್ಯವಹಾರ ಮಾಡಬಹುದು ಎಂದು ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸ ಭಟ್ಟರು ತಿಳಿಸುತ್ತಾರೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 342/1960.

ದಾಸಾಡಾಯ — ವಾದಿ.

ಮತ್ತು

ನಾರಾಯಣ ಪೂಜಾರಿ ಕೂಡಾ—ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ— ಕೊಕ್ಕು ಪೂಜಾರಿ, ಮುದರ ಪೂಜಾರಿಯ ಆಳಿಯ, ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:

ವಾದಿಯು ಪ್ರತಿವಾದಿರ ಮೇಲೆ ನೂಡಿದ ಮೇಲ್ಕಂಡ ದಾವೆಯು ತಾರೀಕು 29—11—60ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು.

(By order of the Court)

P. N. Krishnamurthi Rao,
Advocate for Plaintiff.

Udipi, 15—11—60.

ಮಕ್ಕಳ ದಿನಾಚರಣೆ—ಯು ತಾ. 14ರಲ್ಲಿ ಉಡುಪಿ ಸರಕಾರೀ ಆಸ್ಪತ್ರೆಯಲ್ಲಿ ಆ ನೆರೆ ಅಸಿಸ್ಟಾಂಟ್ ಸರ್ಜನ್ ಡಾ| ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಹಿಳಾ ಸಮಾಜದ ಕಾರ್ಯದರ್ಶಿನಿ ಶ್ರೀಮತಿ ಅನುಸೂಯಾ ಬಿ. ಸೆಟ್ಟಿಯವರು ಸುಮಾರು 80 ಬಡ ಮಕ್ಕಳಿಗೆ ಉಡಿಗೆ ತೊಡಿಗೆಗಳನ್ನೂ ಸಿಹಿತಿಂಡಿಯನ್ನೂ ವಿತರಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಸರಕಾರೀ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಡಾ| ಶ್ರೀನಿವಾಸಯ್ಯನವರು ಕೃತಜ್ಞತೆಗಳನ್ನರ್ಪಿಸಿದರು.

ಉಡುಪಿ ಕಲಾಪ್ಯಾಂದದ ವರ್ಧಂ

ತಿ — ಯುತಾ. 12ರಂದು ದಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಜಿ. ಎಸ್. ನಾಗಮೋತಿಯವರ ಹಿರಿತನದಲ್ಲಿ ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿ ನೆರವೇರಿತು. ಶ್ರೀ ಪಿ. ವಿಷ್ಣು ಮೂರ್ತಿ ಭಟ್ಟರಿಂದ ಭಾರತವಾಚನ, ಶ್ರೀ ಎಸ್. ಕೃಷ್ಣ ಭಟ್ಟರಿಂದ ಉಷಾನ್ಯಾಸ, ಬಹುಮಾನ ವಿತರಣೆ, ಅಧ್ಯಕ್ಷರಿಂದ ಕಲೆಯ ಕುರಿತು ಭಾಷಣಗಳಾದುವು. ರಾತ್ರಿ ನಾಟಕಾಭಿನಯ ವಿತ್ತು. ಮರುದಿನ ಪರ್ಯಾಯ ಶ್ರೀ ಪುತ್ತಿಗೆ ಮಠದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಕೆ. ಸುಬ್ಬಯ್ಯ ಪುರಾಣಿಕರಿಂದ ಯಕ್ಷಗಾನ ಕಲೆಯ ಕುರಿತು ಭಾಷಣ ನಡೆಯಿತು ಅನಂತರ 'ಭೀಷ್ಮವಿಜಯ' ಎಂಬ ಯಕ್ಷಗಾನ ಕೂಟವು ಪ್ರಸಿದ್ಧ ಅರ್ಥಧಾರಿಗಳ ಕೂಟದಿಂದ ನೆರವೇರಿತು. ಶ್ರೀ ಕೆ. ಯಾದವಸರಳಾಯರು ಕೃತಜ್ಞತೆಗಳನ್ನರ್ಪಿಸಿದರು.

ಧನ್ವಂತರೀ ಪೂಜೆಯು—ಉಡುಪಿಯ ಕವಿರಾಜ ದಾವಖಾನೆಯಲ್ಲಿ ತಾ. 16ರಂದು ಡಾ| ಪಿ. ಆರ್. ನಾಯಕರ ಹಿರಿತನದಲ್ಲಿ ನೆರವೇರಿತು. ಕವಿರಾಜ ಎಂ. ಜಿ ಶೆಣೈರವರು ಎಲ್ಲರನ್ನೂ ಸ್ವಾಗತಿಸಿದರೆಲ್ಲಾ ಹಾಜರಿದ್ದ ವೈದ್ಯರನ್ನು ಸನ್ಮಾನಿಸಿ ಗೌರವಿಸಿದರು.

ವೆಸ್ತು ಪ್ರದರ್ಶನ—ತಾ. 20-11-60ಕ್ಕೆ ಕಾರ್ಕಳದಲ್ಲಿ ಜರಗುವ ರೈತ ಸಮ್ಮೇಳನದ ಆಂಗವಾಗಿ ಜಿಲ್ಲಾಧಿಕಾರಿಗಳು ರೈತ ಬಂಧುಗಳಿಗೆ ಯೋಗ್ಯವಾದ ಕೃಷಿ ಪ್ರದರ್ಶನ ಒಂದನ್ನು ಉದ್ಘಾಟಿಸುವರು. ಇದರಲ್ಲಿ ರೈತರಿಗೂ ಸಾರ್ವಜನಿಕರಿಗೂ ಯೋಗ್ಯವಾದ ಕೃಷಿ, ನೀರಾವರಿ, ಒಳ್ಳೆಯ ತಳಿ, ಮತ್ಸ್ಯ ವ್ಯವಸಾಯ ಗುಡಿಕೈಗಾರಿಕೆ, ಮಿತ ಸಂತಾನ, ಆರೋಗ್ಯಪಾಲನೆ ಇತ್ಯಾದಿ ಹಲವು ವಿಷಯಗಳಿಗೆ ಸಂಬಂಧಿಸಿದ ವಿಷಯಗಳಿರುವವು ಸರ್ವರೂ ಬಂದು ಸಹಕಾರ ಪ್ರೋತ್ಸಾಹ ನೀಡಬೇಕಾಗಿ ಕಾರ್ಕಳ ತಹಸೀಲ್ದಾರರು ಅಪೇಕ್ಷಿಸುತ್ತಾರೆ.

ಯಕ್ಷಗಾನ—ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರ ಪಲ್ಲ ಇದೇ ತಾ. 19ರಂದು "ಕರ್ಣಾರ್ಜುನ" ಎಂಬ ಯಕ್ಷಗಾನ ಪ್ರದರ್ಶನವೊಂದು ಶ್ರೀ ಕೇರಿಕ್ಕಾಡು ಮೂಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತ್ತು.

ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯು ಇತ್ತೀಚೆಗೆ ಶ್ರೀ ಎನ್. ವಿ. ಕಾಮತರ ಅಧ್ಯಕ್ಷತೆಯಲ್ಲಿ ಜರಗಿದಾಗ ಡಿ. ಮುನ್ಸಿಫ್ ಜಿ. ಎಸ್. ನಾಗಮೋತಿಯವರು ನೆಪರೂ ನೃತ್ಯತ್ತ್ವದ ಕುರಿತು ಭಾಷಣವಿತ್ತರು. ಕಾರ್ಯದರ್ಶಿ ಬಿ. ಜಗನ್ನಾಥ ಹೆಗ್ಡೆಯವರು ವಂದನಾರ್ಪಣೆ ಮಾಡಿದರು.

ವೊಳಲಿಯಲ್ಲಿ ಜಾನುವಾರು ಜಾತ್ರೆ ಬಂಟ್ವಾಳ ತಾಲೂಕಿನ ಪೊಳಲಿಯಲ್ಲಿ ಇದೇ ತಾ. 19ರಿಂದ 28ರ ವರೆಗೆ ಹತ್ತು ದಿನಗಳ ಜಾನುವಾರು ಜಾತ್ರೆಯೊಂದನ್ನು ಏರ್ಪಡಿಸಲಾಗಿದೆಯೆಂದೂ ಉತ್ತಮವಾದ ಜಾನುವಾರಿಗೆ ರೂ. 500ರ ಬಹುಮಾನವಿರಿಸಲಾಗಿದೆಯೆಂದೂ ಸಂಬಂಧಪಟ್ಟವರು ಪ್ರದರ್ಶನದಲ್ಲಿ ಭಾಗವಹಿಸಿ ಸಹಕರಿಸಬೇಕೆಂದೂ ಮಂಗಳೂರಿನ ಅಸಿ. ಕಮಿಷನರ್ ಶ್ರೀ ಎಮ್. ಎಸ್. ಕುಲಕರ್ಣಿಯವರು ತಿಳಿಸುತ್ತಾರೆ. ಇದು ಕುಳುಕುಂದ ಜಾನುವಾರು ಸಂತೆ ಮುಗಿದೊಡನೆ ಹಾಗೂ ಸೀತಾನದಿ ಜಾನುವಾರು ಸಂತೆ ಪ್ರಾರಂಭವಾಗುವ ಮೊದಲು ಹಾಗೂ ದಾರಿಯಲ್ಲಿ ಏರ್ಪಾಡಾಗಿರುವುದರಿಂದ ಪ್ರದರ್ಶನಕ್ಕಾಗಿ ತರುವವರಿಗೆ ಅತ್ಯನುಕೂಲವಾಗಿರುವುದೆಂದೂ ಭಾವಿಸಲಾಗಿದೆ.

ಎಸ್. ಆರ್. ಎಸ್. ಹೋಮ್ ಯೂನಿಯನ್ ಸೋಸಿಯಲ್ ಮಂಗಳೂರು—ಕೆಲವು ವರ್ಷಗಳಿಂದ ನೀತಿ ಹೋಗಿದ್ದ ಸೋಸಿಯಲ್ ಸಮಾರಂಭವು ಭವನದ ನಿವಾಸಿಗಳಿಂದ ತಾ. 21—11—60 ರಂದು ಶ್ರೀ ಕೆ. ಸುಂದರರಾಮ ಶೆಟ್ಟಿ, ಬಿ.ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಿಗಿಸಲ್ಪಟ್ಟಿತು. ಎಲ್ಲಾ ಕಾಲೇಜುಗಳ, ಶಾಲೆಗಳ ಹಲವಾರು ಲೆಕ್ಚರರು, ಉಸಾಧ್ಯಾಯರು, ಮಹಾಜನರು, ಮಹಿಳೆಯರು ಹಾಗೂ ಭವನದ ಹಳೇ ನಿವಾಸಿಕರೂ ಕಿಕ್ಕಿರಿದು ಹಾಜರಿದ್ದರು. ಭವನದ ಹಾಲ್‌ನಲ್ಲಿ ಲಘು ಫಲಾಹಾರವಾದ ಬಳಿಕ ಸಾರ್ವಜನಿಕ ಸಭೆ ಶ್ರೀ ವೆಂಕಪ್ಪ ಪೂಂಜ ಹಾಲಿನಲ್ಲಿ ಜರಿಗಿತು. ಹೆಣ್ಣು ಮಕ್ಕಳ ಪ್ರಾರ್ಥನೆ ತರುವಾಯ ಶ್ರೀ ಪಿ.ಎಸ್. ತಿಮ್ಮಪ್ಪ ಸೆಟ್ಟರು ಅತಿಥಿಗಳನ್ನು ಸ್ವಾಗತಿಸುತ್ತಾ ಈಗಿನ ಸನ್ನಿವೇಶ ಸೃಷ್ಟಿಸಿದ ಮೂಲ ಸೂತ್ರದಂತೆ ಭವನದ ತರುಣರನ್ನು ತರಬೇತಿಮಾಡಿಸುವ ಹಲವಾರು ಯೋಜನೆಗಳನ್ನು ನಡೆಸಿದ ಕಾರ್ಯಗಳನ್ನು ವಿವರಿಸಿ ಈ ಭವನದ ಸಾರಿಗಟ್ಟಲೆಯಲ್ಲಿ ಹೊರ ಹೋಗಿರುವ ಹಳೆ ನಿವಾಸಿಕರು ಸಭಾಭವನದ ಏಳಿಗೆಗೆ ದುಡಿಯಬೇಕಾಗಿಯೂ ಆಗಾಗ ಭವನಕ್ಕೆ ಭೇಟಿಕೊಟ್ಟು ನಿವಾಸಿಕರೊಡನೆ ಬೆರೆತು ಅವರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕಾಗಿಯೂ ಕೇಳಿಕೊಂಡರು ಅಧ್ಯಕ್ಷರ ನುಡಿತ್ತು ಭವನದ ಸ್ವಚ್ಛತಾಚಿನ ಮಾಡುವ ಶ್ರೀ ರಘುರಾಮ ಹೆಗ್ಡೆ, ಎಂ. ಎ. ಲೆಕ್ಚರರ್ ಗವರ್ನಮೆಂಟ್ ಕಾಲೇಜು ಇವರ ಪರಿಚಯವನ್ನು ಮಾಡಿಕೊಟ್ಟರು ಶ್ರೀ ಹೆಗ್ಡೆಯವರು ಸ್ವಚ್ಛತಾಚಿನ ಮಾಡುತ್ತಾ ತಾನು ಭವನದಲ್ಲಿ ಎಂಟು ವರ್ಷ ಪಡೆದ ಅನುಭವವನ್ನೂ ಸ್ವಯೋಜನೆಯನ್ನೂ ವಿವರಿಸಿದರು ಜತೆ ಕಾರ್ಯದರ್ಶಿ ಶ್ರೀ ಎಂ. ಎಸ್. ಬಲ್ಲಾಳರು ಸಮಯೋಚಿತ ಉತ್ತರ ಕೊಟ್ಟರು. ನಂತರ ಅಧ್ಯಕ್ಷರು ಭಾಷಣ ಮಾಡುತ್ತಾ ಈ ಭವನದಿಂದ ಹೊರ ಹೋಗಿರುವ ಈ ಭವನದ ಮತ್ತು ಸಮಾಜದ ಏಳಿಗೆಗೆ ದುಡಿಯುವುದು ಏನೂ ಸಾಲದೆಂದೂ ಈ ಸಂಸ್ಥೆಯನ್ನಿಂಟು ಮೂರಿ ನಡೆಸಿಕೊಂಡು ಬರುವ ಅಜೀವಾರು ಸಮಾಜದ ನಾಯಕರು ಒಬ್ಬೊಬ್ಬರೇ ಕೆಲ್ಸಗಳನ್ನು ಮಾಡಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಭವನದ ಮತ್ತು ಸಮಾಜದ ಏಳಿಗೆಗೆ ದುಡಿಯುವರೆ ಮುಂದೆ ಬರಬೇಕೆಂದೂ ಹೇಳಿ ಭವನದ ನಿವಾಸಿಕರಿಗೆ ಸಮಯೋಚಿತ ಬುದ್ಧಿಮಾತುಗಳ ಹೇಳಿದರು. ಬಳಿಕ ಮನರಂಜನಾ ಕಾರ್ಯಕ್ರಮಗಳು ಜರಿಗಿದವು.

ನಾಟಕ ಪ್ರದರ್ಶನ—ತಾ. 9ರಂದು ಉಡುಪಿ ವರದೇಂದ್ರ ಕಲಾ ಮಂದಿರದಲ್ಲಿ ಸ್ಥಳೀಯ ಶ್ರೀ ರಾಜಕಮಲ್ ಥಿಯೇಟರ್‌ನವರು ಬೇಡರ ಕಣ್ಣಪ್ಪ ಎಂಬ ನಾಟಕವನ್ನು ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿದರು.

ಉ. ಕ. ಜಿಲ್ಲೆಯಲ್ಲಿ ದ. ಕನ್ನಡದ ಡಾ| ಟಿ. ಎಮ್. ಎ. ಪೈಗಳಿಗೆ ಸತ್ಕಾರ—ಸಿಂಡಿಕೇಟ್ ಬ್ಯಾಂಕಿನ ವೈಸ್‌ಚೆಯರ್‌ಮೆನ್ ಹಾಗೂ ಮಣಿಪಾಲ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳು ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಪ್ರವಾಸವನ್ನು ಕೈಗೊಂಡಿದ್ದು ಹೋದಲ್ಲೆಲ್ಲಾ ಸ್ವಾಗತ ಸತ್ಕಾರ ಗೌರವನಗಳನ್ನು ಪಡೆದಿರುತ್ತಾರೆ. ಶಿರಾಲಿಯಲ್ಲಿ ಜನತಾ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣಗಳನ್ನಿತ್ತರಲ್ಲದೆ, ಪಂಚಾಯಕ ಹಾಗೂ ನಾಗರಿಕರ ಪರವಾಗಿ ಸತ್ಕಾರ ನಡೆಯಿತು. ಭಟ್ಕಳದಲ್ಲಿ ಚಿತ್ರಾಪುರ ಮಠದ ಮೆನೇಜರ್ ಶ್ರೀ ಎಸ್. ಬಿ. ನಾಗರಕಟ್ಟೆ ಅವರ ಅಧ್ಯಕ್ಷತೆಯಲ್ಲಿ ಡಾ. ಪೈಗಳ ಗೌರವಾರ್ಥ ಸಭೆ ಜರಿಗಿ ಡಾ. ಪೈಗಳು ಸಾಧಿಸಿದ ಕಾರ್ಯಗಳನ್ನು ಪ್ರಶಂಸಿಸಿ ಭಾಷಣಗಳು ನಡೆದುವು. ಡಾ. ಪೈಗಳು ಹೊನ್ನಾವರಕ್ಕೆ ತರಲಿ ಆಲ್ಲಿಂದ ಗೆರೆಸೊಪ್ಪಾಕ್ಕೆ ಹಲವು ಪ್ರಮುಖರೊಂದಿಗೆ ತೆರಳಿದರು. ಆಲ್ಲಿ ಫೋರೆಸ್ಟ್, ಬರ್ಗ್ಲೆಯ ವಿಶಾಲದ ವನರಾಶಿದಲ್ಲಿ ಆಧ್ಯರನೇಕರ ಪ್ರತಿನಿಧಿಕ ಸಭೆಯಲ್ಲಿ ಶರಾವತಿ ಕೊಳ್ಳದ ಸುಪ್ತ ಸಂಪತ್ತಿನ ಸದ್ವಿನಿಯೋಗದ ಕುರಿತು ಶ್ರೀ ಜಿ ಆರ್. ಪಾಂಡೇಶ್ವರರ ಅಧ್ಯಕ್ಷತೆಯಲ್ಲಿ ಕಾರ್ಯ ಯೋಜನೆಯನ್ನು ವಿವರಿಸಿದರು. ಜನತೆಯ ಪರವಾಗಿ ಡಾ. ಪೈಗಳಿಗೆ ಮಾನಪತ್ರಾರ್ಪಣೆ ಆವರ ಮೇಧಾಶಕ್ತಿ ಕಾರ್ಯಶಕ್ತಿಗಳನ್ನು ಕುರಿತು ಹಲವರಿಂದ ಭಾಷಣಗಳಾದುವು. ಅಧ್ಯಕ್ಷರು ಪ್ರಾರಂಭ ಭಾಷಣದಲ್ಲಿ ಡಾ. ಪೈಗಳ 30 ವರ್ಷಗಳ ತಪಸ್ಸಿನ ಫಲವಾಗಿ ಉಡುಪಿ ಇಂದು ಲಕ್ಷ್ಮೀ ಸರಸ್ವತಿಯರ ಮಹಾ ಸಂಗಮ ಸ್ಥಾನವಾಗಿನಿಯೆಂದೂ ಕನ್ನಡನಾಡಿಗೆ ಆವರೊಬ್ಬ ಹೆಮ್ಮೆಯ ಇಂಮತ್ಕರೆಂದೂ ಹೇಳಿದರು. ಡಾ. ಪೈಗಳು ಆಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆ, ಕಾಲೇಜುಗಳು ಈ ಬಗ್ಗೆ ಜನರು ನೂಡಬೇಕಾದ ಅಂಶಗಳ ಕುರಿತು ಮಾತನಾಡಿದರು. ಡಾ. ಪೈಗಳ ಸೂಚನೆಯಂತೆ ಶರಾವತಿ ಪುಲ್ಪಿಪೇಪರ್ಸ್ ಡೆವಲಪ್‌ಮೆಂಟ್ ಏಜೆನ್ಸಿಯೇರ್ಪನ್ ಎಂಬ ಪುಂಡಲಿಯನ್ನು ಸಂಘಟಿಸಲು ಸಮಿತಿಯೊಂದನ್ನೂ ರಚಿಸಲಾಯಿತು.

ಮುದ್ದಣ್ಣ ಸ್ಮಾರಕ ಸಾಹಿತ್ಯೋತ್ಸವವು—ಉಡುಪಿ ಎಂ. ಜಿ. ಎಂ. ಕಾಲೇಜಿನಲ್ಲಿ ತಾ 18 ಮತ್ತು 19ರಂದು ಜರಿಗಿಸಲ್ಪಟ್ಟಿತು. ಮೊದಲದಿನ ಪ್ರಿನ್ಸಿಪಾಲ್ ಎಚ್. ಸೀಂದರಾಯರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಡಾ. ಪ್ರಭುಶಂಕರರವರು ಕಾನೆಂಪರವರ ಕಾವ್ಯ— ಕೃತಿ ಕುರಿತು ಉಸನ್ಯಾಸ ನೂಡಿದರು. ಶ್ರೀ ಜಿ. ಶ್ರೀನಿವಾಸ ರಾಯರು ಕಾನ್ಯವಾಚನ ಗೈದರು. ಎರಡನೆಯದಿನ ಪ್ರೊ| ಎ. ನಾರಾಯಣ ಆಯ್ಯಂಗಾರರ ಅಧ್ಯಕ್ಷತೆಯಲ್ಲಿ ಅಂಡರ್ ವಿಶ್ವವಿದ್ಯಾಲಯದ ತನಿಳು ಪ್ರಾಧ್ಯಾಪಕ ಡಾ. ಜಾನ್ ಮೂರ್ರವರು ತಮಿಳು ಸಾಹಿತ್ಯದಲ್ಲಿ ಪ್ರೇಮ ಕಾವ್ಯಗಳು ಎಂಬ ಕುರಿತೂ ಪ್ರೊ ಕೆ. ಆರ್. ಪಂಡಿತರವರು ವಿದ್ಯೆಯೇ ಜೀವನ ಎಂಬ ಕುರಿತೂ ಭಾಷಣಗಳನ್ನಿತ್ತರು. ಶ್ರೀ ಎಜ್ ಕೆ. ಆರ್. ಮೂರ್ತಿಯವರು ಕಾನ್ಯವಾಚನ ಮಾಡಿದರು ಎರಡೂ ರಾತ್ರಿ ವಿವಿಧ ಮನರಂಜನೆಯ ಕಾರ್ಯಕ್ರಮಗಳೂ ಜರಿಗಿದುವು.

ಹಿರಿಯಡ್ಕ— ಇದೇ ತಾ. 20ರಂದು ಹೊಸತಾಗಿ ತೆರೆಯಲಾದ ಎಲ್. ಎಸ್. ಆಸ್ಪತ್ರೆಯ ಉದ್ಘಾಟನೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಮಾಜಿ ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 347/1960

ರಾಮಕೃಷ್ಣ ನ್ಯಾಯಿಕ — ವಾದಿ

ಮತ್ತು

1. ಮುತ್ತ ನ್ಯಾಯಿಕ, 2. ಯೆಲ್ಲ ನ್ಯಾಯಿಕ— ಪ್ರತಿವಾದಿರು.

1ನೇ ಪ್ರತಿವಾದಿ—ಮುತ್ತ ನ್ಯಾಯಿಕ— ಯೆಲ್ಲ ನ್ಯಾಯಿಕನ ಮಗ—

2 ನೇ ಪ್ರತಿವಾದಿ—ಯೆಲ್ಲ ನ್ಯಾಯಿಕ—1ನೇ ಯವನ ಮಗ ಉಡ್ಪಿ ತಾಲ್ಲು ಪೆರ್ಡೂರು ಗ್ರಾಮದಲ್ಲಿರುವವರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ವಾದಿಯು ನಿಮ್ಮ ಮೇಲೆ ನೂಡಿದ ಮೇಲ್ಕಂಡದಾವೆಯು ತಾರೀಕು 29-11-60ಕ್ಕೆ ನಿಮ್ಮ ಆ ಬೈರು ನೋಟೀಸಿನ ಬಗ್ಗೆ ಯಿಟ್ಟಿದೆಂತ ಈ ಮೂಲಕ ತಿಳಿಯಪಡಿಸೋಣಾಗಿದೆ.

P. N. Krishnamurthi Rao
Advocate for Plaintiff

ಉಡ್ಪಿ, ತಾ. 15—11—60.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಲ್ಲೆವು

ನವಭಾರತ ಪುಸ್ತಕ ಭಂಡಾರ್,ಉಡುಪಿ.

ಬಾಲಹಿತಚಿಂತನೆ

(ಜನೇ ಮುಟದಿಂದ)

ನಡೆಯುತ್ತಿದೆ. ಚಿತ್ರಗಳನ್ನು ಅಧಿಕ ಲೋಕ ಪ್ರಿಯಗೊಳಿಸಲು ಹಿರಿಯ ನಾಯಕರನ್ನೂ ಇವುಗಳಲ್ಲಿ ಭಾಗ ವಹಿಸಲು ಆಮಂತ್ರಿಸಲಾಗುತ್ತಿದೆ. ಪ್ರಧಾನಿ ಜವಾಹರಲಾಲರು ಕೂಡಾ 'ಯಾತ್ರಾ' ಚಿತ್ರದಲ್ಲಿ ಸಹಯೋಗ ನೀಡಿದ್ದಾರೆ.

ಬಾಲ ಸಹಾಯಕ ಸಮಿತಿ

ಬಾಲ ಸಹಾಯಕ ಸಮಿತಿ (Children and Society) ಯು ೧೯೫೨ರಲ್ಲಿ ಬೊಂಬಾಯಿಯಲ್ಲಿ ಸ್ಥಾಪಿತವಾಯಿತು. ಈ ೫೫ ವರ್ಷಗಳಲ್ಲಿ ಬೊಂಬಾಯಿ ರಾಜ್ಯ ಹಾಗೂ ಆಸುಪಾಸುಗಳಲ್ಲಿ ಬಹಳ ಉತ್ತಮ ಸೇವೆಯನ್ನಿದು ಸಲ್ಲಿಸಿದೆ. ಮಹಾ ರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ಯಶವಂತರಾವ್ ಬಿ. ಚವನರಿದರ ಅಧ್ಯಕ್ಷರಾಗಿದ್ದಾರೆ.

ಸಾಮಾನ್ಯ ಬಾಲಕರ ಉನ್ನತಿಗಾಗಿ ಇದು ಕಾರ್ಯನೆರವಗುವುದರೊಡನೆಯೇ ತುಂಟ ಸ್ವಭಾವದ, ಚರಿತ್ರ ಹೀನರಾದ ಮಕ್ಕಳ ಉತ್ಕರ್ಷದಲ್ಲೂ ಈ ಸಮಿತಿಯು ಸ್ಪೃತ್ವವಾಗಿದೆ. ಈ ನಿಧನ ಮಕ್ಕಳು ಸಮಾಜಕ್ಕೆ ಸಮಸ್ಯೆ ಹಾಗೂ ವಿಪದಂತಿದ್ದಾರೆ. ಮಹಿಳಾ ಸಂಘಟನೆಯ ಮತ್ತು ಮನ್ ಖುರ್ತ್‌ಗಳಲ್ಲಿ ಬಾಲ ಶಾಲೆಗಳನ್ನು ತೆರೆದು ಮನೋವೈಜ್ಞಾನಿಕ ಹಾಗೂ ವಿಶೇಷಜ್ಞರ ಮೇಲ್ವಿಚಾರಣೆಯಲ್ಲಿ ಶಿಕ್ಷಣ, ಕ್ರೀಡೆ, ಮನೋರಂಜನೆ, ಚಿಕಿತ್ಸೆ ಹಾಗೂ ಔಷಧಿಗಳು ಪ್ರಯತ್ನ ನಡೆಸುತ್ತಿದೆ. ಸೂಲುಪಿಕೆ, ನೇಯುವಿಕೆ, ಒಡಗಿತನ, ಕಮ್ಮಾರಿಕೆ ಮೊದಲಾದವನ್ನು ಅವರಿಗೆ ಕಲಿಸಿ, ಸ್ವಾವಲಂಬಿಗಳಾಗುವಂತೆ ತೆಸುವ ಸಾಹಸ ಮಾಡುತ್ತಿದೆ. ಕೆಲವ ಹಿಡಿಯಲು ಸಹಾಯವನ್ನೂ ಒದಗಿಸಲಾಗುತ್ತಿದೆ.

ಆಸರಾದಿ ಬಾಲಕರನ್ನು ಪೋಲೀಸರಿಂದ ಕರೆದುಕೊಂಡು ಸಮಿತಿಯು ತನ್ನ 'ಅಮಂಡ್' ಶಾಲೆಯಲ್ಲಿರಿಸಿ, ಅವರ ಪಾಲನೆ—ಪೋಷಣೆಯನ್ನು ಮಾಡುತ್ತಿದೆ. ಮಾನಸಿಕವಾಗಿ ಹಿಂದುಳಿದ ಮಕ್ಕಳ ಆರೈಕೆಯನ್ನು ಬಾಲ ಶಾಲೆಗಳಲ್ಲಿ ನಡೆಸುತ್ತಿದೆ.

ಸೇವಾ ಸಮಾಜಂ

ಮದ್ರಾಸಿನಲ್ಲಿ ೫೬ ವರ್ಷಗಳಿಗೆ ಮೊದಲು ಸೇವಾ ಸಮಾಜಂ (Guild of Service) ಸ್ಥಾಪನೆಗೊಂಡಿತು. ಒಬ್ಬ ಪಾದ್ರಿಯ ಧರ್ಮಪತ್ನಿ ಶ್ರೀಮತಿ ವಾಲರ್ ಇದರ ಸಂಸ್ಥಾಪಕಿ. ದಕ್ಷಿಣ ಭಾರತದಲ್ಲಿ ಬಾಲಕರ ಶಿಕ್ಷಣ, ಆರೋಗ್ಯ-ಮನೋರಂಜನೆಗಳಿಗಾಗಿ ಸಂಸ್ಥೆಯು ಕೇಂದ್ರ, ಬಾಲಶಾಲೆ, ವಿದ್ಯಾಲಯ ಮೊದಲಾದುವನ್ನು ತೆರೆದಿದೆ. ಅನಾಥ ಬಾಲಕ, ಬಾಲಿಕೆಯರಿಗಾಗಿ ಪ್ರತ್ಯೇಕ ಅನಾಥಾಲಯಗಳನ್ನು ಪ್ರಾರಂಭಿಸಿದೆ. ನುಕ್ಕಳ ಎಲ್ಲ ಅವಶ್ಯಕತೆಗಳನ್ನೂ ಇದು ಪೂರೈಸುತ್ತಿದೆ. ಇಲ್ಲಿ ಬೆಳೆದ ಕೆಲವರು ಅನಾಥರು ಈಗ ಉತ್ತಮ ಪದವಿಗಳಲ್ಲಿ ನಿಯುಕ್ತರಾಗಿದ್ದಾರೆ. ಸರ್ವತೋಮುಖ ಬಾಲಕೇಂದ್ರ, ಸೇವಾ ಸಮಾಜಂ ಬಾಲ ಶಾಲೆ, ಬಾಲಿಕಾ ಶಾಲೆ, ಬಾಲ ವಿಹಾರ; ನುಂಗಳಾಕುರು ನರ್ಸರಿ ಶಾಲೆ, ಸೇವಾ ಸಮಾಜಂ ಬಾಲ ಪುಸ್ತಕಾಲಯ ಮೊದಲಾದುವು ಇಡಿ ಮದ್ರಾಸದಲ್ಲಿ ಹೆಸರುವಾಸಿಯಾಗಿವೆ.

ಜೂನಿಯರ್ ರೆಡ್‌ಕ್ರಾಸ್

ಪ್ರಥಮ ಜಾಗತಿಕ ಸಮರಾವಧಿಯಲ್ಲಿ ೧೯೧೪ರಲ್ಲಿ ಈ ಸಂಸ್ಥೆ ರೂಪುಗೊಂಡಿತು. ಕೆನಡಾದ ಕ್ಯೂಬಿಕ್‌ನಲ್ಲಿದು ಮೊತ್ತ ಮೊದಲು ಯೋಜಿತವಾಯಿತು. ಸೈನಿಕರಿಗೆ ಪಟ್ಟೆಕಟ್ಟುವುದೇ ಇದರಪ್ರಾರಂಭಿಕಕೆಲಸ. ಒಂದೇ ವರ್ಷದಲ್ಲಿ ಯುರೋಪಿನಲ್ಲಿ ಇದು ಹರಡಿ ೧೧ ಲಕ್ಷ ಸದಸ್ಯರನ್ನು ಪಡೆಯಿತು. ೧೯೨೦ರಲ್ಲಿ ರೆಡ್‌ಕ್ರಾಸ್‌ನೊಡನೆ ಇದರ ಶಾಖೆಗಳೂ ಪ್ರಪಂಚದಲ್ಲಿ ಜನರಿಸಿದುವು; ಸಂಘವೆ ಅಂತಾರಾಷ್ಟ್ರೀಯ ರೂಪ ಪಡೆಯಿತು.

ಭಾರತದಲ್ಲಿ ೧೯೫೨ರಲ್ಲಿ ಜೂನಿಯರ್ ರೆಡ್‌ಕ್ರಾಸ್ ಪಂಜಾಬದಲ್ಲಿ ಪ್ರಾರಂಭವಾಯಿತು. ಶೀಘ್ರದಲ್ಲೇ ದೇಶದ ಇತರ ಶ್ರಮ ಇದರ ಶಾಖೆಗಳು ಸ್ಥಾಪಿತಗೊಂಡುವು. ಸುಮಾರು ೫೧ ಲಕ್ಷ ಸದಸ್ಯರು ಇಂದು ಇದರಲ್ಲಿದ್ದಾರೆ. ಇವರಲ್ಲಿ ೫ ಲಕ್ಷ ಹೆಮ್ಮಕ್ಕಳು. ಶಾಲೆಗಳ ವಿದ್ಯಾರ್ಥಿಗಳ ಪ್ರಾರಂಭಿಕ ಚಿಕಿತ್ಸೆ, ಅವರ ಆರೋಗ್ಯ ಸಂಬಂಧಿ ಭಿತ್ತಿಪತ್ರ ಮತ್ತು ಧ್ಯೇಯ ಆರೋಗ್ಯದ ಬಗ್ಗೆ ಭಾಷಣ ಬಾಲಕರಿಗೆ ಉಚಿತ ಕ್ಷೇತ್ರ ವಿತರಣೆಗಳೇ ಈ ಸಂಘದ ಸಾಮಾನ್ಯ ಕಾರ್ಯಕ್ರಮಗಳಾಗಿವೆ.

(ಸಂಕಲಿತ)

Notice

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 319/1960

ರಾಮಸ್ವ ಗೌಡ — ವಾದಿ.

1. ರಾಮಯ್ಯ ಯೂನೆ ಬಚ್ಚ ಗೌಡ, 2. ಎರಿಯಂಡ ಗೌಡ—ಪಾದಿಯರ್ಥ, ರಾಮಸ್ವ ಗೌಡರ ಮಕ್ಕಳು— ಕಾಸರಗೋಡು ತಾಲೂಕು ನೆಟ್ಟಣಿಗೆ ಗ್ರಾಮದ ಹಾದಿಯರ್ಥ — ಪ್ರತಿವಾದಿಗಳು.

—ಪ್ರತಿವಾದಿರಿಗೆ ತಿಳಿಸುವುದೇನೆಂದರೆ—

ದಿ. ಪೊನ್ನ. ನೋಟಿನ ಬಾಬ್ತು ನಿಮ್ಮಿಂದ ಬರಬೇಕಾದ ಸಣವ ವಸೂಲಿಗೆ ವಾದಿಯು ದಾಕಲು ಮಾಡಿದ ಈ ದಾವೆಯು ತಾ. 8-12-60ಕ್ಕೆ ಇಸುಪುದರಿಂದ ನಿಮಗೇನಾ ದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದ ಹರಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾಗುತ್ತು.

B. Chidananda Rao,
Vakil for Plaintiff

ಪುತ್ತೂರು ತಾ. 14-11-60.

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ನೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆ ಗಳೊಂದಿಗೆ—ಆತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು

ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಪರಿಚಯ

ಬರ್ಮಾಯ ಪ್ರಧಾನಿ ಧರ್ಮಪ್ರೇಮಿ ಊನೂ

ಊನೂರವರಲ್ಲಿ ತಮ್ಮ ಶತ್ರುಗಳನ್ನೂ ಸುಮಧುರ ವ್ಯವಹಾರದಿಂದ ಗೆಲ್ಲಬಲ್ಲ ಯಕ್ಕಿಣಿ ವಿದ್ಯೆಯಿದೆ; ತಮ್ಮ ಜನತೆಯ ವಿಶ್ವಾಸವನ್ನು ಳಿಸಿಕೊಳ್ಳುವ ಯೋಗ್ಯತೆಯಿದೆ. ರಾಜ್ಯಕಾರಣಿಯಿದ್ದರೂ ಇವರು ಧರ್ಮಿಕ ಶೈದ್ಧಾಳುಗಳು!

ರಾಜ್ಯಕೀಯ ಕ್ಷೇತ್ರದಿಂದ ನಿವೃತ್ತನಾದ ನಂತರ ಪೀಠವಸನಧಾರಿಯಾಗಿ ಭಿಕ್ಷುವಾಗುವ ತಮ್ಮ ಹಿಂದಿನ ಅಖಿಲಾಷೆಯನ್ನು ಬರ್ಮಾಯ ಪ್ರಧಾನಿ ಶ್ರೀ ಊನೂ ಮುಂಚೆ ಉಚ್ಚರಿಸಿದ್ದಾರೆ. "ನನ್ನ ಜೀವನದ ಪ್ರತಿ ದಿನವೂ ಈ ಬಗ್ಗೆ ನಾನು ಆಲೋಚಿಸುತ್ತೇನೆ; ನಮ್ಮ ಮೇಲೆ ಬುದ್ಧನು ಹೇರಿದ ಋಣದ ಸ್ವಲ್ಪಾಂಶವಾದರೂ ತೀರಿಸುವುದು ನಮ್ಮ ಕರ್ತವ್ಯವಾಗಿದೆ" ಎನ್ನುತ್ತಾರೆ ಊನೂ.

ಬುದ್ಧನ ಮೇಲೆ ಶ್ರೀ ಊನೂರವರಲ್ಲಿರುವ ಅಸೀಮ ಶ್ರದ್ಧಾಭಾವನೆಯೇ ಇವರನ್ನು ಪ್ರತಿವರ್ಷ ಭಾರತಕ್ಕೆ ನೆಕೆದು ತರುತ್ತದೆ. ಇಲ್ಲಿಗೆ ಬಂದಷ್ಟು ಬಾರಿಯೂ ಇವರು ಬೌದ್ಧ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಲು ಮರೆಯುವುದಿಲ್ಲ. ವಾಸ್ತವಿಕವಾಗಿ ಹೇಳುವುದಾದರೆ, ತೀರ್ಥಯಾತ್ರೆಯೇ ಇವರ ಭಾರತ ಭೆಟ್ಟಿಯ ಪ್ರಧಾನೋದ್ದೇಶ; ರಾಜ್ಯಕೀಯವು ಈವಲ ಗೌಣ. ಆದುದರಿಂದಲೇ ಊನೂ ಭಾರತಕ್ಕೆ 'ವಿದೇಶೀಯ'ರೆನ್ನುವಂತಿಲ್ಲ.

ಈ ವರ್ಷ ಫೆಬ್ರವರಿಯಲ್ಲಿ ನಡೆದ ಬರ್ಮಾಯ ಸಾರ್ವತ್ರಿಕ ಚುನಾವಣೆಗಳಲ್ಲಿ ಶ್ರೀ ಊನೂರವರ ಪಕ್ಷಕ್ಕೆ ಪ್ರಚಂಡ ಬಹುಮತ ದೊರೆಯಿತು. ೨೫೦ ಸ್ಥಾನಗಳಲ್ಲಿ ೧೫೫ ಸ್ಥಾನಗಳನ್ನು ಇವರ ಸ್ವಚ್ಛ ಪಕ್ಷವು ಗಿಟ್ಟಿಸಿಕೊಂಡಿತು. ಇದಕ್ಕೆ ಮೊದಲು ಎರಡು ವರ್ಷ ಕಾಲ ಇವರು ರಾಜ್ಯಕೀಯ ಕ್ಷೇತ್ರದಿಂದ ಹೊರಗಿದ್ದರು.

ಶ್ರೀ ಊನೂರವರ ಈ ಯಶಸ್ಸಿಗೂ ಬೌದ್ಧಧರ್ಮದ ಕಡೆಗೆ ಇವರು ತೋರಿಸುತ್ತಿರುವ ಆಸ್ಥೆ ಹಾಗೂ ಶ್ರದ್ಧಾಭಾವನೆಗಳಿಗೂ ಸಂಬಂಧವಿದೆಯೆನ್ನುತ್ತಾರೆ. ವಾಸ್ತವಿಕವಾಗಿ ಇವರು ಸಮಾಜವಾದಿಗಳಾದರೂ ಆಗಾಗ ಜನರು ಇವರ ಮೇಲೆ ಕಮ್ಯುನಿಸ್ಟರೆಂಬ ಆರೋಪ ಹೊರಿಸುತ್ತಿರೆ. "ಕಾರ್ಲ್‌ಮಾರ್ಕ್ಸ್‌ನ ಜ್ಞಾನವು ತೀರ ಅಲ್ಪ. ಅತನು ಭಗವಾನ್ ಬುದ್ಧನ ವಾದಧೂಳಿಯ ದಶಾಂಶದಷ್ಟೂ ಇಲ್ಲ ಎನ್ನುವ ಇವರ ಮಾತನ್ನು ಅವರು ಆಗ ಮರೆತಿರುತ್ತಾರೆ.

ರಂಗೂನ್ ವಿಶ್ವವಿದ್ಯಾಲಯದಲ್ಲಿ ಹರತಾಳ ಆಚರಿಸುವವರ ನಾಯಕರಾಗಿ ಶ್ರೀ ಊನೂ ರಾಜ್ಯಕೀಯಕ್ಕೆ ಇಳಿದರು. ಮುಂದೆ ದಿವಂಗತ ಆಂಗ್‌ಸಾನ್‌ರೊಡನೆ ಬರ್ಮದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ೧೯೪೬ರಲ್ಲಿ ಬರ್ಮಾವು ಸ್ವತಂತ್ರವಾಯಿತು. ಶ್ರೀ ಊನೂರವರು ಘಟನಾ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಆ ದರೆ, ಅದೇ ಸಮಯದಲ್ಲಿ ಪ್ರಧಾನಿ ಆಂಗ್‌ಸಾನ್ ಮತ್ತವರ ಸಹ ಮಂತ್ರಿಯವರ ಕೊಲೆ ನಡೆದ ನಂತರ, ಇವರು ಪ್ರಧಾನಿತ್ವವನ್ನೂ ಹೊರಬೇಕಾಯಿತು. ೧೯೫೨ರಲ್ಲಿ ಜಪಾನೀಯರು ಬರ್ಮಾಯ ನಾಯಕರಿಗೆ ಸರಕಾರ ರಚಿಸಿಕೊಳ್ಳಲು ಅನುಮತಿಯಿತ್ತಾಗ್ಯ, ಆ ಸರಕಾರದಲ್ಲಿ ವಿದೇಶ ಮಂತ್ರಿಯಾಗಿದ್ದ ಊನೂ 'ಅಜಾದ ಹಿಂದ್'ನ ಸ್ಯಮುಖ ನಾಯಕ ಶ್ರೀ ಸುಭಾಷ ಚಂದ್ರಭೋಸರನ್ನು ರಂಗೂನಿನಲ್ಲಿ ಸ್ವಾಗತಿಸಿದ್ದರು.

ಬರ್ಮಾದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಮೂಲ್ಯ ಪಾತ್ರ ವಹಿಸಿದ 'ಫ್ರೀಂಟ್ ಫೆಸಿಸ್ಟ್ ಪೀಪಲ್ಸ್ ಫ್ರಂಟ್ ಲೀಗ್' ಸಂಸ್ಥೆಯನ್ನು ಕಟ್ಟುವುದರಲ್ಲಿ ಊನೂರವರ ಕೈ ಸಾಕಷ್ಟು ಕಾರ್ಯವೆಸಗಿತ್ತು. ಆದರೆ, ಆದೆಷ್ಟು ಸ್ವಯ ತ್ನ ನೂ ಡಿದರೂ ಸಂಸ್ಥೆಯಲ್ಲಿ ಏಕ್ಯವನ್ನುಳಿಸಿಕೊಳ್ಳುವುದು ಇವರಿಂದ ಅಸಾಧ್ಯವಾಯಿತು. ತತ್ಪರಿಣಾಮವಾಗಿ ಸಂಘವು ಎರಡು ವಿಭಾಗಗಳಾಗಿ ಹೋಯಿತು. ಈ ವಿಭಜನೆಯು ಸೈದ್ಧಾಂತಿಕವೆನ್ನುವುದಕ್ಕಿಂತ ವ್ಯಕ್ತಿಗತವೆನ್ನುವುದೇ ಸರಿ. ಇದರಿಂದ, ಊದಾಸ್ಫೆ ಹಾಗೂ ಅವರ ಬೆಂಬಲಿಗರು ಊನೂ ಮತ್ತಿವರ ಸರಕಾರದ ಮೇಲೆ ರಾಜ್ಯಕೀಯ ವಂಚನೆ ಮತ್ತು ಕಾರ್ಯಕ್ಷಮತಾ ಹೀನತೆಯ ದೋಷ ಹೊರಿಸಿದರು. ಕತ್ಕ್ಷಣವೇ ಊನೂ ಪ್ರಧಾನಿ ಸ್ಥಾನವನ್ನು ತ್ಯಜಿಸಿದರು. ಭೂ ಸೇನಾನಿಪತಿ ಜನರಲ್ ನೆವಿನ್‌ಕೆಯವರ ಕೈಗಳಲ್ಲಿ ಅಧಿಕಾರವೊಪ್ಪಿಸಿ, ತಮ್ಮ ಪಕ್ಷವನ್ನು ಬಲಪಡಿಸುವುದರಲ್ಲಿ ನಿಮಗ್ನರಾದರು.

ಶ್ರೀ ಊನೂ ಬರ್ಮಾದ ಜನಪ್ರಿಯ ವ್ಯಕ್ತಿಯೆನ್ನಬಹುದು. ಬರ್ಮಾಯ ಜನತೆಯ ನೈಜಾರಿಕ ನಾಡಿಯನ್ನು ಗುರುತಿಸುವ ಶ್ರೇಷ್ಠ ವೈದ್ಯ ಎಂದಿವರನ್ನು ಕರೆಯಬಹುದು. ಚತುರ ರಾಜನೀತಿಜ್ಞರೂ ಬುದ್ಧ ಭಕ್ತರೂ ಆಗಿರುವುದರಿಂದ ಬರ್ಮಾಯರ ಹೃದಯದಲ್ಲಿ ಉನ್ನತ ಸ್ಥಾನಗಳಿಸಿದ್ದಾರೆ.

ಊನೂ ಸರಳ ಸ್ವಭಾವದ ವ್ಯಕ್ತಿ. ತಮ್ಮ ಮಧುರ ವ್ಯವಹಾರಗಳಿಂದ ವಿರೋಧಿಗಳನ್ನೂ ಪರಾಜಿತಗೊಳಿಸಬಲ್ಲ ಯಕ್ಕಿಣಿ ವಿದ್ಯೆಯವರಲ್ಲಿದೆ. ರಾಜ್ಯಕೀಯ ಪ್ರಶ್ನೆಗಳ ಮೇಲೆ ಇವರು ಬೀರುವ ಪ್ರತಿಯೊಂದು ದೃಷ್ಟಿ ಕಿರಣವೂ ಮಾನವೀಯವಿದೆ. ಕಮ್ಯುನಿಸ್ಟ ಚೀನಾದೊಡನೆ ತಮಗಿದ್ದ ಸೀಮಾ ವಿವಾದವನ್ನು ಬಗೆಹರಿಸಿದ ಊನೂ ಭಾರತ-ಚೀನಾ ಸೀಮಾ ವಿವಾದವೂ ಶಾಂತ ರೀತಿಯಲ್ಲಿ ಬಗೆಹರಿಯುವುದೆಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಚಾರವರ್ಷ

(೪ನೇ ಪುಟದಿಂದ)

ಇದನ್ನು ನೋಡಿದರೆ ಈ ಸೊಡ್ಡ ಗ್ರಹಗಳಲ್ಲಿ ಸೇರಿರುವ ಪದಾರ್ಥವು, ಚಿಕ್ಕ ಗ್ರಹಗಳಿಗೆ ಸಂಬಂಧಪಟ್ಟ ಪದಾರ್ಥದ ಕಾಲದ್ದಲ್ಲವೆಂದೂ, ಅವಕ್ಕಿಂತಲೂ ಬಹಳ ಹಿಗುರಾದುದೆಂದೂ ಸ್ಪಷ್ಟವಾಗುತ್ತದೆ.

ಸ್ಲೂಟೋ ಎಂಬ ೯ನೆಯ ಗ್ರಹವನ್ನು ೧೯೩೦ರಲ್ಲಿ ಕಂಡುಹಿಡಿಯಲಾಯಿತು. ಇದು ಅತ್ಯಂತ ದೂರದಲ್ಲಿದೆ. ಇದರ ಪ್ರಮಾಣ, ಭಾರಗಳ ವಿಷಯವಾಗಿ ಸ್ಪಷ್ಟವಾಗಿ ಗೊತ್ತಿಲ್ಲ.

ಸೌರಕೂಟವನ್ನು ಕುರಿತು ಕಣ್ಣಿಗೆ ಕಟ್ಟುವಂಥ ಇನ್ನೊಂದು ಅಂಶವೇನೆಂದರೆ, ಸೂರ್ಯನಿಗೆ ದೂರ ದೂರ ಹೋದ ಹಾಗೆ ಗ್ರಹಗಳ ನಡುನೆಯಿರುವ ಅಂತರವು ಹೆಚ್ಚು ಹೆಚ್ಚಾಗಿ ಕಾಣಿಸುವುದೇ.

ತಮ್ಮ ಸುತ್ತಲೂ ತಾವು ತಿರುಗುವ ವೇಗದಲ್ಲಿ ಕೂಡಾ ಚಿಕ್ಕ ಗ್ರಹಗಳಿಗೂ ದೊಡ್ಡ ಗ್ರಹಗಳಿಗೂ ಸ್ಪಷ್ಟವಾದ ವ್ಯತ್ಯಾಸವಿದೆ. ಬುಧಗ್ರಹವು ತನ್ನ ಸುತ್ತೂ ತಾನು ಒಂದು ಸಾರಿ ತಿರುಗಲು ೮೮ ದಿನಗಳಾಗುತ್ತವೆ; ಶುಕ್ರನಿಗೆ ೨೦ ದಿನಸಗಳು ಬೇಳುತ್ತದೆ. ಸೂರ್ಯನಿಗೆ ತೀರಸವಿಪದಲ್ಲಿರುವ ಕಾರಣ ಇವು ಇಷ್ಟೊಂದು ನಿಧಾನವಾಗಿ ತಿರುಗುತ್ತವೆಂದು ಹೇಳಬಹುದು. ಆದರೆ ತಕ್ಕಷ್ಟು ದೂರದಲ್ಲಿದ್ದೂ, ಚಿಕ್ಕ ಗ್ರಹಗಳಾಗಿದ್ದು ಕೂಡಾ ಭೂಮಿಯೂ ಕುಜವೂ ತಮ್ಮ ಸುತ್ತೂ ತಾವು ತಿರುಗಲು ೨೪, ೨೫ ಗಂಟೆಗಳ ವರೆಗೆ ತೆಗೆದುಕೊಳ್ಳುತ್ತವೆ. ದೊಡ್ಡ ಗ್ರಹಗಳು ಹಾಗಲ್ಲ. ಗುರು ತನ್ನ ಸುತ್ತಲೂ ತಾನು ತಿರುಗಲಿಕ್ಕೆ ೧೦ ಗಂಟೆಗಳೂ ಪೂರ ಬೇಡ. ಶನಿಕೂಡಾ ಅಷ್ಟೆ. ಯುರೇನಸ್ಸೂ ಹಾಗೆಯೇ: ನೆಪ್ಚೂನಿಗೆ ೧೦ ಅಥವಾ ೧೬ ಗಂಟೆ ಹಿಡಿಯುತ್ತದಷ್ಟೇ ದೊಡ್ಡ ಗ್ರಹಗಳನ್ನು ಚಿಕ್ಕ ಗ್ರಹಗಳೊಂದಿಗೆ ಹೋಲಿಸುವಾಗ ದೊಡ್ಡ ಗ್ರಹಗಳೇ ಬಹಳ ವೇಗವಾಗಿ ತಮ್ಮ ಸುತ್ತು ತಾವು ತಿರುಗುವುದನ್ನು ಮನಗಾಣಬಹುದು.

ಉಪಗ್ರಹಗಳ ಇರುವಿಕೆಯಲ್ಲಿ ಕೂಡಾ ಚಿಕ್ಕ ಗ್ರಹಗಳಿಗೂ ದೊಡ್ಡ ಗ್ರಹಗಳಿಗೂ ಬಹಳ ವ್ಯತ್ಯಾಸವಿದೆ. ಬುಧ, ಶುಕ್ರರಿಗೆ ಅಸಲೇ ಚಂದ್ರರಿಲ್ಲ. ಭೂಮಿಗೆ ಒಂದೇ ಒಂದು ಚಂದ್ರ. ಅಂಗಾರಕಕ್ಕೆ ಬಹಳ ಚಿಕ್ಕ ಎರಡು ಚಂದ್ರರಿವೆ. ಆದರೆ ಅಂಗಾರಕನನ್ನು ದಾಟಿ ಹೋದಾಗ ಗುರುವಿನ ಸುತ್ತಲೂ ತಿರುಗುವ ೧೨ ಚಂದ್ರರು, ಶನಿಯ ಸುತ್ತಲೂ ೯, ಯುರೇನಸ್ಸಿನ ಸುತ್ತಲೂ ೫ ನೆಪ್ಚೂನಿನ ಸುತ್ತಲೂ ೨ ಚಂದ್ರರಿರುವುದು ಕಾಣಿಸುತ್ತದೆ.

ಗ್ರಹಗಳ ಮಧ್ಯದಲ್ಲಿರುವ ಹೋಲಿಕೆಯನ್ನು ಕುರಿತೂ ವ್ಯತ್ಯಾಸಗಳನ್ನು ಕುರಿತೂ ನಾವು ತಿಳಿದುಕೊಂಡ ಮೇಲಿನ ವಿಷಯಗಳ ಅಂತರಾರ್ಥವನ್ನು ಆರಿಯಬೇಕಾದರೆ, ಅವು ಹುಟ್ಟಿದ ವಿಧಾನವನ್ನೆ ತಿರಿದು ನೋಡಬೇಕು. ಏಕೆಂದರೆ ಗ್ರಹಗಳ ಸ್ವರೂಪ ಸ್ವಭಾವಗಳು ಜನ್ಮತಃ ಏರ್ಪಟ್ಟುವೇ.

ಆದಿಮೇಘದ ಶಕ್ತಿ.

ಆಕಾಶದಲ್ಲಿ ಅತ್ಯಂತ ತೆಳುವಾದ ಪದಾರ್ಥದಿಂದೊಡಗೂಡಿದ ಬೃಹತ್ಖಂಡವಾದ ಮೇಘಗಳಿವೆ. ಈ ಆದಿ ಮೇಘಗಳಲ್ಲಿರುವ ಪದಾರ್ಥವು ಒಂದೆಡೆ ಸೇರಿದಾಗ ನಕ್ಷತ್ರಗಳುಂಟಾಗುತ್ತವೆ. ನಮ್ಮ ಸೂರ್ಯ ಕುಟುಂಬವು ಇಂತಹ ಮೇಘದಿಂದಲೇ ಉಂಟಾಗಿದೆ. ಈ ಪದಾರ್ಥವು ಸೂರ್ಯನಿಗೂ ಉಳಿದ ಗ್ರಹಾದಿಗಳಿಗೂ ಮಧ್ಯೆ ಯಾವ ವಿಧವಾಗಿ ವಿಭಜನೆಯಾಯಿತು? ಸೂರ್ಯನಲ್ಲಿರುವ ಪದಾರ್ಥವು ನೂರು ಭಾಗವೆಂದಾದರೆ ಉಳಿದ ಸೂರ್ಯ ಕುಟುಂಬದಲ್ಲಿರುವ ಪದಾರ್ಥವೆಲ್ಲಾ ಒಟ್ಟು ಸೇರಿ ಒಂದು ಭಾಗ ಮಾತ್ರವೇ ಆಗುತ್ತದೆ ಇದೇನು?

ಹೊಲಕ್ಕೆ ಕಾವಲು ಕಾಯುವವರು ಮಂಚಲಿಗೆಯ ಮೇಲೆ ನಿಂತು ಕಲ್ಲು ಹೊಡೆದು ಹಕ್ಕಿಗಳನ್ನು ಓಡಿಸುತ್ತಾರಲ್ಲ ನೆ? ಹಾಗೆ ಕಲ್ಲನ್ನು ಹೊಡೆಯಲು ಹಗ್ಗವನ್ನು ಉಪಯೋಗಿಸುತ್ತಾರೆ. ಹಗ್ಗದಿಂದ ಹೊರಡುವ ಆ ಕಲ್ಲಿಗೆ ವಿಪರೀತವಾದ ಶಕ್ತಿಯಿರುತ್ತದೆ. ಬರಿಗೈಯಿಂದ ಬಿಸುಡುವ ಕಲ್ಲಿಗಾದರೆ ಅಷ್ಟು ಶಕ್ತಿಯಿರುವುದಿಲ್ಲ. ಈ ಶಕ್ತಿಯನ್ನು ಆಳೆಯುವಂಥ ಮೂರು ಅಂಶಗಳುಂಟು: ಒಂದು ಕಲ್ಲಿನ ಭಾರ; ಭಾರ ಹೆಚ್ಚಿದಷ್ಟೂ ವೆಟ್ಟು ಹೆಚ್ಚು ಬೀಳುತ್ತದೆ. ಎರಡನೆಯದು ಹಗ್ಗವು ತಿರುಗುವವೇಗ. ಮೂರನೆಯದು ಹಗ್ಗದ ನೀಳ. ಗಿಡ್ಡ ಹಗ್ಗದಿಂದ ಬೀಸಿದ ಕಲ್ಲು ಬಹಳಷ್ಟು ವೇಗಕ್ಕೆ ಹೋಗಲಾರದು.

ಈ ಬಗೆಯ ಅಂಶಗಳಿಂದ ಕೂಡಿದ ಶಕ್ತಿಯೇ ಗ್ರಹಗಳನ್ನೂ ಹೊಂದಿದೆ. ಆವುಗಳಿಗೆ ಸ್ವತಃ ಸಿದ್ಧವಾದ ಭಾರವಿದೆ. ಅವು ಬೇರೆಬೇರೆ ವೇಗಗಳಿಂದ ತಮ್ಮ ಸುತ್ತಲೂ ತಾವು ತಿರುಗುತ್ತ, ಸೂರ್ಯನ ಸುತ್ತಲೂ ತಿರುಗುತ್ತವೆ. ಬುಗರಿಯನ್ನು



ಮಹಾತ್ಮಾ ಗಾಂಧೀಜಿಯವರು ತನ್ನ ಕೊನೆಯ ಹತ್ತು ವರ್ಷಗಳನ್ನು ಕಳೆದ ಸೇವಾಗ್ರಾಮದ ಎರಡು ನೋಟಗಳು.

ನಾವು ಎಷ್ಟು ಬಲವಾಗಿ ತಿರುಸಿದರೆ ಅಷ್ಟು ವೇಗದಿಂದ ಆದು ತನ್ನ ಸುತ್ತು ತಾನು ತಿರುಗುವುದೆಂದು ನಮಗೆ ಗೊತ್ತೇ ಇದೆ. ಸೂರ್ಯ ಕುಟುಂಬದಲ್ಲಿ ವ್ಯಕ್ತವಾಗುವ ಈ ಶಕ್ತಿಯೂ ಎಷ್ಟೊ ಆದು ಏರ್ಪಡಲಿಕ್ಕೆ ಕಾರಣಭೂತವಾದ "ಆದಿ ಮೇಘ"ದಿಂದಲೇ ಬಂದಿರಬೇಕು. ಏಕೆಂದರೆ ಅಂತಹ ಮೇಘಗಳು ಕೂಡಾ ಗುಂಡಗಾಗಿಯೇ ತಿರುಗುತ್ತಿರುತ್ತವೆ.

ಪದಾರ್ಥ ವಿಭಜನೆಯ ವಿಷಯವಾಗಿ ನೂರಕ್ಕೆ ೯೯ ಪಾಲು ಸೂರ್ಯನಿಗೆ ಸಂಕ್ರಮಿಸಿರುವುದೆಂದು ನಾವು ಈ ಮೊದಲು ತಿಳಿದುಕೊಂಡಿದ್ದೇವಷ್ಟೆ ಆದರೆ ಶಕ್ತಿ ವಿಭಜನೆಯ ವಿಷಯದಲ್ಲಿ ಮಾತ್ರ ನೂರಕ್ಕೆ ಎರಡು ಭಾಗ ಮಾತ್ರವೇ ಸೂರ್ಯನಿಗೆ ಸಂಕ್ರಮಿಸಿ ಉಳಿದುವೆಲ್ಲಾ ಸೂರ್ಯ ಕುಟುಂಬದೊಳಗಿನ ಗ್ರಹಾದಿಗಳೊಳಗೆ ಹಂಚಿ ಹೋಗಿವೆ!

(ಮುಂದಿನ ವಾರ: ಪೂರ್ವ ಸಿದ್ಧಾಂತಗಳು)

ಅಭಿಪ್ರಾಯ

(೩ನೇ ಪುಟದಿಂದ)

ದ ಪ್ರಕಾಶವು. ರಾಮನು ಸೀತೆ ಮತ್ತು ಲಕ್ಷ್ಮಣ ಮೊದಲಾದವರನ್ನೇ ಕೂಡಿಕೊಂಡು ಅರಣ್ಯಕ್ಕೆ ಹೋದಾಗ; ಸಮಸ್ತಪುರ ಜನರೂ ಮುನಿಗಳೂ, ಸ್ತ್ರೀ ಪುರುಷರೂ ಶೋಕದಿಂದ ನಿಷ್ಕ್ರಿಯವಿಗಳಾಗಿ ಆತನನ್ನೇ ತಮಸಾ ನದಿಯ ತೀರದ ವರೆಗೆ ಹಿಂಬಾಲಿಸಿದರು. ಸುಖಗಳನ್ನು ತೊರೆದು ರಾಮನ ವಿಯೋಗದಲ್ಲಿ ಬಾಗಿಗಳಾದರು. ರಾತ್ರೆ ಎಲ್ಲರೂ ನಿದ್ರಿಸುತ್ತಿರುವ ವೇಳೆ ಈಪುರಜನರು ಮೊದಲಾದವರು ತನ್ನನ್ನು ಕೂಡಿಕೊಳ್ಳದೆ ತನಗಾಗಿ ಹಂಬಾಲಿಸುವರು. ಹಾಗಾದರೆ ರಾಜಧಾನಿಯು ನಾಶವಾದಂತೆ ಎಂದು ತಿಳಿದ ಸ್ಥಿತಪ್ರಜ್ಞನಾದ ಶ್ರೀ ರಾಮನು ಕತ್ತಲೆ ಇದ್ದಾಗಲೇ, ನಿದ್ರಿತರಾದ ಪುರಜನರಿಗೆ ತಿಳಿಯದಂತೆ ಸುಮಂತ್ರನನ್ನು ರಥದ ಸಾರಥಿಯಾಗಿ ಮಾಡಿ ಆ ಸ್ಥಳವನ್ನು ಬಿಟ್ಟು ಹೋದಾಗ, ಸೂರ್ಯೋದಯವಾಗಲು, ಪುರಜನರು ಎಲ್ಲೆಲ್ಲಿ ಹುಡುಕಿ ನೋಡಿದರೂ ರಾಮಲಕ್ಷ್ಮಣ ಸೀತೆಯರು ಕಾಣದೇ ಮರುಕದಿಂದ ಅಯೋಧ್ಯೆಯನ್ನು ಬಂದು ಸೇರಿದರು.

ರಾಮಾಯಣವು ಪ್ರೇಮವಯವಾಯಿತು. ನಿಷ್ಕಾಮ ಪ್ರೇಮದ ಅಗಾಧ ಶಕ್ತಿಯಿಂದ ರವಿಕುಲವೂ, ಜಗತ್ತೂ, ಬೆಳಗಿತು. ಸತ್ಯ ಧರ್ಮವು ತಲೆಯೆತ್ತಿತ್ತು. ಸತ್ಯ ದೇವತೆಯು ಪ್ರಸನ್ನಳಾದಳು. "ರಾಮರಾಜ್ಯ"ವೆನ್ನುವ ಮಾತು ನಿಜವಾಯಿತು.

ಓಂ—ಶಾಂತಿ, ಶಾಂತಿ, ಶಾಂತಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ವಿ.ಎಂ

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನೂಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ನೂತಾಡಬೇಕೆಂದಿದ್ದರೆ— ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕರವಿಸಲಾಗುವುದು.

ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ನಿಮಗಿಷ್ಟವಿರದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

ಭಾರತ ದರ್ಶನ

ಭಾರತದ ವಿಶಿಷ್ಟ ಪರಂಪರೆ

ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮತಿ ಪರ್ಲ್ ಎಸ್. ಬಕ್‌ರವರು ಭಾರತದ ಮತ್ತು ಭಾರತೀಯರ ಪರಿಚಯ ಮಾಡಿಕೊಂಡು, ಇವರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಮ್ಮ ಪ್ರವಾಸ ಕಥನ ನಲ್ಲಿ ಹೊರಗೆಡಹಿದ್ದಾರೆ. ಅದರ ಒಂದು ಭಾಗವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಶ್ರೀ ಗೋಪಾಲರಿಂದ ಸಂಗ್ರಹಿತ

ಆತಿ ನಿಕಟದಲ್ಲಿ ಭಾರತವನ್ನು ನೋಡಬೇಕೆಂಬ ಆಲೆ ನನಗೆ ಆಪರಿಮಿತವಿತ್ತು; ನನ್ನ ಜೀವನ ಪೃಷ್ಠಭೂಮಿಯ ಒಂದು ಮಹತ್ವಪೂರ್ಣ ಭಾಗವಿದೆಂಬುದೇ ಇದಕ್ಕೆ ಕಾರಣ. ೧೯೩೪ರ ವರೆಗೆ ನಾನಿಲ್ಲಿ ಕಾಲಿಡುವುದೂ ಸಾಧ್ಯವಾಗಲಿಲ್ಲ. ನನ್ನ ಆಸ್ಯಾಸವಾನದ ರಂಗಭೂಮಿಯಲ್ಲಿ ಬೊಂಬಾಯಿಗೇನೋ ಬಂದುಬಿಟ್ಟಿದ್ದೆ; ಆದರೆ, ಭಾರತವನ್ನು ಮುಂದೆಂದು ಕಾಣಬಹುದೆಂಬ ಇಂಬಾನೆಯಿಂದ ಆಲ್ಲಿಯ ನಾಲ್ಕಾರು ರಸ್ತೆಗಳಲ್ಲಿ ಸುತ್ತಾಡಿ ಹೋಗಿಬಿಟ್ಟಿದ್ದೆ. ಹೀಗಾಗಿ, ನನ್ನ ಭಾರತೀಯ ವೈದ್ಯ ಮಿತ್ರರ ಮಡದಿಯರ ಬಾಯಿಂದ ನನ್ನ ಎಳವೆಯಲ್ಲಿ ಕೇಳಿದ್ದ ಕಥೆಗಳು ನನ್ನ ಸ್ವಪ್ನಲೋಕದಲ್ಲಿ ತನ್ನಿಂದ ತಾನಾಗಿಯೇ ಸ್ಮರಣೆಗೆ ಬಂದುವು. ಆದ್ದರಿಂದ ಭಾರತದ ಬಗ್ಗೆ ಕೈಗೆದೊರೆತ ಸಾಹಿತ್ಯಗಳನ್ನು ಓದಿಹಾಕಿದ್ದೆ.

ಭಾರತ ಮತ್ತು ಚೀನಾಗಳ ಮೇಲೆ ತುಲನಾತ್ಮಕ ದೃಷ್ಟಿಯಿಂದ ವಿಶೇಷವಾಗಿ ಇವೆರಡರ ನಡುವೆ ಬಹಳ ಅಂತರವಿರುವುದು ನನಗೆ ಕಂಡುಬರುತ್ತದೆ; ಎರಡೂ ಸಮಾಜಗಳ ಜೀವನದರ್ಶನದಲ್ಲಿಯೂ ವೈತ್ಯಾಕ್ಷರ ದೃಷ್ಟಿಗೋಚರವಾಗದ ಕೆಲವು ಚೀನೀಯರು ತಮ್ಮಲ್ಲಿ ಅಕಾಂತರಿಗಳನ್ನು ತಮ್ಮ ರಕ್ತಧಾರೆಗಳಲ್ಲಿಯೇ ಸ್ವೀಕರಿಸಿದ್ದಾರೆ; ಉದಾಹರಣೆಗಾಗಿ, ಪತಿವ್ರತೆಗಳಾಗಿರಬೇಕೆಂಬ ಜೀವನದಲ್ಲಿ ಆಶ್ಚರ್ಯಪಡಬೇಡಿದ್ದ ಯಹೂದಿಯರು ಸ್ವತ್ಯೇಕ ಸಮಾಜದ ರೂಪದಲ್ಲಿ ಎಲ್ಲಿಯೂ ತೋರಿಬರುವುದಿಲ್ಲ. ಆದರೆ ಭಾರತದಲ್ಲಿ ಯಹೂದಿಯರು ಏಲಿನ ಹೊಂದಲಿಲ್ಲ; ಮಿಲನಮಾಡಿಕೊಳ್ಳುವುದೂ, ಭಾರತದ ರೀತಿಯಲ್ಲ. ಭಾರತವು ಎಲ್ಲ ಸಮಾಜಗಳನ್ನೂ ಬೇರೆ ಬೇರೆಯಾಗಿಯೇ ಇಡುತ್ತದೆ; ಆದರೂ ಇವು ಸಮಷ್ಟಿಯ ಒಂದೆಂಗವಾಗಿರುತ್ತವೆ. ಶತಮಾನಗಳ ಹಿಂದೆ ಇರಾಣದಿಂದ ಭಾರತಕ್ಕೆ ಬಂದಿರುವ ಪಾರ್ಸಿಗಳು ಇದಿಗೂ ಬಹಳ ಶ್ರೀಮಂತರೂ ಪ್ರಭಾವಶಾಲಿಗಳೂ ಆಗಿದ್ದಾರೆ; ಅಲ್ಲದೇ ತಮ್ಮ ಹಳೆಯ ರೂಪದಲ್ಲಿಯೇ ಗೋಚರಿಸುತ್ತಾರೆ.

೧೯೩೪ರಲ್ಲಿ ನಾನು ಮೊತ್ತಮೊದಲು ಭಾರತಕ್ಕೆ ಬಂದೆ. ಇಲ್ಲಿನ ಕಲಕತ್ತೆಯಲ್ಲಿ ಒಬ್ಬ ಮಿತ್ರನ ಮನೆಯಲ್ಲಿ ಉಳಕೊಂಡಿದ್ದೆ. ನಾನಿಲ್ಲಿ ಏನನ್ನು ನೋಡಲು ಬಂದಿದ್ದೆ? ತಾಜಮಹಲು, ಪತ್ತೇಪುರ ಸಿಕ್ರಿ ಅಥವಾ ನವದೆಹಲಿಯ ಸಾಮ್ರಾಜ್ಯದ ಹೊಳಪನ್ನೇ? ಅಲ್ಲ; ಇವುಗಳನ್ನು ನಾನು ನೋಡ ಬಂದಿಲ್ಲವಾದರೂ ನೋಡದೆ ಬಿಡಲಿಲ್ಲ. ನಾನು ಭಾರತದ ನಗರಗಳ ತರುಣ ಬುದ್ಧಿಜೀವಿ ಮತ್ತು ಗ್ರಾಮಗಳ ಕೃಷಕರನ್ನು ಕಾಣುವ ತಹತಹದಿಂದಿಲ್ಲಿ ಆಗಮಿಸಿದ್ದೆ.

ಭಾರತಕ್ಕೆ ಕಾಲಿಟ್ಟೊಡನೆಯೇ ವಸಾಹತುವಾದ ತಪ್ಪಿದ ಖಂಡನೆಯನ್ನು ಹಳ್ಳಿಗಳಲ್ಲಿ ನಾನು ಕಂಡೆ. ಇಲ್ಲಿನ ವೈತರು ಓದುಬರಹ ಬಲ್ಲವರಲ್ಲವಾದರೂ ಜನ್ಮತಃ ಸಭ್ಯರು. ಸುಸಂಘಟಿತ ಖಾರಿವಾರಿಕ ಜೀವನದ ರುಚಿಪೂರ್ವ ಸಂಸ್ಕೃತಿ ಹಾಗೂ ಆಳವಾದ ದಾರ್ಶನಿಕ ಧರ್ಮಗಳು ಇವರ ಮನಸ್ಸನ್ನು ಮತ್ತು ಆತ್ಮಗಳ ರೂಪಗಾಜನೆ ಮಾಡಿತ್ತೆ. ಇನ್ನು ಮಕ್ಕಳ ವಿಷಯವೇನು ಹೇಳಬೇಕು! ನಿರ್ಬಲ ಶರೀರ, ದೊಡ್ಡ ಹೊಟ್ಟೆ, ಮತ್ತು ದಂಡಗಾದ ಉದಾಸೀನ ಸ್ವಭಾವದ ಕಪ್ಪು ಕಣ್ಣುಗಳುಳ್ಳ ಈ ಗ್ರಾಮೀಣ ಮಕ್ಕಳನ್ನು ಕಂಡೊಡನೆಯೇ ನನ್ನ ಎದೆ ಬಿರಿಯ ತೊಡಗಿತು! ಯೂರಾದರೂ ಆಂಗ್ಲೇಯರು ಗಮನಪೂರ್ವಕ ಇವರನ್ನು ಕಂಡರೆ, ತಮ್ಮನ್ನು ತಾವೇ ದೋಷಿಗಳೆಂದು ಕರೆಯದಿರಲಾರರೆಂದು ಯೋಚಿಸಿದೆ. ಮೂರು ಶತಮಾನಗಳ ಆಂಗ್ಲೇಯರ ಅಧಿಕತ್ವ ಮತ್ತು ಕೋಟ್ಯನುಕೋಟಿ ಮಕ್ಕಳ ಈ ದೀನ ಹೀನ ಪರಿಸ್ಥಿತಿ!

ನನಗೆ ಇಂಗ್ಲೆಂಡು ಭೆಲೋದೆನಿಸುವುದಾದರೂ ಆಲ್ಲಿನ ಸರ್ವಸುಖದ ಯತ್ರಿಗಳ ಸಂಸ್ಕರಣೆ ಮನಸ್ಸಿನಲ್ಲಿ ಮೂಡಿದ್ದರೂ ಭಾರತಕ್ಕೆಬಂದು ನಾನು ಕಂಡ ಇಂಗ್ಲೆಂಡಿನ ಚಿತ್ರವನ್ನು ವತ್ತೆಲ್ಲಿಯೂ ನೋಡಿರಲಿಲ್ಲ. ಇದರ ಫಲಸ್ವರೂಪವಾಗಿ, ಹಲವಾರು ದೃಷ್ಟಿಗಳಿಂದ ಪ್ರಪಂಚದಲ್ಲಿ ಸರ್ವಶ್ರೇಷ್ಠರೆಂದು ಪರಿಗಣಿಸಲ್ಪಡುವ ಹಾಗೂ ಇತರರಿಗೆ ಮಾರ್ಗದರ್ಶನ ಮಾಡುವ ಆಂಗ್ಲೇಯರನ್ನು ವಸಾಹತುವಾದವು ಇಷ್ಟೊಂದು ಭ್ರಷ್ಟಗೊಳಿಸುವುದಾದರೆ, ನಮ್ಮಲ್ಲಿ ಯಾವನಿಗಾದರೂ ಸಾಮ್ರಾಜ್ಯ ಶಾಸಕನೆನಿಸುವ ಅಧಿಕಾರವಿರುವುದಿಲ್ಲ ಎಂದು ಯೋಚಿಸಬೇಕಾಯಿತು.

ಇಲ್ಲಿ ನನ್ನ ಹಳೆಯ ಹೊಸ ಭಾರತೀಯ ಮಿತ್ರರೊಡನಿರುವಾಗ, ಭಾರತದ ದುರವಸ್ಥೆಯು ಬಹಳ ಸುಲಭದಲ್ಲಿ ದೂರವಾಗುವುದು ಎಂತು ತೋರಿ ಬಂತು. ಜನತೆಯು ರಕ್ತ ಹೀರಿ ತಮ್ಮ ಹೊಟ್ಟೆ ಹೊರೆದುಕೊಳ್ಳುವುದನ್ನು ಬಿಟ್ಟು, ಇಲ್ಲಿಯ ಜನತೆಯ ಉನ್ನತಿಯನ್ನು ಹಾರೈಸುವುದೇ ಸರಕಾರದ ಉದ್ದೇಶವಾದರೆ, ಈ ಪರಿಸ್ಥಿತಿ ಉಳಿಯುತ್ತಿರಲಿಲ್ಲ. ನೂರಿರು ವರ್ಷಗಳಿಂದ ವಸಾಹತು ವಾದಿಗಳ ಆಡಳಿತೆಯಲ್ಲಿ ನೆವದ ಜನತೆಯಲ್ಲಿ ಸ್ವಯಂ ಸ್ಫೂರ್ತಿಯಿಂದ ನಿರ್ಮಾಣಕಾರ್ಯ ಮಾಡಿಕೊಳ್ಳುವ ಶಕ್ತಿ ಉಳಿಯುವುದಿಲ್ಲ. ವಸಾಹತುಗಳಲ್ಲಿನ ಜನತೆಗೆ ಆಕರ್ಮಣ್ಯರಾಗಲು ಮತ್ತು ಸ್ವಕಾರ್ಯಗಳನ್ನು ತಾನೇ ಮಾಡದಿರಲು ನೆವನಗಳು ದೊರೆಯುತ್ತವೆ. ಆದ್ದರಿಂದ ಭಾರತೀಯರೆಲ್ಲರೂ ಆಂಗ್ಲೇಯರ ವೈಲ್ ಮೋಷಾರೋಪಣೆ ಮಾಡುತ್ತಿದ್ದರು. ಹೃದಯ ಶೂನ್ಯವಾದ ಜನತೆಯು ತನ್ನ ಸಾಹಸವನ್ನೂ ಕಳೆದುಕೊಳ್ಳುವುದು.

ಈ ರೀತಿಯ ಗಂಭೀರ ಆಧ್ಯಯನ ಮತ್ತು ನಿರೀಕ್ಷಣೆಗಳ ಮಧ್ಯದಲ್ಲೂ ನಾನು ನಾನಾ ಬಗೆಯ ಪ್ರಾಕೃತಿಕ ದೃಶಗಳನ್ನು ಕಂಡು ಬೇಕೆಂಬಷ್ಟು ಸಂತುಷ್ಟಳಾದೆ. ನಾನು ಆ ದಿನಗಳತ್ತ ದೈಷ್ಟಿಪಾತ ಮಾಡುವಾಗ ಮೊತ್ತನೊದಲಿಗೆ ಭಾರತೀಯರಲ್ಲಿ ತಮ್ಮ ಮಹಾಪುರುಷರು ಮತ್ತು ಸ್ತ್ರೀಯರ ಬಗ್ಗೆ ಪೂಜ್ಯ ಭಾವನೆಯಿರುವುದನ್ನು ಉಲ್ಲೇಖನೀಯವೆಂದಾಗುತ್ತದೆ. ತಮ್ಮ ಅನುಯಾಯಿಗಳು ತಮ್ಮನ್ನು ಸರಿಯಾಗಿ ತಿಳಿದುಕೊಂಡಿರುವವರು, ಅರ್ಥಾತ್ ತ್ಯಾಗ ಮತ್ತು ನಿಸ್ವಾರ್ಥತೆಯಿಂದ ಅವರ ವಿಶ್ವಾಸಪಾತ್ರರಾಂದವರು ಮಾತ್ರ ಭಾರತದಲ್ಲಿ ಜನರ ನಾಯಕತ್ವವನ್ನು ವಹಿಸಬಲ್ಲರು. ಯಾವುದೇ ಆದರ್ಶದ ಹೆಸರಿನಲ್ಲಿ ತನ್ನ ಸ್ವಾರ್ಥವನ್ನು ತ್ಯಜಿಸಿದವನು ಸತ್ಯನಿಷ್ಠನೂ ಉದಾತ್ತ ವಿಚಾರಶಿಲನೂ ಆಗುತ್ತಾನೆ; ಮತ್ತು ಜನರ ವಿಶ್ವಾಸಪಾತ್ರನೆನಿಸುತ್ತಾನೆ.

ಗಾಂಧೀಜಿಯವರ ಅನುಯಾಯಿಗಳಲ್ಲಿ ಅನೇಕ ದೋಷಪೂರ್ಣ ಸ್ತ್ರೀ ಪುರುಷರಿದ್ದರು. ಸ್ವಯಂ ಮಹಾತ್ಮರಾದರೂ ಕೆಲವು ಪುಟ್ಟ ಇಚ್ಛೆಗಳಿಂದ ಮುಕ್ತರಾಗಿರಲಿಲ್ಲ. ಇದನ್ನು ಅವರೊಡನೆ ಯಾವಾಗಲೂ ಇರುತಿದ್ದ ಜನರು ಅವಶ್ಯ ತಿಳಿದಿದ್ದರು. ಆದರೂ ಅವರು ತ್ಯಯಂ ಸ್ವಾರ್ಥವನ್ನು ತ್ಯಜಿಸಿದ್ದುದರಿಂದ ಜನತೆಯು ಅವರಲ್ಲಿ ವಿಶ್ವಾಸವಿಟ್ಟಿತ್ತು. ಭಾರತದಲ್ಲಿ ಮಾತ್ರವಲ್ಲ ಕೊನೆಕೊನೆಗೆ ಆಂತಾರಾಷ್ಟ್ರಗಳಲ್ಲಿಯೂ ಗಾಂಧೀಜಿಯವರು ಗೌರವ ಪಡೆದ ಸಂಗತಿ ಎಲ್ಲರಿಗೂ ಗೊತ್ತು. ಆದರೆ, ನಿಸ್ವಾರ್ಥಪರರಾದ ವ್ಯಾದೇತಿಕ ನಾಯಕರಲ್ಲಿಯೂ ಭಾರತೀಯರು ಇದೇ ಭಾವನೆಯನ್ನು ಇಟ್ಟುಕೊಂಡಿರುವುದಷ್ಟು ನಾನು ಭಾರತದಲ್ಲಿ ನೋಡಿದೆ.

ಇಲ್ಲಿಯ ಜನರ ಭೋಜನವು ಸರಳ—ಅನ್ನ, ಪಲ್ಯ, ಮಜ್ಜಿಗೆ ಇತ್ಯಾದಿ. ನನಗೊಂದು ಗ್ರಾಮದ ನೆನಪು ಇಂದಿಗೂ ಇದೆ. ಅಲ್ಲಿ ಭೋಜನ ಮಾಡುವುದಕ್ಕೆ ಮೊದಲು ಕೈತೊಳೆದುಕೊಳ್ಳಲು ಒರ್ವ ನೃದ್ಧ ಹಿತ್ತಾಳೆಯ ಲೋಟೆಯಲ್ಲಿ ನೀರನ್ನೂ ಮಗ್ಗದಲ್ಲಿ ನೇಯ್ದ ಬೈರಾಸನ್ನೂ ತಂದ. ಕೈಗಳಿಂದ ಉಣ್ಣುವುದಕ್ಕೆ ಮೊದಲು ಈ ರೀತಿ ಮಾಡುವುದು. ಇಲ್ಲಿ ಆವಶ್ಯಕವೆಂದು ತಿಳಿಯಾಲಾಗುತ್ತದೆ. ಒರಸುಬಟ್ಟೆಯನ್ನು ನಾನು ಆಜೀವ ಬಳಸುತ್ತೇನೆ ಆದರೆ, ಚೂರಿ ಹಾಗೂ ಮುಳ್ಳುಗಳೆ ದುರು ನನಗೆ ಈ ಕ್ರಮ ಹಿಡಿಸಿತು. ಆನಂತರ ಬಲಗೈಯಲ್ಲಿ ಉಣ್ಣುವ ಅಭ್ಯಾಸ ನನಗಾದಾಗ, ಅದು ಇಷ್ಟವೆನಿಸಿತು. ತೊಳೆದು ನಿರ್ಮಲವಾದ ಬಲಗೈಯೊಂದನ್ನುಳಿದರೆ, ಅದಕ್ಕಿಂತ ಆಮೂಲ್ಯವಾದುದು ಮನುಷ್ಯನಲ್ಲೇನಿದೆ?

ಭಾರತೀಯ ಜೀವನದಲ್ಲಿ ಧರ್ಮವು ತನ್ನ ಸತ್ ಹಾಗೂ ದುಷ್—ಪರಿಣಾಮಗಳನ್ನು ಬೀರಿದೆ. ಇತರ ದೇಶಗಳಂತೆ ಧರ್ಮಾಂಧತೆಯು ಭೈರವರೂಪ ಧರಿಸಿದ್ದರೂ, ಧಾರ್ಮಿಕ ಪ್ರೇರಕಭಾವನೆಯ ಸರಳ ಸ್ವೀಕೃತಿ ಮತ್ತು ಸ್ವಧರ್ಮದ ಆತ್ಮಿಕ ಪ್ರೇರಣಾನುಸಾರ ವ್ಯವಹರಿಸುವ ಪೂರ್ಣ ಸ್ವಾತಂತ್ರ್ಯಗಳು ನನಗೆ ಮೆಚ್ಚುಗೆಯಾದುವು.

ಭಾರತೀಯ ಜೀವನದಲ್ಲಿ ತನ್ನದೇ ಆದ ಒಂದು ಕ್ರಮವಿದೆ. ಭಾರತವು ಯಾವರೀತಿ ಸ್ವಾತಂತ್ರ್ಯ ಪಡೆಯಿತು? ತನ್ನ ಸ್ವಾತಂತ್ರ್ಯವನ್ನು ಶಾಶ್ವತೀಕರಿಸಿ, ಉಚ್ಚ ವರ್ಗದ ನಾಗರಿಕರನ್ನು ನಿರ್ಮಿಸಿ, ಈ ಕೆಲವೇ ವರ್ಷಗಳಲ್ಲಿ ಪ್ರಪಂಚದ ಮೇಲೆ ತನ್ನ ಪ್ರಭಾವ ಬೀರಿದೆ ಎಂಬುದನ್ನು ನಾವು ಗಮನಿಸಿದರೆ, ಇದರ ಸತ್ಯತೆಯ ಅರಿವಾಗುವುದು.

ಸ್ವದೇಶ ಮತ್ತು ವಿದೇಶಗಳಲ್ಲಿ ಕಟು ವಿಮರ್ಶೆ ಮತ್ತು ದೋಷಾರೋಪಣೆಗಳನ್ನು ಬಿಟ್ಟು, ಅಭಿನವ ಭಾರತ ಶಾಂತ ಸಂಯತ ಆತ್ಮವಿಶ್ವಾಸಗಳಿಂದ ಮುಡಿಯುತ್ತಿದೆ. ಇಂದು ಅಜೇಯ ಆಶೀರ್ವಾದದ ಬಾಗಿಲಲ್ಲಿ ನಿಂತಿರುವ ಆತ್ಮವಿಶ್ವಾಸ ನಮ್ಮ ವಿಶ್ವಜೀವನದಲ್ಲೂ ಸೇರಿಕೊಳ್ಳುತ್ತಿದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕೆಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ಸೊತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್-ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

DONE AT

Crown RUBBER STAMP CO.

BALMATTA ROAD, MANGALORE

ಕಥಾವಿಹಾರ

(೨೩ನೇ ಪುಟದಿಂದ)

ಮಾತ್ರವಲ್ಲ, ಈ ಘಟನೆ ಆ ಮೇಲೆ ಅನೇಕ ಸಾರಿ ಪುನಃ ಪುನಃ ಸಂಭವಿಸಿತ.. ರಾತ್ರಿಯೂಟದ ತರುವಾಯ, ವಾದ್ಯ ಸಂಗೀತ ಮೊಳಗಿದೊಡನೆಯೇ ಮಹಿಳೆಯರು ನೃತ್ಯ ಸಂಗಾತಿಗಳನ್ನು ಆರಿಸಿಕೊಳ್ಳುತ್ತಿದ್ದಾಗ, ಗಂಟು ಮೂಗಿನ ಮಹಿಳೆಯು ಇತನಿಗೆ ನೃತ್ಯಾಹ್ವಾನ ನೀಡಿದಳು. ಅಮ್ಮ, ಆತನು ಸಾಧ್ಯಾರಣವಾಗಿ ಸಾಲುಮರದ ರಸ್ತೆಯಲ್ಲಿ ತಿರುಗಾಡುವುದಕ್ಕೆ ಹೋಗುತ್ತಿದ್ದ ಹೊತ್ತು. ಇದುವರೆಗೆ ಮೂಕ—ಕಿವುಡನಂತಿದ್ದ ವ್ಯಕ್ತಿಯು ಈಗ ತನ್ನ ದೈನಿಕ ಕ್ರಮಕ್ಕೆ ಶರಣು ಹೊಡೆದು, ದೀಪದ ಬತ್ತಿಯು ಪತಂಗದಂತೆ ನೃತ್ಯಭವನದ ನೆಲಗಟ್ಟಿನ ಮೇಲೆ ವೃತ್ತಾಕಾರದಲ್ಲಿ ಕುಣಿಯುತ್ತ ಇಡೀ ಸಮುಹವನ್ನು ಕಳೆದನು.

ಇದೇ ಕ್ರಮದಲ್ಲಿ ಘಟನೆಗಳು ಒಂದಾದನೇಲೊಂದರಂತೆ ಸಂಭವಿಸಿದುವು.

ಗಂಟುಮೂಗಿನ ಮಹಿಳೆಯು ಹೊಳೆವ ಕಣ್ಣುಗಳ ಬಲೆ ಬೀಸಿ ನನ್ನ ಕೋಣೆಯ ಮಿತ್ರನಿಗೆ ಪ್ರತಿದಿನವೂ ತೊಂದರೆ ಕೊಡತೊಡಗಿದಳು. ಹೆಚ್ಚೇನೆಂದರೆ, ಆಕೆಯು ದಿನಕ್ಕೆ ಮೂರು—ನಾಲ್ಕು ಸಲ ಬರತೊಡಗಿದಳು. ನನ್ನ ಮಿತ್ರನ ಕಟ್ಟುನಿಟ್ಟಾದ ದಿನಚರಿ—ಕ್ರಮ ಆಕೆಗೆ ತಿಳಿದಿರಲಿಲ್ಲ; ಅಥವಾ ತಿಳಿದಿದ್ದೂ ಅದನ್ನು ಆಕೆ ನಿರ್ಲಕ್ಷಿಸುತ್ತಿದ್ದಳು. ಆತನು ತನ್ನ ವಿೂಸೆಗಳನ್ನು,—ಪೊದೆಗೂದಲಿನಂತಿದ್ದ ವಿೂಸೆಗಳನ್ನು, ಕತ್ತರಿಸಿ ಒಪ್ಪವಾಡಿಕೊಳ್ಳುತ್ತಿದ್ದ ವೇಳೆಯಲ್ಲಿಯೇ ಆಕೆಯು ಬರತೊಡಗಿದಳು. ಆತನ ಕಾಲ ನಿಯಮದಲ್ಲಿ ಆಕೆಯು ಕೈಹಾಕಿ ತೊಂದರೆಕೊಡತೊಡಗಿದಳು. ಆತನು ತನ್ನ ವೇಳಾಪತ್ರಿಕೆಯನ್ನು ಅನುಸರಿಸಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದನು. ಆ ಕಾರ್ಯವು ಆತನಿಗೆ ಅತ್ಯಂತ ಕಠಿನವಾಗಿತ್ತು. ಒಂದು ದಿನ ರಾತ್ರಿ ಆತನು ನೀರು ಸುರಿಸುತ್ತಿದ್ದ ಕೊಳಾಯಿಯ ಸೇವೆ ಪಡೆಯಬಯಸುತ್ತಿದ್ದಾಗ, ಆಕೆಯು ಆತನನ್ನು ಸರೋವರದ ಬಳಿ ತಿರುಗಾಡುವುದಕ್ಕೆ ಕರೆದುಕೊಂಡು ಹೋದಳು.

"ಮಿ|| ಕೊಸ್ತೋವ್, ನಿಮಗೆ ತಾಜ ಹುಲ್ಲಿನ ಸುವಾಸನೆ ಇಷ್ಟವೇ?"—ಎಂದು ಆಕೆಯು ಕೇಳಿದಳು. (ನನ್ನ ಕೋಣೆ ಸಂಗಾತಿಯ ಸರು, ಕೊಸ್ತೋವ್.)

"ಸ್ನಾನದ ಸಾಬೂನಿನ ಸುವಾಸನೆ ನನಗೆ ಹೆಚ್ಚು ಇಷ್ಟ!"—ಎಂದು ಆತನು ಉತ್ತರವಿತ್ತನು.

"ಇಂತಹ ಮಾತು ಹೇಳಬಹುದೆ?!"—ಎನ್ನುತ್ತಾ ಘೆಂಟಾನಾದದ ಧ್ವನಿಯಲ್ಲಿ ಆಕೆ ಇಂತೆಂದಳು: "ನಾಳೆ ತಾಜಾಹರೆಯಲ್ಲಿ ತಿರುಗಾಡುವುದಕ್ಕೆ ಬನ್ನಿ, ಅದರ ಸೇವನೆಯ ತರುವಾಯ, ಗೂಳಿಗಣ್ಣಾಗಳ 'ಡೈಸಿ' ಹೂಗೊಂಚಲುಗಳನ್ನು ಕತ್ತು ಕೊಂಡ ತರುವಾಯ, ನಿಮ್ಮ ಮನಸ್ಸನ್ನು ನೀವು ಎಷ್ಟು ಬದಲಾಯಿಸುವಿರೆಂಬುದು ನಿಮಗೇ ತಿಳಿಯುತ್ತದೆ!"

ನಾನು ಅಲ್ಲಿಗೆ ಬಂದ ಮೇಲೆ ಮೊದಲನೆಯ ದಿನ ಅಂದು ಆತನು ಆಕೆಯ ಸಂಗಡ ಹೊರಗೆ ತಿರುಗಾಡುವುದಕ್ಕಾಗಿ ಹೋದವನು ರಾತ್ರೆ ಹತ್ತೂವರೆ ಗಂಟೆಗೆ ವಾಪಸು ಬಂದು ಮಲಗಿದನು! ಆತನು ಅವಿಯುರುಳಿಯಂತ್ರದಂತೆ ಈ ಕಡೆಗೊಮ್ಮೆ, ಆ ಕಡೆಗೊಮ್ಮೆ ಹೊರಳಿತ್ತಾ, ಕಟ್ಟಕಡೆಗೆ ನಿದ್ರಿಸಿದನು. ನವಜಾತ ಶಿಶುವಿನಂತೆ ಬೆಳಗ್ಗೆ ಆರೂವರೆ ಗಂಟೆಯ ವರೆಗೂ ನಿದ್ರಿಸಿದನು.

ಮೂರನೆಯ ದಿನ ಇನ್ನೂ ವಿಚಿತ್ರ ಸಂಗತಿಗಳು ಸಂಭವಿಸಿದುವು.

ನಾನು ನನ್ನ ಕೋಣೆಗೆ ಮರಳಿ ಹೋಗುವ ವೇಳೆಗೆ ಗಂಟು ಮೂಗಿನ ಮಹಿಳೆಯು ಅಲ್ಲಿ ಹಾಜರಿದ್ದಳು, ನಾನು ಕೊಠಡಿಯಿಂದ ಹೊರ ಬರತೊಡಗಿದೆನು. ಆಕೆಯು ನನ್ನನ್ನು ವಾಪಸು ಕರೆದಳು.

"ದಯವಿಟ್ಟು ಇಲ್ಲೇ ಇರಿ! ನನಗೆ ನಿಮ್ಮ ಸಹಾಯಬೇಕು!"—ಎಂದು ಕೂಗಿ ಹೇಳುತ್ತ ಆಕೆಯು ಗಹಗಹಿಸಿ ನಕ್ಕಳು.

ಆತನು ನನ್ನ ಕಡೆಗೆ ತಿರಸ್ಕಾರದ ದೃಷ್ಟಿ ಬೀರಿದನು.

"ಈ ಸೆಕೆಯಲ್ಲಿ ಈ ಕೋಣೆಯಲ್ಲಿ ಇರುವುದಕ್ಕಿಂತಲೂ ಹೊರಗಡೆ ಬಯಲಿನಲ್ಲಿರುವುದು ಹೆಚ್ಚು ಉತ್ತಮವೆಂದು ಇವರಿಗೆ ಹೇಳಿರಿ!"—ಎಂದು ಆಕೆಯು ತನ್ನ ಮಾತು ಮುಂದುವರಿಸಿದಳು.

ನನ್ನ ಸಮ್ಮತಿ ಸೂಚಿಸುತ್ತ ನಾನು ತಲೆದೂಗಿದನೆ:. ಆತನ ಕೆನ್ನೆ ಕೆಂಪೇರಿತು ಕೆಲಸವಿದೆಯೆಂದು ಹೇಳುತ್ತ, ಅವಿನೇಕ ದ ಕೆಲಸ ಮಾಡತೊಡಗಿದನು ತನ್ನ ಪೆಟ್ಟಿಗೆಯ ಬೀಗವನ್ನು ತೆಗೆದು, ಕೆಳಗಿಟ್ಟು..... ತನ್ನ ಪಾಯಿಜಾಮದ ಮೇಲೆ ಗುಂಡಿಗಳನ್ನು ಹೊಲಿಯುವುದಾರಂಭಿಸಿದನು.

ಆ ಕೆಲಸಗಳನ್ನು ಬೇಕಾದರೆ ನಾನು ಮಾಡಿ ಕೊಡುತ್ತೇನೆ!—ಎಂದು ಆಕೆಯು ಹೇಳಿದರೂ, ಆತನು ತನ್ನ ಕೆಲಸದಲ್ಲೇ ಮಗ್ನನಾಗಿದ್ದನು.

ಮುಧ್ಯ ತಲೆಹಾಕಿ ನೂತನವಾಡುವುದು ಆಗ ಉಚಿತವಾದೀತೆಂದು ನನಗೆನಿಸಿತು. ಆಕೆಯ ಕಡೆಗೆ ನೆಟ್ಟಿಕೆಯ ಮುಗುಳ್ನಗೆ ಬೀರುತ್ತಾ, ನಾನಿಂತೆಂದೆನು.

"ಬೇಕಾದರೆ ನಾನು ಈ ಮನೆ ಸುತ್ತಲೂ ತಿರುಗಾಡಲು ನಿಮ್ಮೊತನೆ ಬರುವೆನು! ಬರುತ್ತೀರಾ?"

ತನಗೂ ಅದೇ ಬೇಕಾಗಿತ್ತೆಂದು ಆಕೆಯು ಹೇಳಿದಳು.

ನಾವಿಬ್ಬರೂ ಹೊರಗಡೆ ಹೋದೆವು. ಕೊಸ್ತೋವ್ ಒಬ್ಬಾತನೇ ಕೋಣೆಯಲ್ಲಿ ಉಳಿದಿದ್ದನು. ಆತನ ಗಲ್ಲಗಳು ಕೆಂಪೇರಿದುವು ನಾವು ಹೊರಗೆ ಹೋಗುತ್ತಿದ್ದಾಗ, ಆತನು ನನ್ನ ಕಡೆಗೊಂದು ಸುಡು ನೋಟವನ್ನು ಬೀರಿದನು!

ಮಾರನೆಯ ದಿನವೂ ಇದೇ ಕತೆಯ ಪುನರಾವೃತ್ತಿಯಾಗಲಿತ್ತು. ಆ ಮಹಿಳೆಯು ತಿರುಗಾಟಕ್ಕೆಂದು ಆತನನ್ನು ಕರೆಯತ್ತಿದ್ದ ವೇಳೆಯಲ್ಲಿಯೇ ನಾನು ಕೋಣೆಗೆ ವಾಪಸು ಹೋದೆನು—ಉದ್ದೇಶಪೂರ್ವಕವಾಗಿ!

ನಾನು ಹೋದೊಡನೆಯೇ, ಆತನ ಕಣ್ಣುಗಳಲ್ಲಿ ಸವಾಲಿನ ಮಿಂಚು ಕಂಡು ಬಂದಿತು. "ನಾನು ಹೊರಗೆ ಹೋಗಲಾರೆನೆಂದುಕೊಂಡಿದ್ದೀಯಲ್ಲವೆ, ನೀನು?"—ಎನ್ನುವಂತಿತ್ತು ಆ ನೋಟ!

ಅವರಿಬ್ಬರೂ ತಕ್ಷಣವೇ ಹೊರಟು ಹೋದರು. ನನಗೆ ಸ್ವಲ್ಪ ಸೋಜಿಗವೇ ಆಯಿತು. ಏಕೆಂದರೆ, ಆತನು ಸಾಮಾನ್ಯವಾಗಿ 'ನಾನಸ ರೊದೀನ' ಪತ್ರಿಕೆಯಲ್ಲಿ ಚಿಕ್ಕಬಂಧ ಸ್ಪರ್ಧೆ ಬಿಡಿಸಲು ಪ್ರಯತ್ನ ಮಾಡುತ್ತಿದ್ದ ಸಮಯವದು. ಆತನು ಆ ಪತ್ರಿಕೆಯನ್ನು ಕ್ರಮವಾಗಿ ತೆಗೆದುಕೊಳ್ಳುತ್ತಿದ್ದನು.

ನಾನೂ ಆ ಮೇಲೆ ಸೇವದಾರು ಕೋಸಿನಲ್ಲಿ ತಿರುಗಾಡಲು ಹೋಗಿದ್ದೆನು. ಕಾತ್ಯಾ (ಆದು ಆ ಗಂಟುಮೂಗಿನ ಸುಂದರಿಯ ಹೆಸರು), ಕೊಸ್ತೋವ್, ಮತ್ತು ಅವರ ಕಾರಬಾನೆಯ ಇನ್ನೂ ಐವರು ಆ ಕ್ಷಿದ್ದುದನ್ನು ಕಂಡು, ನಾನು ಬೆರಗಾದೆನು. ಒಬ್ಬಾತನ ಬಳಿ ರಾಗಮೂಲಿಕೆಯಿತ್ತು, ಅವರೆಲ್ಲರೂ ಸಂತೋಷದಿಂದ 'ಜೈರೊಸಿಯನ್ ನಾಲೆಟ್ಟ್' ಗೀತೆಗಳನ್ನು ನುಡಿಸುತ್ತಿದ್ದರು. ಕೊಸ್ತೋವ್ ಧ್ವನಿಯು ಎಲ್ಲರದಕ್ಕಿಂತಲೂ ಹೆಚ್ಚಾಗಿ ಕೇಳಿಸುತ್ತಿತ್ತು. ಅವರು ನಿಜವಾಗಿಯೂ, ಜೆನ್ನಾಗಿ ಹಾಡುತ್ತಿದ್ದರು.

ನಾನು ಬಂದಾಗ, ಮೊದಲನೆಯ ಬಾರಿಗೆ ಆತನು ಅಗಸಿಕನೆಂದು ನನಗನಿಸಿತು. ಈಗ, ಆತನಲ್ಲಿ ಏನೋ ಜೀವನದಾಯಿನೀ ರಸಶಕ್ತಿಯು ತುಂಬಿಕೊಳ್ಳುತ್ತಿದ್ದುದನ್ನು ನಾನು ಕಂಡೆನು. ಇಲ್ಲೇನೂ ಸಂಶಯಕ್ಕೆ ಆಸ್ಪದವೇ ಇರಲಿಲ್ಲ. ಆತನಿಗೆ ಚಮತ್ಕಾರಿಕ ಸ್ವಾಸ್ಥ್ಯ ಸದನವು ಸಿಕ್ಕಿತ್ತು. ಮನ್ಮಥನ ಮಹಿಮೆ!

ಅಂದು ರಾತ್ರೆ ಸುಮಾರು ಹನ್ನೊಂದು ಗಂಟೆಯಲ್ಲಿ ನನಗೆ ಎಚ್ಚರಿಕೆಯಾಯಿತು. ನಮ್ಮ ಮಿತ್ರನ ಮಂಚದಕಡೆ ನೋಡಿದೆನು ಅದು ಇನ್ನೂ ಖಾಲಿಯಾಗಿತ್ತು. ಮಾರನೆಯ ದಿನ ಸಂಜೆ ಕೂಡ ಆತನು ಕಾತ್ಯಾ ಸಂಗಡ ಹೊರಗೆ ಹೋದನು. ತೋಳಿಗೆ ತೋಳು ಸೇರಿಸಿಕೊಂಡು ಅವರು ತಿರುಗಾಡತೊಡಗಿದರು!

ಆತನು ಈಗ ಎಲ್ಲಿರಬಹುದು?!... ನನ್ನಾಣೆ!...ನಾನು ಖಚಿತವಾಗಿ ಹೇಳಲಾರೆ!

ಕೊಬ್ಬಿ ಬೆಳೆದ ಬಿಗರೆಯೊಂದನ್ನು ನೋಡಿರಿ. ಈ ಉತ್ತನು ಜಾತಿಯವು ಭಾರತ ಮತ್ತು ಸಿಂಹಳಗಳಲ್ಲಿ ನೂತ್ಯ ದೊರೆಯುವುದು

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4½%
13 ,, 24 ,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲಿಕ್ಕಕ್ಕೆ 2½%
ಚಾಲ್ತಿ ದೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.


ಕುಮಾರಿ ಬ್ಲೀಚಿಂಗ್
(Registered)
ಈ ದೇಶೀಯ ತಯೂರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಸ್ವಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ಎಕ್ಕಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).
P. DEVEE & Co. (M. I.) CALCUTTA—40
ಸ್ಯಾಂಪಿಸ್ಸರು: ಪಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
24-11-1960

LICENSE NO. 31
Licensed to Post without Prepayment

ಮರೆಯದ ನೆನಪು

ಶ್ರೇಷ್ಠ ಕವಿಯ ಚಿರ ನೆನಪಿಗಾಗಿ....

ಉದ್ದಾಮ ಕವಿಯ ಸ್ಮಾರಕಕ್ಕಾಗಿ ಸರಕಾರ ಕಾರ್ಯವೆಸಗಿತು; ಆದರೆ, ಆದರ ಪರಿಣಾಮ.....?

ದೇಶದ ಪ್ರಸಿದ್ಧ ಕವಿಯೊಬ್ಬ ಮೃತ್ಯುಮುಖನಾಗಿ ವಾರ್ತೆ ಕನ್ನಡಿಯಂತೆ ದಿಗ್ದೇಶಗಳಲ್ಲಿ ಪಸರಿಸಿತು. ಎಲ್ಲೆಲ್ಲೂ ಆವೇ ಮಾತು; ಆತನದೇ ಪ್ರಶಂಸೆ; ಆತನ ಕುರಿತಾಗಿಯೇ ಅತಿರೇಕ ಶೋಕ ಸ್ವದರ್ಶನ! ಸಂಸಾರದ ಆಧಾರಸ್ತಂಭನಾದ ಕವಿಯು ದೇಹತ್ಯಾಗ ಮಾಡಿದುದರಿಂದ ಆತನ ವಿಧವೆ ಪತ್ನಿ ಮತ್ತು ಇಬ್ಬರು ಕಿರಿಯ ಮಕ್ಕಳು ದೊಡ್ಡ ಸಂಕಟದಲ್ಲಿ ಸಿಕ್ಕಿ ಬಿದ್ದರು. ಕವಿಯದೆಂಬ ಸ್ವಂತ ಮನೆಯನ್ನಾಲದರೆ ಮತ್ತಾತನ ಸ್ಥಿರ-ಚಲ ಸಂಪತ್ತೂ ಅಲ್ಲಿ ಇಲ್ಲ. ಈ ದಂಡತಿ ಮಕ್ಕಳು ಆದೇ ಗುಡಿಸಲಲ್ಲಿ ದಿನದೂಡುತ್ತಿದ್ದರು. ಪತ್ನಿಯು ತನ್ನ ಅನಾಥತೆಯನ್ನು ವಿವರಿಸಿ, ದಯೂಳುವಾದ ಸರಕಾರವು ಏನಾದರೂ ಸಹಾಯಮಾಡಬೇಕೆಂದು ವಿಜ್ಞಾಪಿಸಿಕೊಂಡಳು. ಕವಿಯ ಹೆತ್ತವಿಗೆಗೂ ಈ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಸರಕಾರಕ್ಕೆ ಟೆಲಿಗ್ರಾಮಿತ್ತರು. "ಈತನು ಮಹಾನ್ ಕವಿಯೂಗಿದ್ದಾನೆ; ಆದುದರಿಂದ ಈತನ ಬಗ್ಗೆ ಏನಾದರೂ ಮಾಡಬೇಕು."

ಎಡೆಬಿಡದೆ ಬಂದ ಹಲವಾರು ತಾರುಗಳನ್ನು ನೋಡಿದ ಜನತಾ ಸರಕಾರವು ಕಣ್ಣು ತೆರೆಯಿತು. ಯಾರೋ ಮಹಾ ಕವಿಯೇಬೇಕು ಎಂದದು ಭಾವಿಸಿತು. ಆದು ಕವಿಯ ಪತ್ನಿಗೂ ಜನತೆಗೂ ಆಶ್ವಾಸನ ನೀಡಿತು. ಈ ಬಗ್ಗೆ ಪರಿಶೀಲನೆ ನಡೆಸಿ, ಸರಕಾರಕ್ಕೆ ಸಲಹೆ ಮಾಡುವಂತೆ ಒಂದು ಸಮಿತಿಯನ್ನು ರಚಿಸಿತು. ಇದರಿಂದ ಜನರಿಗೆ ಮುಖ್ಯವಾಗಿ ನಿರ್ಗತಿಕ ಳಾದ ಪತ್ನಿಗೆ ಆಶ್ವಾಸನೆ ದೊರೆತರೂ, ಆದನ್ನು ಸರಿಪಡಿಸಬೇಕು ಎಂದು ಕೊಂಡಳು.

ನಿಯುಕ್ತವಾದ ಸಮಿತಿ ಊರಿಗೆ ಬಂದಿತು. ಕವಿ ಪತ್ನಿಯನ್ನೂ ಊರ ಮಹನೀಯರನ್ನೂ ಕಂಡು ವಿಚಾರ ವಿನಿಮಯ ನಡೆಯಿತು. ಕವಿಯ ಆ ಹರಕಲು ಗುಡಿಸಿಲನ್ನು ಕಂಡು ಸಮಿತಿಯ ಸದಸ್ಯರು ಕಣ್ಣೀರ್ಗಿಡಿದರು. ಇವರ ಹೃದಯ ತುಂಬಿ ಬಂತು; ಕವಿಯ ಬಗ್ಗೆ ಶ್ರದ್ಧಾಭಾವ ಕೋಡಿ ಹರಿಯಿತು. ಈ "ಮಹಾಕವಿ"ಯ ಬಗ್ಗೆ ಸರಕಾರವೇನಾದರೂ ಮಾಡದಿರುವುದೆಂದು ಆಶ್ವಾಸನೆಯಿತ್ತರು. ಪಾಪ, ಅದಕ್ಕಿಂತ ಹೆಚ್ಚಿನದೇನನ್ನು ತಾನೇ ಮಾಡಬಲ್ಲರು?

ಸಮಿತಿಯು ತನ್ನ ಸುವಿಸ್ತೃತ ವರದಿಯನ್ನು ತಯಾರಿಸಿ ನಿಶ್ಚಿತ ಸಮಯಾವಧಿಯೊಳಗೆ ನಂತರವೇ ಸರಕಾರಕ್ಕೆ ಅರ್ಪಿಸಿತು. ಕವಿಯ ಶ್ರೇಷ್ಠತೆ ಆತನ ಜನಪ್ರಿಯತೆ, ಗುಣ ಸಂಪನ್ನತೆ ಹಾಗೂ ಪ್ರತಿಭೆಗಳನ್ನು ನಾನಾ ಸರಿಯಾಗಿ ವಿವರಿಸಿ, ಕವಿಯ ಶ್ರೇಷ್ಠ ವ್ಯಕ್ತಿತ್ವವನ್ನು ನಾಗರಿಕರು ಪ್ರತಿ ದಿನವೂ ಸ್ಮರಿಯದಂತೆ ಮಾಡಬೇಕು - ಎಂದು ಹೇಳಿ, ಆದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೂಪಿಸುವ ಅವಶ್ಯಕತೆಗಳನ್ನು ಪ್ರತಿಬಿಂಬಿಸಲಾಗಿತ್ತು.

ತನ್ನ ಕೈಸೇರಿದ ವರದಿಯನ್ನು ಸರಕಾರವಾದರೂ ಸಂಪೂರ್ಣವಾಗಿ ಮನನ ಮಾಡಿತು. ಜನರು ತಾರಿನಲ್ಲಿ ತಿಳಿಸಿದ ಕವಿಯ ವ್ಯಕ್ತಿತ್ವ ಕಡಿನುಯದಲ್ಲವೆಂಬುದು ಅದಕ್ಕೆ ಖಾತ್ರಿಯಾಯಿತು. ಆದುದರಿಂದ, ಸರಕಾರವು ಈ ದಿಸೆಯಲ್ಲಿ ಸ್ವಲ್ಪ ಪ್ರಯೂಸವಹಿಸಲೇ ಬೇಕಾಗಿತ್ತು. ಆರು ತಿಂಗಳುಗಳ ವರೆಗೆ ಮುದೀರ್ಘಪರಿಶೀಲನೆ ನಡೆಸಿ ಕೊನೆಗೆ ತನ್ನ ನಿರ್ಧಾರವನ್ನು ಪ್ರಕಟಗೊಳಿಸಿತು ಇದರ ಒಂದು ಪ್ರತಿಯನ್ನು ಕವಿಯ ಪತ್ನಿಗೂ ಕಳಿಸಲಾಗಿತ್ತು: "ಮಹಾಕವಿಯ ಬಗ್ಗೆ ಸಮಸ್ತ ಜನತೆಯ ಹೃದಯದಲ್ಲಿ ಶ್ರದ್ಧೆಯು ಉತ್ಪನ್ನವಾಗಿದೆ. ಆತನ ಸ್ಮಾರಕವಾಗಿ ಏನಾದರೂ ಮಾಡುವುದು ಅತ್ಯವಶ್ಯವೆಂದು ನಾವು ತಿಳಿದುಃ ನೇಮಿಸಿದ ಸಮಿತಿಯು ಕವಿಯ ಸ್ಮಾರಕಕ್ಕಾಗಿ ಆತನು ವಾಸಿಸುತಿದ್ದ ಮನೆಯನ್ನು ಸರಕಾರವು ತನ್ನ ರಕ್ಷಣೆಯಲ್ಲಿಟ್ಟುಕೊಳ್ಳಬೇಕೆಂದೂ ಸಿಫಾರಸು ಮಾಡಿದೆ. ಸಮಿತಿಯ ಸಿಫಾರಸನ್ನು ಇದ್ದಕ್ಕಿದ್ದ ಹಾಗೆಯೇ ಸರಕಾರವು ಒಪ್ಪಿಕೊಳ್ಳುತ್ತದೆ. ಇದರನ್ವಯ, ಕವಿಯು ಮನೆಯು ಸರಕಾರ ರಕ್ಷಿತ ಗೃಹವಾಗುವುದು. ಯಾತ್ರಿಕರಿಗೆ ಕವಿಯ ಸಂಸ್ಮರಣೆಯನ್ನಿದು ಮಾಡುವುದು. ಈ ಮನೆಯನ್ನು ಈಗ ಇರುವ ಸ್ಥಿತಿಯಲ್ಲಿಯೇ ರಕ್ಷಿಸಿಕೊಂಡು ಬರಲು ಸರಕಾರ ಶಕ್ತಿ ವಿಂಶ ಪ್ರಯತ್ನಿಸುತ್ತದೆ."

ಮರುದಿನವೇ ಇನ್ನೊಬ್ಬ ಅಧಿಕಾರಿಯು ಬಂದು ಕವಿ ಪತ್ನಿಯ ನೋಟೋಸ್ ಜ್ಯಾರಿ ಮಾಡಿದ ಅವರಲ್ಲಿ; ಆಕೆ ಮನೆಯನ್ನು ತತ್ಕ್ಷಣವೇ ಖಾಲಿಮಾಡಿ ಹೊರ ನಡೆಯಬೇಕೆಂದು ಉಲ್ಲೇಖಿಸಲಾಗಿತ್ತು. ಕವಿ ಪತ್ನಿಯ ಹೃದಯ ಬರಿಯಿತು. ಆದರೆ, ಅಧಿಕಾರಿಗಳ ಆಜ್ಞೆ ವಿಂರುವ ಶಕ್ತಿ ಯಾರಲ್ಲಿದೆ?

ಮಾರನೆದಿನ ಮುಂಜಾವದ ನಸು ಬೆಳಕಿನಲ್ಲಿ ಕವಿಪತ್ನಿ ಮೆತ್ತಾತ್ಮಕೆಯ ಇರ್ವರು ಮಕ್ಕಳು ವಿನ್ನವದನರಾಗಿ, ಕವಿಯು ಹೆಸರೆತ್ತುತ್ತ ಬೀದಿಯಲ್ಲಿ ಕೋಲು ಮೋರೆ ಹಾಕಿ ಮುನ್ನಡೆಯುತಿದ್ದರು! ಸರಕಾರವು ಸ್ಥಾಪಿಸಿದ ಸ್ಮಾರಕದಿಂದಲ್ಲವಾದರೂ ಅದರಿಂದಾದ ಪರಿಣಾಮದಿಂದ ಕವಿಯ ನೆನಪು ಚಿರವಾಗುಳಿಯುವಂತಾಯಿತು.

ಪ್ರಚಲಿತ ಪ್ರಸಂಗ

(ರಸೇ ಪುಟದಿಂದ)

ದು; ಅಥವಾ ಅವಸರ ಮಾಡಿರಬಹುದು. ಆದರೆ, ಇದೇ ಕಲ್ಪನ್ನು ಪರಂಪರೆಯಂತೆ ಮೂಡುತ್ತ ಬರಬೇಕೆಂಬುದೇ ಯಥಾರ್ಥವಾದುದೆಂದು ಹೇಳುವಂತಿಲ್ಲ. ಕೇವಲ ಆಡಳಿತಾತ್ಮಕ ಲೋಪದೋಷಗಳಿಗಾಗಿ ಈ ರೀತಿ ಅವಿಶ್ವಾಸವನ್ನು ಪ್ರದರ್ಶಿಸುವುದು ಕರವಲ್ಲ.

ಇಷ್ಟು ಮಾತ್ರವಲ್ಲದೆ ಮೈಸೂರಿನ ರಾಜ್ಯಕೀಯದಲ್ಲಿ ಒಂದು ವೈಶಿಷ್ಟ್ಯವಿದೆ. ಇಲ್ಲಿ ಬಹುಮತವು ಒಂದೊಂದು ಬಾರಿ ಒಂದೊಂದು ಕಡೆಗೆ ಸೇರುತ್ತದೆ. ಅಂದು ನಿಜಲಿಂಗಪ್ಪನವರ ಪಾಲಿಗಿದ್ದ ಬಹುಮತ ಆರೇ ತಿಂಗಳಲ್ಲಿ ಕರಗಿ ಕೂಯಿತು; ಜತ್ತಿಯವರನ್ನು ಗದ್ದುಗೆಗೇರಿಸಿತು. ಈಗ ಈ ಬಹುಮತ ಜತ್ತಿಯವರಿಂದ ಜಾರುತ್ತಿರುವಂತೆ ಗೋಚರಿಸುತ್ತಿದೆ. ಮುಂದೆ ಇವರು ಉರುಳಿದರೂ ಅಗಬಹುದಾದ 'ನಾಯಕ'ನ ಪಾಲಿನ ಬಹುಮತ ಎಷ್ಟು ತಿಂಗಳು ಉಳಿದೀತೆಂದ. ಈಗಲೇ ಭವಿಷ್ಯ ಹೇಳುವಂತಿಲ್ಲ. ಬಹುಮತ ಆಗಾಗ ಅತ್ತಿತ್ತ ಸರಿಯುತ್ತಿರುವುದು ಕಾಂಗ್ರೆಸ್ ಸಮಿತಿಯ—ಶಾಸನ ಸಭಾಸದಸ್ಯರ ಜಾಣಾಕ್ಷತೆಯನ್ನು ಪ್ರದರ್ಶಿಸುವುದೆಂದು ಹೇಳುವವರೂ ಇರಬಹುದು. ಆದರೆ, ನಮ್ಮ ರಾಜ್ಯದ ಮಟ್ಟಿಗೆ ಈ ಮೂಶನ್ನು ಅನ್ವಯಿಸುವುದೆಂದರೆ, ಅಪಹಾಸ್ಯವಾದೀತು.

ಶ್ರೀ ನಿಜಲಿಂಗಪ್ಪನವರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರಾದರೆಂಬುದನ್ನು ಳಿದ ಕಾಂಗ್ರೆಸ್ಸಿಗರು ಸಂತುಷ್ಟರಾಗಿದ್ದರು; ಪಕ್ಷದ ಸಂಘಟನೆ ಹಾಗೂ ಸರಕಾರದೊಡನಿರಬೇಕಾದ ಸಂಬಂಧ ದೃಢವಾಗಿ, ರಾಜ್ಯದಲ್ಲಿ ಕಾಂಗ್ರೆಸ್ ಸಂಘಟಿತವಾಗಿ ಬಲಗೊಳ್ಳುವೆಂದು ಹಾರೈಸಿದ್ದರು ಕಾಂಗ್ರೆಸ್ ರಾಜ್ಯ ಸರಕಾರದಲ್ಲಿನ ಕೆಲವೊಂದು ಲೋಪದೋಷಗಳು ದೂರವಾಗುವಂತೆ, ಜನಸೇವಾ ಸಮರ್ಥ ಸೇವೆ ಸಲ್ಲುವಂತೆ ಇವರು ಪ್ರಯತ್ನಿಸುವರೆಂದು ಬಯಸಿದ್ದರು. ಆದರೆ ಗುಂಪುಗಳ ಹಿಡಿತದಲ್ಲಿ ಓಲಾಡುತ್ತಿರುವ ಮೈಸೂರು ಕಾಂಗ್ರೆಸ್ಸು ಒಂದಾಗಿ ಬಲಯುತವಾಗುವಂತೆ ಇವರು ಶ್ರಮಿಸುವರೆಂದು ಆಶಿಸಿದ್ದರು. ಏಕೆಂದರೆ, ಪಕ್ಷ ಸಂಘಟನೆಯಲ್ಲಿ ಇವರದು ಎತ್ತಿದ ಕೈಯೆಂದು ಎಲ್ಲರೂ ತಿಳಿದಿದ್ದಾರೆ. ಕನಾಟಕ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾಗ, ಇವರು ಕಾಂಗ್ರೆಸ್ಸಿನ ಬಲ ಸಂವರ್ಧನೆಗಾಗಿ ಅಹೋರಾತ್ರಿ ದುಡಿದದನ್ನು ಯಾರೂ ಮರೆಯಲಾರರು. ಆದರೆ, ಅದೇನೋ ರಾಜ್ಯದ ಕಾಂಗ್ರೆಸ್ಸಿನ ದುರ್ವಿಧಿಯೆಂಬಂತಾಗಿ, ಇವರ ಮನಸ್ಸು ಈ ಬೇರೊಂದೆಡೆಯತ್ತ ಉಯ್ಯಲಾಡುತ್ತಿರುವುದು ಶೋಚನೀಯವೇ ಸರಿ. ರಾಜ್ಯ ಕಾಂಗ್ರೆಸ್ ದೃಷ್ಟಿಯಿಂದ ಕಾರ್ಯವೆಸಗ ಬೇಕಾಗಿದ್ದವರು ಮತ್ತೊಂದು ಮೂಲಬ್ಯುಕ್ತರಾಗುವದಾದರೆ ಏನೆಂದು ಹೇಳಬೇಕು?

ಶ್ರೀ ಜತ್ತಿಯವರ ಮಂತ್ರಿಮಂಡಳಿಯು ಸುಸಮರ್ಥವಾದೆ; ಅದು ನಿರ್ವಂಚಕ ಧೋರಣೆಯಿಂದ ಕೆಲಸಮಾಡುತ್ತಿದ್ದೆ; ದೋಷ ವಿದೂಷವಿದೆ ಎಂದು ಯಾರೂ ಹೇಳಲಾರರು. ಆದರೆ ಶ್ರೀ ಜತ್ತಿಯವರು ತಮ್ಮ ಸಂಪುಟವನ್ನು ವಿಸ್ತರಿಸಲು, ಅಥವಾ ಸಹ ಮಂತ್ರಿಗಳನ್ನು ಯವನನ್ನೇ ಒಬ್ಬನ ವೇಲೆ ನಿರ್ದಿಷ್ಟ ಖಾತೆವಾದನೆಯಿರುವುದಾದರೆ, ಆ ಬಗ್ಗೆ ಜಾಣತೆ ನಡೆಸಲು ಸಿದ್ಧರಿರುವುದಾಗಿ ಲವುದು ವಿಹೇಳಿದರೂ ಭಿನ್ನಾಭಿಪ್ರಾಯಿಗಳು ಇದಕ್ಕೆ ಒಪ್ಪದಿರುವುದೆಂದರೆ, ಅದೇ 'ವೈಯಕ್ತಿಕ ದ್ವೇಷ ಭಾವನೆ' ಅಥವಾ 'ಅಧಿಕಾರ ಲಾಲಸೆ' ಯಿಂದಲೆ ತಮ್ಮ ಧೋರಣೆಯನ್ನು ರೂಪಿಸಿಕೊಂಡಿದ್ದಾರೆನ್ನಲೇ ಬೇಕಾಗಿದೆ. ಇದರಿಂದ ರಾಜ್ಯಕಲ್ಯಾಣವಾಗುವುದೆಂದು ಯಾವ ವೇಕೆಯೂ ಹೇಳಲಾರ.

ರಾಜ್ಯಹಿತ ಕಾಂಗ್ರೆಸ್‌ನ ಭವಿಷ್ಯ ದೃಷ್ಟಿಯಿಂದ ಹೇಳುವುದಾದರೆ, ರಾಜ್ಯ ಕಾಂಗ್ರೆಸ್‌ನ ಇಬ್ಬಣಗಳ ನಡುವೆ ಸಾಮಂಜಸ್ಯ ಬೆಳೆಯುವುದು ಆಪೇಕ್ಷಣೀಯವಾಗಿದೆ. ಕಾಂಗ್ರೆಸ್ ವರಿಷ್ಠರುಸ್ಥಿವ್ರಾದಶಿಕ ಕಾಂಗ್ರೆಸ್ ಮತ್ತು ಮಂತ್ರಿಮಂಡಲಗಳು ಇದಕ್ಕೆ ಸಾಧಕವಾಗುವಂತೆ ವರ್ತಿಸುವುದು ಅವಶ್ಯಕವಾಗಿದೆ.

ಉಳಿತಾಯಕ್ಕೆ.....

ಉಳಿತಾಯಕ್ಕೆ ಒಳ್ಳೆಯ ಕಾಲ: ಯಾವಾಗಲೂ.
ಉಳಿತಾಯಕ್ಕೆ ಒಳ್ಳೆಯ ಸ್ಥಾನ: ಬೇಂಕ್.
ಸಿಂಡಿಕೇಟ್ ಬೇಂಕ್: ಉಳಿತಾಯಗಾರರ ಸನ್ಮಿತ್ರ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2-7
ಸಂಚಯಿತು (ಕಾದಂಬರಿ)	2-5
ನನ್ನ ಸುತ್ತಲಿನ ಕಡಲು	1-7
ಪರಮಾಣು—ಇಂದು—ನಾಳೆ	8-0

ಸಿಗುವ ಸ್ಥಳ:
ನವಭಾರತ ಬುಕ್ ಡಿಪೋ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

40th year of publication. 1-12-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೧೪ No. 14

ಬೆಲೆ 0-13

NAVAYUGA KANNADA WEEKLY UDIPI

ಸ್ಪಚಲಿತ ಪ್ರಸಂಗ:

ಉಜ್ವಲ ಪರಂಪರೆಯನ್ನು ಮರೆಯಬಾರದು

ನೂತನ ಪದವೀಧರರು ನಮ್ಮ ಹಿಂದಿನವರ ಉಜ್ವಲ ಪರಂಪರೆಯನ್ನು ಮರೆಯದೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರಿಯಬೇಕು; ಭಾರತಕ್ಕೆ ವಿಶ್ವರಾಷ್ಟ್ರ ಮಾಲೆಯಲ್ಲಿ ಗಣನೀಯ ಸ್ಥಾನ ದೊರೆಯುವಂತೆ ದುಡಿಯಬೇಕು, ಎನ್ನುತ್ತಾರೆ ಡಾ|| ಎ. ರಾಮಸ್ವಾಮಿ ಮುದಲಿಯಾರರು.

ವಿಶ್ವವಿದ್ಯಾಲಯಗಳ ಪದವೀದಾನ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳು ಹೊಸ ಪದವೀಧರರು ತಮ್ಮ ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಉಪದೇಶವೀಯುವುದು ರೂಢಿಯಾಗಿ ಬಂದಿದೆ. ಆದರೆ, ನಾನು ಆ ರೀತಿ ಉಪದೇಶವನ್ನು ಕೊಡುವುದಿಲ್ಲ. ಏಕೆಂದರೆ, ಅಂತಹ ಉಪದೇಶ ಕೊಡುವ ಅರ್ಹತೆ ನನ್ನಲ್ಲಿದೆಯೆಂದು ನನಗನಿಸುವುದಿಲ್ಲ. ದೇಶಸೇವೆ, ದೇಶ ಬಾಂಧವರ ಸೇವೆ, ದಲಿತರ ಉದ್ಧಾರ ಮೊದಲಾದ ಕಾರ್ಯಗಳಲ್ಲಿ ಪ್ರವೃತ್ತರಾಗುವಂತೆ ಹೊಸ ಪದವೀಧರರನ್ನು ಕೇಳಿಕೊಳ್ಳುವುದು ಅತಿ ಸುಲಭ. ಆದರೆ, ನಾವು ಅವರಿಗೆ ಉಪದೇಶ ಮಾಡುವುದನ್ನು ನಾವೇ ಆಚರಣೆಯಲ್ಲಿ ಮಾಡಿ ತೋರಿಸಿದರೆ, ಹೆಚ್ಚು ಉಪಯುಕ್ತವಾಗುವುದು. ಇತ್ತೀಚೆಗೆ ನಾವು ಸರ್ ಎಂ. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನಾಚರಿಸಿದ್ದೇವೆ. ಹೊಸ ಪದವೀಧರರ ಬಗ್ಗೆ ಹಲವಾರು ಶಬ್ದಗಳನ್ನು ಹೇಳುವುದಕ್ಕಿಂತ ಈ ಮಹಾನುಭಾವರ ಜೀವನದಂತೆ ನಡೆದುಕೊಳ್ಳಿರೆಂದು ಒಂದೇ ಮಾತಿನಲ್ಲಿ ಹೇಳಿದರೆ ಸಾಕೆಂದು ನನಗನಿಸುವುದು.

ನಮ್ಮ ಹಿಂದಿನ ಶಿಕ್ಷಣ ಪ್ರಣಾಳಿಯಲ್ಲಿ ಕೆಲವೊಂದು ನ್ಯೂನತೆಗಳಿವೆಯೆಂದು ದೂರಲಾಗುತ್ತಿದೆ. ಆರ್ಟ್ಸ್ ಮತ್ತು ಸಯನ್ಸ್ ವಿಷಯಗಳ ಶಿಕ್ಷಣದ ಬಗ್ಗೆ ಸಮತೋಕವಿದ್ದಿಲ್ಲವೆಂಬುದು ನಿಜವಿರಬಹುದು. ಆದರೆ, ಇದೇ ಪದ್ಧತಿಯ ಶಿಕ್ಷಣವು ನಮ್ಮ ದೇಶದಲ್ಲಿ ರಾಜಕೀಯ ಜಾಗ್ರತಿಯನ್ನು ಹುಟ್ಟಿಸಿತು; ಪ್ರಜಾಪ್ರತ್ಯಾತ್ಮಕ ಸಂಸ್ಥೆಗಳ ಬಗ್ಗೆ ಜನತೆಯಲ್ಲಿ ದಾಹವನ್ನೆ ಹೆಚ್ಚಿಸಿತು; ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಜನರನ್ನು ಒಂದು ಗೂಡಿಸಲು ಕಾರಣವಾಯಿತು—ಎಂಬುದನ್ನು ಮರೆಯುವಂತಿಲ್ಲ. ನಮ್ಮ ದೇಶಕ್ಕೆ ಪ್ರಥಮ ರಾಷ್ಟ್ರಪತಿ, ಪ್ರಥಮ ಗವರ್ನರ್ ಜನರಲ್ ಪ್ರಥಮ ಪ್ರಧಾನಿ, ಪ್ರಥಮ ಉಪರಾಷ್ಟ್ರಪತಿ ಇವರನ್ನೂ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ದೇಶರೂಪೀ ಹಡಗವನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗಲು ಕಾರಣರಾದ ನಮ್ಮ ಸ್ತ ಅಧಿಕಾರಿಗಳನ್ನೂ ನೀಡಿರುವ ಹಿಂದಿನ ಶಿಕ್ಷಣವನ್ನು ಮರೆಯಲಾದೀತೆ? ಆಗಿನ ಕಾಲದಲ್ಲಿ ಇಂದಿನಂತೆ ಆಣುಬಾಂಬುಗಳು, ಸ್ಪುಟ್ನಿಕ್‌ಗಳು ಇರಲಿಲ್ಲ. ಆದುದರಿಂದ ಆಗ ತಾಂತ್ರಿಕ ಹಾಗೂ ವೈಜ್ಞಾನಿಕ ಶಿಕ್ಷಣಕ್ಕೆ ಹೆಚ್ಚು ಗಮನವೀಯುವ ಆವಶ್ಯಕತೆ ಇದ್ದಿಲ್ಲವೆಂಬುದನ್ನು ನಾವು ಅಲ್ಲಗಳೆಯುವಂತಿಲ್ಲ.

ಕೇವಲ ವಿದ್ಯೆಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯಕೀಯ ಧುರೀಣರು ಕೈಹಾಕುವುದು ಸರಿಯಲ್ಲ. ವಿಶ್ವವಿದ್ಯಾಲಯಗಳಿಗೆ ವಿನ್ಯೆಯ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವಿರಲೇ ಬೇಕು. ಎಲ್ಲ ಪ್ರಜಾಸತ್ಯಾತ್ಮಕ ರಾಷ್ಟ್ರಗಳಲ್ಲಿಯೂ ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ಮುತ್ಸದ್ದಿಗಳು ಈ ವಾದವನ್ನು ಪ್ರತಿಪಾದಿಸುತ್ತ ಬಂದಿದ್ದಾರೆ. ಹೀಗೆಂದಮಾತ್ರಕ್ಕೆ ವಿಶ್ವವಿದ್ಯಾಲಯಗಳು ತಮ್ಮದೇ ಆದ ವಾತಾವರಣದಲ್ಲಿ ಇತರರಿಂದ ಆಲಿಪ್ತವಾಗಿ ಇರಬೇಕೆಂದು ಅರ್ಥವಲ್ಲ. ಸಾಮಾನ್ಯ ಜನತೆಯಿಂದ ದೂರವಿರಬೇಕಾಗುದು ಇಷ್ಟವಾದರೂ ಈ ಅಪಾರ ಜನತೆಯ ಆವಶ್ಯಕತೆಗಳನ್ನು ಅವು ಲಕ್ಷಿಸುವುದು ಹೇಗೆ ಸಾಧ್ಯವಾದೀತು? ಜನತೆಯಲ್ಲಿ ಪರಿವರ್ತನೆಯಾದ ಪರಿಸ್ಥಿತಿಗಳನ್ನು ಗಮನಿಸುವುದಲ್ಲವೆ ರಾಷ್ಟ್ರೀಯ ಜೀವನದಲ್ಲಿ ತಲೆದೋರುವ ಆವಶ್ಯಕತೆಗಳನ್ನು ಪೂರೈಸುವಲ್ಲಿ ವಿಶ್ವವಿದ್ಯಾಲಯಗಳು ಮಹತ್ವದ ಪಾತ್ರ ವಹಿಸಬೇಕಾಗಿದೆ. ವಿಶ್ವವಿದ್ಯಾಲಯಗಳಿಗೆ ಮಾರ್ಗದರ್ಶನ ನೀಡುತ್ತಿರುವವರಲ್ಲಿ ವಿಶ್ವವಿದ್ಯಾಲಯಗಳ ಸಂಘಟನೆ ಮತ್ತು ಕರ್ತವ್ಯಗಳ ಬಗ್ಗೆ ಸರಿಯಾದ ಜ್ಞಾನವಿದ್ದಿದ್ದರೆ, ಇಂದು ಅನೇಕ ವಿಶ್ವವಿದ್ಯಾಲಯಗಳಲ್ಲಿ ಕಂಡು ಬರುತ್ತಿರುವ ವಾದವಿವಾದ, ಘರ್ಷಣೆ, ವೈಮನಸ್ಸುಗಳು ಇರುತ್ತಿರಲಿಲ್ಲ.

ಅಮೆರಿಕೆಯಲ್ಲಿ ವಯಸ್ಕರ ಶಿಕ್ಷಣ

೧. ಅಮೆರಿಕೆಯು ವಸಾಹತುವಾಗಿದ್ದಾಗಿನಿಂದಲೂ ವಯಸ್ಕರ ಶಿಕ್ಷಣದ ಬಗ್ಗೆ ಅಸಕ್ತಿ ಸಹಿಸಿದೆ. ಶ್ರೀ ಬೆಂಜಮಿನ್ ಫ್ರಾಂಕ್ಲಿನ್‌ನೇ ಇದರ ಮೂಲ ಪ್ರಚೋದಕ. ಈಗ ಹೆಚ್ಚಿನ ಕಾಲೇಜುಗಳಲ್ಲಿ ವಯಸ್ಕರ ಶಿಕ್ಷಣ ನಿಘಾಗವನ್ನು ತೆರೆದಿವೆ. ಪತ್ರವ್ಯವಹಾರ ಪಾಠಗಳ ಅಭ್ಯಾಸ ನೀಡುವ ಶಾಲೆಗಳನ್ನು, ರಾತ್ರಿ ಶಾಲೆಗಳನ್ನೆ. ಇವುಗಳಲ್ಲಿ ಒಟ್ಟು ೪೫ ಮಿಲಿಯ ಜನ ವಯಸ್ಕರು ಶಿಕ್ಷಣ ಪಡೆಯುತ್ತಿದ್ದಾರೆ. ೨. ಕೇವಲ ತಮ್ಮ ಜ್ಞಾನಾಭಿವೃದ್ಧಿಗಾಗಿ ಆರ್ಥವಾ ಉಪವೃತ್ತಿಯ ಅಭ್ಯಾಸವನ್ನು ನೂಡುವುದಕ್ಕಾಗಿ ವಯಸ್ಕ ವರ್ಗಗಳಲ್ಲಿ ಸೇರ್ಪಡೆಯಾದವರೂ ಅನೇಕ ಮಂದಿಯಿದ್ದಾರೆ. ೩ ನೀವು ಆಜ್ಞಂದಿರೋ ಆಜ್ಞಂದಿರೋ ಆದ ನಂತರ ಕಾಲೇಜು ಪದವಿಗಳನ್ನು ಪಡೆಯುವವರು ಹಲವರಿಲ್ಲಿ ಇದ್ದಾರೆಂದರೆ, ನೀವು ವಿಸ್ಮಯಪಡಬಹುದಲ್ಲವೆ?

ಇತ್ತೀಚೆಗೆ ನೇರಿದ ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸಭೆಯು ಸ್ವೀಕರಿಸಿದ ಗೊತ್ತುವಳಿಗಳನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಈ ಶಿಕ್ಷಣನೇತ್ರರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುವರು. ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಮೇಲಿಂದ ಮೇಲೆ ಒಂದುಸೇರಿ ವಾದಗ್ರಸ್ತ ವಿಷಯಗಳ ಬಗ್ಗೆ ತಮ್ಮ ವಿಚಾರಗಳನ್ನು ಬಹಿರಂಗಪಡಿಸುವರೆಂದು ನಂಬಿದ್ದೇನೆ.

ಈ ಸಭೆಯ ಕುರಿತು ಮೊತನಾಡುವಾಗ ನನಗೆ ಇನ್ನೊಂದು ವಿಷಯವು ನೆನಪಿಗೆ ಬರುತ್ತಿದೆ. ದಕ್ಷಿಣ ಭಾರತದಲ್ಲಿಯು ಪ್ರದೇಶವೆಲ್ಲವುಗಳೊಡನೆ ಒಂದಿಲ್ಲೊಂದು ಸಂಬಂಧ ನನಗಿರುತ್ತದೆ. ಕೆಲವೆಡೆ ವಿಶ್ವವಿದ್ಯಾಲಯದ ಚಟುವಟಿಕೆಗಳ ಮೂಲಕ ನನ್ನ ಸಂಬಂಧವಿದ್ದರೆ, ಕೆಲವೆಡೆ ರಾಜಕೀಯ ಹಾಗೂ ಆಡಳಿತಾತ್ಮಕ ಚಟುವಟಿಕೆಗಳ ಮೂಲಕ ನನ್ನ ಸಂಬಂಧವಿರುತ್ತದೆ. ಭಾರತದ ಎಲ್ಲ ರಾಜ್ಯಗಳಲ್ಲಿ ನಾನು ಸಂಚರಿಸಿದ್ದೇನೆ. ಅಲ್ಲಿಯ ಜನಜೀವನವನ್ನು ಅಭ್ಯಸಿಸಿದ್ದೇನೆ. ನನ್ನ ೫೦ ವರ್ಷಗಳ ಅನುಭವದಿಂದ ಹೇಳಬೇಕಾದರೆ, ಸಂಸ್ಕೃತಿ, ನಾಗರಿಕತೆ ಹಾಗೂ ಜ್ಞಾನದ ಜ್ಯೋತಿಯು ದಕ್ಷಿಣ ಭಾರತದ ಈ ಸ್ವವಿಸ್ತಾರದಲ್ಲಿ ಹೆಚ್ಚು ಪ್ರಕಾಶಮಾನವಾಗಿ ಬೆಳಗುವಷ್ಟು ಬೇರೆ ಯಲ್ಲಿಯೂ ಬೆಳಗಲಾರದು. ಇದು ನನ್ನ ಸುದೃಢವಾದ ವಿಶ್ವಾಸ. ಈ ಪ್ರದೇಶದಲ್ಲಿ ಪರಸ್ಪರ ತಿಳುವಳಿಕೆ ಮತ್ತು ತಾಳ್ಮೆಗಳ ಮೂಲಕ ವ್ಯಕ್ತವಾಗುತ್ತಿರುವ ಸೈಜ ಸಂಸ್ಕೃತಿಯು ಇಷ್ಟೊಂದು ಪರಿಪೂರ್ಣವಾದ ರೀತಿಯಲ್ಲಿ ಬೇರಾವ ಭಾಗದಲ್ಲಿಯೂ ಗೋಚರಿಸುವುದಿಲ್ಲ. ಪ್ರತ್ಯೇಕ ರಾಜಕೀಯ ಅಸ್ತಿತ್ವವನ್ನು ಬೇಡುವ ಇಲ್ಲವೇ ಭಾರತದ ಇತರ ಭಾಗಗಳಿಂದ ಸಿಡಿ

(೧೨ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೨.

ಸಾಮಾನ್ಯ ಸಂಪಾದಕರು:
ಎಸ್. ಗೋವಿಂದ ರಾವ್, ಬಿ.ಎ.
ಜಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಪಾದಕ ಸಂಪಾದಕರು:
ಕೆ. ಜೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆಖರ್ಚು ಸೇರಿ) ರೂ. 6-25
ಪ್ರತಿ ರೂ 0-13

ಚಂದಾಪಟ್ಟನ್ನಾಗಲೀ ಜಾಹೀರಾತಿನ ಹಣಪತ್ರಗಳನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ದೇಶಸೇವೆ ಮತ್ತು ಶ್ರಮದಾನ

ದೇಶಸೇವೆಯನ್ನೇ ತನ್ನ ಜೀವನದ ಪ್ರಧಾನೋದ್ದೇಶವಾಗಿಟ್ಟುಕೊಂಡ ಪ್ರಭಾಕರ ನಿಶ್ಚಲ ಚಿತ್ತದಿಂದ ದೇಶಸೇವೆಯೇನೋ ಮಾಡುತಿದ್ದ..... ಸೋದರ ವಾಟೆಯ ಗೃಹನಿರ್ಮಾಣ ಯೋಜನೆಯಲ್ಲಿ ಶ್ರಮದಾನ ಮಾಡುತಿದ್ದ ಆತ ತನ್ನ ಮನೆಯಲ್ಲಿ ಕುಳಿತುಕೊಳ್ಳಲು ಸರ್ವಥಾ ಅಸಮರ್ಥನಾಗಿಬಿಟ್ಟ!

ಮೂಲ: ಬ್ರಹ್ಮದತ್ತ. ಅನುವಾದ: "ಗೋರಾ".

ಭಗವಾನ್ ನೀಲಕಂಠನ ಚಿತ್ರದ ಸಮ್ಮುಖದಲ್ಲಿ ಪ್ರಭಾಕರನು ನಯನಗಳನ್ನು ಮುಗಿದು ನತಮಸ್ತಕನಾದನು. ಪ್ರತಿದಿನ ಪ್ರಾತಃಕಾಲ ಸ್ನಾನಾನಂತರ ಕೆಲ ನಿಮಿಷಕಾಲ ಪ್ರಭು ನೀಲಕಂಠನ ಮುಂದೆ ನಿಂತು ಧ್ಯಾನಮಗ್ನನಾಗುತಿದ್ದ. ಆದರೆ, ಇಂದೇಕೋ ಬಹುಹೊತ್ತು ನಿಂತೇ ಉಳಿದ. ಹಕತ್ತಾಗಿ ತಲೆಯೆತ್ತಿದ; ರೆಪ್ಪೆಗಳು ತೆರೆದುತ್ತು; ನೇತ್ರ ಸಂಪುಟಗಳಿಂದ ಅಶ್ರುಬಿಂದುಗಳು ಹೊಳೆಯತೊಡಗಿತು. ಬಟ್ಟೆಯ ತುದಿಯಂಚಿನಿಂದ ಕಣ್ಣುಗಳ ಮೂಲೆಯನ್ನು ಒರಸಿಕೊಂಡು ತಿರುಗಿ ಅತ್ತಿತ್ತ ನೋಡಿದ. ಪ್ರಾಂಗಣದಲ್ಲಿ ಯಾರೊಬ್ಬರೂ ಇದ್ದಂತೆ ತೋರಲಿಲ್ಲ. ಸಮೂಹದ ಎಲ್ಲ ಮನೆಗಳಲ್ಲಿ ಜಹಾಗಿಟ್ಟ ದೀಪ್ತನ್ ಉರಿಯುವ ಸದ್ದು ಕಿವಿದೆರೆಗೆ ಬಡಿಯುತಿತ್ತು.

ಪ್ರಭಾಕರ ಅಂಗಿತೊಟ್ಟು ತತ್‌ಕ್ಷಣ ಮನೆಯ ನೆಟ್ಟಿಲಿಳಿದ ಮಾರ್ಗಕ್ಕೆ ಮುಟ್ಟಿದೊಡನೆಯೇ ಪೂರ್ವ ದಿಶೆಗೆ ತಿರುಗಿ ಉದಯಿಸುವ ಸೂರ್ಯದೇವನಿಗೆ ಪ್ರಣಾಮಸಲ್ಲಿಸಿದ. ನಾನಾಚಿಂತೆಗಳದತ್ತ ಆತನ ಪಾದಗಳು ಯಂತ್ರಿ ಬೆಳೆಸಿದುವು.

ಪ್ರಭಾಕರ ಮೂವತ್ತು ವರ್ಷ ವಯಸ್ಸಿನ ತರುಣ ತಪಸ್ವಿ. ಲೋಕ ಸೇವೆಯೇ ಇವನ ಅಖಂಡ ಜೀವನದ ಮುಖ್ಯೋದ್ದೇಶವಾಗಿತ್ತು. ಕೀರ್ತಿಗೋಸ್ಕರ ಅಖಂಡ ಪ್ರಪಂಚ ಹೊಡೆದಾಡುತ್ತಿದೆ. ಮೌನ ವ್ರತಿಗಳು ಈ ಪೃಥ್ವಿಯಲ್ಲಿರುವುದೇ ಅತಿ ವಿರಳ; ಇದ್ದರೂ ಅವರ ಬಗ್ಗೆ ನಮಗೇನೂ ತಿಳಿದಿರುವುದಿಲ್ಲ. ಆ ಮೌನ ಹಾಗೂ ವ್ರತಗಳಿಂದೇನೆಂಬುದಷ್ಟೂ ನಮ್ಮವರಲ್ಲಿ ಹೆಚ್ಚಿನವರು ತಿಳಿದಿಲ್ಲ.

ದಾರಿಗುಂಟ ನಡೆಯುತ್ತ ಪ್ರಭಾಕರ ಆಲೋಚಿಸ ತೊಡಗಿದ—"ಕಠೋರ ತೆಯಿಂದ ತಮ್ಮ ಕರ್ತವ್ಯಪಾಲನೆ ಮಾಡುವವರೇ ಪುರುಷರು. ಜೀವನದ ತೂಗುಟ ಸಾಮಾನ್ಯವಾದುದಲ್ಲ. ಇದರೊಡನೆ ಹೊಂದಿಕೊಂಡವನು ಮಾತ್ರ ಗಟ್ಟಿಯೂಗಿ ನಿಲ್ಲುತ್ತಾನೆ; ಹೊಡೆದಾಡಿದವನು ಮುರಿದೇ ಹೋಗುತ್ತಾನೆ. ಮನೆಯಿಡಿತುಂಬಿದೆ, ತಾಯಿಯಿದ್ದಾಳೆ; ಸೋದರರಿದ್ದಾರೆ, ಸೋದರಿಯರೂ ಇರುವರು; ಹೆಂಡತಿಯಿದ್ದಾಳೆ, ಮಕ್ಕಳು ಮರಿಗಳು ಕೂಡ ಇವೆ. ಇವರೆಲ್ಲರ ಬಗ್ಗೆ ತನ್ನ ದಾದ, ತಾನು ನಿರ್ವಹಿಸಬೇಕಾದ ಕರ್ತವ್ಯವೊಂದಿದೆ. ಇದು ಗೊತ್ತು. ಆದರೆ, 'ಮನೆ' ಯೆಂಬುದು ನನಗೆ ಯಾರಿಗೆ ತಾನೇ ಇರುವುದಿಲ್ಲ? ಮನೆಯಿದೆಯೆಂದರೆ, ಮನೆಯವರೊಡನೆಯೇ ಯಾವಾಗಲೂ ಅಂಟಿಕೊಂಡಿರಬೇಕೆಂಬ ಅರ್ಥವಲ್ಲ. ತ್ಯಾಗ ಮಾಡುವುದಕ್ಕೆ ಕೈಯಲ್ಲಿ ಜೇರೇನೂ ಇಲ್ಲದವನು ಏನನ್ನು ತ್ಯಜಿಸುತ್ತಾನೆ? ಕಂಗಾಲಾದವನು ಹಣಕೊಡಲಾರ; ನಗ್ನ ಶರೀರಿ ವಸ್ತ್ರದಾನ ಮಾಡಲಾಗ....

ಆದರೆ?....ನಾನಾ ಚಿಂತೆಗಳು ಬರುತ್ತಿರುವಂತೆಯೇ ಆತ ತನಗೆ ತಾನೇ ಪ್ರಶ್ನೆ ಹಾಕಿಕೊಂಡ ಜನರು ಆತನ ಬಗ್ಗೆ ಏನೂ ಅಂದುಕೊಳ್ಳುವುದಿಲ್ಲ. ಕೆಲವರು ಆವನನ್ನು 'ಬೀದಿ ಬಸವ' ನೆನ್ನಬಹುದು; ಮತ್ತೆ ಕೆಲವರು ಧರ್ಮ ಲಂಡಟನೆನ್ನುವುದೂ ಸಾಧ್ಯ. ನೊದಲು ಮನೆಯಲ್ಲಿ ದೀಪವುರಿಸಿ ಆ ಮೇಲೆ ಮಂದಿರಲ್ಲಿ ಎಂಬುದೇನೋ ಸರಿಯೇ. ಆದರೆ, ತನ್ನ ಜೀವನದ ಬಗ್ಗೆ ಯಾವ ಪ್ರಕಾರದ ಚಿಂತೆಯನ್ನೂ ಮಾಡದೆ ಲೋಕಕಲ್ಯಾಣಕ್ಕಾಗಿ ಹಾಲಾಹಲವನ್ನು ಪಾನಮಾಡಿದ ಆ ನೀಲಕಂಠನನ್ನು ಜನರೇಕೆ ಮರೆತು ಬಿಡುತ್ತಾರೆ? ....ಇದೇ ರೀತಿಯಾಗಿ ಜೀವನದ ಕಾಲ ಕೂಟ ಬಿಂದು ಬಿಂದುವಾಗಿ ಪ್ರಭಾಕರನ ಶರೀರದಲ್ಲಿ ಇಳಿಯುತ್ತ ಬರುತಿತ್ತು. ಆದರೆ ಏನು? ಮಹಾದೇವ ಆವನ ಆರಾಧ್ಯ ದೈವನಾಗಿದ್ದ. ಆತನ ಶರೀರದಲ್ಲಿ ಹಾಲಾಹಲವು ಅವಶ್ಯ ವ್ಯಾಪ್ತವಾಗಿದೆ; ಆದರೂ ನೀಲಕಂಠನಾಗಿ ಆತ ಮತ್ತೂ ದೇದೀಪ್ಯಮಾನವಾಗಿ ಪ್ರಸಿದ್ಧನಾಗಲಿಲ್ಲವೇ?

"ನಮಸ್ಕಾರ, ಪ್ರಭಾಕರರಾಯರೇ"

"ಆಂ, ನಮಸ್ತೆ" ಪ್ರಭಾಕರ ಚಕಿತನಾಗಿ ನಿಂತುಬಿಟ್ಟ. ಮುಂದುಗಡೆ ಲೀಲಾಧರನಿದ್ದ.

"ನೀನೇನೋ ಬಹಳ ವಿಚಾರನಿಮಗ್ನರಾಗಿ ನಡೆಯುತ್ತಿರುವಂತೆ ಗೋಚರವಾಗುತ್ತೀರಿ....ನಿನ್ನುತ್ತಗಡೆಗೇನೇ ಹೊರಟು ಬರುತಿದ್ದೆ...."

"ಹಾಂ, ಹಾಂ, ಹೇಳು; ಏನು ಸಮಾಚಾರ? ಯಾವ ಕಾರ್ಯ ನಿಮಿತ್ತ?"—ಸದಾ ಇತರರ ಸೇವೆ ಮಾಡುವುದಕ್ಕೆ ಕಾರತರಂತಿರುತಿದ್ದ ಪ್ರಭಾಕರ ಕುಪ್ರಸನ್ನನಾಗಿ ಹೇಳಿದ.

"ಸೋದರವಾಟೆಯಲ್ಲಿ ಕಟ್ಟಲಾಗುವ ಮನೆಗಳ ಬಗ್ಗೆ ಶ್ರಮದಾನ ನಡೆಯುತ್ತಿದೆಯಲ್ಲಾ? ಆ ವಿಚಾರದಲ್ಲಿ...."

"ಓ, ಅದೇ? ಹಾಂ....ಹಾಂ.... ಅವಶ್ಯ, ನಾವು ಅಲ್ಲಿಗೆ ತೆರಳೋಣ."

"ನೀವು ಖಂಡಿತಕ್ಕೂ ಬರುವಿರಿ; ನಾನೂ ಸಿದ್ಧನೇ. ಆದರೆ, ತಮ್ಮ ಅಸುಪಾಸಿನಿಂದ ಇನ್ನೂ ಕೆಲವರನ್ನು ಕರೆತರಬೇಕೆಂದು ಅಣ್ಣ ಹೇಳಿದ್ದಾನೆ. ಇಲ್ಲವಾದರೆ..."

'ಹಾಂ....ಸರಿಯೇ."—ಪ್ರಭಾಕರ ನಿಮಗ್ನನಾದ "ಉಳಿದವರೂ ಬರುವರು. ಚಿಂತಿಸಬೇಡಿ. ಅಂತಹ ಗೊಂದಲವೇನನ್ನೂ ನಾವು ಎಬ್ಬಿಸಿಲ್ಲ."

"ಸರಿ, ನಿಮ್ಮ ಈ ಮಾತ್ರೆ ನನಗೆ ಸರಿದೋರುವುದಿಲ್ಲ. ಹೆಸರು ಮತ್ತು ಫೊಟೊಗಳು ಪ್ರಕಾಶವಾಗುವ ಪ್ರವರ್ತನಾವಕಾಶವೊದಗಿದಾಗ ನೋಡಿರಿ; ಎಲ್ಲರು ಸ್ವಯಂಸಿದ್ಧರೇ."

"ಅದರೆ, ತಮ್ಮ ಹೆಟ್ ಪ್ರಕಾಶವಾಗುವುದಕ್ಕಷ್ಟಾರಿಂದಲೇ ಏನು? ನಮಗೆ ಕೆಲಸ ಮಾಡಬೇಕು; ಸರಿಯಾದ ಕೆಲಸ! ಪ್ರಭಾಕರನ ಮುಖದಲ್ಲಿ ಗುರು ಗಂಭೀರತೆ ಮೂಡಿಬಂತು. ಕಂಠನಾಳ ತುಸು ಕಠೋರವಾಯತು.

ಲೀಲಾಧರನೊಡನೆ ಮಾತಾಡುತ್ತ ಮುಂದುವರಿಯುವಾಗ, ಸಾರಮ್ಮನು ಅವರನ್ನು ತಡೆದನು.

"ಪ್ರಭಾಕರರಾಯರೇ, ಇನ್ನೆಷ್ಟು ತಡೆಯಲಿ? ನಿಮ್ಮ ಗೌರವದ ವಿಚಾರ ನೆನಪಿದೆ ತಾನೇ? ಅಥವಾ....ಇಲ್ಲ ನೋಡಿ..."

"ಸರಿಯೂಗಿದೆ ತಮ್ಮಾ ಸರಿಯಾಗಿದೆ. ಇಂದು ತುಸು ಅಗತ್ಯ ಕೆಲಸವಿದೆ ಅದರ ಬಗ್ಗೆ ಮರೆಯುವುದಿಲ್ಲ" ಅವರು ವೇಗವಾಗಿ ಧಾವಿಸಿದರು. 'ನಡುದಾರಿಯಲ್ಲಿಯೇ ತೋರಗುಟ್ಟನು ಅಡ್ಡ ನಿಂತುಕೊಂಡಿದ್ದನು. ಪ್ರಭಾಕರನು ಎಂದು ಕೊಂಡನು:—"ಸಾಲ ತೆಗೆದುಕೊಳ್ಳುವುದು ಪಾಪ, ತೆಗೆದುಕೊಂಡರೂ ಆದನ್ನು ಶೀಘ್ರವಾಗಿ ಪಾ

(೧೧ನೇ ಪುಟ ನೋಡಿರಿ)

ತೇವಣತಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ತೇವಣತಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್



ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಸೂರ್ಯನ ಸಂಸಾರದಲ್ಲಿರುವ ವಿವಿಧ ಗ್ರಹಗಳು ಹೇಗೆ ಜನಿಸಿದುವು ಎಂಬುದರ ಬಗ್ಗೆ ಈಗ ಬಳಕೆಯಲ್ಲಿರುವ ಸಿದ್ಧಾಂತ ಹಳೆಯ ದಾಯಿತು. ಇತ್ತೀಚೆಗೆ ನಡೆದ ಹೊಸ ಹೊಸ ಸಂಶೋಧನೆಗಳಿಂದ ಹೊಸ ಸಿದ್ಧಾಂತ ಏರ್ಪಟ್ಟಿದೆ. ಇದನ್ನು ವಿವರಿಸುವ ಶ್ರೀ ಜೋರಿಸ್ ಲೆವಿನ್‌ರವರ ಪುಸ್ತಕದ ಕನ್ನಡಾನುವಾದವನ್ನು ಸಂಕ್ಷಿಪ್ತವಾಗಿ 'ನವಯುಗ'ದ ವಾಚಕರಿಗೆ ಸುಪರಿಚಿತರಾಗಿರುವ ಶ್ರೀ ಎಂ. ರಂಗ ರಾವು ಮಾಡಿಕೊಟ್ಟಿದ್ದಾರೆ. ಹೊಸ ಸಿದ್ಧಾಂತವೇನೆಂದು ತಿಳಿಯುವುದಕ್ಕೆ ಮೊದಲು ಹಳೆಯದನ್ನು ತಿಳಿಯುವುದು ಅತ್ಯವಶ್ಯವಲ್ಲವೆ?

೩. ಪೂರ್ವದ ಸಿದ್ಧಾಂತಗಳು

ಬೇರೆ-ಬೇರೆ ಶಾಸ್ತ್ರವೇತ್ತರು:—

ಗಲಿಲಿಯ ಶತಮಾನದ ಮಧ್ಯಕಾಲದ ವರೆಗೂ ಪ್ರಪಂಚ ಶಾಸ್ತ್ರವೇತ್ತರು ಪ್ರಕೃತಿಯನ್ನು ಸ್ಥಿರವಾದುದಾಗಿಯೂ ಶಾಶ್ವತ ಲಕ್ಷಣಗಳುಳ್ಳದಾಗಿಯೂ ಮಾತ್ರವೇ ಭಾವಿಸಿದ್ದರು. ಆ ತರುವಾಯ ಶಾಸ್ತ್ರವಿಜ್ಞಾನದಲ್ಲಿ ಜಲನೆಯುಂಟಾಯಿತು. ಪ್ರಕೃತಿಯಲ್ಲಿ ಪರಿಣಾಮವೂ ಅಭಿವೃದ್ಧಿಯೂ ಇರುವುದೆಂದು ಶಾಸ್ತ್ರಜ್ಞರಿಗೆ ಸ್ಪಷ್ಟವಾಯಿತು. ಈ ಬದಲಾವಣೆ ಜ್ಯೋತಿಶ್ಶಾಸ್ತ್ರದಲ್ಲಿ ಕೂಡಾ ಉಂಟಾಯಿತು.

೧೭೫೫ರಲ್ಲಿ ಕಾಂಟ್ ಎಂಬ ಜರ್ಮನ್ ಶಾಸ್ತ್ರವೇತ್ತನು "ಪದಾರ್ಥಗಳೆರಡೇ ಸಾಕು; ಪ್ರಪಂಚವನ್ನು ನಿರ್ಮಿಸಬಹುದು" ಎಂದ. ಅತಿ ತೆಳುವಾದ ಪದಾರ್ಥದಿಂದ ಸೂರ್ಯನೂ, ಗ್ರಹಗಳೂ ಉತ್ಪತ್ತಿಯಾದುವೆಂಬ ಭಾವವನ್ನು ಆವನೊಂದು ಚಿಕ್ಕ ಪುಸ್ತಕದಲ್ಲಿ ಪ್ರಕಟಿಸಿದನು. ಆದರೆ ಆಗ ಅವನು ಮಾಡಿದ ಸಿದ್ಧಾಂತವನ್ನು ಯಾರೂ ಗಮನಿಸಲಿಲ್ಲ. ೧೭೯೬ರಲ್ಲಿ ಲಾಪ್ಲೇಸ್ ಎಂಬವನು ಒಂದು ಬ್ರಹ್ಮಾಂಡದಂತಹ ಪದಾರ್ಥದ ಮೇಳೆದಿಂದ ಸೂರ್ಯ ಕುಟುಂಬದ ಉತ್ಪತ್ತಿಯಾಯಿತೆಂದು ಪ್ರತಿಪಾದನೆ ಮಾಡಿದನು.

ಸೃಷ್ಟಿಕರ್ತನ ಪ್ರಮೇಯವಿಲ್ಲದೆ ಪದಾರ್ಥವು ಹೊಂದುವ ಪರಿಣಾಮದಿಂದಲೇ ಜಗತ್ತು ಏರ್ಪಟ್ಟಿತೆಂಬ ಕಾರಣದಿಂದ ಕಾಂಟ್, ಲಾಪ್ಲೇಸರು ಮಾಡಿದ ಈ ಸಿದ್ಧಾಂತವು ಗಣನೀಯವಾದುದು. ಸಾರ ಕೂಟದಲ್ಲಿರುವ ಕ್ರಮವನ್ನು ಆಧಾರವಾಗಿಟ್ಟುಕೊಂಡು ಇದರ ಉತ್ಪತ್ತಿವು ಹೇಗಾಯಿತೆಂದು ನಿರ್ಣಯಿಸಲು ಇವರಿಬ್ಬರೂ ತುಂಬಾ ಪ್ರಯತ್ನಪಟ್ಟರು.

ಚಲನಕ್ಕೆ ಸಂಬಂಧಿಸಿದ ಮೂಲ ಸೂತ್ರಗಳನ್ನೂ, ಗುರುತ್ವಾಕರ್ಷಣೆಯನ್ನೂ ಕಂಡುಹಿಡಿದು ಅವುಗಳನ್ನು ಗ್ರಹಗಳಿಗೆ ವರ್ತಿಸುವಂತೆ ಮಾಡಿದ ಬ್ರಿಟಿಷ್ ಶಾಸ್ತ್ರವೇತ್ತನಾದ ನ್ಯೂಟನ್, ಸೂರ್ಯಕುಟುಂಬವು ಕಾಕತಾಳೀಯವಾಗಿ ಏರ್ಪಟ್ಟಿದ್ದಲ್ಲವೆಂದು ನಿಶ್ಚಯವೂ ಮಾಡಿದ. ಆದರೆ ಆತ ಇವೆಲ್ಲದಕ್ಕೂ ಕಾರಣನಾದ "ಮಹಾಶಿಲ್ಪಿ" ಯೊಬ್ಬನಿರುವನೆಂಬ ವಿಶ್ವಾಸವನ್ನು ಬಲಪಡಿಸಿಕೊಂಡನೇ ಹೊರತು, ಪದಾರ್ಥವು ಪರಿಣಾಮ ಹೊಂದುವುದರ ಮೂಲಕ ಸೌರಕೂಟದ ನಿರ್ಮಾಣವಾಯಿತೆಂದು ಭಾವಿಸಲಿಲ್ಲ.

೧೭೪೫ರಲ್ಲಿ ಬೇಫೋಂ ಎಂಬ ಫ್ರೆಂಚು ಶಾಸ್ತ್ರಜ್ಞನು ಗ್ರಹಗಳ ಹುಟ್ಟನ್ನು ಕುರಿತು ಒಂದು ಸಿದ್ಧಾಂತವೂಡಿದ. ಒಂದು ಬ್ರಹ್ಮಾಂಡವಾದ ಧೂಮಕೇತು ಸೂರ್ಯನನ್ನು ಮುಟ್ಟಿದಾಗ ಸೂರ್ಯನಿಂದ ಪದಾರ್ಥವು ಚದುರಿ ದೂರ ದೂರ ಹೋಗಿ ವಿವಿಧ ಗ್ರಹಗಳಾಗಿ ಏರ್ಪಟ್ಟಿತೆಂದು ಆತನೆಂದ. ನಿಜಕ್ಕೂ ಧೂಮಕೇತುಗಳು ಬಲು ತೆಳುವಾದ ಹಗುರಾದ ವಾಯುಗಳಿಂದ ಕೂಡಿಕೊಂಡಿವೆ. ಅವುಗಳ ತಲೆಗಳೂ ಬಾಲಗಳೂ ದೊಡ್ಡ ಪ್ರಮಾಣವುಳ್ಳವಾದರೂ, ದೇದೀಪ್ಯಮಾನವಾಗಿ ಪ್ರಕಾಶಿಸುವ ಕೇಂದ್ರಗಳು ಅಂದರೆ ನಕ್ಷತ್ರಗಳಂತಹ ಭಾಗಗಳು ಬಹಳ ಚಿಕ್ಕವು. ಆದರೆ ಈ ವಿಷಯಗಳು ಆ ಕಾಲದಲ್ಲಿ ಗೊತ್ತಿರಲಿಲ್ಲ. ಆ ಕಾಲಕ್ಕೆ ತಿಳಿದಿರುವ ವಿಷಯಕ್ಕೆ ಕೂಡಾ ಈ ಸಿದ್ಧಾಂತವು ವ್ಯತಿರೇಕವಾಗಿತ್ತು. ಆದರೂ ಈ ಶಾಸ್ತ್ರವೇತ್ತನನ್ನು ಒಂದು ವಿಷಯಕ್ಕೆ ಅಭಿನಂದಿಸಲೇಬೇಕು. ಆತನು ಸೃಷ್ಟಿಕರ್ತನ ಸ್ಥಾನದಲ್ಲಿ ಭೌತಿಕ ಕಾರಣಗಳನ್ನು ನೆಲೆ ನಿಲ್ಲಿಸಿದ.

೧೭೯೬ರಲ್ಲಿ ಲಾಪ್ಲೇಸ್ (ಫ್ರೆಂಚು ಶಾಸ್ತ್ರವೇತ್ತ) ಜನ ಸಾಮಾನ್ಯರಿಗಾಗಿ ಒಂದು ಚಿಕ್ಕ ಶಾಸ್ತ್ರಗ್ರಂಥವನ್ನು ಬರೆಯುತ್ತಾ ಆದರಲ್ಲಿ ಸೌರ ಕೂಟದ ಉತ್ಪತ್ತಿಯನ್ನು ಕುರಿತು ಒಂದು ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದನು. ಆ ಸಿದ್ಧಾಂತವು ಏನು ಹೇಳುವುದೆಂದರೆ: ಒಂದಾನೊಂದು ಕಾಲದಲ್ಲಿ ಸೂರ್ಯನ ಸುತ್ತಲೂ ಅತ್ಯಂತ ಉಷ್ಣವಾದ, ತೀರಾ ತೆಳುವಾದ ವಾತಾವರಣವು ಅನೇಕ ನೂರು ಕೋಟಿ ಮೈಲುಗಳನ್ನಾಕ್ರಮಿಸಿಕೊಂಡು ವ್ಯಾಪಿಸಿತ್ತು. ಈ ವಾತಾವರಣವು ಸೂರ್ಯನೊಂದಿಗೇ ಪರಿಭ್ರಮಣನಾಡಿಕೊಂಡಿತ್ತು. ಕ್ರಮವಾಗಿ ಇದರ ಉಷ್ಣವು ತಗ್ಗಿ ಇದು ಸಂಕೋಚಗೊಳ್ಳಲಾರಂಭವಾಯಿತು. ಕ್ರಮವಾಗಿ ವಾತಾವರಣದೊಳಗಿನ ಪದಾರ್ಥವೆಲ್ಲಾ ಪರಿಭ್ರಮಣಗೊಳ್ಳುತ್ತಿರುವ ಸಮತಲದಲ್ಲಿಯೇ ಒಂದು ವಲಯವಾಗಿ ಏರ್ಪಟ್ಟಿತು. (ಶನಿಯ ಸುತ್ತಲೂ ಇರುವ ವಲಯಗಳಂತೆ.) ಕಾಲಕ್ರಮೇಣ ಈ ವಲಯಗಳು ಬಿಡುಗಡೆ ಹೊಂದುತ್ತಾ ಅನೇಕ ಉಂಗುರಗಳಂತಾಯಿತು. ಆನಂತರ ಕ್ರಮವಾಗಿ ಈ ಉಂಗುರಗಳಲ್ಲಿರುವ ಪದಾರ್ಥವು ಕೂಡಿಕೊಂಡು ಗ್ರಹಗಳಾದುವು. ಅದುದರಿಂದಲೇ ಗ್ರಹಗಳೆಲ್ಲವೂ ಒಂದೇ ಕಡೆಗೆ ತಿರುಗುತ್ತವೆ. ಅವುಗಳ ಮೂಗ್ರಗಳೆಲ್ಲವೂ ಒಂದೇ ಸಮತಲದಲ್ಲೇ ಇರಲು ಇದೇ ಕಾರಣ.

ಲಾಪ್ಲೇಸನ ಸಿದ್ಧಾಂತವೇನಾಯಿತು?

ಲಾಪ್ಲೇಸನ ಸಿದ್ಧಾಂತದಲ್ಲಿ ಲೋಪಗಳಿರುವುದನ್ನು ಕಾಣಬಹುದು. ಸೂರ್ಯನ ಸುತ್ತಲೂ ಇರುವ ವಾತಾವರಣವು ಘನ ಪದಾರ್ಥದಂತೆ ಪರಿಭ್ರಮಿಸಿತೆಂದು ಆತ ಭಾವಿಸಿದ. ಒಂದು ದೊಡ್ಡ ಗ್ರಹವು ತಿರುಗುತ್ತಿರುವುದೆಂದು ಕೊಳ್ಳೋಣ. ಆದರ ಇರುಸಿಗೆ ಸಮೀಪದಲ್ಲಿ ಒಂದು ನೊಣವು ಎದಿರಾಗಿ, ಅದು ಕೂಡಾ ಸ್ವಲ್ಪ ವೇಗದಿಂದ ತಿರುಗುತ್ತದೆ. ಅದೇ ನೊಣ ಇರುಸಿನ ಅಂಚಿಗೇ ಎರಗಿತೆಂದರೆ ಇನ್ನೂ ಹೆಚ್ಚು ವೇಗದಿಂದ ತಿರುಗುತ್ತವೆ. ಸೂರ್ಯನ ಸುತ್ತಲೂ ಇರುವ ವಾಯು ಪದಾರ್ಥವಾದರೂ ಹೀಗೆಯೇ- ಅಂಚಿನ ಬಡಿಗೆ ಬಂದಷ್ಟೂ ಹೆಚ್ಚೆಚ್ಚು ವೇಗದಿಂದ ತಿರುಗಿತೆಂದು ಲಾಪ್ಲೇಸ್ ಭಾವಿಸಿದನು. ಇದು ಸರಿಯೋದ ಊಹೆ ಹೌದಿಲ್ಲವೆ ಎಂಬುದನ್ನು ಆತ ಯೋಚಿಸುವುದಿಲ್ಲ. ಸೂರ್ಯನಿಂದ ದೂರ ಹೋದಂತೆ ಪದಾರ್ಥವು ತಿರುಗುವ ವೇಗವು ತಗ್ಗುತ್ತದೆ. ಈ ಕಾಲದಲ್ಲಿ ನಾವು ಗ್ರಹಗಳ ಗತಿಯನ್ನು ನೋಡಿದ್ದಾದರೆ ಅವು ಸೂರ್ಯನಿಗೆ ಎಷ್ಟು ದೂರದಲ್ಲಿವೆಯೋ ಅಷ್ಟು ಕಡಮೆ ವೇಗದಿಂದ ಸೂರ್ಯನ ಸುತ್ತಾ ಪ್ರದಕ್ಷಿಣೆ ಮಾಡುತ್ತಿರುವುದನ್ನು ನೋಡಬಹುದು. ಆ ವಾತಾವರಣದೊಳಗೇ ತಿರುಗಿ ತಿರುಗಿ ಉಂಗುರಗಳಾಗಿ ಬಿಟ್ಟುಹೋದಾಗ ಆ ಉಂಗುರಗಳ ಹೊರಗಿನ ಅಂಚುಗಳು ಒಳಗಿನ ಅಂಚುಗಳಿಗಿಂತ ಕಡಮೆ ವೇಗದಿಂದ ತಿರುಗಬೇಕು. ಅವುಗಳಿಂದ್ಹೊಂಟ ಗ್ರಹಗೋಳಗಳು ಈಗಿನಂತೆ ಗುಂಡಾಗಿ ತಿರುಗುತ್ತಿರುವುದನ್ನು ಬಿಟ್ಟು ಅವಶ್ಯವಾಗಿ ತಿರುಗುತ್ತಿರಬೇಕು!

ಇಷ್ಟೇ ಅಲ್ಲ, ಅಂತಹ ಉಂಗುರಗಳಿಂದ ಗ್ರಹಗಳು ಉಂಟಾಗುವ ಅವಕಾಶವೇ ಇಲ್ಲವೆಂದು ಶಾಸ್ತ್ರವೇತ್ತರು ರುಜುವಾಡಿಬಿಟ್ಟಿದ್ದಾರೆ. ಅದಲ್ಲದೆ, ಲಾಪ್ಲೇಸ್ ಸಿದ್ಧಾಂತವು ಸರಿಯಾದುದಾಗಿದ್ದಪಕ್ಷಿ, ಸೂರ್ಯನು ಈಗ ತಿರುಗುವುದಕ್ಕಿಂತಲೂ ಅನೇಕ ನೂರುಮಡಿ ಹೆಚ್ಚು ವೇಗದಿಂದ ತನ್ನ ಸುತ್ತಾ ತಾನು ತಿರುಗಬೇಕು. ಸೂರ್ಯನನ್ನು ಹೊಂದಿಕೊಂಡಿರುವ ಶಕ್ತಿಗಿಂತಲೂ ಅನೇಕ ಪಾಲು ಹೆಚ್ಚಾದ ಶಕ್ತಿ ಗ್ರಹಾದಿಗಳೊಂದಿಗೆ ಏಕಿರುವುದೆಂಬ ವಿಷಯ ಕೂಡಾ ಲಾಪ್ಲೇಸ್ ಸಿದ್ಧಾಂತವು ಸ್ಪಷ್ಟಮಾಡುವುದಿಲ್ಲ.

ಗ್ರಹಗಳನ್ನು ಕುರಿತು ಪರಿಜ್ಞಾನವು ಹೆಚ್ಚಾದಂತೆ ಕಾಂಟ್, ಲಾಪ್ಲೇಸರ ಮಾಡಿದ ಸಿದ್ಧಾಂತಗಳು ತಪ್ಪಾಗಿ ಹೋದುವು. ೧೯ನೇ ಶತಮಾನದಲ್ಲಿ ಗ್ರಹಗಳ ಹುಟ್ಟನ್ನು ಕುರಿತು ಅನೇಕ ಸಿದ್ಧಾಂತಗಳು ಹೊರಟುವಾದರೂ ಅವಾವುದೂ ಶಾಸ್ತ್ರಪರೀಕ್ಷಣದ ಮುಂದೆ ನಿಲ್ಲಲಾರದೆ ಹೋದುವು.

(ಇಂದೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ವಿ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ನಿಮಗೆ ದೊರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ವಿವೇಚನೆ

ನವ ಸಮಾಜ ರಚನೆ ಸಾಧ್ಯವೆ?

ಸ್ವಾತಂತ್ರ್ಯದ ಸತ್ಫಲಗಳನ್ನುಣ್ಣಬೇಕಾದರೆ, ಸ್ವಾತಂತ್ರ್ಯ ಸಫಲವಾಗಬೇಕಾದರೆ, ಭಾರತೀಯ ಸಮಾಜವೊಂದು ಹೊಸತಾಗಿ ಬೆಳೆದು ಬರಬೇಕಾಗಿದೆ. ಆದರೆ, ಈ ಅಂತಿಕಾರಿ ಕಾರ್ಯಕ್ರಮಗಳನ್ನು ಕೈಗೊಂಡು ನವ ಸಮಾಜ ರಚಿಸುವ ಹೊಣೆಗಾರಿಕೆ ಯಾರದು?



ಗಸಿಗಳನ್ನು ಗುಡಿಸುವ ಹೊಸ ತರದ ಹೆಲಿಕಾಪ್ಟರ್ ಮಾದರಿಯ ಯಂತ್ರವಿದು.

ನಮ್ಮಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಫಲವನ್ನಿಸಿಕೊಳ್ಳುವುದು ಅತಿ ಆವಶ್ಯಕವೆಂಬಂತಾಗಿದೆ. ಇದಕ್ಕೆ ನಮ್ಮ ಜನಸಂಖ್ಯೆಯಲ್ಲಿ ನೂರಕ್ಕೆ ಐವತ್ತರಷ್ಟು ಅಕ್ಷರಸ್ಥರಾಗಿರುವುದೇ ಪ್ರಬಲ ಕಾರಣವಾಗಿದೆ. ಜನಸಾಧಾರಣರ ಮುಂದೆ ಯಾವ ಸಾಂಸ್ಕೃತಿಕ ಲಕ್ಷ್ಯವನ್ನಿಟ್ಟುಕೊಳ್ಳಬೇಕು ಎಂಬುದನ್ನು ನಾವು ಇಮವರೆಗೂ ಚರ್ಚಿಸಿರುವುದೂ ಇನ್ನೊಂದು ಕಾರಣವೆಂದು ಹೇಳಬಹುದು.

ನಾವಿಂದು ಸುಸಂಸ್ಕೃತರೆಂದು ಹೆಸರಿಸುವ ಜನರ ಸಾಮಾಜಿಕ ಹಾಗೂ ಮಾನಸಿಕ ಸ್ಥಿತಿಯನ್ನು ಸರಿಯಾಗಿ ನಾವು ತಿಳಿದುಕೊಳ್ಳುವುದು ನೂತ್ತನೊದಲನೆಯ ಕರ್ತವ್ಯವಾಗಿದೆ. ರೋಗದ ಮೂಲಕಾರಣ ತಿಳಿಯದೆ ಅದಕ್ಕೆ ಚಿಕಿತ್ಸೆಯೊದಗಿಸುವುದಾದರೂ ಹೇಗೆ?

ನಾವು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ನಾವು ಮೂಲಕ್ಕೆ ಅನುಸರಿಸಿಕೊಂಡಿರಲಿ, ಮತ್ತು ಆ ಬಗ್ಗೆ ನಾವು ಉಳಿ ಮಾನಪಟ್ಟುಕೊಳ್ಳುವುದಿರಲಿ:— ಇದರಲ್ಲಿ ಬಹ್ವಂಶ ಸಂಕ್ಷಿಪ್ತೀಯವೇ ಎಂಬುದರಲ್ಲಿ ಸಂದೇಹವಿಲ್ಲ—ಈಗ ನಮ್ಮ ಜನಸ್ಥಿತಿಯಲ್ಲಿ ಅನೇಕ ಕುಸಂಸ್ಕಾರಗಳು ಮನೆ ಮಾಡಿಕೊಂಡಿವೆ ಎಂಬುದರಲ್ಲಿ ಸಂದೇಹವಿಲ್ಲ. ಇವುಗಳಲ್ಲಿ ಅತಿ ಭಯಂಕರವಾದುದು ಜಾತೀಯತೆ. ಇದು ನಮ್ಮ ನರನಾಡಿಗಳಲ್ಲಿ ಹರಿದು, ಜೀವನದ ಪ್ರತ್ಯೇಕ ಕ್ಷೇತ್ರದಲ್ಲಿ ಪ್ರಭಾವ ಬೀರುತ್ತಿದೆ; ವಿಶ್ವವಿದ್ಯಾಲಯಗಳಲ್ಲಿ ಕೂಡ ಇದು ಹಾವಳಿ ಮಾಡುತ್ತಿದೆ. ಜಾತಿಯೇ ಮೂಲವಲ್ಲ ಯೋಗ್ಯತೆಯನ್ನು ಪರೀಕ್ಷಿಸುವ ಮಾನದಂಡವಾಗಿರುವಲ್ಲಿ ಸಮಾಜವಾದ ಆಕಸ್ಮಿಕ ಸಾಮ್ಯವಾದವೆಂಬುವು ಕೇವಲ ಅಪಹಾಸ್ಯದ ಮಾತಾಗುವುದು.

ಗುರಿಯ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯವಿರುವುದು ಸಾಧ್ಯವಿಲ್ಲ. ಎಲ್ಲರಿಗೂ ಉನ್ನತವಸ್ತ್ರಗಳು ದೊರೆಯಬೇಕು; ಓದುವ ಸೌಲಭ್ಯ, ಜೀವನ ನಿರ್ವಾಹಕ್ಕೆ ಉಪಯುಕ್ತ ಸಾಧನಗಳು ಸರ್ವರಿಗೂ ಲಭಿಸುವಂತಾಗಬೇಕೆಂಬುದರಲ್ಲಿ ಯಾರಿಗೂ ಅಕ್ಷೇಪವಿರುವುದಿಲ್ಲ. ಸಾರ್ವಜನಿಕ ಜನರ ಜೀವನದಲ್ಲಿ ಶ್ರಮದ ಬಗ್ಗೆ ಶ್ರದ್ಧಾಭಾವವನ್ನು ಇಳಿಸುವುದು; ಸುಶಿಕ್ಷಿತ ಮಾನವರು ಕೂಡ. ಪರಿಶ್ರಮದ ಕಾರ್ಯವಾವುದೂ ಹೀನವಾದುದಲ್ಲ; ಇದು ಅತ್ಯಂತಾವಶ್ಯಕವಾದ ಕೆಲಸವೆಂಬುದನ್ನು ತಿಳಿಯುವಂತೆ ಮಾಡುವುದಕ್ಕೆ ಯಾರೂ ಎರಡು ಹೇಳಲಾರರು.

ಜನಸಾಮಾನ್ಯರಲ್ಲಿ ಈ ಅದಮ್ಯ ಪ್ರೇರಣೆಯನ್ನು ಹೇಗೆ ತುಂಬಿಕೊಡಬೇಕು, ತನ್ನ ಹಾಗೂ ತನ್ನ ಆಸುಪಾಸಿನ ಜನತೆಯ ಕಲ್ಯಾಣದ ಬಗ್ಗೆ ಹೃದಯ ತೆರೆದು ಪರಿಶ್ರಮವನ್ನು ಹೇಗೆ ಮಾಡುವಂತೆ ಪ್ರೇರೇಪಿಸಬೇಕು ಇಂಬುದೇ ದೊಡ್ಡ ಪ್ರಶ್ನೆ. ನಮ್ಮ ದೇಶದ ಉನ್ನತಿಯು ಸಮಸ್ತ ವಿಶ್ವದ ಉನ್ನತಿಯನ್ನು ಹಾಗೂ ಸಂಪೂರ್ಣ ಮಾನವ ಸಮಾಜದ ಕಲ್ಯಾಣವನ್ನು ನಮ್ಮ ಕಲ್ಯಾಣವು ಅವಲಂಬಿಸಿಕೊಂಡಿದೆ ಎಂಬುದನ್ನು ನಾವು ಅವರಿಗೆ ಹೇಗೆ ತಿಳಿಸಬೇಕು? ಜನಸಾಮಾನ್ಯರಿಗೆ ಈ ವಿಚಾರವು ಹೇಗೆ ತಿಳಿಸಲ್ಪಡಬೇಕು?

ಈ ಮಹಾಕಾರ್ಯವು ಲೇಖಕರು, ಕವಿಗಳು, ಪತ್ರಿಕಾಕರ್ತರು, ಕಲಾಕಾರರು ಹಾಗೂ ಅಧ್ಯಾಪಕರುವಾಗಿದೆ. ಆದರೆ ಈ ಜನರ ದೃಷ್ಟಿಕೋನವಾದರೂ ! ಸರಿಯಿದೆಯೆ? ಇವರು ಕಮ್ಯುನಿಕರ್ತವ್ಯಗಳನ್ನು ಸರಿಯಾಗಿ ತಿಳಿದಿರುವರೆ? ಅವನ್ನು ನಿರ್ವಹಿಸುವರೆ? ರಾಜ್ಯಕೀಯ ನೇತಾರರನ್ನೂ ಸರಕಾರವನ್ನೂ ನಾವೀಗ ತೆಗೆದುಕೊಳ್ಳುವುದಿಲ್ಲ; ಏಕೆಂದರೆ, ನಮ್ಮ ದೇಶದಲ್ಲಿ ಎಲ್ಲ ಕೆಲಸಗಳನ್ನೂ ರಾಜ್ಯಕೀಯ ನಾಯಕರು ಹಾಗೂ ಸರಕಾರಗಳಿಗೇನೇ ಬಿಟ್ಟುಕೊಡಬೇಕೆಂಬ ಮನೋವೃತ್ತಿ ಬಲಿಯುತ್ತಿದೆ. ಈ ಜನರು ನಮ್ಮ ಗುಣದೋಷಗಳ ಭಾಯಾರೂಪ ;ಮಾತ್ರವೆಂಬುದನ್ನು ನಾವು ಮರೆಯುತ್ತೇವೆ. ಈ ಮಹಾನುಭಾವರು ನಮ್ಮ ಮನೆಯ ಜೌಕೀದಾರರಂತಿರುವವರು; ಮನೆಯ ಕೆಲಸ-ಕಾರ್ಯನೆಲ್ಲವನ್ನೂ ನಾವೇ ಮಾಡಿಕೊಳ್ಳಬೇಕಾಗಿದೆ. ನಮ್ಮ ಭಾಗ್ಯ ನಿರ್ಮಾಣದ ಮಹತ್ವಪೂರ್ಣ ಕಾರ್ಯವನ್ನು ಅಲ್ಪಸಂಖ್ಯಾಕರಾದ ಬೊಜ್ಜೊಗಿ ವ್ಯಕ್ತಿಗಳಹಿಗಲನೇಲೆ ಹೊರಿಸಿ ನಾವು ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಘೋರ ದೌರ್ಭಾಗ್ಯವೆನ್ನಲೇ ಬೇಕಾಗಿದೆ.

ಸರಕಾರಿಂದಲೂ ಸಹಾಯ ಸಡೆಯಬೇಕು ಎಂಬುದರಲ್ಲಿ ಸಂದೇಹವಿಲ್ಲ; ಆದರೆ ಪ್ರಭುತ್ವ ಸರಕಾರದಲ್ಲಿ ಕೇಂದ್ರೀಕೃತವಾಗುವುದರಿಂದತದು ಅತ್ಯಗತ್ಯವೇ. ಆದರೆ, ಸ್ಫೋರಕ ಶಕ್ತಿ ನೂತ್ರ ನಮ್ಮ ಕೈಯಲ್ಲಿರಬೇಕು. ನಾವು ಪ್ರಬಲ ಜನಮತವನ್ನು ತೆಗೆದುಕೊಂಡೆವೆಂದರೆ, ನಿಸ್ಸಹಾಯಕವಾಗಿ ಸರಕಾರ ನಮ್ಮ ನಿರ್ಧಾರಗಳನ್ನು ಒಪ್ಪಲೇ ಬೇಕಾಗುವುದು. ಅಂಜಿಕೆಯಿಂದ ಕವರುಗಳನ್ನು ಬರೆಯುವ ಕೆಲಸ ನಮ್ಮದೇ; ಅದಕ್ಕೆ ಮುದ್ರಯೊತ್ತಿ ಯಥಾಸ್ಥಾನ ಮುಟ್ಟಿಸುವಕಾರ್ಯ ಸರಕಾರದ್ದು. ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಇದೇ ರೀತಿಯೆಂಬುದನ್ನು ನಾವು ತಿಳಿಯಬೇಕು.

ಲೇಖಕ, ಕವಿ, ಕಲಾಕಾರ, ಅಧ್ಯಾಪಕ ಮತ್ತು ಪತ್ರಿಕಾ ಕರ್ತರೇ ಪಥಭ್ರಷ್ಟರಾದರೆಂದರೆ, ಲೋಕ ಕಲ್ಯಾಣಕ್ಕೆ ಬದಲು ಅರ್ಥ ಸಂವಾದನೆ ಅಥವಾ ಪದ ಗ್ರಹಣವೇ ಕಮ್ಯುನಿಕ ಏಕ ಮಾತ್ರ ಲಕ್ಷ್ಯವೆಂದು ಇವರು ತಿಳಿಯತೊಡಗಿದರೆ, ಸರಕಾರಕ್ಕೆ ಸಹಸ್ರನಾಮ ಜಪಿಸುತ್ತ ಕುಳಿತರೆ, ಯಾವ ಕೆಲಸವೂ ನಡೆಯಲಾರದು.

ಸಾಧಾರಣ ಜನತೆಯ ಮನಸ್ಸು ಹೇಗೆ ಸುಸಂಸ್ಕೃತವಾದೀತು? ಈ ಪ್ರಶ್ನೆಯ ಬಗ್ಗೆ ಸಾಮೂಹಿಕವಾಗಿ ಬೆಳಕು ಹರಿಸಬೇಕಾಗಿದೆ. ನಮ್ಮ ದಾರಿಯಲ್ಲಿರುವ ವಿಘ್ನ ವಿಘ್ನಂಗಳು ಯಾವುವು? ಮತ್ತು ಅವುಗಳನ್ನು ನಾವು ಹೇಗೆ ದೂರೀಕರಿಸಬೇಕು? ಒರ್ವ ಸುಯೋಗ್ಯ ಲೇಖಕ ಪರಿಶ್ರಮಿ ಒಂದು ಒಳ್ಳೆಯ ಗ್ರಂಥ ಬರೆದನೆಂದರೆ, ಆತನ ಹೆಸರು ಪ್ರಖ್ಯಾತಗೊಳ್ಳಲು ಬಹುಕಾಲ ಹಿಡಿಯುತ್ತದೆ. ಈ ನಡುವೆ ಸಿನೆಮಾದ ಒರ್ವ ಆದರ್ಶಹೀನ ವ್ಯವಸಾಯಿಯು ಬಹು ಸುಲಭದಲ್ಲಿ ಜನತೆಯಲ್ಲಿ ಪುರಸ್ಕಾರಗಳನ್ನು ಪಸರಿಸುತ್ತಾನೆ. ಇಂತಹ ಅನಾಚಾರದ ಖಂಡನೆಯನ್ನು ರಚನಾತ್ಮಕ ಕೆಲಸದೊಡನೆ ಸೇರಿಸುವುದು ಅಗತ್ಯವಿದೆ.

ಡಾಕ್ಟರುಗಳಿಗೇನೇ ಚಿಕಿತ್ಸೆ ಮಾಡಬೇಕಾದ, ಶಿಕ್ಷಕರಿಗೇನೇ ಶಿಕ್ಷಣ ಕೊಡಬೇಕಾದ ಪರಿಸ್ಥಿತಿ ಇಂದಿದೆ. ಈ ಬಗ್ಗೆ ನಮ್ಮ ಸರಕಾರಗಳು ಸ್ವಲ್ಪ ಸಹಾಯವನ್ನು ಮಾಡಬಲ್ಲುವು ಮುದಿ ಗಿಳಿಗಳು ಕೊನೆಯ ವರೆಗೂ 'ರಾಮರಾಮ' ಹೇಳುತ್ತ ಕೂಯವುದಾದರೂ ಆತಂಕವಿಲ್ಲ; ಆದರೆ, ನವೀನ ಉತ್ಸಾಹೀ ಲೇಖಕರಿಗೆ ಪತ್ರಿಕಾಕರ್ತ—ಶೈಕ್ಷಣಿಕ ಸಂಸ್ಥೆಗಳು ಸ್ವಾಗತ ನೀಡಬೇಕು. ಈ ಸಂಸ್ಥೆಗಳ ಸಂಚಾಲನೆಯ ಸೂತ್ರವು ಪ್ರತಿಷ್ಠಿತ ಸಂಸಾದಕರ ಹಸ್ತಗಳಲ್ಲಿದ್ದರೆ, ಮುಂದೆ ಇವುಗಳ ಸ್ನಾತಕರು ಜನಸಾಧಾರಣರಿಗೆ ತುಸು ಸೇವೆ ಸಲ್ಲಿಸುವಂತಾಗಬಹುದು.

ದೇಶದ ಎಲ್ಲ ಮೂಲೆಗಳಲ್ಲಿಯೂ ಸಂಚರಿಸಿ, ಜನತೆಯು ಓದುತ್ತಿರುವುದೇನೆಂಬುದನ್ನು ಕಂಡು ಹಿಡಿಯುವುದು ಎರಡನೆಯ ಕೆಲಸ. ಸಂತೆ, ಉತ್ಸವಗಳ ಸಮಾರಂಭಗಳಲ್ಲಿ ಯಾವ ರೀತಿಯ ಪುಸ್ತಕಗಳು ಮಾರಲ್ಪಡುತ್ತವೆ ಎಂಬುದನ್ನು ನೋಡಬೇಕು. ಜನತೆಯನ್ನೂ ಅಡುಗೂಲಜ್ಜಿಯ ಕಥೆಗಳನ್ನೇ ಓದುತ್ತಿರುವುದಾದರೆ, ಅದರ ಅಭಿರುಚಿಯಲ್ಲಿ ಅವಶ್ಯ ಪರಿವರ್ತನೆ ಮಾಡಬೇಕು. ಆದರೆ, ಇದು ಅಷ್ಟು ಸುಲಭವೆಂದು ಹೇಳುವಂತಿಲ್ಲ. "ಒಂದು ರಾತ್ರಿಯಲ್ಲಿ ನಲ್ವತ್ತು ಕೊಲೆ"—ಅದ್ಭುತ ಪತ್ತೇದಾರಿ ಕಾದಂಬರಿಯನ್ನು ಓದುವ ಮಹನೀಯನಿಗೆ ಗೀತೆಯ ಹದಿನೆಂಟೂ ಅಧ್ಯಾಯಗಳನ್ನು ಓದು ಎಂದು ಹೇಳಿದರೆ, ಆತನಿಂದ ಓದುವುದು ಸಾಧ್ಯವಾದೀತೆ?

ಗೋರಖುಸುರದ ಗೀತಾ ಪ್ರೆಸ್‌ನವರು ಸಂಸ್ಕೃತಿ ಪ್ರಸಾರಕ ಪುಸ್ತಕಗಳನ್ನು ಅಚ್ಚು ಹಾಕಿಸಿ ಸಂತೆ, ಉತ್ಸವಗಳಲ್ಲಿ ಮಾರುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ

(೧೯ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ: **ಉಡುಪಿ, (ದ. ಕನ್ನಡ.)**

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. **87-00** **3 ವರ್ಷಗಳ ಅಂತ್ಯದಲ್ಲಿ**
ಬಡ್ಡಿ ಕೂಡಿ ರೂ. **100-00** ಒದಗಿಸುವುದು.

ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.

ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ನಮ್ಮ ತುಮಕೂರು ಶಾಖೆ

ತಾ. 14—11—1960ಕ್ಕೆ ತೆರೆಯಲ್ಪಟ್ಟಿರುವುದು.

ಕಾಮು ವಿಜ್ಞಾನದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.

ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.

ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಓದುವುದನ್ನೂ ಓದುವುದನ್ನೂ ಎಲ್ಲರೂ ತಿಳಿದಿದ್ದಾರೆ; ಆದರೆ ಏನನ್ನು ಓದ ಜೇಕು, ಏನನ್ನು ಓದಬೇಕು ಎಂಬುದನ್ನು ಅರಿತುಕೊಂಡವರು ಮಾತ್ರ ಅತಿವಿರಳ.

ನವಯುಗ

ವರುಷ	ಉಡುಪಿ	ವಾರ
೪೦	೧೮-೧೨-೧೯೬೦	೧೪

ಗೋವಾ ದಿನಾಚರಣೆ

ಭಾರತದ ವಿವಿಧೆಡೆಗಳಲ್ಲಿ "ಗೋವಾ ದಿನಾಚರಣೆ"ಯನ್ನು ಆಚರಿಸಿ,ಪೋರ್ಚುಗಾಲದ ಸಾಮ್ರಾಜ್ಯವಾದವನ್ನು ಖಂಡಿಸಲಾಯಿತು. ಅದಷ್ಟು ತೀವ್ರವಾಗಿ ಗೋವೆಯು ಭಾರತಕ್ಕೆ ಸೇರುವಂತೆ ಅವಶ್ಯಕ ಕ್ರಮ ಕೈಗೊಳ್ಳುವಂತೆ ಭಾರತ ಸರಕಾರವನ್ನೂ ಕೇಳಿಕೊಳ್ಳಲಾಯಿತು. ಭಾರತವು ಗೋವೆಯಿಲ್ಲದೆ ಸಂಪೂರ್ಣವೆನಿಸುವುದಿಲ್ಲವೆಂದು ಸಂರಕ್ಷಣಾಮಂತ್ರಿ ಕೃಷ್ಣ ಮೆನನ್ ಘೋಷಿಸಿದ್ದಾರೆ. ಭಾರತ ಸರಕಾರವಾದರೂ ಪೋರ್ಚುಗಲ್ಲಿನ ವಸಾಹತುವಾದದ ಬಗ್ಗೆ ಅಂತಾರಾಷ್ಟ್ರೀಯ ವಿರೋಧಭಾವನೆಯು ಬೆಳೆಯುತ್ತಿರುವುದನ್ನು ಗಮನಿಸುತ್ತ ಬಂದಿದೆ. ದಿನಗಳೆದಂತೆ ಪ್ರಪಂಚದಲ್ಲಿ ಸಾಮ್ರಾಜ್ಯಶಾಹಿ ಹಾಗೂ ವಸಾಹತು ಶಾಹಿಗಳು ಕರಗುತ್ತ ಬರುತ್ತಿರುವುದೇನೋ ಶುಭಸೂಚಕವೆನ್ನತ್ತ ಬೇಕಾದರೂ ಗೋವೆಯು ಭಾರತದೊಡನೆ ಏಕ್ಯಗೊಳ್ಳುವ ಸುದಿನ ವೆಷ್ಟುದೂರ ವಿದೆಯೆಂದು ಹೇಳುವಂತಿಲ್ಲ.

ಗೋವೆಯ ಪ್ರಶ್ನೆಯು ಅಂತರಿಕವೆನಿಸಿದುದರಿಂದ ಭಾರತಕ್ಕೆ ಈ ಬಗ್ಗೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಹಾಯವನ್ನು ಬೇಡಲಿಲ್ಲ. ಇದನ್ನು ಭಾರತೀಯರೊಡನೆ ಸೇರಿಸಿಕೊಳ್ಳಲು ಪರಿಸ್ಥಿತಿಯೋಗ ಮೂಡಿಕೊಳ್ಳಬೇಕೆಂದು ಹೇಳುವವರೂ ನಮ್ಮಲ್ಲಿದ್ದಾರೆ. ಭಾರತ ಸರಕಾರದ ಶಾಂತ ನೀತಿಯಿಂದಾಗಿಯೇ ನಮ್ಮ ಖಾಂಧವರು ಒಂದು ಸಮೂಹಕ್ಕೆ ಭಾರತಕ್ಕೆ ದ್ರೋಹ ಬಗೆಯಲು ಪ್ರಭಲವಗಳನ್ನು ಇನ್ನೂ ಉಣ್ಣಲು ಬೇಕಾಗಿದೆ ಎಂಬುದಾಗಿ ದೂರುವವರೂ ಇದ್ದಾರೆ. ಸರಿಯೇ, ಈ ಮಾತುಗಳಲ್ಲಿ ಅರ್ಥಯವೇನೂ ಇಲ್ಲ. ಆದರೆ, ಶಕ್ತ ಚಿಕಿತ್ಸೆಯೇ ಇದಕ್ಕೆ ತಾರತೋಮ್ಯವಾಯವೇ ಎಂಬುದನ್ನು ನಾವು ಶುರು ಗಮನಿಸಬೇಕಾಗಿದೆ. ನಮ್ಮ ದೇಶದ ವಿದೇಶ ನೀತಿಯಲ್ಲಿ ಶಸ್ತ್ರಾಸ್ತ್ರಗಳ ಉಪಯೋಗಕ್ಕೆ ಸ್ಥಾನ ಅತ್ಯಲ್ಪ; ಇಲ್ಲವೇ ಇಲ್ಲ ವೆಂದೂ ಕೇಳಬಹುದು. ಯಾವುದೇ ಘನಗಂಭೀರ ಪ್ರಶ್ನೆಯನ್ನಾದರೂ ಸೌಹಾರ್ದಮಯ ವಾತಾವರಣದಲ್ಲಿಯೇ ಬಗೆಹರಿಸಿಕೊಳ್ಳಬೇಕೆಂದು ಭಾರತ ಬಯಸುತ್ತಿದೆ. ಗೋವಾಮಾತಕರ ಕಷ್ಟಕಾರ್ಪಣ್ಯಗಳೂ ದೈನಂದಿನ ಜೀವನದಲ್ಲಿ ಅವರು ಎಡತಾಕಬೇಕಾದ ಪಕ್ಷಿಲ ವಿಡ್ಡೂರಗಳೂ ಅದಕ್ಕೆ ತಿಳಿಯದಿಲ್ಲ. ಇವರ ಬಂಧನವನ್ನು ಮುಕ್ತಗೊಳಿಸುವುದಕ್ಕೂ ಅದು ಬದ್ಧಕಂಕಣವಾಗಿದೆ. ಆದರೂ ತನಗೆ ಅನುಕೂಲವಾಗುವ ಪರಿಸ್ಥಿತಿಗಳನ್ನು ರೂಪಿಸಿಕೊಂಡೇ ಮುಂದುವರಿಯುವುದು ಕ್ಷೇಮವಲ್ಲದೆ ವಿಳಪಕ್ಷೀಯ ಪೀಡೆಯನ್ನು ಅನಸರದಲ್ಲಿ ತೆಗೆದುಕೊಳ್ಳುವುದಲ್ಲ. ಗೋವೆಯು ಭಾರತದಲ್ಲಿನ ಪೋರ್ಚುಗಾಲದ ವಸಾಹತುವೆಂದು ಭಾರತದ ವಿದ್ವರೆ. ಇದನ್ನು ಸರಿಯೆಂದು ಪೋರ್ಚುಗಾಲವು ಒಪ್ಪುವುದಿಲ್ಲ. ಅದು ತನ್ನ 'ವ್ಯಾಂತ'ವೆಂಬ ಹೆಸರಿನಿಂದ ಕರೆಯುತ್ತದೆ. ಇದೇ ಭಿನ್ನಾಭಿಪ್ರಾಯದಿಂದಾಗಿ ಈ ಪ್ರಶ್ನೆಯನ್ನೂ ಬಗೆಹರಿದಿಲ್ಲ; ದೂರವಾಗುವ ಲಕ್ಷಣಗಳೂ ನಿಕಟದಲ್ಲಿ ಕೋರುತ್ತಿಲ್ಲ. ಆಫ್ರಿಕೆಯಲ್ಲಿನ ಔರೋಸ್ಯ ದೇಶಗಳ ವಸಾಹತುಗಳಲ್ಲಿ ಒಂದೊಂದೇ ಸ್ವತಂತ್ರವಾಗುತ್ತ ಬರುತ್ತಿರುವಂತೆಯೇ ಪೋರ್ಚುಗಾಲದ ವಸಾಹತುಗಳೂ ಕೈ ಬಿಟ್ಟು ಹೋಗುವುದು ಖಂಡಿತ. ಆಗ, ತನಗಾಯೇ ಪೋರ್ಚುಗಾಲದ ಬಲವು ನತಿಸುತ್ತ ಬಂದು ಸ್ವಾಭಾವಿಕವಾಗಿ ಗೋವೆಯು ಅನಾಯಾಸವಾಗಿ ಭಾರತಕ್ಕೆ ಸೇರುವ ಆಶೆಯನ್ನು ನಮ್ಮ ನಾಯಕರು ಇಟ್ಟುಕೊಂಡಿದ್ದಾರೆ ಅವರ ಈ ಆಶೆಯು ಸಫಲವಾಗಬೇಕಾದರೆ, ಅದೆಷ್ಟು ಸಮಯ ಬೇಕಾಗುತ್ತೋ ಯಾರು ಬಲ್ಲರು?

ಸಂಯುಕ್ತ ರಾಷ್ಟ್ರ ಸಂಸ್ಥೆಯು ಸ್ಪೇನ್ ಮತ್ತು ಪೋರ್ಚುಗಾಲಗಳೊಡನೆ ತಮ್ಮ ವಸಾಹತುಗಳ ಬಗ್ಗೆ ವಿವರಣೆಯನ್ನು ನೀಡಲು ಕೇಳಿಕೊಂಡಿದ್ದರೂ ಕೇವಲ ಸ್ಪೇನ್ ಮಾತ್ರ ಇದನ್ನು ಸ್ವೀಕರಿಸಿದೆ; ಆದರೆ, ತನ್ನ ವು ಪ್ರಾಂತಗಳೆಂಬ ವಾದವನ್ನು ಮುಂದೂಡಿ ಪೋರ್ಚುಗಾಲವು ಅದರ ಕೇಳಿಕೆಯನ್ನು ತಿರಸ್ಕರಿಸಿದೆ. ಇದರ ಇಂತಹ ಜೇಯ ಕೃತ್ಯದ ಪ್ರಭಾವವು ಎಲ್ಲ ರಾಷ್ಟ್ರಗಳ ಮೇಲೆಯೂ ಬಿದ್ದಿದೆಯೆಂಬುದನ್ನು ನಾವು ಅಸ್ಸ ತಿಳಿದುಕೊಳ್ಳಬೇಕಾಗಿದೆ. ಇದರ ಪರಿಣಾಮವಾಗಿ ಸಾರ್ವಾನ್ಯಮಟ್ಟಿಗೆ ಎಲ್ಲ ರಾಷ್ಟ್ರಗಳೂ ಪೋರ್ಚುಗಲಿನ ಬಗ್ಗೆ ತಿರಸ್ಕಾರದೃಷ್ಟಿಯನ್ನು ಜೆಲ್ಲಕೊಡಗಿವೆ. ಹೀಗೆ ವಿಶ್ವದ ಹೆಚ್ಚಿನ ರಾಷ್ಟ್ರಗಳ ನಡುವೆ ತಲೆಯೆತ್ತಲಾದ ಪರಿಸ್ಥಿತಿಯು ಅದಕ್ಕೆ ತಲೆದೋರಿದೆಯೆಂದು ಹೇಳಬಹುದು. ಇದರಿಂದಾಗಿ ಪೋರ್ಚುಗಾಲವು ತನ್ನ ತಪ್ಪನ್ನು ತಿಳಿದುಕೊಂಡು, ಅದನ್ನು ಸರಿಪಡಿಸಲು ಕೆಲವು ದಿನಗಳು ಉರುಳಬಹುದಾದರೂ ಆಸಂಭವನೆನ್ನುವಂತಿಲ್ಲ. ಅಣುಬಾಂಬು, ಜಲಜನಕ ಬಾಂಬುಗಳ ಸ್ವಾಕಿಸ್ಟ್ ರಾಷ್ಟ್ರಗಳೇ ತಮ್ಮ ನಡುವಣ ಹಿರಿಹಿರಿಯ ಭಿನ್ನಾಭಿಪ್ರಾಯಗಳನ್ನು ಶಾಂತಿಮಾರ್ಗದಿಂದಲೇ ಬಿಡಿಸಲು ಕಾತರವಾಗಿರುವ ಗ, ಶಾಂತಿಸ್ಥಿಯ ಭಾರತ ಒಂದು ಕ್ರಾಂತಿಯೆಬ್ಬಿಸುವುದು ಸರಿಯಲ್ಲ ನಮ್ಮ ಬಾಂಧವರು ತೀರ್ಪಿಗಲ್ಲಿ ನಮ್ಮನ್ನು ಕೂಡಿಕೊಳ್ಳಬೇಕೆಂದು ನಾವು ಬಯಸುವುದು ಸರಿಯೇ. ಆ ಬಗ್ಗೆ ಶಾಂತರೀತಿಯಲ್ಲಿ ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದೂ ಆಕ್ಯವೆ. ಸ್ವತಂತ್ರ ಪಕ್ಷದ ನಾಯಕ ಶ್ರೀ.ರಂಗಾಜಾಜಿಯವರೂ ಭಾರತದ ವಿದೇಶನೀತಿಯನ್ನು ಪ್ರಶಂಸಿಸಿದ್ದಾರೆ. ದೇಶದ ಆಂತರಿಕ ಸಮಸ್ಯೆಗಳ ಬಗ್ಗೆ ಅನೇಕ ತೀವ್ರ ಭಿನ್ನಾಭಿಪ್ರಾಯವನ್ನು ತಾಳಿದ್ದರೂ ಪರರಾಷ್ಟ್ರ ಸಂಬಂಧದಲ್ಲಿ ಮಾತ್ರ ತಲೆದೂಗಿ ಪೆಚ್ಚುಗೆ ವ್ಯಕ್ತ ಪಡಿಸಿರುವುದನ್ನು ನಾವು ಅವಶ್ಯ ಗಮನಿಸಬೇಕು. ಗೋವೆಯ ಮೇಲೆ ಶಸ್ತ್ರ ಪ್ರಯೋಗ ಮಾಡದೆ, ಫ್ರೆಂಚ್ ವಸಾಹತುಗಳಂತೆಯೇ ಶಾಂತ ವಿಧಾನಗಳಿಂದ ಭಾರತದೊಡನೆ ಸೇರಿಕೊಳ್ಳಬೇಕು; ಪೋರ್ಚುಗಾಲವು ಬೇಗನೇ ತನ್ನ ತಪ್ಪನ್ನು ತಿಳಿದು ಗೋವೆಯಿಂದ ಹೊರನಡೆಯುವಂತೆ ಪ್ರೇರೇಪಿಸಬೇಕು.

ಸರಕಾರ ಸಚೇತವಾಗಲಿ

ಆಹಾರ ಪದಾರ್ಥಗಳಲ್ಲಿ ವಿಷ ಪದಾರ್ಥಗಳು ಮಿಶ್ರಿತವಾದುದರ ದೆಸೆಯಿಂದ ಪ್ರತಿ ವರ್ಷವೂ ಕೆಲವೊಂದು ಮರಣಗಳು ಸಂಭವಿಸುತ್ತಿದೆ. ಅಂತೆಯೇ ಉತ್ತಮ ಪದಾರ್ಥಗಳಲ್ಲಿ ಮಧ್ಯಮತರದ ಪದಾರ್ಥಗಳನ್ನು ಬೆರೆಸಿ ಮೂರು ಲಾಭಗಳಿಸುವ ವ್ಯಾಪಾರೀ ವರ್ಗವೂ ಇದೆ. ಹಾಲಿಗೆ ನೀರು, ಹಾಲಿನ ಪೌಡರ್, ಗೋದಿ ಹಿಟ್ಟು ಮೊದಲಾದುವನ್ನು ಸೇರಿಸುವ ಗೌಳಿಗನ್ನಂದ ಹಿಡಿದು, ಅಕ್ಕಿ, ಗೋದಿ, ತುಪ್ಪಗಳಿಗೂ ಕೀಳು ವರ್ಗದ ಪದಾರ್ಥಗಳನ್ನು ಮಿಶ್ರಮಾಡಿ ಮೂರುವ ವರ್ತಕರು ಇಂದು ಹೆಚ್ಚಾಗಿದ್ದಾರೆ. ಆಹಾರ ಪದಾರ್ಥಗಳಲ್ಲಿ ಮಿಶ್ರಣ ಮಾಡುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವೆನಿಸಿದೆ. ಕೇಂದ್ರ ಆರೋಗ್ಯ ಮಂತ್ರಿ ಶ್ರೀ ದ. ಪ. ಕರಮರಕರರು ಈ ಬಗ್ಗೆ ಹೈದರಬಾದಿನ ಗೋಷ್ಠಿಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಮನನೀಯವಿವೆ. ಆಹಾರ ವಸ್ತುಗಳಲ್ಲಿ ಮಿಶ್ರಣ ಮಾಡುವುದು ಕೊಲೆಗಡುಕ ತನಕ್ಕೆ ಸವಾನವಾದ ಅಪರಾಧವೆಂದು ಅವರು ಘೋಷಿಸಿದ್ದಾರೆ. ಕೊಲೆಗೆಯ್ದವರಿಗೆ ಮರಣದಂಡನೆಯನ್ನಿಡಿಯುವಂತೆಯೇ ಇಂತಹ ಕೋನಂಟಗಳಿಗೂ ಮೃತ್ಯುದಂಡನೆಯೊಯಬೇಕೆನ್ನುತ್ತಾರೆ ಇವರು. ಆದರೆ, ಆಹಾರವಸ್ತು ಮಿಶ್ರೀಕರಣದ ಕಾನೂನಿನಲ್ಲಿರುವ ಕೆಲವೊಂದು ತಾಂತ್ರಿಕ ತೊಂದರೆಗಳಿಂದಾಗಿ, ಅದನ್ನು ಸಮರ್ಥರೀತಿಯಲ್ಲಿ ವ್ಯವಹೃತ ಗೊಳಿಸುವುದು ಅಸಾಧ್ಯವೆಂಬ ಮಾತು ಕೇಳಿಬರುತ್ತಿದೆ. ಆದರೂ ಸರಕಾರವು ಕೊಲೆ-ಕಳವುಗಳಿಗೆ ನೀಡುವಷ್ಟು ಪ್ರಾಧಾನ್ಯವನ್ನು ದುರ್ವಿಶ್ಲೇಕರಣದತ್ತ ನೀಡುತ್ತಿಲ್ಲ. ಕೊಲೆ ಕಳವುಗಳು ಅಲ್ಲಲ್ಲಿ ವಿರಳವಾಗಿ ನಡೆಯುವುವಾದರೆ, ಆಹಾರ ಕಲಬೆರಕೆ ಕೇಂಕೇರಿಗಳಲ್ಲಿ ನಡೆಯಲು ಅವಕಾಶವಿದೆ. ನಮ್ಮ ಸರಕಾರವು ಕಟ್ಟುನಿಟ್ಟಿನಿಂದ ಕಾನೂನನ್ನು ವ್ಯವಹೃತಗೊಳಿಸಲು ಹಲವಾರು ಕಾರಣಗಳಿಂದ ನಿಶ್ಯಕ್ತವಾಗಿರುವುದೇ ಈ ಸಾರ್ವಜನಿಕ ಪೀಡೆಗೆ ಹೇತುವಾಗಿದೆ. ಶ್ರೀ ಕರಮರಕರರೆನ್ನುವಂತೆ, ಜನತೆ ದೊಂಬಿಯೆದ್ದು ವಂಚಕರನ್ನು ಸದೆಬಡಿಯುವುದಕ್ಕೆ ಮೊದಲೇ ಜನಹಿತ ಸರಕಾರ ಅವರನ್ನು ಇಲ್ಲದಂತೆ ಮಾಡಬೇಕಾದುದು ಅವಶ್ಯ; ಮತ್ತಿದು ಅದರ ಕರ್ತವ್ಯ.

←

ಮೈಸೂರು ರಾಜ್ಯಕೀಯ:

ಹೈಕಮಾಂಡ್‌ನ ಪಕ್ಷಪಾತ ಧೋರಣೆ

ವಿಧಾನ ಸಭೆಯ ಕಾಂಗ್ರೆಸ್ ಪಕ್ಷದ ವಿಶ್ವಾಸವಿಲ್ಲದವನು ಅಧಿಕಾರದಲ್ಲಿರುವುದು ನ್ಯಾಯವಲ್ಲ; ವಿಶ್ವಾಸವಿರುವುದೆಂಬ ವಿಶ್ವಾಸವಿದ್ದರೆ, ಶ್ರೀ ಜತ್ತಿಯವರು ವಿಶ್ವಾಸ ಮತಯಾಚಿಸಲು ಹೈಕಮಾಂಡ್ ಆಡ್ಡಬರಬಾರದೆನ್ನುತ್ತಾರೆ, ಲೇಖಕರು.

ಶ್ರೀ ಎ. ರಾಮಣ್ಣ.

ಮೈಸೂರಿನ ಪ್ರಕ್ಷುಬ್ಧ ರಾಜಕೀಯಕ್ಕೆ ಸಂಬಂಧಿಸಿದಂತೆ ಅನೇಕರು ಅನೇಕ ರೀತಿಯ ಅಭಿಪ್ರಾಯ ಪಡುತ್ತಾರೆ ಈಗಿನ ಜತ್ತಿ ಸಂಪುಟವನ್ನುರುಳಿಸಬೇಕೆನ್ನುವವರು ಅಧಿಕಾರದ ಆಸೆಯುಳ್ಳವರೆಂದು ಅನೇಕರು ಹೇಳುತಿದ್ದಾರೆ. ಆಸೆಯಲ್ಲ ದಾತನು ಮನುಷ್ಯನೇ ಅಲ್ಲ; ಅದರೆ, ಅತಿ ಆಸೆ ಇರಬಾರದು ಅಷ್ಟೆ.

ಶ್ರೀ ಜತ್ತಿಯವರ ವಿರುದ್ಧ ಅಧಿಕಾರ ಆಸೆಯಿಂದಲೇ ಈ ರೀತಿ ವಿರೋಧಿಗಳು ವಾದುತ್ತಾರೆನ್ನುವಂತಿಲ್ಲ. ಹೇಳಿದರೆ, ಅದನ್ನೇ ಜತ್ತಿಯವರಿಗೂ ಕೇಳಬಹುದು. ಜತ್ತಿಯವರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂದು ವಿರೋಧಿಗಳು ಹೇಳುತ್ತಾರೆ ಇದು ನಿಜವಾದರೆ, ಜತ್ತಿಯವರು ಅಧಿಕಾರದಲ್ಲಿರುವುದು ಸರಿಯಲ್ಲ; ಹೈಕಮಾಂಡಿಗೂ ಇದು ಸರಿಯಲ್ಲ. ಇತ್ತ ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ವಿಶ್ವಾಸವಿಲ್ಲ, ಅತ್ತ ಪ್ರದೇಶ ಕಾಂಗ್ರೆಸ್ ರಾಜಿನಾಮೆ ಕೊಡಬೇಕೆನ್ನುತ್ತದೆ. ಹೇಗಿದ್ದರೂ ಕಾಂಗ್ರೆಸ್ ಹೈಕಮಾಂಡ್ ನಾಸಿದ್ದೇನೆ, ಅವರೇ ಇರಲೆನ್ನುವುದು ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ವಿರೋಧವಾಗಿದೆ.

ವಿರೋಧಿಗಳು ಜತ್ತಿ ರಾಜಿನಾಮೆ ಕೊಡಬೇಕೆಂದು ಮಾತ್ರ ಕೇಳುತ್ತಿಲ್ಲ; ವಿಶ್ವಾಸಮತ ಪಡೆಯುವ ಅವಕಾಶವನ್ನೂ ಅವರಿಗೆ ಇತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ನ್ಯಾಯವಾದುದು. ಹೈಕಮಾಂಡ್ ಇದ

ಕೊಲೆಗೆಯ್ದವರಿಗೆ ಮರಣದಂಡನೆಯನ್ನಿಡಿಯುವಂತೆಯೇ ಇಂತಹ ಕೋನಂಟಗಳಿಗೂ ಮೃತ್ಯುದಂಡನೆಯೊಯಬೇಕೆನ್ನುತ್ತಾರೆ ಇವರು. ಆದರೆ, ಆಹಾರವಸ್ತು ಮಿಶ್ರೀಕರಣದ ಕಾನೂನಿನಲ್ಲಿರುವ ಕೆಲವೊಂದು ತಾಂತ್ರಿಕ ತೊಂದರೆಗಳಿಂದಾಗಿ, ಅದನ್ನು ಸಮರ್ಥರೀತಿಯಲ್ಲಿ ವ್ಯವಹೃತ ಗೊಳಿಸುವುದು ಅಸಾಧ್ಯವೆಂಬ ಮಾತು ಕೇಳಿಬರುತ್ತಿದೆ. ಆದರೂ ಸರಕಾರವು ಕೊಲೆ-ಕಳವುಗಳಿಗೆ ನೀಡುವಷ್ಟು ಪ್ರಾಧಾನ್ಯವನ್ನು ದುರ್ವಿಶ್ಲೇಕರಣದತ್ತ ನೀಡುತ್ತಿಲ್ಲ. ಕೊಲೆ ಕಳವುಗಳು ಅಲ್ಲಲ್ಲಿ ವಿರಳವಾಗಿ ನಡೆಯುವುವಾದರೆ, ಆಹಾರ ಕಲಬೆರಕೆ ಕೇಂಕೇರಿಗಳಲ್ಲಿ ನಡೆಯಲು ಅವಕಾಶವಿದೆ. ನಮ್ಮ ಸರಕಾರವು ಕಟ್ಟುನಿಟ್ಟಿನಿಂದ ಕಾನೂನನ್ನು ವ್ಯವಹೃತಗೊಳಿಸಲು ಹಲವಾರು ಕಾರಣಗಳಿಂದ ನಿಶ್ಯಕ್ತವಾಗಿರುವುದೇ ಈ ಸಾರ್ವಜನಿಕ ಪೀಡೆಗೆ ಹೇತುವಾಗಿದೆ. ಶ್ರೀ ಕರಮರಕರರೆನ್ನುವಂತೆ, ಜನತೆ ದೊಂಬಿಯೆದ್ದು ವಂಚಕರನ್ನು ಸದೆಬಡಿಯುವುದಕ್ಕೆ ಮೊದಲೇ ಜನಹಿತ ಸರಕಾರ ಅವರನ್ನು ಇಲ್ಲದಂತೆ ಮಾಡಬೇಕಾದುದು ಅವಶ್ಯ; ಮತ್ತಿದು ಅದರ ಕರ್ತವ್ಯ.

←

ಸಂಕ್ಷಿಪ್ತ ಸುದ್ದಿಗಳು

ವಿಚಿತ್ರ ವಿದ್ಯಮಾನಗಳು

೧೯೬೦ನೇ ಇಸವಿಯ ಇತಿಹಾಸ ಪ್ರಸಿದ್ಧ ಪ್ರಕರಣಗಳಲ್ಲಿ ಕಾಂಗೋನಿನ ವಿದ್ಯಮಾನವೂ ಒಂದಾಗಿದೆ. ಅಲ್ಲಿನ ಅಧ್ಯಕ್ಷ ಪ್ರಧಾನಿ ಲುಮುಂಬಾರ ನಡುವೆ ತೀವ್ರ ಸೆಣಸಾಟಗಳು ನಡೆಯುತ್ತಿರುವಂತೆಯೇ ಸದ್ಯ ಸೇನೆಯಲ್ಲಿಯೂ ತೀವ್ರ ಭಿನ್ನಾಭಿಪ್ರಾಯ ಹುಟ್ಟಿಕೊಳ್ಳುವ ಸೂಚನೆಯಿದೆ. ಕಾಂಗೊ ಸೈನ್ಯದ ಥಿಯೆಲ್ ಸೈನಿಕ ಕೇಂದ್ರದ ಕಮಾಂಡರ್ ಕರ್ನಲ್ ಬೊಂಬಾನೊರವರು ಸೈನ್ಯವನ್ನು ಕರ್ನಲ್ ಮೊಬುಟುರವರಿಗೆ ತಿರುಗಿ ಬಿದ್ದಿದ್ದಾರೆ. ಬೊಂಬಾನೊರವರು ಆಡಳಿತವನ್ನು ಪಾರ್ಲಿಮೆಂಟಿಗೆ ಬಿಟ್ಟುಕೊಟ್ಟು ಕೇನೆಯು ಮರಳಬೇಕೆಂದು ಹೇಳಿದರೆ ನೊಬುಟು ಇದನ್ನು ವಿರೋಧಿಸುತ್ತಾರೆ. ಈ ನಡುವೆ ಲುಮುಂಬಾರವರು ಪರವಾಗಿ ಕೊಸ ಬಣವೊಂದನ್ನು ಕಟ್ಟುವ ಆಶೆಯಿಂದ ಸ್ಟ್ಯಾನ್‌ಲಿ ವಿಲಿಗೆ ಹೋಗಿದ್ದಾರೆಂದೂ ಸುದ್ದಿ. ಸಂ. ರಾ. ಸಂಘದ ಭಾರತೀಯ ದಳದ ಕೆಲವರ ಮೇಲೆ ಹಿಂಸಾಚಾರವು ನಡೆದಿದೆಯೆಂದೂ ಈ ಬಗ್ಗೆ ಪ್ರಧಾನಿ ನೆಹರೂ ದುಃಖ ವ್ಯಕ್ತಪಡಿಸಿರುವರೆಂದೂ ಗೊತ್ತಾಗಿದೆ.

೪೨ಕೋಟಿ ಹೊಸ ಕರಗಳು

ಆಸ್ಥಿರ ರಾಜ್ಯಕೇಯುದ ತವರೂರಾದ ಮೈಸೂರಿನಲ್ಲಿ ಮಂತ್ರಿಗಳು ಬದಲಾಗಬಹುದು; ಮುಖ್ಯಮಂತ್ರಿಯೂ ಬೇರಾಗಬಹುದು. ಆದರೆ, ಅರ್ಥಮಂತ್ರಿ ಮರಿಯಪ್ಪನವರು ಮಾತ್ರ ತನ್ನ ಸ್ಥಾನವನ್ನು ಭದ್ರವಾಗಿರಿಸಿಕೊಂಡು ಬಂದಿದ್ದಾರೆ. ಕೆಂಗಲ್ಲರ ಕಾಲದಿಂದ ಜತ್ತಿಯವರ ಕಾಲದವರೆಗೂ ಅವರು ಅರ್ಥಮಂತ್ರಿ ಶಾಖೆಯನ್ನು ಪಕ್ಷಾತೀತವಲ್ಲಿ ನೋಡಿಕೊಂಡು ಬಂದಿರುವುದೇ ಅವರ ಯಶಸ್ಸಿಗೆ ಮೂಲವೆಂಬುದು ಕೇಳಬಹುದು. ರಾಜ್ಯ ಪುನರ್ವಿಂಗಡಣೆಯ ಆ ಸಂಧಿಗ್ಧಕಾಲದಲ್ಲೂ ಅವರು ಎರಡು ವಿಭಿನ್ನ ರಾಜ್ಯಗಳಲ್ಲಿ ಹಂಚಿಹೋಗಿದ್ದ ಭಾಗಗಳನ್ನು ಒಂದಾಗಿಸಿ ಸುಭದ್ರ ಆರ್ಥಿಕ ಸ್ಥಿತಿಯನ್ನು ಕಾಯ್ದುಕೊಂಡು ಬಂದಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಗೆ ಸಂಪನ್ಮೂಲಗಳನ್ನು ಹೊಂದಿಸಿಕೊಡಲು ನೇಮಿಸಿದ ಸಮಿತಿಯ ಪ್ರಾರಂಭಿಕ ಸಭೆಯಲ್ಲಿ ಅವರು ೪೨ ಕೋಟಿ ರೂಪಾಯಿಗಳ ಅಧಿಕ ಕರ ಹೇರುವ ಅವಶ್ಯಕತೆಯನ್ನು ಪ್ರತಿಬಿಂಬಿಸಿದ್ದಾರೆ. ತಮ್ಮ ಶಾಖೆಯ ಹೊಣೆಗಾರಿಕೆಯನ್ನು ಅರಿತು ಅದನ್ನು ನಿರ್ವಹಿಸುವುದರಲ್ಲಿ ಇವರು ಬಹು ಚತುರರಿದ್ದಾರೆ; ಎಂಬುದೇ ಈ ಸಮಿತಿಯ ರಚನೆಯೊಯಿತು.

ಕರ್ನಾಟಕದ ದುರ್ದೈವ

ಸರಕಾರಿ ನೌಕರಿಯಲ್ಲಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಕೃಷಿ ಮಾಡಿರುವುದು ಇನ್ನೊಂದು ಕೆಲಸವಲ್ಲ. ಇದಕ್ಕೆ ನಮ್ಮ ಮುಂದಿರುವ ದಾರಿಯೊಂದೇ. ವಿಶ್ವಾಸ ಮತ ಗೆಲ್ಲಲು ಶ್ರೀ ಜತ್ತಿಯವರಿಗೆ ಸೂಚನೆ ಕೊಡುವುದು. ಪಕ್ಷ ವಿಶ್ವಾಸ ವ್ಯಕ್ತಪಡಿಸದಿದ್ದರೆ ಅವರೇ ಮುಂಮಸರಿಯಲಿ; ಇಲ್ಲವಾದರೆ, ರಾಜಿನಾಮೆಯಿತ್ತು ಮುಕ್ತಿಕೊಟ್ಟು ರಾಜ್ಯಪಾಲರ ಆಯ್ಕೆಗೆ ಅವಕಾಶ ಕೊಡಲಿ.

ಅಲ್ಲಲ್ಲಿಯ ಸುದ್ದಿಸಾರ

ವಾಗ್ವರ್ಧಿನೀ ಸಭೆಯ ಸ್ವಾರಂಭೋತ್ಸವ

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ ಆಶ್ರಯದಲ್ಲಿ ನಡೆಯುವ ವಾಗ್ವರ್ಧಿನೀ ಸಭೆಯ ಪ್ರಾರಂಭೋತ್ಸವವು ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರ ಅಧ್ಯಕ್ಷತೆಯಲ್ಲಿ ತಾ. ೨೬ರಂದು ಜರಗಿತು. ಶ್ರೀ ಉ. ಲಕ್ಷ್ಮೀನಾರಾಯಣ ಕೆನಯವರು "ರಾಷ್ಟ್ರಭಾಷೆ" ಎಂಬ ವಿಷಯದ ಮೇಲೆ ಸ್ವಾರಂಭಿಕ ಭಾಷಣವನ್ನು ಮಾಡುತ್ತಾ ಒಂದು ರಾಷ್ಟ್ರಕ್ಕೆ ಹಲವಾರು ರಾಷ್ಟ್ರಭಾಷೆಗಳು ಇರಬೆಹುದಾದರೂ ಒಂದು ರಾಜಭಾಷೆಯು ಅವಶ್ಯಕತೆ ಇದೆ, ಎಂದು ಹೇಳಿ ಹಿಂದೀ ನಮ್ಮ ದೇಶಕ್ಕೆ ಯೋಗ್ಯ ಎಂದು ಅಭಿಪ್ರಾಯ ಪಟ್ಟರು. ಶ್ರೀಗಳಾದ ರಮೇಶ ಪಡಿಯಾರ್, ಚಂದ್ರ ಶೇಖರ ಚಡಗ, ಯನ್. ನುಧೂ ಸೂದನ ಭಾಗವತ ಮತ್ತು ಬಿ. ಎಸ್. ರಾಮರಾಯರು ಹಿಂದಿಯೇ ಅಧಿಕೃತ ಭಾಷೆಯಾಗಬೆಕೆಂಬ ತಮ್ಮ ಸಂಪನ್ನ ಭಾಷೆಯಾಗಿದೆ ಎಂದು ವಾದಿಸಿದರು. ಶ್ರೀಗಳಾದ ವಿಲಿಯಮ್ ಪಿಂಟೊ, ಟಿ. ಕೆ. ಸದಾಶಿವ ರಾವ್ ಮತ್ತು ಕೆ. ಪಾಮೋದರ ಪಾತಾಳರು ಈ ವಾದವನ್ನು ಬೆಂಬಲಿಸಿದರೂ ಈ ದಿಶೆಯಲ್ಲಿ ಅವಸರ ಮಾಡುವುದರಿಂದ ಅನಾಹುತವಾಗುವುದೆಂಬುದನ್ನು ವಿವರಿಸಿದರು. ಅಧ್ಯಕ್ಷರು ಸಮಾರೋಪ ಭಾಷಣವನ್ನಾಡುತ್ತಾ ಭಾರತೀಯನು ತನ್ನ ಮಾತೃ ಭಾಷೆ, ದೇಶದ ರಾಜಭಾಷೆ, ಹಿಂದೀ ಮತ್ತು ಅಂತಾರಾಷ್ಟ್ರೀಯ ಭಾಷೆ ಇಂಗ್ಲೀಷಿಗಳನ್ನು ಅವಶ್ಯ ಕಲಿಯಬೇಕೆಂದೂ ಇವುಗಳನ್ನು ಕಲಿಯುವುದರಲ್ಲಿ ವಿಶೇಷ ತ್ಯಾಸವೆನಿಸುವುದಿಲ್ಲವೆಂದೂ ಅಭಿಪ್ರಾಯ ಪಟ್ಟರು.

ಪ್ರಾರಂಭದಲ್ಲಿ ಪರಿಷತ್ತಿನ ಉಪಾಧ್ಯಕ್ಷೆ ಶ್ರೀ ಬಿ. ಎಸ್. ರಾಮರಾಯರು ಪರಿಷತ್ತಿನ ಧ್ಯೇಯ ಧೋರಣೆಗಳನ್ನು ವಿವರಿಸಿ, ಸ್ವಾಗತಿಸಿದರು. ಆರಂಭದಲ್ಲಿ ಸಾಹಿತ್ಯಿಕ ಕಾರ್ಯದರ್ಶಿ ರಮೇಶ್ ಪಡಿಯಾರರು ಅಭಿಧಾರಣ ಮಾಡಿಸಿದರು.

೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿಯ ಸ್ವೀಕರಣ

ಪ್ರಸ್ತುತ ವರ್ಷದ ಸಾಹಿತ್ಯ ಸಮ್ಮೇಳನವನ್ನು ನಾವು ದ. ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆಸಲು ಒಪ್ಪಿದ ತರುವಾಯ, ಸಮ್ಮೇಳನದ ವಿಷಯದಲ್ಲಿಯೂ ಅದನ್ನು ನಡೆಸುವ ಹಿರಿಯಸಂಸ್ಥೆ ಪರಿಷತ್ತಿನ ವಿಷಯದಲ್ಲಿಯೂ ಪತ್ರಿಕೆಗಳಲ್ಲಿ ವರದಿಯಾಗಿರುವ ಅಮಾಂಥಿತ ಟೀಕೆಗಳಿಂದ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಅನಾವೇಕ್ಷಿತ ಮತ್ತು ಕಲುಷಿತ ವಾತಾವರಣವನ್ನು ನಿರ್ಮಿಸುವ ಕೆಲವು ಪ್ರಯತ್ನಗಳನ್ನು ಗಮನಿಸಿ ಸ್ವಾಗತಸಮಿತಿಯು ಈ ರೀತಿ ತನ್ನ ನಿಲುಮೆಯನ್ನು ಸ್ಪಷ್ಟೀಕರಿಸಲು ಬಯಸುವುದು. ಇದೇ ದಶಂಬರ ಕೊನೆಯ ವಾರದಲ್ಲಿ ನಡೆಯಲಿರುವ ಈ ಸಮ್ಮೇಳನವು ಅಖಿಲ ಕರ್ನಾಟಕಕ್ಕೂ ಕೀರ್ತಿಕರವಾಗಿ ನಡೆಯುಬೇಕೆಂಬ ಅಕಾಂಕ್ಷೆಯಿಂದ ಸ್ವಾಗತಸಮಿತಿಯು ಸಕಲ ಸನ್ನಾಹಗಳನ್ನೂ ಮಾಡುತ್ತಿರುವ ವೇಳೆಯಲ್ಲಿಯೆ ನಾಡಿನ ಕೆಲವು ಪತ್ರಿಕೆಗಳಲ್ಲಿ ಕೆಲವು ಮಹನೀಯರು (ಸಮಿತಿಯ ಅಧಿಕಾರಿಗಳಾಗಿದವರು ಇಂಥ ಅಭಿಪ್ರಾಯವುಳ್ಳವರಾಗಿದ್ದಾರೆ, ಹಾಗೆ ಮಾಡಿದ್ದಾರೆ, ಹೀಗೆ ಎನಿಸಿದ್ದಾರೆ' ಎಂದು ಸುಂಠಾರಿ ಸ್ವಕಪೋಲ ಕಲ್ಪಿತವಾದ ಊಹೆಗಳ ಮೂಲೆಯನ್ನು ಪೋಣಿಸಿ ಜನತೆಯಲ್ಲಿ ಭ್ರಮೆಯನ್ನುಂಟುಮಾಡಲು ಯತ್ನಿಸುವುದನ್ನು ಕಂಡು ಸ್ವಾಗತ ಸಮಿತಿಯು ಖೇದವನ್ನೂ ವಿಷಾದವನ್ನೂ ಪಟ್ಟಿದೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಲಿ ಕಾರ್ಯದರ್ಶಿ ಅಥವಾ ಇನ್ನಿತರರಾಗಲಿ ಸಮ್ಮೇಳನದ ಅಧ್ಯಕ್ಷತೆಯೇ ಅದಿಯೊಗುಳ್ಳ ವಿಚಾರಗಳಲ್ಲಿ ಒಟ್ಟು ಕನ್ನಡದ ಶ್ರೇಯೋಭಿವೃದ್ಧಿಯನ್ನು ಅಸಲುಕ್ಷಿಸಿದವರೇ ವಿನಾ ಯಾರೋ ಒಬ್ಬರೆ ಅಥವಾ ಒಂದು ಪಂಥದ ವಿಶಿಷ್ಟ ಹಿತಾಸಕ್ತಿಗಾಗಿ ಹಿಂದೂ ಮುಂದೂ ದುಡಿಯುವವರೆಲ್ಲರೆಂಬುದನ್ನೂ, ಪತ್ರಿಕೆಗಳಲ್ಲಿ ಪ್ರಕಟವಾದ ಸ್ವತಂತ್ರ ಲೇಖನಗಳ ಮೇಲಿಂದ ಯಾರೂ ಇಂಥ ತಾತ್ಪರ್ಯವನ್ನು ಕಟ್ಟಿಕೊಳ್ಳಲಾಗದೆಂದೂ ಸ್ವಾಗತ ಸಮಿತಿಯು ಅತ್ಯಂತ ಕಳಕಳಿಯಿಂದ ಕನ್ನಡ ಜನಪದದ ಸಕಲ ಪ್ರಜೆಗಳಿಗೂ ಭಿನ್ನವಿಸುವುದು. ಅಲ್ಲದೆ ಸ್ವಾಗತ ಸಮಿತಿಯ ಮೇಲೆ ಆರೋಪಿಸಲಾಗಿರುವ ಲೇಖಕ ಮಹನೀಯರುಗಳ ಸ್ವಾಭಿಪ್ರಾಯಗಳನ್ನು ಪೂರ್ತಿ ನಿರಾಧಾರವೆಂದು ಆಲ್ಪಗಳೆಯುವುದು.

ಸ್ವಾಗತ ಸಮಿತಿಯು ಯಾವ ವಾದವಿವಾದಗಳ ಕೋಲಾಹಲದಲ್ಲಿಯೂ ಸೇರಿಲು ಬಯಸದು ಎಂಬುದನ್ನೂ, ಸಮ್ಮೇಳನಕ್ಕೆ ಬರಲಿರುವ ಸಾಹಿತ್ಯಕಾರರನ್ನೂ, ಸಾಹಿತ್ಯ ಪ್ರೇಮಿಗಳನ್ನೂ ಅಂತಃಕರಣ ಪೂರ್ವಕವಾಗಿ ಸ್ವಾಗತಿಸಲು ಸಿದ್ಧವಾಗಿ ಇರುವುದನ್ನೂ ಈ ಮೂಲಕ ತಿಳಿಸುವುದು. ಪರಿಣತಮತಿಗೆಳಾದ ಕನ್ನಡ ಸಾಹಿತಿಗಳೂ, ಕನ್ನಡಿಗರೆಲ್ಲರೂ ಸಮ್ಮೇಳನದಂಥ ಒಂದು ಶುಭ ಸಂದರ್ಭದಲ್ಲಿ ಸೌರ್ಮನಸ್ಯ ವಾತಾವರಣವನ್ನು ನಿರ್ಮಿಸಬೇಕೆಂಬ ಸಮಿತಿಯ ಹಂಬಲವನ್ನು ಚರಿತಾರ್ಥಗೊಳಿಸುವಲ್ಲಿ ಸಮಿತಿಯೊಡನೆ ಸ್ವಸಂತೋಷದಿಂದ ಸಹಕರಿಸಿ ಸಮ್ಮೇಳನದ ಯಶಸ್ಸನ್ನು ರೂಪಿಸಬೇಕೆಂದೂ ವಿನಯಪೂರ್ವಕ ಪ್ರಾರ್ಥಿಸುತ್ತದೆ.

ಸ್ವಾಗತ ಸಮಿತಿ.

ಕನ್ನಡ ಸಾಹಿತ್ಯ ಪರಿಷತ್ತನ್ನು ರಾಜ್ಯಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್ ವಿ. ಕೃಷ್ಣ ಮೂರ್ತಿರಾಯರು ಉದ್ಘಾಟಿಸಲು ಒಪ್ಪಿರುವರೆಂದು ತಿಳಿದುಬಂದಿದೆ.

ಸಮ್ಮೇಳನವು ದಶಂಬರ ತಾ. ೨೭, ೨೮ ಮತ್ತು ೨೯ ಈ ಮೂರು ದಿನಗಳಲ್ಲಿ ಜರಗಲಿದೆ.

ಯೋಜನಾ ದಿನಾಚರಣೆ

ಎಂ. ಜಿ. ಎಂ. ಕಾಲೇಜಿನ ಆರ್ಥಶಾಸ್ತ್ರ ಸಂಘದ ಆಶ್ರಯದಲ್ಲಿ ಯೋಜನಾ ದಿನಾಚರಣೆಯು ತಾ. ೨೫ರಲ್ಲು ಕನ್ನಡದ ಪ್ರಸಿದ್ಧ ಕವಿ, ಸಾಹಿತಿ, ಹಾಗೂ ಆರ್ಥಿಕತಜ್ಞರಾದ ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶ್ರೀ ಕು. ಶಿ. ಹರಿದಾಸ ಭಟ್ಟರು "ಯೋಜನೆಯ ಮುನ್ನೋಟ" ಎಂಬ ಪುಸ್ತಕದ ಸ್ವತಿಗಳನ್ನು ಹಂಚಿದರು.

ಕಾಲೇಜಿನ ಆರ್ಥಶಾಸ್ತ್ರ ಉಪನ್ಯಾಸಕ ಶ್ರೀ ಶ್ರೀಶ ಬಲ್ಲಾಳರಿಂದ ಹಾಗೂ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀ ವಾಮನ ಕಾಮತ್ ಮತ್ತು ಗಂಜಾಯ ಭಟ್ಟರು ಯೋಜನೆಯ ವಿವಿಧೋದ್ದೇಶಗಳ ಕುರಿತು ಪ್ರಬಂಧವನ್ನೋದಿದರು.

ಅಧ್ಯಕ್ಷ ಶ್ರೀ ವಿ. ಸೀಯವರು ಮೊತನಾಡುತ್ತ ಯೋಜನೆಯ ವಿವಿಧೋದ್ದೇಶಗಳನ್ನು ಕೇವಲ ಮೂರಿನಿಂದ ಮಾತ್ರ ಸೂರ್ಯಸದೆ ಪ್ರತಿಯೊಬ್ಬರೂ ದೇಶದ ಪ್ರಗತಿಗಾಗಿ ಹೆಗಲಿಗೆ ಹೆಗಲು ಕೊಟ್ಟು ದುಡಿಯಬೇಕೆಂತೂ, ಆರ್ಥಿಕ ಪ್ರಗತಿಗಾಗಿ ಪ್ರತಿಯೊಬ್ಬರೂ ದೇಶದ ಯೋಜನೆಯೊಡನೆ ಸಹಕರಿಸಬೇಕೆಂದು ವಿದ್ಯಾರ್ಥಿಗಳ ಹೊಣೆ ಇದರಲ್ಲಿ ಮಹತ್ವದ್ದಾಗಿದೆಯೆಂದು ನಿವರಿಸಿದರು.

ಕಾರ್ಯದರ್ಶಿ ಶ್ರೀ ಶೀರ್ವಾದಿ ವಿಲಿಯಂ ಪಿಂಟೊರವರು ಸಂದೇಶಗಳನ್ನೋದಿ ಧನ್ಯವಾದ ಸಮರ್ಪಿಸಿದರು.

ಮಣಿಪಾಲದಲ್ಲಿ ಸ್ವಯಂಚಾಲನ ಟೆಲಿಫೋನ್ ಎಕ್ಸ್ಚೇಂಜಿನ ಉದ್ಘಾಟನೆಯು

ಕಳೆದ ತಾ. ೨೫ರಂದು ಮೈಸೂರು ಮಾನ್ಯ ಮಂತ್ರಿ ಶ್ರೀ ಟಿ. ಸುಬ್ರಮಣ್ಯಮರವರಿಂದ ಡಾ. ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಆರಂಭದಲ್ಲಿ ಲಂಡನ್ ಪಿಕ್ಚವಿದ್ಯಾನಿಲಯದ ಫೈನಾನ್ಸ್ ಮಾರ್ಕರವರಿಂದ ಕಮಲಿನಲ್ಲಿ ತ್ಯಾಗರಾಜರ ಕೀರ್ತನೆಯ ಹಾಡುವಿಕೆ, ಪೋಸ್ಟಲ್ ಇಲಾಖೆಯ ಡ್ಯಾರೆಕ್ಟರ್ ಶ್ರೀ ಕೆ. ವಿ. ಪೈಗಳಿಂದ ಸ್ವಾಗತ ಭಾಷಣಗಳಾದುವು. ಶಿವಳ್ಳಿ ಗ್ರಾಮ ಪಂಚಾಯತ ಪರವಾಗಿ ಜೇಂಗಮೆನ್ ಶ್ರೀ ಟಿ. ರಮೇಶ ಪೈಗಳು ಮಂತ್ರಿಗಳಿಗೊಂದು ಸ್ವಾಗತ ಪತ್ರವನ್ನರ್ಪಿಸಿದರು. ಮಂತ್ರಿಗಳು ಎಕ್ಸ್ಚೇಂಜನ್ನು ಉದ್ಘಾಟಿಸುತ್ತಾ ಡಾ. ಪೈಗಳ ಅಸಾಮಾನ್ಯ ಕೆಲಸಗಳಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಪೋಸ್ಟಲ್ ಇಲಾಖೆಯ ಶ್ರೀ ಮಣಿಯವರು ಧನ್ಯವಾದ ಸಮರ್ಪಿಸಿದರು.

ಕಾರ್ಕಳ—ಸ್ಥಳೀಯ ಸ್ವಯಂಚಾಲನ ಟೆಲಿಫೋನ್ ಎಕ್ಸ್ಚೇಂಜನ್ನು ಕಳೆದ ತಾ. ೨೬ರಂದು ಮೈಸೂರು ಮಾನ್ಯ ಮಂತ್ರಿ ಶ್ರೀ ಟಿ. ಸುಬ್ರಮಣ್ಯಮರು ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪೋಸ್ಟಲ್ ಡ್ಯಾರೆಕ್ಟರ್ ಶ್ರೀ ಕೆ. ವಿ. ಪೈಯವರು ಸ್ವಾಗತಿಸಿದರು. ಮಾನ್ಯ ಮಂತ್ರಿಗಳು ಎಕ್ಸ್ಚೇಂಜನ್ನು ಉದ್ಘಾಟಿಸುತ್ತ ಪ್ರಕೃತ ಜಿಲ್ಲಾ ಬೋರ್ಡ್ ಹೈಸ್ಕೂಲುಗಳನ್ನು ಆಯಾಯ ತಾಲೂಕು ಬೋರ್ಡ್‌ಗಳಿಗೆ ವಹಿಸಿಕೊಡುವುದಾಗಿಯೂ ಅವುಗಳು ನಡೆಸಲು ಇಷ್ಟಪಡದಿದ್ದಲ್ಲಿ ಖಾಸಗಿ ಸಂಸ್ಥೆಗಳಿಗೆ ಕೊಡುವುದಾಗಿಯೂ ಕೃಷಿಯು ಪಂಚವಾರ್ಷಿಕ ಯೋಜನಾವಧಿಯಲ್ಲಿ ಮಂಗಳೂರು ಕಾರವಾರ ಬಂದರಗಳನ್ನು ಅಭಿವೃದ್ಧಿಗೊಳಿಸಲಾಗುವುದೆಂದೂ ಅಂತೆಯೇ ಮಲ್ಪೆ ಮತ್ತು ಕುಂದಾಪುರ ಬಂದರಗಳನ್ನೂ ಅಭಿವೃದ್ಧಿಗೊಳಿಸುವ ದಾಗಿಯೂ ಹೇಳಿದರು ಅಧ್ಯಕ್ಷರು ಟಿ. ಎ ಪೈಗಳು ಜಿಲ್ಲೆಯ ಎಡರುತೊಡರುಗಳನ್ನು ವಿವರಿಸುತ್ತ ನಿರುದ್ಯೋಗ ಸಮಸ್ಯೆಯು ಹೆಚ್ಚು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ದ. ಕ. ಜಿಲ್ಲೆಯಲ್ಲಿಯೂ ಕೈಗಾರಿಕಾಭಿವೃದ್ಧಿಯ ಕಾರ್ಯಕ್ಕೆ ಸರಕಾರ ಹೆಚ್ಚಿನ ಗಮನಕೊಡಬೇಕೆಂದೂ ಸೂಚಿಸಿದರು. ದನ್ಯವಾದಾರ್ಪಣೆಯ ಬಳಿಕ ಮಾನ್ಯ ಮಂತ್ರಿಗಳು ಕಾರ್ಕಳದ ಜನಮಂದಿರವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಶಹಸಿಲ್ದಾರ್ ಶ್ರೀ ಎಸ್. ಡಿ. ಸೋಜರು ನುಮ್ಮ ಅತಿಥಿಗಳನ್ನು ಸ್ವಾಗತಿಸಿದರು.

ವರ ಬೇಕಾಗಿದೆ

IVಫಾರ್ಮು ತನಕ ಓದಿದ ಗೃಹ ಕೃತ್ಯಗಳಲ್ಲಿ ನುರಿತ ಶಿವಳ್ಳಿ ಬ್ರಾಹ್ಮಣ ಜಾತಿಯ 22 ವರ್ಷ ಪ್ರಾಯದ ಯುವತಿಗೆ ಯೋಗ್ಯ ಬ್ರಾಹ್ಮಣ ವರ ಬೇಕಾಗಿದೆ—

ದಯವಿಟ್ಟು ವ್ಯವಹರಿಸಿರಿ—

'X' C/o ನವಯುಗ, ಉಡುಪಿ.

ಚಂದಾಶ್ಚಿಬಾಕಿ ಇರುವ ಚಂದಾದಾರರು ದಯವಮಾಡಿ ಬಾಕಿಯನ್ನು ಕೂಡಲೇ ಕಳುಹಿಸಿಕೊಡಬೇಕಾಗಿ ವಿನಂತಿ.

—ಮೆನೇಜರ್.

ಅಭಿಪ್ರಾಯ

ಸರಕಾರಕ್ಕೆ ಪರಿಹಾರ ಬೇಡವೆ?

ಖಾಸಗಿ ಒಡೆತನದ ಮೂಲವನ್ನು ಸರಕಾರ ವಹಿಸುವಾಗ ಒಡೆಯರಿಗೆ ಪರಿಹಾರ ನೀಡಬೇಕು; ಆದರೆ, ಸರಕಾರದ ವಶದಲ್ಲಿನ ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ಒಡೆತನಕ್ಕೆ ಕೊಡುವಾಗ ಸರಕಾರ ಪರಿಹಾರ ಕೇಳುವುದಿಲ್ಲವೆ?

"ನಿಚಾರಿ"

ಪಂಚಾಯತ ರಾಜ್ಯದ ಆದರ್ಶದ ಹಿನ್ನೆಲೆಯಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದು ಗೊಳಿಸಿದ ಮೈಸೂರು ಸರಕಾರ ಜಿಲ್ಲಾ ಬೋರ್ಡುಗಳ ಆಡಳಿತೆಯಲ್ಲಿದ್ದ ಶೈಕ್ಷಣಿಕ ಸಂಸ್ಥೆಗಳತ್ತ ಯಾವ ನಿಲುವನ್ನೂ ವ್ಯಕ್ತೀಕರಿಸಿದಂತೆ ತೋರುವುದಿಲ್ಲ. ಪ್ರಾಥಮಿಕ ಶಾಲೆಗಳನ್ನು ಪಂಚಾಯತಗಳಿಗೂ ಪ್ರೌಢ ಶಾಲೆಗಳನ್ನು ಒಂದು ಸಮಿತಿಗೂ ಒಪ್ಪಿಸಿ ಕೊಡುವ ವಿಚಾರವಿದೆಯೆಂದು ಕೆಲವೆಡೆ ಅಭಿಪ್ರಾಯ ಹೊರಬಿದ್ದಿದೆ. ಈ ನಿರ್ಧಾರವೇ ದೃಢವಲ್ಲವಾದರೂ ಸರಕಾರವು ತನ್ನ ನೇರ ಆಂಕಿತದಲ್ಲಿ ಈ ಶೈಕ್ಷಣಿಕ ಸಂಸ್ಥೆಗಳನ್ನು ಇಟ್ಟುಕೊಳ್ಳಲು ಆಸಕ್ತರು ವ್ಯಕ್ತಪಡಿಸಿದ್ದಿಕ್ಕವೆಂಬುದು ನಿರ್ವಿವಾದ.

ಸಂವಿಧಾನದಲ್ಲಿ ಸೂಚಿಸಿದಂತೆ ಪ್ರಾಥಮಿಕ ಶಿಕ್ಷಣದ ನಿಲಾಸವು ತೀವ್ರಗತಿಯಿಂದಾಗಬೇಕಾದುದು ಅನಿವಾರ್ಯವಾದುದರಿಂದಲೂ ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಉತ್ತರದಾಯಿತ್ವ ರಾಜ್ಯ ಸರಕಾರದ ಮೇಲೆ ಬಿದ್ದಿರುವುದರಿಂದಲೂ ಇದು ಪ್ರೌಢ ಶಾಲೆಗೂ ವಿಶ್ವವಿದ್ಯಾಲಯ ಶಿಕ್ಷಣದತ್ತ ಗಮನಹರಿಸಬೇಕಾದ ಅಗತ್ಯಕ್ಕೆ ಪೂರ್ಣವಿರಾಮವಿಡಬೇಕಾಗಿದೆ. ಈ ಕಾರಣದಿಂದಲೇ ಈಗ ಜಿಲ್ಲಾ ಬೋರ್ಡುಗಳ ಆಡಳಿತೆಯಲ್ಲಿರುವ ಪ್ರೌಢ ಶಾಲೆಗಳನ್ನು ಖಾಸಗಿ ಕ್ಷೇತ್ರದ ಸಂಘ-ಸಂಸ್ಥೆಗಳಿಗೆ ಬಿಟ್ಟುಕೊಡುವ ನೀತಿಯನ್ನು ಸರಕಾರವು ಅನುಸರಿಸುತ್ತಿದೆ.

ಜಿಲ್ಲಾ ಬೋರ್ಡುಗಳಂತಹ ಪ್ರಜಾ ಪ್ರತಿನಿಧಿಕ ಸಂಸ್ಥೆಯೊಂದು ತನ್ನ ಆದಾಯವನ್ನು ಹೆಚ್ಚಿಸಿಕೊಂಡು ಕಟ್ಟಿದ ಇಂತಹ ಪ್ರೌಢ ಶಾಲೆಗಳನ್ನು ಖಾಸಗಿ ವ್ಯಕ್ತಿಗಳಿಗೆ ಅಥವಾ ಖಾಸಗಿ ಸಂಘಸಂಸ್ಥೆಗಳಿಗೆ ಬಿಟ್ಟುಕೊಡುವುದೆಂದರೆ ಒಂದು ನೋಟಕ್ಕೆ ವೆಸಿನಿಸ್ಕ್ರಿದೆ. ಪ್ರಜೆಗಳು ಕೊಕ್ಕರದ ಮೊತ್ತದಿಂದ ನಿರ್ಮಿತವಾದ ಜನತೆಯ ಒಂದು ಸಂಸ್ಥೆ, ಸಾರ್ವಜನಿಕರು ಪರೋಕ್ಷವಾಗಿ ಕಟ್ಟಿದ ಒಂದು ಸಂಸ್ಥೆ ಹೀಗೆ ದಸ್ಕರುಗಳನ್ನು ದಾನವಾಗಿಕ್ರೊಂತೆ, ಖಾಸಗಿ ವ್ಯಕ್ತಿಗಳ ಅಥವಾ ಸಂಘ ಸಂಸ್ಥೆಗಳ ಪಾಲಿಗೆ ಕೊಡುವುದೆಂದರೆ, ಅದು ಶೋಚನೀಯವೆನ್ನಬೇಕು—ಉರ್ದೂ ಯಾವುದೆ ಪರಿಹಾರವಿಲ್ಲದೆ! ಇಂತಹ ಶಾಲೆಗಳಲ್ಲಿ ನಾವಿರಗಟ್ಟಲೆ ಬೆಲೆಬಾಳುವ ಕಟ್ಟಡ, ಬೆಂಚು—ಕುರ್ಚಿಗಳು, ಪ್ರಯೋಗ ಸಾಧನಗಳು ಸುಸ್ಥಿತಿಯಲ್ಲಿರುವಾಗ, ಅವನ್ನು ನ್ಯಾಯವಾದ ಪರಿಹಾರವಿಲ್ಲದೆ ಖಾಸಗಿ ಒಡೆತನಕ್ಕೆ ಕೊಡುವುದೆಂದರೆ ಅತಿ ಉದಾರತೆಯೆನ್ನಬೇಕು.

ಖಾಸಗಿ ಒಡೆತನದಲ್ಲಿರುವ ಶೈಕ್ಷಣಿಕ ಸಂಸ್ಥೆಗಳನ್ನು ಸರಕಾರವು ವಹಿಸಿಕೊಳ್ಳುವಾಗ 'ಯೋಗ್ಯ ಪರಿಹಾರ'ವನ್ನು ನೀಡಬೇಕು. ಭೂಸುಧಾರಣಾ ಕಾಯಿದೆಯನ್ನು ವ್ಯವಹಾರತೆಗೊಳಿಸಿದಾಗ ಪರಮಾವಧಿ ವಿಷಯಿಂತ ಹೆಚ್ಚಿನ ಭೂಮಿಯಿರುವ ಒಡೆಯರಿಗೆ ನ್ಯಾಯ ಪರಿಹಾರ ಕೊಡಬೇಕು. ಇದೇ ನ್ಯಾಯವು ಸಾರ್ವಜನಿಕಂದಾಯ ಒಂದು ಶಿಕ್ಷಣ ಸಂಸ್ಥೆಯನ್ನು ಖಾಸಗಿ ಒಡೆತನಕ್ಕೆ ಒಪ್ಪಿಸಿಕೊಡುವಾಗಲೂ ಇರಬೇಡವೆ?

ಖಾಸಗಿ ಸಂಸ್ಥೆಗಳು ಉತ್ತಮರೀತಿಯಲ್ಲಿ ತಾವು ಸರಕಾರದಿಂದ ತೆಗೆದುಕೊಂಡ ಶಾಲೆಗಳನ್ನು ನಡೆಸಲು ಸನುರ್ಥವಾಗುತ್ತವೆ, ನಿಜ. ಸರಕಾರೀ ಶಿಕ್ಷಣ ಸಂಸ್ಥೆಗಳಿಗಿಂತ ಸುವ್ಯವಸ್ಥಿತ ರೀತಿಯಲ್ಲಿ ಖಾಸಗಿ ಶಿಕ್ಷಣಾಲಯಗಳು ನಡೆಯುತ್ತಿವೆ, ಸರಿಯೇ. ಸರಕಾರದ ಕೈಯಲ್ಲಿರುವುದಕ್ಕಿಂತ ಅಡಳಿತೆಯು ಖಾಸಗಿ ಒಡೆತನದಲ್ಲಿರುವುದರಿಂದ ಶಾಲೆಯ ವಿದ್ಯಾಸ್ತರವು ಉನ್ನತವಾಗುವುದೂ ಸಾಧ್ಯ. ಆದೇನೇ ಇದ್ದರೂ ಜನತಾ ಸರಕಾರ ಜನತೆತೆತ್ತ ಹಣದಿಂದ ಕಟ್ಟಿದ ಇಂತಹ ಸಂಸ್ಥೆಗಳನ್ನು ಮುಕ್ತಹಸ್ತದಿಂದ ಬೆಣ್ಣೆಮುದ್ದೆ ಎತ್ತಿ ಕೊಟ್ಟಂತೆ ದಾನವಾಗಿ ನೀಡುವುದು ನ್ಯಾಯವೆ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಪರಿಹಾರವನ್ನು ಸರಕಾರ ಯೋಚಿಸುವುದು ಅತ್ಯವಶ್ಯವಿದೆ.



ಅಮೆರಿಕೆಯು ತಯಾರಿಸಿದ ಪ್ರಾಯೋಗಿಕ ವ್ಯಾವಹಾರಿಕ ಉಪಗ್ರಹ ಇಪೋ-೧

ಕವಿತಾ ವಿತಾನ:

ದಿನದ ಬಿನದ

೧

ಅನುರಾಗ ನಗರಿಯಲಿ
ಇಂದು ಮದನನ ಜಾತ್ರೆ;
ಜನರ ಜೀವನ ಪರ್ವ ಚೈತ್ರಯಾತ್ರೆ.

೨

ಮನದಾಗಸದಿ ಪ್ರಣಯ
ನೈನತೇಯವರ್ಷ
ಸೂಚಿಸುವುದುತ್ಸವತೆ ಮಧುಮುಹೂರ್ತ

೩

ತಾಮ ರಥವನ್ನೆರಿ—
ಪ್ರೇಮ ಪೀಠವನೇರಿ
ಹೊರಡುವನು ರತಿ ಸಹಿತ ಸ್ಮರ ಸವಾರಿ.

೪

ಭಕ್ತಾದಿಗಳು ಕಲೆತು
ಮೋಹ ಪಾಶವ ಪಿಡಿದು
ತೇರ ನೆಳೆಯುವರು ಪರವಶತೆ ಪಡೆದು.

೫

ನೃತ್ಯ ಸಂಗೀತಯುತ
ಶೃಂಗಾರ ಲೀಲೆಯಲಿ
ಸರಿಯುವುದು ಮೆರವಣಿಗೆ ಸಂಭ್ರಮದಲಿ

೬

ರಸಿಕಜನರಾನಂದ—
ದುನ್ಮಾದದುದ್ಗಾರ
ತೋರುವುದು ಅವರೆದೆಯ ಪೂರ್ವೋತ್ತರ

೭

ಮೂರರತಿ ಬಂಧುರದ
ಹಬ್ಬದುತ್ಸಾಹವದು
ಹಬ್ಬುವುದು ನಾಲ್ದೆಸೆಯ ಮೇರೆ ಮುರಿದು

೮

ಕಂದರ್ಪ ಕೀರ್ತಿಜಯ-
ವೈಜಯಂತಿಯು ಬಿರಿದು
ನೋಡಲ್ಲಿ ವ್ಯೋಮದಲಿ ತೊನೆಯುತಿಹುದು.

೯

ಮನೆ ಮನೆಯ ಮುಗುದೆಯರು
ತಮ್ಮಿನಿಯರೊಡಗೂಡಿ
ತೇರುಬರೆ ಬೆಳಗುವರು ಸೊಡರ ಹಾಡಿ.

೧೦

ನಮ್ಮ ಮನೆ ಬಾಗಿಲಿಗು
ಬರುವುದವನ ಸವಾರಿ
ನಮ್ಮೊಲವಿನಾರತಿಯ ತಾಸುಂದರಿ.

೧೧

ಹೋಳಿ ಹುಣ್ಣಿಮೆ ಇಳೆಗೆ
ನಾತನವನ್ನಿಳಿಸಿಹುದು
ನಿನ್ನೆ ಎನುವೆಲ್ಲವನು ಅಳಿಸಿರುವುದು.

೧೨

ಇಂದಿಗೇ ಮುಗಿಯುವುದು
ನಾಳೆಗಿಲ್ಲೀಬಿನದ
ಈ ದಿನವೆ ದಿನವೆನಿಪುದು ನಾಳೆಗಿರದ.

—ಸಾಗರ್.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಏತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿನುತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಮಂಜಪ್ಪಯ್ಯನು (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಭಗವದ್ಗೀತೆಯ ಭಾವವನ್ನು ಒಂದೆ ಒಂದು ವಾಕ್ಯದಲ್ಲಿ ಹೇಳುವುದಾದರೆ, ಆ ವಾಕ್ಯವು ಇದೇ: —"ನಾನು ಹೋಗಬೇಕು; ನೀನು ಬರಬೇಕು. "ನಾನು" ಎಂಬುದು ಅಹಂಕಾರ. "ನೀನು" ಎಂಬವನು ಪರಮಾತ್ಮನು. "ನಾನು" ಹೋಗದೆ "ನೀನು" ಬಾರನು. "ನೀನು" ಬಾರದೆ "ನಾನು" ಹೋಗೆನು. ಈ ಸಂಕಷ್ಟದಿಂದ ನಮ್ಮನ್ನು ಪಾರು ಮಾಡುವವನೇ ಆದಿಯೂ ಅಂತ್ಯವೂ ಇಲ್ಲದ ಭಗವಾನನು. ಆತನಿಂದ ಉದಿಸಿದ ಕಿರಣಗಳೇ ಗೀತೆಯ ಪ್ರಕಾಶ.

ಶ್ರೀ ಏಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ).

ಕಿರಣ ೧: ಅರ್ಜುನನ ಶೋಕ

ಧೃತರಾಷ್ಟ್ರ:—ಕುರುಕ್ಷೇತ್ರದಲ್ಲಿ ನನ್ನವರೂ, ಪಾಂಡವರೂ ಯುದ್ಧಾಸಕ್ತಿಯಿಂದ ಸೇರಿರುವ ವೇಳೆ ಅವರೇನು ಮಾಡಿದರು? ಸಂಜಯನೇ ಹೇಳು.

ಸಂಜಯ:— ಪಾಂಡವಸೇನೆಯನ್ನು ನೋಡಿ ದುರ್ಯೋಧನನು ತನ್ನ ಗುರುವಾದ ದ್ರೋಣನ ಬಳಿ ಸಾರಿ ನಿಂತು ಈ ಮಾತುಗಳನ್ನಾಡಿದನು.

ದುರ್ಯೋಧನ:— ದ್ರುಪದ ಪುತ್ರನ ವಿವೇಕಬಲದಿಂದ ನಿಂತಿರುವ ಪಾಂಡವರ ಬಲವತ್ತಾದ ಸೈನ್ಯವನ್ನು ನೋಡು. ಅಲ್ಲಿ ಶಸ್ತ್ರ ಪಾರಂಗತರೂ ದ ಭೀಮ, ಅರ್ಜುನ, ಯುಯುಧಾನ, ವಿರಾಟನೇ ಮೊದಲಾದ ಅನೇಕ ಶೂರರು ನಿಂತಿರುವರು. ಧೃಷ್ಟಕೇತು, ಚೇಕಿತಾನ, ಪುರುಜಿತ, ಕುಂತಿಭೋಜ, ಶೈಬ್ಯ ಮೊದಲಾದ ಕ್ಷತ್ರಿಯ ವೀರರು (ನಿಂತಿರುವರು). ಸುಭದ್ರೆಯ ಮಕ್ಕಳು ದ್ರೌಪದಿಯ ಸುತರು ಕೂಡಿರುವರು. ನನ್ನ ಸೈನ್ಯದಲ್ಲಿ ನಾನೂ, ಪಿತಾಮಹ ಭೀಷ್ಮನೂ, ಕರ್ಣ, ಕೃಪ, (ಅಶ್ವತ್ಥಾಮ, ಪಿಶಂಗ, ಮೊದಲಾದ ಶೂರರೂ ಇರುವೆವು. ಯುದ್ಧರಂಗದಲ್ಲಿ ಶಮ್ಮ ಶರೀರಗಳನ್ನು ಅರ್ಪಿಸಲು ಸಿದ್ಧರಾಗಿರುವ ಅನೇಕಾನೇಕ ಕ್ಷತ್ರಿಯ ಧುರೀಣರು ನನ್ನೊಡನೆ ನಿಂತಿರುವರು. ಎಲ್ಲರೂ ಭೀಷ್ಮನ ಅನುಜ್ಞೆಯಂತೆ ನಡೆಯಬೇಕು.

ಈ ಮಾತುಗಳನ್ನು ಕೇಳಿದಾಗ ಭೀಷ್ಮನು ಸಿಂಹದಂತೆ ಗರ್ಜಿಸಿದನು. ಕೈಯಲ್ಲಿದ್ದ ಶಂಖವನ್ನೂದಿದನು. ನಾಲ್ಕು ದಿಕ್ಕುಗಳಿಂದಲೂ ಶಂಕನಾದವಾಯಿತು. ಕೃಷ್ಣನು ಪಾಂಚಜನ್ಯವನ್ನೂ, ಅರ್ಜುನನು ದೇವದತ್ತವನ್ನೂ, ಭೀಮನು ಪೌಂಡ್ರವನ್ನು ಊದಿದನು. ಯುಧಿಷ್ಠಿರನು ತನ್ನ ಶಂಖವಾದ ಅನಂತವಿಜಯವನ್ನು ಊದಿದನು. ನಕುಲ ಸಹದೇವರು ಸುಘೋಷ ಮಣಿ ಪುಷ್ಪಕಗಳನ್ನೂದಿದರು. ಇತರ ರಾಜರು ತಂತಮ್ಮ ಶಂಖಗಳಿಂದ ನಾದವನ್ನುಂಟುಮಾಡಿದರು. ಭೂಮಿಯು ಆಗ ಧ್ವನಿಮಯವಾಗಿ ನಡುಗಿತು.

ಆಗ ಕಪಿಕೇತನನಾದ ಅರ್ಜುನನು ಕೈಯ್ಯಲ್ಲಿ ಬಿಲ್ಲುಬಾಣಗಳನ್ನು ಧರಿಸಿ ಕೃಷ್ಣನನ್ನು ನೋಡಿ ಹೀಗೆಂದನು:—

ಅರ್ಜುನ:— ಅಚ್ಯುತನೇ, ಎರಡೂ ಸೇನೆಗಳ ನಡುವೆ ನನ್ನ ರಥವನ್ನು ನಿಲ್ಲಿಸು. ಕಮ್ಮ ವಿರೋಧಿಗಳಾದ ಧೃತರಾಷ್ಟ್ರಕರನ್ನು ನೋಡುವೆನು. ಕೃಷ್ಣನೇ, ಪಿತಾಮಹ, ಗುರು, ಗುರುಸುತರು, ಗೋತ್ರದ ಅಣ್ಣತಮ್ಮಂದಿರು, ಮಾಮ, ಮೊಮ್ಮಕ್ಕಳು, ಮಾವಭಾವಂದಿರು, ಮೈದುನ, ಮಿತ್ರರು, ಎಲ್ಲರೂ ನನ್ನ ಕಣ್ಣಮುಂದೆ ನಿಂತಿರುವರು. ಇವರ ಎದುರಿಗೆ ಕಾದುವಷ್ಟಕ್ಕೆ ನನಗೆ ಶಕ್ತಿಬಾರದು. ನನ್ನ ಕೈಕಾಲುಗಳ ಬಲವು ಕುಗ್ಗಿದೆ. ನನ್ನ ನಾಲಗೆಯು ಒಣಗಿದೆ, ನನಗೆ ರೋಮಾಂಚನವಾಗುತ್ತಿದೆ. ನನ್ನ ಗಾಂಡೀವ ಧನುಸ್ಸು ಕೈಯಿಂದ ಜಾರುತ್ತಿದೆ. ನನ್ನ ಶರೀರವು ಬೇಯುತ್ತಿದೆ. ನನ್ನ ಮನಸ್ಸು ಕಳವಳಗೊಂಡಿದೆ. ನಾನಿಲ್ಲಿ ನಿಲ್ಲಲಾರೆನು. ಅಪಶಕುನಗಳು ಕಾಣುತ್ತಿವೆ. ಕೇಶವನೇ, ಈ ಗೋತ್ರಹತ್ಯೆಯಿಂದ ನನಗೇನೂ ಸುಖವಿಲ್ಲ. ನನಗೆ ಜಯವೂ ಬೇಡ, ರಾಜ್ಯವೂ ಬೇಡ. ಗೋವಿಂದನೇ, ನನಗೆ ಪ್ರಾಣದಾಸೆಯೂ ಇಲ್ಲ. ಪಿತಾಮಹ, ಗುರು, ಸಹೋದರರು, ಪುತ್ರಪೌತ್ರರು, ಮಿತ್ರರು, ಇನ್ನೂ ಹಲವರು ನನ್ನೆದುರು ಯುದ್ಧಕ್ಕೆ ಸನ್ನಾಹ ಸಮೇತ ನಿಂತಿರುವರು. ಇವರನ್ನೆಲ್ಲಾ ವಧಿಸಿ ಪಾಪ ಕ್ಕೊಳಗಾಗಲಾರೆನು. ಇವರನ್ನು ಸಂಹರಿಸುವ ಬದಲು ನಾನೇ ಮೃತ್ಯುವಶನಾಗುವೆನು. ಜನಾರ್ದನನೇ, ಹರಿಶಂದೆಯ ಮಗ್ನಳನ್ನು ಕೊಂದು ನನಗುಂಟಾಗುವ ಸಂತೋಷವೇನು? ಇವೆಲ್ಲ ದುರಾತ್ಮರಿಗಬಹುದು. ಆದರೆ ನಮ್ಮವರಾದ ಇವರನ್ನು ವಧಿಸಿ ಪಾಪರಾಶಿಯನ್ನು ಕೂಡಿಟ್ಟು ಫಲವೇನು? ಲೋಭದಿಂದ ಧರ್ಮಚ್ಯುತರಾದ ಅವರೇ ನನ್ನನ್ನು ವಧಿಸಲಿ. ವಂಶನಾಶದಿಂದ ದೇಶದಲ್ಲಿ ಕ್ಷೋಭೆಯುಂಟಾಗುವುದು. ದೇಶಕ್ಷೋಭೆಯಿಂದ ಕುಲಸ್ತ್ರೀಯರು ಧರ್ಮವಿರಹಿತರಾಗುವರು. ಆಗ ಎಲ್ಲವೂ ಹಾಳಾಗುವುದು. ಇದರಿಂದ ನಮ್ಮ ವಂಶಕ್ಕೆ ನರಕವೇ ಪ್ರಾಪ್ತಿ. ನಾನು ಲೋಭಿಯಲ್ಲ. ನನ್ನ ಕೈಯಿಂದ ವಂಶದ ಬೇರನ್ನು ಎತ್ತುವಾತ್ರಕ್ಕೂ ಕಡಿಯಲಾರೆನು. ಧೃತರಾಷ್ಟ್ರಸುತರು ಈ ಸಮರದಲ್ಲಿ ನನ್ನನ್ನು ಹತಿಸಲಿ. ನಾನು ಶಸ್ತ್ರಗಳನ್ನು ಕೆಳಗಿಡುವೆನು.

ಈ ರೀತಿ ಶೋಕಿಸುತ್ತ ಅರ್ಜುನನು ತನ್ನ ಬಲ್ಲು ಬಾಣಗಳನ್ನು ಕೆಳಗಿಟ್ಟು ತನ್ನ ರಥದಲ್ಲಿ ಮ್ಲಾನವದನನಾಗಿ ಶಟಸ್ಥಭಾವದಿಂದ ಕೂತನು. ಹೃದಯದಲ್ಲಿ ಶೋಕಾನಲವು ಜ್ವಲಿಸಲಾರಂಭಿಸಿತು.

ರಣಾಸೀಳಿಯಲ್ಲಿ ಅಮೆರಿಕನರು ವಿಹಾರಕ್ಕೆ ತೆರಳುವುದು ಪದ್ಧತಿ, ವಿಹಾರಸ್ಥಳದ ಒಂದು ದೃಶ್ಯವಿದು

ವಿನೋಬನೆ

(ಉಸಿರು ಪುಟದಿಂದ)

ಈ ಪೈಸ್ಸಿನ ಕಾರ್ಯಕಲಾಪಗಳು ಸೀಮಿತವಾಗಿರುವುದರಿಂದ, ಕ್ರಾಂತಿಕಾರಿ ವಿಚಾರಗಳನ್ನು ಮುದ್ರಿಸಲು ಸಾಧ್ಯವಿರುವುದಿಲ್ಲ. ಆದುದರಿಂದ ಇಂತಹ ಕೆಲಸವನ್ನು ಸರ್ವಸೇವಾ ಸಂಘದಂತಹ ಸಂಸ್ಥೆಗಳು ಮಾಡಬೇಕು. ಮಾಡುತ್ತಲೂ ಇವೆ. ಆದರೆ, ಇವುಗಳ ಕಾರ್ಯವ್ಯಾಪ್ತಿ ಇಡಿ ದೇಶದಲ್ಲಿ ಹರಡಬೇಕು. ಸುಲಭ ಬೆಲೆಯಲ್ಲಿ ಪೊತ್ತಗೆಗಳು ಜನತೆಗೆ ದೊರೆಯುವಂತಾಗಬೇಕು. ಚಿಕ್ಕಪುಟ್ಟ ಸೋಪ್ಪಿಯನ್ನು ಏರ್ಪಡಿಸಿ ಈ ಸಾಂಸ್ಕೃತಿಕ ಪ್ರಶ್ನೆಯ ಬಗ್ಗೆ ವಿಚಾರ ವಿನಿಮಯ ಮಾಡುವುದು ಮತ್ತು ಕಮ್ಮ ನಿರ್ಣಯವನ್ನು ಸವೂನ ಶೀಲ ವ್ಯಕ್ತಿಗಳಿಗೆ ಹಾಗೂ ಸರ್ವೇಸಾಧಾರಣರಿಗೆ ಮುಟ್ಟುವಂತೆ ಮಾಡುವುದು ಅತ್ಯವಶ್ಯ.

ನಮ್ಮ ಮುಂದಿರುವ ಪ್ರಶ್ನೆಗಳನ್ನು ಸಂಕ್ಷೇಪವಾಗಿ ಹೀಗೆ ಕ್ರೋಢೀಕರಿಸಬಹುದು:

೧. ಇಂಮ ಜನಸಾಧಾರಣರ ಮೂನಸಿಕ ಹಾಗೂ ಸಾಂಸ್ಕೃತಿಕ ಮಟ್ಟ ಎಲ್ಲಿದೆ?

೨. ಜನತೆಯು ಏನನ್ನು ಓದುತ್ತಿದೆ?

೩. ಆಕಾಶವಾಣಿ ವತ್ತು ಚಲಚ್ಚಿತ್ರಗಳು ಜನತೆಯ ಮೇಲೆ ಯಾವ ಪ್ರಭಾವ ಬೀರುತ್ತಿವೆ?

೪. ಪತ್ರಿಕೆಗಳಲ್ಲಿ ಪ್ರಕಟವಾಗುವ ಕಥೆ ಹಾಗೂ ಚಿತ್ರಗಳು ಜನತೆಯ ಮನಸ್ಸಿನಲ್ಲಿ ಎಂತಹ ಪರಿಣಾಮ ಮೂಡುತ್ತವೆ?

೫. ಜಾತಿವಾದ ಮತ್ತು ಸಂಪ್ರದಾಯ ಶರಣತೆಗಳನ್ನು ನಿರ್ನಾಮಗೊಳಿಸಲು ನಾವೇನು ಮಾಡಬೇಕು?

೬. ಆಲಸ್ಯವನ್ನು ದೂರೀಕರಿಸಿ ಪರಿಶ್ರಮ ಶೀಲತೆಯನ್ನು ಬೆಳೆಸಬೇಕಾದರೆ ನಾವೇನು ಮಾಡಬೇಕು?

೭. ಮೂನವರಲ್ಲಿ ಪರಸ್ಪರ ಸಮೂನತೆಯ ಭಾವವು ಹೇಗೆ ಹುಟ್ಟಬಂದೀತು?

೮. ಕೋಮಲ ವಿಹೀನ ಸಮೂಜಸ್ಥಾಪನೆ ಕೇಗೆ ಶಕ್ಯವೆನಿಸೀತು? ಮತ್ತು ಕೊನೆಯದಾಗಿ,

೯. ಸಾಧಾರಣ ಜನತೆಯಲ್ಲಿ ವಿಶ್ವಬಂಧುತ್ವ ಭಾವನೆಯ ಪ್ರಚಾರ ಯಾವರೀತಿಯಿಂದ ಸಾಧ್ಯವಾದೀತು?

ಈ ಎಲ್ಲ ಪ್ರಶ್ನೆಗಳನ್ನು ಸಮರ್ಪಕವಾಗಿ ಉತ್ತರಿಸಬೇಕಾದರೆ ಮತ್ತು ಆ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕಾದರೆ ದೃಢ ಪ್ರತಿಜ್ಞೆ ವಿಚಾರಕರು ಮತ್ತು ಪ್ರಚಾರಕರು ಅತ್ಯವಶ್ಯ. ಈಗಿಂದಿಗಲೇ ಈ ಕಾರ್ಯವು ಪ್ರಾರಂಭವಾದರೆ ಮಾತ್ರ ಮುಂದಿನೆರಡು ಪೀಳಿಗೆಗಳಲ್ಲಾದರೂ ನಮ್ಮ ಶ್ರಮ ಸಫಲವೆನಿಸಬಹುದು.

(ನವಭಾರತ ಟ್ರಾಯಮ್ಸ್‌ನ ಸೌಜನ್ಯದಿಂದ)

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲರು, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರಕ್ಕಕ್ಕ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜವ್ಯವಹಾರದಲ್ಲಿ ಎದುರಾಗುವ ವಿಕೃಷ್ಟತೆಯ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬದು ಕಥಾರಹಸ್ಯದ ಮೂಲಕ ವ್ಯಕ್ತವಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಒಳವಾಗಿ ಪರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರವರ್ಷ

(೩ನೇ ಪುಟದಿಂದ)

ಈ ಶತಮಾನದಲ್ಲಿ

ಈ ಶತಮಾನದಲ್ಲಿ ಎರಡು ದಶಕಗಳ ವರೆಗೆ ಶಾಸ್ತ್ರಜ್ಞರನ್ನು ಆಕರ್ಷಿಸಿ ಅನೇಕರ ಆಮೋದನೆಯನ್ನು ಪಡೆದ ಸಿದ್ಧಾಂತವೆಂದರೆ, ಪ್ರೊಫೆಸರ್ ಜೇವ್ನ್ಸ್ ಮಾಡಿದ ಪ್ರತಿಪಾದನೆಯೊಗಿದೆ. ಸೂರ್ಯನಿಗೆ ಸಮೀಪವಾಗಿ ಮತ್ತೊಂದು ನಕ್ಷತ್ರವು ಹೋಗಿರಬೇಕೆಂದೂ, ಆದರೆ ಆಕರ್ಷಣೆಯ ಪ್ರಭಾವದಿಂದ ಸೂರ್ಯನನ್ನು ಹೊಂದಿಕೊಂಡಿದ್ದ ಪದಾರ್ಥವು ಆಕಾಶದೊಳಗೆ ತೂರಿಕೊಂಡು ಬಂದು ಅದು ಬೇ ಕಾಲಕ್ರಮದಲ್ಲಿ ಘನೀಭವಿಸಿ ಗ್ರಹಗಳಾಗಿ ಏರ್ಪಟ್ಟಿತೆಂದೂ ಪ್ರೊಫೆಸರ್ ಜೇನ್ಸ್ ಸಿದ್ಧಾಂತ ಮಾಡಿದನು. (ಎಂಡನೇ ನಕ್ಷತ್ರವು ಸೂರ್ಯನಿಗೆ ಸಾವಿರ ಕೋಟೆ ಮೈಲುಗಳಂತರಕ್ಕೆ ಬಂದರೂ ಅದು ಸಮೀಪ ಬಂತೆಂದೇ ಅರ್ಥ.)

ಆದರೆ ನಕ್ಷತ್ರಗಳ ನಡುವೆ ಸಾಧಾರಣವಾಗಿರುವ ದೂರವು ಅನೇಕ ಶಾಂತಿ ಸಂವತ್ಸರಗಳು. ಆದುದರಿಂದ ಸೂರ್ಯನಿಗೆ ಮತ್ತೊಂದು ನಕ್ಷತ್ರವು ಸಮೀಪಕ್ಕೆ ಬರುವುದೆಂಬುದು ಅತ್ಯಪೂರ್ವವಾದ ಸಂಘಟನೆ. ಈ ವಿಷಯವನ್ನು ಗುರ್ತಿಸಿಕೊಂಡೇ ಜೀನ್ಸ್‌ನು ಸೃಷ್ಟಿಯಲ್ಲಿ ನಕ್ಷತ್ರಗಳ ಸುತ್ತಲೂ ಪರಿಭ್ರಮಿಸುವ ಗ್ರಹಗಳುವುದೊಂದು ಅಪೂರ್ವವಾದ ಸಂಗತಿಯೆಂದು ನಿರ್ಧಾರಣೆ ಮಾಡಿದನು.

ಪ್ರಖ್ಯಾತ ಸೋವಿಯೆಟ್ ಶಾಸ್ತ್ರವೇತ್ತನಾದ ಸ್ಮಿತ್, ಈ ಸಿದ್ಧಾಂತವನ್ನು ವಿಮರ್ಶಿಸುತ್ತಾ "ಗ್ರಹಗಳ ಉತ್ಪನ್ನವು ಬಹಳ ಅಪರೂಪವಾದುದೆಂದು ಭಾವಿಸಿದುದೇ ಜೀನ್ಸ್ ಸಿದ್ಧಾಂತದಲ್ಲಿರುವ ದೌರ್ಬಲ್ಯವಾಗಿದೆ. ಪ್ರಾಮರ ದೃಷ್ಟಿಯಲ್ಲಿ ಗ್ರಹಗಳು ವೈವಸಂಕಲ್ಪದಿಂದ ಹುಟ್ಟಿದುವೆಂದು ತೋರಲಿಕ್ಕೆ ಈ ಸಿದ್ಧಾಂತವು ಸಹಕಾರ ಮಾಡುತ್ತದೆ. ಪ್ರಕೃತಿಯಲ್ಲಿ ಅಪೂರ್ವ ಘಟನೆಗಳು ಸಂಭವಿಸದೆ ಹೋಗುವುದಿಲ್ಲ. ಆದುದರಿಂದ ಜೀನ್ಸ್ ಸಿದ್ಧಾಂತವು ಸ್ವತಂತ್ರವಾದ ಆದರ್ಶವಾದದೊಂದಿಗೆ ಕೂಡಿರುವುದೆಂದು ಹೇಳಲು ಸಾಧ್ಯವಿಲ್ಲದಿದ್ದರೂ, ಜ್ಯೋತಿಶಾಸ್ತ್ರವನ್ನು ಆದರ್ಶವಾದಕ್ಕೆ ಗುರಿಹಿಡಿಯಲಿಕ್ಕೆ ಮಾತ್ರ ಇದು ಸಹಾಯಕಾರಿ" ಅಂದನು

ಏನಾದರೂ ೧೦—೧೫ ವರ್ಷಗಳ ಕೆಳಗೆ ಜೀನ್ಸ್ ಸಿದ್ಧಾಂತದೊಳಗಿರುವ ಲೋಪಗಳನ್ನು ಬಯಲುಮಾಡಲಾಯಿತು. ಗ್ರಹಗಳು ಏರ್ಪಡಲು ತಕ್ಕಂತಹ ಪದಾರ್ಥವು ಸೂರ್ಯನಿಂದ,ಇನ್ನೊಂದು ನಕ್ಷತ್ರಾಕರ್ಷಣೆಗೊಳಗಾಗಿ ಹೊರಡಬೇಕಾದರೆ, ಆ ನಕ್ಷತ್ರವು ಸೂರ್ಯನಿಗೆ ಅತ್ಯಂತ ಸಮೀಪ ಬಂದಿರಬೇಕೆಂದೂ, ಹಾಗೆ ಹುಟ್ಟಿಕೊಂಡ ಗ್ರಹಗಳು ಸೂರ್ಯನ ವ್ಯಾಸಕ್ಕೆ ಸ್ವಲ್ಪ ಭಾಗದಷ್ಟೇ ದೂರದಲ್ಲಿ ತಿರುಗಬಲ್ಲುವಲ್ಲದೆ, ಈಗಿರುವಷ್ಟು ದೂರಕ್ಕೆ ಹೋಗಲಾರವೆಂದೂ ರೀಸೆಲ್ ಎಂಬ ಅಮೆರಿಕನ್ ಶಾಸ್ತ್ರವೇತ್ತನು ಹೇಳಿದ. ಉದಾಹರಣೆಗೆ, ಗುರು ಗ್ರಹಕ್ಕೂ ಸೂರ್ಯನಿಗೂ ಇರುವ ದೂರವು ಸೂರ್ಯನ ವ್ಯಾಸಕ್ಕಿಂತ ೫೦೦ ಮಡಿ ಹೆಚ್ಚಾಗಿದೆ. ನೆಪ್ಚೂನ್ ಗ್ರಹವು ಸೂರ್ಯನ ವ್ಯಾಸ ಪ್ರಮಾಣಕ್ಕೆ ೩೦೦೦ ಪಾಲು ಹೆಚ್ಚು ದೂರದಲ್ಲಿದೆ. ಜೀನ್ಸ್ ಸಿದ್ಧಾಂತದಂತೆ ಇದು ಸಾಧ್ಯವಾಗುವಂಥಾದ್ದಲ್ಲ.

ಜೀನ್ಸ್ ಸಿದ್ಧಾಂತದಲ್ಲಿ ಮತ್ತೊಂದು ದೊಡ್ಡ ಲೋಪವನ್ನು ಕಂಡುಹಿಡಿಯಲಾಯಿತು. ಅತನ ಸಿದ್ಧಾಂತದಂತಾದರೆ, ಸೂರ್ಯನಿಂದ ಬಂದ ಪದಾರ್ಥವು ಸೂರ್ಯಗೋಳದ ಒಳಭಾಗಗಳಿಂದ ಬಂದಿರಬೇಕು; ಸೂರ್ಯನ ಒಳದಲ್ಲಿ ಉಷ್ಣವು ಅಪಾರ. ಲೆಕ್ಕಮಾಡಿದರೆ ಆ ಪದಾರ್ಥದ ಬಿಸಿ ೧೦ ಲಕ್ಷ ಡಿಗ್ರಿಗಳಾದರೂ ಇರಬೇಕೆಂದು ಗೊತ್ತಾಗುತ್ತದೆ. ಇಷ್ಟು ಬಿಸಿಯುಳ್ಳ ಪದಾರ್ಥವು ಆವಿಯ ರೂಪದಲ್ಲಿ ಆಕಾಶದೊಳಗೆ ಚಿಮ್ಮಿದರಿ ಹೋಗುವುದೇ ಹೊರತು, ಒಂದುಕೂಡಿಕೊಂಡು ಗ್ರಹಗಳಾಗಿ ಸೇರಿಕೊಳ್ಳುವ ಅವಕಾಶವಿಲ್ಲ.

ಈ ಬಗೆಯ ಆದರ್ಶವಾದವು ವ್ಯಾಪಾರ ಭಾವನಾದಂತಿನಿಂದ, ಈ ಬಗೆಯ ದಿಕ್ಪಥವೊಂದು ಹುಟ್ಟಿದಂತಾಯಿತು. ಇದು ಜ್ಯೋತಿಶಾಸ್ತ್ರದ ಅಭಿವೃದ್ಧಿಗೆ ಅಂತರಾಯವಾಗಿತ್ತೆಂದೇ ಹೇಳಬೇಕು. ೧೯೫೧ ರಲ್ಲಿ ಪ್ರಕಟವಾದ "ಭೂಮಿಯ ಹುಟ್ಟು" ಎಂಬ ಪುಸ್ತಕದಲ್ಲಿ ಆ ಗ್ರಂಥದ ಕರ್ತನಾದ ಪ್ರೊಫೆಸರ್ ಸ್ಕಾರ್ಟ್ (ಬ್ರಿಟಿಷ್ ಶಾಸ್ತ್ರವೇತ್ತ) "ನಮ್ಮಲ್ಲಿ ಅನೇಕಮಂದಿಗೆ, ಅವರು ಶಾಸ್ತ್ರವೇತ್ತರಿರಲಿ, ಆಲ್ಲದಿರಲಿ—ಸೃಷ್ಟಿಕರ್ತನಲ್ಲಿರಬೇಕಾದ ವಿಶ್ವಾಸವು ಮಾತ್ರ ಎಂದಿನಂತೆಯೇ ಇದೆ" ಎಂದಿದ್ದಾನೆ.

ಆದರೆ ಪ್ರಕೃತಿಶಾಸ್ತ್ರಗಳನ್ನು ಸಂಶೋಧಿಸುವವರು ಭೌತಿಕವಾದವನ್ನು ಆಗತ್ಯವಾಗಿ ಅವಲಂಬಿಸಲೇ ಬೇಕು. ಅಂತೆಯೇ ಯಾವ ದೇಶದೊಳಗೇ ಆಗಲಿ ಖಗೋಳಗಳ ಉತ್ಪತ್ತಿ ಪರಿಣಾಮಗಳನ್ನು ಕುರಿತು ಸರಿಯಾದ ದೃಕ್ಪಥದಲ್ಲಿ ನೋಡಬಲ್ಲ ಶಾಸ್ತ್ರವೇತ್ತರೇ ಸರಿಯಾದ ಜ್ಞಾನವನ್ನು ಸಾಧಿಸಲು ಶಕ್ತರಾಗುತ್ತಾರೆ.

ರಷ್ಯನ್ ಶಾಸ್ತ್ರವೇತ್ತರು

ಲೊಮುನೋಸೊವ್, ಬೈದೀಷಿವ್, ಮೆಂಡಿಲೇಯೆವ್ ಮೊದಲಾದ ರಷ್ಯನ್ ಶಾಸ್ತ್ರವೇತ್ತರು ನಿರ್ಮಿಸಿದ ಭೌತಿಕ ಸಂಪ್ರದಾಯಗಳ ಮೇಲೆಯೇ ಸೋವಿಯೆಟ್ ಜ್ಯೋತಿಶಾಸ್ತ್ರವು ನಿರ್ಮಾಣವಾಯಿತು. ಸೋವಿಯೆಟ್ ಶಾಸ್ತ್ರವೇತ್ತರು ಗತಿತಾರ್ಕಿಕವಾದ ಭೌತಿಕ ವಾದವನ್ನು ಸ್ವೀಕರಿಸಿಕೊಂಡು, ಹೋಗು ಹೋಗುತ್ತಾ ಮತ್ತಿಷ್ಟು ಜೆನ್ನಾಗಿ ಜೀರ್ಣಿಸಿಕೊಂಡು, ತಮ್ಮ ಸಂಶೋಧನೆಗಳಲ್ಲಿ ಫಲಪ್ರದವಾಗುವಂತೆ ಅದನ್ನು ಉಪಯೋಗಿಸಿಕೊಳ್ಳಲು ಶಕ್ತರಾಗಿದ್ದಾರೆ. ಜ್ಯೋತಿಶಾಸ್ತ್ರವನ್ನು ಕುರಿತು ಪ್ರತ್ಯೇಕವಾದ ಕೆಲಸವೂ ನಡೆಯುತ್ತದೆ. ಇದಕ್ಕೆ ಅಧಾರಭೂತವಾದ ಪರಿಜ್ಞಾನವು ಅವಾರವಾಗಿ ಶೇಖರಿಸಲ್ಪಟ್ಟಿದೆ. ಇದಲ್ಲದೆ ಭೂಗರ್ಭ ಶಾಸ್ತ್ರಜ್ಞರೂ, ಭೂಮಿಗೇ ಸಂಬಂಧಿಸಿದ ಭೌತಿಕ, ರಾಸಾಯನಿಕ ವಿಷಯ ಪರಿಶೋಧನೆ ಮಾಡುವ ಶಾಸ್ತ್ರಜ್ಞರೂ, ಇವರೆಲ್ಲ ಶೇಖರಣೆ ಮಾಡಿದ ಅನೇಕ ವಿಷಯಗಳ ಆಧಾರದಿಂದ ಭೂಮಿಯ ಹುಟ್ಟನ್ನು ಕುರಿತು ಸಂಶೋಧನೆ ಮಾಡಲು ತಕ್ಕದಾರಿಯುಂಟಾಗುತ್ತಾ ಇದೆ.

ಗ್ರಂಥಕರ್ತನಲ್ಲಿ ಸ್ಮಿತ್ ಎಂಬ ಸೋವಿಯೆಟ್ ಶಾಸ್ತ್ರವೇತ್ತನು ಭೂಮಿ ಮೊದಲಾದ ಗ್ರಹಗಳ ಉತ್ಪತ್ತಿಯನ್ನು ಕುರಿತೇ ಒಂದು ಸಿದ್ಧಾಂತವನ್ನು ಬಯಲು ಮಾಡಿದನು. ಅವನೂ ಅವನ ಸಹಚರರೂ ಮಾಡಿದ ಕಾರ್ಯಫಲವಾಗಿ ಈ ಸಿದ್ಧಾಂತಕ್ಕೆ ಹಿಂದೆಯ ಭೌತಿಕವಾದ ಬುನಾದಿಯುಂಟಾಗಿ, ಈ ಸಿದ್ಧಾಂತಕ್ಕೆ ಸಂಬಂಧಿಸಿದ ಪ್ರಧಾನಾಂಶಗಳು ಬಲವಾಗಿ ರುಜುಗೊಳಿಸಲ್ಪಟ್ಟುವು.

ಈ ಸಿದ್ಧಾಂತದ ಪ್ರಕಾರ ಭೂಮಿಯೂ ಇತರ ಗ್ರಹಗಳೂ ಉಷ್ಣ ವಾಯುಗಳು ಸಂಕೋಚ ಕೊಂದುವುದರಿಂದ ಮಾತ್ರವಲ್ಲದೆ, ತಣ್ಣಗಿನ ಪದಾರ್ಥ ಕಣಗಳ ಕೂಡಿಕೆಯ ಮೂಲಕವಾಗಿಯೂ ಏರ್ಪಟ್ಟು ದೊಡ್ಡದಾದುವು. ಈ ಪದಾರ್ಥ ಕಣಗಳು ಒಂದಾನೊಂದು ಕಾಲದಲ್ಲಿ ದೊಡ್ಡ ಮಬ್ಬಿನ ರೂಪದಲ್ಲಿ ಸೂರ್ಯನ ಸುತ್ತಲೂ ಇದ್ದುವು. ಆ ಮಬ್ಬಿನ ಭಾರ ಈ ಕಾಲದ ಗ್ರಹಗಳ ಭಾರಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಇತ್ತು.

(ಮುಂದಿನ ವಾರ: ಸ್ಮಿತ್ ಮಾಡಿದ ಸಿದ್ಧಾಂತ)

ಎಳೆಯ ಶಾಲಾ ಮಕ್ಕಳು ಲೇಜಿಂ ಪ್ರದರ್ಶನದಲ್ಲಿ ನಿರತರಾಗಿದ್ದಾರೆ.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಕುಮಾರಿ ಬಿಲ್ಲಿಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶಲ್), ರೂ. 8=00 (ಎಕ್ಸ್ಟ್ರಾ ಸ್ಪೆಶಲ್).

P. DEVEE & Co. (M. I.) CALCUTTA—40

ಸ್ಥಾನಿಕರು: ಷಾ ಕಂಪೆನಿ, ಮಂಗಳೂರು—1.

ಹಾರ್ಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಕಥಾವಿಹಾರ

(೩ನೇ ಪುಟದಿಂದ)

ವತಿ ಮಾಡದಿರುವುದು ಮಹಾ ಪಾಪ!" ನಾನಾ ಶಂಕರನ ದೇವಾಲಯದ ಸಮೀಪ ಬಂದು ಅವರು ಬಸ್ಸು ಹತ್ತಿ 'ದಿಲಾಯಿಲ್' ರೋಡಿಗೆ ಬಂದರು. ಇಲ್ಲಿಯೇ ಬಳಿ ಇವ ನದೊಂದು ಪುಟ್ಟ ಅಂಗಡಿಯಿತ್ತು. ಅಂ ಗಡಿಯೂದರೂ ಅದರೊಳಗೆ ಕೂರುವಷ್ಟು ಸ್ಥಳಾವಕಾಶವಿರಲಿಲ್ಲ. ಇಡಿ ದಿನ ಫುಟ್ ಪಾಥ್‌ನಲ್ಲಿ ನಿಂತೇ ಕಾಲಹರಣ ಮಾಡು ತಿದ್ದ. ಎಲೆ—ಪಟ್ಟಿ ಅಂಗಡಿಯಂತೆ ಒಂ ದು 'ಸ್ಟಾಲ್' ಆಗಿತ್ತು ಅದು. ತುದಿ ಯಿಂದ ಬುಡದವರೆಗೂ ಅಲ್ಲಿ ದೇಶೀಯ ಚೂರ್ಣಾದಿ ! ಔಷಧಗಳಿದ್ದುವು. ಅವನು 'ಆಯುರ್ವೇದ ವಿಶಾರದ'ನಾಗಿದ್ದರೂ ಜ ನಸೇವೆ ಮಾಡುತಿದ್ದನೇ ಹೊರತು ವ್ಯಾ ಪಾರವನ್ನಲ್ಲ; ಇದರಿಂದಾಗಿಯೇ ಅಂಗಡಿ ಯ ಗತಿ ಇನ್ನಷ್ಟರವರೆಗೆ ಬಂದುಮುಟ್ಟಿತ್ತು. ಹಣಕೊಟ್ಟವರು ಕೊಟ್ಟರು; ಇಲ್ಲದವರು ಇಲ್ಲ. ಪ್ರಭಾಕರನು ಮೂತಾಹುತ್ತಲೇ ಇ ರಲಿಲ್ಲ. ಎಲ್ಲಾದರೂ ಮನೆಯಲ್ಲಿ ಮಕ್ಕ ಳು ಮರಿಗಳು ಹಾಲಿಗಾಗಿ ಪಟ್ಟು ಹಿಡಿದ ರೆ, ಆಗ, ಇಂದು ಖಂಡಿತಕ್ಕೂ ಮದ್ದು ಕೊಳ್ಳುವವರೊಡನೆ ಹಣ ವಸೂಲು ಮಾ ಡಿಯೇ ತೀರುವೆನೆಂದು ದೃಢನಿಶ್ಚಯ ಮಾ ಡುತಿದ್ದ; ಆದರೆ, ಅಂಗಡಿಗೆ ಬಂದು ರೋಗಿಗಳು ತಮ್ಮ ಪ್ರಾಣವನ್ನಾದರೂ ಉಳಿಸಿಕೊಳ್ಳಬೇಡವೆ? ಎಂದು ಕೊಳ್ಳು ತ್ತಾನೆ. ಆದುದರಿಂದಲೇ ಔಷಧ ಕೊಡು ವಾಗ, "ತಮ್ಮಾ, ಹಣದ ಸಂಗತಿ? ಮೊ ದಲಿಗೆ ಗುಣವುಬಿಡಿ" ಎಂಬ ವಾ ಕ್ಯವೇ ಅತನ ಮುಖದಿಂದ ಉದುರಿಬಿದ್ದಂತೆ ಯೇ ಹೊರ ಬರುತಿತ್ತು!

ನಾಲ್ಕನೆಯ ದಿನ ತನ್ನ ಆಸುಪಾಸಿನ ಇನ್ನು ಕೆಲವು ಸದಸ್ಯರೊಡನೆ ಪ್ರಭಾಕರ 'ಸೋದರವಾಟ್'ಗೆ ತೆರಳಿದ. ಬೊಂಬಾ ಯಿಯಲ್ಲಿ ವಸತಿಯೇ ಒಂದು ಮಹಾ ಸ ಮಸ್ಯೆಯಾಗಿದೆ. 'ಸೋದರವಾಟ್'ಯಲ್ಲಿ ಕೊಳಕು ಗುಡಿಸಲುಗಳನ್ನು ಕಿತ್ತೆಸೆಯ ಲಾಗಿತ್ತು. ಕೆಲವು ಚಿಕ್ಕ ಜೊಕ್ಕ ಮನೆಗ ಳನ್ನು ಕಟ್ಟಿ, ಆ ಕೊಳಚೆಯಲ್ಲಿ ವಾಸಿಸು ತಿದ್ದವರಿಗೆ ತುಸು ಆರಾಮ ದೊರಕಿಸಬೇ ಕೆಂಬ ವಿಚಾರವಿತ್ತು. ಇದಕ್ಕಾಗಿಯೇ ಶ ಮದಾನ ಮಾಡುವ ಸದವಕಾಶವನ್ನು ಒ ದಗಿಸಲಾಗಿತ್ತು.

ವಿಭಿನ್ನ ಸಂಸ್ಥೆಗಳ ಸದಸ್ಯರ ದಳ ಗಳು, ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ಸಮೂಹ, ಅಲ್ಲದೆ ಕೆಲವು ಸ್ಥಳೀಯ ಪ್ರಮುಖರೂ ಅಲ್ಲಿಗೆ ರೆದಿದ್ದರು. ಒರ್ವ 'ಕೆಮೆರಾಮ್ಯಾನ್' ಕೆ ಮೆರಾ ಸರಿಪಡಿಸಿ, ಹಿಡಿದು ಅತ್ತಿತ್ತ ಸರಿ ದಾಡುತಿದ್ದ. ಎದೆಯನ್ನೆಲ್ಲರೂ ಉಬ್ಬಿಸಿ ನಿಂತರು. ಹೇಳ ಹೇಳುತಿದ್ದಂತೆಯೇ ನಗು ತಡೆಯಲಾಗಲಿಲ್ಲ; ಫಿಲ್ಮ್ ಆಗಲೇ ತೆಗೆ ದುದೂ ಆಯಿತು. ಶ್ರಮದಾನ ನೋಡುವ ವೀರ ಸೈನಿಕರು—ದೇಶ ಸೇವಕರು— ಇ ದುವರೆಗೆ ನಿಂತು ಸೋತ ತಮ್ಮ ಕಾಲುಗ ಳಿಗೆ ವಿಶ್ರಾಂತಿಯನ್ನಿತ್ತರು. ಪ್ರಭಾಕರನ ದಳ ಮತ್ತು ಸಮಿತಿಯ ಕಾರ್ಯಕರ್ತರು ಮೌನನಾಗಿ ತಲೆಯೆತ್ತದೆ ಕಾರ್ಯನಿಮ ಗ್ನರಾಗಿದ್ದರು; ಪ್ರಭಾಕರ ಗಾರೆ ತಯಾ ರುಮಾಡುವುದರಲ್ಲಿ ತಲ್ಲೀನನಾಗಿದ್ದ.

ನಾಲ್ಕು ತಾಸುಗಳುರುಳಿದುವು. ವಿಶ್ರಾ ಮ ಪಡೆಯುತಿದ್ದ ದಳಗಳು ಅದೆಂದೋ ಹೊರಟು ಹೋಗಿದ್ದುವು. ಗುಡಿಸಲಿನ ನಿ ವಾಸಿಗಳು ಅವರಿಗೆ ಭಾವಪೂರ್ಣ ವಿದಾ ಯವಿತ್ತಿದ್ದರು.

ಇಟ್ಟಿಗೆ ಹರಿಪೀಲನೆಯಲ್ಲಿ ಪ್ರಭಾ ಕರ ತನ್ನನ್ನೇ ತಾನು ಮರೆತಿದ್ದ. ಅವೆಲ್ಲವೂ ಬೇರೆ ಬೇರೆ ದಾನ ಶೂರ ಸಂಸ್ಥೆಗಳಿಂದ ದಾನವಾಗಿ ಬಂದಿದ್ದುವು. ಕೆಲವೇ ಹೊತ್ತಿನಲ್ಲಿ ಕೆಲವು ಜನರು ಬಂ ದು ಪ್ರಭಾಕರನನ್ನು ಮುತ್ತಿದರು. "ಅ ಣ್ಣಾ, ನೋಡಿದಿಯಲ್ಲಾ? ಫೋಟೊ ತೆಗೆ ದುಕೊಂಡರ., ಹಾರತುರಾಯಿಗಳೆನ್ನು ಹಾಕಿಸಿಕೊಂಡರು; ತಲೆ ಕೊಸರಿಕೊಂಡು ಓಡಿ ಬಿಟ್ಟರು. ಜನರನ್ನು ವಂಚಿತಗೊಳಿ ಸುವುದರಲ್ಲಿ ಇಷ್ಟೊಂದೇನು ಆನಂದವಾಗು ತ್ತದೆಯೋ?" ವಿಸ್ಮಯ ತಿರಸ್ಕಾರ ಬೆರಸಿ ದ ಧ್ವನಿಯಿಂದ ಪ್ರಶ್ನಿಸಿದರು. ಇವರಿಗೆ ಆ ಹೊರಟವರ ಮೇಲೆ ಅತೀವವೆಂಬಷ್ಟು ಕ್ರೋಧ ಹುಟ್ಟಿಕೊಂಡಿತ್ತು.

ಲೀಲಾಧರ ನಕ್ಕು ಹೇಳಿದ—"ಸಮು ದ್ರ ಮಂಥನದ ಘಟನೆಯನ್ನು ನೀವೇಕೆ ಮರೆತು ಬಿಡುತ್ತೀರಿ? ಶೇಷನಾಗನ ಮು ಖದ ಪಕ್ಕ ದೈತ್ಯರು ಮತ್ತು ಬಾಲದತ್ತ ದೇವತೆಗಳು! ಕೈಕೆಸರು ಮಾಡಿಕೊಳ್ಳುವು ದು ಮತ್ತು ಶೇಷನಾಗದ ಮುಖ ಹಿಡಿ ಯುವುದರ ನಡುವೆ ಅಂತರವೇನೂ ಇಲ್ಲ."

"ಪಾಪ, ಅವರಿಗೇನೋ ಬೇರೆ ತುರು ಸಿತ ಕೆಲಸವಿದ್ದಿರಬೇಕು. ನಮ್ಮನ್ನೆ ಯಾ ಕೆ ಕಾಗೆನ್ನುತ್ತೀರಿ?" ಪ್ರಭಾಕರ ಸಹಜ-ಸಲಲತೆಯೊಡನೆಂದ.

"ಜರೂರು ಕೆಲಸ ಬಿದ್ದಿರಬಹುದು! ಕೆಮೆರಾ ಸಿಗುರಿಯಂತೆ ತಿರುಗುವಷ್ಟು ಸ ಮಯ ಆ ಕೆಲಸದ ನೆನಪು ಬರಲಿಲ್ಲ.... ನಾನೂ ಹೋಗುತ್ತೇನೆ.. ನನ್ನ ಮಗನು ಹಾಸಿಗೆ ಹಿಡಿದಿದ್ದಾನೆ. ಮದ್ದು ತರಬೇ ಕಾಗಿದೆ" ಬಲವಾಗಿ ಪಾದವನ್ನೊಮ್ಮೆ ಮೆಟ್ಟಿ ಕ್ರೋಧದಿಂದಲೇ ನಡೆದುಬಿಟ್ಟ.

ಪ್ರಭಾಕರನ ಮುಖದಲ್ಲಿ ಮಂದಸ್ಮಿತ ಮಿಂಚಿತು. ಕಡೆಗಣ್ಣಿನಿಂದವನು ಸ್ನೇಹಿ ತ ಎಲ್ಲರೂ ಹೋಗುವ ತನಕೋತ್ಸಾಹ ಭರಿತರಾಗಿದ್ದರೆಂದು ಊಹಿಸಿದ. ತಾನು ಇಷ್ಟಿಂದ ಕಂಬಿ ಕಿತ್ತರೆ, ಯಾರೊಬ್ಬರೂ ನಿಲ್ಲಲಾರರೆಂದಾತ ತಿಳಿದುಕೊಂಡ. ಹೊ ತ್ತುಕೊಂಡ ಜವಾಬ್ದಾರಿಯ ಭಾರ ತನ್ನ ತಲೆಯ ಮೇಲೆ ಉಳಿದಿರುವಂತಾತನಿಗೆ ಭಾಸವಾಯಿತು. ಅವನು ತಿರುಗಿ ತನ್ನ ಕಾರ್ಯದಲ್ಲಿ ತೊಡಗಿದ; ಆದರೆ, ಉಳಿ ದವರನ್ನು ಕರೆದೇ ಕಾರ್ಯದಲ್ಲಿ ತೊಡಗಿಸಬೇಕಾಯಿತು.

"ನಾವು ಯಾವಾಗಲೂ ಅನ್ಯರನ್ನ ನಮ್ಮ ದೃಷ್ಟಿಯಲ್ಲಿ ತೂಗಿ ನೋಡ ತೊಡ ಗಿದರೆ, ನಾವು ಇಂದಿರುವಲ್ಲಿಯೇ ನಾಳೆ ಯೂ ಇದ್ದು ಬಿಡಬೇಕಾಗುವುದು. ನಾವು ದುಡಿದು ಬೇರೆಯವರಿಗೆ ಪಂಥಾಹ್ವಾನ ನೀಡಬೇಕು. ಜವರು ಹೋದರು, ನಾವೂ ಹೊರಟು ಹೋಗುವೆವು ಎಂಬುದು ತರ್ಕ ವೆನ್ನಿಸಲಾರದು" - ಪ್ರಭಾಕರ ಹೇಳುತ್ತಿ ದ್ದ. ಆ ಕ್ಷಣವೇ ಒಬ್ಬ ನವಾಗಂತುಕನು ಬಂದು ಆತನ ಕಿವಿಯಲ್ಲಿ ಏನನ್ನೋ ಗೊ ಣಗುಟ್ಟಿದ. ಒಂದು ಕ್ಷಣ ಆತನ ಮುಖ ವರ್ಣ ಕಳೆಗುಂದಿತು; ಮರುಕ್ಷಣದಲ್ಲಿ ಯೇ ಅದು ಭಯಂಕರ ರೂಪ ಧರಿಸಿ ಕ ಠೋರವಾಗಿ ಹೋಯಿತು.

"ಸಮುದ್ರ ಮಥನದ ಸ್ಮರಣೆ ನಿನಗಾ ಯಿತು. ದೇವತೆಗಳ ಚತುರತೆಯನ್ನೂ ನೀ ನು ಉಲ್ಲೇಖಿಸಿದೆ. ಆದರೆ, ಭಗವಾನ್ ಶಿವ ನನ್ನು ನೀನೇಕೆ ಮರೆತು ಬಿಡುತ್ತಿ?"—ಪ್ರ ಭಾಕರ ಲೀಲಾಧರನ ಕಡೆಗೆ ನೋಡುತ್ತ ಹೇಳಿದ.

ಮೊದಲೊಮ್ಮೆ ಲೀಲಾಧರನು ವಿಸ್ಮ ಯ ಚಕಿತನಾದ. ಆದರೆ, ತರ್ಕ್ಷಣ, ಪ್ರಭಾಕರ ತನಗಲ್ಲ, ದೇರೆಯವರಿಗಾಗಿ ಈ ಮಾತುಗಳನ್ನು ಆಡುತಿದ್ದನೆಂದು ತಿಳಿ ಯಿತು ತನ್ನತ್ತ ಕೂನ್ಯದೃಷ್ಟಿ ಚೆಲ್ಲುತಿದ್ದ ಪ್ರಭಾಕರ ಅವನ ಮುಂದಿದ್ದ.

"ಅದು ವಿಲಕ್ಷಣ ಸನ್ನಿವೇಶವಾಗಿತ್ತು. ಕಾಲಕೂಟದಿಂದ ಉತ್ಪನ್ನವಾದ ವಿಷ ಮೂಗ್ವಿ ಪೃಥ್ವಿಯನ್ನು ಭಸ್ಮಮಾಡುತಿತ್ತು. ಆಗ, ಮಹಾದೇವ ನಿಂತುಕೊಂಡಿದ್ದನು. ದೃಢನಾಗಿದ್ದನು; ವಿಚಲನಿದ್ದನು. "ಶಿವೋಹಂ"ನ ಪಾವನ ಮಂತ್ರವು ದಶ ದಿಕ್ಕಿಯಲ್ಲೂ ಪ್ರತಿಧ್ವನಿಸುತಿತ್ತು. ಮತ್ತು ....ಮತ್ತು...." ಪ್ರಭಾಕರನ ಚಿತ್ತ ಸಂ ತುಲನೆಗೆಡಿಕಿತು. ....ಆತ ನೋವಿದ ಹೃ ದಯದಿಂದ ಮುಂದುವರಿಸಿದ—"...ಈಗ ತಾನೇ ಸುದ್ದಿಯೊಂದು ಬಂದು...ಇನ್ನೂ ರು ರೂಪಾಯಿಗಳಿಗೆ ನನ್ನ ಮನೆ ಕರಾ ಜಾಗಿ ಹೋಗುವ ಗಳಿಗೆ ಬಂತು! ಮ ರ್ಯಾದೆ ಆಡಿಕ್ಕು ಪ್ರೀತಿಯದಾಗಿದೆ! ನನ್ನ ತಾಯಿ ತಾಯಿಯು ನಾಳ್ಕನೆಯ ಮಗಳಿಗೆಯಿಂದ ಕಾಲುಜಾಳಿ ಜೀವ ಬಿಟ್ಟ ದ್ದಳು. ಆದರೆ,...ಆದರೆ....ನಾನು?..."

ಪ್ರಭಾಕರ ಬಿಕ್ಕಳಿಸುತ್ತ ಅತ್ತುಬಿಟ್ಟ!

— —

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No 466 N/50 date 2-12-19 0 of the Director of public Instruction Madras.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರ ಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ.೩ನ್ನು M.O. ಮಾಡಿದರೆ ಒಂದು ಪ್ರತಿ ಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪೆ ಸ್ ಉಡುಪಿ.
ನವಭಾರತ ಪುಸ್ತಕ ಭಾಂಡಾರ,
ಉಡುಪಿ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

10ಂದ 4	ತಿಂಗಳ ವರೆಗೆ	4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಶೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ ಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯೆಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

NAVAYUGA
REGD. NO. M. 3619

UDIPI, THURSDAY
1-12-1960

LICENSE NO. 31
Licensed to Post without Prepayment

ನಿಮಗೂ ತಿಳಿದಿರಲಿ:

ಧ್ರುವತಾರೆಯ ಬಗ್ಗೆ ನಿಮಗೇನು ಗೊತ್ತು?

ಉತ್ತರದಿಕ್ಕಿನಲ್ಲಿ ಸದಾಕಾಲ ಹೊಳೆಯುತ್ತಿರುವ ಧ್ರುವತಾರೆಯ ಬಗ್ಗೆ ಒಂದೊಂದು ದೇಶದವರ ಜನರ ಧಾರಣೆ ಒಂದೊಂದಿದೆ. ಅವನ್ನು ತಿಳಿಯಲು ನೀವೂ ಉತ್ಸುಕರಾಗಿರುವಿರಾ?

ದಿನಪನು ಮೂಡಿ, ಕತ್ತಲು ಮುಸುಕಿ, ರಾತ್ರಿಹೊತ್ತು ಬಂದಾಗ ಆಗಸದಲ್ಲಿ ತಾರೆಗಳ ಬೃಹತ್ ಸಭೆ ಸೇರುತ್ತದೆ. ಆ ಗಡಿತ ತಾರೆಗಳು ಆ ಸಭೆಯಲ್ಲಿ ಹಾಜರಿರುತ್ತವೆ. ಪ್ರತಿಯೊಂದು ಎಂಬಂತೆ ಮಿನುಗುತ್ತವೆ. ಆಕಾಶಗಳ ಸೊಬಗು ಕವಿದೃಷ್ಟಿಗೆ ಗೋಚರವಾಗುವ ವಸ್ತು ವಿಶೇಷ! "ಆಕಾಶಗಳ ಸೊಬಗನ್ನೂ ಕಂಡು ಭೂಪದ ಬವಣೆಯನ್ನು ಮರೆಯುವೆ ಮಾನವ?" ಎಂದು ಹಲವಾರು ಕವಿಗಳು ತಾರೆಗಳ ಸೊಬಗನ್ನೂ, ಭವದ ಭವಣೆಯನ್ನು ಮರೆಯುವ ಪರಿಹಾರವನ್ನೂ ಒಂದೇ ಸೊಲ್ಲಿನಲ್ಲಿ ಹೇಳಿದ್ದಾರೆ. ಅದಿರಲಿ, ರಾತ್ರಿಹೊತ್ತಿನ ಆ ತಾರೆಗಳ ನಿಕರದಲ್ಲಿ ಕೆಲವು ನಕ್ಷತ್ರಗಳು ಕೇವಲ ಮಿನುಗುತ್ತಿರುತ್ತವೆಯಷ್ಟೆ! ಆದರೆ ಇನ್ನೊಂದು ಜಾತಿಯ (ವಿಶಿಷ್ಟವದು) ನಕ್ಷತ್ರವೊತ್ರ ತನ್ನ ಅಲೌಕಿಕ ಪ್ರಕಾಶದಿಂದ ಸರ್ವಜನರ ಮನಸ್ಸನ್ನು ಬೆಳಗಿಸುತ್ತದೆ. ಆ ವಿಶಿಷ್ಟಜಾತಿಗೆ ಸೇರಿದ ನಕ್ಷತ್ರ ನೀವರಿ ಧ್ರುವ ಹೆಸರಿನ ನಕ್ಷತ್ರ ಧ್ರುವ ತಾರೆಯು ಸದಾ ಉತ್ತರ ದಿಕ್ಕಿನಲ್ಲಿ ಕಾಣಿಸಿಕೊಳ್ಳುತ್ತದೆ ಅನಾದಿಯೆಂದಲೂ ಈಜೊಮ ತಾರೆಯ ಬಗ್ಗೆ ಜನರು ಕಲ್ಪಿತ ಕತೆಗಳನ್ನು ಸಿರೂಪಿಸಿ ಒಂದಿವಾರಿ. ಅವುಗಳು ಬಹಳವಿವೆ. ಅವುಗಳ ಬಗ್ಗೆ ಯುನಾನಿನ ನಾವಿಕರೂ, ಮಂಗೋಲಿಯನರೂ, ಭಾರತೀಯರೂ ಆಯಾ ವಿಜನರೂ, ಇಜಿಪ್ಟಿಯನ್ನರೂ ವೈಜ್ಞಾನಿಕತೆಕಟ್ಟಿಕೊಂಡಿದ್ದಾರೆ. ಪ್ರತಿಯೊಂದು ಒಂದಕ್ಕೊಂದು ಭಿನ್ನವಿದೆ.

ಧ್ರುವ ನಕ್ಷತ್ರದ ಪತ್ತೆಯನ್ನು ಯುನಾನಿನ ನಾವಿಕರು. ಸೊತ್ತೆಮೊದಲಾಗಿ ಮಾಡಿರೆಂಬುದರಿಂದಾಗಿ ಸಂಶೋಧಕರ ಅಭಿಪ್ರಾಯವಿದೆ. ಯುನಾನಿನ ನಾವಿಕರು ಈ ಧ್ರುವ ನಕ್ಷತ್ರದ ಪತ್ತೆಮಾಡಿ, ಅದರ ಸಹಾಯದಿಂದಲೇ ತಮ್ಮ ದಿಕ್ಕನ್ನು ಗುರುತಿಸುತ್ತಿದ್ದರು. ಅಷ್ಟು ಮಾತ್ರವಲ್ಲದೆ ಈ ಧ್ರುವನಕ್ಷತ್ರದ ಸಹಾಯದಿಂದಲೇ ಅವರು ನಿಶ್ಚಿತ ಸ್ಥಾನವನ್ನು ಯಾವಾಗಲೂ ತಲುಪುತ್ತಿದ್ದರು. ಇವರು ಈ ತಾರೆಯನ್ನು 'ಮುಕುಟ ಮಣಿ' ಎಂಬುವುದಾಗಿ ಕರೆಯುತ್ತಿದ್ದರು.

ಮಂಗೋಲಿಯನರು ಸೀಲಾತಾಕಾಶದಲ್ಲಿ, ತನ್ನ ಸ್ಥಾನದಲ್ಲಿ ಬೆಳಗುತ್ತಿದ್ದ ಧ್ರುವತಾರೆಯನ್ನು 'ಜೆನ್ನದ ಮೊಳೆ' ಎಂದು ಭಾವಿಸುತ್ತಿದ್ದರು.

ಚೀನಿಯರು ಧ್ರುವನಕ್ಷತ್ರದ ಬಗ್ಗೆ ಕಟ್ಟಿದ ಕತೆ ದೊಡ್ಡದಿದೆ. ಅವರು ಇದನ್ನು 'ಸ್ವರ್ಗದ ರಾಜ' ನೆಂಬುವುದಾಗಿ ನಂಬುತ್ತಾರೆ. ಇನ್ನು ಕೆಲವು ಚೀನಿಯರು ಧ್ರುವ ತಾರೆಯನ್ನು 'ದೇವಿ' ಎಂಬುವುದಾಗಿಯೂ ಭಾವಿಸುತ್ತಾರೆ. ಅನೇಕ ವರ್ಷ ಹಿಂದಿನ ಕಾಲದ ಮಾತು. ಆಗ ಚೀನದಲ್ಲಿ 'ತಾನ್ ಮೂವ್' ಹೆಸರಿನ ದೇವತೆಯೊಬ್ಬಳಿದ್ದಳು. ಆಕೆ ಬಹುಕಾಲದವರೆಗೆ ಚೀನದಲ್ಲೇ ಇದ್ದವಳು—ಧರ್ಮದ ಮೇಲೆ ಅಗಾಧ ವಿಶ್ವಾಸ, ನಂಬುಗೆ ಆಕೆಗೆ. ಆಕೆ ಜ್ಞಾನಿ ಮಾತ್ರವಲ್ಲದೆ ಅಲೌಕಿಕ ಶಕ್ತಿವಂತೆಯೂ ಆಗಿದ್ದಳು. ಶರಧಿಯ ಬೃಹತ್‌ತರಂಗಗಳನ್ನು ತನ್ನ ಇಚ್ಛೆಮಾತ್ರದಿಂದ ಕ್ಷಣಾರ್ಧದಲ್ಲಿ ರಭಸದಿಂದ ಹಾಯ್ದು ಹೋಗುತ್ತಿದ್ದಳಂತೆ. ಅವಳ ಶಕ್ತಿ ಪರೀಕ್ಷೆಗಿದೊಂದು ಉದಾಹರಣೆ. ಸಮುದ್ರ ಮಧ್ಯದಲ್ಲಿ ಮುಳುಗಲಿರುವ, ಮುಳುಗಿ ಗತಪ್ರಾಣರಾಗುವ ನಾವಿಕರ ನೇಕರನ್ನಾಕೆ ರಕ್ಷಿಸಿದ್ದಳು, ಅವರಿಗೆ ಜೀವದಾನ ಮಾಡಿ, ದೇವ ಸ್ವರೂಪಿಣಿಯೂ ಆಗಿದ್ದಳು. ಉತ್ತರ ಚೀನದ ಅರಸು ಆಕೆಯ ಗುಣಗಾಂಭೀರ್ಯಗಳಿಗೆ ಮಾರುಹೋಗಿ ಆಕೆಯನ್ನು ವಿವಾಹವಾದನು. ಆಕೆಗೆ ಮರಣ ಸಂಭವಿಸುವ ಸಂದರ್ಭದಲ್ಲಿ, ದೇವದೂತರು ಬಂದು ಕರೆದುಕೊಂಡು ಹೋದರು. ಆ 'ತಾವ್ ಮೂವ್' ಈಗ ಧ್ರುವ ನಕ್ಷತ್ರದ ರೂಪದಲ್ಲಿ ಆಕಾಶದಲ್ಲಿ ಬೆಳಗುತ್ತಾಳೆ ಎಂದು ಚೀನಿಯರು ನಂಬುತ್ತಾರೆ.

ನಮ್ಮ ದೇಶದಲ್ಲಿ ಯಾವ ಕತೆಯು ಪ್ರಚಾರದಲ್ಲಿದೆ ಎಂಬುದನ್ನು ಪುನಃ ಹೇಳುವ ಅವಶ್ಯಕತೆಯಿಲ್ಲ. ಏಕೆಂದರೆ ಅದು ಸರ್ವಸಾಮಾನ್ಯ ಎಲ್ಲರಿಗೂ ತಿಳಿದಿರುವಂತಹದೇ ಆಗಿದೆ. ಅರೇಬಿಯನರ ವಿಚಾರವು ಭಿನ್ನವಾಗಿದೆ; ಸ್ವಾರಸ್ಯಪೂರ್ಣವೂ ಹೌದು. ಧ್ರುವನಕ್ಷತ್ರವು ವೀರಪುರುಷನೊಬ್ಬನ ಹನನಮಾಡಿದೆ ಎಂಬುವುದಾಗಿ ಅವರ ತಿಳುವಳಿಕೆ. ಸಪ್ತರ್ಷಿ ಮಂಡಲವೇ ಆ ವೀರ ಪುರುಷನ ಸಮಾಧಿ. ಬೇರೆ ನಕ್ಷತ್ರಗಳು ಧ್ರುವನಕ್ಷತ್ರವನ್ನು ಸುತ್ತಿಕೊಂಡು ನೆಳೆದಿದಿವೆ. ಅವು ಈ ಧ್ರುವ ತಾರೆಯ ಸುತ್ತಮುತ್ತಲು ಹೆಬ್ಬಿಕೊಂಡು, ಅವನ್ನು ಕಾಯುತ್ತಿವೆ. ಅವರದೃಷ್ಟಿಕೋಣಕ್ಕೆ ಧ್ರುವನಕ್ಷತ್ರವು 'ಧೂರ್ತ', 'ಪಾಪಿ' ಯಾಗಿದೆ.



ಭಾರತದಲ್ಲಿ ಕೆನಡಾದ ಸಹಾಯದಿಂದ ಟ್ರಾಂಬೆಯ ಸಮೀಪ ಕಟ್ಟಲಿರುವ ದ್ವಿತೀಯ ಅಣುರಿಯಾಕ್ಟರಿನ ಪ್ರದೇಶ.

ಇಜಿಪ್ಟ್ ದೇಶದ ಜನರ ಅಭಿಪ್ರಾಯವು ಸಾಧಾರಣ ಇದನ್ನೇ ಹೋಲುತ್ತದೆ. ಯುನಾನಿನಲ್ಲಿ ಧ್ರುವತಾರೆ ಮತ್ತು ಸಪ್ತರ್ಷಿ ಮಂಡಲದ ವಿಷಯವಾಗಿ ಅನೇಕ ಸುಂದರ ಕತೆಗಳಿವೆ. ಧ್ರುವತಾರೆಯು ಯಾವಾಗಲೂ ಸ್ಥಿರವಾಗಿದೆ, ಆದರ್ನೆಂದು ನಿಶ್ಚಿತ ಸ್ಥಾನದಲ್ಲಿ ಕಾಣಬಹುದು. ತನ್ನ ಪ್ರತಿಜ್ಞೆಯನ್ನು 'ಸ್ಥಿರವಾಗಿ' ಪಾಲಿಸುವುದಕ್ಕೆ ಒಬ್ಬ ಧ್ರುವತಾರೆಯ ಉದಾಹರಣೆಯನ್ನು ಕೊಟ್ಟೇ ಕೊಡುತ್ತಾನೆ.

ವಿವಾಹ ಸಂಬಂಧವನ್ನು ಶಾಶ್ವತಗೊಳಿಸಲು (ಹಿಂದುಗಳಲ್ಲಿ) ಪುರೋಹಿತರು ವಧೂವರರಿಂದ ಪ್ರತಿಜ್ಞೆ ಮಾಡಿಸುತ್ತಾರೆ. ಈ ಪ್ರತಿಜ್ಞೆಗೆ ಧ್ರುವನಕ್ಷತ್ರವೇ ಸಾಕ್ಷಿ! ವಿವಾಹಾನಂತರ ದಿಬ್ಬಣದವರು ಊಟ ತೀರಿಸಿ ತಮ್ಮ ತಮ್ಮ ಮನೆಗೆ ತೆರಳುತ್ತಾರೆ. ತಂದೆ, ತಾಯಿ, ಅಕ್ಕ, ತಮ್ಮ, ಅಣ್ಣ ಎಲ್ಲರು ವರ್ಗದವರು ಆ ಹೊತ್ತಿನಲ್ಲಿಲ್ಲಿ ತಿಳಿಯುವುದಿಲ್ಲ. ಪತಿ ಪತ್ನಿಯರಲ್ಲಿಲ್ಲಿ ವಿರಸವಾದರೆ? ಪ್ರತಿಜ್ಞೆ ಬೇಕಲ್ಲವೆ? ಸಾಕ್ಷಿ ಯಾರು ಕೊಡುತ್ತಾರೆ? ಕೆಗಲಿನಲ್ಲೂ, ರಾತ್ರಿಯಲ್ಲೂ ಬೆಳಗುತ್ತಿರುವ ಶಾಶ್ವತ ಧ್ರುವತಾರೆಗೊಂದೇ ಸಾಕ್ಷಿಯಾಗಿದೆ ಎಂದು ಪುರೋಹಿತರು ಹೇಳುತ್ತಾರೆ.

ಇಂದು ವಿಜ್ಞಾನವು ವಿಶೇಷ ಮುಂದುವರಿದಿದೆ. ಯುಗವಂತೂ 'ವಿಜ್ಞಾನಯುಗ'ವಾಗಿ ಮಾರ್ಪಟ್ಟಿದೆ. ಆದರೆ ವಿಜ್ಞಾನದ ಜ್ಞಾನವಿಲ್ಲದ ಹಿಂದಿನವರಿಗೆ ದಿಕ್ಕನ್ನು ಗುರುತಿಸಲು ಧ್ರುವ ನಕ್ಷತ್ರದ ಸಹಾಯ ಪಡೆಯಬೇಕಿತ್ತಲ್ಲ?

('ಹಿಂದಿಯಿಂದ')

—ಕೆ. ರಮೇಶ ಪೈ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದು ಹೊಗಲಾರಿಸುವ ದ್ರವಿಡನ್ನಾನದ ಬಗ್ಗೆ ನಾನೀಗ ಮಾತಾಡುತ್ತಿಲ್ಲ. ಭಾರತವು ಅವಿಭಾಜ್ಯವಾದ ಅಖಂಡ ದೇಶವೆಂಬುದೇ ನನ್ನ ನಂಬಿಕೆಯಾದುದರಿಂದ ನಾನು ಈ ಪ್ರತ್ಯೇಕತೆಯ ವಾದಕ್ಕೆ ವಿರೋಧಿಯಾಗಿದ್ದೇನೆ. ಆದರೆ, ಮುಂದೆ ಈ ಪ್ರದೇಶವು ಪ್ರಬಲ ಶಕ್ತಿಯಾಗಬಲ್ಲದೆಂಬ ವಿಶ್ವಾಸವು ನನಗಿರುವುದರಿಂದ ನಾನೀಗ ದ್ರವಿಡನ್ನಾನದ ಉಲ್ಲೇಖ ಮಾಡುತ್ತಿರುವೆ.

ಇಂದು ನಮ್ಮ ದೇಶದಲ್ಲಿ ಸಂಕುಚಿತ ಭಾವನೆಗಳು, ಭಾಷಾಂಧತೆ, ಅಂತಃಕಲಹಗಳು, ಪ್ರಾಂತೀಯತೆಗಳು ತಾಂಡವವಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನೂತನ ಪದವೀಧರರು ಪ್ರತ್ಯೇಕತೆಯ ವಾತ್ಯ ಮಹಿಸಬೇಕಾಗಿದೆ. ನಮ್ಮ ಹಿಂದಿನವರ ಉಜ್ವಲ ಸಂಪ್ರದಾಯಗಳನ್ನು ಅರ್ಥಮಾಡಿಕೊಂಡು ಇವರೂ ದೇಶಸೇವೆಯಲ್ಲಿ ನಮ್ಮ ಪೂರ್ವಜರಂತೆ ಅಗ್ರಗಣಿಗಳಾಗಬೇಕು. ಭಾರತದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗಾಗಿ ಯಶಸ್ಸಿಗಾಗಿ, ಮತ್ತು ವಿಶ್ವದ ರಾಷ್ಟ್ರ ಮಾಲಿಕೆಯಲ್ಲಿ ಗೌರವ ಸ್ಥಾನವನ್ನು ದೊರೆಯುವಂತೆ ಮಾಡುವುದಕ್ಕಾಗಿ ನೂತನ ಪದವೀಧರರು ದುಡಿಯಬೇಕು.

(ಕರ್ನಾಟಕ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಭಾಷಣದಿಂದ)

ಉಳಿತಾಯಕ್ಕೆ.....

ಉಳಿತಾಯಕ್ಕೆ ಒಳ್ಳೆಯ ಕಾಲ: ಯಾವಾಗಲೂ
ಉಳಿತಾಯಕ್ಕೆ ಒಳ್ಳೆಯ ಸ್ಥಾನ: ಬೇಂಕ್.
ಸಿಂಡಿಕೇಟ್ ಬೇಂಕ್: ಉಳಿತಾಯಗಾರರ ಸನ್ಮಿತ್ರ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 8-12-1960 ೪೦ನೇ ವರ್ಷ

ಸಂಪುಟ ೪೦ Vol. 40

ಸಂಚಿಕೆ ೧೫ No. 15

ಬೆಲೆ ೧=13

ನವಯುಗ

NAVAYUGA KANNADA WEEKLY UDIPI

ಪ್ರಜಲಿತ: ಪ್ರಸಂಗ

ಸೋವಿಯತ್-ಚೀನಗಳ ನಡುವೆ ಬಿರುಕು!

ಮೂರು ವಾರ ಚರ್ಚೆ ನಡೆದರೂ ಯಾವುದೇ ಒಮ್ಮತಕ್ಕೆ ಬಾರದೆಹೋದಪೂರ್ವ ಐತಿಹಾಸಿಕ ಘಟನೆಯೊಂದು ನಡೆದಂತಾಗಿದೆ. ಈ ವ್ಯರ್ಥ ಸಮ್ಮೇಳನದ ಅರ್ಥ ವೇನೆಂದು ಏಶ್ಯನ್ ರಾಷ್ಟ್ರಗಳು ಕಾತರವಾಗಿವೆ.

ಸೋವಿಯತ್ ರಶ್ಯ ಮತ್ತು ಕಮ್ಯೂನಿಸ್ಟ್ ಚೀನಗಳ ನಡುವಣ ಸೈದ್ಧಾಂತಿಕ ಮತಭೇದಗಳನ್ನು ದೂರೀಕರಿಸುವ ಸಲುವಾಗಿ ಮೋಸ್ಕೊವಿನಲ್ಲಿ ಕಳೆದ ಮೂರು ವಾರಗಳ ವರೆಗೆ ಚರ್ಚೆ ನಡೆಯಿತು. ಕಳೆದ ಗುರುವಾರ ಈ ಸಂಬಂಧದಲ್ಲಿ ಒಂದು ಸಂಕ್ಷಿಪ್ತ ಪ್ರಾರಂಭಿಕ ವಿಜ್ಞಪ್ತಿಯು ಹೊಂಬಿತ್ತು. ಇದು ಅತ್ಯಂತ ಕಿರಿಯದಾಗಿದೆ. ಈ ಚಿಕ್ಕ ಪೇಳಿಕೆಯಿಂದ ಇವುಗಳ ನಡುವಣ ಭಿನ್ನಾಭಿಪ್ರಾಯವು ಇನ್ನೂ ಪರಿಹಾರಗೊಳ್ಳಲಿಲ್ಲವೆಂದು ಪೂರ್ವ ಏಶ್ಯನ್ ರಾಷ್ಟ್ರ ಸಂಬಂಧಿ ವಿಶೇಷಜ್ಞರು ವಿಶ್ವಾಸವಾಗಿದೆ.

ಸೋವಿಯತ್ ರಶ್ಯವು ಭಾರತ-ಚೀನ ಗಳಲ್ಲಿರುವ ಸೀಮೆಯಲ್ಲಿ ಚೀನಾದ ಸೇನೆ ಯು ನಡೆಸುತ್ತಿರುವ ದುಸ್ಸಾಹಸದ ಕಾರ್ಯವನ್ನು ಸಿಲ್ಲಿಸಿಬಿಡಲು ಚೀನವನ್ನು ಒಪ್ಪಿಸಲು ಪ್ರಯತ್ನಿಸಿತು. ಆದರೆ, ಸೋವಿಯತ್ ದೇಶವು ತನ್ನ ಈ ಪ್ರಯತ್ನದಲ್ಲಿ ಅಸಫಲವಾಗಿದೆಯೆಂದು ತಿಳಿದು ಬಂದಿದೆ. ಈ ಹೇಳಿಕೆಯ ಕರ್ತರಾಗಿ ಸೋವಿಯತ್ ರಶ್ಯ ಹಾಗೂ ಪೂರ್ವ ಯುರೋಪಿನ ರಾಷ್ಟ್ರಗಳು ಯಾವುದೇ ಅಭಿಪ್ರಾಯವನ್ನು ಶೀಘ್ರದಲ್ಲಿ ಹೊರಗೆಡಹಿಲ್ಲ. ಆ ಮೊದಲು ಹೊರಟ ಪ್ರಸಾರಗಳಲ್ಲಿ ಈ ರಾಷ್ಟ್ರಗಳ ಮಧ್ಯೆ ಭಿನ್ನಮತವೇ ಉಳಿದಿದೆಯೆಂದು ತಿಳಿಯುತ್ತದೆ. ಇದರಿಂದಾಗಿಯೇ ಈ ಭಿನ್ನಮತವು ಯಾವುದೇ ರೀತಿಯಿಂದ ದೂರವಾಗಿಲ್ಲವೆಂದು ಊಹಿಸಬಹುದಾಗಿದೆ.

ಆಗ ವ್ಯಕ್ತಿಗಳು ಒಂದು ಸೇರಿ ವಿಚಾರ ವಿನಿಮಯ ಮಾಡಿದರು; ವಿದೇಶ ನೀತಿಯ ಬಗ್ಗೆ ವಾದ ವಿವಾದ ನಡೆಯಿತು; ಸಹೋದರ ಪ್ರೇಮ ಪ್ರದರ್ಶಿಸಲಾಯಿತು; ಇವೆಲ್ಲವೂ ಮಾರ್ಕ್ಸ್ ವಾದ, ಲೆನಿನ್ ವಾದ ಮತ್ತು ಶ್ರಮಿಕ ಅಂತರಾಷ್ಟ್ರೀಯ ವಾದಗಳ ಅವಿಕಲ ಸಿದ್ಧಾಂತಗಳನ್ನೇ ಆಧರಿಸಿ ಕೊಂಡಿತ್ತು ಎಂದು ಹೇಳಿಕೆಯಲ್ಲಿ ಹೇಳಲಾಗಿದ್ದರೂ, 'ಅವಿಕಲ ಸಿದ್ಧಾಂತ' ವೆಂದರೇನು ಎಂಬುದರ ಕುರಿತು ಇಬ್ಬಣಗಳಲ್ಲಿಯೂ ಒಮ್ಮತವಾದಂತೆ ತೋರಿ ಬರುವುದಿಲ್ಲ.

ಮಾರ್ಕ್ಸ್‌ವಾದದಲ್ಲಿನ ಕ್ರಾಂತಿಕಾರೀ ಭಾವನೆಯನ್ನು ಸ್ವೀಕರಿಸಿ, ಆವಶ್ಯಕತೆ ಬೀಳುವಲ್ಲಿ ಹಿಂಸಾತ್ಮಕ ಮಾರ್ಗವನ್ನು ಹಿಡಿಯುವುದು ಅವಶ್ಯವೆಂದು ಪೇಕಿಂಗ್ ರಾಗವೆಬ್ಬಿಸುತ್ತಾ ಇತ್ತು. ಸಿದ್ಧಾಂತವಾದಿ ಪತ್ರಿಕೆ 'ಕಮ್ಯುನಿಸ್ಟ್' ಎಂಬುದರ ನವಂಬರ ಸಂಚಿಕೆಯಲ್ಲಿ ಮೋಸ್ಕೋವು ಕ್ರಾಂತಿಯನ್ನು ಹೊರಗೆ ಕಳಿಸುವುದು ಸಾಧ್ಯವಿಲ್ಲ; ಬಾಹ್ಯದಿಂದ ಕ್ರಾಂತಿಗೆ ಪ್ರಚೋದನೆ ದೊರೆಯುವುದೂ ಅನಿವಾರ್ಯ. ಯುದ್ಧದ ಮೂಲಕ ಕ್ರಾಂತಿಯೆಸಗುವುದೂ ನಿಷ್ಫಲ ಪ್ರಯೋಸವೆಂದು ಬರೆದಿದೆಯೆಂದೂ ಚೀನಾದ ವಾದವಿದ್ದಂತಿತ್ತು.

ಚೀನಾದ 'ರೆಡ್ ಫ್ಲೇಗ್' ಎಂಬ ಪತ್ರಿಕೆಯಲ್ಲೂ ಒಂದು ಲೇಖನವು ಪ್ರಕಟವಾಗಿದ್ದು, ಇದಕ್ಕೆ 'ಕಮ್ಯೂನಿಸ್ಟ್'ನ ಲೇಖನವು ಉತ್ತರವೀಯುವ ಮತ್ತು ಸೋವಿಯತ್ ದೃಷ್ಟಿಕೋಣವನ್ನು ಪುಷ್ಟೀಕರಿಸುವ ಸಾಹಸವನ್ನು ಮಾಡಲಾಗಿದೆಯೆಂದೂ, ಈ ಪುಷ್ಟೀಕರಣವು ನಿರ್ಧಾರಿತ ಸಮಯಕ್ಕೆ ಮೊದಲೇ, ಎಂದರೆ ಸಮ್ಮೇಳನವು ಆರಂಭವಾಗುವುದಕ್ಕೆ ಮುಂಚೆಯೇ ರಶ್ಯದ ದೃಷ್ಟಿಕೋಣವನ್ನು ಸ್ಪಷ್ಟಗೊಳಿಸುವ ಮಹಾ ಸಾಹಸವನ್ನು ಮಾಡಿರುವುದೆಂದೂ ಅನ್ನಲಾಗುತ್ತಿದೆ. ಈ ಕಾರಣದಿಂದಲೇ ಉಪರಿಲಿಖಿತ ಲೇಖದ ಅಚ್ಚಿನಲ್ಲಿ ಹೇರಳ ಮುದ್ರಾಲೋಪಗಳಿದ್ದುವೆಂದೂ, ಮುಖ್ಯವಾದ ವಾಕ್ಯ ಖಂಡಗಳು ಎರಡೆರಡು ಬಾರಿ ಅಚ್ಚಾಗಿದ್ದುವೆಂದೂ ತಿಳಿದುಬಂದಿದೆ. ಇಷ್ಟೊಂದು ಆವಸರದಲ್ಲಿ ಈ ಲೇಖವು ಪ್ರಕಟವಾದುದರಿಂದ, ಚೀನಾದ ಮೇಲೆ ತನ ದೃಷ್ಟಿಕೋಣವನ್ನು ಪ್ರಭಾವ ಬೀರುವಂತೆ ಪ್ರತಿಬಿಂಬಿಸುವುದೇ ಆಗಿದೆಯೆಂದು ಪೇಕಿಂಗ್‌ನ ವಾದವಿರುತ್ತದೆ.

ಮಾನವನ ಜೀವಮಾನ

೧. ಅಮೆರಿಕೆಯಲ್ಲಿ ಜನಿಸಿದ ಶಿಶುವಿನ ಜೀವಮಾನವಿಂದು ಎಪ್ಪತ್ತು ವರ್ಷಗಳೆನೇರಿದೆ. ೧೮೫೦ರಲ್ಲಿ ಇದು ೪೦ ವರ್ಷಗಳಿಗೂ ಕಡಿಮೆಯಿತ್ತು. ಪ್ರತಿರತ ಎಪ್ಪತ್ತೈದರಷ್ಟು ಜೀವಮಾನ ವಿತಿಯು ಹೆಚ್ಚುವಂತಾಗಲು ಅಲ್ಲಿ ವೈದ್ಯಕೀಯ ಮತ್ತು ಚಿಕಿತ್ಸಾ ಕ್ಷೇತ್ರದಲ್ಲಾದ ಗಣನೀಯ ಪ್ರಗತಿಯೇ ಕಾರಣವಾಗಿದೆ. ೨. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಈಗ ನಾರ್ಮಯಂತರ ಜೀವಮಾನವು ಆತ್ಯಧಿಕವಾಗಿದೆ. ನಾರ್ವೆಯ ರಾಷ್ಟ್ರೀಯನು ೭೧.೧ ವರ್ಷ ಕಾಲ ಬದುಕುವ ಆಶೆಯಿಟ್ಟುಕೊಳ್ಳುವುದು ಸಾಧ್ಯವಾಗಿದೆ. ೩. ಅಮೆರಿಕೆ ಹಾಗೂ ಪ್ರಪಂಚದ ಜಾನ್ಪರುಗಳು ತೆರಪಿಲ್ಲದೆ ಮುಂದುವರಿಯುತ್ತಿರುವ ವೈಜ್ಞಾನಿಕ ಸಂಶೋಧನೆಗಳಿಂದ ಹಾಗೂ ಪ್ರಯೋಗಗಳಿಂದ ಮಾನವ ಜೀವಿಯು ನೂರು ವರ್ಷಗಳ ವರೆಗೆ ಬದುಕಲು ಹಂಬಲಿಸಿದರೆ, ಆಶ್ಚರ್ಯಪಡಬೇಕಾಗಿಲ್ಲ.

'ಕಮ್ಯುನಿಸ್ಟ್' ಪತ್ರಿಕೆಯಲ್ಲಿ ಕ್ರಾಂತಿಯನ್ನು ಸಫಲವಾಗಿ ಹೇಗೆ ಮಾಡಬಹುದೆಂದು ಮಾರ್ಗದರ್ಶನ ಮಾಡಲಾಗಿದೆ. ಪರಮಾಣು ಯುದ್ಧ, ಬಂಡವಳ ಶಾಹಿಗಳ ಸೈನ್ಯಬಲ ಪ್ರಯೋಗಗಳು, ಕ್ರಾಂತಿಯೂಗಲು ಉತ್ತಮ ಮಾರ್ಗಗಳಾಗಲಾರವೆಂದೂ ಆದರೆ, ಕೆಲವು ನಿರ್ದಿಷ್ಟ ದೇಶಗಳಲ್ಲಿ ವರ್ಗ ಸಂಘರ್ಷಣೆಯು ಮಾರ್ಗವೇ ಸಫಲ ಕ್ರಾಂತಿಪಥವೆಂದೂ ಈ ಲೇಖದಲ್ಲಿ ವಿಭಿಪ್ರಾಯಪಡಲಾಗಿದೆ. ಆದರೆ, ಚೀನಾವು ಈ ವಾದವನ್ನು ಒಪ್ಪುವುದಕ್ಕೆ ಸಿದ್ಧವಿರಲಿಲ್ಲ.

ಕೆಲವೊಂದು ಪಾಶ್ಚಾತ್ಯ ರಾಷ್ಟ್ರಗಳು ಚೀನಾದಲ್ಲಿ ಈಗ ಎಣ್ಣೆಯ ಕೊರತೆಯಿದೆಯೆಂದು ಹೇಳುತ್ತವೆ. ಸೋವಿಯತ್ ದೇಶವು ಮೊನ್ನೆ ಮೊನ್ನೆಯವರೆಗೂ ಚೀನಕ್ಕೆ ಸಾಕಷ್ಟು ಎಣ್ಣೆಯನ್ನು ಕೊಡುತಿತ್ತು; ಆದರೆ, ಈಗ ಅದು ಕುಸು ಹಿಂದಿ ಮುಂದು ನೋಡುತ್ತಿದೆ. ಚೀನಾದ ಸಿದ್ಧಾಂತವನ್ನು ತಾನು ಒಪ್ಪುವುದಿಲ್ಲವೆಂಬ ಕಾರಣದಿಂದ ಸೋವಿಯತ್ ರಶ್ಯ ಆದಕ್ಕೆ ಎಣ್ಣೆ ಕೊಡಲು ನಿರಾಕರಿಸುತ್ತಿದೆಯೆಂಬುದರಲ್ಲಿ ಸ್ವಲ್ಪವಾದರೂ ಸತ್ಯಾಂಶವಿರಬೇಕು. ಹಾಗೆಯೇ ಭಾರತದ ಸೀಮೆಯಲ್ಲಿ ಚೀನೀ ಸೇನೆಯು ನಡೆಸುತ್ತಿರುವ ಆಕ್ರಮಣವನ್ನು ಹಿಂತೆಗೆಯಬೇಕೆಂಬ ತನ್ನ ಇಚ್ಛೆಯು ಈಡೇರದಿದ್ದರೂ ಈ ವಿಧದ ನಿರಾಕರಣಕ್ಕೆ ಕಾರಣವಾಗಿರುವುದು ಸಾಧ್ಯವೆನ್ನಲಾಗುತ್ತಿದೆ.

ಆದರೆ, ಈ ಬಗ್ಗೆ ಚೀನವು ವಿಶೇಷ ಚಿಂತೆಗೀಡಾದಂತಿಲ್ಲ. ಅದು ಇಷ್ಟರಲ್ಲಿಯೇ ಸೂಕ್ತ ಮುಂಜಾಗ್ರತೆಯನ್ನು ವಹಿಸಿದೆ. ಹಲವಾರು ಕಷ್ಟಸಾಧ್ಯವಾದ ಉಪಾಯಗಳನ್ನೂ ಅದು ಯೋಜಿಸಿಕೊಂಡಿದೆ. ಜನಸಂಚಾರದ ಸೇವೆಯಲ್ಲಿ ಕೆಲ

(ಉಳಿದ ಹುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ನೋಪೀಚಂದ ರಾವ್,
ವಿದ್ವಾನ್.
ಜಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ನಿರ್ವಾಹಕ ಸಂಪಾದಕರು:
ಕೆ. ಜೋನ್ಸಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಂತೆ ಕಾರ್ಯವಿರುವುದು.

ಕಥಾವಿಹಾರ

ಕಲಿಯದ ಪಾಠ ಕಲಿಸಿದ!

ನಾನೇ ಕಂಗಾಲಾಗಿದ್ದಾಗ, ತನ್ನ ದಾರುಣ ಕಥೆಯಿಂದ ನನ್ನ ಸಮಾಸು ಭೂತಿಯನ್ನು ಪಡೆದ ನಾರಾಯಣ ಶಾಸ್ತ್ರಿ ನಾನದುವರೆಗೆ ಕಲಿಯದ ಪಾಠವನ್ನು ಕಲಿಸಿ ದೂರ ಹೋದ!

ಶ್ರೀ ಎಚ್. ರಾಮಕೃಷ್ಣ ಅಡಿಗ.

ಜೀವನದಲ್ಲಿಯ ಅತಿ ದುರ್ಭರ ದಿನಗಳವು. ನನ್ನ ಸಹಪಾಠಿಗಳೆಲ್ಲ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಲೇಜು ಸೇರಿದ್ದರು. ಆದರೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿಯೂ ಮನೆಯಲ್ಲಿ ಕುಳಿತು ಕೊಂಡಿರಬೇಕಾದ ಪರಿಸ್ಥಿತಿಯನ್ನು ತಾಳಲಾರದೆ ಮನೆಯಲ್ಲಿ ಹೇಳದೆ ಪೇಟೆಗೆ ಓಡಿ ಬಂದಿದ್ದೆ. ಅಲ್ಲಿ ಇಲ್ಲಿ ಅಲೆದು, ಒಂದು ಆಫೀಸಿನಲ್ಲಿ ಬಿಡುಸಮಯದ ಕಾರಕೂನನಾಗಿ ಸೇರಿಕೊಂಡಿದ್ದೆ. ಅವರು ತಿಂಗಳಂತ್ಯಕ್ಕೆ ನನ್ನ ಕೈ ಮೇಲೆ ಇಡುತಿದ್ದುದೇ ನನ್ನ ಪಗಾರ. ಬಡಹೋಟಲೊಂದರಲ್ಲಿ ಊಟಕ್ಕೆ ನಿಂತಿದ್ದೆ. ಈ ಮಧ್ಯೆ, ಟೈಪ್‌ರೈಟಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಕಲಿಯಲಿಕ್ಕೆ ಹೋಗಾವುದು ಬೇರೆ. ಇತ್ತಲಾಗಿ ಊರಿನಲ್ಲಿ ಏನೆಲ್ಲಾ ಎಣಿಸುತ್ತಾರೋ ಎನ್ನುವ ಚಿಂತೆ; ಈ ಊಟ ವಸತಿಗಳ ಬಗ್ಗೆ ತಾಳಲಾರದ ಟೀಸರ—ಕಾಲೇಜಿನ ಹುಡುಗರನ್ನು ಕಂಡೊಡನೆಯೇ ಉಕ್ಕಿಬರುವ ಮತ್ಸರ—ಇವುಗಳಿಂದ ತುಂಬ ಭಾರವಾದ ಮನಸ್ಸನ್ನು ಹೊತ್ತುಕೊಂಡು ಹುಚ್ಚನಂತೆ ಅಲೆದಾಡುತಿದ್ದೆ.

ಆದೊಂದು ದಿನ, ಹೋಟೆಲಿನಲ್ಲಿ ಹಣ ಕೇಳಿದ್ದರು, 'ಕೊಡುತ್ತೇನೆ' ಎಂದು ಮೇನೇಜರರ ಬಳಿ ಹೋಗಿ ಪರಿಸ್ಥಿತಿಯನ್ನು ಬಣ್ಣಿಸಿದೆ. 'ಫ್ರೀಯಿನ್ನೂ ಸರಿಯಾಗಿ ಪಳಗಿಲ್ಲ. ಇನ್ನು ಸ್ವಲ್ಪ ದಿನ ಹೋಗಲಿ. ಮಿಸ್ಟರ್' ಎಂದರು. ನನ್ನ ತಲೆಯೊಳಗೇನೋ ಆಟಂಬಾಂಬು ಸ್ಫೋಟವಾದಂತಾಯಿತು. ಪಟಪಟನೆ ಗಾಂಧಿ ಮೈದಾನಕ್ಕೆ ತೆರಳಿ ಬೀಸಿಬರುವ ತಂಗಾಳಿಗೆ ಮೈಯೊಡ್ಡಿ ಕುಳಿತೆ. ಜೀವನದ ಮೇಲೆ ಒಂದು ಸ್ವಲ್ಪವೂ ಆಸೆಯಿರಲಿಲ್ಲ. ಏನಾದರೂ ಮಹಾಯುದ್ಧವಾಗಿಬಿಟ್ಟಿದ್ದರೆ, ನೈರಿಗಳ ಗುಂಡಿನೇಟಿಗೆ ಎದೆಯೊತ್ತಿ ಮುಂದೋಡುತಿದ್ದೆ—ಎನ್ನುವ ಮನೋಭಾವದ ಹೊರಳಾಟದ ಚಿಂತೆಯಲ್ಲೇ ಮಗ್ನನಾಗಿದ್ದೆ.

"ಏಸ್ರೀ..." —ಯಾರೋ ಬೆನ್ನು ತಟ್ಟಿ ಕರೆದಂತಾಯ್ತು. ತಿರುಗಿ ನೋಡಿದೆ. ನಾಲ್ಕು ಹೆಜ್ಜೆ ದೂರದಲ್ಲಿ ವ್ಯಕ್ತಿಯೊಂದು ನಾಲ್ಕಾರು ಕನ್ನಡ ಪತ್ರಿಕೆಗಳನ್ನು ಹಿಡಿದುಕೊಂಡು ನಿಂತುಕೊಂಡಿತ್ತು. 'ಆಂ' ಎಂದು ನಿದ್ದೆಯಿಂದ ಎಚ್ಚೆತ್ತವನಂತೆ ನನ್ನೆರಡು ಕಣ್ಣು ದೃಷ್ಟಿಯನ್ನು ಅವನತ್ತ ಹೊರಳಿಸಿದೆ—ಪ್ರಾಯಃ ನನ್ನಂತೆಯೇ ಊರುಬಿಟ್ಟು ಹಳ್ಳಿಯಿಂದ ಓಡಿಬಂದ ವ್ಯಕ್ತಿಯಂತೆ ನನಗೆ ತೋರಿಬಂದುದರಿಂದ 'ಏನು ಬೇಕು' ಎಂದೆ.

"ಇಲ್ಲಿ....ರಾಜಾ ಪ್ರೆಸ್‌ನಲ್ಲಿ ಕಂಪೊಜಿಟರ್ ಕೆಲಸ ಖಾಲಿಯಿದೆಯಂತಲ್ಲ.... ನಿಮಗೆ ತಿಳಿದಿದೆಯೆ?—ಯೂವಕಡೆಗಿದೆ ಆ ಪ್ರೆಸ್ಸು..." ಆತ ಒಂದೇ ಸವನೆ ಪ್ರಶ್ನಿಸಿದ.

"ಹಲ್ಲೂಂ... ಎಲ್ಲಿಯವರು ನೀವು? ಯಾಕೆ ಈ ಕಡೆ ಬಂದಿರಿ?"

"ಮಂಗಳೂರಿಂದ. ಮೂವತ್ತು ಮೈಲಾಜೆಗೆ. ಎಸ್. ಎಸ್. ಎಲ್. ಸಿ. ಮುಗಿಸಿ ಕೆಲಸ ಹುಡುಕಿದೆ. ಕೊಡಗಿನಲ್ಲೊಂದು ಸಿಕ್ಕಿತು. ನಿನೆಮೂ ಕಂಪೆನೀಲಿ....ಟಿಕೆಟ್ ಕೊಡೋದು ೬೦ ರೂಪಾಯಿ ಸಂಬಳ ಕೊಡುತಿದ್ದರು. ಕೊನೆಗೆ ಯಜಮಾನ ಎಡ್ವರ್ಟೈಸ್‌ಮೆಂಟಿನ ಗಾಡಿ ಡಾಡುವ ತನಕವೂ ಕೆಲಸ ಹೇಳಿದ. ಆಗೋದಿಲ್ಲಾಂದೆ. ಮರುದಿನ ನನ್ನ ಸಂಬಳವನ್ನೆಲ್ಲಾ ಚುಕ್ತಾಮಾಡಿ; ಊರಿಗೆ ಹೊರಡುತ್ತೇನೆ' ಎಂದೆ. ಅತ ಆಯ್ತೆಂದು ಒಂದು ನಲ್ವತ್ತು ರೂಪಾಯಿ ಕೊಟ್ಟ. ನಾನು ಬಸ್‌ಸ್ಟಾಂಡಿನಲ್ಲಿ ಗಾಡಿ ಕಾಯುತಿದ್ದಾಗ, ಇಬ್ಬರು ಪೋಲೀಸರು ಬಂದರು. ನನ್ನನ್ನ ಹಿಡಿದು "ನಿನೆಮೂ ಥಿಯೇಟ್ರಿನ ಹಣ ಕದ್ದು ಬಂದವರು ನೀನೆಯೋ, ಎಲೇ ಪೋರ! ಪಾಕೇಟು ಬಿಟ್ಟಿ ತೋರಿಸುತ್ತಿಯೋ ಅಥವಾ ಸ್ಪೇಶನ್ ಗೆ ಎಳೆದೊಯ್ದು ಬಡಿಯಬೇಕೋ" ಎಂದರು. ನಾನು ಬೆದರಿದೆ. ಅಲ್ಲದೆ ಪೋಲೀಸರಿಗೆ ದುಡ್ಡನ್ನೆಲ್ಲ ಕೊಟ್ಟೆ. ಅನಂತರ ಪೂತಾಡದೆ ಹೊರಬಿದ್ದೆ; ಈ ಜನರ ಸಹವಾಸವೇ ಬೇಡಾಂತ. ಕವಿಯಲ್ಲಿದ್ದ ಚಿನ್ನವೂರಿ ಇತ್ತಲಾಗೆ ಬಂದೆ. ಊರಿಗೆ ಹೋಗಲಿಕ್ಕೆ ನಾಚಿಗೆ....' ಎಂದಾತ ಕವಿಯಲ್ಲಿ ತನ್ನ ಕೈಯನ್ನಿರಿಸಿದ.

"ಪಾಪ" ಎಂದು ನಾನು ಸಂತಾಪದ ನಗುವನ್ನು ನಕ್ಕು "ಈಗ ಎಲ್ಲ ಉಸಕೊಂಡಿದ್ದೀರಿ?" ಎಂದೆ. "ನನಗಿನ್ನೂ ಈ ಊರು ಹೊಸತು. ಎಲ್ಲಿ ನಿಲ್ಲಬೇಕೋ ತಿಳಿಯದು...." ಮುಗ್ಧನಾಗಿ ಅತನೆಂದ. "ಹಾಗಾದರೆ, ನನ್ನ ಜೊತೆಗೇ ಬನ್ನಿ. ನನ್ನ ಹೋಟೆಲಲ್ಲೇ ಊಟಮಾಡುವ. ಉಳಕೊಳ್ಳಲಿಕ್ಕೂ ನೆಸಗೊಂಮು ಚಿಕ್ಕ ರೂಮಿದೆ" ಎಂದೆ.

"ತುಂಬ ಉಪಕಾರವಾಯ್ತು" ಎಂದೆ ನಾತ.

"ನಿಮ್ಮ ಹೆಸರು?"

"ನಾರಾಯಣ ಶಾಸ್ತ್ರಿ..."

ಶಾಸ್ತ್ರಿಗಳಿಗೆ ನನ್ನ ದಾರುಣಕತೆಯನ್ನು ತೋಡಿಕೊಂಡೆ. ಆ ಒಂದು ಗಂಟೆಯಲ್ಲೇ ನಾವಿಬ್ಬರೂ ಜೀವನದ ಗೆಳೆಯರಾದೆವು. ಕತ್ತಲಾದ್ದರಿಂದ ನಾನು ಶಾಸ್ತ್ರಿಗಳನ್ನು ಕರಕೊಂಡು ಕೋಣೆಗೆ ನಡೆದೆ. ರಾತ್ರಿ ಇಬ್ಬರೂ ಊಟ ಮಾಡಿದೆವು, ಹೋಟೆಲ್ ಮಾಲಿಕರಿಗೆ ನಾನು ಶಾಸ್ತ್ರಿಗಳ ಕತೆಯನ್ನು ಹೇಳಿ 'ನನ್ನ ಕೋಣೆಯಲ್ಲೇ ಉಳಿಯುತ್ತಾರೆ' ಎಂದೆ.

ಮರುದಿನ ಬೆಳಿಗ್ಗೆ ನಾವಿಬ್ಬರೂ ಹೊರಟೆವು. ಶಾಸ್ತ್ರಿಯವರು ಪ್ರೆಸ್ಸಿನಲ್ಲಿ ವಿಚಾರಮಾಡಿ ಬರುತ್ತೇನೆಂದರು. ಅಡೀ ತೆಂದು ನಾನೂ ರಾಜಾಪ್ರೆಸ್ಸಿನಿಂದ ಹೊರ ನಿಂತೆ. ಮೂತುಕತೆ ಕೇಳುತಿತ್ತು.

"ನೀವು ಕೊಟ್ಟ ಜಾಹಿರಾತನ್ನು ಕಂಡು ನಾನು ಕೊಡಗಿನಿಂದ ಬಂದಿದ್ದೇನೆ. ದಯವಿಟ್ಟು ನನ್ನನ್ನು ತೆಗೆದುಕೊಳ್ಳಿ. ಪ್ರೆಸ್‌ನಲ್ಲಿ ದುಡಿಯುವ ಲವಲವಿಕೆ ತುಂಬ ಇದೆ. ನಿಮ್ಮಲ್ಲಿ ಕಂಪೊಜಿಟಿಂಗ್ ಕಲಿಯಲು ಬಂದಿದ್ದೇನೆ."

"ಹೂಂ.... ಕೂತುಕೊಳ್ಳಿ. ನಮಗೆ ಬೇಕಾದಷ್ಟು ಜನರು ಈಗಾಗಲೇ ಬಂದು ಸೇರಿದ್ದಾರೆ. ಇನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಇವರ ಟ್ರೈನಿಂಗ್ ಮುಗಿದ ಬಳಿಕ ಕೂಡುವ."

"ಛೇ, ಹಾಗಂದರೆ.... ಅಲ್ಲಿಂದ ಖರ್ಚುಮಾಡಿಕೊಂಡು ಇದ್ದ ಕೆಲಸವನ್ನು ನಿಮ್ಮ ಜಾಹಿರಾತು ನೋಡಿ ಬಿಟ್ಟು ಬಂದಿದ್ದೇನೆ ಏನಾದರೂ ದಯೆ ತೋರಿಸಿರಿ...."

"ಈಗ ಸಾಧ್ಯವಿಲ್ಲವಲ್ಲ, ತೆಗೆದುಕೊಂಡವರ ಬಗ್ಗೇ ಚಿಂತಿಸುತಿದ್ದೇವೆ..." ಎಂಬ ರಾಗ ಮುಗಿಯುವುದರೊಳಗೆ ಶಾಸ್ತ್ರಿಗಳು ಹೊರಬಿದ್ದರು. ನನ್ನನ್ನು ನೋಡುತ್ತಲೇ ಬಾಯನ್ನು ಓರೆಯೋಡಿ, ಹುಬ್ಬನ್ನು ಮೇಲೇರಿಸಿ 'ಹ್ಞೂಂ' ಎಂದರು. ತಿರಸ್ಕಾರದ ನಿಟ್ಟುಸಿರನ್ನು ಬಿಟ್ಟರು. ನಾನು ನನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದೆ.

ಹೀಗೆ ಮೂರು ದಿನಗಳು ಕಳೆದುವು. ನಾನು ನನ್ನ ಆಫೀಸಿನ ಕೆಲಸವನ್ನು ಮುಗಿಸಿ, ರಾತ್ರೆ ಟೈಪ್‌ರೈಟಿಂಗ್ ಶಾಲೆಗೆ ಹೋಗಿ ಬಂದು ಶಾಸ್ತ್ರಿಗಳನ್ನು ಕಾಣುತ್ತಿದ್ದೆ. ಆ ದಿನದ ತನ್ನ ಸಾಹಸವನ್ನವರು ಹೇಳಿ ಮರುದಿನದ ಕಾರ್ಯಕ್ರಮವನ್ನು ತಿಳಿಸುತಿದ್ದರು ಹಾಗೆಯೇ ಇಬ್ಬರೂ ಊಟಕ್ಕೆಳ್ತಿದ್ದೆವು.

ನಾಲ್ಕನೇದಿನ ಸಂಧ್ಯಾಹ್ನ ಊಟವೂ
(೧೧ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ
ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ದರ ಶೇಕಡಾ 5ರಂತೆ. ರೂ. **87-00** 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. **100-00** ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಶೇಕಡಾ 4½ರ ವರೆಗೆ.
ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ
ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು, ಇತ್ಯಾದಿ.
(ಸ್ಥಾಪನೆ: 1920)

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ವಿವಿಧ ಗ್ರಹಗಳು ಹೇಗೆ ಹುಟ್ಟಿಕೊಂಡುವು ಎಂಬುದರ ಬಗ್ಗೆ ಹೊಚ್ಚ ಹೊಸ ಸಿದ್ಧಾಂತವನ್ನು ಖ್ಯಾತನಾಮ ರಶ್ಯನ್ ಲೇಖಕ ಶ್ರೀ ಬೋರಿಸ್ ಲಿವಿನ್ ರವರು ತೋರಿಸಿ ಕೊಟ್ಟಿರುವರು. ಈ ಸಿದ್ಧಾಂತವನ್ನು 'ನವಯುಗ'ದ ವಾಚಕರಿಗೆ ಚಿರಪರಿಚಿತರಾದ ಶ್ರೀ ಎಂ. ರಂಗ ರಾವು ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ

ಳ. ಷ್ಮಿತ್ ಮಾಡಿದ ಸಿದ್ಧಾಂತ

ಪ್ರಾಥಮಿಕ ಶಕ್ತಿ

ಗ್ರಹಗಳ ಗತಿಯಲ್ಲಿರುವ ಕ್ರಮದಿಂದಲೂ, ಅವುಗಳಲ್ಲಿ ಸೇರಿರುವ ಪದಾರ್ಥ ವಿವರಗಳಿಂದಲೂ ಗ್ರಹಗಳ ಜನನಾತ್ಪೂರ್ವ ಸ್ಥಿತಿಯನ್ನು ಊಹಿಸಿಕೊಳ್ಳಬೇಕು.

ಸೂರ್ಯನ ಸುತ್ತಲೂ ಗ್ರಹಗಳೆಲ್ಲವೂ ಒಂದೇ ದಿಕ್ಕಿಗೆ ಪ್ರಯಾಣಿಸುತ್ತಿರುವುದನ್ನು ಗಮನಿಸಿದೆವು. ಅವುಗಳ ಮಾರ್ಗಗಳು ವೃತ್ತಾಕಾರದಲ್ಲಿರುವುದನ್ನೂ ನೋಡಿದೆವು. ಇವುಗಳಿಂದ ಈ ಗ್ರಹಗಳು ತಿಳಿಸಿದ ಪದಾರ್ಥದಿಂದ ಏರ್ಪಟ್ಟವೆಂಬುದು ಸ್ಪಷ್ಟವಾಗುತ್ತದೆ. ಇದು ಧೂಳಿಯಂತೆಯೋ ವಾಯುವಿನಂತೆಯೋ ಇರುವ ಪದಾರ್ಥವಾಗಿದ್ದಿರಬೇಕೆಂದು ಕಾಂಟ್, ಲಾಪ್‌ಲೇಸರು ಊಹಿಸಿದರು. ಗ್ರಹಗಳ ಸಣ್ಣತ್ವಕ್ಕೆ ಕಾರಣೀಭೂತವಾದ "ಆದಿ ಮೇಘ"ದಲ್ಲಿ ಧೂಳಿಯೂ ವಾಯುವೂ ಸೇರಿರಬಹುದೆನ್ನಲು ಆಧಾರವಿದೆ.

ಈ "ಮೇಘವು" ಎಂತಹ ಪರಿಣಾಮವನ್ನುಂಟುಮಾಡಿತೆಂದು ನಿಶ್ಚಯವಾಗಿ ಹೇಳಬೇಕಾದರೆ ತಕ್ಕ ಸಂಶೋಧನೆಗಳು ಇನ್ನೂ ನಡೆಯಬೇಕಾಗಿದೆ. ಆದರೆ ಆ ಪರಿಣಾಮಕ್ಕೆ ಕಾರಣಭೂತವಾದ ಪ್ರಧಾನ ಶಕ್ತಿಗಳನ್ನು ಕುರಿತು ಷ್ಮಿತ್, ಗುರೆವಿಚ್, ಲೆಬೆದೀನ್ಸ್ಕೀ, ಲೆವಿನ್, ಸಫ್ರೊನೊವ್, ಬಿಲ್ಲ್ಮೆ ಮೊದಲಾದ ಸೋವಿಯೆಟ್ ಶಾಸ್ತ್ರಜ್ಞೇತ್ತರು ವಿವರಿಸಿದ್ದಾರೆ. ಸೌರಕೂಟ ನಿರ್ಮಾಣವು ಇಂತಹ ಮೇಘದಿಂದಲೇ ಉಂಟಾಯಿತೆಂದು ಸಿದ್ಧಾಂತೀಕರಿಸಿದ್ದಾರೆ.

ಈ "ಮೇಘ"ದಿಂದ ಗ್ರಹಗಳ ಸಮುದಾಯವು ಉತ್ಪತ್ತಿಯೊಗಲು ಸಹಾಯಕವಾದ ಪ್ರಾಥಮಿಕ ಶಕ್ತಿಗಳಲ್ಲಿ ಮೊದಲನೆಯದು ಗುರುತ್ವಾಕರ್ಷಣೆ, ಎರಡನೆಯದು ಪದಾರ್ಥದ ಬೆಂಬತ್ತಿಕೊಂಡಿರುವ ಜೈತನ್ಯಶಕ್ತಿ. ಹಾಗೂ ಈ ಶಕ್ತಿಯ ಉಷ್ಣರೂಪ.

ಮೇಘಧೂಳೀ ಚಕ್ರದ ಭ್ರಮಣತಲ

"ಮೇಘ"ವು ಒಂದು ವಿಧವಾಗಿ ತಿರುಗುತಿದ್ದರೂ ಅದರಲ್ಲಿ ಸೇರಿದ ಧೂಳೀಕಣಗಳೆಲ್ಲವೂ ಒಂದೇ ಸಮತಲದಲ್ಲಿ ಸೂರ್ಯನ ಸುತ್ತಲೂ ತಿರುಗಲು ಸಾಧ್ಯವಿಲ್ಲ. ಕೆಲವು ಚಿಕ್ಕ ವೃತ್ತಗಳಲ್ಲಿಯೂ, ಮತ್ತೆ ಕೆಲವು ದೊಡ್ಡ ವೃತ್ತಗಳಲ್ಲಿಯೂ, ಇನ್ನೂ ಕೆಲವು ದೀರ್ಘ ವೃತ್ತಗಳಲ್ಲಿಯೂ, ಮೇಲೂ ಕೆಲವೊಂದು "ಮೇಘ"ದ ಪರಿಭ್ರಮಣತಲಕ್ಕೆ ಇಳಿಜಾರಾಗಿಯೂ ತಿರುಗಿದ್ದಿರಬೇಕು. ಆದರೂ ಅವುಗಳೆಲ್ಲದರ ಸಮಷ್ಟಿ ಚಲನೆಯನ್ನು ಎರಡು ವಿಧವಾಗಿ ಭಾಗಿಸಬಹುದು. ಒಂದು, ಎಲ್ಲವೂ ಕೂಡಿ ಒಂದು ಮೇಘವಾಗಿ ಸೂರ್ಯನ ಸುತ್ತೂ ತಿರುಗುವುದರಿಂದ ಏರ್ಪಟ್ಟ ಚಲನೆ; ಎರಡನೆಯದು, ಪ್ರತ್ಯೇಕವಾದ ಕಣಗಳು ಸ್ವತಂತ್ರವಾಗಿ ತಿರುಗುವ ಚಲನೆ

ಸೂಕ್ಷ್ಮವಾದ ಕಣಗಳು ಪ್ರತ್ಯೇಕವಾಗಿ ಚಲಿಸುವಾಗ ಏನಾಗುತ್ತದೆ? ಒಂದು ಕಣವು ಮತ್ತೊಂದು ಕಣವನ್ನು ತಾಗಿದಾಗ ಅದರ ವೇಗವೂ, ಅದು ಕದಲುವ ದಿಕ್ಕೂ ಬದಲಾಯಿಸಿ ಹೋಗುತ್ತದೆ. ಭಾರವಾದ ಕಣಗಳ ನಡುವೆ ತಾಗಿತಾಗಿ ಏಟು ಹೆಚ್ಚಾಗಿದ್ದು, ಅವುಗಳಿಗೆ ಕಡಮೆ "ಸ್ವೇಚ್ಛೆ"ಯುಂಟಾಗುತ್ತದೆ. ಹೆಗುರಾದ ಪದಾರ್ಥಗಳು ಇನ್ನೂ ಹೆಚ್ಚು "ಸ್ವೇಚ್ಛೆ"ಯಿಂದ ಚಲಿಸಿಕೊಳ್ಳುತ್ತವೆ. ಈ ಕಾರಣದಿಂದ ನಾವು ಮೊದಲು ಅಂದುಕೊಂಡ "ಮೇಘ"ದಿಂದ ಭಾರವಾದ ಪದಾರ್ಥವು ಮೇಘವು ಪರಿಭ್ರಮಿಸುವ ಸಮತಲದಲ್ಲಿ ಕೇಂದ್ರೀಕೃತವಾಗುತ್ತದೆ. ಇದು ಸೂರ್ಯನ ಸುತ್ತಲೂ ಒಂದು ವಿಧವಾದ ಚಕ್ರದಂತೆ ಏರ್ಪಡುತ್ತದೆ. ಈ ಸಮತಲವನ್ನು "ಭ್ರಮಣತಲ"ವೆಂದು ಹೇಳಬಹುದು.

ಮೊದಲನೇ ದಶೆ--

ಭ್ರಮಣದೊಳಗೆ 'ಮೇಘವು'ಸಿಕ್ಕಿಕೊಂಡಷ್ಟೂ ಅದರಲ್ಲಿ ಎಂಡು ವಿಧವಾದ ಬದಲಾವಣೆಗಳು ಕೊನೆಸಾಗಿ ಬೇಕು. ಚಿಕ್ಕ ಚಿಕ್ಕ ಕಣಗಳು ಇತರ ಪದಾರ್ಥವನ್ನು ಸೇರಿಸಿಕೊಂಡು ದೊಡ್ಡ ಕಣಗಳಾಗಿ ಮಾರ್ಪಡುವುದು ಒಂದು; ಅಲ್ಲಿ ಕಣಕಣಗಳು ಕೂಡಿ "ಕಣಗಳ ಹುತ್ತು" ಏರ್ಪಡುವುದು ಇನ್ನೊಂದು. ಇದರಲ್ಲಿ ಎರಡನೆಯ ಬದಲಾವಣೆಯೇ ಹೆಚ್ಚಾಗಿ ಸಾಗಿರಬೇಕು ಆದರೆ ಇದು ಕೇವಲ ಮೇಘವು ಸಿಕ್ಕಿಕೊಳ್ಳುವ ವೇಗದ ಮೇಲೆ ಆಧಾರವಾಗಿರುತ್ತದೆ. ಆ ವೇಗವು ಅಷ್ಟೇನೂ ಹೆಚ್ಚಾಗಿಲ್ಲದಾಗ ಅನೇಕ ನೂರು ಮೈಲು ವ್ಯಾಸವಿರುವ ಗೋಳಗಳು ಉಂಟಾಗಲಿಕ್ಕೆ ಹೆಚ್ಚು ಅವಕಾಶವಿದೆ. ಹಾಗಿಲ್ಲದೆ ಮೇಘವು ಅತಿ ವೇಗಕ್ಕೆ ಸಿಕ್ಕಿಕೊಂಡಿದ್ದ ಪಕ್ಷದಲ್ಲಿ ಕಣಗಳ ಮಧ್ಯದಲ್ಲಿರುವ ಅಂತರವು ಅತಿವೇಗವಾಗಿ ತಗ್ಗುತ್ತಾ, ಅವುಗಳ ಮಧ್ಯೆ ಗುರುತ್ವಾಕರ್ಷಣೆ ಹೆಚ್ಚುತ್ತಾ ಸಾಗಿರಬೇಕು; ಆದರೆ ಕಣಗಳ ಪ್ರಮಾಣವು ಅಷ್ಟೇನೂ ಹೆಚ್ಚದು.

ಈ ವಿಧವಾಗಿ ಭ್ರಮಣ ಹೊಂದುವ ಮೇಘವು ಕ್ರಮವಾಗಿ ರೊಟ್ಟಿಗಳಂತೆ ಸಂಕೋಚಗೊಳ್ಳುತ್ತಾ ಹೋಗುತ್ತದೆ. ಈ ಸಂಕೋಚವು ಸಾಕಷ್ಟು ದೂರ ಸಾಗಿದಾಗ, ಇದರ ಮಧ್ಯದಲ್ಲಿಯೂ ಅನೇಕ "ಹುತ್ತು"ಗಳು ಏರ್ಪಟ್ಟಿರಬೇಕು. ಇವುಗಳನ್ನು ಸೂರ್ಯನ ಗುರುತ್ವಾಕರ್ಷಣ ಶಕ್ತಿ ಸೀಳಲು ಪ್ರಯತ್ನಿಸುತ್ತದೆ. ಆದರೆ ಈ "ಹುತ್ತು"ಗಳಲ್ಲಿ ಕೆಲವು ತಮ್ಮೊಳಗಿನ ಕಣ ಕಣಗಳ ಪರಸ್ಪರಾಕರ್ಷಣೆಯ ಬಲದಿಂದ ಸೂರ್ಯನ ಆಕರ್ಷಣೆಯನ್ನು ತಡೆಕೊಳ್ಳಲು ಸಾಧ್ಯವಾಗಿರಬೇಕು ಈ "ಹುತ್ತು"ಗಳು ಮಬ್ಬು ತಿರುಗುವ ದಿಕ್ಕಿಗೇನೇ ತಾವೂ ಸೂರ್ಯನ ಸುತ್ತಲೂ ತಿರುಗಿದುವು. ಪ್ರಾರಂಭದಶೆಯಲ್ಲಿ ಇವು ಕಣಗಳ ಪುಂಜಗಳೇ ಈ ಕಣಗಳ ನಡುವೆ ಪರಸ್ಪರ ತಿಕ್ಕಾಟ ಜೋರಾಗಿ ಸಾಗಿ, ಆ ಮೂಲಕವಾಗಿ ಉಷ್ಣವು ಉತ್ಪತ್ತಿಯಾಗಿರಬೇಕು.

ಪರಮಾಣುಗಳ ನಡುವೆ ತಿಕ್ಕಾಟ ನಡೆದಾಗ ಅವುಗಳ ಚಲನೆಯಿಂದ ವ್ಯಕ್ತವಾಗುವ ಜೈತನ್ಯ ಶಕ್ತಿ ಎಷ್ಟು ಮಾತ್ರಕ್ಕೂ ಬದಲಾವಣೆ ಆಗುವುದಿಲ್ಲ. ಅಂತಹುದೇ ತಿಕ್ಕಾಟವು ಅಣುಗಳ ನಡುವೆ ನಡೆದಾಗ ಅಣುಗಳ ಜೈತನ್ಯ ಶಕ್ತಿಯಲ್ಲಿ ಅತಿ ಸ್ವಲ್ಪ ಭಾಗ ಮಾತ್ರವೇ ಉಷ್ಣವಾಗಿ ಪರಿವರ್ತಿತವಾಗುತ್ತದೆ. ಈ ವಿಧವಾಗಿ ಕಳೆದುಕೊಂಡ ಶಕ್ತಿಯನ್ನು ಅವು ಸೂರ್ಯರಶ್ಮಿಯಿಂದ ಸುಲಭವಾಗಿ ಪಡೆದ ಕೊಳ್ಳಬಲ್ಲವು. ಎರಡು ಪದಾರ್ಥದ ಕಣಗಳ ನಡುವೆ ತಿಕ್ಕಾಟ ಜರುಗಿದಾಗ ಅವರಡರ ಜೈತನ್ಯ ಶಕ್ತಿಯಲ್ಲಿಯೂ ಹೆಚ್ಚು ಭಾಗವು ಉಷ್ಣವಾಗಿ ಪರಿವರ್ತಿಸಿ ಅದು ಆಕಾಶದಲ್ಲಿ ಅಂತರ್ಹಿತವಾಗುತ್ತದೆ.

ಈ ಕಾರಣದಿಂದ ಮೇಲೆ ಹೇಳಿದ "ಹುತ್ತು"ಗಳಲ್ಲಿ ಕಣಗಳ ಮಧ್ಯೆ ಉಂಟಾಗುವ ಘರ್ಷಣೆಯು ಫಲಿತವಾಗಿ, ಜೈತನ್ಯ ಶಕ್ತಿಯು ಬಹಳ ಭಾಗವು ಉಷ್ಣವಾಗಿ ಪರಿವರ್ತಿಸಿ, ಅವುಗಳ ನಡುವೆ ಇರುವ ಅಂತರವು ಕ್ರಮವಾಗಿ ತಗ್ಗಿಬೇಕು. ಇದು ಕಾಲಕ್ರಮದಲ್ಲಿ ಗೋಳ ರೂಪವನ್ನು ಹೊಂದಿರಬೇಕು. ಈ ಗೋಳಗಳ ವ್ಯಾಸಗಳು ನೂರು ಮತ್ತು ಸಾವಿರ ಮೈಲು ನಿಲ್ವಾಗಿದ್ದಿರಬಹುದು.

ಏನಾದರೂ "ಆದಿಮೇಘ"ದಲ್ಲಿ ಏರ್ಪಟ್ಟ ಧೂಳೀ ಚಕ್ರದಲ್ಲಿ ಚಿಕ್ಕ ದೊಡ್ಡ ಅನೇಕ ಗೋಳಗಳು ಏರ್ಪಟ್ಟಿರಬೇಕು. ಇವು ಒಂದಕ್ಕೊಂದು ತಾಗಿ ಸ್ವಲ್ಪವೋ ಪೆಟ್ಟೋ ತುಂಡಾಗುವುದೂ ಅಂತಹ ತುಂಡುಗಳು ಮೇಘದೊಳಗೆ ಇನ್ನೂ ಹುದುಗಿಕೊಂಡಿದ್ದ ಧೂಳಿಯನ್ನು ಸೇರಿಸಿಕೊಂಡು ಮತ್ತೆ ಕೆಲವು ಗೋಳಗಳಾಗಿ ಮಾರ್ಪಡುವುದೂ ನಡೆದಿರಬೇಕು. ಮೊದಲು ಏರ್ಪಟ್ಟ ಗೋಳಗಳು ನೊನಲು ತಮ್ಮ ಪ್ರಮಾಣವನ್ನು ಹೆಚ್ಚಿಸಿಕೊಂಡೇ ಹೋಗಿರಬೇಕು. ತುಂಡುಗಳೂ, ನಿಧಾನವಾಗಿ ಉಂಟಾದುವೂ ಪ್ರಮಾಣದಲ್ಲಿ ಹಿಂದೆ ಳಿದಿರಬೇಕು. ಈ ವಿಧವಾಗಿ "ಆದಿಮೇಘ"ದಲ್ಲಿ ಬೇರೆ ಬೇರೆ ಪ್ರಮಾಣಗಳ ಗೋಳಗಳು ಅನೇಕ ಉಂಟಾಗಿರಬೇಕು.

"ಆದಿಮೇಘ"ದ ಪರಿಣಾಮದಲ್ಲಿ ಇದು ಮೊದಲನೇ ದಶೆ. ಈ ದಶೆಯಲ್ಲಿ ಏರ್ಪಟ್ಟ ಆಕೃತಿಗಳನ್ನು ಗ್ರಹಗಳು ಬಾಲದ ಚುಕ್ಕೆಗಳು ಮೊದಲಾದುವುಗಳ ಎಂದು ರೂಪವೆಂದು ಭಾವಿಸಬಹುದು. ಇವುಗಳಲ್ಲಿ ದೊಡ್ಡವೂ, ಮುಂದೆ ದೊಡ್ಡದಾಗಲುಳ್ಳವೂ ಕಾಲಕ್ರಮದಲ್ಲಿ ಪ್ರಧಾನ ಗ್ರಹಗಳಾಗಿ ಪರಿಣಮಿಸಿದುವು.

ಬೆಳವಣಿಗೆ

ಇವು ಪ್ರಮಾಣದಲ್ಲಿ ಬೆಳೆದಷ್ಟೂ ಗುರುತ್ವಾಕರ್ಷಣೆಯ ಪ್ರಭಾವವನ್ನು ಒಂದರ ಮೇಲೊಂದು ತೋರಿಸುವುದು ವಾಕ್ಯವಸ್ಥೆ, ವಾತಾವರಣ"ಕ್ಕೆ ಸಂಬಂಧಪಟ್ಟ ಪದಾರ್ಥದ ಮೇಲೆಯೂ ತನ್ನ ಬಲ ತೋರಿಸುತ್ತವೆ. ಇಂತಹ ಆಕರ್ಷಣೆಗಳ ಫಲಿತವಾಗಿ ಕೆಲವು ಗೋಳಗಳು ನಡೆ-ಮುನ ತಮ್ಮ ವೃತ್ತಾಕಾರದ ಮಾರ್ಗವನ್ನು ಕಳೆದುಕೊಂಡು, ದೀರ್ಘವೃತ್ತಗಳಾಗಿಯೂ, ಕೆಲವುಗಳೆ ಅತಿ ದೀರ್ಘವೃತ್ತವಾಗಿಯೂ ಮಾರ್ಪಟ್ಟುವು. ಇಂತಹ ಮಾರ್ಪಾಡಿನಿಂದಾಗಿ ಆ ಗೋಳಗಳು ಸೂರ್ಯನಿಗೆ ಅತಿ ಸಮೀಪವಾಗಿ ಹೋಗಿ, ಪ್ರಬಲವಾದ ಸೂರ್ಯನ ಆಕರ್ಷಣೆಗೆ ಗುರಿಯಾಗಿ ಸೂರ್ಯನ ಬಿಸಿಗೆ ಆವಿಯಾಗಿ, ಸೂರ್ಯನ ಸುತ್ತಲೂ ಇರುವ ವಾತಾವರಣಲ್ಲಿ ಲೀನವಾಗಿಯೂ ಹೋದುವು.

ಸಿಂಡ ದಶೆಯಲ್ಲಿರುವ ಗೋಳಗಳು ಮೊದಲು ಇತರ ಪದಾರ್ಥವನ್ನು ತಮ್ಮೊಳಗೆ ಸೇರಿಸಿಕೊಂಡು ತಮ್ಮ ಪ್ರಮಾಣಗಳನ್ನು ಹೆಚ್ಚಿಸಿಕೊಂಡುವು. ಆದರೆ ತುಂಬಾ ದೊಡ್ಡ ಗೋಳಗಳ ಪರಿಂರಗಳಲ್ಲಿ ಪದಾರ್ಥವು ಬೇರೆ ಬೇರೆ "ಹುತ್ತ"ಗಳಾಗಿಯೂ ಸಾಗಿತು. ಈ ವಿಧವಾಗಿ ಉಪಗ್ರಹಗಳು ಉಂಟಾದುವು. ಇವುಗಳಲ್ಲಿ ಕೆಲವು ಕಾಲಕ್ರಮದಲ್ಲಿ ಅಸಲು ಗ್ರಹವನ್ನೇ ಸೇರಿ ಅದರ ಪ್ರಮಾಣವು ಹೆಚ್ಚಲಿಕ್ಕೂ ಸಹಕಾರಿಯಾಗಿರಬಹುದು. ತನ್ನ ಸುತ್ತೂ ಇರುವ ವಾತಾವರಣದೊಳಗಿನಿಂದ ಕಣಗಳನ್ನು ಆಕರ್ಷಿಸುವ ಆವಕಾಶವು ಪೂರ್ತಿಯಾಗಿ ನಿಂತುಹೋದ ಮೇಲೆ ಗ್ರಹವು ಬೆಳೆಯಲು, ಹೊರಗಿನಿಂದ ಬಂದು ಬೀಳುವ ಪದಾರ್ಥ ಜಾಲವೇ ಸಹಾಯಕಾರಿಯಾಯಿತು.

ಈಗ ನಾವು ನೋಡುವ ಗ್ರಹಗಳು ಸುತ್ತಲೂ ಇರುವ "ಆದಿಮೇಘ" ಭಾಗದಿಂದ ಕಣಗಳನ್ನು ಸೇರಿಸಿಕೊಳ್ಳುವ ಪರಿಸ್ಥಿತಿ ನಿಂತುಹೋದುವುಗಳು. ಆದರೆ ಈಗಲೂ ಕೂಡಾ ಬಾಹ್ಯಾಕಾಶದಿಂದ ಉಲ್ಕೆಗಳು

(೦೦ನೇ ಪುಟ ನೋಡಿರಿ)

ತೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ನೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ – ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆ ಗಳೊಂದಿಗೆ---ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು,

ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊಪ್ಪೊರೇಶನ್ ಬೇಂಕು

ತಾನು ತೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು

ನಿಮಗೆ ಸವಿೂಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

ವಿವೇಚನೆ

ವಿಶ್ವವಂದ್ಯ ಕವಿಕುಲಗುರು ಕಾಳಿದಾಸ

ಪ್ರಾಚೀನ ಭಾರತದ ಸತ್ಪ್ರತಿಭೆಗಳಲ್ಲಿ ಅಗ್ರಗಣ್ಯನಾದ ಕಾಳಿದಾಸನು ವಿಶ್ವದಲ್ಲೇ ಆದರಣೀಯನಾಗಿದ್ದಾನೆ. ಆತನನ್ನು ಸ್ಮರಿಸಿಕೊಳ್ಳುವುದು ಭಾರತೀಯ ಸಾಹಿತ್ಯಿಕರ ಸತ್-ಸಂಪ್ರದಾಯವಾಗಿದೆ.

ಶ್ರೀ ವೆಂಕಟರಾಮಾಚಾರ್ಯ, ವಿದ್ವಾನ್.

'ವ್ಯದು ಪದ್ಯ ರಚನೆಯೊಳ್ ಕಾ |
ಳಿದಾಸನುಂ ಗದ್ಯರಚನೆಯೊಳ್
ಬಾಣನು ಮಂ |
ಕದ ಕವಿಗಳೆನಿಸಿ ನೆಗಳ್ದಿ |
ರ್ದುದರಿಂ ಸಕ್ಕವಿಗಳಿರ್ವರೆ ಮಗಳಿ
ವಂಗ್ಯರ್ ॥'
(ರನ್ನಕವಿ)

ಲೌಕಿಕ ಕವಿಗಳಲ್ಲಿ ವಾಲ್ಮೀಕಿ ಮತ್ತು ವ್ಯಾಸರು ಸುಪ್ರಸಿದ್ಧರು. ಅವರು ರಚಿಸಿದ ಕೃತಿರತ್ನಗಳಾದ ರಾಮಾಯಣ, ಹಾಗೂ ಮಹಾಭಾರತಗಳು ಲೋಕಪ್ರಸಿದ್ಧವಾಗಿವೆ. ಆದರೆ, ಅವರು ಪ್ರಾಗೈತಿಹಾಸಿಕ ಕಾಲೀನರು; ಆ ಕೃತಿಗಳಾದರೂ ಕಾಲಕ್ರಮೇಣ ಈಗಿನ ಬೃಹದಾಕಾರವನ್ನು ತಾಳಿದೆ. ಆದುದರಿಂದ ಅವರು ಅಲೌಕಿಕ ಕವಿಗಳೆಂದೂ, ಅವರ ಕೃತಿಗಳು ಅಲೌಕಿಕ ಕೃತಿಗಳೆಂದೂ ಹೇಳುವರು. ಅವರಿಬ್ಬರನ್ನುಳಿದು, ಲೌಕಿಕ ಕವಿಗಳಲ್ಲಿ ಮಹತ್ವದ-ಲೋಕವಿಖ್ಯಾತಿಯು— ಪಟ್ಟವೇರಿದವನು ಕಾಳಿದಾಸನೆಂದರೆ ಅದೇನೂ ಅತಿಶಯೋಕ್ತಿಯಲ್ಲ!

ಈ ಕವಿಕುಲಗುರು ಕಾಳಿದಾಸನ ಕೃತಿಗಳ ಲೋಕದಲ್ಲೆಡೆ ಬಹುಮಾನಿತವಾಗಿವೆ. ಈ ಬಗ್ಗೆ ಅನೇಕ ಸೂಕ್ತಿಗಳು ಕೇಳಿಬರುತ್ತಿವೆ. ಈ ಒರೆಕದ ಮೊದಲಲ್ಲಿ ಅಂತಹ ಕನ್ನಡ ಸೂಕ್ತಿಯೊಂದು ಬರೆಯಲಾಗಿದೆ. 'ಕಾಳಿದಾಸನು ಸತ್ಕವಿ'ಯೆಂದು ಕನ್ನಡದ ಮಹಾಕವಿಗಳೆಲ್ಲೊಬ್ಬನೂ ಕವಿ ಚಕ್ರವರ್ತಿಗಳೆಲ್ಲೊಬ್ಬನೂ ಆದ ರನ್ನನು ನಾರಿದ್ದಾನೆ. 'ವ್ಯದು ಪದ್ಯರಚನೆಯೊಳ್ ಕಾಳಿದಾಸನುಂ' ಅಂತಹ ಕವಿಯೆನಿಸಿ ನೆಗಳ್ದನೆಂದು ಆ ಮಹತಿಸಿ ಉದ್ಗರ್. ಆ ಮಾತು ಸಕ್ಕ ಪಾಗೂ ಸ್ತ್ರಿಯವಾದ ಸೂಕ್ತಿಯೂಗಿದೆ.

ಈತನ ಗ್ರಂಥಗಳ ಅನೇಕಾನೇಕ ಪದ್ಯಗಳನ್ನು ತಮ್ಮ ಕೃತಿಗಳಲ್ಲಿ ಉದಾಹರಣಾರ್ಥವಾಗಿ ವ್ಯಾಚೀನರು ಕೈಗೊಂಡುದು ಭಾರತೀಯರಿಗೆ ತಿಳಿಯದುದಲ್ಲ. ಈ ಕವಿವರ್ಯನ ಗ್ರಂಥಗಳು—ಇತರ ಕವಿ ಕೃತಿಗಳಿಗಿಂತ ಹೆಚ್ಚಿನ ಮಟ್ಟದಲ್ಲಿ—ವಿಶ್ವದ ಅನೇಕ ದೇಶಭಾಷೆಗಳಲ್ಲಿ ಅನುವಾದಿಗಳಿಂದ ಆದೃತವಾಗಿವೆ.

ಕಾಳಿದಾಸ ಮಹಾಕವಿಯು ಸಾಹಿತ್ಯ ಪ್ರಪಂಚದಲ್ಲಿ ಬಹುಮುಖದ ಪ್ರತಿಭಾ—ಸಾಮರ್ಥ್ಯಗಳುಳ್ಳವನೆಂದು ಅವನ ಗ್ರಂಥಗಳ ವೈವಿಧ್ಯ—ವೈಶಿಷ್ಟ್ಯಗಳಿಂದಲೇ ತಿಳಿಯಬರುತ್ತದೆ: ಋತು ಸಂಹಾರದಲ್ಲಿ ಕವಿತೆ ಪ್ರಾಥಮಿಕ ಕೃತಿಯಾಗಿದ್ದಿರಲೆ, ಮೇಘದೂತದಲ್ಲಿ ಅದೊಂದು ಕಾಲ್ಪನಿಕ ವಸ್ತುವಿನಿಂದ ಹೆಣೆದ ಅಮೋಘ ವಿಚಾರ ತರಂಗಗಳು ಕಾಣಬರುತ್ತಿವೆ ರಘುವಂಶ ಕಾವ್ಯವು 'ದುಸ್ತರವಾದ ಸಾಗರ'ದಂತಿದೆಯೆಂದು ಈ ಕವಿವರ್ಯನೇ ಹೇಳಿದ್ದಾನೆ. ಕುಮಾರ ಸಂಭವವು ಶಿವಶಕ್ತಿಗಳ ಸಂಗಮದಿಂದಲೇ ಲೋಕಕ್ಷೇಮದ ಸ್ಥಿರತೆಯೆಂಬುದನ್ನು ಸಾರುತ್ತದೆ. ವಿಕ್ರಮೋರ್ವಶೀಯ ಮೂಲವಿಕಾಗ್ನಿಮಿತ್ರಗಳು ನಾಟಕಭೇದಗಳಲ್ಲಿ ಪರಿಗಣಿತವಾದರೂ, ಶೃಂಗಾರ ಪ್ರವಾಹದ ಒಂದು ಸೆಲೆಯಂತಿರುವುವು. ಇನ್ನುಳಿದ ಅಭಿಜ್ಞಾನ ಶಾಕುಂತಲವು ಲೋಕನಾಟ್ಯತೆಯನ್ನು ಪಡೆದ ಅದೊಂದು ನೂತನ ಕಲಾಪ್ರಪಂಚವಾಗಿದೆ.

ಈ ಕೃತಿಗಳಲ್ಲಿ ಋತುಸಂಹಾರ, ಮೇಘದೂತಗಳು ವರ್ಣಕಕಾವ್ಯಗಳು; ರಘುವಂಶ, ಕುಮಾರಸಂಭವಗಳು ವಸ್ತುಕ ಕಾವ್ಯಗಳು; ಮೂಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯಗಳು ರೂಪಕ ಭೇದಗಳು; ಅಭಿಜ್ಞಾನ ಶಾಕುಂತಲವು ಶ್ಲಾಘ್ಯತಮವಾದ ನಾಟಕವೊಂದು: ಹೀಗೆ ಆರೇಳು ಕೃತಿಗಳಲ್ಲಿ ವಸ್ತು—ವರ್ಣನೆಗಳ ವೈವಿಧ್ಯವು ಗೋಚರಿಸುತ್ತದೆ. ಈ ಕೃತಿಗಳಲ್ಲದೆ ಬೇರೆ ಇವನ ಪೂರ್ಣಕೃತಿಗಳಾಗಿ ಸೂರೆತಿಲ್ಲವಾದರೂ, ಅದೊಂದು ಉದಾಹರಣವನ್ನು ಇಲ್ಲಿ ಹೇಳಬಯಸುವೆನು: ಕ್ಷೇಮೇಂದ್ರನ ಔಚಿತ್ಯವಿಚಾರ ಚರ್ಚೆಯಲ್ಲೂ, ಭೋಜರಾಜನ ಶೃಂಗಾರ ಪ್ರಕಾಶಿಕೆಯಲ್ಲೂ ಇವನು ರಚಿಸಿದುದೆಂಬ ಕುಂತೇಶ್ವರ ದೌತ್ಯದಿಂದ ಉದಾಹರಣವಾಗಿ ಪದ್ಯನೆತ್ತಿದೆ. ಕಾಲನ ಕರಾಳ ದವಡೆಯಲ್ಲಿ ಸಿಕ್ಕಿದ ಈ ಕೃತಿಯು ಇನ್ನೂ ಹುಡುಕಿದರೆ ದೊರೆಯಬಹುದೇನೋ? ಕಾಳಿದಾಸನು ಅದೊಮ್ಮೆ ರಾಜಕೀಯ ಕಾರಣ ಕ್ಕಾಗಿಯೋ ವಿವಾಹ ವಿಚಾರಕ್ಕಾಗಿಯೋ ಕುಂತೇಶ್ವರ ದೌತ್ಯವನ್ನು ವಹಿಸಿದ್ದನೆಂದು ಚಾರಿತ್ರಿಕ ವಿದ್ವಾಂಸರು ಸೂಚಿಸುತ್ತಾರೆ (ಕರ್ನಾಟಕ ಚರಿತ್ರೆಯನ್ನು ತಿನಗಳು ಸಂಸ್ಕೃತ ನಾಟಕ, ಇ.) ಭಾಸ ಮಹಾಕವಿಯ ನಾಟಕಗಳಲ್ಲಿ 'ಯಜ್ಞಫಲ'ವು ಇತ್ತೀಚೆಗೆ ದೊರೆತುದನ್ನು ಇಲ್ಲಿ ಸ್ಮರಿಸಬಹುದು. ಕುಂತೇಶ್ವರ ದೌತ್ಯವು ದೊರೆತಾಗಲೇ ಆ ಬಗ್ಗೆ ಕೂಲಂಕಷ ವಿವೇಚನೆ ಸಾಧ್ಯವೆಂದು ಭಾವಿಸುತ್ತೇವೆ.

ಈ ಕವಿವರ್ಯನ ಕಾಲದೇಶಾದಿ ವಿಚಾರ ಸುಸ ಪರಿಶೀಲಿಸಬೇಕಾಗಿದೆ. ಏಕೆಂದರೆ, ಕವಿಯ ಜೀವಿತದ ಕಾಲಮಾನವು ತಿಳಿದರೇನೇ ಅವನು ಹೇಳಿದ ಕೆಲವೊಂದು ವಿಚಾರಗಳು ನಮಗೆ ಸ್ಪಷ್ಟವಾದಾವು. 'ಕಾಳಿದಾಸನ ಜೀವನ ಕಾಲಗಳ ವಿಷಯವಾಗಿಯೂ ಜಿಜ್ಞಾಸೆ ನಡೆದಿದೆ, ನಡೆಯುತ್ತಿದೆ. ಕೆಲವರು ವಿದ್ವಾಂಸರು ಅವನು ಜನ್ಮದಿಂದ ಬ್ರಾಹ್ಮಣನಾಗಿದ್ದು ಅನಾಥನಾದುದರಿಂದ ಗೊಲ್ಲರೊಡನೆ ಬೆಳೆದು ಬಂದನೆಂದೂ, ಮತ್ತೆ ಕೆಲವರು ಅವನು ಹುಟ್ಟಿನಿಂದಲೆ ಕುರುಬನೆಂದೂ ಅಭಿಪ್ರಾಯಪಡುತ್ತಾರೆ ಇಂತಹ ಸಂದರ್ಭಗಳಲ್ಲಿ ಅಧಾರಗಳು ಖಚಿತವಾಗಿ ದೊರೆಯುವ ವರೆಗೆ ಸ್ವಾರ್ಥಮೂಲವಾದ ಅಭಿಸಂಧಿಯಿಂದ ಹೀಗೆಯೇ ಇರಬೇಕೆಂದು ನಿರ್ಣಯಿಸುವುದು ಉಚಿತವಾಗಿ ತೋರುವುದಿಲ್ಲವೆಂದು ಕನ್ನಡದ ಕವಿವರ್ಯರಾದ ಶ್ರೀ ಕೆ. ವಿ. ಪುಟ್ಟಪ್ಪ, ಅವರು ಬರೆದಿದ್ದಾರೆ (ಕಾಳಿದಾಸ—ಮುನ್ನುಡಿ). ಆದರೂ ವಿಚಾರವಂತರು ಕಲೆತು ಹಾಕಿದವುಗಳಲ್ಲಿ ಉತ್ತಮ ಹಾಗೂ ಬಹಳ ಬೆಲೆಯುಳ್ಳ ಒಂದೆರಡು ಚರ್ಚೆಗಳನ್ನು ನಾವು ಸಂಗ್ರಹಿಸದಿದ್ದರೆ ಈ ಲೇಖವು ಅಪೂರ್ಣವೇ ಆದೀತು. ಈ ಕವಿಯು ಅಗ್ನಿಮಿತ್ರನ ಕಾಲಕ್ಕಿಂತ (ಕ್ರಿ. ಪೂ. ೧೭೦) ಮೇಲೆ—ಗುಪ್ತ ವಂಶದ ಇಮ್ಮಡಿ ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲಕ್ಕಿಂತ ಮೇಲೆ—(ಇಸ್ವಿ ೪೦೫) ಇರಬೇಕೆಂದು ಡಾ. ಎಸ್. ರಾಧಾಕೃಷ್ಣನ್ನರು ಬರೆಯುತ್ತಾರೆ (ಮೇಘದೂತ—ಮುನ್ನುಡಿ). ಗುಪ್ತ ರಾಜರ ಕಾಲವಾನದ ಲೌಕಿಕ ಕೃಮದಂತೆ ಶಾಕುಂತಲ ನಾಟಕದ ಕೊನೆಯಲ್ಲಿ ಬಂದ ಗರ್ಭಿಣಿದಾಯ ವಿಚಾರವಿದೆಯೆಂದು ಶ್ರೀ ಆರ್. ಎಸ್. ದಂಡೇಕರರು ವಿವರಿಸಿದ್ದಾರೆ. (ಡಾ. ಪಿ. ಕೆ. ಗೋಡೆಯವರ ಸಂಭಾವನಾ ಗ್ರಂಥ. ಈ ಕಾಲಮಾನವು ಆದಾಗಲೇ ಬಹುಮಂದಿ ವಿದ್ವಾಂಸರಿಂದ ಸಮ್ಮತವಾಗಿದೆಯೆಂದು ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳು ಹೇಳುತ್ತಾರೆ (ಸಂಸ್ಕೃತ ನಾಟಕ),

ಈ ಮಹಾ ಕವಿಯ ದೇಶವಾವುದೆಂಬ ವಿಷಯದಲ್ಲಿ ಅನೇಕ ವಿವಾದಗಳಿದ್ದರೂ ಕಾಳಿದಾಸನು ಕಾಶ್ಮೀರಿಯನವನೆನ್ನಲು ಹೆಚ್ಚು ಮಟ್ಟಿನ ಆಧಾರಗಳಿವೆಯೆನ್ನುವರು (ಕಾಳಿದಾಸ-ಶ್ರೀ. ಎಂ. ಲಕ್ಷ್ಮೀನಾರಸಿಂಹಯ್ಯ). ಇವನ ಕೃತಿಗಳಲ್ಲಿ ಇತರ ದೇವತಾಸ್ತುತಿಗಳಿಗಿಂತಲೂ ಶಿವಸ್ತುತಿಗಳು ಹೆಚ್ಚು, ಶಿವಕತೆಯೇ ಒಂದು ಕಾವ್ಯದ ವಸ್ತುವಾಗಿದೆ, ಆದುದರಿಂದ ಇವನು ಶೈವನೆನ್ನಲಡ್ಡಿಯಿಲ್ಲ!

ಕಾಳಿದಾಸನ ಕೃತಿಗಳಲ್ಲಿ ಉಪಮೆಯೇ ಹೆಚ್ಚು! 'ಉಪಮಾ ಕಾಳಿದಾಸಸ್ಯ' ಎಂಬೊಂದು ಸೂಕ್ತಿಯಲ್ಲ ಹೇಳಿದೆ. "ಕಾಳಿದಾಸನಿಂದ ತನ್ನ ಕೃತಿಗಳಲ್ಲಿ ಯಾವ ಉಪಮೆಗಳು ಪ್ರಯೋಗಿಸಲ್ಪಟ್ಟವೋ ಅವು ಕೇವಲ ಉಪಮಾ ಎಂದು ಲೆಕ್ಕಿಸಲ್ಪಟ್ಟವೆ. ಇವುಗಳಲ್ಲಿ ಅರವತ್ತಕ್ಕೆ ಹತ್ತಿರದಷ್ಟು ಉಪಮೆಗಳು ಕೇವಲ ರಘುವಂಶವೆಂಬ ಕಾವ್ಯದಲ್ಲಿ ಹೊಂದಿರುತ್ತವೆ..... ಅಭಿಜ್ಞಾನ ಶಾಕುಂತಲವು ಅಂದಚೆಂದದ ಉಪಮೆಗಳಿಗೆ ನಿಧಿಯೂಗಿದೆ. ಇನ್ನು ಕೇವಲ ಉಪಮೆಗಳಾದರೂ ಮಹಾಕವಿಯ ಉಪಮಾಚಿತ್ರಣದ ಕೌಶಲ್ಯವು ಒಂದೊಂದು ವಿಶಿಷ್ಟ ರೂಪವನ್ನು ಕಳೆದಿರುವುದು' ಎಂದು ಡಾ. ರಸಿಕವಿಹಾರಿಯವರು ಬರೆಯುವರು (ಶರಣ ಸಾಹಿತ್ಯದಲ್ಲಿ ಇದರ ಅನುವಾದ ಪ್ರಕಟವಾಗಿದೆ). ಪರಂತು, ಕಾಳಿದಾಸನ ಉಪಮೆಗಳಲ್ಲಿ ಪ್ರಾಕೃತಿಕ ಸೌಂದರ್ಯವನ್ನು ಸೂಚಿಸುವವುಗಳು ಹೆಚ್ಚು ಇವೆಯೆಂದು ತಿಳಿಯುತ್ತದೆ (ಶರಣ ಸಾಹಿತ್ಯ—೧೯೬೮ ಆಕ್ಟೋಬರ್ ಸಂಚಿಕೆ).

ಪ್ರತಿಯೊಂದು ಕಾವ್ಯ— ನಾಟಕಗಳಲ್ಲಿ ಕತೆ, ಪಾತ್ರ, ವರ್ಣನೆ, ಸೂಕ್ತಿಗಳೆಂಬ ನಾಲ್ಕು ವಿಭಾಗಗಳಿವೆ. ಕತೆಯು ಕಾಲ್ಪನಿಕ ಹಾಗೂ ಪೌರಾಣಿಕವೆಂದೂ, ಚಾರಿತ್ರಿಕವೆಂದೂ ಇಬ್ಬಗೆಯಲ್ಲಿದೆ. ಈ ಮಹಾಕವಿಯ ಕೃತಿಗಳಲ್ಲಿ ಕೇವಲ ಚಾರಿತ್ರಿಕ ವಸ್ತುವುಳ್ಳದು ಇಲ್ಲವಾದರೂ, ಮೂಲವಿಕಾಗ್ನಿ ಮಿತ್ರವು ಚಾರಿತ್ರಿಕ ಸಂಬಂಧವುಳ್ಳ ಕೃತಿಯಾಗಿದೆ. ಇನ್ನುಳಿದ ವಿಕ್ರಮೋರ್ವಶೀಯ, ಅಭಿಜ್ಞಾನ ಶಾಕುಂತಲಗಳೂ; ರಘುವಂಶ, ಕುಮಾರ ಸಂಭವ ಕಾವ್ಯಗಳೂ ಪೌರಾಣಿಕವರ್ಗಕ್ಕೆ ಸೇರಿವೆ. ಋತು ಸಂಹಾರವು ಒಂದು ವರ್ಷದಲ್ಲಿ ಬರುವ ಷಡ್ಋತುಗಳ ವರ್ಣನೆಯಾದರೆ, ಮೇಘದೂತವು ವರ್ಷಾದಿಯಲ್ಲಿ ತನ್ನ ಪ್ರೇಯಸಿಗೆ ಮೇಘದೂತನ ಮೂಲಕ ಕಳುಹಿದ ಸಂದೇಶವೆಂಬ ಕೇವಲ ಕಾಲ್ಪನಿಕ ವಸ್ತುವಾಗಿದೆ. ಈ ಕವಿಯು ಪೌರಾಣಿಕ ಕತೆಗಳನ್ನು ಮೂಲದಿಂದ ಆಧರಿಸಿದ್ದರೂ, ಆಯಾ ಕೃತಿಗಳ ವೈಶಿಷ್ಟ್ಯ, ಹಾಗೂ ವಿಸ್ತಾರೀ ಕರಣಕ್ಕಾಗಿ ಹಿಗಲುವ ಪಾತ್ರಗಳನ್ನು—ಕಥಾಂಶಗಳಂತೆ—ಕಲ್ಪಿಸಿಕೊಂಡಿದ್ದಾನೆ. ಇಂತಹ ಉತ್ತಮ ಕಲ್ಪನೆಗಳು ಒಂದೆರಡಲ್ಲ ಹಲವಾರಿವೆ. ಈ ಕಲ್ಪನೆಗಳಿಂದ ಕವಿಯು ಚಿತ್ರಿಸಿದ ಪಾತ್ರಕ್ಕೆ ಮೆರಗು ಬಂದಿದೆ. ಇವೆಲ್ಲವುಗಳನ್ನು ಆತನ ಕಾವ್ಯಪಠನ—ಮನನಗಳಿಂದಲೇ ನಮಗೆ ತಿಳಿಯಬೇಕು.

(ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನಲ್ಲಿ ಕಾಳಿದಾಸ ಜಯಂತಿಯಲ್ಲಿ ನೂಡಿದ ಭಾಷಣದಿಂದ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಟುಕ್-ಪೋಸ್ಟ್ ನೂಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ನಿನುಗೆ ಗೊತ್ತೆ?

ಸಂಪತ್ತಿನ ಮಳೆ ಇಲ್ಲಿ ಸುರಿಯುತ್ತಿದೆ!

ತಮ್ಮಲ್ಲಿ ಸುರಿಯುತ್ತಿರುವ ಸಾಂಪತ್ತಿಕ ವರ್ಷದ ಪ್ರವಾಹದಲ್ಲಿ ಜರ್ಮನರು ಕೊಚ್ಚಿ ಹೋಗುತಿದ್ದಾರೆ; ಆದರೂ ಈ ಪ್ರವಾಹವನ್ನು ಇನ್ನೊಂದು ದಾರಿಯಲ್ಲಿ ಹರಿಯಗೊಡಲು ಅವರು ಸಿದ್ದರಿಲ್ಲ!

ಗೋರಾರಿಂದ ಸಂಗ್ರಹಿತ.

ಕಳೆದ ಮಹಾಯುದ್ಧಕ್ಕೆ ಒಂದುವಾರ ಮೊದಲು ರಣೋತ್ಸಾಹದಿಂದ ಜರ್ಮನಿ ಉನ್ಮತ್ತವಾಗಿತ್ತು. ೧೯೫೧ರಲ್ಲಿ ತನ್ನ ಪಾದಗಳ ಮೇಲೆ ನಿಂತುಕೊಳ್ಳಲು ಸಶಕ್ತವಾದ ಜರ್ಮನಿಯು ೧೯೫೬ರಲ್ಲಿ ದ್ರುಕಗತಿಯಿಂದ ಮುಂದುವರಿಯುತಿತ್ತು. ೧೯೬೦ರಲ್ಲಿ ಇದರ ಪ್ರಗತಿಯನ್ನು ಕಂಡು ಇನ್ನು ಮುಂದೆ ಅದು ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಹುಟ್ಟುವಂತಾಗಿದೆ.

ಒಂದು ದೇಶದ ಇತಿಹಾಸದಲ್ಲಿ ೨೦—೨೫ ವರ್ಷಗಳು ಬಹು ದೀರ್ಘಾವಧಿಯೆನ್ನುವಂತಿಲ್ಲ. ಆದರೆ, ಇದೇ ಅಲ್ಪ ಕಾಲಾವಧಿಯಲ್ಲಿ ಯುದ್ಧಕ್ಕೆ ಮೊದಲಿನ ಅಪರಿಮಿತ ರಣತಯೂರಿ, ಯುದ್ಧ ಕಾಲದ ಮರಣ ಮಾರಣ ಮತ್ತು ವಿನಾಶ—ಹಾಗೂ ಈಗ, ಯುದ್ಧಾನಂತರ ನವನಿರ್ಮಾಣ ಹಾಗೂ ವಿಕಾಸವನ್ನು ಕಂಡರೆ, ವಿಸ್ಮಯ ಚಕಿತರಾಗದವರಿಲ್ಲವೆನ್ನಬಹುದು.

ವಿಕಾಸದ ಪ್ರಾರಂಭಿಕ ಮೆಟ್ಟಿಲುಗಳನ್ನೂ ಏರದಿರುವ ಒಂದು ರಾಜ್ಯದ ನಾಗರಿಕನಿಗೆ ಜರ್ಮನಿಯ ವಿಕಾಸದ ಪರಾಕಾಷ್ಠೆಯನ್ನು ನೋಡುವಾಗ ಆಶ್ಚರ್ಯವೆನಿಸುವುದು ಸಹಜವೇ. ನಾವಿಂದು, 'ನಮಗೆ ಸಹಾಯಮಾಡಿ' ನಮಗೆ ಡಾಲರುಗಳನ್ನು ಒದಗಿಸಿರಿ; ನಮಗೆ ಪೌಂಡ್ ಪ್ರದಾನಿಸಿರಿ, ಜರ್ಮನಿನ ವರ್ಕ್ ನೀಡಿರಿ" ಎಂಬ ಮುಂದಾಗಿ ಹೇಳತ್ತ ಹೆರವರ ಮುಂದೆ ಕೈಚಾಚುತ್ತೀವೆ. ಆದರೆ, ಜರ್ಮನ್ ರಾಷ್ಟ್ರವು ಕೈಮುಗಿಯುತ್ತ, 'ದಯಮಾಡಿ, ನಮ್ಮ ದೇಶಕ್ಕೆ ಸುರಿದ ನಿಮ್ಮ ಸಂಪತ್ತಿಯನ್ನು ಹಿಂತೆಗೆದು ಕೊಳ್ಳಿರಿ" ಎಂದು ಪ್ರಾರ್ಥಿಸುತ್ತಿದೆ.

ಪಶ್ಚಿಮ ಜರ್ಮನಿಯ ಡೆಸ್ಸಲ್ ಡಾರ್ಫಿನ ಒಂದು ಪತ್ರಿಕೆಯಲ್ಲಿನ್ನೆ ವ್ಯಂಗ್ಯ ಚಿತ್ರವೊಂದು ಪ್ರಕಟಗೊಂಡಿತು. ಇದರಲ್ಲೊಂದು ಜರ್ಮನ್ ಬೇಂಕಿನ ದೃಶ್ಯವಿತ್ತು. ಬೇಂಕಿನವರು ಬಾಗಿಲುಗಳನ್ನು ಮುಚ್ಚಿಕೊಂಡಿರುವರು; ಆದರೆ, ಜನರು ಕನ್ನಡಿಯನ್ನೊಡೆದು ತಮ್ಮ ಹಣವನ್ನು ಒಳಗಡೆ ಸುರಿಯುತಿದ್ದಾರೆ. ಬೇಂಕಿನ ಕೋಶಾಧಿಕಾರಿಯು ನೋಟುಗಳ ಭಾರತಾಳಲಾರದೆ, 'ತ್ರಾಹಿ ತ್ರಾಹಿ' ಎಂದು ಕೂಗಾಡುತ್ತಿದ್ದಾರೆ. ಬೇಂಕಿನ ಪ್ರಾಂಗಣದಲ್ಲಿ ಹಿಡಿಸೂಡಿಯನ್ನು ಹಿಡಿದು ಕೊಂಡು ನೋಟುಗಳನ್ನು ರಾಶಿಯೆಡ್ಡುತಿದ್ದಾರೆ. ಜರ್ಮನಿಯ ಆರ್ಥಿಕ ಸಂಪತ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಲು ಇದಕ್ಕಿಂತ ಹೆಚ್ಚಿನ ಸಜೀವ ಚಿತ್ರ ಬೇರೊಂದಿದೆಯೆನ್ನುವಂತಿಲ್ಲ.

ಜರ್ಮನಿಯಲ್ಲಿ ಮತ್ರವಲ್ಲ, ಸ್ವಿಜರ್‌ಲೆಂಡ್ ಮತ್ತು ಕೆಲವಂಶ ಇಂಗ್ಲೆಂಡಿನಲ್ಲಿಯೂ ಇದೇ ಪರಿಸ್ಥಿತಿಯಿದೆ. ಇಲ್ಲಿಗೆ ಈಗ ಬಾಹ್ಯಸಂಪತ್ತು ರಾಶೀರಾಶಿಯಾಗಿ ಬರುತ್ತಿದೆ.

ಆಯೂತಕ್ಕಿಂತ ನಿರ್ಯಾತವು ಅಧಿಕವಾಗಿರುವ ಮತ್ತು ಅನ್ಯದೇಶಗಳಿಗಿಂತ ಹೆಚ್ಚು ಬಡ್ಡಿದೊರೆಯುವ ಕಾರಣಗಳಿಂದ ವಿದೇಶೀ ಧನವು ಜರ್ಮನಿಯಿಂದ ಆಕರ್ಷಿತವಾಗಿ ಅಲ್ಲಿ ಒಟ್ಟುಸೇರುತ್ತಿದೆ. ಇಂದು ಜರ್ಮನಿಯ ಖಜಾನೆಯು ನೂರಾತ್ತು ಅರಬ ರೂಪಾಯಿಗಳ ವಿದೇಶೀ ಮುದ್ರೆ ಮತ್ತು ಚಿನ್ನಗಳಿಂದ ಕೂಡಿದೆ. ಹದಿನೈದು ವರ್ಷಗಳಿಗೆ ಮೊದಲು ಕೇರಿ ಕೇರಿಗಳಲ್ಲಿ ಮನೆಗಳ ಭಗ್ನಾವಶೇಷಗಳಿದ್ದ, ಕಾರ್ಖಾನೆಗಳ ಒಂಬಲ್ಲ ಭಾಗ ಕೂಡಾ ನಿಶ್ಶೇಷವಾಗಿದ್ದ. ಹೆಚ್ಚಿನ ವಯಸ್ಕ ನಾಗರಿಕರು ಮೃತ್ಯುಮುಖರಾಗಿದ್ದ ಜರ್ಮನಿಯು ಇಂದು ಸಾಧಿಸಿದ ಪ್ರಗತಿಯನ್ನು ಕಾಣುವಾಗ, ಮೂಗಿಗೆ ಬೆರಳೇರಿಸಲೇ ಬೇಕಾಗುತ್ತದೆ.

ಸ್ವಯಂ ಜರ್ಮನ್ನನೊಬ್ಬನೇ ಹೀಗೆ ಹೇಳುತ್ತಾನೆ: "ಯುದ್ಧದಲ್ಲಿ ಒದಗಿದ ವಿಪನ್ನಾವಸ್ಥೆಯೇ ನಮ್ಮ ಇಂತಹ ಅದ್ಭುತ ಪ್ರಗತಿಗೆ ಕಾರಣವಾಗಿದೆ. ಜನ ದಟ್ಟಣಿಸಿದ್ದ ದೊಡ್ಡ ದೊಡ್ಡ ನಗರಗಳ ಹಳೆಯ ಮನೆಗಳೂ ಶಕ್ತುಗಳ ಬಾಂಬಿಗೆ ಆಹುತಿಯಾದುವು. ಅವುಗಳ ಸ್ಥಾನದಲ್ಲಿ ನಾವು ಹೊಸ ಕಟ್ಟಡಗಳನ್ನೂ ನಗರಗಳನ್ನೂ ನಿರ್ಮಿಸಿದೆವು ನೂರಾರು ವರ್ಷಗಳ ಹಿಂದಿನ ಕಾರಖಾನೆಗಳು ನಷ್ಟಗೊಂಡುವು; ಉಳಿದವುಗಳನ್ನೂ ವಿಜೇತರು ದೋಚಿ ಬಿಟ್ಟರು. ನಾವು ನಿತ್ಯ ನೂತನ ಯಂತ್ರಗಳಿರುವ ನವೀನ ಕಾರಖಾನೆಗಳನ್ನು ಸ್ಥಾಪಿಸಿದೆವು". ಇವೆಲ್ಲವೂ ಅತಿ ಸರಳ ರೀತಿಯಲ್ಲಿ ಆಗಲಿಲ್ಲವೆಂಬುದೇನೋ ನಿಜವೆ; ಆದರೆ, ಈ ಒಂದು ಅಭಿಮಾನದ ವರ್ತನೆಯಲ್ಲಿ ಜರ್ಮನರ ಕೆಚ್ಚೆದೆ ಹಾಗೂ ಕಾರ್ಯಕರ್ಮಣ್ಯತೆಗಳ ಮೆರಗು ಹೊಂಚು ಹಾಕುತ್ತಿದೆ.

ಜರ್ಮನಿಯನ್ನು ಪರ್ಯಾಯವಾಗಿ ಕರ್ಮಣ್ಯತೆಯೆಂದೂ ಹೆಸರಿಸಬಹುದು. ನವ ನಿರ್ಮಾಣಕ್ಕೆ ಬೇಕಾದ ಅದಮ್ಯ ಉತ್ಸಾಹ, ಅನಂತ ಸಾಮರ್ಥ್ಯಗಳು ಇಲ್ಲಿವೆ ಯಾವುದೇ ಒಂದು ಮೂಲೆಯಲ್ಲಿ ಕೆಲವು ಮೈಲು ಯಾತ್ರೆ ಕೈಗೊಳ್ಳಿರಿ; ಆಗ ಹಲವು ರಸ್ತೆಗಳು ಅಗಲವಾಗುತ್ತಿರುವುದು; ಸಂಕಗಳು ಕಟ್ಟಲ್ಪಡುತ್ತಿರುವುದು, ಕೆಲವು ಹೊಸ ಕಾರಖಾನೆಗಳ ರಚನೆಗಳು ಆಗುತ್ತಿರುವುದು ನಮಗೆ ತೋರಿಬರುತ್ತವೆ. ಹೋರಾಟದ ಅನಾಹುತಗಳ ಕಾರುಹ್ಯ ಕೆಲವೆಡೆ ನಮಗೆ ಕಾಣುತ್ತವೆಯಾದರೂ ಇವುಗಳ ಸಂಖ್ಯೆ ತೀರ ಅತ್ಯಲ್ಪ. ಈಗಲಾದರೋ ಹೊಚ್ಚ ಹೊಸ ರಸ್ತೆಗಳು, ಹೊಸ ಭವನಗಳು, ಇವುಗಳಲ್ಲಿ ನೂತನ ವಸ್ತುಗಳಿಂದ ಅಲಂಕೃತವಾದ ಅಂಗಡಿಗಳು ಸರ್ವತ್ರ ದೃಗ್ಗೋಚರವಾಗುವುವು. ನೀರಿನಲ್ಲಿ, ಅಲಾಗೆದ್ದೆ ಹೆಚ್ಚುವ ಯಂತ್ರಗಳ ವರೆಗಿನ ಗೃಹೋಪಯೋಗಿ ಸಾಧನಗ

(ಅನೇ ಪುಟ ನೋಡಿರಿ)

ಕ್ಷಯರೋಗಕ್ಕೆ ಗೃಹಚಿಕಿತ್ಸೆ

ಸಾಮಾನ್ಯವಾಗಿ ಊಹಿಸಲಾಗಿರುವಂತೆ ಕ್ಷಯರೋಗಿಯು ಅಪಾಯಕಾರಿ ವ್ಯಕ್ತಿಯೇನಲ್ಲ. ಅವನ ಸಂಪರ್ಕದಲ್ಲಿರುವವರಿಗೆ ರೋಗವು ತಗಲಲು ಅವನ ಕಫವೇ (ಉಗುಳು) ಮುಖ್ಯ ಕಾರಣ. ಗೃಹಚಿಕಿತ್ಸೆಯು ಅಪಾಯರಹಿತವಾಗಿರಬೇಕಾದರೆ, ಕ್ಷಯರೋಗಿಗಳ ಕಫ (ಉಗುಳು)ವನ್ನು ಸರಿಯಾಗಿ ಸಂಗ್ರಹಿಸಿ ನಿರ್ಬಾಧಿತಗೊಳಿಸಬೇಕು.

ರೋಗಿಯು—

1. ಕೆಮ್ಮುವಾಗ ಬಾಯಿಯನ್ನು ಮರೆಮಾಡಿಕೊಳ್ಳಬೇಕು.
2. ಉಗುಳನ್ನು ಮುಚ್ಚಿದ ಪಾತ್ರೆ ಅಥವಾ ಪೀಕದಾನಿಯಲ್ಲಿ ಸಂಗ್ರಹಿಸಬೇಕು.
3. ಉಗುಳನ್ನು ಜೆಲ್ಲುವ ಅಥವಾ ಸುಡುವ ಮೊದಲು 10 ಮಿನಿಟುಗಳ ಸಮಯ ಕುದಿಸಬೇಕು.

ಈ ಸೂಚನೆಗಳನ್ನು ಭಾರತದ ಪ್ರತಿಯೊಂದು ಮನೆಯ ಗಮನಕ್ಕೆ ತರಬೇಕು. ಅದಕ್ಕಾಗಿ ವಿಶಾಲವಾಗಿ ಆರೋಗ್ಯ ನಿಯಮಗಳನ್ನು ಬೋಧಿಸಬೇಕು. ಟಿ. ಬಿ. ಮುದ್ರೆಗಳ ಪ್ರಚಾರವು ಅಂತಹ ಪ್ರಚಾರದೊಂದು ಅಂಗ.



ಟಿ. ಬಿ. ಮುದ್ರೆಗಳನ್ನು ಕೊಳ್ಳಿರಿ ಕ್ಷಯರೋಗದೊಡನೆ ಹೋರಾಡಲು ಸಹಾಯ ಮಾಡಿರಿ.

ಒಂದು ಟಿ. ಬಿ. ಮುದ್ರೆಯ ಬೆಲೆ ಬರೇ ಹತ್ತು ನಯೇಪೈಸೆಗಳು.

ಮುದ್ರೆಗಳು ಸಿಗುವ ಸ್ಥಳಗಳು— (1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಗವರ್ನಮೆಂಟ್ ಟಿ. ಬಿ. ಸೆನಿಟೋರಿಯಂ, ಓಲ್ಡ್ ಮದ್ರಾಸ್ ರೋಡು, ಬೆಂಗಳೂರು-೩. (2) ಮಹಿಳಾ ಮಂಡಲ, ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚಾ ಕಮಿಟಿ, ಕಲ್ಯಾಣ ಸ್ಪೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ. (3) ಗೌರವ ಕಾರ್ಯದರ್ಶಿ ಡಿ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (4) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (5) ಅಧ್ಯಕ್ಷರುಗಳು ಮಹಿಳಾ ಸಮಾಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಆಳಿಯೂರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಟಿ. ಬಿ. ಮುದ್ರೆ ಮಾರಾಟ ಚಳವಳಿ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:

Messrs. Morarjee Goculdas Spinning & Weaving Co. Ltd., Bombay.

ಮಾನವನಿಂದ ಮಾನವನೇ ದೂರವಿರುವನೆಲ್ಲದೆ ಪರಮಾತ್ಮನಲ್ಲ. ಮಾನವನು ಮಾಡಿವ ನಾನಾ ಪ್ರಾರ್ಥನೆಯನ್ನು ಪರಮಾತ್ಮ ಕೇಳುತ್ತಾನೆ; ಆದರೆ ಗಟ್ಟಿಯಾಗಿ ಮಾಡಿದ ಪ್ರಾರ್ಥನೆಯನ್ನು ಮಾನವನು ಕೇಳದಿರುವುದುಂಟು?

ನವಯುಗ

ವರುಷ	ಉಡುಪಿ	ವಾರ
೪೦	೮-೧೨-೧೯೬೦	೧೫

ಬೆಲೆಯಲ್ಲಿ ನಿಯಂತ್ರಣ

ದೇಶವು ಉನ್ನತೀಕರಣಕ್ಕಾಗಿ ಯೋಜನೆಗಳನ್ನು ಕಾರ್ಯಗತ ಮಾಡುತ್ತಿರುವಂತೆಯೇ ರಾಷ್ಟ್ರೀಯ ಆದಾಯವು ಹೆಚ್ಚುತ್ತ ಹೋಗುತ್ತಿರುವಂತೆಯೇ ಸಾಮಾನ್ಯ ಜನತೆಯ ಜೀವನ ಕುಸಿಯುತ್ತ ಬರುತ್ತಿರುವುದು ಶೋಭನೀಯವೆನಿಸುವುದಿಲ್ಲ. ಜನತೆಯ ದೈನಂದಿನ ಆವಶ್ಯಕ ಪದಾರ್ಥಗಳ ಬೆಲೆಯೇರುತ್ತಿರುವುದರಿಂದ, ಆದೇ ಪ್ರಮಾಣದಲ್ಲಿ ಅವರ ಆದಾಯವು ಹೆಚ್ಚುವುದು ಅಸಾಧ್ಯವಾದುದರಿಂದ, ಜನತೆಯ ಸ್ಥಿತಿ ನಿಶ್ಚಯವಾಗಿಯೂ ಶೋಚನೀಯವಾಗುತ್ತಿದೆ. ಇದನ್ನು ತಡೆಗಟ್ಟಲಿರುವ ಏಕಮಾತ್ರ ಉಪಾಯವೆಂದರೆ, ಬೆಲೆಗಳನ್ನು ನಿಯಂತ್ರಿಸುವುದೇ ಆಗಿದೆ. ಆಹಾರ ಪದಾರ್ಥಗಳ ಬೆಲೆಯು ಮಿತಿಮೀರಿ ಏರುತ್ತಿರುವುದು ಜನತೆಯ ಜೀವನ ವೆಚ್ಚವು ಹೆಚ್ಚುವುದಕ್ಕೆ ಕಾರಣವಾಗಿದೆ. ಈ ಹೆಚ್ಚಿನ ವೆಚ್ಚದ ಬಾಯಿ ಕೂಡಿಸುವುದು ಜೀವನವಿಂದ ಸಾಧ್ಯವಿರುವುದಿಲ್ಲ. ನಿಯತಿತ ಪ್ರಮಾಣದ ವೇತನವನ್ನು ಪಡೆಯುವ ನೌಕರರು ಇದರಿಂದ ತಬ್ಬಿಬ್ಬಾದರೆ, ತೀರ ಬಡವರಾಗಿ ಕೂಲಿ-ನಾಲಿ ಮಾಡುವವರು ಶೋಚನೀಯ ರೀತಿಯಲ್ಲಿ ಸಿಲುಕಿ ಮಾನವೇಕಾಗುತ್ತದೆ.

ಭಾರತವಂತಹ ಪ್ರಗತಿಪರಗಾಮಿ ರಾಷ್ಟ್ರವು ಹಲವಾರು ಯೋಜನೆಗಳನ್ನು ಹಣ ತೊಡಗಿಸಿರುವಾಗ, ಬೆಲೆಗಳಲ್ಲೇರಿಕೆಯು ಅಭಿವೃದ್ಧಿಯ ದ್ಯೋತಕವೆನ್ನುವ ಹುಮ್ಮಸ್ಸಾದರೂ ಜನತೆಯಲ್ಲಿ ಕೊಳ್ಳುವ ಶಕ್ತಿಗೂ ಸಿಲುಕದಂತಿದೆ. ಏರುವುದು ಅನಿವಾರ್ಯವೇ ಆಗಿದೆ. ಇತ್ತೀಚೆಗೆ ಸಂಪು ಹೊಡಿದ ಕೇಂದ್ರ ಸರಕಾರಿ ನೌಕರರಾದರೂ ಕಮ್ಮಿ ಕೃತ್ಯಕ್ಕೆ ಆಧಾರವಾಗಿಟ್ಟುಕೊಂಡ ಕಾರಣಗಳಲ್ಲಿ ಇದೂ ಒಂದಾಗಿದೆ. ಸರಕಾರವು ಯೋಜನೆಗಳನ್ನು ಸ್ಥೈರ್ಯ ಕಾರ್ಯಗತ ಮಾಡುವುದರಿಂದ ಪ್ರಯೋಜನವಿಲ್ಲ; ಈ ಯೋಜನೆಗಳು ಯಶಸ್ವಿಯಾಗಿ ಜನತೆಯ ಜೀವನವನ್ನು ಸುಧಾರಿಸಬೇಕು. ಜನತೆಯೆಂದರೆ, ಎಲ್ಲ ನಾಗರಿಕರೂ ಬರುತ್ತಾರೆ. ಯಾವುದೇ ಒಂದೆರಡು ವರ್ಗಗಳ ಹಿತದೃಷ್ಟಿಯಿಂದ ಸರಕಾರ ಕೆಲಸ ಮಾಡುವಂತಿಲ್ಲ; ತಾವು ಕೈಗೊಳ್ಳುವ ಯೋಜನೆಯು ಯಶಸ್ವಿಯಾಗಬೇಕಾದರೆ, ಆದಕ್ಕೆ ಸರ್ವರ ಸಹಕಾರ—ಸಹಾನುಭೂತಿಗಳು ಅತ್ಯವಶ್ಯ. ಇವಿಲ್ಲದ ಯೋಜನೆಗಳು ಏಶ್ವಾಸಾರ್ಹವೆನಿಸಲಾರವು. ಮಾನವನೆಯ ಸಂಚವಾರ್ಷಿಕ ಯೋಜನೆಯ ಬಗ್ಗೆ ನೈಸೂರು ವಿಧಾನಸಭೆಯಲ್ಲಿ ಚರ್ಚೆ ನಡೆದಾಗ, ಶ್ರೀ ಕ್ಷಿಮಲ್ಲಾರಾಧ್ಯರು ಈ ವಿಚಾರವನ್ನು ಸ್ಪಷ್ಟೀಕರಿಸಿದ್ದಾರೆ. ಬೆಲೆಯೇರಿಕೆಯನ್ನು ತಡೆಯದೆ ಹೋದರೆ ಯೋಜನೆಗಳೆಲ್ಲವೂ ವ್ಯರ್ಥವಾಗುವವೆಂದು ಅವರು ಎಚ್ಚರಿಸಿದ್ದಾರೆ. ಬೆಲೆಯೇರುವುದಕ್ಕೆ ಹಲವಾರು ಕಾರಣಗಳಿರಬಹುದು. ಉತ್ಪಾದನೆಯು ಕಡಿಮೆಯಾಗಿರುವುದು; ಜನತೆಯಲ್ಲಿ ಕೊಳ್ಳುವ ಶಕ್ತಿ ಅಧಿಕವಾಗಿರುವುದೂ ಇವುಗಳಲ್ಲಿ ಸೇರುತ್ತವೆ. ಆದರೆ, ಎರಡನೆಯದು ನಮ್ಮಲ್ಲಿ ಘಟಿಸಲಿಲ್ಲವೆಂಬುದಕ್ಕೆತ್ತಿ ಪ್ರತ್ಯಕ್ಷಾನುಭವವೇ ಸಾಕ್ಷಿ. ಉತ್ಪಾದನೆಯು ಅಂಕೆ ಸಂಖ್ಯೆಗಳನ್ನು ನೋಡುವಾಗ ಅದು ಏರಿಕೆಯನ್ನೇ ಸೂಚಿಸುತ್ತದೆ. ಹಾಗಾಗಿ, ಇದರಲ್ಲಿ ವ್ಯಾವಹಾರದ ತತ್ವಗಳೇ ತಪ್ಪಿಕೊಂಡಿವೆಯೆಂದು ಹೇಳಬೇಕಾಗುತ್ತದೆ. ಸರಕಾರವು ಅನಿರ್ಬಂಧವಾಗಿ ಆಹಾರಧಾನ್ಯಗಳನ್ನು ಮುಕ್ತ ಮಾರುಕಟ್ಟೆಗೆ ಧಾರಾಳವಾಗಿ ಒದಗಿಸುವ ವ್ಯವಸ್ಥೆ ಮಾಡಿತೆಂದರೆ, ತಲೆದೋರುತ್ತಿರುವ ಕೃತಕ ಅಭಾವ ಹಾಗೂ ಏರುತ್ತಿರುವ ಬೆಲೆಗಳನ್ನು ಅಂಕೆತದಲ್ಲಿಟ್ಟುಕೊಳ್ಳಲು ನೆರವಾಗಬಹುದು.

ಆಹಾರ ಪದಾರ್ಥಗಳ ಆಡವಿನ ಮೇಲೆ ಸಾಲ ಕೊಡುವುದಕ್ಕೆ ರಿಸರ್ವ್ ಬ್ಯಾಂಕು ಹಲವು ತರದ ನಿರ್ಬಂಧಗಳನ್ನು ಹೇರಿದೆ. ಸರಕಾರವಾದರೂ ಬಹುವಾಗಿ ಶ್ರಮಿಸುತ್ತಿದೆ. ಆದರೂ ಜನಹಿತ ಸಾಧಿಸಬೇಕಾದ ಸರಕಾರ ಅದೆಷ್ಟೇ ಕೆಲಸ ಮಾಡಿದರೂ ಅತ್ಯಲ್ಪವೇ ಆಗುವುದು. ಯೋಜನೆಯತ್ತ ಹರಿಸುವ ಗಮನವನ್ನೇ ಯೋಜನೆಯ ಫಲದತ್ತವೂ ಕೊಡುವುದು ಅತ್ಯವಶ್ಯವಾಗಿದೆ. ಜನತೆಯ ವಿಶ್ವಾಸವನ್ನು ಜನಹಿತವೆಸಗಿ ಗಳಿಸಬೇಕೆಂದಿರುವ ಸರಕಾರವು ಇತ್ತ ಲಕ್ಷ್ಯ ಹರಿಸಲೇಬೇಕಾದುದು ಅನಿವಾರ್ಯ. ಎರಡು ಪಂಚವಾರ್ಷಿಕ ಯೋಜನೆಗಳ ಫಲ ಸೂಚಿಯು ಪ್ರತ್ಯೇಕ ನಾಗರಿಕನಲ್ಲೂ ಉತ್ತಮ ಪ್ರಭಾವ ಬೀರಿದೆಯೋ ಇಲ್ಲವೊ ಎಂಬುದನ್ನು ಆದು ಪರಿಶೀಲಿಸಿ, ತಪ್ಪಿದಲ್ಲಿ ಅದನ್ನು ಅವಶ್ಯವಾಗಿ ಮುಂದಿನ ಬಾರಿಯಾದರೂ ತಿದ್ದಿಕೊಳ್ಳಬೇಕು.

ಸೈನಿಕ ಶಿಕ್ಷಣ

ದೇಶದ ಆದ್ಯಂತ ಎನ್. ಸಿ. ಸಿ. ಪಡೆಯ ಹತ್ತೊಂಬತ್ತನೆಯ ವಾರ್ಷಿಕೋತ್ಸವವನ್ನು ಮೊನ್ನೆ ತಾ. ೫ರಂದು ಆಚರಿಸಲಾಯಿತು. ರಾಷ್ಟ್ರ ಸಂರಕ್ಷಣೆಯಲ್ಲಿ ಆಸ್ಥೆ, ಯುವಕರಲ್ಲಿ ಶಿಸ್ತು, ಧೀರೋದಾತ್ತ ಮತ್ತು ಚಾರಿತ್ರ್ಯಗಳನ್ನು ಬೆಳೆಸುವುದು ಈ ಪಡೆಯ ಪ್ರಧಾನೋದ್ದೇಶಗಳಾಗಿವೆ. ಈ ಉದ್ದೇಶಗಳನ್ನು ಎನ್. ಸಿ. ಸಿ. ಪಡೆಗಳು ಸಾಕಷ್ಟು ಸಾಧಿಸಿವೆ. ಆ ಬಗ್ಗೆ ಅಭಿನಂದಿಸಲೇಬೇಕು. ರಾಷ್ಟ್ರದಲ್ಲಿನ ಪ್ರತಿಯೊಬ್ಬ ನಾಗರಿಕನಿಗೂ ಸೈನಿಕ ಶಿಕ್ಷಣ ವಿಯೇಬೇಕೆಂದೂ ಆವರೆ, ಅದು ಎಂದು ಸಾಧ್ಯವಾಗುವುದೆಂದು ಹೇಳಲಾಗದೆಂದೆಂದೂ ಸದ್ಯ ಶಿಕ್ಷಣ ಪಡೆಯುವ ಎಲ್ಲರಿಗೂ ಸೈನಿಕ ಶಿಕ್ಷಣವನ್ನೀಯುವುದು ಭಾರತ ಸರಕಾರದ ಆಶಯವೆಂದೂ ಪ್ರಧಾನಿ ನೆಹರೂ ಇತ್ತೀಚೆಗೆ ಅಂದಿದ್ದರು. ಭಾವಿ ಪ್ರಜೆಗಳು ರೂಪಿಸಲ್ಪಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಇದಕ್ಕೆ ತಕ್ಕುದಾದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಈ ಸೌಕರ್ಯವನ್ನು ಬೇಗನೆ ಎಲ್ಲ ಶಿಕ್ಷಣಾಲಯಗಳಿಗೂ ಅನಿವಾರ್ಯವಾಗಿ ನಿಸ್ತರಿಸುವ ಅವಶ್ಯಕತೆಯಿದೆ; ರಾಷ್ಟ್ರದ ಭವಿತವ್ಯದ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ.

ಮೈಸೂರು ರಾಜ್ಯಕೀಯ

ಅತೃಪ್ತರತ್ತ ಜಯಲಕ್ಷ್ಮಿಯೆ?

ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿ ಶ್ರೀ ದೇಶಪಾಂಡೆಯವರ ಆಯ್ಕೆಯೇ ಅತೃಪ್ತರ ಪಂಗಡದ ಜಯವೆಂದು ಹೇಳಲಾಗುತ್ತಿದೆ. ಕಾಂಗ್ರೆಸ್ ವರಿಷ್ಠರು ಉತ್ತರ ಪ್ರದೇಶಕ್ಕೆಂದು ನೀತಿ, ಮೈಸೂರಿಗನ್ನೊಂದು ನೀತಿ ಯೋಜಿಸುತಿದ್ದಾರೆ.

ಶ್ರೀ ಎ. ರಾಮಣ್ಣ.

ಮೈಸೂರು ರಾಜ್ಯಕೀಯದ ವಿಚಾರ ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿ ಹೈಕಮಾಂಡಿನ ಪಕ್ಷಪಾತ ಮನೋಭಾವವನ್ನು ಸ್ವಲ್ಪ ಮಟ್ಟಿಗೆ ವಿವರಿಸಿದ್ದೆನು. ಅದಕ್ಕೆ ಇನ್ನೊಂದು ಉದಾಹರಣೆ ಈಗ ಸಿಕ್ಕಿದೆ. ಅದು ಉತ್ತರ ಪ್ರದೇಶಕ್ಕೆ ಸಮ್ಮಂದಿಸಿದ್ದು. ಚುನಾವಣೆಗೆ ಕೇವಲ ೧½ ವರ್ಷ ಇರುವಾಗ ಮಂತ್ರಿ ಮಂಡಲಗಳನ್ನು ಬದಲಾಯಿಸಲು ಅವಕಾಶವನ್ನೀಯುವುದು ಬದಲು ಸಂಸ್ಥೆಯ ಹಿತದೃಷ್ಟಿಯಿಂದ ಸಾಧ್ಯವಿಲ್ಲವೆಂದು ಹೇಳಿದ್ದ ಕಾಂಗ್ರೆಸ್ ಹೈಕಮಾಂಡ್ ಉತ್ತರ ಪ್ರದೇಶದಲ್ಲಿ ಬದಲಾವಣೆಗೆ ಅವಕಾಶವನ್ನಿತ್ತಿತು. ಅಲ್ಲಿಯ ಮುಖ್ಯ ಮಂತ್ರಿ ಡಾ| ಸಂಪೂರ್ಣಾನಂದರು ರಾಜಿನಾಮೆಯಿತ್ತು, ಶ್ರೀ ಸಿ. ಬಿ. ಗುಪ್ತಾರವರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾಗಿದ್ದಾರೆ. ಅಲ್ಲಿಯ ಬಹುಜನ ಶಾಸನ ಸಭಾ ಸದಸ್ಯರು ಡಾ. ಸಂಪೂರ್ಣಾನಂದರವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದು ಒತ್ತಾಯಪಡಿಸಿದರೂ ಪ್ರಧಾನಿ ನೆಹರೂರವರೇ ಅವರು ರಾಜಿನಾಮೆ ಕೊಡಬೇಕೆಂದು ಒತ್ತಾಯಪಡಿಸಿದರು. ಆದರಂತೆ ರಾಜಿನಾಮೆ ಕೊಟ್ಟಾಯಿತು.

ಉತ್ತರ ಪ್ರದೇಶವೆಂದರೆ ಇಂಥಾ ಹೈಕಮಾಂಡ್. ಹೈಕಮಾಂಡ್ ಅಂದರೆ ಉತ್ತರ ಪ್ರದೇಶ. ಪಂಡಿತ್ ನೆಹರೂ, ಪಂಡಿತ್ ಪಂತ್, ರಾಜರ್ಷಿಪುರುಷೋತ್ತಮ ಶಾಸ್ತ್ರಿ, ಇಂದಿರಾಗಾಂಧಿ ಇವರೆಲ್ಲರೂ ಉತ್ತರ ಪ್ರದೇಶದವರು. ಇಂದಿನ ರಾಜಕೀಯದಲ್ಲಿ ಅವರೇ ರಾಜ್ಯವಾಳತಕ್ಕವರು. ಅಂತಹ ಪ್ರದೇಶದಲ್ಲೇ ಕಾಂಗ್ರೆಸ್ಸಿನಲ್ಲಿ ತೀವ್ರ ಭಿನ್ನಾಭಿಪ್ರಾಯ ಬಂದು ಸರಕಾರ ಬದಲಾವಣೆಯಾಗುವಂತಾಯಿತು. ಇಲ್ಲಿ ಬದಲಾವಣೆಯಾಗದಿದ್ದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಕಷ್ಟವಾಗಬಹುದೆಂದು ತಿಳಿದೇ ಅವರು ಬದಲಾವಣೆಗೆ ಒಪ್ಪಿದರು ಆದರೆ ಮೈಸೂರಿಗೆ ಮಾತ್ರ ಆ ನೀತಿ ಅನ್ವಯವಾಗುವುದಿಲ್ಲ. ಇಲ್ಲಿ ವಿಶ್ವಾಸ ಮತ ಕೇಳಿರೆಂದೂ ಹೇಳುತ್ತಿಲ್ಲ. ಮುಖ್ಯಮಂತ್ರಿಗಳಲ್ಲಿ ವಿಶ್ವಾಸವಿದೆಯೇ ಎಂದು ಕೇಳಲು ಹೈಕಮಾಂಡ್ ಸಿದ್ಧವಿಲ್ಲ. ಹಾಗೆಂದರೆ ಹೈಕಮಾಂಡಿನ ಪಕ್ಷಪಾತ ನೀತಿ ಸೂಕ್ಷ್ಮವಾಗಿ ಅರ್ಥವಾಗುತ್ತದೆ.

ಜತ್ತಿಯವರು ಪಕ್ಷದ ಬೆಂಬಲ ಕಳೆದುಕೊಂಡಿದ್ದಾರೆಂಬುದಕ್ಕೆ ಇತ್ತೀಚಿನ ಮತ್ತೊಂದು ಉದಾಹರಣೆ ಸಾಕಾಗಿದೆ. ಲೆಜಿಸ್ಲೇಟಿವ್ ಕೌನ್ಸಿಲಿನ ಉಪಾಧ್ಯಕ್ಷರ ಚುನಾವಣೆ. ಈ ಚುನಾವಣೆಗೆ ಕಾಂಗ್ರೆಸ್ಸಿನ ಆತ್ಯುಕ್ತ ಗುಂಪಿನವರು ಶ್ರೀ ಬಿ. ಜಿ. ದೇಶಪಾಂಡೆಯವರನ್ನು ನಿಲ್ಲಿಸಲು ನಿರ್ಧರಿಸಿದ್ದರು. ಆ ಪಕ್ಷದ ನಿಯಮಾವಳಿಯ ಪ್ರಕಾರ ಈ ಆಯ್ಕೆ ಪಕ್ಷದ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರ ಮೂಲಕ ನಡೆಯಬೇಕು. ಹೋದಸಾರಿ ಮಂತ್ರಿ ಮಂಡಲದ ಗೊಂದಲಿಗೆ ಜಗ್ಗಲಾಗಿತ್ತು. ಈ ಮಂಡಲಿಯ ಗುಂಪು ಅಂಗೈ ತೋರಿಸಿ ಅಬಲಕ್ಷಣ ಮಾಡಿಸಿಕೊಳ್ಳುವುದು ಬೇಡವೆಂದು ರಾಜಿನಾಮೆ ಕೊಟ್ಟಾಯಿತು. ಆದರೆ ಮೈಸೂರಿಗೆ ಮಾತ್ರ ಆ ನೀತಿ ಅನ್ವಯವಾಗುವುದಿಲ್ಲ. ಇಲ್ಲಿ ವಿಶ್ವಾಸ ಮತ ಕೇಳಿರೆಂದೂ ಹೇಳುತ್ತಿಲ್ಲ. ಮುಖ್ಯಮಂತ್ರಿಗಳಲ್ಲಿ ವಿಶ್ವಾಸವಿದೆಯೇ ಎಂದು ಕೇಳಲು ಹೈಕಮಾಂಡ್ ಸಿದ್ಧವಿಲ್ಲ. ಹಾಗೆಂದರೆ ಹೈಕಮಾಂಡಿನ ಪಕ್ಷಪಾತ ನೀತಿ ಸೂಕ್ಷ್ಮವಾಗಿ ಅರ್ಥವಾಗುತ್ತದೆ.

ಜತ್ತಿಯವರು ಪಕ್ಷದ ಬೆಂಬಲ ಕಳೆದುಕೊಂಡಿದ್ದಾರೆಂಬುದಕ್ಕೆ ಇತ್ತೀಚಿನ ಮತ್ತೊಂದು ಉದಾಹರಣೆ ಸಾಕಾಗಿದೆ. ಲೆಜಿಸ್ಲೇಟಿವ್ ಕೌನ್ಸಿಲಿನ ಉಪಾಧ್ಯಕ್ಷರ ಚುನಾವಣೆ. ಈ ಚುನಾವಣೆಗೆ ಕಾಂಗ್ರೆಸ್ಸಿನ ಆತ್ಯುಕ್ತ ಗುಂಪಿನವರು ಶ್ರೀ ಬಿ. ಜಿ. ದೇಶಪಾಂಡೆಯವರನ್ನು ನಿಲ್ಲಿಸಲು ನಿರ್ಧರಿಸಿದ್ದರು. ಆ ಪಕ್ಷದ ನಿಯಮಾವಳಿಯ ಪ್ರಕಾರ ಈ ಆಯ್ಕೆ ಪಕ್ಷದ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರ ಮೂಲಕ ನಡೆಯಬೇಕು. ಹೋದಸಾರಿ ಮಂತ್ರಿ ಮಂಡಲದ ಗೊಂದಲಿಗೆ ಜಗ್ಗಲಾಗಿತ್ತು. ಈ ಮಂಡಲಿಯ ಗುಂಪು ಅಂಗೈ ತೋರಿಸಿ ಅಬಲಕ್ಷಣ ಮಾಡಿಸಿಕೊಳ್ಳುವುದು ಬೇಡವೆಂದು ರಾಜಿನಾಮೆ ಕೊಟ್ಟಾಯಿತು. ಆದರೆ ಮೈಸೂರಿಗೆ ಮಾತ್ರ ಆ ನೀತಿ ಅನ್ವಯವಾಗುವುದಿಲ್ಲ. ಇಲ್ಲಿ ವಿಶ್ವಾಸ ಮತ ಕೇಳಿರೆಂದೂ ಹೇಳುತ್ತಿಲ್ಲ. ಮುಖ್ಯಮಂತ್ರಿಗಳಲ್ಲಿ ವಿಶ್ವಾಸವಿದೆಯೇ ಎಂದು ಕೇಳಲು ಹೈಕಮಾಂಡ್ ಸಿದ್ಧವಿಲ್ಲ. ಹಾಗೆಂದರೆ ಹೈಕಮಾಂಡಿನ ಪಕ್ಷಪಾತ ನೀತಿ ಸೂಕ್ಷ್ಮವಾಗಿ ಅರ್ಥವಾಗುತ್ತದೆ.

ಜತ್ತಿಯವರು ಪಕ್ಷದ ಬೆಂಬಲ ಕಳೆದುಕೊಂಡಿದ್ದಾರೆಂಬುದಕ್ಕೆ ಇತ್ತೀಚಿನ ಮತ್ತೊಂದು ಉದಾಹರಣೆ ಸಾಕಾಗಿದೆ. ಲೆಜಿಸ್ಲೇಟಿವ್ ಕೌನ್ಸಿಲಿನ ಉಪಾಧ್ಯಕ್ಷರ ಚುನಾವಣೆ. ಈ ಚುನಾವಣೆಗೆ ಕಾಂಗ್ರೆಸ್ಸಿನ ಆತ್ಯುಕ್ತ ಗುಂಪಿನವರು ಶ್ರೀ ಬಿ. ಜಿ. ದೇಶಪಾಂಡೆಯವರನ್ನು ನಿಲ್ಲಿಸಲು ನಿರ್ಧರಿಸಿದ್ದರು. ಆ ಪಕ್ಷದ

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ನಲ್ಲಿ

S. C. 244/1960

ವೆಂಕಟ್ರಮಣ ಪುರಾಣಿಕ—ವಾದಿ.

ಸುಬ್ರಾಯ ಭಟ್ಟ, ಆನಗಳ್ಳಿ ಕೇಶವ ಭಟ್ಟ ಸುಗ, ಶಿವಮೊಗ್ಗಾ ಜಿಲ್ಲಾ ಭದ್ರಾವತಿಯಲ್ಲಿರುವವ— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ನೀವ್ ವಾದಿಗೆ ತಾ. 12-4-1948ರಲ್ಲು ರೂಪಾಯಿ 300-00ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಬಾಕಿ ಉಳಿದ ಬಡ್ಡಿ ಬಗ್ಗೆ ವಾದಿಯು ಮಾಡಿದ ಮೇಲಿನ ದಾವೆಯನ್ನು ತಾ. 17—12—1960ಕ್ಕೆ ತತ್ಪೂರ್ವಕ್ಕೆ ಇಟ್ಟುಕೊಂಡಿರುತ್ತದೆ. ಆಕ್ಕರಿತು ನಿಮ್ಮದ್ದೇನಾದರು ಆಕ್ಷೇಪಣೆಯಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ನಿಮಗೆ ತಿಳಿಸಿರುತ್ತದೆ.

ಕೋರ್ಟು ಹ್ಕುಂ ಪ್ರಕಾರ.

Y. Tejappa Shetty,
Advocate for Plaintiff
Coondapoor, 5—12—1960.

ಅಲ್ಲಲ್ಲಿಯ ಸುದ್ದಿಸಾರ

ಭಾವಚಿತ್ರ ಅನಾವರಣ—ಉಡುಪಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಬಿ. ಎಸ್. ಪೈ ಇವರ ಭಾವಚಿತ್ರವ ಅನಾವರಣ ಸಮಾರಂಭವು ವಿದ್ಯಾರ್ಥಿ ಸಂಘದ ವತ್ತಿನಲ್ಲಿ ತಾ. ೮ರಂದು ಎಳೆಡಮಿ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳವರಿಂದ

ಆರೂರು ಲಕ್ಷ್ಮೀನಾರಾಯಣರಾಯರ ಕೃಷ್ಣತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀಗ ಪ ಉಮೇಶ ನಾಯಕ್, ಜೆ. ಸಿ. ರೇ ಸ್ ಕೆ. ಚಂದ್ರಶೇಖರರಾವ್ ಇವರೂ ಉ ಟಕರಾದ ಪೈಗಳೂ ಅಧ್ಯಕ್ಷ ಶ್ರೀ ರಾ. ಶ್ರೀ ರೈಗಳ ಗುಣಗಳನ್ನ ನೂಡಿದರು ರ್ಯದರ್ಶಿ ವಿ. ವತಪ್ಪಾ ರೈಗಳು ಧನ್ಯ ದಗಳನ್ನರ್ಪಿಸಿದರು.

ಸಂತಾಪ ಸೂಚಕ ಸಭೆ—ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಮೂಜ ಕ್ಯೂಟಿವ್ ಆಫೀಸರರೂ, ಇಂಗ್ಲಿಷ್ ಕ ಲೇಖಕರೂ ಆಗಿದ್ದ ಶ್ರೀ ಚಿತ್ತೂರು ಹಿ ಣ್ಣ ಸೆಟ್ಟರು ಇತ್ತೀಚೆಗೆ ನಿಧನ ಹೊಂದಿ ದಕ್ಕೆ ಸಂತಾಪ ಸೂಚಿಸಲು ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಎಕ್ಸಿಕ್ಯೂಟಿ ಆಫೀಸರ್ ಶ್ರೀ ಬಿ. ನಾರಾಯಣ ಸೆಟ್ಟಿ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿತಿಲ್ಲ ದಿವಂಗತರ ಕುರಿತು ಭಾಷಣಗಳಾ ವು.

ಗೀತಾ ಜಯಂತಿ — ಮಣಿಪಾಲದ ತಾ ಮಂದಿರದಲ್ಲಿ ಕಳದ ತಾ. ೨೫ರಂದು ತಾ ಜಯಂತಿ ಮತ್ತು ೨ನೇ ವಾರ್ಷಿಕೋ ವವು ವಿಜೃಂಭಣೆಯಿಂದ ಜರಗಿತು. ಪ್ರಾ ನಾ ನಂತರ ಶ್ರೀ ಟಿ. ರಘೀಶ್ ಪೈಯವ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎಸ್. ಕಿಣಿಯವರು ವರದಿಯೊಪ್ಪಿಸಿ ು. ಸುಂದರಿದಾಸ್ ಸ್ಥಾಪಕ ದಿ| ಉಪೇಂದ್ರ ಂತ ಪೈಯವರ ಧನ್ಯ ಜೀವನದ ಮೇಲೆ ಕಾಶ ಬೀರುವ ((ಅಧ್ಯಾತ್ಮ ಪ್ರೇರಣೆಯಿಂ ರ್ತವ್ಯದಿಡೆಗೆ" ಎಂಬ ಹೊತ್ತಗೆಯ ಪರಿ ಯವನ್ನು ಲೇಖಕ ಸಂಪಾದಕ ಶ್ರೀ ಉ. ಕಿಣಿಯವರು ಮಾಡಿಕೊಟ್ಟರು. ಬೆಂಗ ರಿನ ಪ್ರೊ| ವಿ. ಸೀತಾರಾಮಯ್ಯನವರು ಸ್ತಕವನ್ನು ಉದ್ಘಾಟಿಸಿ ದಿವಂಗತ ಉ ೦ದ್ರ ಪೈಯರ ತೈಲ ಚಿತ್ರವನ್ನು ಅನಾವ ಗೈದರು. ((ಮಹಾ ಭಾರತದಲ್ಲಿ ಶ್ರೀ ಷ್ಣ' ಎಂಬ ವಿಷಯದಲ್ಲಿ ಪ್ರೊ| ವಿ. ಸಿ. ನವರು ಭಾಷಣವಿತ್ತರು. ವಿಶ್ವಾರ್ಭಪಲ್ಲಿ ಶ್ರೀ ಸಿ. ಯವರ ಪರಿಚಯವನ್ನು ಶ್ರೀ ಕು. ಹರಿದಾಸ ಭಟ್ಟರು ಮಾಡಿಕೊಟ್ಟರು. ಆ ಕ್ಷ ಸ್ಥಾನದಿಂದ ಶ್ರೀ ಟಿ. ಆರ್. ಎ. ಗಳು ಜೀವನದಲ್ಲಿ ಧಾರ್ಮಿಕ ಮನೋಭಾ ನೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದ ಜಿತ ಕಾರ್ಯದರ್ಶಿ ಶ್ರೀ ರಾಮದಾಸ ಯವರು ಧನ್ಯವಾದ ಅರ್ಪಿಸಿದರು

ವಾರ್ಷಿಕೋತ್ಸವದ ಪ್ರಯುಕ್ತ ಪ್ರಸಿದ್ಧ ರ್ಥಧಾರಿಗಳ ಕೂಡುವಿಕೆಯಿಂದ ((ಶ್ರೀಕೃಷ್ಣ ಸಂಧಾನ"ವೆಂಬ ಕಥಾ ಭಾಗದ ಯಕ್ಷಗಾ ನಡೆಯತ್ತು.

ಉಡುಪಿ ಇನ್‌ಕಂ ಟ್ಯಾಕ್ಸ್ ಆಫೀ ನ ಸ್ಥಳ ಬದಲಾವಣೆ—ಕಳದ ತಾ. ರಿಂದ ಇನ್‌ಕಂ ಟೇಕ್ಸ್ ಆಫೀಸು ಬಿಟ್ಟು ಯಿಂದ ಉಡುಪಿ ಮ್ಯುನ್ಸಿಪ್ ಕೋರ್ಟಿನ ಂಬದಿ ರಸ್ತೆಯ ಬದಿಯಲ್ಲಿರುವ ವಕೀಲ್ ಎಂ. ಹರಿಯಣ್ಣ ಹೆಗ್ಡೇರ ಕಟ್ಟೋಣಕ್ಕೆ ಸ್ಥ ಾಂತರಿಸಲ್ಪಟ್ಟಿದೆ.

ವರ ಬೇಕಾಗಿದೆ

IVಥಾರ್ಮು ತನಕ ಓದಿದ ಗೃಹ ೃತ್ಯಗಳಲ್ಲಿ ನುರಿತ ಶಿವಳ್ಳಿ ಬ್ರಾಹ್ಮಣ ತಿಯ 22 ವರ್ಷ ಪ್ರಾಯದ ಸುಮತಿಗೆ ಯೋಗ್ಯ ಬ್ರಾಹ್ಮಣ ವರ ೀಕಾಗಿದೆ—

ದಯವಿಟ್ಟು ವ್ಯವಹರಿಸಿರಿ—

'X' C/o ನವಯುಗ, ಉಡುಪಿ.

ಕರ್ನಾಟಕ ಲೇಖಕರ ಸಂಘ, ಬೆಂಗಳೂರು—ಇದರ ಅಧ್ಯಕ್ಷರಾದ ಶ್ರೀ ಸಿ. ಕೆ. ನಾಗರಾಜ ರಾಯರು ಬೊಂಬಾಯಿಗೆ 3ನೇ ಯ ವಿಶ್ವಾ—ಆಫ್ರಿಕಾ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಲು ತಾ. 30-11-60ರಂ ು ಪ್ರಯಾಣ ಬೆಳೆಸಿದರು. ಅವರು ಸಂಘದ ಪರವಾಗಿ ಕನ್ನಡ ಲೇಖಕರ ಪ್ರತಿನಿಧಿಗಳಾಗಿ ಭಾಗವಹಿಸುವರು.

ಕಂಡ್ಲೂರಲ್ಲಿ ಧರ್ಮಾಸ್ಪತ್ರೆ—ಕಂ ಡ್ಲೂರಲ್ಲಿ ಕಳದ ತಾ. 28—11—60ರಂದು ಹೊಸತಾಗಿ ಮುಂಬೂರಾದ ಧರ್ಮಾಸ್ಪತ್ರೆಯ ನ್ನು ಕಂಡ್ಲೂರು ಕೇಂದ್ರ ಮೈದಾನದಲ್ಲಿ ಬೈಂ ದೂರು ರಾಷ್ಟ್ರೀಯ ವಿಸ್ತರಣಾ ಯೋಜನೆ ಯ ವತಿಯಿಂದ ಕಟ್ಟಿಸಲಾದ ಹೊಸ ಕಟ್ಟ ಡದಲ್ಲಿ ಪಕೀಲ್ ಶ್ರೀ ಅಂತಯ್ಯ ಸೆಟ್ಟರು ಲೆ ದ್ಘಾಟಿಸಿದರು. ಡಾ. ಎನ್. ಆರ್. ಆಡ್ಯಂ ತಾಯರು ಧನ್ಯವಾದ ಸಮರ್ಪಿಸಿದರು.

ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಶನಿನ ಹೊಸ ಶಾಖೆಗಳ ಉದ್ಘಾಟನೆ

ಖಾಲಿಸಿದಾರರಿಗೆ ಕ್ಲಪ್ತ ಸೇವೆಯನ್ನೊದಗಿಸ ಲು ಮತ್ತು ಏಜಂಟರಿಗೂ ಫೀಲ್ಡ್ ಆಫೀಸರ ರಿಗೂ ಶೀಘ್ರೆ ಸೌಕರ್ಯವನ್ನು ನೀಡಲು ಉ ದ್ದೇಶಿಸಿ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇ ಶನ್ ಆಫ್ ಇಂಡಿಯಾದ ಉಡುಪಿ ವಿಭಾಗದ ಚಿಕ್ಕಮಗಳೂರು ಮತ್ತು ಬಿಜಾಪುರ ನಗರಗ ಳಲ್ಲಿ ಎರಡು ಹೊಸ ಶಾಖೆಗಳನ್ನು ಈಚೆಗೆ ತೆ ರೆಯಲಾಗಿದೆ. ಈ ಶಾಖೆಗಳನ್ನು ಸೇರಿಸಿ ಉ ಡುಪಿ ವಿಭಾಗಕ್ಕೆ ಈಗ ಒಟ್ಟು ಹತ್ತು ಶಾಖೆ ಗಳಿವೆ.

ಚಿಕ್ಕಮಗಳೂರು ಜಿಲ್ಲೆಯ ಮೇಲೆ ಅಧಿ ಕಾರ ವ್ಯಾಪ್ತಿಯುಳ್ಳ ಚಿಕ್ಕಮಗಳೂರು ಶಾಖೆ ಯನ್ನು ಮೈಸೂರು ಸರಕಾರದ ಮಾನ್ಯ ಆರೋ ಗ್ಯಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ಉ ದ್ಘಾಟಿಸಿದರು. ಬೆಳಗಾಂವಿಯ ವಿಭಾಜನಲ್ ಕ ಮಿಶನರ್ ಶ್ರೀ ಎಸ್ ಎ. ಎಲ್. ರಜ್ವೆಯ ವರು ಬಿಜಾಪುರ ಜಿಲ್ಲೆಯ ಕಾರ್ಯಕ್ಷೇತ್ರವಾ ಗಿರುವ ಬಿಜಾಪುರ ಶಾಖೆಯನ್ನು ತೆರೆದರು. ತಮ್ಮ ಉದ್ಘಾಟನಾ ಭಾಷಣಗಳಲ್ಲಿ ಇವರೀ ವ್ವರು ಮಹನೀಯರು ಕಾರ್ಪೊರೇಶನು ಹಳ್ಳಿ ಗಳಲ್ಲಿ ಜೀವವಿಮೆಯ ಪ್ರಚಾರ ಮಾಡಲು ಅ ಹರ್ನಿಶ ಶ್ರಮಿಸುತ್ತಿರುವುದನ್ನು ಪ್ರಶಂಸಿಸಿ, ರಾಷ್ಟ್ರೀಕರಣದ ತರುವಾಯ ಸಾಧಿಸಿದ ಸ್ಪಗ ತಿಯನ್ನು ಶ್ಲಾಘಿಸಿದರು. ಖಾಲಿಸಿದಾರರಿಗೆ ಒ ದಗಿಸುವ ಸೇವೆಯು ತೃಪ್ತಿಕರವಾಗಿರುವುದಕ್ಕೆ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸುತ್ತಾ, ಖಾ ಲಿಸಿಗೆಲು ಫಲಿಸಿದ ತರುವಾಯ ಬಹಳ ಶೀ ಘ್ರೆವಾಗಿ ಕ್ಲೈಮ್ ಪಾವತಿಯಾಗುತ್ತಿರುವುದ ನ್ನು ಸ್ವಂತ ಅನುಭವದಿಂದ ಮನಗಂಡಿರುವು ದಾಗಿ ಹೊಗಳಿದರು.

ಉಡುಪಿ ವಿಭಾಗದ ಸೀನಿಯರ್ ಡಿವಿಜನ ಲ್ ಮೆನೇಜರರಾದ ಶ್ರೀ ಟಿ. ಆರ್. ಎ. ಪೈಗಳು ತಮ್ಮ ಸ್ವಾಗತ ಭಾಷಣದಲ್ಲಿ ರಾಷ್ಟ್ರೀ ಕರಣದ ಬಳಿಕ ಚಿಕ್ಕಮಗಳೂರು ಜಿಲ್ಲೆಯ ಏಜಂಟರ ಸರಾಸರಿ ವ್ಯವಹಾರವು 100% ಮತ್ತು ಬಿಜಾಪುರ ಜಿಲ್ಲೆಯ ಏಜಂಟರ ಸರಾ ಸರಿ ವ್ಯವಹಾರವೆ 250% ಹೆಚ್ಚಿದೆಯೆಂದು ತಿಳಿಸಿ, ಹೊಸ ಶಾಖೆಗಳನ್ನು ತೆರೆದ ಪರಿಣಾ ಮವಾಗಿ ವ್ಯವಹಾರದಲ್ಲಿ ಇನ್ನಷ್ಟು ಪ್ರಗತಿ ಯಾಗುವುದು ಮತ್ತು ಪಾಲಿಸಿದಾರರಿಗೆ ಇನ್ನೂ ಚೊಕ್ಕದಾದ ಸೇವೆ ಲಭಿಸುವುದು ಎಂದು ಆಶಿ ಸಿದರು.

ಚಿಕ್ಕಮಗಳೂರು ಶಾಖೆಗೆ ಶ್ರೀ ಎಸ್. ರಾಮರಾವ್ ಮತ್ತು ಬಿಜಾಪುರ ಶಾಖೆಗೆ ಶ್ರೀ ಎಂ. ಎಸ್. ಶೆಟ್ಟಿ ಇವರನ್ನು ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಆಗಿ ನೇಮಕಮಾಡಿದೆ

ಮದ್ವಾಸಿನಲ್ಲಿ ಅ. ಭಾ. ಮಾಧ್ವ ಮಹಾ ಸಮ್ಮೇಳನ
ದಶಂಬರ 23, 24 1960.

ಮದರಾಸಿನಲ್ಲಿ ನಡೆಯುವ ನಾಲ್ಕನೆಯ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇ ಳನದ ಕಾರ್ಯಕಾರಿ ಸಮಿತಿಯಲ್ಲಿ ಡಾ| ಯು. ಕೃಷ್ಣರಾವ್, ಲೆಜಿಸ್ಲೆಟಿವ್ ಎಸೆಂಬ್ಲಿಯ ಸ್ಪೀಕರ್ ಅವರು ಸಮಿತಿಯ ಅಧ್ಯಕ್ಷರಾಗಿ ಯೂ, ಶ್ರೀಯುತ ಸಿ. ಆರ್. ಕೃಷ್ಣರಾವ್ ಅವರು ರಿಸೆಪ್ಷನ್ ಅಧ್ಯಕ್ಷರಾಗಿಯೂ, ಡಾ|ಕೆ. ವೆಂಕಟ್ರಾವ್ ಇನರು ಜನರಲ್ ಸೆಕ್ರೆಟರಿಯೂ

ಗಿಯೂ, ಶ್ರೀಗಳಾದ ಕೆ. ಸೀತಾರಾಮ ರಾವ್, ಕೆ. ಕೃಷ್ಣರಾವ್, ಕೆ. ವಿ. ಪಿ. ರಾವ್, ಸಿ. ಆರ್. ನಾರಾಯಣ ರಾವ್, ಪಿ. ಹಯವದನ ರಾವ್, ವಿ. ರಾಮರಾವ್, ಜೆ. ಬಿ. ನಾರಾಯಣ ರಾವ್, ಬಿ. ವಿಠಲಾಚಾರ್ಯ, ಪಿ. ಪಾನ್ಸನಿರಾವ್, ವಿ. ಎಸ್. ಕಾಡ್ತಿ ಡಾ|ಯು. ಎಲ್. ನಾರಾಯಣ ರಾವ್, ಶ್ರೀಗಳಾದ ವಿ. ಆರ್. ನಾರಾಯಣ ರಾವ್, ಎಸ್. ರಂಗರಾವ್, ಡಾ. ಎಮ್. ಆರ್. ಬೈಲ್, ಶ್ರೀಗಳಾದ ಸಿ. ಜೆ. ವೆಂಕಟ್ರಮಣ ರಾವ್, ನಮ್ಸ್. ಕೆ. ವೆಂಕಟ್ರಾವ್, ಪಂಡಿ ತ ಕೆ. ಎಲ್. ವಿ. ಶಾಸ್ತ್ರಿ; ಪುರೋಹಿತ ಮಾಧವಾಚಾರ್ ಮತ್ತು ಇನ್ನೂ ಅನೇಕರು ಸಮಿತಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿರು ತ್ತಾರೆ.

ತಾ. 27.11-60ರಂದು ಸಮ್ಮೇಳನದ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸುವರೆ ಮದರಾಸು ವೆಪೆರಿಯಲ್ಲಿರುವ ((ಧರ್ಮಪ್ರಕಾ ಶ"ದಲ್ಲಿ ಉಡುಪಿ ಶ್ರೀ ಪೇಜಾವರ ಮಠಾಧೀಶ ರಾದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳ ವರ ನೇತೃತ್ವದಲ್ಲಿ ಸಾಹಾ ಸಭೆಯು ನೆರವೇರಿ ತು. ಶ್ರೀ ಶ್ರೀಪಾದಂಗಳವರು ಅನೇಕ ಸಲಹೆ ಗಳನ್ನು ಕೊಟ್ಟು ಸಮ್ಮೇಳನವು ಯಶಸ್ವಿಯಾ ಗಿ ನಡೆಯುವರೆ ಆಶೀರ್ವದಿಸಿದರು. ದಶಂಬ ರ 23 ಮತ್ತು 24ರಲ್ಲಿ ಅಧಿವೇಶನವು ಕೂಡ ಬೇಕೆಂಬುದಾಗಿಯೂ ಕೇಂದ್ರ ಸರಕಾರದ ಉ ಪಾಧ್ಯಕ್ಷರಾದ ಡಾ| ರಾಧಾಕೃಷ್ಣನ್‌ರವರು ಅಧಿವೇಶನದ ಉದ್ಘಾಟನೆ ಮಾಡುವರೆ ಕೇಳಿ ಕೊಳ್ಳಬೇಕೆಂಬುದಾಗಿಯೂ, ಕೇಂದ್ರ ಸರಕಾ ರದ ಗೃಹ ಮಂತ್ರಿಯರಾದ ಶ್ರೀ ಬಿ ಎನ್. ದಾತಾರ್‌ರವರು ಅಧ್ಯಕ್ಷ ಸ್ಥಾನವನ್ನು ವಹಿ ಸುವರೆ ಕೇಳಿಕೊಳ್ಳಬೇಕೆಂಬುದಾಗಿಯೂ ನಿ ರ್ಧರಿಸಲಾಯಿತು. ಎಲ್ಲಾ ಮಾಧ್ವ ಮಠಾದೀ ಶರೂ ಈ ಸಮಾರಂಭದಲ್ಲಿ ಭಾಗವಹಿಸುವ ರೆಂದು ಊಹಿಸಲಾಗಿದೆ ಅಧಿವೇಶನದ ಕೆಲ ಸವು ಭರದಿಂದ ನಡೆಯುತ್ತಾ ಇದೆ.

ಸಂಕ್ಷಿಪ್ತ ಸುದ್ದಿಗಳು

ರೆಡ್ಡಿಯವರ ಹೊಸ ಸೂತ್ರ

ಮುಖ್ಯ ಮಂತ್ರಿ ಪದವಿಗಿಂತ ರಾಷ್ಟ್ರೀ ಯ ಕಾಂಗ್ರೆಸ್ ಅಧ್ಯಕ್ಷ ಪದವಿ ಆಕರ್ಷ ಕವಾಗಿ ಕಂಡಿದ್ದ ಶ್ರೀ ಸಂಜೀವ ರೆಡ್ಡಿಯ ರಿಗೆ ಈಗ ಆ ಹುದ್ದೆಯ ಧರ್ಮ ಸಂಕಟ ತೆಯ ಪರಿಚಯ ಸರಿಯಾಗಿ ಆಗಿರಬಹು ದು. ಉತ್ತರ ಪ್ರದೇಶದ ಕಾಂಗ್ರೆಸ್ ಬಿ ಕ್ಕಟ್ಟಿಗೆ ಡಾ|| ಸಂಪೂರ್ಣಾನಂದರ ರಾಜಿ ನಾಮೆಯು ನಿವಾರಕವೇನೋ ಆಯಿತು. ಸದ್ಯ ಮೈಸೂರು ಆವರ ಕಲೆತಿನ್ನುತ್ತಿದೆ. ಜತ್ತಿಯವರ ಕೈಬಿಡುವಂತಿಲ್ಲ; ಬಿಟ್ಟು ಬಿಡದಿರುವಂತಿಲ್ಲ. ಇದಕ್ಕಾಗಿಯೇ ಹೊಸ ತೊಂದು ನೀತಿಯನ್ನೆವರು ಅನುಸರಿಸು ವಂತಿದೆ. ಬಾಯಿಗೆ ಹಾಕಿಕೊಂಡ ಬಿಸಿ ತುಪ್ಪವನ್ನೊಮ್ಮೆ ಉಗುಳಿ, ಮರಳಿ ನುಂ ಗುವುದೇ ಇದಕ್ಕೆ ಪರಿಹಾರವಂತೆ!

ಲುಮುಂಬಾ ಸೆರೆ ಮನೆಯಲ್ಲಿ!

ರಾಷ್ಟ್ರದಂತೆಯೇ ಇತಿಹಾಸವೂ ಶತ್ರ ಲೆಯಲ್ಲಿ ಆಡಗಿರುವಾಗ ನಾಗರಿಕರೆಲ್ಲರಿ ಗೂ ಆದನ್ನು ಶ್ರುತಪಡಿಸಿದ ಕೀರ್ತಿ ಕಾಂ ಗೋವಿನ ಪದಚ್ಯುತ ಪ್ರಧಾನಿ ಲುಮುಂ ಬಾರಿಗೆ ಸೇರಿದುದು. ಕಾಂಗೋವಿನ ಬಗ್ಗೆ ಯೂರೂ ಹೆಚ್ಚಿನ ಆಸಕ್ತಿ ತೋರಿಸದಿದ್ದ ಕಾಲವೊಂದಿ ತ್ತು. ಆದರೆ, ಈಗ ಎಲ್ಲರ ನಾಲಗೆಯಲ್ಲೂ ಕಾಂಗೋವೇ. ಬೆಲ್ಜಿಯಮಿನಿಂದ ಸ್ವಾತಂ ತ್ರ್ಯ ಪಡೆದ ಬೆನ್ನಿನಲ್ಲೇ ಬೆಲ್ಜಿಯಮಿನ ಮೇಲೆ ಉರಿದುಬಿದ್ದ ಕಾಂಗೋಲಿ ಸೈನಿಕ ರು, ಅಲ್ಲಿಗೆ ಬಂದಿದ್ದ ಸಂಯುಕ್ತ ರಾಷ್ಟ್ರ ಸಂಘದ ಸೇನೆಯ ಮೇಲೂ ಕೈಮಾಡಿದ ರು. ಹೀಗೆಯೇ ೧೯೬೦ನೆಯ ದಶಕದ ಆ ಶಾಂತಿ ಪರ್ವಕ್ಕದು ನಾಂದಿಯೊಯಿತು. ಆದರೆ ಕಾರಣಪುರುಷ ಲುಮುಂಬಾ ಸೆರೆ ಯೊಳಾಗಿ ನರಳುತಿದ್ದಾರೆ!

ಜಪಾನ್ ಯುವರಾಜರು

ಭಾರತ—ಜಪಾನಗಳ ಸ್ನೇಹ ಸಂಬಂ ಧ ಅಶೋಕನಷ್ಟು ವ್ಯಾಚೇನವಾದುದು. ಬೌದ್ಧಮತೀಯರಿಗೆ ಭಾರತದ ಮೇಲೊಂ ದು ಪೂಜ್ಯಭಾವನೆಯಿರುವುದು. ತಮ್ಮ ಮತ ಸಂಸ್ಥಾಪಕನಾದ ಭಗವಾನ್ ಬು ದ್ಧನ ಜನ್ಮಭೂಮಿಯಿದಲ್ಲವೆ? ಬರ್ಮದ ಯು-ನೂ ತೆರಳದ ಹಿಂಗಡೆಯಲ್ಲೇ ಜ ಪಾನಿನ ಯುವರಾಜ ದಂಪತಿಗಳ ಸಮೂ ಗಮವಾಗಿದೆ. ಈ ಸಂದರ್ಭದಿಂದ ಯು ವರಾಜ ಅಕಿ ಹಿಜೊರು ತೀರ್ಥಯಾತ್ರೆಯ ಸತ್ಫಲಗಳೊಡನೆ ಭಾರತೀಯ ಜನತೆಯ ಸದ್ಭಾವನೆಗಳನ್ನೂ ಜಪಾನಕ್ಕೆ ಕೊಂಡೊ ಯ್ಯುವುದರಲ್ಲಿ ಸಂದೇಹವಿಲ್ಲ.

ಸಂಪೂರ್ಣ ಪಾನಪ್ರತಿಬಂಧ

ರಾಜ್ಯದ ಮಂತ್ರಿ ಮಂಡಳಿಯ ಆಗ್ರೇ ಸರರೆಲ್ಲೊಬ್ಬರೆಂದು ಪರಿಗಣಿತವಾದ ಅ ಬಕಾರಿ ಮಂತ್ರಿ ಶ್ರೀ ರಾಚಯ್ಯನವರು ಮೊತನಲ್ಲಿ ಆಟಂ ಬಾಂಬು ಬಿಡುವುದರ ಲ್ಲಿ ಅತ್ಯಂತ ನಿಷ್ಣಾತರೆಂದು ಈ ಮೊದ ಲೇ ಪ್ರಕಟಗೊಂಡಿದೆ. ತನ್ನ ಈ ಅಪೂ ರ್ವ ಶಕ್ತಿಯಿಂದಲೇ ಅವರು ಜತ್ತಿಯವ ರ ಸಚಿವ ಸಂಪುಟದಲ್ಲಿ ತನ್ನ ಸ್ಥಾನವನ್ನೆ ಭದ್ರವಾಗಿರಿಸಿ ಕೊಂಡಿದ್ದಾರೆನ್ನುವುದೂ ಪಿಸುಕೇಳುತ್ತಿದೆ. ಪಾನನಿರೋಧವನ್ನು ಹಂತ ಹಂತಗಳಲ್ಲಿ ರಾಜ್ಯದ ಎಲ್ಲ ಭಾಗ ಗಳಲ್ಲಿಯೂ ವ್ಯವಹೃತಗೊಳಿಸುವುದೇ ಸ ರಕಾರದ ನೀತಿಯೆಂದೂ, ಪಾನನಿರೋಧ ವು ಯಶಸ್ವಿಯಾಗಿರುವುದೆಂದೂ ಅವರು ವಿಧಾನ ಸಭೆಯಲ್ಲಿ ಘೋಷಿಸಿದರು. ಬಾಂ ಬು ಸುರಿದವರಿಗೆ ಊರವರ ಸುಖಕಷ್ಟ ಗೊತ್ತಾದೀತೆ? ಆದರೂ ಅದನ್ನು ಕೇಳ ಲಾದೀತೆ?

ಜೀವನದ ವಿವಿಧ ಘಟ್ಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮಧುವೆ ಸೀರೆ

ಮಧುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋ ಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ನೂಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ ಬೇಕಾಗುವ

ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಪ್ರಚಲಿತ ಪ್ರಸಂಗ

(೧೫ನೇ ಪುಟದಿಂದ)

ವೊಂದು ಕಡಿತವನ್ನಾದರು ಇಷ್ಟರೆಲ್ಲಿಯೇ ಮಾಡಿದೆ; ಇದೀಗ ಚೀನಾದ ಯುದ್ಧ ಶಾಖೆಯು ಜೆಟ್ ವಿಮಾನಗಳ ಸಂಚಾರ ಪ್ರಮಾಣವನ್ನೂ ಇಳಿಸುವ ಕಾರ್ಯಕ್ರಮಗಳನ್ನಾದು ಕೈಗೊಂಡಿದೆ. ಸ್ವದೇಶದಲ್ಲಿ ಭಾವಿ ಅಭಾವವನ್ನಾದು ಪೂರ್ವಭಾವಿಯಾಗಿಯೇ: ಕಂಡುಕೊಂಡಿನ್ನೆದಂದಿಂದ ಇದಕ್ಕೆ ವಿಶೇಷ ಹಾನಿ ತಟ್ಟಲಾರದು.

ಚೀನೀಯ ಜೆಟ್ ವಿಮಾನಗಳು ಹಾಗೂ ಮತ್ತಿತರ ವಿಮಾನಗಳಿಗೆ ಅವಶ್ಯಕವಾಗಿತ್ತ ಎಣ್ಣೆಯನ್ನು ಸಂಪೂರ್ಣವಾಗಿ ಸೋವಿಯತ್ ರಶ್ಯವು ಇದು ವರೆಗೆ ಒದಗಿಸುತಿತ್ತು. ಸೋವಿಯಿತ್ತಿನಲ್ಲಿ ಎಣ್ಣೆಗೆ ಬರವೆಂಬುದಿಲ್ಲ. ಚೀನವು ಏನೇ ತಿಳಿದರಲಿ, ಸೋವಿಯತ್ ಪ್ರಧಾನಿ ಶ್ರೀ ಸ್ಟಿಲಿಟಕ್ಯುರೇವರು ಉದ್ದೇಶಪೂರ್ವಕವಾಗಿ ಎಣ್ಣೆಯ ಪೂರಯ್ಕೆಗೆ ತಡೆ ಒಡ್ಡಿದರು ಎನ್ನುವುದು ತುಸು ದಾಷ್ಟ್ರ್ಯದ ಮಾತಾದೀತು ಅವರು ಮನಸ್ಸು ಮಾಡಿದರೆ, ಚೀನಾದಲ್ಲಿ ಈಗ ತೋರಿ ಬರುತ್ತಿರುವ ಅಭಾವವನ್ನು ಸಂಪೂರ್ಣವಾಗಿ ದೂರೀಕರಿಸಲು ಸಶಕ್ತರಿದ್ದಾರೆ. ಕನ್ನಲ್ಲಿ ಎಣ್ಣೆಯು ಜೇರಳ ಪ್ರಮಾಣದಲ್ಲಿ ಲಭ್ಯವೂನವಿರುವುದರಿಂದಲೇ ಸೋವಿಯತ್ ಬಹಳ ಆಗ್ಗದ ದರದಲ್ಲಿ ಅದನ್ನು ಒದಗಿಸಲು ಮುಂದಾಗಿದೆ. ಇದೂಂದಾಗಿಯೇ ಅದು ಪಾಶ್ಚಾತ್ಯ ಕಾಪೆನಿಗಳೊಡನೆ ಸ್ಪರ್ಧೆಗೆ ನಿಂತಂತಾಗಿದೆ ಆದುದಾಂದ. ಈ ಕಾರಣದಿಂದಾಗಿಯೇ ಚೀನಾ—ಸೋವಿಯತ್‌ಗಳ ನಡುವೆ ಮತ್ತಷ್ಟೊಂದು ಹುಟ್ಟಿದಾದಲ್ಲವೇಬುದಂತೂ ಖಚಿತವಿದೆ.

ಹಾಗಾದರೆ, ಭವಿಷ್ಯವಾಣಿಯ ಹೇಳುವುದೇನು? ಎಂಬುದಕ್ಕೆ ಉತ್ತರ ಬಾಕಿಯುಳಿಯುತ್ತದೆ. ಜಗ, ಚೀನಾ—ಭಾರತ ಸೀಮೆಯಲ್ಲಿ ಚೀನೀಯ ಸೇನೆಗಳ ಆಮೂಲಾಗ್ರ ಆಕ್ರಮಣವೊಂದೇ ಜೀತುವೆಂದು ಊಹಿಸಲಾಗುತ್ತದೆ. ಈ ಉಭಯ ರಾಷ್ಟ್ರಗಳ ನಡುವಣ ತಿಸೀಮ ಮೈತ್ರಿಯಲ್ಲೀಗ ಬಿರುಕುಂಟಾಗಿದೆ. ಸೀಮೆ ವಿವಾದವು ಶಾಂತಿಯಿಂದ ಬಗೆಹರಿಯಬೇಕೆಂಬುದೇ ನೆವಿಯತ್ತಿನ ನಿಲುವೇನೆಯೂ ಗಿದೆಯೆಂದರೆ, ತಿಶಯೋಕ್ತಿಯಲ್ಲ. ಆದರೆ, ಈ ಬಗ್ಗೆ ಬಹು ದೀರ್ಘಕಾಲ ಜರ್ಜೆ

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4½%
13 ,, 24 ,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಬ್ರಾ. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ನಿಮಗೆ ಗೊತ್ತೆ?

(೧೫ನೇ ಪುಟದಿಂದ)

ಳನ್ನು ಕೊಳ್ಳುವುದಕ್ಕೆ ಆತುರರಾದ ಗ್ರಾಹಕರು ಜರ್ಮನಿಗೆ ಬರುತ್ತಾರೆ; ತಮ್ಮ ಹಣವನ್ನು ಇಜ್ಜಿನ ತಿಜೋರಿಗಳಲ್ಲಿ ತುಂಬಿಸಿಬಿಡುತ್ತಾರೆ.

ಜರ್ಮನಿಯ ನೆರೆಯ ರಾಜ್ಯ ಸ್ವಿಜರ್‌ಲೆಂಡಿನಲ್ಲಿ ಕೂಡ ಇದೇ ಮಾದರಿಯಲ್ಲಿ ಹಣದ ಚಿಲ್ಲಾಟ ನಡೆಯುತ್ತಿದೆ. ಆದರೆ, ಈ ನೀರು ದೂರ ಮತ್ತು ಸೆಮೀಪದ ಕಂದರಗಳಿಂದ ಅಡಗಿಕೊಂಡು ಹರಿದುಬರುತ್ತಿದೆಯೇ ಕೊರತು ಜರ್ಮನಿಯದರಂತೆ ಸ್ವಪರಿಶ್ರಮ ನಿರ್ಮಿತ ಜಲಸ್ರೋತಗಳಿಂದಲ್ಲ. ಸ್ವಿಜರ್‌ಲೆಂಡಿನ ಗಡಿಯನ್ನು ಮುಟ್ಟಿದೊಡನೆಯೇ ಹಣದ ಮೇಲೆ ಭದ್ರತಡೆಯನ್ನು ಹಾಕಿ ಬಿಡುತ್ತಾರೆ. ಅಲ್ಲಿನ ಬೇಂಕುಗಳಲ್ಲಿ ಹೆಸರಿಲ್ಲದೇನೇ ಕೇವಲ ಸಾಂಕೇತಿಕ ಸಂಖ್ಯೆಯ ಸಹಾಯದಿಂದ ಹಣ ಜಮೆಮಾಡಬಹುದು. ಹೊರಗಿನವರಿಗೆ ಮಾತ್ರವಲ್ಲ ಸ್ವಿಜರ್‌ಲೆಂಡಿನ ಸರಕಾರ ಹಾಗೂ ಅದರ ಆದಾಯಕರ ವಿಭಾಗದವರಿಗೂ ಈ ಖಾತೆಗಳ ವಿವರಗಳನ್ನು

ಯಲ್ಲಿ ಕಳೆನೇರೇ ಹೊರತು ಒಂದು ಸಾಮಾನ್ಯ ನಿರ್ಣಯಕ್ಕಾದರೂ ಬರುವುದು ಅವರಿಗೆ ಸಾಧ್ಯವಾಗಲಿಲ್ಲ. ಆಗ ಸಖ್ಯಭಾವವು ಮತ್ತಷ್ಟು ದೂರವಾಗಬಹುದೇ ಹೊರತು ಅದು ಬೆಳೆದುಬರುವುದು ಅಸಾಧ್ಯ. ಈ ಬಿರುಕಿನ ಕಹಿಯನುಭವವನ್ನು ತಿನ್ನುವವರು ಯಾರು, ಚೀನೀಯರೆ, ಸೋವಿಯತ್ ಪ್ರಜೆಗಳೇ ಅಥವಾ ಭಾರತವೆ? ಎಂಬುದಕ್ಕೆ ಉತ್ತರ ಹೇಳಲು ಹಿಂಜರಿಯಬೇಕಾಗಿಲ್ಲ. ಚೀನೀಯ ಸಾಮ್ರಾಜ್ಯವಾದ ನೀತಿಯು ಎನನ್ನು ಮಾಡುತ್ತದೆ ಮತ್ತು ಮಾಡಿಸುತ್ತದೆಯೆಂದು ಇಪ್ಪರಲ್ಲಿಯೇ ನಾವು ತಿಳಿದುಕೊಂಡಿದ್ದೇವೆ. ರಶ್ಯವು ಸ್ವೇಚ್ಛೆಯಿಂದ ವಹಿಸಿಕೊಂಡಂತಿರುವ ವಿವಾದ ಮಧ್ಯಸ್ಥಿಕೆ ಮುರಿದು ಬಿಪ್ಪು ಎಂದೇ ಹೇಳಬೇಕು!

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ—ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲರು, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾನಾಯಕನ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತಪ್ಪ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿ ಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರೂಪ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ. ಬೆಲೆ: ರೂ. 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ದಲ್ಲಿ ಸಹಾಯ ಮಾಡುವುದೇ ಜರ್ಮನಿಯಲ್ಲಿ ಸಂಚಿತವಾಗಿರುವ ಅಪಾರ ಧನದ ಸದುಪಯೋಗವೆಂದು ಈಗ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಧನಹೀನ ದೇಶಗಳಿಗೆ ಜರ್ಮನಿಯು ಯುಕ್ತಹಸ್ತದಿಂದ ಸಹಾಯ ಮಾಡಬೇಕೆಂದಿವರೆನ್ನುತ್ತಾರೆ. ಆದರೆ, ಅಲ್ಲಿ ಇದಕ್ಕೆ ವಿರೋಧಿಗಳೂ ಹಲವರಿದ್ದಾರೆ. ಈಗ ಸುಸಂಪನ್ನವಾಗಿದ್ದರೂ ಈ ಶತಮಾನದಲ್ಲಿ ಎರಡು ಬಾರಿ ಆರ್ಥಾತಿಂತಿಂತೆಯೇ ಮುಂದಕ್ಕೆ ಜರ್ಮನಿಯು ಪದದಲಿತವಾಗುವುದೆಂದು ಹೇಳುವವರೂ ಇಲ್ಲದಿಲ್ಲ. ಇದೇನೋ ಕೇಳಲು ಅಪಹ್ಯವೆನಿಸಬಹುದು. ಆದರೂ ಜರ್ಮನಿಯು ತನ್ನಲ್ಲಿನ ಧನ ಪ್ರವಾಹವನ್ನು ಇನ್ನೊಂದು ದಾರಿಯಲ್ಲಿ ಹರಿಯುಗೊಡಲು ಸಿದ್ಧವಿಲ್ಲವೆಂಬುದಂತೂ ಖಂಡಿತ. ಆದುದರಿಂದ ಸಂಪನ್ನತೆಯು ಮಹಾಪೂರದಲ್ಲಿ ತಾವು ಮುಳುಗಿಯೇವು ಎಂದು ಜರ್ಮನ್ನರಿಗೆ ಹೆದರಿಕೆಯೂ ಇದೆ; ಇದರಿಂದಾಗಿಯೇ ಅವರು ಈಗಾಗಲೇ ಸಾಕಷ್ಟು ಎಚ್ಚರಿಕೆ ವಹಿಸುತಿದ್ದಾರೆ.

ಜಗತ್ತಿನ ಕಂಸನ್ನ ರಾಷ್ಟ್ರವೆಂಬ ಕೀರ್ತಿಗಳಿಸಿದ ಅಮೆರಿಕೆಯಲ್ಲಿ ಎರಡು ಬಗೆಯ ಸಂಪತ್ತಿದೆ. ಮೊದಲನೆಯದು ಶ್ವಂತ್ಯ; ಎರಡನೆಯದು ಪರೆ. ಈ ಎರಡನೆಯ ಖಜಾನೆಗೆ ಸಂಸತ್ತು ಮೊದಲನೆಯದರಿಂದಲೇ ಹೋಗಿದೆ. ಹತ್ತು ವರ್ಷಗಳಿಗೆ ಮೊದಲು ಸಾಮ್ಯವಾದ್ಯೇತರ ರಾಷ್ಟ್ರಗಳಲ್ಲಿದ್ದ ಒಟ್ಟು ೩೫,೦೦೦ ಟನ್ ಬಂಗಾರದಲ್ಲಿ ೨೫ ಸಾವಿರ ಟನ್ ಅಮೆರಿಕೆಯ ಕೈಯಲ್ಲಿತ್ತು. ಇವುಗಳಲ್ಲಿ ೧೭ ಸಾವಿರ ಟನ್ ಸ್ವಯಂ ಅಮೆರಿಕೆಯದ್ದು. ಅಮೆರಿಕೆಯ ವಕ್ತಾರನು, 'ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ 'ಸೇಂಟ್‌ಗಿರ್' ತೋರಿಬರುತ್ತಿದೆ. ಸಾಮಾನು ಸರಂಜಾಮುಗಳನ್ನು ವಿದೇಶಗಳಿಂದ ಕೊಂಡುಕೊಂಡಿದ್ದೇವೆ; ಆದರೆ, ನಮ್ಮ ಸ್ವಯಂ—ಪರ ಬಂಗಾರದ ಭಂಡಾರದಲ್ಲಿ ಇಳಿವರಿಯೂಗಲಿಲ್ಲ. ವಿದೇಶೀಯ ಸರಕಾರಗಳು ಬಹಳಷ್ಟು ಸಾಲ ತೆಗೆದುಕೊಂಡು ಬಿಟ್ಟು, ಸಾಲವನ್ನು ತೀರಿಸುವ ವಿಷಯದಲ್ಲಿಯೇ ತಮ್ಮ ಕೋಶವನ್ನು ಬರಿದಾಗಿಸುವ ಅಂಜಿಕೆ ಇನೆ' ಎಂದು ಹೇಳುತ್ತಾನೆ.

ಜರ್ಮನಿಯು ಆರ್ಥಿಕ ಭಾಗವಿಧಾತ ಡಾ। ಎರ್ಹರ್ಟ್‌ರಿಗೂ ಇದೇ ಮಾದರಿಯ ಭಯ ಹುಟ್ಟಿಕೊಂಡಿದೆ. ಅವರು ಮುಷ್ಟಿ ಬಿಗಿಹಿಡಿದು ಕೂತಿದ್ದಾರೆ. ಈ ಮುಷ್ಟಿಯು ತುಸು ಸಡಿಲಾಯಿತೆಂದರೆ ನಮ್ಮಂತಹ ಧನಸಾಧನ ಹೀನ, ಆದರೆ, ಉನ್ನತಿ ಪಥಗಮನಾಭಿಲಾಷೀ ದೇಶಗಳಿಗೆ ಬಹಳಷ್ಟು ಉಪಕಾರವಾಗುತಿತ್ತು. ಪರಂತು, ಅಂತಹ ಭಿಕ್ಷೆಯಿಂದ ಏನಾದರೂ ಪ್ರಯೋಜನವಿದೆಯೆ? ಮುಂದುವರಿಯಬೇಕಾದರೆ, ನಮ್ಮ ಕಾಲುಗಳ ಸಹಾಯದಿಂದ, ಆಧಾರದಿಂದ ನಿಂತು ಮುನ್ನಡೆಯಬೇಕು; ಬೆರಳು ಊರಿ ನಡೆಯುವುದಕ್ಕಾದರೂ ಕೆಲವು ದೇಶಗಳು ಸಬಲವಾಗಿವೆ; ಅಷ್ಟನ್ನಾದರೂ ಮಾಡಲು ಅವು ಹಿಂದುಳಿಯುವಾರದು.

ಕಾರಂತರ ಪುಸ್ತಕಗಳು

ಆಳಿದ ನೇಲೆ (ಹೊಸ ಕಾದಂಬರಿ)	2_75
ಪಂಚಮಿತು (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಅಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಆತ್ಮಕ್ಕೆ ನಾಶವಿಲ್ಲ; ದೇಹವು ಮರಣಶೀಲವಾಗಿದೆ. ಫಲಾಪೇಕ್ಷೆಯಿಲ್ಲದೆ ನಿಷ್ಕಾಮ ಕರ್ಮವನ್ನು ಮಾಡಬೇಕು; 'ನಾನು, ನನ್ನದು' ಎಂಬ ಮೂಢಹಂಕಾರವನ್ನು ಬಿಟ್ಟು ಇಂದ್ರಿಯಗಳನ್ನು ನಿಗ್ರಹಿಸಿದರೆ ಪರಮ ಶಾಂತಿ ಲಭಿಸುವುದು

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೨: ಜ್ಞಾನಯೋಗ

ಕರುಣಾಸಾಗರನಾದ ಅರ್ಜುನನ ಕಣ್ಣುಗಳಿಂದ ಜಲಧಾರೆಯು ಸುರಿಯಲಾರಂಭಿಸಿತು. ಮನಸ್ಸು ತಳಮಳಿಸಿತು. ಆಗ ಅವನ ಮುಖವನ್ನು ನೋಡಿ ಕೃಷ್ಣನು ಹೀಗೆಂದನು:—

ಭಗವಾನ್ ಕೃಷ್ಣ— ಅರ್ಜುನನೇ, ನಿನಗೆ ಈ ರೀತಿಯ ಭ್ರಮೆಯು ಎಲ್ಲಿಂದ ಅಂಕುರಿಸಿತು? ಇದು ನಾಚಿಕೆಗೇಡು. ಇದರಿಂದ ನಿನ್ನ ಮಾನವು ಹೋಗುವುದು. ಆರ್ಯೆರ್ಯವು ಕ್ಷತ್ರಿಯನಿಗೆ ಹೇಳಿದ್ದಲ್ಲ. ನಿರರ್ಥಕವಾದ ಹೃದಯ ದೌರ್ಬಲ್ಯವನ್ನು ಬಿಟ್ಟುಬಿಡು.

ಅರ್ಜುನ— ಮಧುಸೂದನನೇ, ಪಿತಾಮಹನನ್ನು, ಗುರುವನ್ನು ಎದುರಿಸುವುದು ಸರಿಯಲ್ಲ. ಭೀಷ್ಮ ದ್ರೋಣರನ್ನು ನಾನು ಪೂಜಿಸಬೇಕು. ಈ ಪಣ್ಯಾತ್ಮರನ್ನು ಸಂಹರಿಸುವ ಬದಲು ನಾನೇ ಭಿಕ್ಷುಕನಾಗಿ ಬಾಳುವೆನು. ಲೋಭದಿಂದ ರಾಗ್ರಹದಿಂದ ಅವರು ಯುದ್ಧಕ್ಕೆ ನಿಂತರಬಹುದು. ಆದರೆ ನಾನು ಅವರ ಶಿಷ್ಯನು. ಗುರುಹತ್ಯೆಯಿಂದ ನನಗೆ ಯಾವ ವಿಧದ ಸಂತೋಷವೂ ಸಿಗದು. ಧೃತರಾಷ್ಟ್ರನ ಸುತರು ನನ್ನ ಸಹೋದರರು. ಅವರನ್ನು ಕೊಲ್ಲುವುದು ಯಾವ ಧರ್ಮನೀತಿ? ನನ್ನ ಹೃದಯದಲ್ಲಿ ಕರುಣೆಯು ತುಂಬಿದೆ. ನನ್ನ ಮನಸ್ಸು ಧರ್ಮದ ಆಳವನ್ನು ಪರೀಕ್ಷಿಸುತ್ತಿದೆ. ನಾನು ನಿನ್ನ ಶಿಷ್ಯನೆಂದು ಭಾವಿಸಿ ನನ್ನಲ್ಲಿ ಜ್ಞಾನವನ್ನು ಅಂಕುರಿಸು.

ಕೃಷ್ಣ— ನಿನ್ನ ಮಾತುಗಳಲ್ಲಿ ಸಾರ ವಿದೆ. ಆದರೆ ದುಷ್ಪರ ವಧೆಗಾಗಿ ಅಳುವುದು ಸರಿಯಲ್ಲ. ಜ್ಞಾನಿಗಳು ಸತ್ತವರಿಗಾಗಲೀ, ಉಳಿಯುವವರಿಗಾಗಲೀ, ತಮ್ಮ ಮನವನ್ನು ಸಂದಿಸಿ ಶೋಕಿಸುವುದಿಲ್ಲ. ಇಲ್ಲಿ ನೆರೆದ ನಾವೆಲ್ಲರೂ ಹಿಂದೆ ಇದ್ದೆವು. ಮುಂದೂ ಇರುವೆವು, ಆತ್ಮಕ್ಕೆ ಅಳಿವಿಲ್ಲ. ಕೆಲವು ದೇಹಗಳಿಂದ ಆತ್ಮವು ಬಾಲ್ಯಾವಸ್ಥೆಯಲ್ಲಿಯೆ ತೊಲಗುವುದು ಇನ್ನು ಕೆಲವು ಶರೀರಗಳಿಂದ ಆತ್ಮವು ಮಧ್ಯವಯಸ್ಸಿನಲ್ಲಿ ಓಡುವುದು. ಉಳಿದ ಕೆಲವು ಶರೀರಗಳಿಂದ ಆತ್ಮವು ವೃದ್ಧಾಪ್ಯದಲ್ಲಿ ಹೋಗುವುದು. ಒಂದು ಶರೀರವನ್ನು ಬಿಟ್ಟಾಗ ಮತ್ತೊಂದರಲ್ಲಿ ಅದು ನೆಲಸುವುದು. ಜ್ಞಾನಿಯು ಈ ಮೂರ್ಖಾಟದ ಪೂಯೆಗೆ ಬಲಿಬೀಳನು. ಈ ನಮ್ಮ ಇಂದ್ರಿಯಗಳಿಂದ ಶೀತೋಷ್ಣಗಳು ಹುಟ್ಟುವಂತೆ, ಸುಖದುಃಖಗಳೂ ಅಂತೆಯೇ ಹುಟ್ಟುವವು. ಹುಟ್ಟಿದಂತೆ ಹೋಗುವವು. ಶಾಶ್ವತವಾಗಿ ಎಂದೂ ಉಳಿಯುವ ಸುಖದುಃಖಗಳನ್ನು ಏಕರೀತಿಯಲ್ಲಿ ಕಾಣುವ ಜ್ಞಾನಿಯು ಮುಕ್ತಿಸಾಧಕನು. ಸುಳ್ಳೆಂಬುದು ಎಂದೂ ಸುಳ್ಳು. ಹಾಗೆಯೇ ಸತ್ಯವು ನಿರಂತರವೂ ಸತ್ಯವೇ. ಜ್ಞಾನಯೋಗಿಗಳಿದೆ ಇದು ತಿಳಿದ ವಿಚಾರ. ನಾಶಕ್ಕೆ ಯಾರೂ ಹೊಣೆಯಿಲ್ಲ. ಆತ್ಮಕ್ಕೆ ಎಂದೂ ನಾಶವಿಲ್ಲ. ಈ ದೇಹವು ಮಾತ್ರ ನಶ್ವರವಾಗಿದೆ- "ನಾನು ಅವನನ್ನು ಕೊಂದೆನು. ಅವನು ನನ್ನನ್ನು ಕೊಲ್ಲುವನು." ಎಂದು ತಿಳಿಯುವವನು ಅಜ್ಞಾನಿ. ಆತ್ಮಕ್ಕೆ ಜನನವೂ ಇಲ್ಲ, ಮರಣವೂ ಇಲ್ಲ. ಅದು ಸುಸ್ಥಿರವಾದುದು. ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅಸ್ತ್ರಶಸ್ತ್ರಗಳು ಅದನ್ನು ಭೇದಿಸವು. ಅಗ್ನಿಯು ಆತ್ಮವನ್ನು ಸುಡದು. ಉದಕವು ತಣಿಸದು. ಆತ್ಮದಲ್ಲಿ ಬದಲಾವಣೆಗಳ ಅವಸ್ಥೆಗಳಿಲ್ಲ. ಆತ್ಮದ ಭಾವವು ಒಂದೇ. ಹುಟ್ಟಿದವನಿಗೆ ಸಾವುಯಿದೆ ಎಂಬುದು ನಿಜವು. ಸತ್ತವನು ಪುನಃ ಜನ್ಮವೆತ್ತುವನು ಎಂಬುದು ಕೂಡ ನಿಜವು. ಮಾನವ ಜೀವನದಲ್ಲಿ ಇದೊಂದು ಸಂಘಟನೆ. ಅದು ಕಾರಣ, ಶೋಕಕ್ಕೆ ಸ್ಥಾನವಿಲ್ಲ. ಆತ್ಮವನ್ನು ಶೋಧಿಸಿದವರಾರೂ ಇಲ್ಲ. ಎಲ್ಲರಲ್ಲೂ ಆತ್ಮದ ನೆಲೆಯಿದೆ. ಆದರೆ ಆತ್ಮಕ್ಕೆ ಮರಣವಿಲ್ಲ. ನೀನು ಶೋಕವನ್ನು ಬಿಟ್ಟು ಬಿಡು. ಕ್ಷತ್ರಿಯನು ಧರ್ಮಯುದ್ಧಕ್ಕೆ ಅಂಜುವುದು ಕೇವಲ ತಪ್ಪು. ಧರ್ಮಯುದ್ಧವು ಪ್ರಾಪ್ತಿಸುವ ಕ್ಷತ್ರಿಯರಿಗೆ ಅಂತಹ ಯುದ್ಧವು ಸ್ವರ್ಗದ ತೆರೆಮಿಟ್ಟೆ ಬಾಗಿಲು. ಧರ್ಮಯುದ್ಧಕ್ಕೆ ಹಿಂಜರಿದ ಕ್ಷತ್ರಿಯರು ನೀತಿ ಬಾಹಿರರಾಗಿ ಪಾಪವನ್ನು ಗಳಿಸುವರು. ಜಗತ್ತು ಅವರನ್ನು ತುಚ್ಛೀಕರಿಸುವುದು. ಅವರು ಬದುಕಿದ್ದುಪ್ಪ ಯೋಜನವಿಲ್ಲ. ನೀನು ಯುದ್ಧರಂಗವನ್ನು ಬಿಟ್ಟು ಹೋದರೆ ನಿನಗೆ ಅಪಕೀರ್ತಿಯೊದಗುವುದು. ವೀರ ಕ್ಷತ್ರಿಯರಿಂದ ನೀನು ಅಪಹಾಸ್ಯಕ್ಕೊಳಗಾಗಬೇಡ. ನಿನ್ನ ಶತ್ರುಗಳು ನಿನ್ನನ್ನು ಹೇಡಿಯೆಂದು ಜರೆಯುವರು. ಈ ನೋವನ್ನು ನೀನು ತಡೆಯಲಾರೆ. ಯುದ್ಧದಲ್ಲಿ ಮಡಿದರೆ ನಿನಗೆ ವೀರಸ್ವರ್ಗ; ಗೆದ್ದರೆ ರಾಜ್ಯ ಭೋಗ ಪ್ರಾಪ್ತಿ. ಅದು ಕಾರಣ, ಕುಂತೀಸುತ್ರನೇ, ಧೃಢನಿರ್ಧಾರನಾಗಿ ಯುದ್ಧಕ್ಕಾರಂಭಿಸು ಸುಖದುಃಖಗಳೂ, ಜಯಾಪಜಯಗಳೂ, ಏಕಪವೂ ನವೆಂದು ದೃಢಚಿತ್ತದಿಂದ ನಂಬಿ ರಣಕ್ಕೆ ಸೊಂಟಕಟ್ಟು. ಇದರಿಂದ ನಿನಗೆ ಪಾಪ ನಿಲ್ಲ. ಸಂಪೂರ್ಣ ಜ್ಞಾನಯೋಗದ ಶಕ್ತಿಯಿಂದ ಈ ಉಸದೇಶವನ್ನ ನಿನಗೆ ಕೊಟ್ಟಿರುವೆನು. ನಿಸ್ವಾರ್ಥ ಬುದ್ಧಿಯಿಂದ ನನ್ನ ಉಸದೇಶವನ್ನು ಗ್ರಹಣಮಾಡಿ ಕರ್ಮವನ್ನು ಸಾಧಿಸು. ಮನಸ್ಸನ್ನು ವೃಥಾ ಮಾಡಿಕೊಳ್ಳು. ಆಕೆಗಳಿಂದ ಬಂಧಿತರಾದವರು ತಾವು ಮಾಡುವ ಕರ್ಮಗಳಿಂದ ಸುಖ ಮತ್ತು ಅಧಿಕಾರಗಳು ಲಭಿಸಬೇಕೆಂದು ಹಾರೈಸುವರು. ಸುಖಾಧಿಕಾರಿಗಳಿಗೆ ಪ್ರಾಮುಖ್ಯವನ್ನು ಕೊಡುವರು. ಅಂತಹ ಸ್ವಾರ್ಥಿಗಳಲ್ಲಿ ಜ್ಞಾನವು ಉದಿಸದು. ಆತ್ಮಶುದ್ಧಿಯೇ ನಿನ್ನ ಗುರಿಯಾಗಿಟ್ಟು ಜಯಾಪಜಯಗಳನ್ನು ಎಣಿಸದೆ ಕರ್ಮವನ್ನು ಸಾಗಿಸು. ಧರ್ಮ ಕರ್ಮವನ್ನು ಮಾಡಲೇ ಬೇಕು. ಫಲವನ್ನು ಅಪೇಕ್ಷಿಸಬೇಡ. ನಿಷ್ಕಾಮ ಕರ್ಮವೇ ಆತ್ಮ ಶುದ್ಧಿಯ ಶಂಕುಸ್ಥಾಪನ. ಇದೇ ಜ್ಞಾನ ಯೋಗವು. ಜ್ಞಾನಿಗೆ ಕೆಟ್ಟದು ಒಳ್ಳೆಯದು ಎಂಬ ಭೇದಭಾವಗಳಿಲ್ಲ. ಕರ್ಮವನ್ನು ಕೌಶಲದಿಂದ ಮುಂದುವರಿಸುವುದೇ ಯೋಗವು. ನಿಷ್ಕಾಮ ಕರ್ಮಗೆ ಪುನರ್ಜನ್ಮವಿಲ್ಲ. ಶುದ್ಧ ಭಾವದಿಂದ ಮನಸ್ಸನ್ನು ದೃಢಪಡಿಸು.

ಅರ್ಜುನ:—ಕೃಷ್ಣನೇ, ಸುಸ್ಥಿರಜ್ಞಾನಿಯು ಮುಖ್ಯ ಕುರುಹು ಯಾವುದು? ಅವನ ನುಡಿಗಳು ಹೇಗಿವೆ? ಅವನ ನಡತೆಯು ಹೇಗಿರುವುದು? —ತಿಳಿಸು.

ಭಗವಾನ: – ಮನಸ್ಸನ್ನು ಅವರಿಸಿರುವ ಆಕೆಗಳಿಂದ ಬಿಡುಗಡೆಯೊದವನು ಸುಸ್ಥಿರಜ್ಞಾನಿಯು. ಆತನಿಗೆ ಆತ್ಮಶಾಂತಿಯಿದೆ. ಯಾವ ಕಷ್ಟಗಳಿಗೂ ಹೆದರನು. ಆತನಲ್ಲಿ ಒಟ್ಟು, ಭಯವೂ ಅಂಕುರಿಸಲಾರವು. ಆತನು ವಿವೇಕಯೊಗುವನು. ಸುಖಬಂದಾಗ ಹಿಗ್ಗಲಾರನು. ದುಃಖ ಬಂದಾಗ ಕುಗ್ಗಲಾರನು ಆತನಲ್ಲಿ ಶಕ್ತಿಯು ಬಲವತ್ತರವಾಗುವುದು. ಆತನ ಮನೋಬಲವೂ ಆತ್ಮಬಲವೂ ಬೆಳಗುವುದು. ಆತನು ಮಾಯಾಜಾಲದಲ್ಲಿ ಸಿಲುಕನು. ನನ್ನಲ್ಲಿ ಧೃಢಭಕ್ತಿಯನ್ನು ಇಡುವನು. ಸಿಟ್ಟನ್ನು ಒಟ್ಟಿಬಿಡುವನು. ಆಶಾಬದ್ಧನಾದವನಲ್ಲಿ ಶಾಂತಿಗೂ, ಜ್ಞಾನಕ್ಕೂ ಎಡೆಇಲ್ಲ. "ನಾನು, ನನ್ನದು" ಎಂಬ ದುರಂಹಕಾರವನ್ನು ಸಂಪೂರ್ಣವಾಗಿ ತ್ಯಜಿಸಿ, ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡ ಮಾನವನು—ಪರಮಶಾಂತಿಯ ಭೋಗಕ್ಕೆ ಪಾತ್ರನಾಗುವನು. ಈ ಭಾವದಿಂದಲೇ ಮಾಯೆಯು ನಿಗ್ರಹವು. ಈ ಭಾವನೇ ಮೋಕ್ಷದ ದ್ವಿಹಾದಿ ಎಂಬುದನ್ನು ಅರಿತುಕೊ.

— —

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆರ್ಡಾಯಿ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ನಿಮಗೆ ಬೇಕಾದ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Apply At

Crown RUBBER STAMP Co.

BALMATTA ROAD, MANGALORE.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ವಿಚಾರವರ್ಷ

(೩ನೇ ಪುಟದಿಂದ)

ರೂಪದಲ್ಲಿ ಎಷ್ಟೋ ಪದಾರ್ಥವು ಭೂಮಿಯನ್ನು ಸೇರುತ್ತಿದೆ.

ಭ್ರಮಣಗತಿಯ ತಿಕ್ಕಾಟ—

ಅತ್ಯಂತ ಬಿಸಿಯಾದ ದ್ರವ ವಾಯು ಪದಾರ್ಥವು ತಣಿದು ಘನೀಭವಿಸಿ ಗ್ರಹಗಳು ಏರ್ಪಟ್ಟುವೆಂಬ ಸಿದ್ಧಾಂತಕ್ಕೂ ಆದಿಮೇಘಕ್ಕೆ ಸಂಬಂಧಿಸಿದ ಪದಾರ್ಥ ರೇಣುಗಳು ಕೂಡಿಕೊಂಡು ಕ್ರಮವಾಗಿ ಇತರ ಪದಾರ್ಥಗಳನ್ನು ಆಕರ್ಷಿಸಿ ತನ್ನಲ್ಲಿ ಸೇರಿಸಿಕೊಂಡು, ಗ್ರಹಗಳೇರ್ಪಟ್ಟುವೆಂಬ ಷ್ಮಿತ್‌ನಂತಹ ಸಿದ್ಧಾಂತಕ್ಕೂ ವ್ಯತ್ಯಾಸವುಂಟು. ಈ ಎರಡನೆಯದನ್ನು "ಉಲ್ಕಾ ಸಿದ್ಧಾಂತ" ವೆನ್ನುವರು. ಹಾಗೆಂದ ಮಾತ್ರಕ್ಕೆ ಉಲ್ಕೆಗಳಂತಹವು ಸೇರಿ ಗ್ರಹಗಳು ಏರ್ಪಟ್ಟುವೆಂದು ತಿಳಿಯಬಾರದು. ಪಿಂಡರೂಪದಲ್ಲಿ ಗ್ರಹಗಳುಂಟಾಗಲು ಸಹಕರಿಸಿದ ಪದಾರ್ಥವೇ ಉಲ್ಕೆಗಳುಂಟಾಗಲಿಕ್ಕೂ ಸಹಕರಿಸಿದುವು. ಆದರೆ ಉಲ್ಕೆಗಳು ಹೊಂದಿದ ಪರಿಣಾಮವು ಸುದೀರ್ಘವಾದುದು. ಉಲ್ಕಾ ಶೇಷಗಳ ಪರಿಶೀಲನೆಯಿಂದ ಆ ಪರಿಣಾಮವು ಬೋಧವಾಗುತ್ತದೆ.

ಆದರೆ ಈಗ ನಾವು ನೋಡುವ ಈ ಭೂಮಿಯನ್ನೆ ತೆಗೆದುಕೊಂಡರೆ, ಇದರಲ್ಲಿರುವ ಪದಾರ್ಥದ ಹೆಚ್ಚು ಭಾಗವು ನಾವು ಈಗ ನೋಡುವ ಉಲ್ಕೆಗಳ ಸೇರಿಕೆಯಿಂದಲೇ ಉಂಟಾಯಿತೆಲ್ಲವು ಸಂದೇಹವಿಲ್ಲ. ಭೂಮಿ ಮೊದಲನೇ ಪದಾರ್ಥದಿಂದ ಉಂಟಾಗಿ, ಆದರ ಪಿಂಡದೆಡೆ ಪರಿಸರವನ್ನು ಪೂರ್ಣವಾಗಿ ಕಾಲಕ್ಕೆ ಅವರ ಪ್ರಮಾಣವು ಈಗಿನಿಮ್ಮದಕ್ಕಿಂತಲೂ ಎಷ್ಟೋ ಪಾಲು ಕಡಮೆಯಾಗಿತ್ತು.

ಆದಿ ಮೇಘವು ಒಂದು ಪರಿಣಾಮದ ಕೆಯನ್ನು ಮಾಡುವಾಗ ಅದರಲ್ಲಿ ಅಸಂಖ್ಯಾತವಾದ ಗೋಳಾಂತರಗಳು ಉತ್ಪತ್ತಿಯಾಗಿದ್ದಿರಬೇಕು. ಇವುಗಳಲ್ಲಿ ಕೆಲವು ಮೂಲದಲ್ಲೇ ಉಳಿದುವನ್ನು ಕಲಿಸಿ ತನ್ನೊಳಗೆ ಸೇರಿಸಿಕೊಂಡು ದೊಡ್ಡವಾದುವು; ಗ್ರಹಗಳಾದುವು. ಇದು ಯೂಹದ್ದಶೆಯಿಂದ ನಡೆಯಬೇಕೆಂಬುದನ್ನು ಷ್ಮಿತ್ತರ್‌ಗಣಿಸಿ ತಿಳಿದು ಕೊಂಡಿದ್ದಾನೆ

ಈ ಭಾವೀ ಗ್ರಹಗಳು ಬೆಳೆಯುವ ದಶೆಯಲ್ಲಿ, ತಮಗಿಂತಲೂ ಸೂರ್ಯನಿಗೆ ಸಮೀಪದಲ್ಲಿ ತಿರುಗುವ ಗೋಳಗಳನ್ನು ತಮ್ಮೊಳಗೆ ಸೇರಿಸಿಕೊಂಡಾಗ, ತಾವೇ ಸೂರ್ಯನ ಹತ್ತಿರಕ್ಕೆ ಜರುಗಿದುವು; ತಮಗಿಂತಲೂ ಹೆಚ್ಚಿನ ಶಕ್ತಿಯ ವೇಗದಿಂದ ಸೂರ್ಯನಿಗೆ ದೂರದಲ್ಲಿ ತಿರುಗುವಂಥವನ್ನು ತಮ್ಮೊಳಗೆ ಸೇರಿಸಿಕೊಂಡಾಗ ಸೂರ್ಯನಿಗೆ ದೂರವಾಗಿ ಹೋದುವು. ಒಂದು ಉದಾಹರಣೆ ನೋಡೋಣ. ಎರಡು "ಭಾವೀ" ಗ್ರಹಗಳು ಒಂದಕ್ಕೊಂದು ಅಪ್ಪೇನೂ ದೂರವಿಲ್ಲದೆ ಸೂರ್ಯನ ಸುತ್ತಲೂ ತಿರುಗುತ್ತಿವೆ ಎಂದುಕೊಳ್ಳೋಣ. ಸೂರ್ಯನಿಗೆ ಸ್ವಲ್ಪ ಹತ್ತಿರದಲ್ಲಿರುವ ಗ್ರಹವು, ಸೂರ್ಯನಿಗೆ ತನಗಿಂತಲೂ ಹತ್ತಿರದಲ್ಲಿ ತಿರುಗುವ ಪದಾರ್ಥಗಳನ್ನು ತನ್ನೊಳಗೆ ಎಳೆದುಕೊಳ್ಳುವುದರಿಂದ ತಾನಾಗಿಯೇ ಸೂರ್ಯನಿಗೆ ಹತ್ತಿರ ಹತ್ತಿರವಾಯಿತು. ಇಷ್ಟರಲ್ಲಿ ಮೊದಲೇ ಸೂರ್ಯನಿಗೆ ಸ್ವಲ್ಪ ದೂರವೇ ಇದ್ದ ಗ್ರಹವು, ತನಗಿಂತಲೂ ದೂರವಾಗಿರುವಂಥವನ್ನು ತನ್ನೊಳಗೆ ಸೇರಿಸಿಕೊಂಡು ತಾನಾಗಿಯೇ ಸೂರ್ಯನಿಗೆ ಇನ್ನಿಷ್ಟು ದೂರಕ್ಕೆ ಸಾಗಿತು. ಈ ಪರಿಣಾಮದಿಂದ ಎರಡು ಗ್ರಹಗಳೂ ಒಂದಕ್ಕೊಂದು ದೂರದೂರವಾಗುವಂತಾಯಿತು.

ಗ್ರಹಗಳೆಲ್ಲವೂ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುತ್ತವೆ. ಅಂದರೆ ಅವು ಬುಗರಿಗಳಂತೆ ತಮ್ಮ ಸುತ್ತಲೂ ತಾವು ತಿರುಗುತ್ತವೆ. ಆದರೆ ಸೂರ್ಯನ ಸುತ್ತಲೂ ಇವು ತಿರುಗುವ ಸಮತಲವೂ, ಆ ಪ್ರದಕ್ಷಿಣೆ ಮಾಡಿಕೊಳ್ಳುವ ಸಮತಲವೂ ಒಂದಕ್ಕೊಂದು ಇಳಿಜಾರಾಗಿರುತ್ತವೆ. ಅದಲ್ಲದೆ ಕೆಲವು ಗ್ರಹಗಳ ಉಪಗ್ರಹಗಳು ಗ್ರಹಗಳ ಸುತ್ತೂ ಪರಿಭ್ರಮಿಸುವ ಸಮತಲವು ಮತ್ತೊಂದು ವಿಧವಾಗಿದೆ. ಯುರೇನಸ್ ಗ್ರಹವು ತನ್ನ ಸುತ್ತಲೂ ತಿರುಗುವ ಸಮತಲವು, ತಾನು ತಿರುಗುವ ಸಮತಲದಲ್ಲಿರುವ ಗ್ರಹಗಳು ಸೂರ್ಯನ ಸುತ್ತೂ ತಿರುಗುವ ಸಮತಲಕ್ಕೆ ತುಂಬಾ ಇಳಿಜಾರಿನಲ್ಲಿದೆ. ಅಂಗಾರಕ ಗುರು, ಶನಿ, ಯುರೇನಸ್ ಇವುಗಳ ಉಪಗ್ರಹಗಳಲ್ಲಿ ಪ್ರಧಾನವಾದುದು ಅವುಗಳಿಗೆ ಸಂಬಂಧಿಸಿದ ಆತ್ಮ ಪ್ರದಕ್ಷಿಣೆಯ ಸಮತಲದಲ್ಲಿಯೇ ತಿರುಗುತ್ತವೆ. ಅಂದರೆ ಅವುಗಳು ಆಯಾ ಗ್ರಹಗಳೊಂದಿಗೇ ಇವೇ ಎಂದಾಯಿತು.

ಗ್ರಹಗಳ ಜನ್ಮವು ಯಾವ ಪದ್ಧತಿಯನ್ನು ಹಿಡಿದು ನಾಗಿದೆಯೋ ಉಪಗ್ರಹಗಳ ಹುಟ್ಟು ಕೂಡಾ ತುಸು ಹೆಚ್ಚುಕಡಮೆ ಆ ಪದ್ಧತಿಯನ್ನು ಹಿಡಿದೇ ನಡೆಯಿತೆಂದು ಗೊತ್ತಾಗುತ್ತದೆ. ಅಂದರೆ ಗ್ರಹಗಳ ಸುತ್ತಲೂ ಇರುವ "ಮೇಘ" ಸಂಬಂಧೀ ಪದಾರ್ಥ ರೇಣುಗಳು ಒಂದರೊಡನೊಂದು ಸೇರಿ ಹೋಗುವುದರಿಂದ ಮೇಘವು ಅಪ್ಪಟ್ಟಿಯಂತೆ ಮುದುಡಿ ಒಂದು ಚಕ್ರಾಕಾರವನ್ನು ಪಡೆಯಿತು. ಆದರಿಂದ ಉಪಗ್ರಹಗಳು ಹುಟ್ಟಿದುವು. ಸೂರ್ಯನಿಗೂ ಗ್ರಹಗಳಿಗೂ ಇರುವ ದೂರವು ಕ್ರಮಬದ್ಧವಾಗಿ ಹೆಚ್ಚಿದಷ್ಟೂ ಗ್ರಹಗಳಿಗೂ ಉಪಗ್ರಹಗಳಿಗೂ ಮಧ್ಯದಲ್ಲಿರುವ ದೂರ ಕೂಡಾ ಹೋದಷ್ಟೂ ಹೆಚ್ಚುತ್ತದೆ. ಈ ವಿಷಯವು ಗುರು, ಶನಿ, ಯುರೇನಸ್ ಗ್ರಹಗಳಿಗೆ ಸಂಬಂಧಿಸಿದ ಉಪಗ್ರಹಗಳಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ.

ತನ್ನ ಸುತ್ತಲೂ ತಿರುಗುವ ಮೇಘವು ತನ್ನೊಳಗಿನ ರೇಣುಗಳೊಡನೆ ಪರಸ್ಪರ ಕೂಡಿಕೆಯಾಗುವ ವರೆಗೂ ಸೂರ್ಯನು ತನ್ನ ಗುರುತ್ವಾಕರ್ಷಣೆಯು ಪ್ರಭಾವದಿಂದ ಈ ಮೇಘದಲ್ಲಿರುವ ಧೂಳೀ ರೇಣುಗಳ ಕೂಡಿಕೆಯನ್ನು ಸಿರೋಧಿಸಲು ಸಾಧ್ಯವಾಯಿತು. ಆ ತರುವಾಯ ಗುರುತ್ವಾಕರ್ಷಣೆಗೆ ತಡೆದುಕೊಳ್ಳುವ ಪರಸ್ಪರಾಕರ್ಷಣೆ, ಆ ಒಕ್ಕಿಕೊಂಡ ಮೇಘ ರೇಣು ಪುಂಜಗಳಿಗೆ ಉಂಟಾಯಿತು. ಅದೇ ವಿಧವಾಗಿ ಗ್ರಹಗಳು ಕೂಡಾ ತಮ್ಮ ಸುತ್ತೂ ಇರುವ ಮೇಘ ಪದಾರ್ಥವು ತಮ್ಮೊಳಗೆ ಸಿಕ್ಕಿಕೊಳ್ಳುವವರೆಗೂ, ತಮ್ಮ ಸುತ್ತೂ ಉಪಗ್ರಹಗಳು ಏರ್ಪಡದಂತೆ ತಮ್ಮ ಗುರುತ್ವಾಕರ್ಷಣೆಯಿಂದಲೆ ರೋಧಿಸಲು ಶಕ್ತವಾದುವು.

ರೋಷ್ ಲಿಮಿಟ್

ಗೋಳದಿಂದ ದೂರ ಹೋದಷ್ಟೂ ಗುರುತ್ವಾಕರ್ಷಣೆ ತಗ್ಗಿಹೋಗುತ್ತದೆ; ಗೋಳಕ್ಕೆ ಸಮೀಪದಲ್ಲಿ ಇದು ಬಹಳ ಹೆಚ್ಚಾಗಿರುತ್ತದೆ. ಆದುದರಿಂದ ಗ್ರಹಕ್ಕೆ ತೀರಾ ಸಮೀಪದಲ್ಲಿ "ಕಣಗಳ ಹುತ್ತ" ಏರ್ಪಡುವುದು ಸಾಧ್ಯವಾಗದು. "ಹುತ್ತ"ದಲ್ಲಿ ಪದಾರ್ಥವು ಎಷ್ಟು ಒತ್ತೊತ್ತಾಗಿ ಸೇರಿಕೊಂಡಿದೆಯೋ ಅಷ್ಟು ಶಕ್ತಿ ಹೆಚ್ಚಿಕೊಂಡಿರುತ್ತದೆ. ಆಗ ಆದು ಪ್ರಧಾನ ಗೋಳಕ್ಕೆ ಸಮೀಪ ಬಂದರೂ ವಿಚ್ಛಿನ್ನಗೊಳ್ಳದೆ ತಡೆದು ನಿಲ್ಲಬಲ್ಲುದು.

ಮೂತಿಗೆ ಬೇಕಾದರೆ, ಪ್ರಧಾನಗೋಳದಲ್ಲಿರುವ ಪದಾರ್ಥವೂ, ಉಪಗ್ರಹದಲ್ಲಿರುವ ಪದಾರ್ಥವೂ ಒಂದೇ ಬಗೆಯ ಸಾಂದ್ರತೆಯಿಂದ ಇದ್ದುವೆಂದುಳಿಕೊಳ್ಳೋಣ. ಆಗ ಉಪಗ್ರಹವು ಅಸಲು ಗ್ರಹದ ಸ್ವಲ್ಪ ದೂರಕ್ಕೆ ಬಂದುತ್ತಲೇ ಗುರುತ್ವಾಕರ್ಷಣೆಯ ಪ್ರಭಾವದಿಂದ ವಿಚ್ಛಿನ್ನವಾಗಿ ಹೋಗುತ್ತದೆ. ಈ ದೂರವನ್ನು ಶಾಸ್ತ್ರಜ್ಞರೆತ್ತರು ಅಂದಾಜು ಮಾಡಿಕೊಂಡಿದ್ದಾರೆ. ಇದು ಅಸಲು (ಮುಖ್ಯ) ಗೋಳದ ವ್ಯಾಸಕ್ಕೆ ಎರಡುವರೆ ಪಾಲು ಹೆಚ್ಚುಳ್ಳ ದೂರ. ಈ ದೂರವನ್ನು "ರೋಷ್ ಲಿಮಿಟ್" ಎನ್ನುತ್ತಾರೆ. ಇದು ಕೆಲವೇ ನೂರು ಮೈಲುಗಳಷ್ಟು ವ್ಯಾಸವುಳ್ಳವಾಗಿರುವಷ್ಟಪದಾರ್ಥ ಗೋಳಗಳಿಗೆ ವರ್ತಿಸಲಾರದು. ಅಣು ಸಂಯೋಗದಿಂದಲ್ಲದೆ, ಗುರುತ್ವಾಕರ್ಷಣೆಯಿಂದ "ಹುತ್ತ"ಗಳಾಗಿ ಏರ್ಪಟ್ಟಧೂಳೀ ಸನುಹೊಗಳಿಗೇ ವರ್ತಿಸುತ್ತದೆ. ಬಹಳ ತೆಳುವಾದ ಪದಾರ್ಥ ಮೇಘಗಳು ಇನ್ನೂ ಹೆಚ್ಚುದೂರದಲ್ಲಿರುವಾಗಲೇ ವಿಚ್ಛಿನ್ನವಾ ಹೋಗುತ್ತವೆ.

ಶನಿ ಗ್ರಹದ ಸುತ್ತಲೂ ಇರುವ ವಲಯಗಳು "ರೋಷ್ ಲಿಮಿಟ್"ಗಿಂತಲೂ ಕಡಮೆ ದೂರದಲ್ಲವೆ. ಈ ವಲಯಗಳು ಶನಿ ಗ್ರಹಕ್ಕೆ ಸಂಬಂಧಪಟ್ಟ ಗುರುತ್ವಾಕರ್ಷಣೆಯ ಕಾರಣದಿಂದ ಉಂಟಾದುವೆನ್ನಲು ಸಂದೇಹವಿಲ್ಲ. ಆದುದರಿಂದಲೇ ಈ ವಲಯಗಳಲ್ಲಿರುವ ಪದಾರ್ಥವು ಸಂಘಟಿಸಿಕೊಂಡು ಉಪಗ್ರಹಗಳಾಗುವಂತಹ ಅವಕಾಶವಿಲ್ಲವಾಯಿತು. ಅಂತೆಯೇ ಇವುಗಳಲ್ಲಿರುವ ಅತಿ ಸೂಕ್ಷ್ಮವಾದ ಕಣಗಳು ಬಹಳಷ್ಟು ದಪ್ಪವಿಲ್ಲದ ಚಕ್ರಗಳಾಗಿ ಏರ್ಪಟ್ಟುವು. ಈ ವಲಯಗಳು ಮತ್ತೊಂದು ವಿಧವಾಗಿಯೂ ಏರ್ಪಟ್ಟಿರಬಹುದು. ಅನೇಕ ಲಕ್ಷ ಕೋಟಿ ವರ್ಷಗಳ ಕೆಳಗೆ ಶನಿ ಗ್ರಹದ ಸುತ್ತಲೂ ತಿರುಗುತ್ತಿದ್ದ ಉಪಗ್ರಹವು ಶನಿ ಗ್ರಹದ ಬೆಳವಣಿಗೆಯಿಂದ "ರೋಷ ಲಿಮಿಟ್"ನೊಳಗೆ ಬಂದು ಆದರೊಳಗಿನ ಪದಾರ್ಥವು ಪೂರ್ತಿಯಾಗಿ ಘನೀಭವಿಸದೇ ಹೋದ ಕಾರಣದಿಂದ ವಿಚ್ಛಿತ್ತಿಹೊಂದಿ ಹೋಗಿರಬಹುದು.

ಕಣಗಳ ಹುತ್ತದೊಳಗಿನ ಕಣಗಳು ತಮ್ಮ ತಮ್ಮೊಳಗೆ ಅಂಟಿಕೊಂಡಾಗ ಅವುಗಳ ಜೈತನ್ಯ ಶಕ್ತಿ, ಉಷ್ಣ ರೂಪವಾಗುವುದೆಂದು ಹೇಳಿದೆನಷ್ಟೆ? ಈ ವಿಧವಾದ ಬದಲಾವಣೆ ತುಂಬ ಜಾಸ್ತಿಯಾದಾಗ, ಗೋಳದ ನಡಿಗೆ ಸವ್ಯವಾಗಿಯೇ ಇರುತ್ತದೆ. ಆದರೆ ಪ್ರಧಾನ ಗೋಳಕ್ಕೆ ಅತ್ಯಂತ ದೂರದಲ್ಲಿ ಏರ್ಪಡುವ ಗೋಳಗಳು ಉಷ್ಣ ರೂಪದಲ್ಲಿ ತಮ್ಮ ಶಕ್ತಿಯನ್ನು ಅಷ್ಟೇನೂ ಹೋಗಲಾಡಿಸಿಕೊಳ್ಳುವುದಿಲ್ಲ. ಅಂತಹ ಉಪಗ್ರಹಗಳ ಗತಿ ಅಪಸವ್ಯವಾಗಿ ಅಥವಾ ವಕ್ರವಾಗಿ ಹೋಗುವ ಅವಕಾಶವಿದೆ. ಗುರು ಗ್ರಹ, ಶನಿ ಗ್ರಹಗಳ ಸುಕ್ಕಲೂ ಅಪಸವ್ಯವಾಗಿ ತಿರುಗುವ ಉಪಗ್ರಹಗಳು, ಆಗ್ರಹಗಳಿಗೆ ಬಹಳ ದೂರದಲ್ಲಿರುವಂಥವೇ.

ಆದರೆ ೧೯೫೦ರಲ್ಲಿ ನೆಪ್ಚ್ಯೂನ್ ಗ್ರಹಕ್ಕೆ ಇನ್ನೂ ಹೆಚ್ಚು ದೂರದಲ್ಲಿ ಒಂದು ಉಪಗ್ರಹವಿರುವಂತೆ ಕಂಡುಹಿಡಿಯಲಾಯಿತು. ಈ ಉಪಗ್ರಹವು ಸವ್ಯವಾಗಿಯೇ ತಿರುಗುವಂಥಾದ್ದು. ಇದಕ್ಕೆ ಕಾರಣವಿದೆ; ಇದು ನೆಪ್ಚ್ಯೂನಿನೊಂದಿಗೇ ಉತ್ಪತ್ತಿಯಾದ ಉಪಗ್ರಹವಲ್ಲ. ಇದರ ಕಕ್ಷೆ ಗ್ರಹಗಳ ಕಕ್ಷೆಯನ್ನನುಸರಿಸಿಕೊಂಡಿದ್ದರೂ ನೆಪ್ಚ್ಯೂನ್ ಆತ್ಮಪ್ರದಕ್ಷಿಣೆ ಮಾಡುವ ಸಮತಲದಲ್ಲಿ ತಿರುಗುವುದಿಲ್ಲ. ಅದಲ್ಲದೆ ಅದು ತಿರುಗುವ ದಾರಿ ವರ್ತುಲವಾಗಿಲ್ಲದೆ, ದೀರ್ಘವೃತ್ತವಾಗಿದೆ. ಇದರಿಂದ ನೆಪ್ಚ್ಯೂನ್ ಗ್ರಹವು ಈ ಉಪಗ್ರಹವನ್ನು "ಸಂಪಾದಿಸಿ" ಕೊಂಡಿರಬೇಕೆಂದು ಸ್ಪಷ್ಟವಾಗುತ್ತದೆ.

ಮುಂದಿನವಾರ:—"ಸೂರ್ಯನನ್ನು **ಸುತ್ತಿಕೊಂಡಿರುವ ನೇಪೆ ಪದಾರ್ಥ".**

ನಾವು ಬೆಳೆದು ಬರಬೇಕಾದರೆ—

- **ನಮ್ಮ ಜೀವನ ಉದಾತ್ತವಾಗಿರಬೇಕು,**
- **ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.**
- **ನಮ್ಮ ಬದುಕು ಸರಳವಾಗಿರಬೇಕು.**

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ಎಜ್ಯುಸ್., ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೩೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಥಾವಿಹಾರ

(೭ನೇ ಪುಟದಿಂದ)

ಡಿ ರೂಮಿಗೆ ಬಂದೆ. ಖಾಗಿಲ ಬೀಗ ಹಾಕಿರಲಿಲ್ಲ. ಚಿಳಕವನ್ನ ತೆಗೆದು ಒಳಗೆ ಕಾಲಿಟ್ಟೆ. ಅಡ್ಡಕಟ್ಟಿದ್ದ ಹಗ್ಗದ ಮೇಲೆ ಶಾಸ್ತ್ರಿಗಳು ಹರಡಿ ಬಿಟ್ಟಿದ್ದ ಬಟ್ಟೆಯೊಂದು ಆಡುತಿತ್ತು. ಮುಂದೆ ಹೋದೆ. ನನ್ನ ಆರಸಿದ ಬಟ್ಟೆಗಳಿರಲಿಲ್ಲ. ಮೇಲೆ ಕೇಳಿಗಲ್ಲಾ ಹುಡುಕಾಡಿದೆ. ಎಲ್ಲೂ ಇರಲಿಲ್ಲ. ಶಾಸ್ತ್ರಿಗಳ ಚೀಲ ಕೊಡಿಗಳನ್ನು ಆರಸಿದೆ. ಅವೂ ಇರಲಿಲ್ಲ. 'ಹೋ, ಯಾರೋ ಕಳ್ಳರು ನಮ್ಮದ್ದನ್ನು ಕದ್ದುಕೊಂಡು ಹೋದರು. ಬೇಗವಿಕ್ಕೆ ಹೋಗುವ ಎಂದು ಹೇಳಿದ ಶಾಸ್ತ್ರಿಗಳಿಗೆ, 'ಬೇಡ, ನಿಮಗೆ ತೊಂದರೆಯಾದೀತು ಮತ್ತೆ, ಪರವಾಯಿಲ್ಲ' ಎಂದು ಧೈರ್ಯದ ಸಲಹೆಯನ್ನಿತ್ತು ಈಗ ಅವರ ಚೀಲಕ್ಕೂ ಧಕ್ಕೆ ಬಂತಲ್ಲಾ....ಎಲ್ಲಾದೂ 'ನಮ್ಮದೇ ಆಟ' ವೆಂದರೆ ನಾನೇನು ಮಾಡಲಿ?" ನನ್ನ ಮೈಯೆಲ್ಲಾ ಆಧೈರ್ಯದಿಂದ ಬೆವರಿ ಹೋಯಿತು. ಭಟ್ಟರಿಗೆ ಕೊಡಬೇಕೆಂದು ಮೇಜಿನ ಡ್ರಾವರಿನಲ್ಲಟ್ಟಿದ್ದ ೧೦ ರೂಪಾಯಿ ನೋಟೂ ಇರಲಿಲ್ಲ. ಉಡಲೆಂದು ಆರಿಸಿದ ಅಂಗಿ ಪಂಚೆಗಳೆರಡೂ ಇಲ್ಲ....ನನ್ನ ಒಂದು ತಿಂಗಳ ಬೆವರಿನ ಫಲ ಮಾಯನಾಗಿತ್ತು. ಜೊತೆಗೆ ಶಾಸ್ತ್ರಿಗಳ ಮಾರ್ಜಾದೆಯ ಚೀಲ ಕೊಡಿಗಳೂ....

ವಿವರ್ಣನಾದ ಮುಖ ಹೊತ್ತುಕೊಂಡೇ ಕೆಳಕ್ಕೆ ಬಂದು ಭಟ್ಟರನ್ನು ಕೇಳಿದೆ- 'ಶಾಸ್ತ್ರಿಗಳು ಎಲ್ಲಿಗೆ' ಹೋಗಿದ್ದಾರಿ?"

'ನನ್ನ ಹತ್ತಿರ ಹೇಳಲಿಲ್ಲ...." ಅವರಿಗೆ ನಾನು ಋಣಕೊಡದಿನ್ನ ಬೇಕಾರು. ಆದಕ್ಕಾಗಿ ಜೀನಂದಿಂದ ಚಿಕ್ಕದಾಗಿ ಉತ್ತರಿಸಿದರು.

'ಅಲ್ಲ, ಇವರ ಚೀಲ ಕಾಣಿರುವುದಿಲ್ಲ" ಎಂದು ರಾಗ ತೆಗೆದೆ. "ಅಂ...ನನಗೂಂದು ನಾಲ್ಕು ರೂಪ್ಯಾ ಕೊಟ್ಟಿದ್ದಾರೆ. ಇನ್ನು ನೂರು ಬರಬೇಕು...ಎಲ್ಲಿಗೆ ಹೋದರು...." ಎಂದರು.

ನಾನು ಮಹಡಿಗೆ ಬಂದೆ. ನನ್ನ ಹಿಂದೆ ಭಟ್ಟರೂ ಬಂದರು. ಇಬ್ಬರೂ ಹುಡುಕಿದೆವು ಶಾಸ್ತ್ರಿಗಳ ಹರಕು ಪಂಚೆಯನ್ನುಳಿದರೆ, ಮತ್ತೇನೂ ಇರಲಿಲ್ಲ. "ಅವರು ಹೋದರು ಕಾಣುತ್ತದೆ" ಭಟ್ಟರು ತನಗೆ ಬರುವ ಹಣದ ಬಗ್ಗೆ ಉಂಟಾದ ದುಃಖದಿಂದ ಅಂದರು.

'ಥೂ...' ಎಂದೆ ನಾನೂ. ನನ್ನ ತಲೆ ತಿರುಗಿದಂತಾಯ್ತು.

'ಏನೋ ಹತ್ತು ರೂಪ್ಯಾ ನೋಟು ಕೊಟ್ಟು, ಆರು ರೂಪ್ಯಾ ತಗೆಂಡು ಹೋದರು. ಉಳಿದ ಹಣ ರಿಟ್ರಿಕೊಟ್ಟು ನಾಳೆ ಬೆಳಗ್ಗೆ ಊರಿಗೆ ಹೋಗುತ್ತೀನೆ ಎಂದರು. ನೀವು ಕೋಣೆಗೆ ಕರೆದುಕೊಂಡು ಬರುವಾಗ, ಎಂತಹ ಜನ ಎಂಬುದನ್ನು ತಿಳಿದು ಕರತರ ಬೇಕು. ಇನ್ನು ಮೂರು ರೂಪ್ಯಾ ನೀವಾದರೂ ಎಲ್ಲಿಂದ ತರುತ್ತೀರಿ?....'

'ಓ....' ಎಂದುಕೊಂಡು ಸುಸ್ತಾಗಿ ನಾ ಕೆಳಗಿಳಿದುಬಂದೆ.

ಶಾಸ್ತ್ರಿಗಳು ನನ್ನ ನೋಟನ್ನೇ ತೆಗೆದು ಭಟ್ಟರಿಗೆ ಕೊಟ್ಟು, ತಾನೇ ನಾಟಕದ ಸೂತ್ರಧಾರನೆಂಬುದನ್ನು ಸೂಚ್ಯವಾಗಿ ತಿಳಿಸಿರಬೇಕೆಂಬಂತೆ ಕೊಡಿಯ ಕಡೆ ಹೋಗುವ ಬಸ್ಸಿದೆಯೋ ಎಂದೆ. 'ಇಲ್ಲ, ಈಗ ಮೂತ್ರ ಹೋಯ್ತು" ಎಂ, ದು ಉತ್ತರ ಬಂತು. ನನ್ನ ಜೀವವೂ ನನಗೆ ಹೋದಂತಾಯ್ತು. ಮತ್ತೆ ಕೋಣೆಗೆ ಬಂದೆ. ನನ್ನ ದಾರಿಯನ್ನೇ ಕಾಯುತಿದ್ದ ಭಟ್ಟರಿಂದರು: 'ಏನಾಯ್ತು?"

"ನಮಕ್ಕೇನಿಲ್ಲ. ಅವರು ಊರಿಗೆ ಹೋದರು. ಜೊತೆಗೆ ನನ್ನ ಒಂದುಷ್ಟಂಗಿಗಳ ದುಡಿಮೆಯನ್ನೂ ತಂದು ಸಡೆದರು." ಎಂದೆ. "ನಿನ್ನೆ ನಿಮಗೆಂತ ಹೆಚ್ಚು ರೂಪ್ಯಾ ತಂದಿಟ್ಟದ್ದೆ ಅದೂ ಹೋಯ್ತು; ಅಲ್ಲದೇ ನಾಳೆ ಉಡಲೆಂದು ಬಗೆದಿರಿಸಿದ್ದ ಅಂಗಿ ಪಂಚೆಗಳೂ ಹೋದುವು" ಎಂದಂದೆ.

ಭಟ್ಟರಿಗೆ ತನ್ನ ಮೂರು ರೂಪ್ಯಾಗಿಂತಲೂ ನನ್ನ ನೊಕ್ಕು ಅಧಿಕವಾಗಿ ತೋರಿತು.

"ಏನು, ಪ್ರಾಯಃ ನಿಮಗೆ ಕೊಟ್ಟ ನೋಟು, ನನ್ನ ದಕ್ಕಿದ್ದು ಇರಬೇಕು—' ಎಂದೆ.

"ಖಾದೂ" ಎಂದರು. 'ತಂದು ನೋಡಿದೆವು. ನಾವಿಬ್ಬರೂ ದಿಗ್ಭ್ರಾಂತರಾದೆವು. "ನನಗೆ ಅಂಥ ಜನವೆಂತ ತಿಳಿದಿತ್ತು. ನಿಮಗೇನು, ಸಿಕ್ಕಿದವರನ್ನು ಕರೆತರು ತ್ತೀರಿ...."

"ಹಾಗೆ ತಿಳಿದವರು ಆರು ರೂಪ್ಯಾ ಯನ್ನ ಹಿಂದಕ್ಕೇಕೆ ಕೊಟ್ಟರಿ?....ಮತ್ತೆ ಕೊಡುತ್ತೇನೆಂದಿದ್ದರೆ?ಕಳುಹಿಸಲಿಲ್ಲವೆ?" ನಾನು ನೋವನ್ನು ಮರೆಸಿ ಉಕ್ಕಿಬಂದ ಸಿಟ್ಟಿನಿಂದ ಗದರಿಸಿದೆ. ಮಹಡಿಗೆ ಬಂದು ಶಾಸ್ತ್ರಿಗಳು ಕಲಿತುಬಂದೆನೆಂದೆ. ಹೇಳಿದ್ದ ಶಾಲಾ ಉಪಾಧ್ಯಾಯರಿಗೆ ಪತ್ರ ಬರೆದೆ. ಹೀಗೆಲ್ಲಾ ಆಗಿದೆ ಎಂದು.

ವಾರದಲ್ಲೇ ಅವರ ಉತ್ತರ ಬಂತು. 'ನೀವಂದ ನೆಮ್ಮ ವಿದ್ಯಾರ್ಥಿ ಅಂತಹ ಕೆಲಸವನ್ನೇ ಮಾಡುವವನಲ್ಲ."

"ದಯವಿಟ್ಟು ಕ್ಷಮಿಸಿರಿ; ನಿಜಕ್ಕೂ ನಿಮ್ಮ ಆ ವಿದ್ಯಾರ್ಥಿ ಉತ್ತಮನೇ. ಜೀವನದಲ್ಲಿ ಅಂತಹ ದೊಡ್ಡ ಆಘಾತದಲ್ಲಿ ಸಿಕ್ಕು, ಎಂತಹ ಪೆಟ್ಟು ತಿನ್ನಬೇಕಾಯಿತೋ ಏನೋ! ಇದನ್ನೇ ಇಂದು ನನ್ನ ಮನಸ್ಸು ಕಾದ ಕೊಂಡಿರುವಾಗ ಮೂಸದಂತಹ ಪೆಟ್ಟನ್ನಿಟ್ಟ. ನನಗೊಂದು ಮಹಾ ಪಾಠವನ್ನು ಕಲಿಸಿದೆ" ಎಂದು ಬರೆದೆ. ಟಪಾಲಿಗೆ ಇದನ್ನು ಇಕ್ಕಿ ಬರಲೆಂದು ಹೊರಟಾಗ ಮತ್ತೊಂದು ಯೋಚನೆ ಹೊಳೆಯಿತು: "ಈ ಕ್ರಾಂತಿಪುರುಷ ನನ್ನ ಅಂಗಿ ಪಂಚೆಯನ್ನಿಟ್ಟುಕೊಂಡು ನೆನ್ನನ್ನೆಲ್ಲಾ ವನ್ನೂ ಕದ್ದುಕೊಂಡು ಪರಾರಿಯಾಗಿ—ಇನೆರಡನ್ನು ಇಟ್ಟುಹೋಗಿಬಿಟ್ಟ ಕಳ್ಳ.... ತನಗೆ ಹಾಕಿಕೊಳ್ಳಲಿಕ್ಕೆ ಬೇರೆಯಿಲ್ಲದ್ದರಿಂದ ಗಿಡ್ಡನಾದರೂ ತೊಟ್ಟುಕೊಳ್ಳಬೇಕಾಯಿತೆಂದು ಹೇಳಿ, ವತ್ತರ ಹೃದಯವನ್ನು ಕತ್ತರಿಸುತ್ತಾನೋ...." ಎಂದು.

"ಶಾಲೆಯಲ್ಲಿ ಉಪಾಧ್ಯಾಯರೂ ಹೇಳಿಕೊಡದಂತಹ ಹೊಸ ಪಾಠವನ್ನು ನನ್ನ ಸಮವ್ಯಾಯದವನೆ ಕಲಿಸಿದನಲ್ಲಾ" ಎಂದು ಜೀವನ ನೆನಪಾದಾಗಲೆಲ್ಲಾ ನನಗೆ, ನನ್ನ ನೊಂದ ವನಸ್ಸಿಗೆ ನಗೆ ಬರುತ್ತಿದೆ!

ಪರಿಚಯ

ಪರಿಶ್ರಮ ಪ್ರಿಯ—ಕರಮರಕರ

ಆಹಾರ ಪದ ಧ್ಯಗಳಲ್ಲಿ ದುರ್ಮಿಶ್ರೀಕರಣ ಮಾಡುವ ಸಮಾಜ ಘಾತಕರನ್ನು ಸಮಾಜದೇ ಮುಗಿಸಿ ಬಿಡುವುವಕ್ಕೆ ಮೊದಲು ಸರಕಾರ ಕಠೋರ ಕ್ರಮ ಕೈಗೊಳ್ಳಬೇಕೆನ್ನುತ್ತಾರೆ— ಇವರು!

"ಆಹಾರಧಾನ್ಯಗಳಲ್ಲಿ ದುರ್ಮಿಶ್ರಣ ಮಾಡುವವರನ್ನು ಸರಕಾರ ಅಥವಾ ಸಮಾಜವು ಸಜ್ಜನರೆನ್ನುವುದಿಲ್ಲ. ಅವರನ್ನು ಸುಮ್ಮನೆ ಬಿಡುವುದೂ ಸಾಧ್ಯವಿಲ್ಲ. ಕೊಲೆಗಡುಕರಂತೆ ಇವರಿಗೂ ಘಾತಕ ಶಿಕ್ಷೆಯಾಗಬೇಕು."—ಈ ಉದ್ಗಾರ ಯಾರೋ ಒಬ್ಬ ವಿರೋಧೀ ಪಕ್ಷದವನ ಬಾಯಿಯಿಂದ ಹೊರಟುದಲ್ಲ, ಕೇಂದ್ರದ ಆರೋಗ್ಯ ಮಂತ್ರಿ ಶ್ರೀ ದ. ಹ. ಕರಮರಕರರ ಮುಖದಿಂದ!

ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ದೇಶದ ಒಬ್ಬ ಮಹಾ ನಾಯಕನು 'ಸ್ವತಂತ್ರ ಭಾರತದಲ್ಲಿ ಇಂಚಿಂಚು ಮೂರುಕಟ್ಟೆ' ನೂಡುವವರಿಗೆ ವೃತ್ಯ ದಂಡನೆಯೊಯ ಆಗುವುದೆ"ಂದು ಸಾರಿದ್ದನು. ಕಳೆದ ಹದಿಮೂರು ವರ್ಷಗಳಲ್ಲಿ ವಿಶಾಲ ದೇಶದ ಯಾವುದೇ ಮೂಲೆಯಲ್ಲಿ ಇಂತಹ ಘಟನೆ ನಡೆದ ವರದಿ ಬಂದಿಲ್ಲ. ಇಂಥ ದುಃಖಸಮಯಾನಂತರ ಒರ್ವ ಕೇಂದ್ರೀಯ ಮಂತ್ರಿಯು ಸಮಾಜ ವಿರೋಧಿಗಳ ವಿರುದ್ಧ ಕಠೋರತಮ ಕಾರ್ಯಕ್ರಮ ಕೈಗೊಳ್ಳಬೇಕೆಂಬ ತನ್ನ ಆಶಯವನ್ನು ವ್ಯಕ್ತಪಡಿಸಿದರು.

ಸರಕಾರದಲ್ಲಿ ಉಳಿಮಿಯಾಗಿರುವ ಶ್ರೀ ಕರಮರಕರರು "ಸರಕಾರವು ಆಹಾರಧಾನ್ಯದಲ್ಲಿ ದುರ್ಮಿಶ್ರಣದ ಬಗ್ಗೆ ಕಠಿನ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳದೆ ಹೋಗಿದರೆ, ಜನತೆಯು ಕಾನೂನನ್ನು ತನ್ನ ಕೈಯಲ್ಲೇ ತೆಗೆದುಕೊಂಡು ದುರ್ಮಿಶ್ರಣ ಮಾಡಿದವರನ್ನು ತಾನಾಗಿಯೇ ಮುಗಿಸಿ ಬಿಡುವ ದಿನವು ಬಂದೇ ಬರುವುದು. ನಾವು ಅಂತಹ ದುರ್ದಿನ ಬರಗೊಡಬಾರದು" ಎಂದು ಸರಕಾರಕ್ಕೆ ಎಚ್ಚರಿಕೆಯಿಯಬೇಕಾಯಿತು.

ಶ್ರೀ ದತ್ತಾತ್ರೇಯ ಪರಶುರಾಮ ಕರಮರಕರರು ಕರ್ನಾಟಕದ ರಾಜ್ಯಕೀಯ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದ ವ್ಯಕ್ತಿ. ೧೯೪೯ರಲ್ಲಿ ಹವಾನಾದಲ್ಲಿ ಸೇರಿದ ಅಂತಾರಾಷ್ಟ್ರೀಯ ವಾಣಿಜ್ಯ ಸಮ್ಮೇಲನದಲ್ಲಿ ಭಾರತೀಯ ಪ್ರತಿನಿಧಿ ಮಂಡಳದ ನಾಯಕರಾಗಿ ಇವರು ಭಾಗವಹಿಸಿದ್ದಾರೆ. ಆ ವಾಣಿಜ್ಯ—ಸೌಹಾರ್ದ ಪತ್ರವನ್ನು ತಯಾರಿಸುವಲ್ಲಿ ವ್ಯಾಪಾರಿಕ ಹಾಗೂ ಸಾಲ ವಿಚಾರಿಕ ಸಹಾಯ ನೀಡಿದರು. ೧೯೫೦ರಲ್ಲಿ ಉಪ ಮಂತ್ರಿಯ ರೂಪದಲ್ಲಿ ಆರ್ಥಿಕಾಗ ಗದ್ದಿಗೇರಿದ ಇವರು ೧೯೫೨ರಲ್ಲಿ ರಾಜ್ಯಮಂತ್ರಿಯಾಗಿ ನಿಯುಕ್ತರಾದರು.

ಇತರ ರಾಜ್ಯಕೀಯ ನಾಯಕರಂತೆ ಶ್ರೀ ಕರಮರಕರರೂ ವಕೀಲವೃತ್ತಿಯಿಂದಲೇ ತಮ್ಮ ಸಾರ್ವಜನಿಕ ಜೀವನಕ್ಕೆ ತೊಡಗಿದರು. ಕಾಲಕ್ರಮದಲ್ಲಿ ರಾಜ್ಯಕೀಯದಲ್ಲೇ ಇವರು ಸ್ವಸ್ತರಾಗಿಹೋದರು. ೧೯೪೨ರ ಆಗಸ್ಟ್ ಆಂದೋಲನದಲ್ಲಿ ಇವರೂ ಭೂಗತರಾದರು; ಈ ವೇಳೆ ಅವರು ತಮ್ಮ ದಿನಗಳನ್ನು ಬೊಂಬಾಯಿಯಲ್ಲಿ ಕಳೆದರು. ಇದಕ್ಕೆ ಮೊದಲು ೧೯೩೭ರ ಉಪ್ಪಿನ ಸತ್ಯಾಗ್ರಹದಲ್ಲಿಯೂ ಇವರು ಭಾಗವಹಿಸಿದ್ದರು. ಉತ್ತರ ಕನ್ನಡ ಜಿಲ್ಲೆಯ ಆಂಕೋಲಾ ತಾಲೂಕಿನಲ್ಲಿ ತೀವ್ರವಾದ ಆಂದೋಲನವು ಆ ಕಾಲದಲ್ಲಿ ಇವರ ನೇತೃತ್ವದಲ್ಲಿಯೇ ನಡೆದಿತ್ತು. ಸಕಾಲ ತನ್ನ ತ್ಯಜಿಸಿ ರಾಜ್ಯಕೀಯದಲ್ಲಿ ದುಮುಕುವುದಕ್ಕೆ ಮೊದಲು ಬೆಳಗಾವಿನ ಲಾ ಕಾಲೇಜಿನಲ್ಲಿ ಕೆಲವಿನಗಳ ಮಟ್ಟಿಗೆ ಪ್ರಾಧ್ಯಾಪಕರರೂ ಆಗಿದ್ದರು.

ಕರ್ನಾಟಕದ ಪ್ರಮುಖ ಸಾಹಿತ್ಯಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳೊಡನೆ ಶ್ರೀ ಕರಮರಕರರ ಸಂಬಂಧವಿದೆ. ಇವರ ಧಾರವಾಡದ ಕರ್ನಾಟಕ ಐತಿಹಾಸಿಕ ಸಂಶೋಧನಾ ಸಂಸ್ಥೆ ಮತ್ತು ಭಾರತೀಯ ಚಾರಿತ್ರಿಕ ದಾಖಲೆಗಳ ಮಂಡಳಿಯ ಸದಸ್ಯರಾಗಿದ್ದವು. ೧೯೪೬ರಲ್ಲಿ ಬೊಂಬಾಯಿ ಸರಕಾರವು ನೇಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯಲ್ಲಿಯೂ ಇವರು ಹೆಸರಿತ್ತು.

ನಿರಂಜನ ನಗರ ಸಭೆಯ ಅಧ್ಯಕ್ಷರಾಗಿದ್ದಾಗ ಇವರು ಪ್ರಾಥಮಿಕ ಶಿಕ್ಷಕರಿಗೆ ಹೊಸ ವೇತನ ಸ್ರಮವನ್ನು ನಿರ್ಧರಿಸುವಂತೆ ಕೇಳಿಕೊಂಡು, ಎಕಾಕಿಯಾಗಿ ಸರಕಾರದೊಡನೆ ಕೋರಾಡಿದ್ದರು. ಮೂಲತಃ ಕರಮರಕರರು ಮಹಾ ರಾಷ್ಟ್ರಕ್ಕೆ ಸೇರಿದವರಾದರೂ ಇಂದು ಆಚ್ಚಗನ್ನಡಿಗರೆಲ್ಲ ಒಬ್ಬರೆನಿಸಿದ್ದಾರೆ. ಇವರ ಮಾತೃಭಾಷೆ ಯೇನೋ ಮರಾಠಿ, ಆದರೆ ಮಂಠಿಗಿಂತ ಅನರಿಗೆ ಕನ್ನಡವೇ ಸರಿಯಾಗಿ ಬರುತ್ತದೆ ಎನ್ನಬಹುದು. ಹಳೆಯ ಸಂಸತ್ತಿನ ಸದಸ್ಯರೂ ಧಾರವಾಡದಲ್ಲಿ ಕಾಂಗ್ರೆಸ್ ಸಂಸದೀಯ ದಳದ ಜತೆಕಾರ್ಯದರ್ಶಿಗಳೂ ಆಗಿದ್ದರು. ಸಂಯುಕ್ತ ರಾಷ್ಟ್ರಸಂಘದ ಸಭೆಯಲ್ಲಿಯೂ ಇವರು ಒಂದು ಬಾರಿ ಸಮ್ಮಿಲಿತರಾಗಿದ್ದರು.

ಬೊಂಬಾಯಿ ವಿಶ್ವವಿದ್ಯಾಲಯದ ಸ್ನಾತಕಾಂಪ ಶ್ರೀ ಕರಮರಕರರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸುವರ್ಣಪದಕವನ್ನು ಗಳಿಸಿದ್ದಾರೆ. ಪರಿಶ್ರಮ ವತ್ತು ತೋಟಗಾರರೆಂದರೆ, ಅವರ ಹೃದಯ ತುಂಬಿಬರುತ್ತದೆ.

ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶಲ್), ರೂ. 8=00 (ಎಕ್ಸ್ಟ್ರಾ ಸ್ಪೆಶಲ್).

P. DEVEE & Co. (M. I.) CALCUTTA—40

ಸ್ವಾತಿಕ್ಸರು: ಸಾಹಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
8-12-1960

LICENSE NO. 31
Licensed to Post without Prepayment

ನಮ್ಮ ಭಾರತ

ಬಿಚ್ಚುಮನಸ್ಸಿನ ಸಂಭಾಷಣೆ

ಭಾರತೀಯ ಸಂವಿಧಾನವೇನೇ ಹೇಳಲಿ, ಭಾರತದ ರಾಜಧಾನಿಯ ಸಾರ್ವಜನಿಕ ಹೋಟೆಲಿನಲ್ಲಿ 'ಕರಿಯ'ನಾದ ಘಾನಾದ ವಿದ್ಯಾರ್ಥಿ ಭಾರತೀಯರು ತನ್ನ ಯಾಗೂ ತನ್ನ ಸಹಪಾಠಿಗಳೊಡನೆ ನಡೆಸುತ್ತಿದ್ದ ಖೇದಪೂರ್ಣ ವ್ಯವಹಾರವನ್ನು ತಿಳಿಸಿದಾಗ ಸಂವಿಧಾನ ಪ್ರಿಯರು ನತಮಸ್ತಕರಾಗಲೇಬೇಕು.

ದೆಹಲಿ ವಿಶ್ವವಿದ್ಯಾಲಯದ ಜೌತಣಕೂಟದಲ್ಲಿನ ಹೋಟೆಲು ಮುಂದುಗಡೆ ವಿಪರೀತ ಜನದಟ್ಟಣೆಯಿತ್ತು. ಒಳಗಡೆ ಕುರ್ಚಿ ಖಾಲಿಯಾಗುವುದೇ ತಡ, ಅದನ್ನು ಆಕ್ರಮಿಸಲು ನೂರಾರು ಜನರು ನುಗ್ಗಾಡುತಿದ್ದರು. ನಾನು ಕಾಫಿಯ ಬೆಲೆಯನ್ನು ತೆತ್ತು ಒಂದು ಕುರ್ಚಿಯನ್ನು ಪಡೆಯಲು ಸುತ್ತ ದೃಷ್ಟಿ ಹರಿಸಿದೆ. ಆದರೆ, ಎಲ್ಲಿಯೂ ನನ್ನ ಆಶಯ ಫಲಿಸುವ ಪಲ್ಲಕ್ಷಣಗಳು ತೋರಲಿಲ್ಲವಾದುದರಿಂದ ಉಳಿದವರಂತೆಯೇ ಕ್ಯೂವಿನಲ್ಲೇ ನಿಲ್ಲಲು ಮನ ಮಾಡಿದೆ.

ಅಷ್ಟರಲ್ಲೇ ಕೋಣೆಯ ಮೂಲೆಯೊಂದರಲ್ಲಿ ಮೂರು ಕುರ್ಚಿಗಳು ಬರಿದಾಗಿರುವುದು ಗೋಚರಿಸಿತು. ನಾಲ್ಕನೆಯದರಲ್ಲಿ ಒಬ್ಬ ಮುದುಕ ಪತ್ರಿಕೆಯನ್ನು ಮರೆಮಾಡಿ ಮಂಡಿಸಿದ್ದ. ಕೂಗಾಡುತಿದ್ದ ಆ ಹುಡುಗ ಹುಡುಗಿಯರ ನುಣ್ಗೆ ಓರೆಕಿ ಬಾಲಿಮಾಡಿಕೊಂಡು, ಅಮೂಲ್ಯ ಕಾಫಿಯನ್ನು ಚೆಲ್ಲದಂತೆ ನೋಡಿಕೊಂಡು ನಾನು ಅತ್ತ ಧಾವಿಸಿದೆ. 'ಈ ಕುರ್ಚಿಗಳು ಖಾಲಿಯಿವೆಯೇ?' ನಾನು ವಿನಮ್ರನಾದರೂ ಕೊಂಚ ಕಠೋರತೆಯಿಂದ ಕೇಳಿದೆ. ಪ್ರತಿಯೊಂದು ಪತ್ರಿಕೆಯನ್ನು ತಗ್ಗಿಸಿದ ಆತ ಹೌದೆಂದು ಉತ್ತರಿಸಿದ.

ನಾನು ಅವಸರವಾಗಿ ಕಾಫಿ ಹೀರತೊಡಗಿದೆ. ಈ ವ್ಯಕ್ತಿಯ ಮುಖಭಾವ, ಆತನ ವಯಸ್ಸಿಗೆ ಒದಿದಾದ ಆಸನಗಳು, ಜೊತೆಗಾತಿಯ ಸಾನ್ನಿಧ್ಯ—ಇವು ನನ್ನಲ್ಲಿ ಒಂದು ತರದ ಕುತೂಹಲವನ್ನೆಬ್ಬಿಸಿದುವು. ನಾನೊಮ್ಮೆ ಮೆಲ್ಲಗೆ ಕೆಮ್ಮಿ ಮಾತಿಗೆ ಮೊದಲು ಮಾಡಿದೆ—"ನೀವು ದೆಹಲಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸುತ್ತಿರುವಿರಾ?"

ವ್ಯಕ್ತಿ ಪತ್ರಿಕೆಯಿಂದ ಮುಖವೆತ್ತಿ ಮೊದಲಿನಂತೆಯೇ ಉತ್ತರಿಸಿದ. "ಹೌದು. ನನ್ನ ಪರಿಚಯಪತ್ರ ನೋಡಿ ಬಯಸುತ್ತೀರಾ" ನಾನು ಬೇಡವೆನ್ನುವುದಕ್ಕೆ ಮೊದಲೇ ಆತ ತನ್ನ 'ವಿದ್ಯಾರ್ಥಿ—ಪತ್ರ'ವನ್ನು ತೆಗೆದು ಮೇಜಿನ ಮೇಲಿಟ್ಟ. ಆತ ಘಾನದವ. ನಾನು ಆತನತ್ತ ಕೈಚಾಚಿ ಹೇಳಿದೆ: 'ನಿಟ್ಟುನೋಡಿಕೊಳ್ಳಬೇಡಿ; ನಾನು ಮೂತಾಡಿ ಬಯಸಿದೆನೆಷ್ಟೆ. ಮೊದಲು ಘಾನಾದ ಯಾರನ್ನೂ ನಾನು ಭೆಟ್ಟಿಯಾಗಿಲ್ಲ. ನಾನು ಆಲಿಪುರಟಲ್ಲಿ ಪ್ರಾಧ್ಯಾಪಕ ನಿಜ್ಜೇನಸಿ ಸಿಂಘ್ ಎಂದು ಹೆಸರು". ಅವನೂ ಕೈಯುಂದೆ ಮಾಡಿತನ್ನ ಹೆಸರು ಹೇಳಿದ. "ಭಾರತದಲ್ಲಿರುವುದರ ಬಗ್ಗೆ ನಿಮ್ಮ ಅನುಭವವೇನೆನ್ನುತ್ತದೆ? 'ನಾನು ಪ್ರಶ್ನಿಸಿದೆ. "ನೀವು ಸತ್ಯವಾಗಿಯೂ ತಿಳಿಯ ಬಯಸುತ್ತೀರಾ?" ಆತನ ನುರು ಪ್ರಶ್ನೆಯಿದು. "ಸಂಪೂರ್ಣ ಸತ್ಯವೇ ನನಗೆ ಬೇಕು; ಕೇವಲ ಪ್ರಚಾರವಲ್ಲ" ನಾನು ಉತ್ತರಿಸಿದೆ.

ಭಾರತೀಯ ಹುಡುಗ ಹುಡುಗಿಯರು "ಬಿಳಿಯ"ರ ಬಗ್ಗೆ ಆಗಾಗ, ಕಂಡು ಬಣ್ಣದವರ ಕಡೆಗೆ ತೋರಿಸಿದ ತೋರಿಸುತ್ತಿರುವ ಆದರ ಭಾವವನ್ನು ಆತ ವಿವರಿಸಿದ ಈ ಭಾವವು 'ಕರಿಯ'ರತ್ತ ಸುಳಿಯಲಿಕ್ಕೆ. ಆತನ ಮತ್ತು ಇತರ ಆಫ್ರಿಕನರ ಕುರಿತು ಅವರು ಪ್ರದರ್ಶಿಸುತಿದ್ದ ತಿರಸ್ಕಾರ, ನೀಗ್ರೋಗಳಿಗೆ ತೀವ್ರ ಸರಬಂಧಿಯಾಗಿ ಮೂಡದಿರುವ ಹೋಟೆಲು ಕೆಲಸಗಾರರ ವರ್ತನೆ, ದಟ್ಟಣೆಯ ಕಾಫಿ ಭವನ ಹಾಗೂ ನೀಗ್ರೋ ಕುಳಿತ ಮೇಜಿನ ಮುಂದೆ ಖಾಲಿ ಕುರ್ಚಿ—ಇವುಗಳ ಬಗ್ಗೆ ತಿಳಿಸಿದ. ಆತನ ಮಾತು ಕೆನ್ನೆಗೆ ಏಟು ಕೊಟ್ಟಂತಿದ್ದುವು. ವರ್ಣಭೇದ ನೀತಿಯನ್ನು ಉಗ್ರವಾಗಿ ಟೀಕಿಸಿದ ರಾಷ್ಟ್ರದವರು ನಾವಲ್ಲವೇ ಅದುದರಿಂದಲೇ, ನಾನು ಆತನ ವಾದವನ್ನು ವಿರೋಧಿಸಿದೆ—"ಆದರೆ, ನಮ್ಮ ಸಂಕಾರ...."

"ನಾನು ನಿಮ್ಮ ಸರಕಾರದ ಬಗೆ ಏನನ್ನೂ ಜನ್ನಲಿಲ್ಲ." ಆತ ನಡುವೆ ಬಾಯಿಹಾಕಿದ. "ನನ್ನನ್ನೂ ನೂರಾರು ಆಫ್ರಿಕನರನ್ನೂ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಕಲಿಯಲು ನಿಮ್ಮ ಸರಕಾರವೇ ಆಮಂತ್ರಣವಿತ್ತಿದೆ. ಒಳ್ಳೆಯ ಭಾತೃತ್ವವನ್ನೂ ನೀಡುತ್ತಿದೆ. ರಾಷ್ಟ್ರಪತಿ ಮತ್ತು ಪ್ರಧಾನಿಯವರನ್ನೂ ಕಾಣುವ ಅವಕಾಶ ನಮಗೆ ದೊರೆತಿದೆ. ನಿಮ್ಮ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ ನನ್ನನ್ನು ಕೆಲವುಬಾರಿ 'ಟೀ'ಗೂ ಕರೆದಿದ್ದರು. ಉಪಕುಲಪತಿ ಹಾಗೂ ಪ್ರಾಧ್ಯಾಪಕರು ನಮ್ಮನ್ನು ತಮ್ಮ ಮನೆಗೂ ಆಹ್ವಾನಿಸುತ್ತಾರೆ. ಇವೆಲ್ಲವೂ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವ ಕ್ರಮ. ಆದರೆ, ಇದರ ಅಗತ್ಯ ಕಾಣದ ವಿದ್ಯಾರ್ಥಿಗಳು ನಮ್ಮನ್ನು ಕೇಳುವುದೇ ಇಲ್ಲ; ನಮ್ಮೊಡನೆ ಬೆರೆಯುವುದೂ ಇಲ್ಲ; ಅಲ್ಲದೇ ನಮ್ಮೊಡನೆ ಕೂರುವ ಪ್ರಸಂಗವನ್ನೇ ದೂರೀಕರಿಸಿ ಬಿಡುತ್ತಾರೆ."—ಆತ ಮುಂದುವರಿಸಿದ. ಇದನ್ನು ನಾನೇ ಪ್ರತ್ಯಕ್ಷ ಕಾಣುವುದಿಲ್ಲವೆ? ಆತನ ಬಾಯಿಯಿಂದ ಕೇಳಿಸಿಕೊಳ್ಳಬೇಕಾದ ಅಗತ್ಯವಿರಲಿಲ್ಲ ವಲ್ಲಾ?

ಭಾರತೀಯ ಸಂವಿಧಾನ ಜಾತಿಗಳನ್ನು ಬಹಿಷ್ಕರಿಸಿದೆ. ಆದರೆ, ಭಾರತೀಯರಲ್ಲಿ ಮಾತ್ರ ಈ ಭಾವನೆ ಇನ್ನೂ ದೂರವಾಗಿಲ್ಲ. 'ವರ್ಣ'ವನ್ನು ಆಧರಿಸಿಕೊಂಡೇ ನಮ್ಮ ಜಾತಿ ಪದ್ಧತಿ ಬೆಳೆದು ಬಂದಿದೆ. 'ಜಾತಿ' ಎಂಬುದಕ್ಕೆ ಸಂಸ್ಕೃತ ಪದ 'ವರ್ಣ' ಇದರಿಂದಲೇ ಸುಂದರ ಚರ್ಮವಿರುವ ಆರ್ಯರು ಭಾರತಕ್ಕೆ ಆಕ್ರಮಣ ಮಾಡಿದ ದಿನದಿಂದ ಈ ಮೂರು ಸಾವಿರ ಕ್ರೂ ಮಿಕ್ಕಿದ ವರ್ಷಗಳ ಇತಿಹಾಸ ಈ 'ವರ್ಣ'ಕ್ಕಿದೆ!

ಮೊತ್ತಮೊದಲು ಭಾರತವನ್ನು ಕ್ರಮಿಸಿದ ಆರ್ಯರು ತಮ್ಮೊಡನೆ ಹೆಂಗಸರನ್ನು ಕರೆದುತರಲಿಲ್ಲ; ಇಲ್ಲಿನ 'ಕರಿಯ ಅದಿವಾಸಿ'ಗಳೊಡನೆ ಬೆರೆತರು. ಅನಂತರದ ಆರ್ಯರು ಹೆಂಗಸರನ್ನೂ ತಂದರು. ತಮ್ಮ ಲಾಭಕ್ಕಾಗಿ ಅವರು ಜಾತಿ ಪದ್ಧತಿಯನ್ನು ಕರ್ಮ ಮತ್ತು 'ಪಾವಿತ್ರ್ಯ'ಗಳ ತಳಹದಿಯಲ್ಲಿ ಬೆಳೆಸಿದರು. ಮೊತ್ತಮೊದಲಿಗೆ ಅಧ್ಯಯನ ನಡೆಸುವ ಬ್ರಾಹ್ಮಣರು, ಅನಂತರ ಸಮಾಜ ರಕ್ಷಕರಾದ ಕ್ಷತ್ರಿಯರು, ಮೂರನೆಯದಾಗಿ ವೈಶ್ಯರು, ನಾಲ್ಕನೆಯವರು ಶೂದ್ರರು. ಆದಿವಾಸಿಗಳನ್ನು, ಮುಖ್ಯವಾಗಿ ಕೊಳಕು ತೆಗೆಯುವವರು, ಚರ್ಮ ಸುಲಿಯುವವರು ಮೊದಲಾದವರನ್ನು ಐದನೆಯ ಪಂಗಡವಾಗಿಸಿ 'ಪಂಚಮ'ರೆಂದು, ಅಸ್ಪೃಶ್ಯರೆಂದು ಹೆಸರಿಸಿ ಸಮಾಜದಿಂದಲೇ ದೂರವಿರಿಸಿದರು.

ಮನುವಿನ ಕಾಲದಲ್ಲಿ ಈ ವರ್ಣ ಪ್ರಣಾಳಿ ಮುಕ್ತವಾಗಿ ಬಗುವಾಯ್ತು. ಭಿನ್ನ ಜಾತೀಯ ವಿವಾಹವು ನಿಷಿದ್ಧವಾಯ್ತು. 'ವರ್ಣ'ವೇ ಈ ರೀತಿಯ ಸಮಾಜ ನಿಯಮಗಳಿಗೆ ಕಾರಣವಾಯ್ತು. ಇಂದಿಗಾದರೂ ಬ್ರಾಹ್ಮಣರು ಮತ್ತು ಕ್ಷತ್ರಿಯರು ವೈಶ್ಯ ಮತ್ತು ಶೂದ್ರರಿಗಿಂತ ಬಿಳಿ ವರ್ಣದವರು; ಅಸ್ಪೃಶ್ಯರು ತೀರ ಕರಿ ಬಣ್ಣದವರು.

ಈ ಜಾತಿ ಪದ್ಧತಿಯ ನಿರ್ಮೂಲನ್ಕಾಗಿ ನಮ್ಮ ಸರಕಾರ ಬಹಳಷ್ಟು ಪ್ರಯತ್ನ ಮಾಡಿಸಿದೆ. ನಿಜ್ಜೇದೇ ಮಾಲಯಗಳೂ ಅಸ್ಪೃಶ್ಯರಿಗೆ ತೆರೆದಿವೆ. ಗ್ರಾಮಗಳ ಸಾರ್ವಜನಿಕ ಬಾವಿಗಳಿಂದ ಇವರಿಗೂ ನೀರು ತೆಗೆಯುವ ಸೌಕರ್ಯವನ್ನು ಒದಗಿಸಿಕೊಡಲಾಗಿದೆ. ಇತರ 'ವರ್ಣ'ಚಿವರು ಆಕ್ಷೇಪಿಸಿದರೆ, ಪೋಲೀಸು ಶಾಲೆಯು ಇವರ ಸಹಾಯಕ್ಕೆ ಬರುತ್ತದೆ. ಕಾನೂನುಗಳು ಈ ದಿಸೆಯಲ್ಲಿ ತುಂಬ ಕೆಲಸಮಾಡುತ್ತಿವೆ. ಸರಕಾರದ ಕಾರ್ಯಕ್ರಮ, ಔದ್ಯೋಗೀಕರಣ ಜಾತಿ ಪದ್ಧತಿಯನ್ನು ಬಡೆಯಲು, ತೊಡಗಿವೆಯೊದರೂ ಇದಕ್ಕೆ ಬಹುಕಾಲ ಬೇಕಾಗುವುದು. ಭಾರತೀಯರ ಮನಸ್ಸಿನ 'ವರ್ಣ'ದ ಜನ್ಮಜಾತ ಭಾವನೆಯನ್ನು ಒರಸಿ ತೆಗೆಯುವುದು ಸುಲಭಸಾಧ್ಯವಾಗದು. ಡೈನಂದಿನ ಪತ್ರಿಕೆಯಲ್ಲಿನ ಕ್ಷಿಪ್ರವೈವಾಹಿಕ ಜಾಹೀರಾತುಗಳತ್ತ ದೃಷ್ಟಿಯಾಯಿಸಿರಿ. ಇವುಗಳಲ್ಲಿ ತೊಂಬತ್ತು ಪ್ರತಿಶತದಲ್ಲಿ, ಭಾರತೀಯ ಯುವಕನು ತನ್ನ ಜಡೆಗಾತಿಯು ಸುಂದರಿಯಾಗಿರಬೇಕೆಂದು ಬಯಸುತ್ತಾನೆ; ಮತ್ತು ಯುವತಿಯ ತಂದೆಯು ತನ್ನ ಅವಿವಾಹಿತ ಮಗಳ 'ಬಿಳಿ—ಚರ್ಮ'ದ ಕುರಿತಾಗಿಯೇ ಜಾಹೀರಾತು ನೀಡುತ್ತಾನೆ; ಒಂದುವೇಳೆ ಆಕೆ ಕರ್ರಗಿದ್ದರೆ, ಈ ಬಗ್ಗೆ ಮೌನತಾಳುತ್ತಾನೆ!

(ಯೋಜನಾದ ಆಧಾರದಿಂದ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನೆ.

ಕಾಮು ವಿಜ್ಞಾಪನೆದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸಿಂಡಿಕೇಟ್ ಬ್ಯಾಂಕ್

ಸುಭದ್ರ ಸಮರ್ಥ ಹಾಗೂ ಸಾಜನ್ಯಶೀಲ ಆರ್ಥಿಕ ಸೇವೆಯನ್ನು ನೀಡುವ ಆದರ್ಶ ಸಂಸ್ಥೆ: ವ್ಯವಹಾರ ಸಂಪತ್ತು ರೂ. ೨೨ ಕೋಟಿಗೂ ಮಿಕ್ಕಿದೆ.

ಸಿಂಡಿಕೇಟ್ ಬ್ಯಾಂಕ್

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ (ಆಂಧ್ರ, ಕೇರಳ, ಮದರಾಸು, ಮುಂಬಯಿ ಮತ್ತು ಮೈಸೂರು ರಾಜ್ಯಗಳಲ್ಲಿ) ವಿಶಾಲವಾಗಿ ಹಬ್ಬಿರುವ ಸಂಸ್ಥೆ; ಒಟ್ಟು ೧೩೯ ಶಾಖೆಗಳಿವೆ.

ಉಳಿತಾಯಗಾರರ ಸನ್ಮಿತ್ರ

ಸಿಂಡಿಕೇಟ್ ಬ್ಯಾಂಕ್

ಉಳಿತಾಯಗಾರರ ಸನ್ಮಿತ್ರ—ಆಕರ್ಷಕ ಹಾಗೂ ಆತ್ಮೀಯಯುಕ್ತ ಉಳಿತಾಯ ಯೋಜನೆಗಳಿಂದ ಜನಪ್ರಿಯವಾಗಿರುವ ಸಂಸ್ಥೆ. "ಪಿಗ್ಮಿ" ಮನೆಮಾತಾಗಿದೆ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ. ಚೇರ್ಮನ್: ಡಾ|| ಟಿ. ಎಂ. ಎ ಪೈ. ಜನರಲ್ ಮೆನೇಜರ್: ಟಿ. ಎ. ಪೈ.

ದಿ ಕೆನೆರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

40th year of publication. 15-12-1960 ೪೦ನೇ ವರ್ಷ

ಸಂಪುಟ ೪೦

ನವಯುಗ

Vol. 40

ಸಂಚಿಕೆ ೧೬

No. 16

ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಬೇರುಬಾರಿಯ ಹಸ್ತಾಂತರದ ಪ್ರಶ್ನೆ

ಪಾಕ್-ಭಾರತ ಸೀಮೂ ವಿವಾದದ ಬಗ್ಗೆ ನೂನ-ನೆಹರು ಒಪ್ಪಂದದಂತೆ, ಬೇರುಬಾರಿಯನ್ನು ಪಾಕಿಸ್ತಾನಕ್ಕೆ ಒಪ್ಪಿಸುವ ಭಾರತ ಸರಕಾರದ ವರ್ತನೆಗೆ ದೇಶದಲ್ಲಿ ವಿರೋಧಾಭಿಪ್ರಾಯ ಹೆಚ್ಚುತ್ತಿದೆ.

ನೆಹರು-ನೂನ ಒಪ್ಪಂದದನ್ವಯ ಭಾರತದ ಒಂದು ಭಾಗವಾಗಿರುವ ಬೇರುಬಾರಿಯನ್ನು ಪಾಕಿಸ್ತಾನಕ್ಕೆ ಒಪ್ಪಿಸಿಕೊಡುವ ಬಗ್ಗೆ ಈಗ ನಮ್ಮ ದೇಶದಲ್ಲಿ ವಿರೋಧಾಭಿಪ್ರಾಯವು ಹೊರ ಪಡುತ್ತಿದೆ. ಅಂದು ಈ ಸಂಬಂಧದ ಒಡಂಬಡಿಕೆಯಾಗುವಾಗಲೇ ಪಶ್ಚಿಮ ಬಂಗಾಳದವರು ಮುನಿದಂತೆ ತೋರುತಿತ್ತು. ಇದರಿಂದಾಗಿಯೇ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನೂ ಸಲ್ಲಿಸಲಾಗಿತ್ತು. ನ್ಯಾಯಾಲಯವು ತೀರ್ಮಾನವೀಯತ್ತ ಈಗಿನ ಸಂವಿಧಾನವು ಈ ಹಸ್ತಾಂತರಕ್ಕೆ ಅನುಕೂಲವಿಲ್ಲದಿರುವುದರಿಂದ, ಅದರಲ್ಲಿ ಆವಶ್ಯಕ ತಿದ್ದುಪಡಿಗಳನ್ನು ಮಾಡಿಕೊಳ್ಳುವುದು ಅಗತ್ಯವೆಂದು ಅಭಿಪ್ರಾಯ ಕೊಟ್ಟಿತ್ತು. ಅದುದರಿಂದ ಸರಕಾರವು ಈ ಒಪ್ಪಂದವನ್ನು ಕಾರ್ಯಕೃತಗೊಳಿಸುವ ಸಲುವಾಗಿ, ಸಂವಿಧಾನದಲ್ಲಿ ತಿದ್ದುಪಡಿಯೊಂದನ್ನು ಮಾಡಲು ಯೋಚಿಸಿದೆ.

ಲೋಕ ಸಭೆಯಲ್ಲಿ ಕಾಂಗ್ರೆಸ್‌ಗೆ ಪರಿಪೂರ್ಣ ಬಹುಮತವಿರುವುದಾದರೂ ಸಂವಿಧಾನ ತಿದ್ದುಪಡಿ ವಿಧೇಯಕಕ್ಕೆ ಕೇವಲ ಬಹುಮತ ಸಾಲದಾದುದರಿಂದ, ಕಾಂಗ್ರೆಸ್ ಸದಸ್ಯರಿಲ್ಲದ ಬೆಂಬಲವೂ ಮತವೂ ಇದಕ್ಕೆ ಬೇಕಾಗುವುದಲ್ಲದೆ ಕೆಲವಾರು ವಿರೋಧಿ ದಳಗಳವರ ಮನಸ್ಸನ್ನೂ ಒಲಿಸಿಕೊಳ್ಳಬೇಕಾಗಿದೆ. ವಿರೋಧಿ ಪಕ್ಷಗಳೆಲ್ಲವೂ ಭಾರತ ಸರಕಾರದ ಈ ನೀತಿಯನ್ನು ಅಖಂಡ ವಾಕ್ಯಗಳಿಂದ ಖಂಡಿಸುತ್ತಿರುವುದು ವಿಶೇಷವಲ್ಲವಾದರೂ ತೀರಾ ಸಾಮಾನ್ಯವೆನ್ನುವಂತಿಲ್ಲ. ಲೋಕಸಭೆಯ ಸ್ಥಿತಿ ಇದಾದರೆ, ಪಶ್ಚಿಮ ಬಂಗಾಳ ರಾಜ್ಯದ ನೀತಿಯು ಮತ್ತೊಂದಿರುವಂತೆ ತೋರುತ್ತದೆ. ಮೊದಲು ಈ ಹಸ್ತಾಂತರೀಕರಣಕ್ಕೆ ವಿರೋಧ ವ್ಯಕ್ತವಡಿಸಿದ ಪ. ಬಂಗಾಳ ಸರಕಾರ--ವಿಧಾನ ಸಭೆಗಳು ಈಗ ಖಡಾಖಂಡಿತವಾಗಿ ನಿರಾಕರಿಸುತ್ತಿವೆ--ಬೇರುಬಾರಿಯನ್ನು ಬಿಟ್ಟು ಕೊಡುವುದು ಸಾಧ್ಯವಿಲ್ಲವೆಂದು! ಹೀಗಾಗಿ ತುಸು ಪರಿಸ್ಥಿತಿ ವಿಷಮತೆಗೇರಿದೆಯೆನ್ನಲಾಗುತ್ತಿವೆ.

ಭಾರತದ ವಿವಿಧ ರಾಜ್ಯಕೀಯ ಪಕ್ಷಗಳ ನಾಯಕರು ಒಂದು ಸಮ್ಮೇಳನವನ್ನು ಹೊನ್ನೆ ಮೊನ್ನೆ ನವದೆಹಲಿಯಲ್ಲಿ ಕರೆದು ನೆಹರು—ನೂನ ಒಡಂಬಡಿಕೆಯಲ್ಲಿ ಅಡಕವಾಗಿರುವ ಬೇರುಬಾರಿಯನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸ ಗೊಳಿಸುವುದಕ್ಕೆ ತಮ್ಮ ಪ್ರಬಲ ವಿರೋಧವನ್ನು ಸೂಚಿಸಿದರು. ಸಂಸತ್ ಸದಸ್ಯರನ್ನು, ಈ ಸಂಬಂಧದ ಸಂವಿಧಾನ ತಿದ್ದುಪಡಿ ವಿಧೇಯಕಕ್ಕೆ ಅನುಮತಿ ನೀಡಬಾರದೆಂದು ಕಳಕಳಿಯಿಂದ ವ್ಯಾಧಿಸಿದರು. ಈ ಸಮ್ಮೇಳನದ ಉದ್ಘಾಟಕರಾಗಿ ಕಾಂಗ್ರೆಸ್ ಸಂಸತ್ ಸದಸ್ಯ ಶ್ರೀ ಎಂ. ಎಸ್. ಆಣೆಯವರು ಮುಂದೆ ಬಂದು ಖಂಡತೋಕ್ತಿಯಿಂದ ಭಾರತ ಸರಕಾರದ ಈ ನೀತಿಯನ್ನು ವಿರೋಧಿಸಿದರು.

ಹಿಂದೂ ಮಹಾ ಸಭೆಯು ಮೊದಲಿನಿಂದಲೂ ಭಾರತದ ಭಾಗವನ್ನು ಯಾವುದೇ ಕಾರಣದಿಂದ ಬಿಟ್ಟು ಬಿಡುವುದು ಅಸಾಧ್ಯವೆಂದು ತನ್ನ ವಾದವನ್ನು ಮುಂದಿಡುತ್ತಿತ್ತು. ಅಖಂಡ ಭಾರತ (ಪಾಕಿಸ್ತಾನ ಸಹಿತ)ದ ಕನಸನ್ನೂ ಕಾಣಲು ಹಿಂದೆ ಮುಂದೆ ನೋಡದಿರುವ ಹಿಂದೂ ಮಹಾಸಭೆಯು ವರ್ತನೆಯಲ್ಲಿ ಆಶ್ಚರ್ಯದ ಸಂಗತಿಯೆ.(ನಿಜವಾದರೂ ಪಶ್ಚಿಮ ಬಂಗಾಳದಲ್ಲಿ ಈ ಪಕ್ಷದ ಸ್ವಭಾವವು ಇದೆಯೆಂದು ಹೇಳಬೇಕು. ಈ ಕಾರಣದಿಂದ, ಹಿಂದೂ ಮಹಾಸಭೆಯ ಮುಖಂಡರು ಈ ವಿಷಯವಲ್ಲಿ ಶ್ರೀ ನೆಹರುರವರನ್ನು ಬಾಯಿ ತುಂಬ ಟೀಕಿಸಿದರು. ಬೇರುಬಾರಿಯ ಸೂಚಿತ ಹಸ್ತಾಂತರೀಕರಣವನ್ನು ನಡೆಯಗೊಟ್ಟರೆ, ದೇಶದ ಕ್ಷೇತ್ರೀಯ ಐಕ್ಯವು ಅಪಾಯದ ಘಟ್ಟವನ್ನು ಮುಟ್ಟುವುದು; ಪ್ರಜಾಪ್ರಭುತ್ವಕ್ಕೆ ಬಹು ದೊಡ್ಡ ಗಂಡಾಂತರ ಪ್ರಾಪ್ತವಾಗುವುದು —ಎಂದೆಲ್ಲರು ಎಚ್ಚರಿಸಿದರು.



ಮನೋರಂಜನೆಯ ಕಾರ್ಯಕ್ರಮಗಳು

೧. ಚೀನಗೆಯ ಪ್ರದರ್ಶನ ಗೃಹಗಳು ಆಮೆರಿಕೆಯಲ್ಲಿ ಪ್ರಸಿದ್ಧವಿವೆ. ಚೀನಗೆಯ ಮೂಸಗಳಲ್ಲಿ ಚೀನಗೆಗಳನ್ನು ಪಾಕಿಕೊಂಡು ನುರಿತ ಕಲಾವಿದರು ನಾಟಕಗಳನ್ನು ಅಭಿನಯಿಸುತ್ತಾರೆ. ಅಮೆರಿಕೆಯಲ್ಲಿ ಒಟ್ಟು ೭೦೦ ಇಂತಹ ಪ್ರದರ್ಶನಾಲಯಗಳಿವೆ. ದೇಶ ತುಂಬ ಸಂಚರಿಸುತ್ತಿವೆ. ಜನತೆಯ ಮನರಂಜನೆಯನ್ನು ಪೂರೈಸುವುದಷ್ಟಲ್ಲದೆ ಹೊಸ ನಟರಿಗೆ ತರಬೇತಿಯನ್ನೂ ಇವು ನೀಡುತ್ತಿವೆ. ಆಮೆಚ್ಯೂರ್ ನಾಟಕ ಕಂಪನಿಗಳು ಅಮೆರಿಕೆಯಲ್ಲಿ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿವೆ. ಶಾಲೆ, ಕಾಲೇಜು ವಿದ್ಯಾರ್ಥಿಗಳ ಹಾಗೂ ವಯಸ್ಕರ ಮಟ್ಟದಲ್ಲಿ ಇಂತಹ ಆಮೆಚ್ಯೂರ್ ಕಂಪನಿಗಳು ಬೆಳೆದು ಬರುತ್ತಿವೆ. ೩. ವೃತ್ತಿ ನಿರತರು ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡು ವಿವಿಧ ಪ್ರದರ್ಶನಗಳನ್ನು ನಡೆಸುವುದು ಅಮೆರಿಕೆಯಲ್ಲಿ ಈಗ ಸಾಮಾನ್ಯವೆನಿಸುತ್ತಿದೆ.

ಬೇರುಬಾರಿಯ ಹಸ್ತಾಂತರವು ಮೂಲತಃ ಪಾಕ್-ಭಾರತಗಳ ನಡುವಣ ಸೀಮೂ ವಿವಾದವನ್ನು ಮುಕ್ತಾಯಗೊಳಿಸುವ ಮತ್ತು ಉಭಯ ರಾಷ್ಟ್ರಗಳ ನಡುವೆ ಸುಂದರ ಸಂಬಂಧವನ್ನು ಕುದುರಿಸಿಕೊಳ್ಳುವ ಇರಾದೆಯಿಂದ ನಡೆಸಲು ಯೋಜಿಸಲಾಗಿತ್ತು. ಪಾಕಿಸ್ತಾನವು ತನಗೆ ನೀಡುತ್ತಿದ್ದ ಕೀಟಲೆಗಳನ್ನು ದೂರೀಕರಿಸಲು ಅದಕ್ಕೆ ನೀಡುವ ಉಡುಗೊರೆಯಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಸ್ವಾತಂತ್ರ್ಯ ದೊರೆವ ವೇಳೆ ಅದೇನೋ ಕಾರಣದಿಂದ ಭಾರತದ ಭಾಗವಾಗಿ ಉಳಿದ ಈ ಭಾಗವು ನ್ಯಾಯವಾಗಿ ಪಾಕಿಸ್ತಾನಕ್ಕೆ ಸೇರಬೇಕು ಎಂದಿದ್ದರೂ ನಾಯಕರು ಮನದಂದು, ಈ ಬದಲಾವಣೆಯನ್ನು ಒಪ್ಪಿದ್ದಾರೆ; ಪಾಕಿಸ್ತಾನವಾದರೂ ತನ್ನ ದಾಗಿರುವ ಸ್ವಲ್ಪ ಭಾಗವನ್ನೂ ಭಾರತಕ್ಕೆ ಕೊಡಲು ಒಪ್ಪಿದೆಯೆಂಬ.ದನ್ನು ಮಾನಿಯವಂತಿಲ್ಲ. ಆದರೆ, ನವದೆಹಲಿಯ ರಾಜ್ಯಕೀಯ ಸಮ್ಮೇಳನದಲ್ಲಿ ಮೂತನಾಡಿದ ಹೆಚ್ಚಿನ ನಾಯಕ ಶಿರೋಮಣಿಗಳು ಬೇರುಬಾರಿಯು ಹಸ್ತಾಂತರವು ಕೇವಲ ಸೀಮೂ ಸರಳತೆಯ ಪ್ರಶ್ನೆಯಲ್ಲ; ಅದು ಸಮಸ್ತ ದೇಶದ ರಾಜ್ಯಕೀಯ ಜೀವನದ ಪ್ರಶ್ನೆ ಎಂದು ವಾದಿಸಿದರೆಂದು ವರದಿಗಳು ಬಂದಿವೆ

ಹಿಂದೂ ಮಹಾಸಭೆಯ ಪ್ರೊ. ರಾಮ ಸಿಂಹೆರು ಬಹು ಕ್ರುದ್ಧರಾಗಿ ಪ್ರಧಾನಿ ನೆಹರುರವರು ರಾಜಿನಾಮೆಯೊಯಬೇಕೆಂದು ಒತ್ತಾಯಿಸಿದರು. ಬೇರುಬಾರಿಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಸಾರ್ವತ್ರಿಕ ಚುನಾವಣೆಗಳಲ್ಲಿ ಹೋರಾಡುವಂತೆ ಆಹ್ವಾನವಿತ್ತರು. ಮಹಾಸಭೆಯ ಇನ್ನೊಬ್ಬ ಪ್ರಮುಖರಾದ ಶ್ರೀ ವ್ರಜೇಂದ್ರರು ಸಂವಿಧಾನ, ಸಂಸತ್ ಮತ್ತು ರಾಷ್ಟ್ರಗಳ ಗೌರವ ಪ್ರತಿಷ್ಠೆಗಳ. ಶ್ರೀ

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ನೋಸೀಜೆಂದ ರಾವ್, ವಿದ್ವಾನ್
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ನಿರ್ವಾಹಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸಾಕಾರ್ಯ ಸಿರಿಯುವುದು.

ಕಥಾವಿಹಾರ

ದೇವತೆಗಳ ಮಾನಭಂಗ

ದೇವತೆಗಳು ದೈತ್ಯರನ್ನು ಸ್ವಬಲದಿಂದಲೇ ಮರ್ದಿಸಿದೆವೆಂದು ತಿಳಿದು ಅಹಂಕಾರದಿಂದ ಕೊಬ್ಬಿ ಉಬ್ಬಿದರು. ವಕ್ರಗಾಮಿಗಳಾದ ದೇವತೆಗಳಿಗೆ ಸಮುಚಿತ ಮಾರ್ಗದರ್ಶನ ಮಾಡುವುದು ಬ್ರಹ್ಮನಿಗೆ ಅವಶ್ಯ ತೋರಿತು. ಕನ್ನ ಈ ಕರ್ತವ್ಯವನ್ನಾತ ಸಮರ್ಪಕವಾಗಿಯೇ ನಿರ್ವಹಿಸಿದ. ಅದು ಹೇಗೆ?

ಶ್ರೀ ನಿ. ನಾರಾಯಣ ಬಲ್ಲಾಳ.

ಒಮ್ಮೆ ಬ್ರಹ್ಮನ ವಿಚಿತ್ರ ಕೃಪೆಯಿಂದ ಪ್ರಾಪ್ತವಾದ ಶಕ್ತಿಯು ಕಾರಣದಿಂದ ದೇವತೆಗಳು ಅಸುರರನ್ನು ಸೋಲಿಸಿದರು. ಈ ವಿಜಯದ ಮದದಲ್ಲಿ ಲೀನವಾಗಿ ಅವರು ಬ್ರಹ್ಮನ ಮಹತ್ವವನ್ನು ತಮ್ಮದೇ ಮಹತ್ವ ಎಂದು ಘೋಷಿಸತೊಡಗಿದರು. ಮೆಲ್ಲ-ಮೆಲ್ಲನೆ ಈ ಸ್ಪೃಹೆಯು ಅಹಂಕಾರದ ರೂಪದಲ್ಲಿ ಪರಿಣತವಾಯಿತು. ಅವರು ತಾವೇ ಸರ್ವ ಶಕ್ತಿವಂತರು ಎಂದು ಹೇಳತೊಡಗಿದರು.

ದೇವತೆಗಳ ಈ ಮಿಥ್ಯಾಭಿಮಾನವನ್ನು ನೋಡಿ ಬ್ರಹ್ಮನ ಅವರ ಕಲ್ಯಾಣಾರ್ಥವಾಗಿ ಹಾಗೂ ಅವರ ಅಹಂಕಾರವನ್ನು ಮುರಿಯುವುದಕ್ಕಾಗಿ ಒಂದು ದಿವ್ಯ ಯಕ್ಷನ ರೂಪವನ್ನು ಧರಿಸಿ ಅವರೆದುರು ಕಾಣಿಸಿಕೊಂಡನು. ಬ್ರಹ್ಮನ ಈ ವಿಚಿತ್ರ ಮಾಯಾ ಕಾಯ ಸ್ವರೂಪವನ್ನು ಕಂಡು ದೇವತೆಗಳು ವಿಸ್ಮಯರಾದರು. ಅವರು ನಿವಿಧ ಪ್ರಯತ್ನಗಳನ್ನು ಮಾಡಿದರು; ಅನೇಕ ಶಕ್ತಿಗಳನ್ನು ಪ್ರಯೋಗಿಸಿದರು. ಆದರೆ ಆ ಮಹಾನ್ ಬ್ರಹ್ಮನೆದುರು ಅವರ ಎಲ್ಲಾ ಪ್ರಯತ್ನಗಳು ವ್ಯರ್ಥವಾದುವು. ಅವರು ಯಕ್ಷನ ವಾಸ್ತವಿಕ ಸ್ವರೂಪವನ್ನು ಅರಿಯಲಾರದಾದರು.

ಅದುದರಿಂದ ದೇವತೆಗಳು ಒಂದು ಸಭೆ ಸೇರಿಸಿದರು. ಅಗ್ನಿಯು ಪರಮ ತೇಜಸ್ವಿಯಾದುದರಿಂದ ಅತನೇ ಈ ನನ್ಯ ಹಾಗೂ ಅಲೌಕಿಕ ಸ್ವರೂಪದ ವಾಸ್ತವಿಕತೆಯನ್ನು ತಿಳಿಯಲು ಸಮರ್ಥನೆಂದು ದೇವಗುರು ಬೃಹಸ್ಪತಿಯು ಈ ಸಭೆಯಲ್ಲಿ ನಿರ್ಣಯಿಸಿದರು. ಅಗ್ನಿದೇವನು ಇದನ್ನ ಒಪ್ಪಿಕೊಂಡು, ಯಕ್ಷನ ಪರಿಚಯ ಪಡೆಯಲು ಹೊರಟು ಹೋದನು.

ಅಗ್ನಿದೇವ ತನ್ನ ಸವಿೂಪ ನಿಂತಿದ್ದನ್ನು ಕಂಡು ಯಕ್ಷನ, 'ನೀನ್ಯಾರು? ಹಾಗೂ ನಿನ್ನಲ್ಲಿ ಯಾವ ಶಕ್ತಿಯಿದೆ?" ಎಂದು ಪ್ರಶ್ನಿಸಿದನು.

ಅಗ್ನಿ ದೇವನು ಅತ್ಯಂತ ಅಭಿಮಾನ ಪೂರ್ಣ ಶಬ್ದಗಳಲ್ಲಿ ಉತ್ತರಿಸಿದನು: "ನಾನೇ ಜಗತ್ಪ್ರಸಿದ್ಧ ಅಗ್ನಿದೇವ! ನನ್ನ ಹೆಸರೇ ಜಾತವೇದಾಃ ಎಂದು. ನಾನು ಇಚ್ಛೆಪಿಸಿದರೆ ದೃಷ್ಟಿಗತವಾಗುತ್ತಿರುವ ಈ ಭೂಮಂಡಲದ ಪ್ರತಿಯೊಂದು ವಸ್ತು ವನ್ನು ಸುಟ್ಟು ಭಸ್ಮ ಮಾಡಬಲ್ಲೆ."

ಸೃಷ್ಟಿಕರ್ತನಾದ ಯಕ್ಷರೂಪಿ ಬ್ರಹ್ಮನು ಅಗ್ನಿಯ ದರ್ಪಯುಕ್ತವಾದ ಉತ್ತರವನ್ನು ಕೇಳಿಅತನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ ಅತನೆದುರು ಒಂದು ತೃಣವನ್ನಿಟ್ಟು ಅದನ್ನು ಭಸ್ಮ ಮಾಡಲು ಹೇಳಿದ. ಅಗ್ನಿ ದೇವನು ಅಭಿಮಾನದಿಂದ 'ಈಗಲೇ ನೋಡು' ಎಂದು ಹೇಳಿ ತನ್ನ ಶಕ್ತಿಯನ್ನು ಪ್ರಯೋಗಿಸತೊಡಗಿದ. ಅತನು ತನ್ನಿಂದ ಸಾಧ್ಯವಿದ್ದವ್ಯ ಸ್ರಯತ್ನ ಪಟ್ಟ. ಆದರೆ ಆ ತೃಣವನ್ನು ಭಸ್ಮ ಮಾಡಲಾಗಲಿಲ್ಲ. ಅದುದರಿಂದ ಲಜ್ಜಿತ ಮತ್ತು ಹತಪ್ರತಿಜ್ಞನಾಗಿ ಸುಮ್ಮನೆ ಹಿಂತಿರುಗಿದ.

ಅಗ್ನಿಯ ಬಳಿಕ ವಾಯುದೇವ ನೇಮಿಸಲ್ಪಟ್ಟ. ಅತನಿಗೂ ಅಗ್ನಿಯಂತೆ ಗರ್ವವಿತ್ತು.

ವಾಯು-ದೇವ ತನ್ನ ಬಳಿ ನಿಂತಿದ್ದನ್ನು ಕಂಡು ಯಕ್ಷನು ಅವನ ಪ್ರಶ್ನೆಗಳನ್ನು ಅತನೊಡನೆ ಕೇಳಿದ. ವಾಯುದೇವನು ಕೂಡಾ ಅಗ್ನಿದೇವನಂತೆ ಅಭಿಮಾನ ಪೂರ್ಣ ಶಬ್ದಗಳಲ್ಲಿ ಉತ್ತರವಿತ್ತ.

ವಾಯುದೇವ ಹೇಳಿದ: "ನನ್ನನ್ನೇ ಮಾತರಿಶ್ವಾ ಎಂದು ಕರೆಯುತ್ತಾರೆ. ನಾನು ಬಯಸಿದರೆ ಇಲ್ಲಿ ಕಾಣುತ್ತಿರುವ ಈ ಭೂಮಂಡಲದ ಸಕಲ ವಸ್ತುವನ್ನೂ ಕಿತ್ತು, ಆಕಾಶದಲ್ಲಿ ತೂರಿಬಲ್ಲೆ; ಸರ್ವನಾಶ ಮಾಡಬಲ್ಲೆ."

ಯಕ್ಷನು ವಾಯುದೇವನ ಅಹಂಕಾರವನ್ನು ಕೂಡಾ ದಮನ ಮಾಡುವ ಅಭಿಪ್ರಾಯದಿಂದ ಅದೇ ತೃಣವನ್ನು ಅತನೆಡೆಗೆ ನುರಿಟ್ಟು, ಶಕ್ತಿ ಪ್ರದರ್ಶನ ಮಾಡಲು ಹೇಳಿದ. ವಾಯುದೇವನು ಅದೇ ಭಾವದಿಂದ ಉತ್ತರ ಕೊಡುತ್ತಾ ಹೇಳಿದ:— "ತೆಗೋ, ಈಗಲೇ." ವಾಯುದೇವನು ಅನೇಕಾನೇಕ ಹಾಗೂ ವಿವಿಧ ರೀತಿಯ ಶಕ್ತಿಗಳನ್ನು ಪ್ರಯೋಗಿಸಿದ. ಪೂರ್ಣ ಬಲ ಪ್ರಯೋಗಿಸಿದ ಆದರೂ ಆ ತೃಣವನ್ನು ಅಲುಗಾಡಿಸಲಾಗಲಿಲ್ಲ. ವಾಯು ಕೂಡಾ ಹತಪ್ರಭನಾಗಿ ಸುಮ್ಮನೆ ಹಿಂತಿರುಗಿ ಬಂದ.

ಅಪ್ರತಿಮ ಶಕ್ತಿಶಾಲಿ ಅಗ್ನಿ ಮತ್ತು ಯೆಥೇಷ್ಟ ಬುದ್ಧಿ ಸಂಪನ್ನನಾದ ವಾಯುವು ವಿನಂತಹವಂದಿದ ಯಕ್ಷನ ಪರಿಜಯವನ್ನು ಪಡೆಯಲಾರದೆ ಅಪಜಯವನ್ನು ಕಂಡು, ಇಂದ್ರನೇ ಸ್ವಯಂ ಹೊರಡಬೇಕಾಗಿ ಬಂತು.

ಇಂದ್ರನ ಆಗಮನವಾಗುತ್ತಲೇ ಯಕ್ಷಸ್ವರೂಪ ಬ್ರಹ್ಮನು ಅಂತರ್ಧಾನನಾಗಿ ಆ ಸ್ಥಳದಲ್ಲಿ ಭಗವತಿ ಪಾರ್ವತಿಯು ಪ್ರತ್ಯಕ್ಷಳಾದಳು. ಭಗವಾನ್ ಸದಾ ಶಿವನ ಅಭಿನ್ನ ಶಕ್ತಿಯೊಡನೆ ಉಮೋಳನ್ನು ನೋಡಿ, ಇಂದ್ರನು ಕೂಡಲೇ ಆಕೆಯ ಚರಣಗಳಿಗೆರಗಿ, ಸವಿನಯ ಸ್ತುತಿಮಾಡಿ, ಆಕೆಯೊಡನೆ ನಿವೇದಿಸಿಕೊಂಡ: "ಸರ್ವೇಶ್ವರೀ! ಈಗ ತವ್ಯ ಸ್ಥಾನದಲ್ಲಿ ನಿಂತಿದ್ದೆ—ನನಗೆ ದರ್ಶನವನ್ನಿಟ್ಟು ಅಂತರ್ಧಾನನಾದ ಆ ದಿವ್ಯ ಯಕ್ಷನಾರು? ಆತನು ಬಂದಿದ್ದ ಉದ್ದೇಶವೇನು?"

ಭಗವತಿಯು ಉತ್ತರಿಸುತ್ತಾ ಹೀಗೆಂದಳು "ವತ್ಸಾ! ಆ ವಿಶಾಲ ಕಾಯ ಯಕ್ಷನು ವಾಸ್ತವವಾಗಿ ಬ್ರಹ್ಮನಾಗಿದ್ದ. ನೀವೆಲ್ಲಾ ಬ್ರಹ್ಮನ ವಿಶೇಷಾನು ಕಂಪೆಯ ಕಾರಣದಿಂದಾಗಿ ಅಸುರರನ್ನು ಸೋಲಿಸಿದಿರಿ. ವಾಸ್ತವವಾಗಿ ಆ ವಿಜಯ ಬ್ರಹ್ಮನ ದು ನೀವು ಕೇವಲ ನಿಮಿತ್ತ ಮಾತ್ರರಾಗಿದ್ದಿರಿ. ನಿಮ್ಮೆಲ್ಲರ ಧ್ಯಾನ ಆ ಕಡೆಗಿರಲಿಲ್ಲ ಬ್ರಹ್ಮನೆ ಏಪಿಸ್ಥ ಕೃಪೆಯ ಕಡೆಗೆ ಲಕ್ಷ್ಯಕೊಡದೆ ನೀವು ಆತನ ಮಹಿಮೆಯನ್ನು ನಿಮ್ಮ ಮಹಿಮೆಯೆಂದೇ ಅಂದುಕೊಂಡು ನೀವೇ ಪರಾಕ್ರಮಿಗಳೆಂದು ತಿಳಿದು ವರ್ತಿಸಿದಿರಿ. ಇದು ನಿಮ್ಮ ಮಿಥ್ಯಾಭಿಮಾನವಾಗಿತ್ತು. ಈ ಮಿಥ್ಯಾಭಿಮಾನವನ್ನು ಧ್ವಂಸ ಮಾಡುವುದಕ್ಕಾಗಿ ಹಾಗೂ ನಿಮಗೆ ಒಳ್ಳೆಯದನ್ನು ಮಾಡಬೇಕೆಂಬ ಅಭಿಪ್ರಾಯದಿಂದ ಬ್ರಹ್ಮ ಯಕ್ಷ ರೂಪದಲ್ಲಿ ಪ್ರಕಟವಾಗಿದ್ದ."

"ನೆನಪಿಡಿ! ಸೃಷ್ಟಿಯ ಮೂಲ ಪರಬ್ರಹ್ಮನ ಶಕ್ತಿಯೇ—ದೇವತೆ ಅಥವಾ ಮನುಷ್ಯ ತನ್ನ ಸ್ವತಂತ್ರ ಶಕ್ತಿಯಿಂದ ಏನೂ ಮಾಡಲಾರ-ನಡೆಯುತ್ತದೆ, ಮೂಲಶಕ್ತಿಯ ಸ್ಪರ್ಶವಾಹಿವ್ಯ ನಿಂತು ಹೋದರೆ, ಎಲ್ಲಾ ಶಕ್ತಿಗಳು ವ್ಯರ್ಥವಾಗುತ್ತವೆ. ಆದುದರಿಂದ ಬ್ರಹ್ಮನ ಮಹತ್ವದ ಕೃಪೆಯಿಂದ ಮಹಿಮೋನ್ವಿತ ಮತ್ತು ಶಕ್ತಿವಂತರಾಗಿದ್ದೀರೋ, ಆತನ ಮಹಿಮೆಯನ್ನು ಕೊಂಡಾಡಿ. ನಾನು, ನನ್ನದು ಎಂಬುದರ ಕುರಿತು ಯೋಚಿಸ್ತಾ ಅಭಿಮಾನ ತಾಳಬೇಡಿ."

ಪಾರ್ವತಿ ಉಮೆಯ ಮಾತುಗಳನ್ನು ಕೇಳಿ ಇಂದ್ರನ ಬುದ್ಧಿಯು ಬಾಗಿಲು ತೆರೆಯಿತು; ಅಹಂಕಾರ ನಾಶವಾಯಿತು. ಆತನು ಸಮುಚಿತ ಪಶ್ಚಾತ್ತಾಪಗೊಂಡು, ಸವಿನಯ ಪೂರ್ವಕವಾಗಿ ಪ್ರಶ್ನೆಯೊಂದನ್ನು ಕೇಳಿ ತೊಡಗಿದ.

ಕೆಲವೇ ಕ್ಷಣಗಳ ಬಳಿಕ ಮಹಾದೇವಿ ಪಾರ್ವತಿ ಶುಭಾಶೀರ್ವಾದಪೂರ್ವಕವಾಗಿ ಅದೃಶ್ಯಳಾದಳು. (ಹಿಂದಿಯ ಆಧಾರ)

ಶೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಆಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊಪ್ಪೊರೇಶನ್ ಬೇಂಕು

ತಾನು ಶೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

ಮಹಿಳಾಮಂಡಳ

ಮಹಿಳೆಯರ ಆತ್ಮಹತ್ಯೆಗೆ ಕಾರಣಗಳು

ದೇಶದಲ್ಲಿ ದಿನದಿಂದ ದಿನಕ್ಕೆ ಸ್ತ್ರೀಯರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿವೆ. ಇವುಗಳಿಗೆ ಇಂಬಹುದಾದ ಮೂಲ ಕಾರಣಗಳನ್ನೂ ಪರಿಹಾರೋಪಾಯಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಇವುಗಳ ಬಗ್ಗೆ ಒಂದು ನಿಷ್ಕರ್ಷೆಗೆ ಬರುವುದು ಪಾಠಕರ ಪಾಲಿಗೆ ಸೇರಿದೆ.

ಇಂದಿನ ದಿನಗಳಲ್ಲಿ ನಾವು ವರ್ತಮಾನ ಪತ್ರಿಕೆಗಳಲ್ಲಿ ಸ್ತ್ರೀಯರ ಆತ್ಮಹತ್ಯೆಗಳ ಕುರಿತು ಆಸಕ್ತಿಯಿಂದ ಓದುತ್ತೇವೆ; ಆದರೆ, ಅವುಗಳ ನಿವಾರಣೆಗಾಗಿ ನಾವು ಯಾವ ಉಪಕ್ರಮವನ್ನು ಕೈಗೊಂಡಿದ್ದೇವೆ, ಅಥವಾ ಯೋಜಿಸಿದ್ದೇವೆ? ಸರಕಾರ ಮತ್ತು ಸರ್ವಜನರೆಡೂ ಸೇರಿ ಈ ಬಗ್ಗೆ ಆಗತ್ಯದ ಕ್ರಮ ಕೈಗೊಳ್ಳುವ ಅವಶ್ಯಕತೆಯಿದೆ. ಈ ತುರಿತು ಕೆಲವು ಸೂಚನೆಗಳನ್ನು ಇಲ್ಲಿ ಸೂಚಿಸಬಹುದು.:

೧. ಇಂದಿನ ಶಿಕ್ಷಿತ ವರ್ಗವು ಸಮಾಜದ ಕುರೀತಿಗಳಾದ ವರದಕ್ಷಿಣೆಯೇ ಮೊದಲಾದವನ್ನು ನಿರಂತರ ವಿರೋಧಿಸುತ್ತ ಬರಬೇಕು. ವರದಕ್ಷಿಣೆ ಕೊಡುವವರು ಅಥವಾ ಕೊಳ್ಳುವವರನ್ನು ಸಮಾಜದಿಂದ ಬಹಿಷ್ಕರಿಸಬೇಕು. ಸರಕಾರವೂ ಕಠಿನ ಕಾಯಿದೆಯನ್ನು ಮಾಡಿ ಈ ಪದ್ಧತಿಯನ್ನು ನಿರ್ಮೂಲಿಸಬೇಕು. ವರದಕ್ಷಿಣೆಯ ಮೊತ್ತವು ಅಲ್ಪವಾಗಿರುವುದರಿಂದ ಕೆಲವಾರು ಸ್ತ್ರೀಯರು ಮಾವನ ಮನೆಯಲ್ಲಿ ಯಾತನೆಯನ್ನನುಭವಿಸಬೇಕಾಗುತ್ತದೆ.

೨. ಬಾಲ ವಿವಾಹ ಪ್ರತಿಬಂಧ ಕಾಯ್ದೆಯಿರುವಂತೆಯೇ ಹಲವೆಡೆ ಇವು ನಡೆಯುತ್ತಿರುತ್ತವೆ. ಸಮಯ ಕಳೆದನಂತರ ಪುರುಷ—ನಾರಿಯರಲ್ಲಿ ಮನ—ಮೇಳವಿರುವುದಿಲ್ಲ. ಇದರಿಂದಾಗಿ ಪುರುಷನು ನಾರಿಯನ್ನು ಕಾಡತೊಡಗುವನು. ಆಗ ಸ್ತ್ರೀಗೆ ಆತ್ಮಹತ್ಯೆಯ ಹೊರತು ಪರಿಹಾರೋಪಾಯ ಯಾವುದೂ ಗೋಚರಿಸುವುದಿಲ್ಲ. ಆದುದರಿಂದ ಸರಕಾರ ಈ ಸಂಬಂಧದ ಕಾಯ್ದೆಯನ್ನು ಅಕ್ಷರಶಃ ವ್ಯವಹಾರಕ್ಕೆಳಿಸಬೇಕು; ಗ್ರಾಮದ ನವಯುವಕರು ಸಂಘಟಿತರಾಗಿ ಬಾಲ ವಿವಾಹಕ್ಕೆ ತಡೆಹಾಕಬೇಕು.

೩. ಬಡತನದ ಕಾರಣದಿಂದಲೇ ಕೆಲವು ಸ್ತ್ರೀಯರು ಬೇಸತ್ತು ಸುಖಾತ್ಮಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸಾಮಾಜಿಕ ಸಂಸ್ಥೆಗಳು ಮತ್ತು ರಾಜ್ಯ ಸರಕಾರಗಳು ಪ್ರಯತ್ನಪೂರ್ವಕವಾಗಿ ನಿರುದ್ಯೋಗವನ್ನು ದೂರಮಾಡಿ, ಅವರಿಗೆ ಗೃಹ—ವ್ಯವಹಾರವನ್ನು ಕಲಿಸಿಕೊಡುವುದು ಅಗತ್ಯವಿದೆ.

೪. ಪ್ರತಿಯೊಂದು ಜಿಕ್ಕದೊಡ್ಡ ಹಳ್ಳಿಯಲ್ಲಿ, ನಗರದಲ್ಲಿ ಸ್ತ್ರೀ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಡಬೇಕು; ತನ್ಮೂಲಕ ಅವರಿಗೆ ಸಮುಚಿತ ಶಿಕ್ಷಣವನ್ನೀಯಬೇಕು. ಇದರಿಂದ ಅವರು ಬೇಕಾದಾಗ ಧನಾರ್ಜನೆಯನ್ನೂ ಮಾಡುವಂತಾಗಬೇಕು. ಪತಿಯು ಕಾಲವಶನಾದನಂತರ ಅಥವಾ ಅತನಿಂದ ಪರಿತ್ಯಕ್ತೆಯೆನಿಸಿದನಂತರ ಸಹನಾಶೀಲತೆಯಿಂದ ತನ್ನ ಹಾಗೂ ಮಕ್ಕಳ ಜೀವನ ನಿರ್ವಹಣೆಯನ್ನು ಮಾಡುವಂತಾಗಬೇಕು. ಅತ್ತೆಯ ಮನೆಯಲ್ಲಿ ಕಷ್ಟ—ದುಃಖದ ಅನ್ನವುಣ್ಣುವ ಹೊರೆ ಆಕೆಗೊದಗಬಾರದು. ಏಕೆಂದರೆ, ಅತ್ತೆಯ ಮನೆಯಲ್ಲಿ ಭೋಗಿಸಬೇಕಾದ ದುಃಖವೇ ಹಲವಾರು ಸ್ತ್ರೀಯರ ಆತ್ಮಹತ್ಯೆಗೆ ಕಾರಣವಾಗಿರುತ್ತದೆ.

೫. ದೀರ್ಘ ಕಾಲ ರುಗ್ಣಶಯ್ಯೆಯಲ್ಲಿದ್ದವರ ಮನಸ್ಸನ್ನು ಸದಾ ಪ್ರಸನ್ನವಿರುವುದಕ್ಕೆ ಆವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇದರಿಂದ ಆಕೆ ಜೀವದಲ್ಲಿ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುವ ಅವಕಾಶ ತಪ್ಪುವುದು.

೬. ತಮ್ಮ ಮಗಳು ಅತ್ತೆಯ ಮನೆಯಲ್ಲಿ ದುಃಖವನ್ನು ಅನುಭವಿಸುತಿದ್ದಾಳೆಂದು ತಿಳಿದೊಡನೆಯೇ ತಾಯ್ತಂದೆಯರು ಆಕೆಯನ್ನು ಕರೆತಂದು, ಕುಟುಂಬದ ಮಾನ-ಮರ್ಯಾದೆ—ಗೌರವಗಳ ತತ್ತ್ವಶಾಸ್ತ್ರವನ್ನು ಬದಿಗಿತ್ತು ಆಕೆಯನ್ನು ಆರ್ಥಿಕಸ್ವಾವಲಂಬಿಯಿಂದ ಉನ್ನತೀಕರಿಸಬೇಕು. ಇಲ್ಲವಾದಲ್ಲಿ, ಆಕೆ ಜೀವ ಹಿಡಿದುಕೊಳ್ಳಲಾರಳು.

೭. ಕ್ರೂರವ್ಯವಹಾರಿ ಪುರುಷನಿಗೆ ಸಾಮಾಜಿಕ ಬಹಿಷ್ಕಾರವಿರಬೇಕು. ಅವನು ಶ್ರೀಮಂತನಾಗಿರಲಿ, ಕ್ರೂರಿಗೆ ಯಾರೂ ತಮ್ಮ ಕನ್ಯೆಯನ್ನು ಕೊಡಬಾರದು. ಅಪರಾಧ ಅಥವಾ ಅನ್ಯಾಯ ನಡೆಸಿದ ಪುರುಷನಿಗೆ ಕಠೋರ ದಂಡನೆ ನೀಡಬೇಕು. ಈ ಬಗ್ಗೆ ವಕೀಲರು, ಸಾಮಾಜಿಕ ಸಂಸ್ಥೆಗಳು ಪೀಡಿತ ಸ್ತ್ರೀಗೆ ಉದಾರ ಸಹಾಯ ಮಾಡಬೇಕು.

೮. ಪುರುಷ ಮತ್ತು ಸ್ತ್ರೀಯರಲ್ಲಿ ಅಧಿಕ ಭಿನ್ನಮನಸ್ಸು ತೋರಿಬಂದು, ಸ್ತ್ರೀಯು ದೈಹಿಕ ಮಾನಗೂ ಭಂಗಿಕೆಪೀಡೆಯನ್ನು ಸಹಿಸಬೇಕಾಗಿ ಬರಬಹುದು; ಇಂಹ ಸಂದರ್ಭದಲ್ಲಿ ಆಕೆಗೆ ಬಿಡುಗಡೆ ದೊರೆಯಬೇಕು; ಸಾಮಾಜಿಕ ಸಂಸ್ಥೆಗಳು ಈ ವಿಷಯದಲ್ಲಿ ಶುಂಬ ಸಹಾಯ ಮಾಡುವುದು ಸಾಧ್ಯ.

೯. ಅವಿಭಕ್ತ ಕುಟುಂಬದಸ್ತ್ರೀಗೆ ಸಮ್ಮಾನದೊರೆಯಬೇಕು. ಅತ್ತೆ, ಸತಿ, ಮತ್ತಿತರ ಕಾಂಟುಂಬಿಕ ಸದಸ್ಯರಿಂದ ಆಕೆ ನೊಂದಳೆಂದರೆ, ಆಕೆಯ ಮರ್ಮಕ್ಕೇನೇ ಆಘಾತವಾದಂತಾಗುವುದು. ಎಲ್ಲರೂ ಹಿಂಸಪಡಿಸಿದರೆ, ಆಕೆ ಆತ್ಮಹತ್ಯೆಯನ್ನಲ್ಲದೆ ಮತ್ತೇನು ತಾನೇ ಮಾಡಬಲ್ಲಳು?

೧೦. ಧೂರ್ತ ಪುರುಷನೊಡನೆ ಸ್ತ್ರೀಯಾದರೂ ಸಾವಧಾನದಿಂದಿರಬೇಕಾಗಿವುದು; ತನ್ನ ಅಮೂಲ್ಯವಾದ ಚರಿತ್ರೆಯನ್ನು ಆಕೆ ಕಲಂಕಿತಗೊಳಿಸಬಾರದು. ಅನಂತರ, ನಿರಾಧಾರಿ ಸ್ತ್ರೀಯರಿಗೆ ಧೂರ್ತ ಪುರುಷರಿಂದ ಅಪಾಯಗಳು ತಪ್ಪಿ ಬಹುದು; ಆದುದರಿಂದ ಅವರ ರಕ್ಷಣೆಗಾಗಿ ಸರಕಾರ ಮತ್ತು ಸಾಮಾಜಿಕ ಸಂಸ್ಥೆಗಳು ಜಾಗ್ರತವಾಗಿರಬೇಕು.

(ಮೂಲ: ನವಭಾರತ ಟಾಯಿಮ್ಸ್)

ಪರಲೋಕ ವಿದ್ಯೆ

ಸತ್ತವರೊಡನೆ ಮಾತನಾಡಬಹುದೆ?

ಮೃತಾತ್ಮದೊಡನೆ ಸಂವಾದ ನಡೆಸುವುದನ್ನು ಹುಚ್ಚು ಕಲ್ಪನೆಂದು ಹೇಳುವವರೇ ಸ್ವಯೋಗಗಳನ್ನು ಕಂಡನಂತರ ತಮ್ಮ ತಪ್ಪನ್ನು ತಿದ್ದಿಕೊಂಡರು. ಸತ್ತವರೊಡನೆ ಸಂವಾದವೂ ವಿಜ್ಞಾನದ ಒಂದು ಭಾಗವಲ್ಲವೆ?

ಆ ದಿನ ಮಾತುಕತೆ ತುಸು ತೀವ್ರವಾಯಿತು. ಮಾತುಕತೆಯು ವಿಷಯವಾದರೂ ಬಹು ಗಂಭೀರವಾಗಿತ್ತು; "ಮೃತರೊಡನೆ ನಾರ್ತಾಲಾಪವು ಸಾಧ್ಯವೆ?" ಎಂಬುದೇ ವಿಚಾರಣೀಯವಾಗಿತ್ತು. ಆದರೆ, ಈ ಬಗ್ಗೆ ವಿಚಾರಮಾಡುವುದು ಮೂರ್ಖತೆಯು ದ್ಯೋತಕವೆಂದು ಹೇಳಲಾಗುತ್ತಿದೆ. 'ಪರಲೋಕ ವಿದ್ಯೆ' ಎಂಬುದೊಂದು ವಿದ್ಯೆಯು ಈ ಸಂಬಂಧದಲ್ಲಿದೆ. ಆದರೆ, ಈ ವಿಷಯದಲ್ಲಿ ಏನಾದರೂ ಆಡಿದರೆ, ಅದು ತೀರ ಅಸಂಭವನೆಂದು ತೆಗೆದ ಬಾಯಿಗೆ ಹೆಚ್ಚಿನವರು ಹೇಳುತ್ತಾರೆ. ಯಾಂದರೂ ಪರಲೋಕವಿದ್ಯೆಯ ಬಗ್ಗೆ ಬಾಯಿತ್ತಿದರಾದರೆ, ಅವರು ಹುಚ್ಚರನಾಲಿಗೆ ಸೇರಿಬಿಡುತ್ತಾರೆ. ಪರಂತು ಇಂತಹ ರು ತೀರ ಸಂಕುಚಿತ ಪ್ರವೃತ್ತಿಯವರೆನ್ನುವೆ ದಿಗತ್ಯಂತರವಿಲ್ಲ

ಪರಲೋಕ ವಿದ್ಯೆಗೆ ವೈಜ್ಞಾನಿಕ ಆಧಾರವೆಲ್ಲಿದೆಯೆಂದು. ಪ್ರಶ್ನಿಸುವವರೇ ಎಲ್ಲ. ವಿಜ್ಞಾನವು ಪ್ರಯೋಗ ಮೂಲಕ ಸತ್ಯವೆಂದು ಕಂಡುಬಂದ ವಿಷಯಗಳನ್ನು ಮಾತ್ರ ಸರಿಯೆಂದು ಒಪ್ಪುತ್ತದೆ. ಹಾಗಾಗಿ ಪರಲೋಕ ವಿದ್ಯೆಯನ್ನೂ ಪ್ರಯೋಗಗಳ ಮೂಲಕ ಸಿದ್ಧಮಾಡಿ ತೋರಿಸುವುದು ಸಾಧ್ಯವಾದುದರಿಂದ, ಇದನ್ನೂ ವಿಜ್ಞಾನವೆಂದು ಅವಶ್ಯ ಒಪ್ಪಿಕೊಳ್ಳಬೇಕಾಗುವುದು. ಸತ್ತವರೊಡನೆ ಮಾತಾಡುವುದೂ ಈ ವಿದ್ಯೆಯು ಒಂದಂಗ. ನನ್ನ ಮಿತ್ರರಿಗೆ ಈ ಸಂಬಂಧದ ಪ್ರಯೋಗವನ್ನು ಮಾಡಿತೋರಿಸಬೇಕೆಂದು ನಿಶ್ಚಯಿಸಿ ಅವರನ್ನು ಕರೆದು ಕೂರಿಸಿದೆ. ಪ್ರಯೋಗ ಪ್ರಾರಂಭವಾಗುತ್ತಿದ್ದಂತೆಯೇ ಭಾಗ, ಅವರು ಪರಸ್ಪರ ಅಡಿಕೊಳ್ಳಲು ತೊಡಗಿದರು. ಕೆಲವರು, ವ್ಯರ್ಥವಾಗಿ ಸಮಯ ಹಾಳು ಮಾಡುತ್ತಾನೆಎಂದರೆ, ಇನ್ನು ಕೆಲವರು, ಮಾತಲಿ, ಒಂದುವೇಳೆ ಆತ ಅಸಫಲನಾದನೆಂದರೆ, ಆತನ ತಲೆಯಲ್ಲಿ ಸುಳಿದಾಡುತಿದ್ದ ಮೃತರಾದರೂ ಇಳಿದು ಜೋರಾರಲ್ಲಿ?" ಎನ್ನುತಿದ್ದರು.

ಸ್ವಾಮಿ ಸತ್ಯಾನಂದ ಸರಸ್ವತಿಯವರು ಪ್ರಯೋಗ ಕರ್ತರಾಗಿದ್ದರು. ಸ್ವಾಮಿಯವರ ಪರಿಚಯ ಅವಕಾಶವಾದಾಗ ಮಾಡಿಕೊಡೋಣ. ಇವರು ಪರಲೋಕ ವಿದ್ಯಾಪಾರಂಗತರಿದ್ದರು; ಈಗ ಅವರೀ ಲೋಕದಲ್ಲಿ ಉಳಿವಿಲ್ಲ ಒಂದು ಗಾಜಿನ ಲೋಟೆಯನ್ನು ಮೇಜಿನಮೇಲಡಲಾಯಿತು. ಲೋಟೆಯನ್ನಾಲ್ಕೂ ನಿಟ್ಟಾಗಳಲ್ಲಿ ಇಂಗ್ಲಿಷ್ ವರ್ಣಮಾಲೆಯ ೨೬ ಅಕ್ಷರಗಳನ್ನೂ ಕತ್ತರಿಸಿ ಬೇರೆ ಬೇರೆಯಾಗಿಡಲಾಯಿತು. ಈ ವಿದ್ಯೆಗೆ ಬಲವಾದ ವಿರೋಧಿಗಳಲ್ಲಿ ಮೂವರನ್ನು ಸವಿಾಪಕರೆಯಲಾಯಿತು. ಅವರು ಬಂದು ಕುಳಿತರು. ಸ್ವಾಮಿಜಿಯವರು ಹೇಳಿದರು: "ಯಾವುದಾದರೂ ಶುಭಾತ್ಮವು ಇಲ್ಲಿ ವಿಚರಿಸುತ್ತಿರುವುದಾದರೆ, ದಯವಾಡಿಸಿ ಲೋಟೆಯೊಳಗೆ ಬಂದೇಕು." ಹದಿನೈದು ನಿಮಿಷ ಕಾಲ ಹೀಗೆಯೇ ನಡೆಯಿತು. ಸ್ವಲ್ಪ ಸಮಯದಲ್ಲಿಯೇ ಲೋಟೆಯು ಲ್ಲೊಂದು ಕಂಪನವಾಯಿತು. ಆ ಮೇಲೆ ಲೋಟೆ ವಲೆಂದುವರಿಯಿತು. ಆಗ, ನಿನ್ನ ಹೆಸರು ಹೇಳು ಎಂದರೆ, ಲೋಟೆಯು ಮೆಲ್ಲ ಮೆಲ್ಲನೆ ಮುಂದೆ ಸರಿದು ಹರಡಿದ್ದ ಅಕ್ಷರಗಳಲ್ಲೊಂದರ ಮೇಲೆ ನಿಲ್ಲ ತಿತ್ತು; ಮತ್ತೆ ಇನ್ನೊಂದು ಅಕ್ಷರದ ಮೇಲೆ. ಹಾಗೆಯೇ ಬರೆದುಕೊಂಡೆವು. ಆದರೆ, ಇದೊಂದ. ವಿಕ್ಯೆಯೆಂದು ಎಲ್ಲರೂ ಒಪ್ಪಿಕೊಂಡರು. "ಇದಾದರೊ ಚಮತ್ಕಾರ ಗಂಭೀರವಾಗಿ ಒಂದು ವಿಷಯದ ಬಗ್ಗೆ ಆಡುವವ ತಿವಿಳಿ. ನಾವೇನೋ ಒಂದು ವೋಜು ಎಂದುಕೊಂಡಿದ್ದೆವು. ಇದಿಗ ಬಹು ವಿಚಿತ್ರ ವಿನೋದವೆಂದು., ಹೇಳಿಕೊಂಡರು.

ವಿದೇಶಗಳಲ್ಲಿ ಅನೇಕ ವಿದ್ವಾಂಸರು ಮತ್ತು ವೈಜ್ಞಾನಿಕರು ಈ ಬಗ್ಗೆ ತುಂಬ ಸಂಶೋಧನೆ ನಡೆಸಿದ್ದಾರೆ. ತಮ್ಮ ಅನುಭವವನ್ನು ಜನತೆಗೆ ತಿಳಿಸಿದ್ದಾರೆ. ಇಂಗ್ಲೆಂಡಿನ ಪ್ರಸಿದ್ಧ ವೈಜ್ಞಾನಿಕರಾದ ಡಾ। ಹೆಡ್ಸನ್, ಸರ್ ವಿಲಿಯಂ ಕ್ರುಕ್ಸ್ ಮತ್ತು ಸರ್ ಒಲಿವರ್ ಲಾರು ಈ ಕುರಿತಾಗಿ ಸಂಶೋಧನೆ ಮಾಡಿದ್ದಾರೆ. ವಿದೇಶಗಳ ವಿಜ್ಞಾನಿಗಳೂ ರಚನಾತ್ಮಕ ಪ್ರಯೋಗಗಳನ್ನು ನಡೆಸಿದ್ದಾರೆ ಫ್ರಾನ್ಸಿನ

(ಒಂದೇ ಪುಟ ನೋಡಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ
ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮಲ್ಲಿ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ. ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಶೇಕಡಾ 4½ರ ವರೆಗೆ.
ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ
ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು ಇತ್ಯಾದಿ.
(ಸ್ಥಾಪನೆ: 1920)

ಆತ್ಮತೃಪ್ತಿ ಮೂಲ

ಸೌಂದರ್ಯರಸ ಪಾನಮಾಡುವಿರಾ?

ಪ್ರಕೃತಿಯು ಸೌಂದರ್ಯ ರಸಾಸ್ವಾದನೆಯು ಆತ್ಮತೃಪ್ತಿಗೆ ಕಾರಣವಾಗಿದೆ; ಆದರೆ ಭೋಗೇಚ್ಛೆಯುಕ್ತ ನಯನಗಳಿಗೆ ವಾಸ್ತವಿಕ ಸೌಂದರ್ಯ ಗೋಚರಿಸುವುದಿಲ್ಲ..

(ಸಂಕಲಿತ)

ಎಲ್ಲಿಯೂದರೂ ಮನೆಬಿಟ್ಟು ಹೊರಗೆ ಕಾಲಿಡುವುದಕ್ಕೆ ಮೊದಲು ಕನ್ನಡಿಯಲ್ಲಿ ಮ್ಮೆ ತಮ್ಮ ಮುಖ ಸೌಂದರ್ಯವನ್ನು ನೋಡಿ ತೃಪ್ತರಾಗದೆ ಇರುವವರು ಇಂದು ಆಪರೂಪವೆಂದೇ ಹೇಳಬೇಕು. ಸೌಂದರ್ಯವು ಸದಾ ತಮ್ಮ ಬಳಿಯಲ್ಲಿಯೇ ಇರಬೇಕೆಂದು ಹೆಚ್ಚಿನವರ ಆಶೆ. ಪ್ರತಿಕ್ಷಣವೂ ಆ ಸೌಂದರ್ಯದ ಅನುಭವ ಮಾಡಿಕೊಳ್ಳಬೇಕು; ಅದರಿಂದ ಸದಾ ಸರ್ವದಾ ಆಜ್ಞಾಧಿತವಾಗಿರಬೇಕು ಎಂಬ ಇರಾದೆ ಎಲ್ಲರಿಗೂ ನಿಮ್ಮ ಇಂಗಿತವೂ ಇದಕ್ಕಿಂತ ಬೇರೆಯಾಗಿರದು. ಈ ಇಚ್ಛೆಯು ಅತ್ಯಂತ ಸ್ವಾಭಾವಿಕವಾದುದು. ಇದು ಸಫಲವಾಗುವುದೂ ಇದೆ; ಆದರೆ ಸೌಂದರ್ಯದ ಬಗ್ಗೆಯೂ ಸಾಧನ ಮಾತ್ರ ಅತ್ಯವಶ್ಯ. ಈ ಸಾಧನೆ ಕೇವಲ ಮಾನಸಿಕವಾದುದು. ನೀವು ಸಾಧನೆಯಲ್ಲಿ ತತ್ಪರರಾದಿರೆಂದರೆ, ಸೌಂದರ್ಯಸಿದ್ಧಿ ಪಡೆಯಬಹುದು. ಸೌಂದರ್ಯ ನಿಮ್ಮ ಕೈಗೊಂಬೆಯಾಗಬಹುದು.

ಸೌಂದರ್ಯದ ನೇಲೆ ನೀವು ನಿಮ್ಮ ಆಧಿಪತ್ಯ ಜಮಾಯಿಸುವ ಸಾಹಸವನ್ನು ಬಿಟ್ಟು ಬಿಡಿರಿ; ಆಗ ಸೌಂದರ್ಯವೇ ನಿಮ್ಮನ್ನು ಅರಸಿಕೊಂಡು ಬರುವುದು. ಭೋಗೇಚ್ಛೆ ಮತ್ತು ಸೌಂದರ್ಯಗಳಿಗೆ ಎಣ್ಣೆ ಸೀಗೆ. ನಯನಗಳಲ್ಲಿ ಭೋಗಲಾಲಸೆ ಅಂಕುರಿಸಿತೆಂದರೆ, ಸೌಂದರ್ಯದರ್ಶನ ಶಕ್ತಿ ಅವುಗಳಿಂದ ಸ್ವಾಭಾವಿಕವಾಗಿ ಲುಪ್ತವಾಗುವುದು. ಸೌಂದರ್ಯ ಮತ್ತು ಪಿತ್ಮೀಯತೆಯು ಭಾವನೆಗಳು ಬಹುಕೋಮಲವಾಗಿದೆ; ಭೋಗೇಚ್ಛೆಯ ಒಂದೇ ಒಂದು ತೆರೆಯು ಹೊಡೆತವನ್ನೂ ಅವು ಸಹಿಸಿಕೊಳ್ಳಲಾರವು. ಭೋಗದ ಕೆಡಿಗಳು ಉದುರುವ ನೇತ್ರಗಳಿಂದ ಸುಂದರತೆ ಜಾರಿ ಹೋಗುವುದು. ಒಂದುಪೇಳೆ ಅದು ನಿಕಟವುಳಿದರೂ ನೂರು ಆವರಣಗಳೊಳಗೆ ಹುದುಗಿಕೊಂಡಿರುವುದು.

ಸೌಂದರ್ಯದ ಸ್ವತ್ವವನ್ನು ಕಳೆದುಕೊಳ್ಳಬಯಸುವ ಮೂರ್ಖನಾದರೂ ಯಾರು? ಪ್ರೇಕ್ಷಕನ ದೃಷ್ಟಿಯಲ್ಲಿ ಕೇವಲ ಪ್ರಶಂಸೆ, ಆತ್ಮೀಯತೆಗಳು ಇರುವುವಾದರೆ, ಸೌಂದರ್ಯವು ನಿಸ್ಸಂಕೋಚದಿಂದ ಸ್ವಯಂ ನಿಕಟವಾಗಿಯಿರುವುದು. ಮಿಮಿಷ ಬರಿಯುದು ಮಾತ್ರವಲ್ಲ, ತನ್ನನ್ನು ನಿರಾವೃತಗೊಳಿಸುವುದು; ತನ್ನ ಅಂತರಂಗದ ರಹಸ್ಯಗಳನ್ನು ಪ್ರಕಟಗೊಳಿಸುವುದು.

ಆಗಲೇ ಸೌಂದರ್ಯ ತನ್ನ ರೂಪದ ಬಾಗಿಲನ್ನು ತೆರೆಯುವುದು. ಯಾವುದೇ ಕಾಮದಗ್ಧ ವ್ಯಕ್ತಿಯ ಕಣ್ಣುಗಳು ತನ್ನ ರೂಪದಲ್ಲಿ ನಗ್ನತೆಯನ್ನು ಅರಸುವುದಿಲ್ಲವೆಂದು ತಿಳಿದುಕೊಳ್ಳುವುದು. ಭೋಗೇಚ್ಛೆಯನ್ನು ತೊರೆದೊಡನೆಯೆ ಸೃಷ್ಟಿಯ ಸಮಸ್ತ ಮಾಧುರ್ಯ ನಮ್ಮೆದುರು ಕರಬದ್ಧನಾಗಿ ನಿಂತು ಬಿಡುವುದು. ನಗ್ನ ಸುಂದರಿಯು ಸೌಂದರ್ಯವನ್ನು ನಗ್ನ ಬಾಲಕನ ಸೌಂದರ್ಯದಂತೆ ಅಕಲುಷ ಮನಸ್ಸಿನಿಂದ ನೋಡಬಲ್ಲ ಸಾಧಕನ ಮುಂದೆ ಸೌಂದರ್ಯವು ತನ್ನ ಬಾಗಿಲನ್ನು ತೆರೆದು ಆಹ್ವಾನಿಸುವುದು. ಸುಂದರ ಆತ್ಮ ಮಾತ್ರ ಸೌಂದರ್ಯವನ್ನು ಕಾಣಬಲ್ಲುದು. ಸೌಂದರ್ಯ ಶಬ್ದದ ಅರ್ಥ ತಿಳಿದುಕೊಳ್ಳುವುದೂ ಬಳಿಕ ಕಷ್ಟ.

ತನ್ನ ಹೊದಿಕೆಯನ್ನು ಕಳಚಿದವರಿಗೆ ಸೌಂದರ್ಯವು ಆದೃಶ್ಯನಾಗಿಯೇ ಉಳಿಯುವುದು. ಅದು ತಾನಾಗಿಯೇ ಬಂದು ನಮ್ಮ ವೀಣೆಯಲ್ಲಿ ತನ್ನ ಗೀತೆಯನ್ನು ಹಾಡದವರೆಗೆ ಅದು ವರ್ಣನಾತೀತವಾಗಿ ಉಳಿಯುವುದು. ಅದು ಸ್ವಯಂ ಪಥಪ್ರದರ್ಶಕವಾಗದವರೆಗೆ ಅದರ ಮಾರ್ಗವು ಅಗೋಚರವಿರುವುದು. ಅದುವರೆಗೆ ಸೌಂದರ್ಯ ನೂರಾರು ಆವರಣಗಳೊಳಗೆ ಮರೆಯಾಗಿರುವುದು.

ಸೌಂದರ್ಯವನ್ನು ನೋಡುವವರ ದೃಷ್ಟಿ ಬೇರೆ ಬೇರೆಯಾಗಿರುತ್ತದೆ. ಕಾರ್ಯವ್ಯಸ್ತರಾದವರು ವಿಶ್ರಾಂತಿಯ ವೇಳೆಯಂದ ಮಂದಾಲಾಪ ಮಾಡುತ್ತ ಸೌಂದರ್ಯನಿಭವ ಮಾಡುತ್ತಾರೆ. ಸಾಹಸಿಯುವಕನೋ ಅದು ಪರ್ವತ ಶಿಖರದ ಮೇಲೆ ನೃತ್ಯಮಾಡುತ್ತಿರುವುದನ್ನು ವೀಕ್ಷಿಸುತ್ತಾನೆ. ಪ್ರಾಣಜೀವಿಯು ಅದು ಸಂಧ್ಯಾ ಗವಾಕ್ಷಗಳೊಡನೆ ಚೆಲ್ಲಾಟವಾಡುತ್ತಿರುವುದನ್ನು ಕಂಡು ಸಂತುಷ್ಟನಾಗುತ್ತಾನೆ. ಸೌಂದರ್ಯದ ಹೆಸರಿನಲ್ಲಿ ಎಲ್ಲ ವರ್ಗದ ಜನರು ತಮ್ಮ ಅತೃಪ್ತ ಆಕಾಂಕ್ಷೆಗಳನ್ನು ಪರಿತೋಷಿಸಲು ಬಯಸುತ್ತಾರೆ. ಈ ಆಕಾಂಕ್ಷೆ ನವುಗೆ ಸೌಂದರ್ಯದರ್ಶನ ಮಾಡಗೊಡುವುದಿಲ್ಲ. ಆದುದರಿಂದ ಆ ಆಕಾಂಕ್ಷಾರಹಿತರಾದರೆ ಮಾತ್ರ ಸೌಂದರ್ಯದರ್ಶನ ಮಾಡುವುದು ಸಾಧ್ಯವಾಗುವುದು.

ಶುಕದೇವನು ಎದುರು ಜಲಾಶಯದಲ್ಲಿ ಸ್ನಾನ ಮಾಡುತ್ತಿದ್ದ ಋಷಿಕನ್ಯೆಯರು ಲಜ್ಜೆಯ ಭಾವ ತಾಳಲಿಲ್ಲ; ಏಕೆಂದರೆ, ಶುಕದೇವನ ಕಣ್ಣುಗಳಲ್ಲಿ ಭೋಗವಿಷವು ಇದ್ದಿರಲಿಲ್ಲ. ಆದರೆ, ಇಂದು ಯಾವನೇ ತರುಣ ಈ ವಿಷದಿಂದ ಮುಕ್ತನಾಗಿರಲಾರ.



ಸೈಂಟ್ ಲೂಯಿಸ್‌ನ ನೋರ್ಮಂಡಿ ಸೀನಿಯರ್ ಹೈಸ್ಕೂಲಿನ ವಿದ್ಯಾರ್ಥಿ ಟೇಟ್‌ರು ತಯಾರಿಸಿದ ಸೈಕ್ಲೋತ್ರೋನ್ ಯಂತ್ರ. ಈ ವರ್ಷದ ವೈಜ್ಞಾನಿಕ ಮೂಲಕಟ್ಟೆಯಲ್ಲಿ ಈ ಯಂತ್ರಗಳು ಪ್ರದರ್ಶನಕ್ಕೆ ಬರಲಿವೆ.

ಈ ಕಾರಣದಿಂದಲೇ ಪ್ರಪಂಚದ ಸೌಂದರ್ಯವು ಅಂಧಕಾರದಲ್ಲಿ ಲೀನವಾಗಿ ಹೋಗಿದೆ. ಕುರೂಪತೆ ಮಾತ್ರ ಮುಂದೆ ಎದ್ದು ತೋರುತ್ತದೆ. ಇಂದು ಸಂಪೂರ್ಣ ಜೀವನವು ಕುರೂಪ ಮತ್ತು ಕಟುತಮ ಛಾಯೆಗಳಿಂದ ತುಂಬಿ ಹೋಗಿದೆ. ಆದರಲ್ಲಿ ಮಾಧುರ್ಯವುಳಿದಿಲ್ಲ; ಸೌಂದರ್ಯ ಉಳಿದಿಲ್ಲ. ಜಗತ್ತಿನ ಸೌಂದರ್ಯವು ತಾನಾಗಿಯೇ ಅಘನ್ಯಕ್ತವಾದಾಗಲೇ ಜೀವನವೂ ಮಧುರವಾಗುವುದು. ನಮ್ಮ ದೃಷ್ಟಿಯು ನಿರ್ದೋಷವಾಗಿ ಆದರಲ್ಲಿ ವಾಸನೆಯ ಲವಲೇಶವೂ ಇಲ್ಲದೆ, ಭೋಗೇಚ್ಛೆಯಿಂದ ದೂರವಿದ್ದರೆ, ಮಾತ್ರ ಇದು ಸಾಧ್ಯವಾಗುವುದು. ಆಗಲೇ ನಾವು ವಿಶ್ವಾತ್ಮಗಳ ವಿಭೂತಿಯೊಡನೆ ಆತ್ಮೀಯತೆಯ ಸಂಬಂಧವನ್ನು ಬೆಳಸುವೆವು; ಸೌಂದರ್ಯದ ಆನಂದವನ್ನು ಅನುಭವಿಸಬಲ್ಲೆವು

ಸೌಂದರ್ಯ ಮತ್ತು ನಮ್ಮ ನಡುವೆ ಭೋಗ್ಯ—ಭೋಕ್ತರ ಸಂಬಂಧವಿರುವವರೆಗೆ ನಾವು ಅದರ ಆತ್ಮೀಯರಾಗಲಾರೆವು. ಭೋಕ್ತೃ ಮತ್ತು ಭೋಗ್ಯಗಳ ನಡುವೆ ಯಾವಾಗಲೂ ವಿರೋಧ ಭಾವನೆಗಳಿರುತ್ತವೆ. 'ಇವುಗಳಲ್ಲಿ ಪ್ರೇಮ ಕಲ್ಪನೆ ಮಾಡುವುದಕ್ಕೆ ಯಾವ ಆಧಾರವೂ ಇಲ್ಲ. 'ಭೋಗೇಚ್ಛೆ'ಗೆ ಪ್ರೇಮದ ಜೊತೆಯಿರುವುದೆಂದರೆ, ಬಹುದೊಡ್ಡ ವಂಚನೆ. ಪ್ರೇಮವನ್ನು ಆತ್ಮವು ಮಾತ್ರಗಳಿಸಬಲ್ಲುದು; ಆದರೆ ಭೋಗವು ಶರೀರ ಸಂಬಂಧಿಯಾದುದು—ಆತ್ಮ ಸಂಬಂಧಿಯಾದುದಲ್ಲ.

ಆತ್ಮವನ್ನು ನಾವೆಂದಿಗೂ 'ಭೋಗ್ಯ' ಗೊಳಿಸುವುದು ಅಶಕ್ಯ. ಆತ್ಮ ಸರ್ವಸ್ವತಂತ್ರವಾದುದು; ಅದು ಎಂದಾದರೂ ಯಾವುದೇ ರೀತಿಯ ದಾಸ್ಯಕ್ಕೆ ಸಿಗಲಾರದು. ಆದು ಯಾರೊಬ್ಬನ ಪಾಲಿಗಾದರೂ ಭೋಗ್ಯವೆನಿಸಲಾರದು.

ಭೋಗಲಾಲಸೆಯನ್ನು ಬಿಟ್ಟು ಅಪೇಕ್ಷಿತವ್ಯಕ್ತಿಯ ಪ್ರೇಮವನ್ನು ಪಡೆಯುವ ಇಚ್ಛೆಯುಳ್ಳವರಾದರೆ, ಅಂತಹವರು ನಿಮ್ಮವರಾಗುವರು. ಆತನನ್ನು ಸ್ವೀಕರಿಸುವ ಇಚ್ಛೆಯಿರುವುದಾದರೆ, ಆತನ ಶರೀರವನ್ನು ನಿಕಟತಮನೆಗಳಿಸುವ ಪ್ರಯತ್ನವನ್ನು ಬಿಟ್ಟುಕೊಟ್ಟು, ಆತನೊಡನೆ ಮಾನಸಿಕ ಸಮಿಪ್ಯವನ್ನು ಸಾಧಿಸಿರಿ...ಮಾನಸಿಕ ಸಾಮಿಪ್ಯವು ಶರೀರ ಸಂಪರ್ಕದಿಂದ ಜನಿಸಿದ ಸ್ಥಾಯಿಯೊಂದುದು; ಶೀತಲವಾದುದು.

ಭೋಗವನ್ನೇ ನೂಡಬೇಕೆಂದಿದ್ದರೆ, ಆತ್ಮ-ಭೋಗ ಮಾಡಿರಿ. ಇದಕ್ಕೆ 'ಭೋಗ ದಾನ'ವೆಂಬ ಹೆಸರುನಿಕೊಡುವುದು ಅವಿವೇಕ. ಆತ್ಮವು ಬಹು ಆಳದವರೆಗೆ ಇಳಿಯಬಲ್ಲುದು; ಶಾಶ್ವತ ತೃಪ್ತಿಯನ್ನೂ ತಂದೀಯಬಲ್ಲುದು. ಅದರಲ್ಲಿ ಚುಚ್ಚಿಲ್ಲ. ವಿಷವಿರುವುದಿಲ್ಲ; ವಿರಹವಲ್ಲಾದರೂ ಪರಿವರ್ತನೆಗೊಳ್ಳದ ಮಿಲನವೆಂದರೆ ಇದೇ.

ನಿಮಗೆ ಒರ್ವರ ಮೇಲೆ ಪ್ರೇಮವಿರುವುದಾದರೆ, ಅವರೊಡನೆ ಶಾರೀರಿಕ ಸಂಯೋಗದ ಕಲ್ಪನೆ ಮಾಡಬೇಡಿರಿ; ಶಾರೀರಿಕ ಮಿಲನದ ಲಾಲಸೆ ನೂಡಿಸುವವನನ್ನು ಆತ್ಮೀಯ ಪ್ರೇಮದಿಂದ ಕಾಣುವ ನಾಟಕವನ್ನಾಡಬೇಡಿರಿ. ಮಿಥ್ಯ, ವಂಚನೆ ಮತ್ತು ವಂಚಿತ ಕೃತ್ಯಗಳಲ್ಲಿ ಸುಖನೆಂದಿಗೂ ಲಭಿಸಿಲಾರದು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುನುಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚೆಕ್ಕಡಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನೆ.

ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ, ತಮ್ಮ ಮುಂದಿನ ತಲೆಮಾರನ್ನು ಸುಖೀಗೊಳಿಸುವುದೇ ಪ್ರಜಾಪ್ರಭುತ್ವದ ಬುದ್ಧಿವಂತ ಪ್ರಜಾಜನರ ಕರ್ತವ್ಯ.

ನವಯುಗ

ವರುಷ ೪೦	ಉಡುಪಿ -೧೫-೧೨-೬೦	ವಾರ ೧೩

ಮೂರನೆಯ ಯೋಜನೆ

ಮೈಸೂರಿನ ವಿಧಾನ ಸಭೆಯಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯ ಕರಡಿನ ಬಗ್ಗೆ ಚರ್ಚೆ ನಡೆಯಿತು. ಸುಮಾರು ೫೦ ಕೋಟಿಗಳನ್ನು ಹೊಸ ತೆರಿಗೆಗಳಿಂದ ಈ ಐದು ವರ್ಷದ ಅವಧಿಯಲ್ಲಿ ಒಟ್ಟುಗೂಡಿಸಿ ಬೇಕಾಗುವುದೆಂಬುದನ್ನು ಹೆಚ್ಚಿನ ಸದಸ್ಯರು ವಿರೋಧಿಸಿದ್ದರು. ಅಧಿಕ ಕರ ಹೇರುವ ನೀತಿಯನ್ನೇ ವಿರೋಧಿಸುವವರು ಯೋಜನಾವಧಿಯಲ್ಲಿ ಅಧಿಕ ಬಂಡವಾಳ ಇಲ್ಲಿ ವಿನಿಯೋಗವಾಗಬೇಕೆಂದು ಬಯಸುತ್ತಿದ್ದುದು ಸ್ವಾಗತಾರ್ಹವೇ ಹೌದಾದರೂ ಈ ಒಂಡವಾಳದ ಮೂಲವಾವುದೆಂಬ ದನ್ನು ಅವರು ತಿಳಿಸಿ ಹೇಳದಿರುವುದು ಶೋಚನೀಯ. ಮೈಸೂರು ರಾಜ್ಯಕ್ಕೆ ಸುಮಾರು ಕೋಟಿ ರೂಪಾಯಿಗಳ ಯೋಜನೆಯೇನೋ ರಚಿಸಲಾಗಿತ್ತು. ಆದರೆ, ಇದರ ಹೊತ್ತವು ತುಂಬಾ ಕೋಟಿ ರೂಪಾಯಿಗಳಿಗಿಳಿತವಿದೆಯೆಂದು ತಿಳಿದು ಬಂದಿದೆ. ಎಂದರೆ, ಕೇಳಿದುದರಲ್ಲಿ ಮೂರರಲ್ಲೊಂದಷ್ಟನ್ನು ಮೈಸೂರಿಗೆ ಸಿಕ್ಕಿತೆನ್ನಬಹುದು. ರಾಜ್ಯದ ಮೆಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಕೇಂದ್ರ ಯೋಜನಾ ಮಂತ್ರಿ ಶ್ರೀ ಗುಲ್ಜಾರೀಲಾಲ ನಂದರೊಡನೆ ಮಾತನಾಡಿ ಸಮಾಧಾನಕರವಾದ ಮೊತ್ತವನ್ನು ಪಡೆಯಲು ಪ್ರಯತ್ನಿಸಬೇಕು.

ಈ ಕೋಟಿಯ ಸಂಖ್ಯೆಯು ನೋಡುವುದಕ್ಕೆ ನಾವು ಕೇಳಿದಷ್ಟೆಂತ ಇರುವುದಾದರೂ ಕಮ್ಮಿಯಾಗಿದೆಯೆಂದು ತೋರಿಬರಬಹುದು. ಆದರೆ, ಇತರ ರಾಜ್ಯಗಳಿಗೆ ದೊರೆತ ಮೊತ್ತವನ್ನು ಗಮನಿಸಿದರೆ, ಇದೇನೂ ಆಲ್ಪವೆನ್ನಿಸಲಿಕ್ಕಿಲ್ಲ. ಕೇಂದ್ರ ಸರಕಾರವು ಅಯಾ ರಾಜ್ಯದ ಸಾಧನ ಸಂಪತ್ತಿಗಳನ್ನೂ ಗಮನಿಸಿ ರಾಷ್ಟ್ರೀಯ ಯೋಜನೆಯ ಹಣವನ್ನು ಹಂಚಿಕಾಕೇಕಾದುದರಿಂದ ನಾವು ಬೇಡಿಕೆಯಷ್ಟನ್ನು ಒಟ್ಟಿಗೆ ಕೊಡುವುದು ಸಾಧ್ಯವಾಗಲಿಕ್ಕಿಲ್ಲ. ಕೇಂದ್ರ ಸರಕಾರವು ಈ ಬಾರಿ ಕೋಟಿಯಲ್ಲಿ ೭೦ ಕೋಟಿ ರೂಪಾಯಿಗಳ ಸಹಾಯವನ್ನು ಕೊಡುವುದು. ಉಳಿದ ಹಣವನ್ನು ರಾಜ್ಯ ಸರಕಾರವು ಒದಗಿಸಿಕೊಡಬೇಕಾಗಿದೆ. ರಾಜ್ಯ ಸರಕಾರವಾದರೂ ಈಗ ಇರುವ ಕರಾಕರಣೆಯ ನೀತಿಯಿಂದಲೇ ಈ ಹೊತ್ತವನ್ನು ತುಂಬಿಸಿ ಕೊಡುವುದು ಸಾಧ್ಯವಿಲ್ಲದ ಮಾತು. ಆದುದರಿಂದಲೇ ಅದು ತನ್ನ ಆದಾಯವನ್ನು ಹೆಚ್ಚಿಸುವುದು ತೀವ್ರ ಅವಶ್ಯವಾಗಿದೆ. ಮಾಜಿ ಮಂತ್ರಿಯೊಬ್ಬರ ಹಿರಿತನದಲ್ಲಿ ನೇಮಿಸಿದ ಆ ಯೋಗವೊಂದು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ. ಅದು ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಅಭ್ಯಸಿಸಿ, ರಾಜ್ಯದ ಸಂಪನ್ಮೂಲಗಳನ್ನು ಕಂಡುಹಿಡಿಯುವುದು. ಕರಭಾರವು ಈಗಾಗಲೇ ಪರಮಾವಧಿಗೇರಿದೆಯೆಂದು ಹೇಳುವವರು ಹೆಚ್ಚಿನ ಕರ ತೆರಲು ಗೊಣಗುತ್ತಿದ್ದರೆ, ಅದೆಂದೂ ರಾಜ್ಯಹಿತವು ಮುತ್ಸದ್ದಿ ನಾಶಿಸಲ್ಪಡುವುದು. ಕಾರವಾರದ ಸಮಾಜವಾದಿ ಶಾಸಕಾಂಗ ಸದಸ್ಯರಾದ ಶ್ರೀ ಆ. ನ. ಕೃಷ್ಣರಾಯರು ಈ ಸಮಯದಲ್ಲಿ ಸಾಹಸಪೂರ್ಣವಾದ ಒಂದು ಸಲಹೆಯನ್ನು ಮಾಡಿದ್ದಾರೆ. ಎರಡನೆಯ ಯೋಜನಾ ಅವಧಿಯಲ್ಲಿ ನಾವು ಮೊದಲಿನೆರಡು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಕಂಡುಕೊಂಡ ಅನುಭವಗಳಿಂದ ಪಾಠ ಕಲಿಯಬೇಕೆಂದು. ಯೋಜನೆಯ ಬಗ್ಗೆ ಹೆಚ್ಚಿನವರಿಗೆ ಕಡಿಮೆ ಮತ್ತು ಆದನ್ನು ಒದಗಿಸುವ ಜನತೆಯ ಅಭಿಲಾಷೆಗಳು ಉತ್ತುಟ್ಟನಲ್ಲಿಯೇ ಇರುವಂತೆ ಲಕ್ಷ್ಯ ಪೂರ್ವಯ್ಸುವುದು ಅವಶ್ಯ. ಜನತೆಯು ಭವಿತವ್ಯವನ್ನು ಸ್ವರ್ಣಮಯವಾಗಿಸುವ ಸಲುವಾಗಿ ಅತೀವ ಪ್ರಯಾಸದಿಂದ ಕೂಡಿಸಿದ ಪ್ರತಿ ನಯಾಪೈಸವೂ ಸತ್ಕಾರ್ಯಕ್ಕಾಗಿಯೇ ವಿನಿಯೋಗವಾಗುವಂತೆ ನೋಡಿಕೊಳ್ಳುವುದು ಮೊತ್ತಮೊದಲ ಕರ್ತವ್ಯವಾಗಿದೆ. ವೈಭವೂರು ದೇಶದ ಮುಂದಾಳರಿದ ರಾಜ್ಯಗಳ ಸಾಲಿನಲ್ಲಿ ಬರುವಂತೆ ಮಾಡಬೇಕಾದ ಕೊಣೆ ನಮ್ಮ ಜನನಾಯಕರಲ್ಲಿದೆ. ವೈಸೂರು ತನ್ನ ಹಳೆಯಖ್ಯಾತನ್ನು ಕಳೆದುಕೊಂಡು ಹೊಸ ರೂಪ ಧರಿಸಿಕೊಂಡಿರುವಾಗ, ಅದು ಎದುರಿಸಬೇಕಾದ ಸಮಸ್ಯೆಗಳೂ ಬೇರೆಯೂ ಇವೆ. ಉತ್ತರ ಕರ್ನಾಟಕದಲ್ಲಿ ಆಗಾಗ ಅನಾಹುತವೆಬ್ಬಿಸುವ ಬರಗಾಲವನ್ನು ನಿವಾರಿಸುವುದಕ್ಕಾಗಿ ನೀರಾವರಿ ಯೋಜನೆಯತ್ತ ವಿಶೇಷ ಆಸಕ್ತಿ ವಹಿಸಬೇಕಾಗಿದೆ. ಶಿಕ್ಷಣ ಪ್ರಸಾರಕ್ಕಾಗಿ ವಿವಿಧ ರೀತಿಯ ಶಿಕ್ಷಣಾಲಯಗಳನ್ನು ತೆರೆಯುವುದು, ಆಧುನಿಕ ಬಲಭೀಮನಂತಿರುವ ವಿದ್ಯುತ್ತನ್ನು ಪಡೆಯಲು ಮುಂದಾಗುವುದು, ಉತ್ತಮ ಬೇಸಾಯಕ್ಕೆ ಪ್ರೋತ್ಸಾಹನೀಡುವುದಕ್ಕೆ ಮತ್ತು ಪುಷ್ಟಿಕರವಾದ ಗೊಬ್ಬರವನ್ನೊದಗಿಸಲು ಗೊಬ್ಬರದ ಕಾರಖಾನೆಗಳು, ಕಾಗದ, ಕಬ್ಬಿಣ ಉಕ್ಕು, ಸಕ್ಕರೆಗಳ ಕಾರಖಾನೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ರಚನೆಮಾಡಲು ನಿರ್ದರಿಸಿದುದು ನಿಜವಾಗಿಯೂ ಪ್ರಶಂಸನೀಯ. ಇದರೊಡನೆ ನಮ್ಮ ರಾಜ್ಯದ ಪ್ರಾಕೃತಿಕ ಸಂಪತ್ತನ್ನೂ ಪದುಪಯೋಗಪಡಿಸುವ ಆವಶ್ಯಕತೆಯನ್ನು ಒತ್ತಿ ಹೇಳಬೇಕಾಗುತ್ತದೆ. ಕರಾವಳಿಯಲ್ಲಿ ಹರಿಯುವ ಶರಾವತಿ ಯೋಜನೆಯು ಭಾರತದ ದೊಡ್ಡ ವಿದ್ಯುದ್ಯೋಜನೆಗಳಲ್ಲಿ ಒಂದಾಗಿದ್ದು, ಅದನ್ನು ಮೂರನೆಯ ಯೋಜನೆಯಲ್ಲಿ ಸಂಪೂರ್ಣಗೊಳಿಸುವುದು ಸಾಧ್ಯವಾಯಿತೆಂದರೆ, ಅದರ ಅನುಪಾನಿನಲ್ಲಿ ಯಥೇಚ್ಛವಾಗಿಯಿರುವ ನೈಸರ್ಗಿಕ ಸಂಪತ್ತನ್ನು ರಾಜ್ಯದ ಅಭಿವೃದ್ಧಿಗಾಗಿ ವಿನಿಯೋಗಿಸಲು ಶಕ್ತವಾಗುವುದು. ಅಂತೆಯೇ ಕಾಳೀ ನದಿ ಯೋಜನೆಯನ್ನೂ ಕಾರ್ಯರೂಪಕ್ಕೆಳಿಸಿದರೆ, ಅದರಿಂದ ರಾಜ್ಯಹಿತವು ಮತ್ತಷ್ಟು ಸಾಧ

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಕ್ಲಿನಿಕ್ ಪ್ರಾರಂಭೋತ್ಸವ— ಉಡುಪಿ ಸಂತೆಕಟ್ಟೆಯ ಪೊಸಕಟ್ಟೆಮನೆಯಲ್ಲಿ ಡಾ| ವಿ. ಎಸ್. ಶೆಟ್ಟಿ, ಎಂ. ಡಿ. (ಬೆಲ್ಜಿಯಂ) ಇವರ ಉಡುಪಿ ಕ್ಲಿನಿಕ್ ಎಂಬ ವೈದ್ಯಕೀಯ ಮಂದಿರವು ತಾ. 11-12-60 ರಂದು ತೆರೆಯಲ್ಪಟ್ಟಿದೆ.

ದ. ಕ. ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ತಾ. ತಾ. 26—12—60ನೇ ಆದಿತ್ಯವಾರ ಅಪರಾಹ್ನ 4 ಗಂಟೆಗೆ ಶ್ರೀ ಬಂಬ್ರಾಣ ನಾರಾಯಣ ಪೂಂಜರ ಅಧ್ಯಕ್ಷತೆಯಲ್ಲಿ ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಲಿರುವುದೆಂದೂ ತಾವು ಸಭೆಗೆ ದಯಮಾಡಿ ಬರಬೇಕೆಂದೂ ಕಾರ್ಯದರ್ಶಿ ಶ್ರೀ ಕೆ. ಸುಂದರ ರಾಮ ಶೆಟ್ಟರು ವಿನಂತಿಸುತ್ತಾರೆ.

ಮದ್ರಾಸಿನಲ್ಲಿ ಮೂಧ್ವ ಸಮ್ಮೇಳನ ಇದೇ ದಶಂಬರ್ 30ನೇ ತಾ. 28, 29ರಲ್ಲಿ ಮದ್ರಾಸ್ ವೇಪೇರಿ ರಾಜಾ ಅಣ್ಣಾಮಲೈ ಚಿಟ್ಟಿಯರ್ ರೋಡಿನಲ್ಲಿರುವ "ಧರ್ಮಪ್ರಕಾಶ" ಮಂಟಪದಲ್ಲಿ ನಡೆಯಲಿರುವ 4ನೇ ಅಖಿಲ ಭಾರತ ಮೂಧ್ವ ತತ್ವಜ್ಞಾನ ಸಮ್ಮೇಳನದ ಉದ್ಘಾಟನೆಯನ್ನು ಮೈಸೂರು ರಾಜ್ಯಪಾಲರಾದ ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದೂರರವರು ನೆರವೇರಿಸಲು ಅಂಗೀಕರಿಸಿರುತ್ತಾರೆ.

ಮೂಧ್ವ ನುಡಾಜನರೆಲ್ಲರೂ ಈ ಸಮ್ಮೇಳನಕ್ಕೆ ಸದಸ್ಯರಾಗಿ ಭಾಗವಹಿಸಿ ಸಮ್ಮೇಳನವನ್ನು

ವರ ಬೇಕಾಗಿದೆ

IVಫಾರ್ಮ್ ತನಕ ಓದಿದ ಗೃಹ ಕೃತ್ಯಗಳಲ್ಲಿ ನುರಿತ ಶಿವಳ್ಳಿ ಬ್ರಾಹ್ಮಣ ಜಾತಿಯ 22 ವರ್ಷ ಪ್ರಾಯದ ಯುವತಿಗೆ ಯೋಗ್ಯ ಬ್ರಾಹ್ಮಣ ವರ ಬೇಕಾಗಿದೆ—

ವಯವಿಟ್ಟು ವೃವಹರಿಸಿರಿ—
'X' C/o ಸಮಯಯುಗ, ಉಡುಪಿ.

ಉಡ್ಡಿ ಡಿ ಮು ಕೋರ್ಟಿನಲ್ಲಿ
R. E. A. 757/1960.
R. E. P. 458/1960.
O. S. 364/1959.

ವಿಶ್ವನಾಥಾಚಾರ್ಯ-ವಾದಿ ಆರ್ಜಿದಾರ.
ಮತ್ತು
ಯನ್. ಶ್ರೀನಿವಾಸ ಭಟ್ಟ ನಂಬ್ರ 76ನೆ ಬಡಗಬೆಟ್ಟು ಗ್ರಾಮದ ಬೈಲೂರು ಎದ್ರಿ ಪ್ರತಿವಾದಿರು

ಯೆದ್ರಿಯ ಬಾಬ್ತು ಸ್ತಿರಾಸ್ತಿ ಜಪ್ತು ಮಾಡಬೇಕಾಗಿ ದಾಖಲು ನೋಡಿದ ಸದರಿ ಆಸ್ತಿಯ ಜಾರಿಯು ಪ್ರತಿವಾದಿಗೆ ಪ್ರೊ. ಆರ್ಡರ್ ಮಾಡ್ವುವ ಬಗ್ಗೆ ತಾರೀಕು 23-12-1960 ಕ್ಕೆ ಯಿಟ್ಟಿದೆ. ಆತನಿಗೆ ಅಕ್ಟೇಪಿಸಬಯಿರುವುದಾದರೆ ಸದ್ರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ಜ್ಯಾಬ್ತೀದು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಈ ಮೂಲಕ ತಿಳಿಸಿಯಂದೆ.

K. Laxminarayana Aithal.
Vakil for Petitioner.

ಉಡ್ಡಿ 12-12-60.

ಯಶಸ್ವಿಯಾಗಿ ನಡೆಬೆಂದು ಸಮ್ಮೇಳನದ ಜನರಲ್ ಸೆಕ್ರೆಟರಿಯಾದ ಡಾ. ಪೆಂಕಟ್ರಾಯರು ಕೋರುತ್ತಾರೆ.

ಬೊಂಬ್ಬಾಯಿ ಹೋಟೆಲು ಮಾಲಿಕರಿಗೆ ಆದ ಜಯ

ಹೋಟೆಲುಗಳ ಹೊರಗೆ ಸೂರಲ್ಲುಡುನು, ತಿಂದಿ ತಿನಸು, ಆಹಾರ ಮತ್ತು ಪಾನೀಯಗಳ ಮೇಲಿನ ಸೇಲ್ಸ್ ಟೇಕ್ಸಿನ ಕುರಿತಾಗಿ, ಇದೇ ಕಳೆದ ತಿಂಗಳ ತಾ 8ರಂದು ಪ್ರಕಟಿಸಲ್ಪಟ್ಟ ಸೇಲ್ಸ್ ಟೇಕ್ಸ್ ಟ್ರೈಬ್ಯೂನಿನ ಜಡ್ಜ್‌ಮೆಂಟನ್ನು ಮಹಾರಾಷ್ಟ್ರ ರಾಜ್ಯ ಹೋಟೆಲು ಮಾಲೀಕರೆಲ್ಲರೂ ಸಾದರದಿಂದ ಸ್ವಾಗತಿಸುತ್ತಾರೆ

ಹೋಟೆಲು ನವಾರನ ಹೊರಗೆ ಸರಬರಾಯಿಮಾಡುವ ತಿಂದಿ ತಿನಸಿಗಳು ತೆರಿಗೆ ಹೇರಲ್ಪಡತಕ್ಕವುಗಳು ಎಂಬ ಸಮ್ಮಾಂಧಪಟ್ಟ ಆರ್ಥಿಕಾ ನರ್ಣಯವನ್ನು ತಳ್ಳಿಹಾಕಿ ಟ್ರೈಬ್ಯೂನಲ್ ತನ್ನ ಜಡ್ಜ್‌ಮೆಂಟಿನಲ್ಲಿ ಹೋಟೆಲ್ ವರಾರದ ಹೊರಗೆಯೂ ಬೇರೆ ಯೆಲ್ಲಿಯೂ, ಬಡಿಸಲ್ಪಟ್ಟ ಆಹಾರಗಳು ಸೇಲ್ಸ್ ಟೇಕ್ಸಿಗೆ ಬಾಹಿರನೆಂಬುದಾಗಿ ತೀರ್ಮಾನಿಸಿದೆ.

ಹೋಟೆಲುಗಳ ಒಳಗೆ ಬಡಿಸಲ್ಪಡುವ ತಿಂದಿತಿನಸು ಆಹಾರ ಮತ್ತು ಪಾನೀಯಗಳ ಒಂದು ರೂಪಾಯಿಗಿಂತ ಕೆಳಗಿನ ಪೂರಾಟಗಳ ಮೇಲೆ ಸೇಲ್ಸ್ ಟೇಕ್ಸ್ ಹೊಡಬೇ ಇಲ್ಲ.

ಟ್ರೈಬೂನಲ್ಲಿನ ಈ ಜಡ್ಜ್‌ಮೆಂಟು ದೀಘ್ರ ಪರಿಣಾಮಕಾರಿ ಯೂಗುವುದಲ್ಲದೆ, ಹೋಟೆಲು ವ್ಯವಸಾಯಕ್ಕೆ ತಂಬಾ ಉಪಕಾರವನ್ನು ಒಡಗಿಸುವಂತಾಗಿದೆ ಎಂದು ಹೋಟೆಲು ಮಾಲೀಕರ ಎಲ್ಲಾ ಪರವಾಗಿ, ಬೊಂಬ್ಬಾ ಹೋಟೆಲು ಮತ್ತು ರೆಸ್ಟೋರೆಂಟ್ ಮಾಲೀಕರ ಸಭೆಯು ಹೇಳಿಕೆಯಿತ್ತಿದೆ.

ಈ ಎಫೀಲನ್ನು ಬೊಂಬ್ಬಾ ರಾಜ್ಯ ಹೋಟೆಲು ಮಾಲೀಕರ ಫೆಡರೇಶನ್‌ಮಾಡಿ ಜಯಗಳಿಸಿದೆ. ಎಂದು ಬೊಂಬಾಯಿ ಹೊಟೇಲು ಮತ್ತು ರೆಸ್ಟೋರೆಂಟ್ ಮಾಲೀಕರ ಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಗೋಪಾಲ ಶೆಟ್ಟರು ತಿಳಿಸುತಾರೆ.

ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನ ಮಂಜೇಶ್ವರ, (ದ. ಕ.)

ಇದೇ ದಶಂಬರ 27, 28, 29ರಲ್ಲಿ ನಡೆಯುವ ಈ ಸಮ್ಮೇಳನಕ್ಕೆ ಎಲ್ಲ ಕನ್ನಡಿಗರಿಗೂ ಸ್ವಾಗತ ಸಮಿತಿಯು ಆದರದ ಸ್ವಾಗತ ವನ್ನೀಯುತ್ತಿದೆ.

ಸಮ್ಮೇಳನದಲ್ಲಿ ಈ ಸಾರಿ ಅ ನ. ಕೃ. ಅವರ ಅನೋಘವಾಗಿಯೂ ಅನುಭವವಪೂರ್ಣವೆ ನಾಡಿನ ಹಲವಾರು ವಿದ್ವಾಂಸರ ಪರಿಚಯವಾಗುವಂತೆ ನಾಲ್ಕು ಮುಖ್ಯ ಗೋಷ್ಠಿಗಳನ್ನು ಏರ್ಪಡಿಸಲಾಗಿದೆ ಕನ್ನಡದ ಬಾಲಸಾಹಿತ್ಯ ಮತ್ತು ನಯಸ್ಕ ಸಾಹಿತ್ಯ, ಕಾವಂಬರಿಗಳು, ಗದ್ಯಸಾಹಿತ್ಯ ಈ ಗೋಷ್ಠಿಗಳಲ್ಲಿ ಮೂರು ವಿಷಯಗಳ ಕುರಿತ ಶ್ರೀ ಶಿವರಾಮ ಕಾರಂತ, ಡಾ. ಹಿರೇಬೆಂಕ, ಕೆ ನರಸಿಂಹಮೂರ್ತಿ, ಕೃಷ್ಣ ಮೂರ್ತಿ ಪುರಿಣಿಕ, ಎಲ್. ಎಸ್ ಶೇಷಗಿರಿ ರಾವ್, ಪ್ರಿನ್ಸಿಪಾಲ ಇನಾಂದಾರ್, ಹುರುಳಿಭೀಮ ರಾವ್, ಪಡುಕೋಣೆ ರಮಾನಂದ, ನೆಗಳೂರು ಮುಕುಂದ ರಾವ್, ವರದರಾಜ ರಾವ್, ಹಾ. ಮಾ. ನಾಯಕ್, ಬಿ. ಎಚ್. ಶ್ರೀಧರ ಮೊದಲಾದವರು ಭಾಗವಹಿಸುವರು. ಅಲ್ಲದೆ ಶ್ರೀ ಬೇಂದ್ರೆ, ಕಕ್ಕಿ, ಆಡಿಗ, ವೆಂಕಟರಾಜ, ಕಣವಿ, ನರಸಿಂಹಸ್ವಾಮಿ, ಯಕ್ಕುಂಡಿ, ಶ್ರೀಧರ, ಸೇದಿಯಾಪು, ಶಿವರುದ್ರಪ್ಪ, ಪೂರ್ಣಚಂದ್ರ ತೇಜಸ್ವಿ, ಸಿದ್ದಯ್ಯ ಪುರಾಣಿಕ, ರೈ, ಕೆನ್ನಿಗೋಳಿ, ಮೊದಲಾದ ನಾಡಿನ ಹಿರಿಯರು ನುಂದಿ ಪ್ರತಿಭಾವಂತ ಕವಿಗಳು ಕವಿ ಸಮ್ಮೇಳನದಲ್ಲಿ ಭಾಗವಹಿಸುವರು. ಶ್ರೀಮತಿ ಶಕುಂತಲಾ ಬಾಯಿ ಸಾಂಡುರೆಂಗ ರಾವ್ ಶ್ರೀ. ಕೆ. ಆರ್. ಲಿಂಗಪ್ಪ, ಜೀವಂಗಿ ಚಂದ್ರಶೇಖರ ನುಪಾಲಬೆಳ್ಳಿಶ್ವರ ಭಟ್ಟ, ಜಿ ಶ್ರೀನಿವಾಸ ರಾವ್ ಎಚ್. ಕೆ ಆರ್. ಮೂರ್ತಿ ಮುಂತಾದವರಿಂದ ಕಾನ್ಯವಾಚನವನ್ನು ಏರ್ಪಡಿಸಲಾಗಿದೆ. ಯಕ್ಷಗಾನ ಬಯಲಾಟದ ಪಠಮೋತ್ಪಾಪ್ಪ ಮೂದರಿಯನ್ನೂ ಶ್ರೀ ದೊರೆಸ್ವಾಮಯ್ಯರಿಗಾರರ ವೀಡಿಯನ್ನೂ, ಬಸವಂಜರಾಜಗುರು ಅವರ ಸಂಗೀತ ಸುಧೆಯನ್ನೂ ಸವಿಯುವ ಸಂದರ್ಭವನ್ನು ನಾಡಿನ ರಸಿಕರಿಗೆ ಒದಗಿಸುವ ಪ್ರಯತ್ನ ನಡೆದಿದೆ.

ಹಬ್ಬ ಇಲ್ಲಿನ ಈಗಿನ ಹವೆ ಬಹಳ ಹಿತಕರವಾಗಿದ್ದು ಸಾಧಾರಣ ಚಳಿ ಇರುತ್ತದೆ.

ವಸತಿ: ಮಂಜೇಶ್ವರದಲ್ಲಿ ಅಲಂಕೃತವಾಗುವ "ಮುದ್ದಣ ಮಂಟಪ"ದ ಬಳಿಯಲ್ಲೇ ಉತ್ತಮವಾದ ಅಧುನಿಕ ಸೌಕರ್ಯಗಳಿಂದ ಕೂಡಿದ ಪ್ರಶಸ್ತವಾದ ವಸತಿ ಗೃಹಗಳನ್ನು ಪ್ರತಿನಿಧಿಗಳಿಗಾಗಿ ಸಜ್ಜುಗೊಳಿಸಲಾಗುವುದು. ಸ್ತ್ರೀ ಪ್ರತಿನಿಧಿಗಳಿಗೆ ಬೇಕಿದ್ದರೆ ಪ್ರತ್ಯೇಕ ವಸತಿ ಗೃಹಗಳನ್ನೂ ಏರ್ಪಡಿಸಲಾಗುವುದು.

ಊಟ: ಉಚಿತ: ದಿನಕ್ಕೆ 2 ರೂ. ಗಳಿಂತೆ ಕೂಟ್ಟರೆ ಸ್ವಾಗತ ಸಮಿತಿಯೇ ಊಟದ ಏರ್ಪಾಡು ನೋಡುತ್ತದೆ. ಪತ್ತಿರದಲ್ಲಿಯೇ ಬೇರೆ ಹೋಟೆಲುಗಳ ಅನುಕೂಲತೆಯೂ ಇದೆ.

ಪ್ರತಿನಿಧಿ ಶುಲ್ಕ: 3 ರೂಪಾಯಿ. ಮೂರು ದಿನಗಳಿಗೆ ಒಟ್ಟು ಊಟದ ವೆಚ್ಚ: 6 ರೂಪಾಯಿ. ಸ್ವಾಗತ ಸಮಿತಿಯ ಸದಸ್ಯತ್ವ (ಗೌರವ): 10 ರೂಪಾಯಿ ದಾನ: ತಮ್ಮ ಇಷ್ಟದ ಮೊತ್ತ—ಇವನ್ನು ಕಾರ್ಯದರ್ಶಿ ಸ್ವಾಗತ ಸಮಿತಿ ಈ ವಿಳಾಸಕ್ಕೆ ಕಳಿಸಬಹುದು. 100 ಮೈಲು ಹಿಂಕ್ಕ ಪ್ರಯಾಣಿಸುವವರಿಗೆ ರೈಲು ರಿಯಾಯಿತಿ ಪಾರ್ಸನ್ನು ಬೇಕಿದ್ದರೆ ಪ್ರತಿಷ್ಠಿನ ಬೆಂಗಳೂರು ಕಚೇರಿಯಿಂದಾಗಲಿ, ಸಮ್ಮೇಳನದ ಮಂಜೇಶ್ವರ ಕಚೇರಿಯಿಂದಾಗಲಿ ಪಡೆಯಬಹುದು.

ಸಮ್ಮೇಳನವು ತಾ. 27ನೇ ಬೆಳಿಗ್ಗೆ 9 ಗಂಟೆಗೆ ಶ್ರೀ ಯಸ್. ಏ ಕೃಷ್ಣಮೂರ್ತಿ ರಾಯರಿಂದ ಉದ್ಘಾಟಿಸಲ್ಪಡುತ್ತದೆ ಅಧ್ಯಕ್ಷ ಆ. ನ ಕೃಷ್ಣರಾಯರ ಭಾಷಣವು ಅದೇ ದಿನ ಬೆಳಿಗ್ಗೆ ನಡೆಯುತ್ತದೆ

ಸ್ವಾಗತ ಸಮಿತಿ.
ಕಡಿಯೊಳಿ (ಉಡುಪಿ) ಅಧ್ಯಾಪಕ ಕೇಂದ್ರ, ದಿನಾಚರನೆ - ಅಧ್ಯಾಪಕರ ಮನಸ್ಸು ಉರಿಯುವ ದೀಪಸಿಯಂತೆ, ಪರಿಯುಪ ನೀರಿನಂತೆ ಇರಬೇಕು ಅವೆಂದೂ ಕರಿಗೆ ಟ್ಟರಬಾರದು ಇದಕ್ಕಾಗಿ ಅಧ್ಯಾಪಕರು ತಮ್ಮ ಕೇಂದ್ರ ಸಭೆಗಳಲ್ಲಿ ಬೇಕಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬಹುದು. ವಿದ್ಯಾ ಕ್ಷೇತ್ರದಲ್ಲಿ ಅನುಭವಸ್ಥರಿತ್ತ ಅಧ್ಯಾಪಕರಿಂದಲೇ ಸಾಧ್ಯ ಪಾಠಕ್ರಮವು ಒಂದು ಕಲೆಯೂದರೆ ಅವರು ಕಲಾವಿದರು ಎಂದು ಕಾ 10ರಂದು ಕಡಿಯೊಳಿ ಕೇಂದ್ರದ ಪ್ರಾಥಮಿಕ ಅಧ್ಯಾಪಕ ಸಂಘದ ವಾರ್ಷಿಕ ದಿನಾಚರಣೆಯಲ್ಲಿ ದ. ಕ. ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀ ಕೆ. ವಿಟ್ಠಲ ಶೆಣೈಯವರು ಹೇಳಿದರು.

ಶ್ರೀ ಟಿ ಕೆ. ಶ್ರೀನಿವಾಸರಾಯರು (ಎಸ್ಸಾ ಥಮಿಕ ಶಿಕ್ಷಣದ ಸಮಸ್ಯೆಗಳು: ಎಂಬ ಕುರಿತು ನೂತಾಸುತ್ತ ಪಠ್ಯ ಪುಸ್ತಕಗಳ ಕುಂದು ಕೊರತೆಗಳು ಅಪ್ರಸಿದ್ಧ ಪದ ಪ್ರಯೋಗಗಳು ಶಾಲಾಸಮಯ ರಜಾದಿನಗಳಲ್ಲಿ ಆನಸಕ್ಷೇತ್ರಿತ ಆಡಳಿಯಂತ್ರಣ ಮೊದಲಾದುವುಗಳ ಕುರಿತು ಪ್ರಾಸ್ತಾವಿಸಿದರು ಅಧ್ಯಕ್ಷ ಸ್ಥಾನದಲ್ಲಿದ್ದ ಶ್ರೀ ಪೆಜ್ಜೆ ಅನಂತ ಸನೂರೋಪ ಭಾಷಣಮಾಡುತ್ತ ತೋಪಡೋಸೆಗಳು ಸರಕಾರದ ಗಮನಕ್ಕೆ ಬಂದಿವೆ. ಇಂತಹ ದೋಷಗಳಿಲ್ಲವೆನ್ನೂ ಕಲೆ ಹಾಕಿ ಸುಧಾರಣೆ ಮಾಡಲು ಸರಕಾರ ಸಂಶೋಧನಾ ವಿಭಾಗವೊಂದನ್ನು ತೆರೆದಿದೆ. ಅಧ್ಯಾಪಕರು ಅದನ್ನು ನೇರವಾಗಿ ಈ ವಿಭಾಗಕ್ಕೆ ತಿಳಿಸುವುದೆಂದಾ ನುಂದಿನ ಅವ್ಯತ್ಯಗಳಲ್ಲಿ ಸರಿಪಡಿಸಿಕೊಳ್ಳುವುದು ಸಾಧ್ಯವಾಗುವುದು ಎಂದರು ಕನ್ನಡದಲ್ಲಿ ನಿಕರೂಪತೆಯನ್ನು ತರುವುದಕ್ಕಾಗಿ ಕೆಲವೊಂದು ಆಕ್ಷಸಿದ್ಧ ಪದ ಪ್ರಯೋಗ ನಡೆದಿರ ಬಹುದೆಂದು ಹೇಳಿ ಅವರು ಗಣಿತ ಮತ್ತು ವಿಜ್ಞಾನಗಳ ಪಾರಿಭಾಷಿಕ ಶಬ್ದಕೋಶ ರಚನೆಯಲ್ಲಿ ತಾನು ಎದುರಿಸಿದ ಕಠಿನತೆಗಳನ್ನು ವಿವರಿಸಿದರು ಪಠ್ಯ ಪುಸ್ತಕಗಳು ಭಾಷಾಂತರಗಳಿಗೆ ಅವಶ್ಯವೆಂದು ಹೇಳಿ ಉಳಿಮವುಗಳನ್ನು ಪಾಠ ಪಟ್ಟಿಯ ಆಧಾರಗಳಿಂದಲೇ ಕಲಿಸುವುದು ಸೂಕ್ತವೆಂದು ತಿಳಿಸಿದರು ವಿದ್ಯಾರ್ಥಿಯ ಜನನ ತಾರೀಕು ಬಯ ಮುಹೂರ್ತವಾದುದರಿಂದ ಆದರ ಬಗ್ಗೆ ಮುಖ್ಯೋಪಾಧ್ಯಾಯರು ಬಯ ಜಾಗ್ರತೆ ವಹಿಸಬೇಕೆಂದು ಕೇಳಿಕೊಂಡರು.

ಆ ಮೇಲೆ ಅವರುಎಲ್ಲಮಕ್ಕಳಿಗೂ ಶಿಕ್ಷಣ ಶಾಲಬ್ಧವೊದಗಿಸುವ ಸರಕಾರದ ಉದ್ದೇಶ, ರಾಷ್ಟ್ರದ ಆಸಕ್ಷಕತೆಯನ್ನೂ, ಆದ ಕ್ಷಣಾಧನೆಯನ್ನೂ ವಿವರಿಸುತ್ತ ಕೆಲವೆಡೆ ಅಧ್ಯಾಪಕರ ಸಂಖ್ಯೆ ಕಡಿಮೆಯಿದೆಯೆಂಬ ದೂರು ಕೇಳಿ ಬರುತ್ತಿದೆ, ಹೊಸ ಶಾಲೆಗಳನ್ನು ತೆರೆಯುವಾಗ ಹಾಗಾಗುವುದು ಸ್ವಾಭಾವಿಕ ಸಾಕಸ್ಸು ಅಧ್ಯಾಪಕರನ್ನು ಎಲ್ಲಿ ಶಾಲೆಗಳಿಗೂ ಒದಗಿಸುವುದು ಅನಸ್ಯಕವಾದರೂ ಅದನ್ನು ಕೆಲ ಸಮಯದ ಪರಿಗೆ ಹೂಳ್ಳಿಸಬೆ ಇದ್ದರೆ. ಶಿಕ್ಷಣದ ಮಟ್ಟ ಕುಸಿ ಇಳಿದೀತೇ ಹೊರತು ಶಿಕ್ಷಣದಿಂದ ಮಕ್ಕಳು ವಂಚಿತರಾಗಲಾರರು ಸರಕಾರವೆ ಈ ಬಗ್ಗೆ ಪ್ರಯತ್ನ ನಡೆಸುತ್ತಿದೆ ಎಂದು ಹೇಳಿದರು. ರಜಾ ನಿಯಮಗಳ ನಿಯಂತ್ರಣವು ನಮ್ಮ ಆಲ್ಲೆಗೆ ಹೊಸತಿನಂತೆ ತೋಯುವುದು. ಆದರೂ ಈಗೆ ಅದು ಹಳೆಯದರಂತೆಯೇ ಆಗುತ್ತಿದೆ ಎಂದು ಹೇಳಿ ಅಧ್ಯಾಪಕರು ವಿದ್ಯಾರ್ಥಿಗಳನ್ನು ಸರಿಯಾಗಿ ಮಾನಸಾಡಿ ಅವನ್ನು ಕಾರ್ಯಾಚರಣೆಗಳಿಸಿ, ಲೋಪದೋಷಗಳನ್ನು ದೂರೀಕರಿಸಲು ನೆರವಾಗಬೇಕೆಂದು ವಿನಂತಿಸಿದರು.

ಪ್ರಾರಂಭದಲ್ಲಿ ಸಂಘದ ಖಾಯಂ ಅಧ್ಯಕ್ಷರಾದ ಶ್ರೀ ಎನ್. ವಿಶ್ವನಾಥ (ಶಾಲೆಗಳ ಪರೀಕ್ಷಾನಿಯಾಮಕರು) ರು ಸ್ವಾಗತ ಭಾಷಣಮಾಡುತ್ತ, ಕಡಿಯಾಳಿ ಕೇಂದ್ರದ ಅಧ್ಯಾಪಕರು ಬುದ್ಧಿ ನಂತರೆಂದೂ ಮುಖ್ಯಮಂತ್ರಿ ಕದಮಯನ್ನು ಕೊಟ್ಟರೂ ನಿರ್ವಹಿಸಬಲ್ಲ ಶಕ್ತಿಯುಳ್ಳವರೆಂದೂ ಹೇಳಿದರು. ಶ್ರೀ ಪಿ. ನರಸಿಂಹ ಉಪಾಧ್ಯಾಯರು ಗದಗು ಭಾರತ ಮತ್ತು ಜೋಗುಳ ಹಾಡುಗಳ ಅರ್ಥವನ್ನು ವಿವರಿಸಿದ ಭಾಗವನ್ನು ಸುತಾರ್ಯವಾಗಿ ಹಾಡಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾಯರು ಆಭಾರ ಮನ್ನಿಸಿದರು.

ಆಂದು ಪೂರ್ವಾಹ್ನ ಶ್ರೀ ವಿ. ಗುರುರಾಜ ಭಟ್ಟರು ಧ್ವಜಾರೋಹಣ ನೂಡಿದರು. ಅಪರಾಹ್ನ ಶ್ರೀ ರಾಜೇನ ಕೋಟಿಯಾನರ ಹಿರಿತನದಲ್ಲಿ ಸಂಘದ ಸುಹಾಸಭೆಯು ಸೇರಿ, ಶ್ರೀ ಎಸ್ ಗೋಪೀಚಂದ ರಾಯರನ್ನು ಕಾರ್ಯದರ್ಶಿಗಳನ್ನಾಗಿಯೂ ಶ್ರೀ ಕೆ ಗೋಪಾಲ ಶೆಟ್ಟಿಗಾರರನ್ನು ಉಪಕಾರ್ಯದರ್ಶಿಗಳನ್ನಾಗಿಯೂ ಆರಿಸಿತು. ಕೇಂದ್ರದ ಎಲ್ಲ ಶಾಲೆಗಳ ಮುಖ್ಯೋಪಾಧ್ಯಾಯರಿಂದ ಕೂಡಿದ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು.

ಸಂಜೆ ಉಡುಪಿ ಉತ್ತರ ಪ್ರೌಢಶಾಲೆಯ ಶಾಲೆಗಳ ಪರೀಕ್ಷಾಧಿಕಾರಿ ಶ್ರೀ ಎನ್. ವಿಶ್ವನಾಥರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ಜರಗಿತು. ಕೇಂದ್ರದ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳೂ ಅಧ್ಯಾಪಕರಿಂದ ನಾಟಿಕ ಪ್ರದರ್ಶನವೂ ನಡೆದುವು.

ಆದಾಯಕ್ಕೆ ತೊಂದರೆಗಳಿಂದಾಗಿ ಈ ಬಾರಿ ಎಂಟು ಪುಟಗಳನ್ನಷ್ಟೇ ಕೊಡಲಾಗಿದೆ. ಇದೇ ರೀತಿ ಇನ್ನು ಐದೆರಡು ವಾರ ಮುಂದುವರಿಯಬಹುದು ಈ ಬಗ್ಗೆ ವಾಚಕರ ಕ್ಷಮೆ ಕೋರಲಾಗಿದೆ.

—ವ್ಯವಸ್ಥಾಪಕ.

ಆಸ್ತಮಾ ರೋಗಿಗಳ ತಿಳುವಳಿಕೆಗಾಗಿ—

ಪ್ರಯೋತವಾದ ಆಸ್ತಮಾ ಹಿಮೂಲಯನ್ ಮೂಲಿಕೆಯನ್ನು ಹಾಲು ಮತ್ತು ಅನ್ನದಿಂದ ತಯಾರಿಸಿದ ಖೀರ್‌ನೊಂದಿಗೆ 1.1.61 ಹೂರ್ಣಿಮೆಯ ರಾತ್ರಿ ಸೇವಿಸಿದರೆ ಆಸ್ತಮಾ, ನೇವಸ, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ಕಷ್ಟವಾಗುವಿಕೆ, ಉಸಿರು ಕಟ್ಟುವಿಕೆ ಇವು ಗುಣವಾಗುವುವು ಕೂಡಲೇ ಇಂದಿನಿಷ್ಟಲ್ಲಿ ಪತ್ರವ್ಯವಹಾರ ನೂಡಿರಿ.

Sri Mahatma Sidh Baba Seva Ashram, P. O. Chitrakot, U. P.

ಜೀವನದ ವಿವಿಧ ಘಟನೆಗಳನ್ನು ಸೈದಮಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಯಿತು

ನವಭಾರತ ಪುಸ್ತಕ ಭಂಡಾರ್, ಉಡುಪಿ.

ಶುದ್ಧ ಪರಟೆ

ನವನಾಗರಿಕತೆ ನಮಗಿತ್ತ ಕೊಡುಗೆ

ಇಪ್ಪತ್ತನೆ ಶತಮಾನದ ಉತ್ತರಕಾಲದಲ್ಲಿನ ನಾಗರಿಕತೆಯು ತನ್ನ ವಿಶಿಷ್ಟ ವೈಶಿಷ್ಟ್ಯಗಳಿಂದ ಈ ಮೊದಲಿನವುಗಳನ್ನು ಇಕ್ಕೆ ಮೆಟ್ಟಿನಿಂತಿದೆ. ಇದರ ಒಂದೆರಡು ಉದಾಹರಣೆಗಳ ವಿಶ್ಲೇಷಣೆ ನೋಡಿರಿ

ಶ್ರೀ ನೈ ಹರಿಶ್ಚಂದ್ರ ರಾವ್.

ಪ್ರಿಯ ಓದುಗರೇ, ಈ ಲೇಖನದ ತಲೆಬರಹವನ್ನೋದಿ "ಇವನಾವನೋ ಹಳೆಯ ಕಾಲದ ಗೊಡ್ಡು, ನಾಗರಿಕತೆ ಯೆಂದರೆ ಸಾಗು ಮುರಿಯುವ ಮೂರ್ಖನೆಂದು" ಕೋಸಿಸಿಕೊಳ್ಳದೆ ಸಹನೆಯಿಂದ ಲೇಖನವನ್ನು ಪೂರ್ತಿಯಾಗಿ ಶಾಂತಚಿತ್ತದಿಂದ ಓದಿ ಮನನ ಮಾಡಿಕೊಳ್ಳುವ ಮನಃತೆ ತೋರಬೇಕೆಂತಾಗಿ ಪ್ರಥಮದಲ್ಲೇ ಗೌರವಪೂರ್ವಕ ವಿನಂತಿ. ಪ್ರಪಂಚದಲ್ಲಿ ಜನಜೀವನ ಪ್ರಾರಂಭವಾದ ಅಂದಿನಿಂದ ಇಂದಿನ ವರೆಗೂ ಆಯಾ ಕಾಲದ ಜನರ ವಿಚಾರ, ಆಚಾರ, ಸಂಸ್ಕೃತಿ, ವಿದ್ಯೆ, ತಿಳುವಳಿಕೆ, ಜ್ಞಾನ, ಅಭಿರುಚಿಗಳನ್ನನುಸರಿಸಿ ನಾಗರಿಕತೆ ರೂಪ ತಾಳುತ್ತಿತ್ತು. ಹಿಂದಿನವರಿಗಿಂತ ತಾವು ಉತ್ಕೃಷ್ಟ ನಾಗರಿಕರೆಂದು ಸ್ವತಃಯೊಂದು ಸಂದರ್ಭದ ನಾಗರಿಕ ಜನಾಂಗವೂ ಹೇಳಿಕೆ ಳ್ಳುತ್ತಿದ್ದುದು ಹೊಸತೆನೂ ಅಲ್ಲ. ತಮಗಿಂತ ಹಿಂದಿನ ತಲಮಾರಿನವರು ಅನಾಗರಿಕರೆಂದೂ. ತಾವು ಈ ದಿನ ಮಟ್ಟಿಗೆ ಸಂಶೋಧನೆ ನಡೆಸಿ ನಾಗರಿಕತೆಯ ಪ್ರಗತಿಯ ಘಟ್ಟದಲ್ಲಿದ್ದೇವೆಂದೂ ಹೇಳಿಕೊಳ್ಳುವ ಜನಾಂಗವಾವುದು? ಇಗೆಯೇ ನಮ್ಮ ಮುಂದಿನ ಜನಾಂಗವವೂ, ನಮ್ಮ ಈಗಿನ ನಾಗರಿಕತೆಯನ್ನು ಅನ್ಯವೀಕ್ಷೆಗೊಳಪಡಿಸಿ, ನಾವೂ ಸಾಧಾರಣ ಮಟ್ಟಿಗೆ ನಾಗರಿಕರಾಗಿದ್ದೆವು" ಎಂದೂ ತೀರ್ಮಾನಿಸಲಾರರೆಂದೇನೂ ಛಲವಿಲ್ಲ! ಆದುದರಿಂದ ನಾವು ಇನ್ನೂ ಗಾಢ ಸಂಶೋಧನೆ, ಆಳವಾದ ಅಧ್ಯಯನ ನಡೆಸಿ ನಮ್ಮ ನಾಗರಿಕತೆಯು ಮಟ್ಟವನ್ನು ನೂರಕ್ಕೆ ನೂರು ಘಟ್ಟ ಅಭಿವೃದ್ಧಿಗೊಳಿಸಲೇ ಬೇಕೆಂಬುದು ನಿರ್ವಿವಾದವೇ ಸರಿ.

ಈಗ ನಮ್ಮ ನವನಾಗರಿಕತೆ ನಮಗಿತ್ತ ಕೊಡುಗೆಗಳ ಕುರಿತಾಗಿ ಬರೆಯೋಣವೆಂದರೆ ಬರೆದು ಪೂರೈಸಲಾರೆ ಎಂಬ ಭೀರವಸೆಯೇ ನನಗಿಲ್ಲವಾಗಿದೆ. ಅಸಂಖ್ಯಾತವಾದ ಕೊಡುಗೆಗಳನ್ನು ವಿವರಿಸಿ ಬರೆದರೆ ನಮ್ಮ ಪತ್ರಿಕೆ 'ನವಯುಗ' ದ ಹಾಳೆಗಳೇ ಸಾಕಾಗಲಾರವೆನ್ನೋ ಆನ್ನಿಸುತ್ತಿದೆ ಜೊತೆಗೆ. ಮತ್ತೂ ಬರೆಯೋಣವೆಂದೇ ಶ್ರಮವಿಲ್ಲದ ಧೈರ್ಯವೂಡಿದರೂ, 'ನಾನೇನೂ ವ್ಯಾಸಮಹರ್ಷಿಗಳ ವ್ಯಾಖ್ಯಾನದ ವೇಗವನ್ನನುಸರಿಸಿ, ಮಹಾಭಾರತ ಗ್ರಂಥವನ್ನು ಬರೆದು ಮುಗಿಸಿದ ವಿಘ್ನೇಶ್ವರನಲ್ಲವಲ್ಲ ಎಂಬ ವಿಷಾದವೂ ಬಲವಾಗಿ ಮೊಳೆಯುತ್ತಿದೆ. ಆದರೂ ಅಸಾಧಾರಣ ಧೈರ್ಯ ತಂದುಕೊಂಡು ನವನಾಗರಿಕತೆಯ ಕೊಡುಗೆಗಳ ಬಗೆಗೆ ಚಿಪ್ಪಣಿಯನ್ನಾದರೂ ಬರೆಯಲೇ ಬೇಕೆಂಬ ಆಸೆ ಬಲವತ್ತರವಾಗಿ ಬಾಹುತ್ತಿದೆ.

ನಮ್ಮ ಮಹಾಮಾತೆಯರು ಇಂದು ತಮ್ಮ ಕಂದಮ್ಮಗಳಿಗೆ ಪ್ರೀತಿಯಿಂದ ಮೊಲೆಯುಣಿಸದೆ, ರಬ್ಬರಿನ ಮುಚ್ಚಳದಿಂದೊಡಗೂಡಿದ ಬಾಟ್ಲಿಗಳಲ್ಲಿ ಹಾಲು ತುಂಬಿ ಕೊಡಲು ಪ್ರೇರಕವಾದ ದಿವ್ಯಶಕ್ತಿ ಯಾವುದು.' ಮಕ್ಕಳಿಗೆ ಮೊಲೆಯುಣಿಸಿ, ಆ ಭೀಸು ಕೆಲಸ ತಪ್ಪಿಸಿಕೊಳ್ಳುವುದಕ್ಕಿಂತ, ದೇಹದ ಸೌಂದರ್ಯವನ್ನು ಆತ್ಯುತ್ಕೃಷ್ಟವಾಗಿ ಕಳೆಯೇರಿಸಬಲ್ಲ ಸ್ತನದ ದೃಢಗಳನ್ನು ಜೋತುಬೀಳಿಸಿಕೊಳ್ಳುವುದಕ್ಕಿಂತ, ತಮ್ಮ ಹಸುಳೆಗಳಿಗೆ ಬಾಟ್ಲಿಹಾಲೇ ಯೋಗ್ಯವೆಂದು ಈ ಮಹಿಳಾಮಣಿಗಳ ದೃಢವಾದ ಅಂಬೋಣ. (ಕ್ಷಮಿಸಿ ಮೊಲೆ ಉಣಿಸಿನ ಅಭಾಸವಿರುವವರನ್ನು ಬಿಟ್ಟು) ಈಗಿನ ಮನೋಹರಿಯರು ಪೌಡರ್, ಸ್ನೋ, ಲಿಪ್‌ಸ್ಟಿಕ್, ನೈಲಾನ್ ಸೀರೆ, ಹವ್ಯ ಮತ್ತು ಹಿನ್ಮುಡಿ ಒಂದಡಿಯೆತ್ತರದ ಚಪ್ಪಲಿಗಳಿಗಾಗಿ ರಕ್ಷಕರನ್ನು ಕಾಡುವುದು, ಬೇಡುವುದು ಕೂಡಾ ತಮ್ಮ ನಾಗರಿಕತೆಯ ಮಟ್ಟವನ್ನು ಊರ್ಜಿತಗೊಳಿಸುವುದಕ್ಕಾಗಿಯೇ.

ನಾಗರೀಕತೆಯ 'ಸೆಕ್'ಯ ಛಾದೆಗೊಳಗಾಗಿರುವ ಸ್ತ್ರೀರತ್ನಗಳಿಗಂತೂ ಮೈ ತುಂಬಾ ಬಟ್ಟೆ, ಹೊದ್ದುಕೊಳ್ಳಲೂ ಅಸಹನೀಯವೆನಿಸಿದೆ, ಆದ್ದರಿಂದಲೇ ಹಿಂದಿನಗಳ ಮೊಳ ಉದ್ದದ ಸೀರೆ, ಮಾಯವಾಗಿ ಅದರ ಬೆನ್ನಷ್ಟೇ ೨॥ ಅಡಿಯ ತೆಳ್ಳಗಿನ ಸೀರೆಗಳು ದೇಹದ ಕಾಂತಿಯನ್ನೂ ಸರ್ವಾಂಗಕ್ಕೂ ಜುಂಡೂರುತನ ತಂಗಾಳಿಯನ್ನು ಇಸವುದಕ್ಕೂ ಇಂದು ಸಹಕಾರಿಯಾಗಿ ಮೆರೆಯುತ್ತಿವೆ. ಇಂತಹ ಸೀರೆಗಳು ಇದೀಗ ಅಚ್ಚುಮೆಚ್ಚಿನ ಸೂತ್ರಗಳಾಗಿವೆ. ಎದೆಯ ಮೇಲೆ ಮಾತ್ರ ನಿಲ್ಲುವಂತೆ ಹೊಟ್ಟೆಯ ಅರ್ಧ ಭಾಗ ಮತ್ತು ಬೆನ್ನ ಹಿಂದೆ ಅರ್ಧ ಭಾಗ ಬಹಿರಂಗವಾಗಿ ಪ್ರಜ್ವಾತಿಪಡಲು ಅನುಕೂಲವಾಗುವಂತಹ ಕುಪ್ಪಸಗಳಾವರೋ ನಮ್ಮ ನಾಗರಿಕತೆಯ ಜೀವಂತ ಸಾಕ್ಷ್ಯ. ಇದೀಗ ಅರ್ಧ ನಗ್ನಾವಸ್ಥೆಯೂ ಇನ್ನು ಕೆಲ ಸಮಯದ ನಂತರ ಪೂರ್ಣ ನಗ್ನಾವಸ್ಥೆಯೂ ನಮ್ಮ ನಾಗರಿಕತೆಯ ಮೇಲ್ಮಟ್ಟದ ಅಭಿವೃದ್ಧಿಯಾಗಿ ಪರಿಣಮಿಸಿದರೆ ಆಶ್ಚರ್ಯಪಡಬೇಕಾದುದೇನಿದೆ?

ಶಿಕ್ಷಕ-ಶಿಕ್ಷಣಾರ್ಥಿಗಳಲ್ಲಿ ಸಮಾನ ಹಕ್ಯಗಳಿಗಾಗಿ ಪೈಪೋಟಿ, ಪತಿ-ಪತ್ನಿಯರಲ್ಲಿ ಸಮತೆಗಾಗಿ ನಿತ್ಯ ಜಗಳ, ಮಾತಾಪಿತೃಗಳೂ—ಮಕ್ಕಳೂ ತಮ್ಮ ತಮ್ಮ ಹಕ್ಕು ಭಾದ್ಯತೆಗಳಿಗಾಗಿ ಹೋರಾಡುವುದು ಸ್ತ್ರೀ, ಪುರುಷರ ಕಾರ್ಯಕ್ಷೇತ್ರದಲ್ಲಿ ತೀವ್ರ ರೀತಿಗು ಪೈಪೋಟಿ ಇವು ಕೂಡಾ ನಾಗರೀಕತೆಯಿಂದ ಪ್ರಗತಿಯ ದವಡೆಯನ್ನು ಸವಿಸಿಸುತ್ತಿರುವ ನಾಗರಿಕತೆಯ ಮಹಾತ್ಕೃತ್ಯ. ನಮ್ಮ ಯುವಕ ಯುವತಿಯರು ಹಿರಿಯರನ್ನು ಕಂಡು ಜೇಷ್ಟೆ ಮಾಡುವುದು, ಅವಿಧೇಯರಾಗಿ ನಡೆದು ಕೊಳ್ಳುವುದು ಕೂಡಾ ನಾಗರಿಕ ವರ್ತನೆಯ ದ್ಯೋತಕ. ನಮ್ಮ ಜನಾಂಗದ ಶ್ರಜಲಿತ ನಾಗರಿಕತೆಯ ಮಟ್ಟವನ್ನು ಅಳೆಯುವ ಸಾಧನಗಳಾಗಿ ಈ ಕೆಳಗಿನ ವಿಷಯಗಳು ಅತ್ಯುತ್ಪತ್ತಿಮ ಪೂರಕಗಳಾಗಿವೆ. ಕಾವು ಜೀವನದ ಕರಾಳ ಕೃತ್ಯಕ್ಕೆ ಪ್ರೇಮವಿವಾಹದ ಅಂಕಿತ ಬಿದ್ದಿರುವುದೂ ನವನಾಗರಿಕತೆಯ ಪ್ರತಿಬಿಂಬವಾಗಿದೆ.

ವಾರದಲ್ಲಿ ಇಂದರ್ಶಿಸುವ ಸಿನೇಮಾ ಪ್ರದರ್ಶನ. ದಿನದಲ್ಲಿ ಸೇದುವ ಸಿಗರೇಟುಗಳ ದರ್ಜೆ, ಸಂಖ್ಯೆ ಮತ್ತು ಮೌಲ್ಯ ಉಡುಗೆ ತೊಡುಗೆಗಳ ಬೆಲೆ, ದಿನದಲ್ಲಿ ಬದಲಾಯಿಸುವ ಸಂದರ್ಭಗಳು, ಮೀಸೆಯ ಮಾದರಿ, ಕೂದಲು ಬಾಚುವ ಕ್ರಮ, ತೊಡುವ ಬೂಟು ಅಥವಾ ಚಪ್ಪಲಿಗಳ ವಿಷಯ ಸಾನೀಯಗಳ ಸೇವನೆಯ ಸಂದರ್ಭ ದಿನವಹಿ ಎನ್ನುವ ಬಾಧ್ಯತೆಯೆಂಬುದು ಪತ್ರಿಯೊಬ್ಬ ಸಾಧನಸಂಪನ್ನ ನಾಗರಿಕನಿಗೆ ಹಾಗೆಯೇ ತಾವು ನೋಡಿ ನಲಿದಾಡಿದ ಸಿನೇಮಾದ ಹಾಡುಗಳನ್ನು ಬೀರಿಗಳಲ್ಲೂ ಹಾಡುತ್ತಾ ಸಿಳ್ಳುಹಾಕುತ್ತಾ ನಡೆಯುವುದು. ನಾಯಕ ನಾಯಿಕೆಯರ ಹಾವಭಾವಗಳಿಗೆ ಮಾರುಹೋಗಿ ಅನುಕರಿಸಲು ಭಗೀರಥಯತ್ನ ಮಾಡುವುದು, ಸಿನೇಮಾದ ನಟ-ನಟಿಯರ ಉಡುಗೆ ತೊಡುಗೆ, ಆಭರಣ, ಶೃಂಗಾರ ಸಾಧನಗಳಾವಿವೆ ಹಾಗೆಯೆ ತಾವು ನೋಡಿ ನಲಿದಾಡಿದ ಸಿನೇಮಾದ ಹಾಡುಗಳನ್ನು ನಿತ್ಯಬಳಕೆ, ಇವು ಕೂಡಾ ನಾಗರಿಕತೆಯ ಕ್ಷಿಪ್ರ ಅಭಿವೃದ್ಧಿಯ ಕಾರಕೇತನಗಳಾಗಿವೆ. ನಮ್ಮ ಮಮಂಗಲೆಯರ ಹಣೆಗಿನ್ನು ಕುಂಕುಮದ ಬದಲು ಕೆನ್ನೀರು ಅಲಂಕರಿಸುವುದೂ, ಎರಡೂ ಕೈಯ ಬಳೆಗಳು ಮಾಯವಾಗಿ, ಒಂದು ಕೈಗೆ ಎರಡೂ ಕೈಯಬಳೆ ಇನ್ನೊಂದಕ್ಕೆ ರಿಸ್ಟು ವಾಚು ಬಳಕೆ ಬಂದುದೂ ನಾಗರಿಕತೆಯ ಲಕ್ಷಣ. ಮದುವೆಯಾದ ಮರುದಿನವೇ ಕುಟುಂಬದ ಮನೆಯನ್ನು ತ್ಯಜಿಸಿ ಸ್ವತಂತ್ರರಾಗಿ ಬಾಳುವ ಆತುರ, ನಡೆನುಡಿಗಳಲ್ಲಿ ಕೃತಕ ಸೌಂದರ್ಯ, ಪುರುಷ ಸಿಂಹರ ಮೋರೆಯ ವಿಸಿ ಮಾಯವಾಗಿ ಬೆಳ್ಳಗೆ ನಯವಾಗಿ ಬೆಳಗುತ್ತಿರುವುದು ಕೂಡಾ ನಾಗರಿಕತೆಯ ಇತ್ತೀಚಿನ ಹೊಸ ಸಂಶೋಧನೆ.

ಸರಕಾರದ ಕಾನೂನು ಕಟ್ಟಳೆ ಮುರಿಯುವುದರಲ್ಲಿ ಧೀರ ಸಾಹಸ, ವಾಹನಗಳಲ್ಲಿ ಸಿನೇಮಾ ವಂದಿರಗಳಲ್ಲಿ ಪಕ್ಕದಲ್ಲಿ ಕುಳಿತಿರುವವಂಗೆ ಅಸಹ್ಯವೆನಿಸುವಂತೆ ಹೊಗೆ ಸೇದಿ ಸೇದಿ ಕ್ಷಯರೋಗಿಗಳ ಮರೆಹೋಗಿ ಪಾಸಿಶ್ರಮಿಯಂಧವಿದ್ದರೂ ಆಯುಷ್ಯವಿನ್ನೂ ದುಡಿದು ಗಳಿಸುವ ಹಂಬಲಕ್ಕೆಂತಲೂ, ಸಟ್ಟಾ, ಲಾಟರಿ ಮತ್ತಿತರೆ, ಪಂಕ್ತಿಗೆ ಸೇರಿದ ಕುಶಲ ವಿನೋದಾವಳಿಗಳಿಂದ ಸಂಪಾದಿಸುವ ಲವಲವಿಕೆ ಇವು ನಾಗರಿಕತೆಯ ಎಳೆಯ ಮರಿಗಳು. ಈ ಮೇಲಿನ ವಿಷಯಗಳನ್ನು ಒಂದರೆ ಕ್ಷಣ ನಿರ್ವಿಕಾರ ಮನಸ್ಸಿನಿಂದ ಕುಳಿತು ಶಾಂತಚಿತ್ತರಾಗಿ ವಿಚೇಚಿಸಿದಾಗ, ನೀವೂ ಕೂಡಾ ಸತ್ಯವೆಂದು ಒಪ್ಪಿಕೆ ಳ್ಳದಿರಲಾರಿರೆಂದೂ ಆಶಿಸುತ್ತೇನೆ



ಕುಮಾರಿ ಬಿಲ್ಲಿಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶಲ್), ರೂ. 8=00 (ಎಕ್ಸ್‌ಟ್ರ ಸ್ಪೆಶಲ್).

P. DEVEE & Co. (M. I.) CALCUTTA—40

ಸ್ಥಾಪಿಸಿದರು: ಷಾ ಕಂಪೆನಿ, ಮಂಗಳೂರು—1.

ಪರಲೋಕ ವಿದ್ಯೆ

(೭ನೇ ಪುಟದಿಂದ)

ಲ್ಲಿ ಪ್ರೊ. ಚಾರ್ಲ್ಸ್‌ರಿಚರ್ಡ್, ಕರ್ನಲ್ ದಾರಾ ರೋಜೆಸ್ ಮೊನಲಾದವರು ಈ ವಿಜ್ಞಾನೋನ್ನತಿಯಲ್ಲಿ ಬಹು ಸಹಕಾರ ನೀಡಿದರು. ಇಟಲಿ ಜರ್ಮನಿ, ಅಮೆರಿಕೆಯ ಮೂಜಿ ನ್ಯಾಯಾಧಿಶ ಶ್ರೀ ಎಡ್ಮಸ್ಟ್ ಮೆಸ್ಸನರು ಆರಂಭದ ಅಧ್ಯಯನ ನಡೆಸಿ, 'ಪರಲೋಕ ವಿದ್ಯೆಯು ಪರಿಪೂರ್ಣ ವಿದ್ಯೆಗಳಲ್ಲಿ ಒಂದು' ಎಂದು ಉದ್ಘೋಷಿಸಿದರು.

ಕಮ್ಯೂನಿಸ್ಟರು ಪರಲೋಕ ವಿದ್ಯೆಯನ್ನು ಮನ್ನಿಸುವುದಂತೂ ದೂರವುಳಿಯಲಿ; ದೇವರ ಅಸ್ತಿತ್ವವನ್ನೇ ಒಪ್ಪುವುದಿಲ್ಲ. ಆದರೆ ಕಮ್ಯೂನಿಸ್ಟ್ ದೇಶಗಳಲ್ಲಿಯೂ ಈ ಬಗ್ಗೆ ಸಂಶೋಧನೆಗಳೂ ಪ್ರಯೋಗಗಳೂ ನಡೆದಿವೆ. ರಷ್ಯದ ಕೌನಲರ್ ಆಫ್ ಸ್ಟೇಟ್ ಶ್ರೀ ಮೋತಿಯೋ ಅಸ್ತಾನ್‌ರವು ನಡೆಸಿದ ಪ್ರಯೋಗಗಳು ಪ್ರಪಂಚಪ್ರಸಿದ್ಧವಿವೆ.

ಭಾರತದಲ್ಲಿ ಈ ವಿದ್ಯೆಯು ಎಂದು ಹುಟ್ಟಿಕೊಂಡಿತು ಎಂದು ನಿಗದಿಯಾಗಿ ಹೇಳುವಂತಿಲ್ಲ. ಆದರೆ, ಇದು ಚಿರ ನವೀನ ಹಾಗೂ ಭಾರತೀಯ ಸಂಸ್ಕೃತಿಯು ಒಂದು ಅವಿಭಾಜ್ಯ ಅಂಗವೆಂದು ಮಾತ್ರ ಒಪ್ಪಿಕೊಳ್ಳಬಹುದು. ಭಾರತದ ಮೂಲೆ ಮೂಲೆಗಳಲ್ಲಿಯೂ ಇಂದು ಗೋರಖನಾಥನ ಕಥೆಯ, ವೃಜಾಚಾದಲ್ಲಿವೆ. ಕಾಮಾಖ್ಯೂಪ, ಕಾಮಾಕ್ಷ ಮತ್ತು ಬಂಗಾಳದ ಪಾದುಗಳು ಇಂದಿಗೂ ವಿಶ್ವದ ರಹಸ್ಯಗಳಾಗಿ ಉಳಿದಿವೆ. 'ಅಮೃತ ಬಜಾರ್' ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀ ತಿಶಿರಾಮೂರ ಘೋಷರು ಈ ಬಗ್ಗೆ ದುಡಿದಿದ್ದ ಭಾರತೀಯರಲ್ಲಿ ಅಗ್ರಗಣ್ಯರು. ತನ್ನ ಮಡದಿ ಸುಭದ್ರೆಯು ವೃತ್ಯುನಂತರವೂ ಆಕೆಯ ಮೇಲೆ ಅತಿ ಮಮತೆಯಿಂದಿದ್ದ ಇವರು ಪರಲೋಕವಿದ್ಯೆಯ ಬಗ್ಗೆ ಸಂಶೋಧನೆ ನಡೆಸತೊಡಗಿದರು. ಆಕೆಯ ಅತ್ಮಪೊಡನೆ ಮಾತಾಲಾಪ ಮಾಡುವ ಪ್ರಯತ್ನದಲ್ಲಿ ಇವರು ಈ ವಿಜ್ಞಾನದ ಉತ್ತಮೋತ್ತಮ ಆಧ್ಯಯನಶೀಲ ವಿದ್ಯಾರ್ಥಿಯೂ ಆಗಿಬಿಟ್ಟರು.

(ಕ್ರಮಶಃ)

(ಸಂಕಲಿತ)

ಆಧ್ಯಾತ್ಮಿಕ ವಿಚಾರ

ಭಗವದ್ಗೀತೆಯ ಪ್ರಕಾಶ

ಇಂದ್ರಿಯಗಳನ್ನು ನಿಗ್ರಹಿಸಿ ಪರಮಾತ್ಮನನ್ನು ಅರಿತುಕೊಳ್ಳಬೇಕು; ಫಲಾಪೇಕ್ಷೆಯ ಲವಲೇಶವಿಲ್ಲದೆ ಕರ್ಮವನ್ನು ಮಾಡಬೇಕು. ಶ್ರೀ ಕೃಷ್ಣನ ಈ ಉಪದೇಶ ಇಂದಿಗೂ ಸಾಧುವೆನಿಸಿದೆಯಲ್ಲವೆ?

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೩: ಕರ್ಮಯೋಗ

ಅರ್ಜುನ:—ಕೇಶವನೇ, ನೀನು ಬೋಧಿಸಿದ ಆತ್ಮಶಾಂತಿಯು ಕರ್ಮಕ್ಕೂ ಮಿಗಿಲಾದುದಾದರೆ ಈ ಘೋರ ಪಾಪದ ಕಾಳಗದಿಂದ ಪ್ರಯೋಜನವೇನು? ಒಂದಕ್ಕೊಂದು ವ್ಯತಿರಿಕ್ತವಾಗಿ ತೋರುವ ಮಾತುಗಳಿಂದ ನೀನು ನನ್ನ ಮನಸ್ಸನ್ನು ಕದಡಿಸಿರುವೆ. ಸಂಪೂರ್ಣ ಶಾಂತಿಯು ಲಭಿಸಬೇಕಾದರೆ ನಾನು ಯಾವ ಮಾರ್ಗವನ್ನು ಹಿಡಿಯಬೇಕು, ಎಂಬುದನ್ನು ವಿವರಿಸು.

ಭಗವಾನ:—ಪಾರ್ಥನೇ, ಈ ಜಗತ್ತಿನಲ್ಲಿ ಆನಾದಿಯಿಂದ ಮಾನವಕುಲಕ್ಕೆ ಎರಡು ವಿಧಗಳ ಜೀವನ ಮಾರ್ಗವನ್ನು ನಾನು ತೋರಿಸಿರುವೆನು. ಅದರಲ್ಲಿ ಒಂದು ಜ್ಞಾನಮಾರ್ಗ, ಮತ್ತೊಂದು ಕರ್ಮ ಮಾರ್ಗ. ಕರ್ಮವನ್ನು ಬಿಟ್ಟರೆ ಕರ್ಮ ಮಾರ್ಗವಿಲ್ಲ. ಬರೇ ತ್ಯಾಗದಿಂದ ಮುಕ್ತಿಯು ಲಭಿಸುವುದು ಕಷ್ಟ. ಮಾನವನು ಕರ್ಮವಿರಹಿತನಾಗಿರುವುದು ಸಂಭವಲ್ಲ. ಪ್ರಕೃತಿಯ ಸ್ವಭಾವದಲ್ಲಿ ಪ್ರತಿಯೊಬ್ಬ ಮಾನವನಿಗೂ ಒಂದಲ್ಲ ಒಂದು ವಿಧದ ಕರ್ಮದ ಬಂಧನವಿದ್ದೇಯಿದೆ. ಆತೆಗಳಿಗೆ ಒಳಪಟ್ಟು ಇಂದ್ರಿಯಗಳ ಬಂಧನದಲ್ಲಿ ಬಿದ್ದ ಮಾನವನಿಗೆ ಮೂಯೆಯು ತಟ್ಟುವುದು. ಅತನು ಆತ್ಮವಂಚಕನಾಗುವನು. ನಿಷ್ಕಾಮ ಕರ್ಮಯು ಶಕ್ತಿವಂತನಾದ ಯೋಗಿಯು. ನಿನಗೆ ನಿಷ್ಕಾಮಿಸಲ್ಪಟ್ಟ ಕರ್ಮವನ್ನು ಮಾಡು. ಕರ್ಮ ಬಾಹಿರನು ಯೋಗಿಯೂಗಲಾರನು. ಕರ್ಮವಿರಹಿತನ ದೇಹವು ಬೇಗನೇ ನಾಶವಾಗುವುದು. ಈ ಜಗತ್ತನ್ನು ಕರ್ಮಗಳೆ ಸುತ್ತಿರುವವು. ಕರ್ಮವೇ ಯೂಗವೆಂದು ಎಣಿಸು. ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ನಾಧಿಸು.

ಸೃಷ್ಟಿಕರ್ತನು ಮಾನವರನ್ನು ಯಜ್ಞಬಲದಿಂದ ಉಂಟುಮಾಡಿದನು. ಸೃಷ್ಟಿಯಲ್ಲಿ ಮಾನವ ಕುಲವು ಹೆಚ್ಚಿಚ್ಚಾಗಲಿ ಎಂದು ಆಶೀರ್ವದಿಸಿದನು. ಸುಖಸಂಪತ್ತುಗಳು ಒಡಗಿ ಪಶ ವಿನಂತೆ ಆಕೆಯೆನ್ನುವ ಹಾಲನ್ನು ಮಾನವರಿಗೆ ಕೊಟ್ಟನು. ಪರಮಾತ್ಮನನ್ನು ಸದಾ ವಂದಿಸುತ್ತಾ ಬಾಳಿರಿ. ಅಂತೆಯೇ ಒಬ್ಬ ಮಾನವನು ಇನ್ನೊಬ್ಬನನ್ನು ವಂದಿಸುತ್ತ ಇರಬೇಕು' ಎಂದು ಉಪದೇಶಿಸಿದನು. ಈ ರೀತಿ ಆದಿಯಲ್ಲಿ ಸೃಷ್ಟಿಯ ಶಂಕಸ್ಥಾಪನವಾಯಿತು. ಆತೆಯಿಂದ ಸುಖಸಂತೋಷಗಳು ಯಜ್ಞಬಲದಿಂದ ಎಲ್ಲಾ ಮಾನವರಲ್ಲಿ ಅಂಕುರಿಸಿದುವು. ಲಭಿಸಿದ ಸುಖಸಂತೋಷದ ಫಲವನ್ನು ತಾನೇ ಉಂಡು ಇತರರನ್ನು ಅಲಕ್ಷಿಸಿದ ಮಾನವನು ಜೋರನಾದನು, ಧರ್ಮದ್ರೋಹಿಯೂದನು. ತಾನು ಉಣ್ಣುವಾಗ ಒಂದು ಭಾಗವನ್ನು ಇನ್ನೊಬ್ಬನಿಗೆ ಕೊಡದೆ ಉಣ್ಣುವ ಮಾನವನು ಪಾಪಿಯೂದನು. ಈ ರೀತಿ ಮಾನವ ಗತಿಯು ಉಂಟಾಯಿತು. ಚಕ್ರಗಳು ಉರುಳತೊಡಗಿದವು. ಸುಖಭೋಗದಲ್ಲಿಯೇ ಚಲಿಸಿದ ಚಕ್ರಗಳು ಕ್ರಮೇಣ ಪಾಪದ ದಾರಿಯನ್ನು ಹಿಡಿದವು. ಆ ದಾರಿಯನ್ನು ಹಿಡಿದ ಮಾನವನ ಜನ್ಮವು ನಿರರ್ಥಕವಾಯಿತು. ಆದರೆ ಸುಖದ ಸರಿಯೂದ ತತ್ವವನ್ನರಿತು, ತೃಪ್ತಿಗೆ ಹೆಜ್ಜಾದ ಬೆಲೆಗೊಟ್ಟು, ಸುಖದಿಂದ ಹಿಗ್ಗದೇ ಇದ್ದ ಮಾನವನಲ್ಲಿ ಶಾಂತಿಯು ನೆಲೆಗೊಂಡಿತು. ಇಂತಹ ಎರಡನೆಯ ತರಗತಿಯ ನಿಷ್ಕಾಮಕರ್ಮಿಗೆ ತಾನು ಮಾಡಿದ ಕರ್ಮಗಳಿಂದ ಲಭಿಸಿದ ಸುಖ ಸಂಪತ್ತುಗಳು ಕೇವಲ ತೃಣಕ್ಕೂ ನಗಣ್ಯವಾಗಿ ಕಾಣುವುವು. ಅತನಲ್ಲಿ ಸುಂತಿ ಗಳು ಹುಟ್ಟಲಾರವು. ಆದು ಕಾರಣ, ಯಾವ ಕರ್ಮವನ್ನೂ ಮಾಡದಾಗಲೂ ಫಲವನ್ನು ಅಪೇಕ್ಷಿಸಬಾರದು. ಕರ್ಮ ಯೋಗದ ಬಲದಿಂದಲೇ ಜನಕ ಮಹಾ ರಾಜನು ಮುಕ್ತಿಯನ್ನು ಪಡೆದನು ಇಂತಹ ಕರ್ಮ ಯೋಗಿಗಳ ಶಕ್ತಿಯಿಂದಲೇ ಜಗತ್ತು ಪ್ರಕಾಶಿಸುವುದು. ಕರ್ಮಯೋಗಿಯನ್ನು ಇತರ ಮಾನವರು ಅನುಕರಿಸುವರು. ಆತನು ಜಗತ್ತಿಗೆ ಆದರ್ಶ ರೂಪನಾಗುವನು. ನಾನು ಕೂಡ ಕರ್ಮವನ್ನು ಇನ್ನೂ ಇನ್ನೂ ಮಾಡುತ್ತಲೇ ಇರುವೆನು. ನನ್ನನ್ನೇ ಆದರ್ಶವಾಗಿಟ್ಟುಕೊಂಡು, ನಾನು ಹಿಡಿದ ದಾರಿಯನ್ನೆ ಮಾನವರು ಹಿಡಿಯಬೇಕು. ನಾನು ಕರ್ಮಗಳನ್ನು ಬಿಟ್ಟ ದಿನವೇ ಜಗತ್ತು ನಾಶವಾಗುವುದು. ಮಾನವ ಕೋಟಿಯೂ ನಾಶವಾಗುವುದು. ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡುವವರು ಅಜ್ಞಾನಿಗಳು, ಜ್ಞಾನಿಗಳು ಬುದ್ಧಿಹೀನರಾದ ಅಜ್ಞಾನಿಗಳ ಕೂಟದಲ್ಲಿ ಸೇರುವುದು ಕೇವಲ ತಪ್ಪು. ಪ್ರಕೃತಿಯೇ ಮಾನವತ್ತು ಕರ್ಮಗಳಿಗೂ ನಾಧನೆ. ಆದರೆ, ಅಹಂಕಾರಿಯು 'ಈ ಕೆಲಸವು ನನ್ನಿಂದಾಯಿತು' ಎಂದು ಹಿಗ್ಗಿ ಪಾಪಿಯಾಗುತ್ತಾನೆ. ಅಹಂಕಾರವಿಲ್ಲದ ನಿಷ್ಕಾಮ ಕರ್ಮಿಯು ಪ್ರಕೃತಿಯ ಸತ್ವಗುಣವನ್ನು ತಿಳಿದೇ ಇರುವನು. ಆತನು ಪ್ರಕೃತಿಗೆ ವಿರೋಧವಾಗಿ ನಡೆಯಲಾರನು. ಪ್ರಕೃತಿಯ ನಿಯಮಗಳಿಗೆ ಬಲಿಯೂದ ಅಹಂಕಾರಿಯು ಆಶೆಗಳ ಬಂಧನಕ್ಕೊಳಗಾಗಿ ತನ್ನ ಮನಸ್ಸಿನ ಶಾಂತತೆಯನ್ನು ಕಳೆದುಕೊಂಡು ಇಕರರಲ್ಲಿ ಅಜ್ಞಾನವನ್ನು ಬೀರುವನು. ಆದು ಕಾರಣ, ನೀನು ಮಾಡುವ ಯಾವತ್ತು ಕರ್ಮಗಳನ್ನು ನನಗೊಪ್ಪಿಸಿ ನನ್ನಲ್ಲಿ ಶರಣಾಗತನಾಗಿ, ನಿನ್ನ ಚಿತ್ತವನ್ನು ನನ್ನಲ್ಲಿಟ್ಟು, ನಿಷ್ಕಾಮನು ಕರ್ಮಿಯಾಗಿ ಆತೆಯೆಂಬ ಶೃಂಖಲೆಯನ್ನು ತುಂಡುಮಾಡಿ ಮುಂದೆ ಸಾಗು. ಯೂರು ನಿಶ್ಚಾಸದಿಂದ ನನ್ನ ಈ ಬೋಧನೆಯನ್ನು ಪರಿಗ್ರಹಿಸುವರೊ ಅವರು ಕ್ರಮೇಣ ಕರ್ಮ ಬಂಧನದಿಂದ ಮುಕ್ತರಾಗಿ ನನ್ನಲ್ಲಿ ಸೇರುವರು. ಪ್ರಕೃತಿಯ ಸ್ವಭಾವವಲ್ಲಿ ಪ್ರೇಮ ನುತ್ತ ವೈರಿಗಳು ಕೂಡಿವೆ. ಆದರೆ ಇವನ್ನು ಜಯಿಸುವುದು ನಮ್ಮ ಧರ್ಮ. ಇವರವರ ಕರ್ಮಗಳಿಗೆ ಅವರವರೇ ಬಾಧ್ಯರು ಎಂಬುದನ್ನು ಚೆನ್ನಾಗಿ ಅರಿತುಕೊ

ಅರ್ಜುನ:—ಪ್ರಕೃತಿಯಲ್ಲಿ ಮಾನವನಿಗೆ ಪಾಪಗಳಿಸುವ ಹೇತು ಎಲ್ಲಿಂದ, ಹೇಗೆ ಒದಗಿತು?

ಭಗವಾನ:—ದುರಾಶೆ ಕೋಪ, ಮೋಹ—ಇವು ಮಾನವರ ವೈರಿಗಳು. ಈ ವೈರಿಗಳು ಪಾಪಕೂಪವನ್ನು ರಚಿಸುವುವು. ಅಗ್ನಿಯಿದ್ದಲ್ಲಿ ಹೊಗೆ ಏಳುವಂತೆ, ಈ ವೈರಿಗಳು ಪಾಪ ವೃಕ್ಷದ ಬಿತ್ತುಗಳು. ಜ್ಞಾನಿಗಳಲ್ಲಿ ದುರಾತೆಗಳ ತೃಷ್ಣೆಯಿಲ್ಲ. ಅಜ್ಞಾನಿಗಳು ದುರಾತೆಗಳಿಂದ ಬಂಧಿಸಲ್ಪಡುವರು. ಅಜ್ಞಾನಿಗಳ ಇಂದ್ರಿಯಗಳಲ್ಲೂ, ಚಿತ್ತದಲ್ಲೂ ದುರಾಶೆಗಳು ವಾಸಿಸುವವು. ಆದು ಕಾರಣ, ಈ ಗಳಿಗೆಯಿಂದ ನಿನ್ನ ಇಂದ್ರಿಯಗಳನ್ನು ಸಂಪೂರ್ಣವಾಗಿ ನಿನ್ನ ಸ್ವಾಧೀನದಲ್ಲಿರಿಸಿಕೊಳ್ಳು. ಇಂದ್ರಿಯಗಳಿಗೆ ಅಪಾರವಾದ ಬಲವಿದೆ. ಮನಸ್ಸಿಗೆ ಇಂದ್ರಿಯಗಳನ್ನು ಬಿಗಿಪಿಡಿಯುವ ಶಕ್ತಿ ಇದೆ. ವಿವೇಕವು ಇಂದ್ರಿಯಗಳನ್ನೂ, ಮನಸ್ಸನ್ನೂ, ಇವೆರಡನ್ನೂ ಕಟ್ಟಬಲ್ಲ ಅಗಾಧವಾದ ಶಕ್ತಿಯುಳ್ಳದ್ದು. ವಿವೇಕ, ಜ್ಞಾನಗಳಿಂದಲೂ ಮಿಗಿಲಾದವನು ಪರಮಾತ್ಮನು ಮಾತ್ರ. ಆದುದರಿಂದ ಪರಮಾತ್ಮನನ್ನು ತಿಳಿದುಕೊಳ್ಳು. ನಿನ್ನ ಆತ್ಮಶಕ್ತಿಯಿಂದ ಪರಮಾತ್ಮನನ್ನು ಅರಿತು ವೈರಿಗಳಾದ ಇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಂಡು ದುರಾಶೆಗಳನ್ನು ಬಿಟ್ಟುಬಿಡು. ನಿಷ್ಕಾಮ ಕರ್ಮಕ್ಕೆ ಉದ್ಯುಕ್ತನಾಗಿ ಕರ್ಮಯೋಗಿಯಾಗು.

— —

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

10ಂದ 4 ತಿಂಗಳ ವರೆಗೆ	4%
5 ,, 12 ,,	4½%
13 ,, 24 ,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಪ್ರಕಟಣೆ

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ನಲ್ಲಿ

S. C. S. No 567/1960

ಪದ್ಮನಾಭ ಅಮ್ಮ — ವಾದಿಳು.

ಮತ್ತು

ಸೈಮನ್ ಸಾಲಿನ್ಸ್ — ಗ್ರಾಡ್ರಿಯಲ್ ಸಾಲಿನ್ಸರ ಸಾಗ; ಉಡುಪಿ ತಾಲ್ಲೂಕು, ಮಣಿಪುರ ಗ್ರಾಮ — ಪ್ರತಿವಾದಿ.

ಇವರಿಗೆ ಈ ಮೂಲಕ ತಿಳಿಯಪಡಿಸುವ ದೇನಂದ್ರೆ —

ವಾದಿಳ ಪಕ್ಕಿನ ಸ್ಥಿರಾಸ್ತಿಯನ್ನು ಪ್ರತಿವಾದಿಯು ಜಾಲಸೇನೆಗೆ ಅನುಭವಿಸಿ ಬರುತ್ತಾ ಕಳೆದ ಪಿಕಾರಿ ಸಂವತ್ಸರಕ್ಕೆ ಬಡತಕ್ಕ ನೇನ, ಬಡ್ಡಿ ಪಗೈರೆಗೆ ವಾಕ್ಲು ಮಾಡಿದ ದಾವೆಯು ಕುರಿತು ಸದ್ರಿ ಪ್ರತಿವಾದಿಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆದನ್ನು ತಾರೀಕು 6-1-1961ಕ್ಕೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದ್ದೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai,
Advocate for Plaintiff.

ಉಡುಪಿ, ತಾ. 10-12-1960.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
15 –12–1960

LICENSE NO. 31
Licensed to Post without Prepayment

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಸೂರ್ಯನ ಉತ್ತರಲೂ ವಾಯು ಮತ್ತು ಧೂಳೀಕಣಗಳಿಂದ ಕೂಡಿದ ಮೇಘ ಪದಾರ್ಥವು ಗ್ರಹ, ಉಪಗ್ರಹಾದಿಗಳಿಗೆ ಬಹಳ ಹಿಂದೆಯೇ ಹುಟ್ಟಿ ಕೊಂಡಿತ್ತು. ಆದರೆ, ಇವರ ಜನನ ಹೇಗಾಯಿತೆನ್ನುವುದು ಗಡುಚಾದ ಪ್ರಶ್ನೆ. ಗ್ರಹಗಳ ಜನ್ಮದ ಬಗ್ಗೆ ಹೊಸ ಸಿದ್ಧಾಂತವನ್ನು ಪ್ರಕಟಿಸಿದ ರಶ್ಯನ್ ಖಗೋಳ ಶಾಸ್ತ್ರಜ್ಞ ಶ್ರೀ ಬೋರಿಸ್ ಲೆವಿನ್‌ರವರ ಪುಸ್ತಕದ ಸಾರಾಂಶವನ್ನು ಶ್ರೀ ಎಂ. ರಂಗ ರಾವ್ 'ನವಯುಗ'ದ ವಾಚಕರಿಗೆ ಒದಗಿಸುತ್ತಿದ್ದಾರೆ.

೫. ಸೂರ್ಯನನ್ನು ಸುತ್ತಿಕೊಂಡಿರುವ ಮೇಘ ಪದಾರ್ಥ.

ಮೇಘಪದಾರ್ಥ ಹೇಗೆ ಹುಟ್ಟಿತು?

ವಾಯು ಮತ್ತು ಧೂಳೀಕಣಗಳಿಂದ ಕೂಡಿದ ಮೇಘ ಪದಾರ್ಥವು ಹೇಗೆ ಪರಿಣಾಮ ಹೊಂದಿತೆಂಬುದನ್ನು ಊಹಿಸುವುದು ಅಷ್ಟೊಂದು ಕಷ್ಟವಲ್ಲ; ಆದರೆ ಅದು ಮೊತ್ತ ಮೊದಲು ಹೇಗೆ ಉಂಟಾಯಿತೆಂದು ಹೇಳುವುದೇ ಬಹಳ ಕಷ್ಟ. ಗ್ರಹ, ಉಪಗ್ರಹ, ಉಲ್ಕೆ, ಬಾಲದ ಚುಕ್ಕೆ ಮೊದಲಾದುವಾವುದೂ ಉಂಟಾಗುವುದಕ್ಕಿಂತ ಎಷ್ಟೋ ಕಾಲದ ಕೆಳಗೇ ಇದು ಎರ್ಪಟ್ಟಿತು. ತರುವಾಯ ಇವೆಲ್ಲಾ ಉತ್ಪತ್ತಿಯಾದ ಮೇಲೆ ಅದರ ಪ್ರಾಕೃತ ರೂಪವು ಅಂತರ್ಧಾನವಾಗಿ ಹೋಯಿತು.

ಈ ಮೇಘ ಪದಾರ್ಥವು ಹೇಗೆ ಹುಟ್ಟಿತೆಂದು ತಿಳಿಯ ಬೇಕಾದರೆ ಸೂರ್ಯನೂ ಇತರ ನಕ್ಷತ್ರಗಳೂ ಹೇಗೆ ಹುಟ್ಟಿದುವೆಂಬುದನ್ನು ಕೂಡಾ ತಿಳಿಯಬೇಕು. ನಕ್ಷತ್ರಗಳ ಉತ್ಪತ್ತಿಯನ್ನು ಕುರಿತು ಪ್ರಸಂಗ ಶಾಸ್ತ್ರವೇತ್ತರು ಬಗೆ ಬಗೆಯ ಸಿದ್ಧಾಂತಗಳನ್ನು ಮಂಡಿಸುತ್ತಿದ್ದಾರೆ. ಇವೆಲ್ಲಾ ತಲೆ ಹೊಂದು ಕಾಲೆ, ಕಾಲೊಂದು ಕಡೆಯೂ ನಿವೆ!

ನಾವಿರುವ ಈ ನಕ್ಷತ್ರ ಮಂಡಲ (ಗೆಲಾಕ್ಸಿ)ದಲ್ಲಿ, ನಕ್ಷತ್ರಗಳ ಮಧ್ಯ ಇರುವ ಸ್ಥಳವು "ಶೂನ್ಯ"ವಲ್ಲ. ನಕ್ಷತ್ರ ಮಂಡಲದೊಳಗೆಲ್ಲಾ ಅತಿ ತೆಳುವಾದ "ವಾಯು ಧೂಳಿ" ವಿಸ್ತರಿಸಿಕೊಂಡಿದೆ. ನಕ್ಷತ್ರಗಳು ವಾಯು ಪದಾರ್ಥಗಳಿಗೆ ಸಂಬಂಧಿಸಿದ ಪರಮಾಣುಗಳನ್ನು ಆಕಾಶಕ್ಕೆ ಚಿಮ್ಮಿಸುತ್ತಿರುತ್ತವೆ. ಈ ಪರಮಾಣುಗಳು ನಕ್ಷತ್ರಗಳಿಗೆ ಬಹಳ ದೂರದಲ್ಲಿ, ಶೀತಳ ಪ್ರಾಂತದಲ್ಲಿ ಸಂಯೋಗ ಹೊಂದಿ, ಅಣುಗಳಾಗಿ ರೂಪ ಪಡೆಯುತ್ತವೆ. ಇಂತಹ ಅಣುಗಳಿಂದ ಸ್ವಲ್ಪ ಮಟ್ಟಿಗೆ ಪದಾರ್ಥ ರೇಣುಗಳು ಅಥವಾ ಧೂಳಿ ಉಂಟಾಗುತ್ತದೆ.

ಆಕಾಶದಲ್ಲಿ ಒಂದು ಬದಿಯಲ್ಲಿ ನಕ್ಷತ್ರಗಳು ಪದಾರ್ಥವನ್ನು ಚಿಮ್ಮುಕಿಸುತ್ತಿದ್ದರೆ, ಮತ್ತೊಂದೆಡೆಯಲ್ಲಿ ಅತಿ ತೆಳುವಾದ ಪದಾರ್ಥಗಳಿಂದ ಹೊಸ ಗೋಳಗಳು ನಿರ್ಮಾಣವಾಗುತ್ತವೆ. ದೊಡ್ಡ ದೊಡ್ಡ ಗೋಳಗಳಿಗೂ ತೆಳುವಾದ ಮೇಘ ಪದಾರ್ಥಕ್ಕೂ ನಡುವೆ ನಡೆಯುವ ಪರಿಣಾಮಗಳ ಚಂದವನ್ನು ಅಂದರೆ ರೀತಿಯನ್ನು ಶಾಸ್ತ್ರಜ್ಞರು ಪರಿಶೋಧನೆ ಮಾಡಬೇಕಾಗಿದೆ. ಆದುದರಿಂದ ಸೋವಿಯೆಟ್ ಶಾಸ್ತ್ರವೇತ್ತರು ನಕ್ಷತ್ರ ಮಂಡಲದೊಳಗೆಲ್ಲಾ ವ್ಯಾಪಿಸಿರುವ ಅತಿತೆಳುವಾದ ಮೇಘ ಪದಾರ್ಥದ ಸ್ವಭಾವವನ್ನು ಕುರಿತು ಅಮೂಲ್ಯವಾದ ವಿವರಗಳನ್ನು ಶೇಖರಿಸಿದ್ದಾರೆ.

ಕೆಲವು ವಿವರಣೆ

ನಕ್ಷತ್ರ ಮಂಡಲದೊಂದಿಗೇ ಸೇರಿ ಸೂರ್ಯನೂ ಇತರ ನಕ್ಷತ್ರಗಳೂ ತಿರುಗುವಾಗ ಅವುಗಳಿಗೆ ವಿಸ್ತೃತವಾದ "ವಾಯು–ಕಣ" ಮೇಘಗಳು ತಗುಲುತ್ತವೆ. ಆ ಸಮಯದಲ್ಲಿ ಈ ಮೇಘಗಳ ಸಂಬಂಧದ ಪದಾರ್ಥವು ಸ್ವಲ್ಪ ಆ ನಕ್ಷತ್ರಗಳೊಂದಿಗೆ ಸೇರಿಕೊಳ್ಳುವ ಅವಕಾಶವಿದೆಯೆಂದು ಷ್ಮಿತ್ ನಿರೂಪಿಸಿದನು. ಇದಕ್ಕೆ ಆನುಕೂಲವಾದ ಪರಿಸ್ಥಿತಿಯೇನೆಂದರೆ, ಇನ್ನೊಂದು ಸನ್ನಿಹಿತ ನಕ್ಷತ್ರ ಸಂಬಂಧಿಯಾದ ಗುರುತ್ವಾಕರ್ಷಣೆಯ ಫಲಿತವಾಗಿ, ಮೇಘ ಪದಾರ್ಥವು ಒಂದು ನಕ್ಷತ್ರದ ಬೆಂಬಿಡದೇ ನಡೆಯುತ್ತಾ ಬರುವುದು. ಈ ಪರಿಸ್ಥಿತಿ ಸಾನುಕೂಲವಾದಾಗ, ಮೇಘ ಸಂಬಂಧೀ ಪದಾರ್ಥದ ಸ್ವಲ್ಪ ಭಾಗವು, ನಕ್ಷತ್ರದ ಸುತ್ತಲೂ ಇರುವ ವಾತಾವರಣದೊಂದಿಗೆ ಸೇರಿ ಹೋಗಿ, ಅದು ಕೂಡಾ ನಕ್ಷತ್ರದ ಸುತ್ತಲೂ ತಿರುಗಲಾರಂಭಿಸುತ್ತದೆ.

ಆದರೆ ಈಗಿನ ಸೂರ್ಯನು ನಕ್ಷತ್ರ ಮಂಡಲದಲ್ಲಿ ವ್ಯಾಪಿಸಿರುವ "ವಾಯು–ಕಣ" ಮೇಘಗಳಿಂದ ಪದಾರ್ಥವನ್ನು ಹೆಚ್ಚಾಗಿ ಸಂಗ್ರಹಿಸುವ ಅವಕಾಶವಿಲ್ಲ. ಏಕೆಂದರೆ, ಸೂರ್ಯ ಗೋಳವು ಒಂದು ಸೆಕೆಂಡಿಗೆ ಸುಮಾರು ೧೨ ಮೈಲು ವೇಗದಿಂದ ಚಲಿಸುತ್ತದೆ. ಸಾನಾನ್ಯವಾಗಿ ನಕ್ಷತ್ರ ಮಂಡಲದ "ಮೇಘ"ಗಳು ಚಲಿಸುವ ವೇಗವು ಇದಕ್ಕಿಂತ ಬಹಳ ಕಡಮೆ. ಆದರೆ ಪೂರ್ತಿಯು ಹೀಗಿರಲಿಲ್ಲ.

ಮೇಲೆ ಹೇಳಿದ ಮೇಘಗಳಿಂದಲೇ ನಕ್ಷತ್ರಗಳು ಗೊಂಚಲು ಗೊಂಚಲಾಗಿ ಉದ್ಭವಿಸುತ್ತವೆಂದು ಸೋವಿಯೆಟ್ ಶಾಸ್ತ್ರವೇತ್ತರು ಭಾವಿಸುತ್ತಾರೆ. ನಕ್ಷತ್ರ ಸಮುದಾಯವು ಎರ್ಪಟ್ಟ ಹೊಸದರಲ್ಲಿ ನಕ್ಷತ್ರಗಳ ಚಲನೆಗೂ, ಅವು ಎರ್ಪಟ್ಟ ಮೇಲೆ ಮಿಗಿಲಿ ಹೋದ ಮೇಘ ಪದಾರ್ಥದ ಚಲನೆಗೂ ಅಸ್ಪೇನೂ ವ್ಯತ್ಯಾಸವಿರಲಾರದು. ಸೂರ್ಯನ ಉತ್ಪತ್ತಿ ಹೀಗೆಯೇ ಆತೆಂದಾದರೆ, ಅದು ಆ ದಶೆಯಲ್ಲಿ ಎಷ್ಟೋ ಮೇಘ ಪದಾರ್ಥವನ್ನು ತನ್ನ ಸುತ್ತಲೂ ಕೂಡಿಕಟ್ಟಿಕೊಂಡಿರಬೇಕು.

ಸೂರ್ಯನನ್ನು ಸುತ್ತಿಕೊಂಡಿದ್ದು ಗ್ರಹಗಳ ಉತ್ಪತ್ತಿಗೆ ಕಾರಣೀ ಭೂತವಾದ ಮೇಘವನ್ನು ಸೂರ್ಯನು ಯಾವುದೋ ಒಂದು ದಿಶೆಯಲ್ಲಿ ಸಂಪಾದಿಸಿಕೊಂಡು ದೆಂದು ಒಂದು ವಾದವೂ, ಅದು ಮೊದಲಿನಿಂದಲೇ ಸೂರ್ಯನ ಬೆಂಬಿಡದುಕೊಂಡೇ ಇತ್ತೆಂದು ಇನ್ನೊಂದು ವಾದವೂ ಇವೆ. ಸೂರ್ಯನು ತನ್ನ ಸುತ್ತು ತಾನು ತಿರುಗುವ ಸಮತಲಕ್ಕೂ, ಸೂರ್ಯನ ಸುತ್ತಲೂ ಗ್ರಹಗಳು ತಿರುಗುವ ಸಮತಲಕ್ಕೂ ೬ ಡಿಗ್ರಿ ಅಂತರವುಳ್ಳ ಇಳಜಾರಿದೆ. ಗ್ರಹಗಳ ಉತ್ಪತ್ತಿಗೆ ಸಹಕರಿಸಿದ ಮೇಘವು ಸೂರ್ಯನ ಬೆಂಬಿಡದು ಮೊದಲಿಂದಲೇ ಇತ್ತೆಂಬುದು ನಿಜವಾದರೆ, ಈ ವ್ಯತ್ಯಾಸವು ಬರಲು ಕಾರಣವು ಗೊತ್ತಾಗುವುದಿಲ್ಲ.

(ಮುಂದಿನ ವಾರ: **ಗ್ರಹಗಳಲ್ಲಿ ಸೇರಿರುವ ಪದಾರ್ಥಗಳು.**)

ಪ್ರಚಲಿತ ಪ್ರಸಂಗ

(ಎನೇ ಪುಟದಿಂದ)

ನೆಹರುರವರ ವೈಯಕ್ತಿಕ ಗೌರವ ಪ್ರತಿಷ್ಠೆಗಳಿಂದ ಅಡಿಪ್ಪೋ ಪಾಲು ಅಧಿಕ ಮಹತ್ವಪೂರ್ಣವಾಗಿದೆ ಎಂದು ಹೇಳಿ, ಪ್ರಧಾನಿ ನೆಹರುರವರ ಧೈರ್ಯವನ್ನು ಪ್ರಂಶಿಸಿದರು.

ಆಂ. ಎಸ್. ಪಿ; ಫಾರ್ವರ್ಡ್ ಬ್ಲಾಕ್ ಮತ್ತು ಪ್ರಸವಾ ಪಕ್ಷದ ಹಿರಿಯ ರೆಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸಿ ಭಾರತ ಸರಕಾರದ ನೀತಿಗೆ ಅಸಮ್ಮತಿ ತೋರಿಸಿದರು. ಸಮ್ಮೇಳನದ ಅಧ್ಯಕ್ಷ ಶ್ರೀ ಎನ್. ಸಿ. ಚಟರ್ಜಿಯವರು "ಇಂದು ನಮ್ಮ ಮುಂದೆ ಬೇರುಬಾರಿಯ ಹೆಸ್ತಾಂತರೀಕರಣದ ಪ್ರಶ್ನೆಯೊಂದೆ; ಇದು ಇಲ್ಲಿಗೆನೇ ಮುಗಿಯಲಾರದು; ಇದೇ ಮಾದರಿಯ ಪ್ರಶ್ನೆಗಳು ಅನ್ಯಕ್ಷೇತ್ರಗಳ ಬಗ್ಗೆಯೂ ಉದ್ಭವಿತವಾಗಬಲ್ಲುವು. ಆಗ ದೇಶವು ಅಪಾಯ ಬಿಂದುವಿನಲ್ಲಿ ಬಂದು ನಿಲ್ಲುವುದು" ಎಂದು ಹೇಳಿದರು.

ಹಿಂದೆ ದೇಶದಲ್ಲಿ ಆಳಿದ ರಾಜ ಮಹಾರಾಜರು ದೇಶದ ಜನತೆಯ ಅಪೇಕ್ಷೆಗಳಿಗೆ ವಿರೋಧವಾಗಿ ವರ್ತಿಸಿದ್ದರಿಂದಲೇ ಅವರ ಪತನವಾಯಿತು ಎಂಬುದನ್ನು ಶ್ರೀ ಅಣೆಯವರು ಸ್ಮರಿಸಿಕೊಂಡರು. ಈಗ, ಭಾರತ ಸರಕಾರವಾದರೂ ಭಾರತೀಯ ಜನತೆಯ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದುದೇ ಆದರೆ, ಅದೂ ಉರುಳುವುದೆಂದವರು ಎಚ್ಚರಿಸಿದರು.

ಪಂಡಿತ ನೆಹರುರವರು ನೂನರೊಡನೆ ತಾನು ಮಾಡಿಕೊಂಡಿದ್ದ ಸಂಧಾನವು ಅನ್ಯಾಯಾಸ್ವರೂಪದ್ದಿದೆಯೆಂದು ಸ್ಪಷ್ಟವಾಗಿ ಈಗ ತಿಳಿಸಿಬಿಡುವುದರಿಂದ ನೆಹರುರವರ ಘನತೆಗೆ ಯಾವುದೇ ಕುಂದೊದಗಲಾರದೆಂದೂ, ರಾಷ್ಟ್ರದ ಘನತೆಗಾಗಿ ಅವರು ಈ ರೀತಿ ಹೇಳಿಬಿಡಬೇಕೆಂದು ಶ್ರೀ ಹೆರೇನ ಮುಖರ್ಜಿ ಅಭಿಪ್ರಾಯಪಟ್ಟರೆಂದು ತಿಳಿದು ಬಂದಿದೆ. ಅವರು ಮತ್ತೊ ಮುಂಚೆ ವರದು, ಈ ಪ್ರಸ್ತಾಪವನ್ನು ವಿರೋಧಿಸಿ, ದೇಶವ್ಯಾಪೀ ಆಂದೋಲನವನ್ನು ವ್ಯಾರಂಭಿಸಬೇಕು ಎಂದೂ ಹೇಳಿದರಂತೆ.

ಪ್ರೋ. ನಿರ್ಮಲ ಬೋಸ್‌ರವರ ನಾಯಕತ್ವದಲ್ಲಿ ಬೇರುಬಾರಿಯ ಪ್ರತಿನಿಧಿ ಮಂಡಲವೊಂದು ಪ್ರಧಾನಿ ನೆಹರುರವರನ್ನು ಇಪ್ಪರಲ್ಲಿಯೆಕಂಡು ನಿಯೋಜಿತ ಹೆಸ್ತಾಂತರಕ್ಕೆ ಪ್ರತಿಭಟನೆಯನ್ನು ಸೂಚಿಸಲಿರುವುದು. ಬೇರುಬಾರಿಯ ಹಸ್ತಾಂತರವು ಕೆಲವೊಂದು ಕಾರಣಗಳಿಂದ ಅವಶ್ಯಕವೆಂದು ಕಂಡುಬರಬಹುದು. ಸೀಮಾವಿವಾದವನ್ನು ನಿಲ್ಲಿಸಿಬಿಡುವುದು ಎರಡು ರಾಷ್ಟ್ರಗಳ ಒಂದಲ್ಪ ಕ್ಷೇತ್ರೀಯ ಪ್ರದೇಶಗಳ ವಿನಿಮಯದಿಂದ ಸಾಧ್ಯವಿರುವುದಾದರೆ, ಇದನ್ನು ಅವ್ಯವಹಾರ್ಯವೆನ್ನುವಂತಿಲ್ಲ. ಸೀಮೆಯಲ್ಲಿ ಸರಳತೆಯನ್ನು ಸಾಧಿಸಲು ಮತ್ತು ಅಲ್ಲಿನ ಗೊಂದಲಗಳನ್ನು ನಿಲ್ಲಿಸಿಬಿಡಲು ಹೇತುವಾಗಬಹುದಾದ ಈ 'ಗಡಿ ಹೊಂದಾಡಿಕೆ'ಯ ಪ್ರಶ್ನೆಯನ್ನು ಗಂಭೀರಾತಿಗಂಭೀರವೆಂದು ಹೋರಾಡುವುದು ಸರಿಯೆಂದೂ ಹೇಳುವಂತಿಲ್ಲ. ಆದರೆ, ಜನತೆಯಲ್ಲಿ ತೋರಿಬರುವ ಅಸಂತುಷ್ಟಿಯು ಇಂತಹ ಒಪ್ಪಂದ ಮತ್ತು ಹಸ್ತಾಂತರಗಳನ್ನು ನಡೆಸುವಾಗ ಸುದೀರ್ಘ ಆಲೋಚನೆ ಅವಶ್ಯವೆಂಬುದನ್ನು ತೋರಿಸುತ್ತದೆ.

ಸಿಂಡಿಕೇಟ್ ಬೇಂಕ್

ಬೇಗನೆ ತೆರೆಯಲ್ಪಡುವ ಎರಡು ಹೊಸ ಶಾಖೆಗಳು

1

ಜಾವಳಿ

(ಚಿಕ್ಕಮಗಳೂರು ಜಿಲ್ಲೆ)

2

ಕೆ. ಯು. ಸಿ. ಧಾರವಾಡ

(ಕರ್ನಾಟಕ ಯುನಿವರ್ಸಿಟಿ ಕೇಂಪಸ್
ಜೋಟಾ ಮಹಾಬಲೇಶ್ವರ, ಧಾರವಾಡ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: ೧೯೨೫.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

Edited, Printed & Published by K. H. Shetty, at the Navayuga Press, Udipi, S. India.

40th year of publication. 22-12-1960 ೪೦ನೇ ವರ್ಷ

ಸಂಪುಟ ೪೦

ನವಯುಗ

Vol. 40

ಸಂಚಿಕೆ ೧೭

No. 17

ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ನೇಪಾಲದಲ್ಲಿ ಪ್ರಜಾಸತ್ತೆ ವಿಫಲಗೊಂಡಿತು

ಪ್ರಧಾನಿ ಬಿ. ಪಿ. ಕೊಯಿರಾಲಾರ ಸರಕಾರ ದೇಶ ಪ್ರಜಾಹಿತಗಳನ್ನು ಕಡೆಗಣಿಸಿ, ರಾಷ್ಟ್ರಘಾತಕ ಪ್ರವೃತ್ತಿಗೆ ಇಳಿಯಿತು; ಇದನ್ನು ಸರಿಪಡಿಸಲು ಅಸಮರ್ಥರಾದ ರಾಜ ಮಹೇಂದ್ರರು ಅಧಿಕಾರವನ್ನೇ ತಮ್ಮ ಕೈಗಳಿಗೆ ತೆಗೆದು ಕೊಳ್ಳಬೇಕಾಯಿತು.

ಅನುವಂಶಿಕವಾಗಿ ತಮಗೆ ನೇಪಾಲದ ಮೇಲೆ ದೊರೆತಿದ್ದ ನಿರಂಕುಶ ಸ್ವಭುತ್ವವನ್ನು ರಾಜರು ಬಿಟ್ಟುಕೊಟ್ಟು, ಜನತೆಯಿಂದಲೇ ಚುನಾಯಿತವಾದ ಪ್ರತಿನಿಧಿ ಮಂಡಳಗಳ ಮೂಲಕ ಪ್ರಜಾಪ್ರಭುತ್ವದ ತತ್ವಗಳಿಗನುಗುಣವಾಗಿ ಅದನ್ನು ಆಳುವ ವ್ಯವಸ್ಥೆಯಾಗಿ ಎರಡೇ ವರ್ಷಗಳೊಳಗೆ ಅಲ್ಲಿ ಪ್ರಜಾಸತ್ತೆಯು ಸತ್ತುಹೋಗುವಂತಾದುದನ್ನು ದುರ್ದೈವದ ಸಂಗತಿಯೆಂದಲ್ಲದೆ ಬೇರೇನೂ ಅನ್ನುವಂತಿಲ್ಲ. ಸುಮಾರು ಅರುವರ್ಷಗಳಿಗೆ ಮೊದಲು ಸಿಂಹಾಸನವೇರಿದ ಅರಸು ಮಹೇಂದ್ರರು ಜನತೆಯ ಅಭಿಲಾಷೆಯೇನೆಂದು ಕಂಡುಕೊಂಡು ಯುಗವಾಣಿಗೆ ಕಿವಿಗೊಟ್ಟು, ಸಂವಿಧಾನ ಪಂಡಿತರಾದ ಸರ್ ಐವೋರ್ ಜೆನ್ನಿಂಗ್ಸರ ಸಹಾಯದಿಂದ ನೇಪಾಲಕ್ಕೊಂದು ಸ್ವತಂತ್ರ ಸಂವಿಧಾನವನ್ನು ರಚಿಸಲು ತಾವಾಗಿಯೇ ಮುಂದಾದುದು. ಇದರನ್ವಯ ರಾಜ್ಯರ ಮೇಯಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ, ಬಹುಮತ ಪಡೆದ ನೇಪಾಲೀ ಕಾಂಗ್ರೆಸ್‌ಗೆ ಸರಕಾರವನ್ನು ಸ್ಥಾಪಿಸುವ ಅವಕಾಶವನ್ನು ಕೊಟ್ಟುದನ್ನು ಪರಿಗಣಿಸುವಾಗ, ಇದೀಗ, ತಾವು ನೆಟ್ಟ ಗಿಡವನ್ನು ಅರಸು ಮಹೇಂದ್ರರು ತಮ್ಮ ಕೈಗಳಿಂದಲೇ ಕಡಿದು ಬಿಡುವಂತಹ ಘಟನೆ ನಡೆದುದು ಶೋಚನೀಯವೇ ಆಗಿದೆ. ರಾಜಧಾನಿಯಲ್ಲಿ ನೇಪಾಲವು ರಾಣಾರ ನಿರಂಕುಶ ಆಡಳಿತೆಯನ್ನು ಕೆತ್ತೊಗೆಯುವುದರಲ್ಲಿ ಸಫಲವಾದರೂ ಪ್ರಜಾಪ್ರಭುತ್ವ ಮೂಡಿರಿಯನ್ನದು ಗಳಿಸಲು ಮತ್ತೂ ಕೆಲವು ವರ್ಷಗಳು ಕಳೆಯಬೇಕಾಯ್ತು; ಮಹೇಂದ್ರರ ಸಿಂಹಾಸನಾರೋಹಣದೊಡನೆಯೇ ಜನಮತವೂ ಅಂಕುರಿಸ ತೊಡಗಿತೆನ್ನಬಹುದು. ಇದರಿಂದ ಅರಸು ಮಹೇಂದ್ರರು ನಿರಂಕುಶ ಪ್ರಶಾಸನದಲ್ಲಿ ಆಸಕ್ತಿಯುಳ್ಳವರಲ್ಲವೆಂದೂ, ನೇಪಾಲದ ರಾಜ್ಯ ಕಾರಣದ ದುಸ್ಥಿತಿಯೇ ಅವರನ್ನು ಈ ಘನಘೋರ ಕೃತ್ಯಕ್ಕೆ ಇಳಿಯುವಂತೆ ಪ್ರೇರೇಪಿಸಿತೆಂದೂ ನಿರ್ವಿವಾದವಾಗಿ ಹೇಳಬಹುದು.

"ಪ್ರಜಾ ಜನರಿಂದ ನಿಯುಕ್ತವಾದ ಸರಕಾರವು ದೇಶಕ್ಕೆ ಭದ್ರತೆಯನ್ನು ತಂದುಕೊಟ್ಟು, ಅದನ್ನು ಪ್ರಗತಿ ಪಥದಲ್ಲಿ ಸಾಗಿಸಿಕೊಂಡು ಹೋಗುವುದೆಂದು ನಾನು ನಂಬಿದ್ದೆ; ಆದರೆ, ದೇಶದಲ್ಲಿ ಪಕ್ಷ-ಪಂಗಡಗಳಲ್ಲಿ ವ್ಯಕ್ತಿ ಸ್ವಾರ್ಥವು ಬೆಳೆಯುತ್ತ ಬಂದು, ಇದರಿಂದ ರಾಷ್ಟ್ರವಿಘಾತಕ ಶಕ್ತಿಗಳಿಗೆ ಬಲವೂ ಪ್ರೋತ್ಸಾಹವೂ ದೊರೆತು, ದೇಶದ ಆಡಳಿತೆಯು ಸ್ಥಗಿತಗೊಳ್ಳುವಂತಾಗಿದೆ; ಆರಾಜಕತೆಯು ರಾಷ್ಟ್ರವ್ಯಾಪಿಯೂ ಗುತ್ತಿದೆ. ಈ ಸರಕಾರಕ್ಕೆ ಅದೆಷ್ಟೇ ಎಚ್ಚರಿಕೆಯನ್ನಿತ್ತರೂ ಪರಿಸ್ಥಿತಿ ಸುಧಾರಿಸುವ ಸಲ್ಲಕ್ಷಣಗಳು ಗೋಚರಿಸಲಿಲ್ಲವಾದುದರಿಂದ, ದೇಶದ ಸಾರ್ವಭೌಮತೆಯನ್ನೂ ಸಮಗ್ರತೆಯನ್ನೂ ಕಾಯ್ದುಕೊಳ್ಳುವುದು ಮತ್ತು ದೇಶದಲ್ಲಿ ಶಾಂತತೆಯನ್ನುಳಿಸಿಕೊಂಡು ಬರುವುದು ನನ್ನ ಹೊಣೆಗಾರಿಕೆಯಾಗಿರುವುದರಿಂದ, ನಾನೀ ಕ್ರಮವನ್ನು ಕೈಗೊಳ್ಳುತಿದ್ದೇನೆ" ಎಂದು ತಮ್ಮ ಆಕಾಶವಾಣಿ ಭಾಷಣದಲ್ಲಿ ಅರಸು ಮಹೇಂದ್ರರು ತಮ್ಮ ಕೃತ್ಯಗಳಿಗೆ ಕಾರಣವನ್ನು ತಿಳಿಸಿದ್ದಾರೆ. ಈ ಕಾರಣಗಳನ್ನು ನಾವು ಮನಗಾಣುವುದಾದರೆ, ಪ್ರಧಾನಿ ಕೋಯಿರಾಲಾರ ಸರಕಾರವು ರಾಷ್ಟ್ರಹಿತ ಸಾಧಿಸುವಲ್ಲಿ ತಪ್ಪಿಬಿದ್ದಿದೆಯೆಂದೂ ಇದು ಪದಚ್ಯುತಗೊಳ್ಳಬಿದ್ದರೆ, ರಾಷ್ಟ್ರದ ಭದ್ರತೆಗೇನೇ ದಕ್ಕೆ ತಗಲುತ್ತಿತ್ತೆಂದೂ ಹೇಳಬಹುದು. ಜನತೆಯ ಹಿತವನ್ನು ಕಡೆಗಣಿಸಿ ರಾಜ್ಯಕೇಯವನ್ನು ವೈಯಕ್ತಿಕ ಹಿತಗಳಿಗಾಗಿ ಬಳಸಿಕೊಳ್ಳುವುದು ಅಲ್ಲಿ ಪರಿಪಾಠವಾಗಿತ್ತೆಂದೂ ಇದನ್ನು ತಿಳಿದ ಅರಸರು ಉಗ್ರ ಕ್ರಮವನ್ನೇ ಕೈಗೊಳ್ಳಬೇಕಾಯಿತೆಂದೂ ಹೇಳಬಹುದು. ಕೋಯಿರಾಲಾ ಸರಕಾರವು ಜನಹಿತವನ್ನು ಬದಿಗಿಟ್ಟು ಮುಂದುವರಿಯುತ್ತ, ಜನತೆಯ ಪ್ರೀತಿ ವಿಶ್ವಾಸಗಳಿಗೆ ಎರವಾಗುತ್ತಿರುವುದನ್ನು ಕಂಡು ಅದಕ್ಕೆ ಆಗಾಗ ಸೂಕ್ತ ಎಚ್ಚರಿಕೆಗಳನ್ನಿತ್ತರೂ ಸರಕಾರ ತನ್ನ ಪಾರಿ ಬಿಡದಿರಲು ಅದನ್ನೇ ನುನೆಗೆ ಕಳಿಸಬೇಕಾದ ಅವಕಾಶವೊದಗಿತೆಂಬುದನ್ನೂ ನಾವು ತಿಳಿದುಕೊಳ್ಳಬಹುದು.

ಗ್ರಾಮೀಣ ಜನತೆಗೊಂದು ವರದಾನ

೧. ಅಮೆರಿಕೆಯಲ್ಲಿ ಒಟ್ಟು ೭೦೪೦ ಲಕ್ಷ ರೇಡಿಯೊ ಮತ್ತು ಟೆಲಿವಿಜನ್ ಗ್ರಾಹಕಗಳಿವೆ. ಮನೋರಂಜನೆಯೇ ಇವುಗಳ ಸ್ವಧಾನ ಕಾರ್ಯ ಕ್ರಮವಾದರೂ ಶೈಕ್ಷಣಿಕ, ಬೋಧಕ, ಸ್ಫೂರ್ತಿದಾಯಕ ಕಾರ್ಯಕ್ರಮಗಳೂ ಇಲ್ಲದಿಲ್ಲ. ಗ್ರಾಮೀಣ ಪ್ರದೇಶದ ಜನತೆಗೆ ಆಧುನಿಕ ಪ್ರಸಂಚದೊಡನೆ ಸಂಪರ್ಕವಿಟ್ಟುವ ಈ ರೇಡಿಯೋ ಹಾಗೂ ಟೆಲಿವಿಜನ್‌ಗಳು ವರದಾನ ಸದೃಶವಿವೆ. ೨. ಅಮೆರಿಕೆಯಲ್ಲಿ ೪,೪೦೦ ವ್ಯಾಪಾರಿ ಮತ್ತು ಖಾಸಗಿ ಕ್ಷೇತ್ರಗಳ ರೇಡಿಯೋ ಕೇಂದ್ರಗಳೂ ೭೦೦ ಟೆಲಿವಿಜನ್ ಕೇಂದ್ರಗಳೂ ಇರುತ್ತವೆ. ೩. ಅನಾವೃತ್ತ ಟೆಲಿವಿಜನು ಅಮೆರಿಕೆಯಲ್ಲಿ ಅಗ್ರ ಸ್ಥಾನ ಗಳಿಸುತ್ತಿವೆ. ಇದರ ನೂರಾರು ಚಿಕಿತ್ಸಾತಂತ್ರದ ಅಧ್ಯಾಪನ ಹಾಗೂ ಮಾರಾಟದ ಕೂಟಗಳನ್ನೂ ನಡೆಸುವುದು ಸಾಧ್ಯವೆನಿಸಿದೆ.

ಕೋಯಿರಾಲಾ ಸರಕಾರದ ನೀತಿಯು ಬಹುಮತ ಜನತೆಗೆ ಸರಿಹೊಂದದಿದ್ದುದರಿಂದ, ಆ ಬಗ್ಗೆ ಅದು ತುಂಬ ಅಸಂತುಷ್ಟವಾಗಿತ್ತು; ಮೂತ್ರವಲ್ಲ, ಈ ಸಂಗತಿಯು ಅರಸು ಮಹೇಂದ್ರರ ಕಿವಿಗಳಿಗೂ ಕೇಳಿದ್ದಿತ್ತು. ತಪ್ಪು ದಾರಿಯಲ್ಲಿ ನಡೆಯುತಿದ್ದ ಸರಕಾರವನ್ನು ಸರಿದಾರಿಗೆ ತರಲು ಅರಸರು ಆದಷ್ಟು ಪ್ರಯತ್ನಿಸಿದರೂ ಅವ ಕೃತಕೃತ್ಯರಾಗದಿರಲು ತಮ್ಮ ಅಂತಿಮ ಅಧಿಕಾರವನ್ನೇ ಚಲಾಯಿಸಬೇಕಾಗಿ ಬಂತು. ಪದ್ಯ ಮಂತ್ರಿ ಮಂಡಳಿಯು ಪದಚ್ಯುತವಾದುದು ಮಾತ್ರವಲ್ಲ, ಆಡಳಿತೆಯು ಬಗ್ಗೆ ಮುಂದಿನ ವ್ಯವಸ್ಥೆ ನಡೆಯುವವರೆಗೆ ಇವರೇ ಸರ್ವಾಧಿಕಾರಿಯೂ ಆಗುವಂತಾಯಿತು. ನವದೆಹಲಿಯಲ್ಲಿರುವ ನೇಪಾಲದ ರಾಯಭಾರಿ ಕಚೇರಿಯಿಂದ ಬಂದಿರುವ ವರದಿಗಳಂತೆ ಅರಸು ಮಹೇಂದ್ರರು ಜನತೆಯ ಬೇಡಿಕೆಯಂತೆ ಈ ಕ್ರಮಗಳನ್ನು ಕೈಗೊಂಡಿದ್ದಾರೆಂದು ತಿಳಿದುಬಂದಿದೆ. ಬಿಲ್ಲದೇ ಪಂಡಿತ ನೆಹರುರವರ ಹೇಳಿಕೆಯಂತೆ, ನೇಪಾಲದ ಅರಸರು ಅಲ್ಲಿನ ಸಜೀವ ಸಂಸ್ಥುಟದ ಕಾರ್ಯನೀತಿಯಿಂದ ಕೆಲ ತಿಂಗಳುಗಳ ಹಿಂದೆಯೇ ಅಸಂತುಷ್ಟರಾಗಿದ್ದರೆಂದೂ ಈ ಅಸಂತುಷ್ಟಿಯು ಪರಿಣಾಮವೇ ಈ ಸ್ಥಿತ್ಯಂತರಗಳೆಂದೂ ಹೇಳಬಹುದು. ಒಟ್ಟಿನಲ್ಲಿ ಮಂತ್ರಿಮಂಡಳಿಯು ರಾಷ್ಟ್ರಘಾತಕ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ರಾಷ್ಟ್ರವನ್ನುಳಿಸಲು, ಆಧಃಪತನದಿಂದ ನೇಪಾಲೀಯರನ್ನುಳಿಸಲು ಅರಸರು ಈ ಕ್ರಮವನ್ನು ಕೈ

(ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ನಿರ್ವಾಹಕ ಸಂಪಾದಕರು:
ಕೆ. ಜೋನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಪೊಲಬಗನ್ನಾಗಲೀ ಏಜೆಂಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಪರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯ ಏರ್ಪಡಿಸಿರುವುದು.

ಕಥಾ ವಿಹಾರ

ತಾರಾಲೋಕದಲ್ಲಿ ವಿಹಾರ

ನಿನಗೂ ನಟನಾಗಬೇಕು, ವಿಶ್ವವಿಖ್ಯಾತನಾಗಬೇಕು ಎಂದು ಹಗಲಿರುಳು ಹಂಬಲಿಸುತ್ತಿದ್ದ ಚಂದ್ರಣ್ಣ ಒಂದು ದಿನ ಹಾಗೆ ಆಗಿಯೇ ಬಿಟ್ಟ. ಆದರೆ, ಆತ ಕಣ್ಣು ತೆರೆದಾಗ ಈ ವಿಚಾರವೆಲ್ಲವೂ ದುರ್ಭರವೆನಿಸಿತು!

ಶ್ರೀ "ನೀರಜ"

'ನಮಸ್ತೆ' ಎಂದೆ ನೈಜೋಡಿಸಿ ಪ್ರತಿಯೂಗಿ ಮುಗುಳು ನಗೆಯ ಸ್ವಾಗತದೊಂದಿಗೆ "ನಮಸ್ತೆ" ಎಂದ, ಕುಳಿತುಕೊಳ್ಳಲು ತನ್ನ ಎದುರಿನ ಕುರ್ಚಿಯನ್ನು ತೋರಿಸಿದ—ಅನ್ಯಕ್ಕೆ. ನಾನು ಕುಳಿತೆ ನಿಶ್ಯಬ್ದ ವಾತಾವರಣವನ್ನ ಬದಲಿಸ ತ್ತಾ ಅವರೆಂದರು, "ನಿಮ್ಮ ಊರು?" "ಕುಂದಾಪುರ"—ನಾನೆಂದೆ. "ಹೆಸರ?"—'ಚಂದ್ರಣ್ಣ' 'ವಿದ್ಯಾಭ್ಯಾಸ?'—S S. L. C.' 'ಯಾವ್ಯಾವ ಭಾಷೆಗಳು ಬರುತ್ತವೆ?"—'ಕನ್ನಡ, ಇಂಗ್ಲೀಷು, ಹಿಂದಿ.' "ಆ.....ಈ ವೇಷಲು ಯಾವುದಾದರು ಚಿತ್ರದಲ್ಲಿ ನಟಿಸಿದ್ದೀರಾ?"—'ಇಲ್ಲ.' 'ರಂಗಭೂಮಿ ಯಲ್ಲಿ?' 'ಇಲ್ಲ...!'

'ಇಲ್ಲ'ವೆಂಬ ಎರಡಕ್ಷರವು ನನ್ನ ಬಾಯಿಯಿಂದೇನೊ ಹೊರ ಹಾಯಿತು! ಆದರೆ ನನ್ನ ಭವಿಷ್ಯದ ಗತಿ?....ಕನಸಾಗಿದ್ದು ನೆನಸಾಗಲಿರುವ ನನ್ನಾಶೆಗೆ 'ಇಲ್ಲ'ವೆಂಬ ಶಬ್ದವು ಅಪಸವ್ಯ ಪ್ರಾಯವಾದರೆ?.... ಹೀಗೆ ತರತರದ ಅನುಮಾನದ ಆಂದೋಲನದಲ್ಲಿ ತೇಲುತ್ತ ಪ್ರತಿಕ್ರಿಯೆಯ ನೀರೀಕ್ಷೆಯಲ್ಲಿ ಅವರ ಮುಖವನ್ನೊಮ್ಮೆ ಈಕ್ಷಿಸಿದೆ.

ಮೊದಲಿನಂತೆ ಮುಗುಳು ನಗೆಯನ್ನು ಗುಳುತ್ತಾ, "ನಟನೆಯ ಪೂರ್ವ ಅನುಭವವಿಲ್ಲದೆ ನನ್ನ ಚಿತ್ರದ ಪ್ರಧಾನ ಭೂಮಿಕೆಯಲ್ಲಿ ನಟಿಸುತ್ತೀನೆಂದು ಆಶ್ವಾಸನೆಕೊಡಬಲ್ಲಿರಾ?" ಎಂದರು.

ನನ್ನ ಭವಿಷ್ಯ ಪರೀಕ್ಷೆ ನಡೆಯುತ್ತಿದೆಯಲ್ಲಿ!....ಗಟ್ಟಿದ ಕನಸಿನ ಕಟ್ಟಡವು ಕುಸಿಯುವುದು—ಊ—ಎಸೆಯುವುದು—ಇಲ್ಲೆ! ಎಲ್ಲಾ ಭಾರವನ್ನು ದೇವರ ಮೇಲೆ ಹಾಕಿದೆ. ಆತ್ಮವಿಶ್ವಾಸಿಯಾದ ನಾನು ಹೆಚ್ಚಿನ ಯೋಜನೆಗೆ ಬಲಿ ಬಿಳದೆ ಅವರ ಮಾತಿಗೆ 'ಹೂಂ' ಗುಟ್ಟಿ, ಒಪ್ಪಿಗೆಯಿತ್ತೆ.

ನಗರದ 'V M S' ಸ್ಟುಡಿಯೋ'ದ ಮಾಲಕರೂ, ಖ್ಯಾತ ಛಲಚ್ಚಿತ್ರ ನಿರ್ಮಾಪಕ—ನಿರ್ದೇಶಕರಾದ ವಿ. ಎಂ. ಶುಬ್ಬರಾಯರು ತಮ್ಮ ಮುಂಡನ ಸಾಮಾಜಿಕ ಕಲಾಕೃತಿ 'ವಿಚಿತ್ರವಿಶ್ವ'ಕ್ಕೆ ನೂತನ ನಾಯಕನ ಅರಿಕೆಯುಳ್ಳಿದ್ದಾಗ, ಅಭ್ಯರ್ಥಿಯಾದ ನನ್ನೊಡನೆ ಮೇಲಿನಂತೆ ಪ್ರಶ್ನೋತ್ತರಗಳು ನಡೆದವು.

ಚಿತ್ರದ ನಾಯಕ ನಟನಿಗೆ ಇರಬೇಕಾದ ಅರ್ಹತೆ (?)ಗಳಿದ್ದು, ಉತ್ತಮ ನಿರ್ದೇಶನದಿಂದ ಖ್ಯಾತ ನಟನಾಗಬಲ್ಲನೆಂಬುದನ್ನು ಅರಿತ ಶ್ರೀಯುತರು ವಿಚಿತ್ರ ವಿಶ್ವಕ್ಕೆ ನನ್ನನ್ನು ನಾಯಕನನ್ನಾಗಿ 'ಬುಕ್' ಮಾಡಿಕೊಂಡರು—ಬೇಕಾದ ಕರಾರುಗಳನ್ನ ಬರಸಿಕೊಂಡರು. ನನ್ನ ಜೀವನಕ್ಕೆ ಬೇಕಾದ ಅನುಕೂಲತೆಗಳನ್ನೆನ್ನದಿಸಿ, ವೆಚ್ಚಕ್ಕಾಗಿ ಒಂದಿಷ್ಟು 'ಎಡ್ವಾನ್ಸ್'ನ್ನು ದಯಪಾಲಿಸಿದರು.

ಹೊರತಾಗಿ ಚಿತ್ರಕ್ಷೇತ್ರಕ್ಕೆ ಕಾಲಿರಿಸಿದ, ಜೀವನದ ಕಹಿ ಅನುಭವದಲ್ಲಿ ಬೆಕಸ್ಮ ತೊಳಲಾಡಿದ ನನಗೆ ಸಿಕ್ಕಿರುವುದೆ ಸ್ವರ್ಗಪ್ರಾಯವಾದದ್ದು. ನನ್ನ ಅದೃಷ್ಟದ ಹೆಬ್ಬಾಗಿಲು ತೆರೆದಿರಬಹುದೆಂಬ ಆಶೆಯಿರುವುದನ್ನು ನೆನೆದು ಅಂತರಂಗವು ಹಾಡಿ ಕುಪ್ಪಳಿಸಿತು!

ಮರುದಿನ ಸಾಯಂಕಾಲ ಶ್ರೀ ರಾವ್ ರವರು 'ವಿಚಿತ್ರವಿಶ್ವ'ದ ಉಳಿದ ಪಾತ್ರವರ್ಗದವರ ಸಹಾಯಕ ವರ್ಗದವರ ಪರಿಚಯವನ್ನು ಮಾಡಿಸಿ ಕೊಟ್ಟರು ಹೊಸ ಜೀವನದ ಹೊಸಲನ್ನ ಹತ್ತಿ ಹೊಸ ಬರ ಆತ್ಮೀಯತೆಯಲ್ಲಿ ಮೈಮರೆತೆ!

'ವಿಚಿತ್ರವಿಶ್ವ'ದಲ್ಲಿ ನನ್ನೊಟ್ಟಿಗೆ ನಾಯಕಿಯಾಗಿ ನಟಿಸಲಿರುವವಳು—'ವಿನೂತನ ಕುಮಾರಿ!' ಹೆಸರಿಗೆ ತಕ್ಕಂತೆ ನಿತ್ಯ ಜೀವನದಲ್ಲಿ ತನ್ನ ರೂಪಕ್ಕಿಂತ ಮುನ್ನ ಡಿಯೂಗಿ ಶೃಂಗಾರಿಕೊಳ್ಳಬಲ್ಲ ವಿಚಿತ್ರ ತಾರಾಮಣಿ! ಮೆಚ್ಚಿದವರನ್ನು ಮನಬಿಚ್ಚಿ! ಹೃದಯ ಹರಿದು ಮಾತಾಡಬಲ್ಲ ಚತುರೆ, ... ಕಿಂಗಸರ ಸಹವಾಸವರಿಯದ ಮುಗ್ಧ ನನ್ನನ್ನು ಕೆಲವೇ ದಿನಗಳಲ್ಲಿ 'ತಾರಾಶ್ರೀ' ಗಳೊಡನೆ ಬೆರೆತು ಕಲೆಯುವುದಕ್ಕೆ ಗುರುವಾದಳು 'ತ್ರಿಭಾಷ ತಾರೆ'ಯೆಂದು ಕೀರ್ತಿವೆತ್ತ ವಿನೂತನ ಕುಮಾರಿ. ಆಕರ್ಷಕವಾದ ಅವಳ ಸುನುಧುರ ಸಾನ್ನಿಧ್ಯವು ನನ್ನ ಜೀವನವನ್ನು ಧನ್ಯಮಯವಾಗಿರಿಸಿತ್ತು.

ಚಿತ್ರದ ಮಾಹೂರ್ತ ಸಮಾರಂಭಕ್ಕೆ ಒಂದುವಾರ ಉಳಿದಿದೆ ಎನ್ನುವಾಗ, ಚಿತ್ರೀಕರಣದ ಪೂರ್ವಸಿದ್ಧತೆಗಳು ಭರದಿಂದ ಸಾಗಿದ್ದವು. ತನ್ನಪ್ಪೆ, ಕಲಾವ ಕ್ಲಿಷ್ಟ, ಸನ್ನಿವೇಶಾಲ್ಲಿಯ ಸಂಭಾಷಣೆ, ನಟನೆಯ ಕುರಿತು ದಿಗ್ದರ್ಶಕ ಶ್ರೀ ರಾವ್‌ರವರು ಸೂಕ್ತ ಸಲಹೆಗಳನ್ನು ಕೊಡುತ್ತಿದ್ದರು.

ಅಷ್ಟರಲ್ಲೇ ನಾಡಿನ ಪ್ರಮುಖ ಪತ್ರಿಕೆಗಳ ಮುಖಪುಟ ಕ್ಕಾಗಿ, ನನ್ನ ವಿಚಿತ್ರ 'ಭೂಷಣ'ದ ಫೋಟೋಗಳು ಹೋದವು. ಕನ್ನಡದ ಖ್ಯಾತ ಛಲಚ್ಚಿತ್ರ ನಿರ್ದೇಶಕ ಶ್ರೀ ರಾವ್‌ರವರ ಸಾಮಾಜಿಕ ಕಲಾಕೃತಿ 'ವಿಚಿತ್ರವಿಶ್ವ'ದಲ್ಲಿ ನಾಯಕನಾಗಿ ನೂತನ ನಟ ಚಂದ್ರ ಕುಮಾರ್!" (ಎಂಥ ಕಚ್ಚಾ ಹೆಸರನ್ನೆ ಆಗಲಿ ಸಿನೀಮಾ ಪ್ರಪಂಚವು 'ಕುಮಾರ್, ಕುಮಾರಿ' ಎಂಬ ಲಲಿತ ಶಬ್ದದಿಂದ ಮೆರಗನ್ನುಹುಟ್ಟಿಸುತ್ತದೆ!) ಎಂಬ ತಲೆಬರಹದೊಂದಿಗೆ ಒಂದು ಸಾಧಾರಣಿಯೆ ಹೊರಟು, ಎಲ್ಲೆಲ್ಲೂ ಪೇಪರುಗಳಲ್ಲಾಗಿ ಹೊಡೆಬಡಿತವೆ ಪ್ರಾರಂಭವಾಯ್ತು!

ಚಿತ್ರದ ಪ್ರಾರಂಭೋತ್ಸವವು ಶ್ರೀಯುತರ ಸ್ವಂತ ಸ್ಟುಡಿಯೊ 'ಹಿಮಾಲಯ'ದಲ್ಲಿ ನೆರವೇರಿತು. ಅಂದೇ ಚಿತ್ರದ 'ನಾಯಕ' ಮತ್ತು 'ನಾಯಕಿ'ಯರ ಪ್ರೇಮ-ಕ್ರಣಯ ದೃಶ್ಯವೊಂದು ಚಿತ್ರೀಕರಣವಾಯ್ತು! ಅಂದರ್ಥವೊಂದರಲ್ಲಿ ನಾಯಕಿಗೆ ವಿನೂತನ ಕುಮಾರಿಗೆ ಚುಂಬನ ನೀಡಬೇಕಾಗುತ್ತದೆ. ಮಂದಹಾಸದ ಪ್ರಫುಲ್ಲವದನಳಾಗಿ, ಮನಸೆಳೆಯುವ ವಿಚಿತ್ರ ವಸ್ತ್ರಾಭರಣದಿಂದ ಬಳಕುವ ಪಿಸ್ತೂಲೆತೆಯನ್ನು ಬರಸೆಳೆದ ಕೊಟ್ಟ-ಪ್ರತಿಪಡೆವ ವಿಚಿತ್ರ ಬಂಧನವು ನೈಜ ರೋಮಾಂಚನಗೊಳಿಸಿತ್ತು!.... ಹೊಸ ವನಪೊಂದರಲ್ಲಿ ಶೀತಳ ಮಂದ ಮಾರುತವು ಬೀಸುವಾಗ, ಶ್ಯಾಮಲವರ್ಣ ಧರಿಸಿದ ಭೂತಾಯಿ ಮೈಗೆ ಇದಿರು ಬದಿರಾಗಿ ಒರಗಿ 'ಪ್ರಿಯ!....' 'ಪ್ರಿಯಕರ!....' 'ಪ್ರಿಯೆ!....' ಎಂದು ತರತರದ ಪ್ರೇಮ ಸಲ್ಲಾಪಗಳನ್ನ ಮೆಲ್ಲುವಾಗ ಹೃದಯ ಪುಳಕಿತವಾಗಿತ್ತು!

ಆದಿನ ನನ್ನ ಆದ್ವಿತೀಯ ಮಹೋಜಾಭಿನುತ ನಿರ್ದೇಶಕ ಶ್ರೀ ರಾವ್‌ರವರ ಮೆಚ್ಚಿಗೆ ಗಳಿಸಿತಲ್ಲದೆ, ಇನ್ನೂ ಜನಿಷ್ಟಿತ ವಸ್ತುವಿಷ್ಟಿಯಲ್ಲಿ ನವ ನನ್ನ ಸಾಮಾನ್ಯ ಜಾತಿಸಾಮರ್ಥ್ಯವೆಂದು ನಿಶ್ಚೈಸಲಾಯಿತು.

ಬಿಡುಗಡೆಗೊಂಡ 'ವಿಚಿತ್ರ ವಿಶ್ವ'ವು ಸ್ವದೇಶದಲ್ಲಲ್ಲದೆ, ವಿದೇಶಗಳಲ್ಲೂ ಶತ ಮಾನೋತ್ಸವಗಳನ್ನು ಆಚರಿಸಿತು. ಇದರಿಂದ ಕನ್ನಡ ಚಲನ ಚಿತ್ರದ ಜಯ ಭೇರಿಯ ದಶದಿಕ್ಕುಗಳಿಗೆ ಹರಡ ವಂತಾಯಿತು. ಲಂಡನಿನ ಚಿತ್ರ ಪ್ರದರ್ಶನವೊಂದರಲ್ಲಿ ಪ್ರಥಮ ಬಹುಮಾನ ಪಡೆದು, ಸರ್ಕಾರ—ಜನತೆಯಿಂದ ಪ್ರಶಂಸಿಸಲ್ಪಟ್ಟಿತು. ಪರಿಣಾಮವಾಗಿ ಚಿತ್ರ ರಸಿಕರ ಒಂದು ಕಣ್ಣು ನಾನಾದರೆ, ಮತ್ತೊಂದು ವಿನೂತನ ಕುಮಾರಿಯಾದಳು ಜನಪ್ರಿಯ ತಾರಾ ಜೋಡಿ ಯಾಗಿ.

'ವಿಚಿತ್ರ ವಿಶ್ವ'ದ ದಿಗ್ವಿಜಯದಿಂದಾಗಿ, ಕನ್ನಡ ನಾಡಿನ ಕನ್ನಡ ಚಿತ್ರ ಳಿಗಾಗಿ ವಿಭಿನ್ನ ಭಾಷಾ ನಟೀಮಣಿಗೆ ಶಂಖು ಪೂರೈ

(೧೦ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬ್ಯಾಂಕಿಂಗ್ ಸೇವೆ
ದಿ. ಪಂಗಾಳ ನಾಯಕ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ ರೂ. **87-00** 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. **100-00** ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಶೇಕಡಾ 4½ರ ವರೆಗೆ.
ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ
ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು ಇತ್ಯಾದಿ.
(ಸ್ಥಾಪನೆ: 1920)

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಎಲ್ಲ ಗ್ರಹಗಳೂ ಏಕರೀತಿಯ ಪದಾರ್ಥಗಳಿಂದ ಕೂಡಿಕೊಂಡಿವೆ —ಎಂಬುದು ಸರಿಯಾದ ಪರೀಕ್ಷಣೆಯಿಂದ ತಿಳಿದು ಬಂದಿದೆ. ಪ್ರಸಿದ್ಧ ಖಗೋಳ ಶಾಸ್ತ್ರಜ್ಞರಾದ **ಶ್ರೀ ಬೋರಿಸ್ ಲೆವಿನ್**ರವರ ಪುಸ್ತಕದ ಸಾರಾಂಶವನ್ನು ಶ್ರೀ ಎಂ ರಂಗ ರಾವು ಕನ್ನಡಿಗರಿಗೆ ಒದಗಿಸುತ್ತಿದ್ದಾರೆ.

೬. ಗ್ರಹಗಳಲ್ಲಿ ಸೇರಿರುವ ಪದಾರ್ಥಗಳು

ಎಲ್ಲದರಲ್ಲೂ ಜಾತಿ ಒಂದೇ—

ಸೂರ್ಯನ ವೇಲ್ಪರೆಯಲ್ಲಿರುವ ರಾಸಾಯನಿಕ ಪದಾರ್ಥಗಳೂ, ಭೂಮಿಯ ಪರುವಂಥವೂ ಒಂದೇ ಆದುದರಿಂದ, ಸೂರ್ಯನಿಂದ ಹೊರಟ ಪದಾರ್ಥವೇ ಗ್ರಹಗಳಾಗಿ ರೂಪೊಂದಿತೆಂದು ಶಾಸ್ತ್ರಜ್ಞರು ಾದಿಸುತ್ತಿದ್ದರು. ಇತ್ತೀಚೆಗಿನ ಸಂಶೋಧನೆಯಿಂದ ಒಂದು ವಿಷಯವು ರುಜುವಾತಾಯಿತು. ಅದೇನೆಂದರೆ, ನಕ್ಷತ್ರಗಳೆಲ್ಲವೂ ಸೂರ್ಯ, ನಕ್ಷತ್ರ ಮಂಡಲದಲ್ಲಿರುವ ನೀಹಾರಿಕೆಗಳಲ್ಲಿಯೂ ಇರುವ ರಾಸಾಯನಿಕ ಪದಾರ್ಥಗಳು ಒಂದೇ ಆಗಿರುವುದು ಮಾತ್ರವಲ್ಲದೆ, ಒಂದೇ ವಿಧ ಪಾಲುಗಳಾಗಿಯೂ ಇವೆ.

ಈ ಕಾರಣದಿಂದ ಗ್ರಹಗಳ ಉತ್ಪತ್ತಿಗೆ ಸಹಾಯವಾದ "ಮೇಘ"ವು ಮೊದಲಿಗೆ ಒಂದೇ ಸೂರ್ಯನ ಬೆಂಬಿಡಿದಿದ್ದರೂ, ಮಧ್ಯದಲ್ಲಿ ಸೂರ್ಯನು ಸಂಪಾದಿಸಿಕೊಂಡ ಪದಾರ್ಥಗಳಿಗೆ ಕ್ರಿಯೆಗೆ ಒಂದೇ ಸರಿ

ಸೃಷ್ಟಿಯಲ್ಲಿ ಎಲ್ಲಾ ಪದಾರ್ಥಗಳಿಗಿಂತಲೂ ಹೆಚ್ಚಾಗಿ, ಆಂದರೆ ಸೂರಕ್ಕೆ ೯೯ ಪಾಲು ಇರುವಂಥಾದ್ದು ಜಲಜನಕ (ಹೈಡ್ರೊಜನ್.) ಮೂಲಪದಾರ್ಥಗಳೊಳಗೆ ಎಲ್ಲಿ ಇದುವೇ ಹಗುರಾದುದು. ಇದರ ತವಾಯ ಹೆಚ್ಚಾಗಿರುವಂಥದ್ದು, ಶೀತ ರ್ಯದ್ದು ಹೀಲಿಯಂ. ಈ ಹೀಲಿಯಂ ಸಯುರೂಪದ್ದು. ಇದು ಮತ್ತಾವ ಪದಾರ್ಥದೊಂದಿಗೂ ರಾಸಾಯನಿಕ ಸಂಯೋಗ ಹೊಂದದು. ಹೀಲಿಯಂನ ತರಹಾಯ, ಸೃಷ್ಟಿಯಲ್ಲಿ ಹೆಚ್ಚಾಗಿಯಿವುದು ನಿಮವಾಗಿ, ಪ್ರಾಣವಾಯು, ನೈಟ್ರೋಜನ್, ಕಾರ್ಬನ್; ಇವು ಮಾತ್ರ ಕೂಡಿ ಇವೆ. ಸಿಲಿಕಾನ್ ಲೋಹಗಳೂ ಸೃಷ್ಟಿಯಲ್ಲಿ ಬಹಳ ಕಡಮೆ. ಅನುಕೂಲ ಪರಿಸ್ಥಿತಿಗಳಲ್ಲಿ ಹೈಡ್ರೊಜನ್ ಪರಮಾಣುಗಳು ಎರಡೆರಡು ಕೂಡಿ ಒಂದೊಂದು ಹೈಡ್ರೊಜನ್ ಅಣುಗಳಾಗಿ ವಿಪರ್ಯಯುತ್ತವೆ. ಹೈಡ್ರೊಜನ್ ಪರಮಾಣುಗಳು ಪ್ರಾಣವಾಯು ಪರಮಾಣುಗಳೊಂದಿಗೆ ಸಂಯೋಗವಾಗಿಸಿಕೊಳ್ಳುವುದರಿಂದ ನೀರೂ, ನೈಟ್ರೋಜನ್ ಪರಮಾಣುಗಳೊಂದಿಗೆ ಸಂಯೋಗ ಹೊಂದುವುದರಿಂದ ಅಮೋನಿಯವೂ ಏರ್ಪಡುತ್ತವೆ. ಸೃಷ್ಟಿಯಲ್ಲಿ ಸಿಲಿಕಾನ್, ಲೋಹಗಳು ಬಹಳ ಕಡಮೆಯಾದುದರಿಂದ ಕಲ್ಲು ಪದಾರ್ಥವು ಹೆಚ್ಚಾಗಿ ಏರ್ಪಡುವುದಿಲ್ಲ.

ಸೂರ್ಯನ ಸುತ್ತಲೂ ಇರುವ ಮೇಘದಲ್ಲಿ ಯಾವ ಯಾವ ಭೌತಿಕ ರಾಸಾಯನಿಕ ಪರಿಣಾಮಗಳುಂಟಾಗಿ ಗ್ರಹಗಳೇ ಏರ್ಪಟ್ಟುವೋ, ಆ ವಿಧಾನಗಳಿಂದಲೇ ಗ್ರಹಗಳಲ್ಲಿರುವ ವ್ಯತ್ಯಾಸಗಳನ್ನು ಕೂಡಾ ವರಿಸಬಹುದು. ಸೂರ್ಯನಿಗೆ ಸಮೀಪದಲ್ಲಿರುವ ನಾಲ್ಕು ಗ್ರಹಗಳು—ಬುಧ, ಶುಕ್ರ, ಭೂಮಿ, ಕುಜಗಳು ಚಿಕ್ಕವು. ಸೂರ್ಯನಿಗೆ ದೂರದಲ್ಲಿ ಉಳಿದಿರುವ ಐದು ಗ್ರಹಗಳೂ ಬಹಳ ದೊಡ್ಡವು ಆದರೆ ಈ ಚಿಕ್ಕ ಗ್ರಹಗಳ ಸಾಂದ್ರತೆಯೊಂದಿಗೆ ಹೋಲಿಸಿದರೆ, ದೊಡ್ಡ ಗ್ರಹಗಳ ಸಾಂದ್ರತೆ ಬಹಳ ಕಡಮೆ. ಸೂರ್ಯನಿಗೆ ಹತ್ತಿರದಲ್ಲಿರುವ ನಾಲ್ಕು ಗ್ರಹಗಳಲ್ಲಿ ಸೇರಿರುವ ಪದಾರ್ಥವು ಬಹಳ ಭಾರವಾದುದೆಂದೂ, ದೊಡ್ಡ ಗ್ರಹಗಳಲ್ಲಿರುವ ಪದಾರ್ಥವು ಇದಕ್ಕಿಂತ ಬಹಳ ಹಗುರಾದುದೆಂದೂ ಸ್ಪಷ್ಟವಾಗುತ್ತದೆ. ಈ ವ್ಯತ್ಯಾಸಗಳನ್ನು ಈ ಕೆಳಗಿನ ವಿಧವಾಗಿ ವಿವರಿಸಬಹುದು.

ಸೂರ್ಯನ ಸಮೀಪ ಮತ್ತು ದೂರದಲ್ಲಿ

ಸೂರ್ಯನ ಸಮೀಪವಿರುವ ಮೇಘವು ಆರಂಭದಲ್ಲಿ ಉರಿಯುತ್ತಿರುವ ಸೂರ್ಯ ಕಾಂತಿಯನ್ನು ಸೇರೋಧಿಸಲು ಅದು ಶಕ್ತವಾಯಿತು. ಆದುದರಿಂದ ಸೂರ್ಯ ಕಾಂತಿಯನ್ನು ದೂರ ಪ್ರಾಂತಗಳಿಗೆ ಪಸರಿಸುವುದನ್ನು ಬಿಟ್ಟು ಕೊಟ್ಟಿತು. ಇದರ ಫಲವಾಗಿ ಸೂರ್ಯನ ಸಮೀಪ ಪ್ರಾಂತವು ಸೂರ್ಯಕಾಂತಿಯಿಂದ ಬಿಸಿಯಾದಂತೆ, ದೂರ ಪ್ರಾಂತಗಳು-೨೭೦ ಡಿಗ್ರಿ ಚಳಿಗೆ ಇಳಿಯು ಹೋದುವು. ಇನ್ನು ಶೀತಳಕ್ಕೆ ಪ್ರಪಂಚದೊಳಗಿನ ಸ್ಥಿತಿಯಾಯುವೂ ಗಡ್ಡೆಕಟ್ಟಿ ಹೋಗುತ್ತದೆ. ಈ ಪರಿಸ್ಥಿತಿಯಲ್ಲಿ ಸೂರ್ಯನಿಗೆ ಸಮೀಪದಲ್ಲಿ ಕಲ್ಲು ಪದಾರ್ಥವೂ, ಲೋಹ ಪದಾರ್ಥವೂ ಘನಸ್ಥಿತಿಯಲ್ಲಿ ನಿಲ್ಲಲು ಶಕ್ತವಾದುವು. ಸೂರ್ಯನಿಗೆ ದೂರವಾಗಿರುವ ಶೀತಳ ಪ್ರಾಂತಗಳಲ್ಲಿ ವಾಯು ಪದಾರ್ಥಗಳ ಧೂಳಿಗಳು ಕೂಡಿ ಹೆರೆ ಹೆರೆಯಾಗಿ ಒಂದರೊಡನೊಂದು ಹೇರಿಕೊಂಡು ಸಾಗಿದುವು. ಈ ಕಣಗಳೆಲ್ಲಾ ಪ್ರಾಣವಾಯುವಿನೋದಿಗೆ ಕೂಡಿದ ಹೈಡ್ರೊಜನ್, ನೈಟ್ರೊಜನ್, ಕಾರ್ಬನ್ ಮೊದಲಾದ ಅಣುಗಳ ಸಮುದಾಯಗಳೇ. ಇಂತಹ ವಾಯುಗಳು ಸೂರ್ಯನ ಸಮೀಪ ಪ್ರಾಂತದಲ್ಲಿ ಘನಸ್ಥಿತಿಯಲ್ಲಿರುವ ಅವಕಾಶವೇ ಇಲ್ಲ ಆದುದರಿಂದ ಸೂರ್ಯನಿಗೆ ಸಮೀಪವಾಗಿ ಕಲ್ಲು ಪದಾರ್ಥದಿಂದ ಕೂಡಿಗೊಡಿದ ಗ್ರಹಗಳುಂಟಾದುವು. ದೂರದಲ್ಲಿ ಹಗುರು ಪದಾರ್ಥಗಳಿಂದ ಕೂಡಿದ ಗ್ರಹಗಳುಂಟಾದುವು.

ಎಲ್ಲಕ್ಕಿಂತಲೂ ದೂರದಲ್ಲಿರುವ ಪ್ಲೂಟೋ ಗ್ರಹವು ಚಿಕ್ಕದಾಗಿರಲು ಅದು ದೂರದಲ್ಲಿರುವುದೇ ಕಾರಣವಾಗಿದ್ದೀತು. ಅದರಲ್ಲಿರುವ ಪದಾರ್ಥಗಳನ್ನು ನೋಡುವಾಗ, ಅದು ದೊಡ್ಡ ಗ್ರಹಗಳ ಜಾತಿಯದೆಂದೇ ಕಾಣಿಸುತ್ತದೆ.

(೧೦ನೇ ಪುಟ ನೋಡಿರಿ)

ಕ್ಷಯರೋಗವು ನಿಮಗೆ ಹೇಗೆ ತಗಲುತ್ತದೆ ?

ಕ್ಷಯರೋಗವು ಒಬ್ಬರಿಂದ ಇನ್ನೊಬ್ಬರಿಗೆ ಹಲವು ವಿಧಾನಗಳಿಂದ ಹರಡುತ್ತದೆ.

(1) ಟಿ. ಬಿ. ಕ್ರಿಮಿಗಳಿಂದ ಕೂಡಿದ ಗಾಳಿಯನ್ನು ಸೇವಿಸುವುದರಿಂದ:

(ಟಿ ಬಿ. ತಗಲಿದ ಜನರು ಕೆಮ್ಮುವುದರಿಂದಾಗಲೀ ಕಫವನ್ನು ಹೊರಗೆ ಉಗುಳುವುದರಿಂದಾಗಲೀ ಕ್ರಿಮಿಗಳನ್ನು ಹರಡುತ್ತಾರೆ. ಇದು ಸಾಮಾನ್ಯವಾಗಿ ಸರಿಯಾಗಿ ಗಾಳಿ ಬೆಳಕು ಇಲ್ಲದ ಕೋಣೆಗಳಲ್ಲಿ ನಡೆಯುತ್ತದೆ.

(2) ಎಲ್ಲರೂ ಉಪಯೋಗಿಸುವ ವಸ್ತುಗಳಿಂದ:

ನೀರು ಕುಡಿಯುವ ಲೋಟಾಗಳು, ಊಟದ ಬಟ್ಟಲುಗಳು, ಹಾಸು ಬಟ್ಟೆ, ಟವೆಲ್ ಮತ್ತು ಎಲ್ಲರೂ ಉಪಯೋಗಿಸುವ ವಸ್ತುಗಳನ್ನು ಕ್ಷಯರೋಗಿಯು ಉಪಯೋಗಿಸುವುದರಿಂದ ಅಥವಾ ಅವನ ಎಂಜಲು ಯಾ ಉಗುಳಿನಿಂದ ಕೂಡಿದ ವಸ್ತುಗಳನ್ನು ಬಳಸುವುದರಿಂದ.

ಕ್ಷಯರೋಗದ ಕುರಿತು, ಅದರ ಸ್ವಭಾವ, ತಡೆಗಟ್ಟುವ ವಿಧಾನ, ಚಿಕಿತ್ಸೆಯ ರೀತಿ, ಇವುಗಳನ್ನು ಜನರಿಗೆ ಹೇಳುವ ಉದ್ದೇಶಗಳಿಂದ ಕ್ಷಯರೋಗ ಮೊಹರು ಮಾರಾಟ ಚಳವಳವು ಕೂಡಿದೆ. ಈ ಚಳವಳವನ್ನು ಯಶಸ್ವಿಗೊಳಿಸಲಿಕ್ಕೆ ದಯವಾಡಿ ಟಿ. ಬಿ ಮುದ್ರೆಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಟಿ. ಬಿ ಸಂಘಗಳಿಗೆ ಅವುಗಳ ಚಟುವಟಿಕೆಗಳನ್ನು ಮುಂದುವರಿಸಲು ಸಹಾಯ ಮಾಡಿರಿ

ಒಂದು ಟಿ. ಬಿ. ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ.

ಮುದ್ರೆಗಳು ಸಿಗುವ ಸ್ಥಳಗಳು— (1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಗವರ್ನಮೆಂಟ್ ಟಿ. ಬಿ ಸೆನಿಟೋರಿಯಂ, ಹಿಲ್ಸ್ ಮುದ್ರಾಸ್ ರೋಡು, ಬೆಂಗಳೂರು-೩. (2) ಮಹಿಳಾ ಮಂಡಲ, ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣ ಸ್ಟ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ. (3) ಗೌರವ ಕಾರ್ಯದರ್ಶಿ ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (4) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (5) ಅಧ್ಯಕ್ಷರುಗಳು ಮಹಿಳಾ ಸಮಾಜ, ಕಾರವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಆಳಯಾರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ದಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿದ್ದು.)

Space kindly donated by:
THE SINGARENI COLLIERIES CO LTD., HYDERABAD.

ಕಲಾಕ್ಷೇತ್ರ

ಭಾರತದಲ್ಲಿ ಮೂರ್ತಿಕಲೆ

ದ್ರಾವಿಡರ ಕಾಲದಲ್ಲಿ ಪ್ರಾರಂಭವಾದ ಭಾರತೀಯ ಮೂರ್ತಿಕಲೆ ಕಾಲದ ಏರುಪೇರುಗಳಿಂದ ಏಟ್ಟು ತಿಂದರೂ, ಆದು ಇಂದಿಗೂ ಉಸಿರು ಹಿಡಿದುಕೊಂಡಿದೆ. ಆಧುನಿಕ ಕಾಲದಲ್ಲಿ ಆದು ಪಾಶ್ಚಾತ್ಯ ಕಲೆಯನ್ನೂ ಸಮೂವೇಶಗೊಳಿಸಿ ಬೆಳೆದು ಬರುತ್ತಿದೆ.

(ವಿವಿಧ ಮೂಲಗಳಿಂದ)

ಹೃದಯದ ಸುಂದರ ಭಾವಗಳ ಅಭಿವ್ಯಕ್ತಿಯೇ ಕಲೆ. ಇದು ಸಂಗೀತ, ಸಾಹಿತ್ಯ, ಚಿತ್ರ, ಮೂರ್ತಿ ಮೊದಲಾದ ರೂಪಗಳಲ್ಲಿ ಪ್ರಕಟಗೊಳ್ಳಬಹುದು. ಚಿತ್ರ ಮತ್ತು ಮೂರ್ತಿಗಳ ಸ್ಥಾನ ಗಣನೀಯವಾದುದು. ಸಂಗೀತ ಮತ್ತು ಸಾಹಿತ್ಯಗಳು ಸಜೀವ ಮತ್ತು ಸಪ್ರಾಣ ಮಾಧ್ಯಮಗಳಿಂದ ವ್ಯಕ್ತಪಟ್ಟರೆ, ಚಿತ್ರ ಮತ್ತು ಮೂರ್ತಿಗಳು ನಿರ್ಜೀವ ಮತ್ತು ನಿಷ್ಪ್ರಾಣ ಮಾಧ್ಯಮಗಳಿಂದ ಹೊರಪಡುವುವು. ಮೂಕ ಚಿತ್ರ ಮತ್ತು ಮೂರ್ತಿಗಳು ಜೀವಂತ ಮಾನವನಂತೆ ನುಡಿಯಿತೆಂದರೆ, ಆಗ ಪ್ರಪಂಚವೇ ತಲೆಕೆಳಗಾದಂತಾದೀತು. ಭಕ್ತನ ಅನನ್ಯ ಭಕ್ತಿಯ ಪ್ರಭಾವದಿಂದ ದೇವತೆಗಳ ಮೂರ್ತಿ ಅಥವಾ ಚಿತ್ರಗಳು ಸಜೀವವಾಗಿರುವಂತೆ ತೋರಿಬಂದ ಉದಾಹರಣೆಗಳಿರುವುವಷ್ಟೇ ಅಲ್ಲದೆ ಇತರ ಮೂರ್ತಿ ಚಿತ್ರಗಳು ಕೇವಲ ಮೂರ್ತಿ ಅಥವಾ ಚಿತ್ರಗಳೇ ಆಗಿ ಉಳಿದಿವೆ. ನಿರಂತರವಾಗಿ ಹರಿದು ಬಂದ ಕಲಾಪೂಜರಿಯಲ್ಲಿ ಮೂರ್ತಿಗಳು ಸ್ಫೂರ್ತಿ ನವಾಗಿಯೇ ಉಳಿದಿವೆಯೂದರೂ ಅವು ಭಾರತೀಯರ ಹೃದಯದ ಮೇಲೆ ವಿಶಿಷ್ಟ ಪ್ರಭಾವ ಬೀರಿವೆ. ಒಂದು ರೀತಿಯ, ಒಂದು ವೈಶಿಷ್ಟ್ಯತೆಯು ತನ್ನ ಮೂಕ ಶಕ್ತಿಯಿಂದ ನಮ್ಮ ಹೃದಯವನ್ನು ಆಕರ್ಷಿಸಿದೆ; ನಾವಾದರೋ ಅದನ್ನು ಕಂಡು ಆನಂದ ತುಂದಿಲರಾಗಿದ್ದೇವೆ. ನಿರ್ಜೀವ ಪದಾರ್ಥಗಳಲ್ಲಿ ಬಹುವಚನ ಸೌಂದರ್ಯ ಮತ್ತು ಸಜೀವತೆಯನ್ನು ಒಡಮೂಡಿಸಬೇಕಾದರೆ ಕಾರಿಣ್ಯದಲ್ಲಿ ಕೋಮಲತೆಯನ್ನೂ ಸರಸತೆಯನ್ನೂ ತಂದುಕೊಳ್ಳಬೇಕು.

ರಾಷ್ಟ್ರ ಸಂಸ್ಕೃತಿಯು ಕಲೆಯ ಮೇಲೂ ಪ್ರಭಾವ ಬೀರದಿಲ್ಲ. ಭಾರತೀಯ ಮೂರ್ತಿ ಕಲೆಯೂ ಇದಕ್ಕೆ ಅಪವಾದವಲ್ಲ ನಮ್ಮ ಮೂರ್ತಿಕಲೆಯನ್ನು ಪ್ರಾಗೈತಿಹಾಸಿಕ ಕಾಲೀನ, ಶೈವವೈಷ್ಣವ ಕಾಲೀನ ಮತ್ತು ಬೌದ್ಧ ಮತ್ತು ಜೈನ ಕಾಲೀನವೆಂದು ಮುಖ್ಯವಾಗಿ ವಿಭಜಿಸಬಹುದು ಮುಸ್ಲಿಮರ ಆಕ್ರಮಣ ತೀವ್ರವಾದಂತೆ ಈ ಕಲೆಯು ಹ್ರಾಸವಾಗುತ್ತ ಬಂತು. ಈ ಮೂರು ವಿಭಾಗಗಳನ್ನು ನಾವು ಪರಿಶೀಲಿಸುವಾಗ, ಇವುಗಳ ಅತ್ಯಂದೇ ಎಂಬುದರಿವಾಗದಿರದು.

ಹರಪ್ಪಾ ಮತ್ತು ಮೊಹೆಂಜೊದಾರೊಗಳ ಭೂಖನನದಲ್ಲಿ ಪ್ರಾಗೈತಿ ಹಾಸಿಕ ಮೂರ್ತಿಗಳು ದೊರೆತಿವೆ. ಇವುಗಳ ಮೇಲೆ ಆ ಕಾಲದ ಸಂಸ್ಕೃತಿ ಮುದ್ರೆಯೊತ್ತಿದೆ. ಆಧುನಿಕ ಅಭಿರುಚಿಗೆ ಇವು ಒಪ್ಪುವಂತಿಲ್ಲವಾದರೂ ಈ ಮೂರ್ತಿಗಳು ಭಾವವಿಹೀನವಾಗಿಲ್ಲ. ಸೌಂದರ್ಯಭಾವನೆಯು ಕಾಲ ಕ್ರಮದಲ್ಲಿ ಬದಲಾಗುತ್ತ ಬರುತ್ತಿದೆಯೆಂದು ಒಪ್ಪುವುದಾದರೆ, ಈ ಮೂರ್ತಿಗಳು ಆ ಕಾಲದಲ್ಲಿ ಸೌಂದರ್ಯಮಯವಾಗಿದ್ದುವೆನ್ನಬಹುದು; ಇಲ್ಲವಾದರೆ, ಮೂರ್ತಿಕಲೆಯು ಕೇವಲ ಸುಂದರ ರೂಪ ಚಿತ್ರಣಕ್ಕೆ ಮಾತ್ರ ಸೀಮಿತವಾಗಿಲ್ಲವೆಂದು ಹೇಳಬೇಕಾಗುವುದು. ರೌದ್ರ, ಭಯಾನಕ, ಭೀಭತ್ಸ ರಸಾಭಿವ್ಯಕ್ತಿಗೆ ಯುಪಯೋಗಿಸಿದ ಮೂರ್ತಿಗಳಲ್ಲಿ ಸೌಂದರ್ಯದ ಆವಶ್ಯಕತೆಯೇನು? ಕಲಾಕಾರ ಈ ಭಾವನೆಗಳನ್ನು ಕೆತ್ತಿದನೆಂದರೆ ಮುಗಿಯಿತು. ಮುಂದೆ ಭಾರತೀಯ ಸಂಸ್ಕೃತಿಯು ಮುಂದುವರಿದಂತೆ ಲಕ್ಷ್ಮಿ ಮತ್ತು ಸರಸ್ವತಿಯರ ಮೂರ್ತಿಗಳಲ್ಲಿ ಸೌಂದರ್ಯ ಮನೆ ಮಾಡಿದ್ದರೆ, ಭೈರವ, ರಾಕ್ಷಸರ ಮೂರ್ತಿಗಳಲ್ಲಿ ಭಯಾನಕ ರಸ ಸೃಷ್ಟಿಸಲು ಕಲಾಕಾರ ಕುರೂಪವನ್ನೇ ಸಮೂವೇಶಗೊಳಿಸಬೇಕಾಗಿತ್ತು. ಆದುದರಿಂದ, ಸೌಂದರ್ಯವೇ ಕಲೆಯ ಹಿರಿಮೆಗೆ ಕಾರಣವಲ್ಲ; ಕುರೂಪಿ ಮೂರ್ತಿಗಳಲ್ಲಿಯೂ ಕಲೆಯು ಪರಾಕಾಷ್ಠೆಯನ್ನು ಮುಟ್ಟಬಲ್ಲುದು. ಅಸುಂದರ ಸಾಧನೆದಲ್ಲಿ ಕಲಾಪ್ರತಿಷ್ಠೆ ಮಾಡುವುದು ಮೂರ್ತಿಕಾರನ ಪರಮ ಕೌಶಲಕ್ಕೆ ಪ್ರಮಾಣವಾಗಿದೆ.

ನವದೆಹಲಿಯ ಔದ್ಯೋಗಿಕ ಶಾಲೆಯ ಹೊರಗೆ ತಂಗಿನಿಕಲರಾದ ಹುಡುಗರು ವಿನೋದವಾಹುತಿದ್ದಾರೆ.

ಮೊಹೆಂಜೊದಾರೊವಿನಲ್ಲಿ ದೊರೆತ ಮೂರ್ತಿಗಳಲ್ಲಿ ಮುದ್ರೆಗಲ್ಲಿ ಕೆತ್ತಿದ ವೃಷಭದ ಮೂರ್ತಿಯು ವಿಶೇಷವಾಗಿದೆ. ಇದರಿಂದ ಆ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳ ಮೇಲೆಯೂ ಪ್ರಕಾಶ ಬೀಳುತ್ತದೆ. ಭಾರತೀಯರ ಹೃದಯದಲ್ಲಿ ಆಗ ಎತ್ತಿನ ಬಗ್ಗೆ ವಿಶೇಷ ಆದರವಿತ್ತು ಎಂದು ಹೇಳಬಹುದು. ಇದರ ಕೆತ್ತನೆಯಲ್ಲಿ ವ್ಯಕ್ತಗೊಂಡ ಭಾವವು ನಮ್ಮ ಕಾವ್ಯ ಪರಂಪರೆಗೆ ಸರ್ವಥಾ ಅನುಕೂಲವಾಗಿದೆ. ನಮ್ಮ ಸಾಹಿತ್ಯದ ಪ್ರತಿಯುಗದ ಕವಿಗಳು ತಮ್ಮ ಕವಿತೆಗಳನ್ನು ವೃಷಭ ಭುಜದಂತೆಯೇ ಉನ್ನತವಾಗಿರಿಸಿದ ಉದಾಹರಣೆಗಳು ನಮಗೆ ದೊರೆಯುತ್ತವೆ.

ಪ್ರಾಗೈತಿಹಾಸಿಕ ಕಾಲಾನಂತರ ನಾವು ಕ್ರಮಬದ್ಧ ಇತಿಹಾಸ ಕಾಲಕ್ಕೆ ಬರುವಾಗ, ಮೂರ್ತಿಕಲೆಯ ವಿಕಾಸವಾದುದು ಗೋಚರಿಸುತ್ತದೆ. ಈ ಅವಧಿಯಲ್ಲಿ ದೇವ ದೇವತೆಗಳ ಶಕ್ತಿ ಪ್ರತೀಕವಾಗಿ ಮಾತ್ರ ವಲ್ಲದೆ ಭವನ ಮತ್ತು ವಸ್ತುಗಳ ನಿರ್ಮಾಣದಲ್ಲೂ ಇದು ವ್ಯಕ್ತವಾದುದು ತೋರುತ್ತದೆ. ಇದರ ಫಲವಾಗಿಯೇ ಮೂರ್ತಿ ಕಲೆಯು ಎರಡು ಕವಲುಗಳಲ್ಲಿ ವಿಕಾಸ ಹೊಂದಿತು. ಮೊದಲನೆಯದು ವಿಶಾಲವಾಗಿದ್ದರೆ, ಎರಡನೆಯದು ಸುಕುನೂರವಾಗಿತ್ತು. ವಿಶಾಲ ಮೂರ್ತಿ ನಿರ್ಮಾಣ ದಕ್ಷ ಮಾನವಾಶಕ್ತಿ ಸರಿದಾಗ, ಮಾನವ ಶರೀರಕ್ಕಿಂತಲೂ ಬಹುಪಾಲು ಮಿಗಿಲಾದುವು ರಚಿತವಾದುವು. ಎಲಿಫೆಂಟಾದ ತ್ರಿಮೂರ್ತಿ, ಚಿಕ್ಕೂರು ಕೋಟೆಯ ತ್ರಿಮೂರ್ತಿ, ಕಾರ್ಕಳ, ನೇಣೂರು, ಶ್ರವಣಬೆಳಗೊಳಗಳ ಗೋಮಟೇಶ್ವರ ಮೂರ್ತಿಗಳನ್ನು ಈ ಸಾಲಿಗೆ ಸೇರಿಸಬಹುದು. ಆತ್ಮಿಕ ಅಥವಾ ದೈವಿಕ ಶಕ್ತಿಯನ್ನು ನಿಶಾಲರೂಪದಲ್ಲಿ ಮುಂದಿಟ್ಟು, ಮಾನವ ಹೃದಯದ ಮೇಲೆ ಪ್ರಭಾವ ಬೀರಬಲ್ಲ ವಿಲಕ್ಷಣ ಕೌಶಲತೆಯ ಈ ಮೂರ್ತಿಗಳಲ್ಲಿ ಅಡಗಿದೆ. ಇವುಗಳಿಂದ ವೈಶಾಲ್ಯದ ಪ್ರೇರಣೆ ಪಡೆದ ಮಾನವನೂ ವಿಶಾಲತೆಯತ್ತ ಮುಂ

(೯ನೇ ಪುಟ ನೋಡಿರಿ)

In the Court of the Subordinate Judge of South Kanara.

O. S. No. 90/60.

Akkayya Shedthi & others— Plaintiffs.

and

K. Manjayya Shetty & others— Defendants.

3rd defendant K. Mahabala Shetty, son of Puttamma Shedthi, residing in Kandavara Kongaballi House of Balkur village of Kundapur Tq.

Please take notice that the Plaintiffs abovenamed instituted the above suit for partition and the same is posted to 28--1--1961 for your appearance: If you fail to appear on that day the suit will be decided in your absence.

By order of the Court.

(Sd.) S. Venkat Rao,
Vakil for Plaintiffs.

Mangalore, 17--12--1960.

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆ ಗಳೊಂದಿಗೆ—ಆತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊಪ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಜ್ಞಾನವು ವಿವಿಧ ಕರ್ಮಗಳನ್ನು ಸುಟ್ಟು ಬೊಟ್ಟಮಾಡುವುದು; ಆತ್ಮಶುದ್ಧಿಗೆ ದಿವ್ಯ ಜ್ಞಾನವೇ ಮಹದಾಧಾರ. ದಿವ್ಯಜ್ಞಾನಿಯೇ ನಿಜವಾದ ಯೋಗಿ, ಆತನೇ ಪರಮ ಸುಖಿ— ನಿರ್ದೋಷಿಯಾದ ಅರ್ಜುನನಿಗೆ ಶ್ರೀ ಕೃಷ್ಣನು ಜ್ಞಾನಯೋಗದ ರಹಸ್ಯವನ್ನು ತಿಳಿಸುತ್ತಾನೆ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕರಣ ೪: ದಿವ್ಯಜ್ಞಾನ ಯೋಗ

ಭಗವಾನ ಕೃಷ್ಣ:—ಶಾಶ್ವತ ಯೋಗಮಾರ್ಗವನ್ನು ನಾನು ಮೊದಲು ವೈವಸ್ವತನಿಗೆ ಬೋಧಿಸಿದೆ. ಆತನು ಇವನ್ನು ಮನುವಿಗೆ ಉಪದೇಶಿಸಿದನು. ಮನುವಿನಿಂದ ಇದನ್ನು ಇಕ್ಷ್ವಾಕುವು ತಿಳಿದುಕೊಂಡನು. ಹೀಗೆ ಕ್ರಮಾನುಗತವಾಗಿ ಋಷಿಗಳು ಇದನ್ನೇ ಮನನಮಾಡಿದರು. ಆದರೆ ಕಾಲವು ಮುಂದೊತ್ತಿ ಬರುವಾಗ ಜಗತ್ತಿನಲ್ಲಿ ಈ ಯೋಗವು ಭಂಗಕ್ಕೊಳಪಟ್ಟಿತು. ಈ ದಿನ ಇದೇ ಕರ್ಮಯೋಗವನ್ನು ನಿನಗೆ ಬೋಧಿಸಿರುವೆನು. ನೀನು ನನ್ನ ಭಕ್ತನೂ, ಮಿತ್ರನೂ, ಆಗಿರುವೆ. ಈ ರಹಸ್ಯವು ಯಾರಿಗೂ ತಿಳಿಯದು. ಇದು ಅತ್ಯಂತ ಗೋಪ್ಯವಾದ ವಿಷಯ.

ಅರ್ಜುನ:—ವೈವಸ್ವತನು ಹುಟ್ಟಿದುದು ನಿನ್ನಿಂದಲೂ ಮೊದಲು. ಹಾಗಿರುವಾಗ ನೀನು ಹೇಗೆ ಆತನಿಗೆ ಈ ಉಪದೇಶವನ್ನು ಮಾಡಿದೆ. ನನಗೇನೂ ಅರ್ಥವಾಗಲಿಲ್ಲ.

ಭಗವಾನ: —ಪಾರ್ಥನೇ, ನಾನು ಅನೇಕ ಜನ್ಮಗಳನ್ನು ಪಡೆದಿರುತ್ತೇನೆ. ನೀನೂ ಹಾಗೆಯೇ. ಆ ವಿಚಾರ ನನಗೆ ತಿಳಿದಿರುವುದು. ಆದರೆ ನಿನಗೆ ಅದರ ಅರಿವಿಲ್ಲ. ನನಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ ವೆಂಬುದು ನಿರ್ಧಾರವಾದರೂ, ಜಗತ್ತಿನ ಯಾವತ್ತೂ ಜೀವಿಗಳ ಸೃಷ್ಟಿಗೆ ನಾನೇ ಕಾರಣನಾದರೂ, ನನ್ನಿಂದಲೇ ಉಂಟಾದ ಪ್ರಕೃತಿಯನ್ನೇ ಆಧಾರವಾಗಿಟ್ಟುಕೊಂಡು ನಾನು ನನ್ನ ದಿವ್ಯಪ್ರಕಾಶದ ಶಕ್ತಿಯಿಂದ ಜನ್ಮವೆತ್ತು ಅವತರಿಸುತ್ತೇನೆ.

[ಶ್ರಿಪುರದ ಅನಾಥ ಮಹಿಳಾಲಯ. ಮಕ್ಕಳು ಸನಾಥರಾಗುತ್ತ ಬರುತಿದ್ದಾರೆ.

ಧರ್ಮವು ಎಲ್ಲ ಅವನತಿಗಳಿಗೆ ಮುಖವಾದಾಗ, ಅಧರ್ಮವು ಎಲ್ಲಿ ನಲಿಯೊಗುವುದೋ, ಆಲ್ಲಿ ನಾನು ಅವತಾರವನ್ನು ಧರಿಸುತ್ತೇನೆ. ಯೋಗ್ಯರನ್ನು ರಕ್ಷಿಸಲಿಕ್ಕಾಗಿಯೂ, ದುಷ್ಟರನ್ನು ನಾಶಪಡಿಸುವುದಕ್ಕಾಗಿಯೂ, ಧರ್ಮವನ್ನು ಸಂಸ್ಥಾಪಿಸುವುದಕ್ಕಾಗಿಯೂ, ಪ್ರತಿ ಯುಗದಲ್ಲಿಯೂ ನಾನು ಜನ್ಮ ಧಾರಣಮಾಡಿಕೊಳ್ಳುತ್ತೇನೆ. ಮೋಹ, ಭಯ, ಕೋಪಗಳಿಂದ ವಿಮುಕ್ತರಾಗಿ, ನನ್ನಲ್ಲಿ ನಿರಂತರವೂ ಶರಣಾಗಿ, ಜ್ಞಾನಯೋಗ ಬಲದಿಂದ ಆತ್ಮಶುದ್ಧಿ ಹೊಂದಿರುವ ಅನೇಕಾನೇಕರು ನನ್ನಲ್ಲಿ ಕೂಡಿರುವರು. ನನ್ನಲ್ಲಿ ಸೇರಿದ ಪುಣ್ಯ ಯೋಗಿಗಳನ್ನು ನಾನು ಸ್ವೀಕರಿಸಿಕೊಂಡಿರುವೆನು. ನಿಷ್ಕಾಮ ಕರ್ಮದಿಂದಲೂ, ಭಕ್ತಿ ಬಲದಿಂದಲೂ ನನ್ನಲ್ಲಿ ಸಂಪೂರ್ಣ ಶರಣು ಬಂದವರನ್ನೆಲ್ಲಾ ನಾನು ಅಂಗೀಕರಿಸಿಕೊಂಡಿರುವೆನು. ಅವರು ನನ್ನಲ್ಲಿ ಸೇರಿರುವರು. ನಾನು ಸೃಷ್ಟಿ ಕರ್ತನಾದರೂ, ನಾನಾಗಿ ಮಾನವರ ಕರ್ಮಗಳಲ್ಲಿ ಭಾಗವಹಿಸುವುದೂ ಇಲ್ಲ. ಕರ್ಮಗಳು ನನ್ನನ್ನು ಬಂಧಿಸಲಾರವು. ಫಲಾಪೇಕ್ಷೆಯು ನನ್ನಲ್ಲಿ ಇಲ್ಲ. ಪೂರ್ವಕಾಲದ ಯೋಗಿಗಳು ಈ ವಿಚಾರವನ್ನು ಸರಿಯಾಗಿ ಅರಿತು ನಿಷ್ಕಾಮ ಕರ್ಮಗಳನ್ನು ಮಾಡಿ ಬೆಳೆದರು. ಅವರಂತೆಯೆ ನೀನು ಕೂಡ ನಿನ್ನ ಕರ್ಮಗಳನ್ನು ಕೈಕೊಳ್ಳು ನಿಷ್ಕಾಮ ಕರ್ಮವನ್ನು ಗೊತ್ತು ಹಿಡಿಯ ಬೇಕಾಗಿದೆ ಯೆಂಬುದು ಧರ್ಮ, ಯಾವುದು ಅಧರ್ಮವೆಂಬುದನ್ನು ಮುಂದಾಗಿ ಪರಿತೀಲಿಸಬೇಕು ಕರ್ಮದಲ್ಲಿ ಕರ್ಮವನ್ನು ದೃಷ್ಟಿಸದೆ ಇದ್ದು, ಕರ್ಮವಿಲ್ಲದಾಗ ಕರ್ಮದಲ್ಲಿಯೆ ಇರುವೆನೆಂದು ಭಾವಿಸಿ ಬೆಳೆಯುವವನು ಕರ್ಮಯೋಗಿಯು. ಸ್ವಾರ್ಥ ಮತ್ತು ದುರಾಶೆಗಳಿಂದ ವಿಂಹಕವಾದ ಕರ್ಮವೇ ನಿಜವಾದ ನಿಷ್ಕಾಮ ಕರ್ಮ. ನಿಷ್ಕಾಮ ಕರ್ಮಗಳು ಜ್ಞಾನಿಗಳು, ವಿನೇಕೆಗಳು. ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಗಳೇ ಧರ್ಮ ಕರ್ಮಗಳು. ಧರ್ಮ ಕರ್ಮಗಳಿಂದ ಚಿತ್ತ ಸ್ಥಿರತೆಯು ಪ್ರಾಪ್ತಿಯಾಗುವುದು. ಚಿತ್ತ ಸ್ಥಿರತೆಯಾದಾಗ ಪಾಪಗಳು ಉದಿಸವು. ಇದ್ದದರಲ್ಲಿ ತೃಪ್ತಿಹೊಂದಿ, ಸುಖದುಃಖಗಳಲ್ಲಿ ಹಿಗ್ಗದೇ ಕುಗ್ಗದೇ, ಆ ಸೂಯೆಯನ್ನು ತ್ಯಜಿಸಿ, ಕರ್ಮಗಳನ್ನು ಮಾಡಬೇಕು. ನಿಷ್ಕಾಮಕರ್ಮಿಯು ತಾನು ಮಾಡುವ ಎಲ್ಲಾ ಕರ್ಮಗಳನ್ನು ಪರಮಾತ್ಮನಿಗೆ ಒಪ್ಪಿಸುವನು. ಆ ಕರ್ಮಗಳಲ್ಲಿ ಪರಮಾತ್ಮನನ್ನು ಕಾಣುವನು. ಆತನು ಕ್ರಮೇಣ ಪರಮಾತ್ಮನಲ್ಲಿ ಐಕ್ಯನಾಗುವನು ಕೆಲವು ಯೋಗಿಗಳು ಯಾಗಗಳನ್ನು ಮಾಡುವರು. ಇನ್ನು ಕೆಲವರು ಪುರಾಣ ಪಠನ, ಶ್ರವಣಗಳಿಂದ ಪರಮಾತ್ಮನನ್ನು ಒಲಿಸುವರು. ಇನ್ನೂ ಕೆಲವರು ಇಂದ್ರಿಯ ನಿಗ್ರಹವೇ ಯಾಗವೆಂದೆಣಿಸುವರು. ಕೆಲವರು ತಮ್ಮಲ್ಲಿದ್ದ ಧನವನ್ನು ದಾನಮಾಡಿ ಯಜ್ಞವನ್ನೆಸಗುವರು. ಕೆಲವರು ಶ್ವಾಸವನ್ನು ಸ್ವಾಧೀನೀಕರಿಸಿ ತಪಸ್ಸನ್ನೂ ಮಾಡುವರು. ಕೆಲವರು ಉಪವಾಸದಿಂದ ಯೋಗವನ್ನು ಸಾಧಿಸುವರು. ಈ ಎಲ್ಲಾ ವಿಧಗಳು ಪಾಪ ವಿಮೋಚನೆಯ ಬೇರೆ ಬೇರೆ ಹಾದಿಗಳು. ತ್ಯಾಗಶಕ್ತಿಯಿಲ್ಲದವನಿಗೆ ಜಗತ್ತಿನಲ್ಲಿ ಬೆಲೆಯಿಲ್ಲ. ತ್ಯಾಗವೇ ಮಹತ್ತರ ಯಜ್ಞವು. ಕರ್ಮಗಳಿಂದಲೇ ತ್ಯಾಗಶಕ್ತಿ. ಕರ್ಮಗಳು ಇಲ್ಲದ್ದಲ್ಲಿ ತ್ಯಾಗವೆಲ್ಲಿ? ಈ ತತ್ವವನ್ನು ನೀನು ಕೋದಿಸಿದರೆ, ಸ್ವತಂತ್ರನಾಗುವೆ. ಜ್ಞಾನಯೋಗವೂ ಬಾಹ್ಯಯಜ್ಞಕ್ಕೂ ವಿಂಗಿಲಾದುದು. ಜ್ಞಾನವು ಸಂಪೂರ್ಣವಾದಾಗ ಅದು 'ದಿವ್ಯ' ವಾಗುವುದು. ಅರ್ಜುನನೇ ನಮ್ರತೆ ಮತ್ತು ಸೇವೆಯಿಂದ ಜ್ಞಾನವನ್ನು ಮೊದಲು ಸಂಪಾದಿಸು. ನಿನ್ನಲ್ಲಿ ದಿವ್ಯಜ್ಞಾನವು ಮೊಳೆದಾಗ ನೀನು ತಪ್ಪುಗಳನ್ನು ಮಾಡಲಾರೆ. ನೀನು ಮಾಡುವ ಯಾವತ್ತೂ ಕೆಲಸಗಳಲ್ಲಿ ನನ್ನನ್ನು ಕಾಣುವೆ. ದಿವ್ಯಜ್ಞಾನವು ನೀನು ಯಾವ ಕೆಲಸವನ್ನು ನೋಡಿದರೂ ಆ ಕಾರ್ಯಕ್ಕೆ ಪಾಪವು ಅಂಟಿಕೊಳ್ಳದು ಅಗ್ನಿಯು ಯಾವ ವಸ್ತುವನ್ನಾದರೂ ಸುಟ್ಟು ಬೂದಿ ಮಾಡಬಲ್ಲಂತೆ ಅದೇ ರೀತಿ ದಿವ್ಯ ಜ್ಞಾನವು ಯಾವ ವಿಧದ ಕರ್ಮವನ್ನಾದರೂ ಸುಟ್ಟು ಭಸ್ಮಮಾಡುವ ಶಕ್ತಿಯುಳ್ಳದ್ದು. ಆತ್ಮ ಶುದ್ಧಿಗೆ ದಿವ್ಯ ಜ್ಞಾನವೇ ಆಧಾರ. ದಿವ್ಯ ಜ್ಞಾನಿಯೇ ಸಂಪೂರ್ಣ ಯೋಗಿಯು. ದಿವ್ಯ ಜ್ಞಾನದಿಂದ ಸ್ಥಿರಶಾಂತಿ. ಸಂಶಯಕ್ಕೊಳಗಾದ ಅಜ್ಞಾನಿಯು ನಾಶಕ್ಕೊಳಗಾಗುವನು. ಅಂತಹ ಮಾನವನಿಗೆ ಇಹದಲ್ಲೂ, ಪರದಲ್ಲೂ ನೆಲೆಯಿಲ್ಲ. ಆದುದರಿಂದ ಎಲೇ ನಿರ್ದೋಷಿಯಾದ ಧನಂಜಯನೇ, ನಿನ್ನ ಮನಸ್ಸಿನಲ್ಲಿ ಅಡಗಿರುವ ಎಲ್ಲಾ ಸಂಶಯಗಳನ್ನು ಬಿಟ್ಟುಬಿಟ್ಟು ದಿವ್ಯಜ್ಞಾನ ಯೋಗಿಯಾಗು.

In the Court of the Subordinate Judge of South Kanara

O. S. No. 92/1960.

S. Bhavani Shedthi & another—Plffs.

and

S. Raghunatha Shetty & others —Defts.

2nd Defendant: B. S. Soorappa Shetty, son of Akkayya Shedthi, residing in Sowkur of Gulvadi village of Kundapur Taluk.

Please take notice that the Plaintiffs abovenamed instituted the above suit for partition and the same is posted to 28--1--1961 for your appearance. If you fail to appear on that day the suit will be decided in your absence.

By order of the Court.

(Sd·) S. Venkat Rao

Vakil for Plaintiffs.

Mangalore, 17—12—1960.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ॥	ಶೇಕಡಾ 3-75 ನ.ಪೈಸೆ
ಮೂರು ತಿಂಗಳುಗಳಿಗೆ	.... ,,	4-00 ,,
ಆರು ತಿಂಗಳುಗಳಿಗೆ	.... ,,	4-25 ,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	.... ,,	4-50 ,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	.... ,,	4-75 ,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ದೂರಾಲೋಚನೆಯಿಲ್ಲದೆ ಆಡುವ ಮಾತು, ಮಾಡುವ ಕೆಲಸಗಳು ಅನಾಹುತಕಾರಿಯಾಗುತ್ತವೆ. ವಕ್ತೃ ಅಥವಾ ಕರ್ತೃವಿನ ಖಾಗಿಲಿಗೆ ಅಪು ದುಃಖವನ್ನು ಅವಶ್ಯ ತಂದು ನಿಲ್ಲಿಸುತ್ತವೆ.

ನವಯುಗ

ವರುಷ	ಉಡುಪಿ	ವಾರ
೪೦	೨೨-೧೨-೬೦	೫೭

ಶೂನ್ಯ ತುಂಬಿಬರಬೇಕು

ಮೂವತ್ತು ವರ್ಷಗಳ ಕಾಲ ತಮ್ಮೊಂದಿಗೆ ದೇಶಕ್ಕಾಗಿ ದುಡಿದು ದಿವಂಗತರಾದ ಸರದಾರ ವಲ್ಲಭ ಭಾಯಿ ಪಟೇಲರನ್ನು ವಲ್ಲಭ ವಿದ್ಯಾನಗರದಲ್ಲಿ ಸ್ಮರಿಸುತ್ತ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ಸರದಾರರ ಕರ್ತವ್ಯನಿಷ್ಠುರತೆಯನ್ನು ಪ್ರಶಂಸಿಸಿದರು. "ಸರದಾರ ಪಟೇಲರು ಜೀವಿಸಿದ್ದಾಗ ಆಗದಿದ್ದ ಕಾರ್ಯಗಳೆಲ್ಲವೂ ಇಂದಿಗೂ ಹಾಗೆಯೇ ಉಳಿದಿವೆ"—ಎಂದು ಉದ್ಗರಿಸಿದ ಇವರು ಕಾಶ್ಮೀರದ ಪ್ರಶ್ನೆಯನ್ನು ಇದಕ್ಕೆ ನಿದರ್ಶನವಾಗಿತ್ತರು. "ಸರದಾರ ಪಟೇಲರು ಇಂದು ನಮ್ಮ ಕಣ್ಣ ಮುಂದಿಲ್ಲವಾದರೂ ಅವರ ಕಾರ್ಯಗಳನ್ನು ದೈಷ್ಟಿ ಪಥದಲ್ಲಿರಿಸಿ, ಅವರಂತಹ ಉತ್ತಮ ಕಾರ್ಯಕರ್ತರನ್ನು ದೇಶಕ್ಕೆ ಒದಗಿಸಿ ಕೊಡಬೇಕು" ಎಂದವರು ಮುಂದುವರಿದು ಕೇಳಿಕೊಂಡು, ಸರದಾರರು ಕೈಗೊಂಡಿದ್ದ ರಚನಾತ್ಮಕ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಅವಶ್ಯಕತೆಯನ್ನು ಒತ್ತಿ ಹೇಳಿದರು; ಅದೇ ಇಂದು ಭಾರತೀಯರ ಕರ್ತವ್ಯವೆಂದವರು ತಿಳಿಸಿ ಹೇಳಿದರು.

ಸಾಕಷ್ಟು ಪ್ರಸಿದ್ಧಿಯನ್ನೂ ಪಡೆದ ನೃತ್ತ ದೂರದೃಷ್ಟಿಯಿಲ್ಲದವನೆಂದರೆ, ಸಂತೋಷ ಸೂಚಕ ಸಭೆಗಳನ್ನು ನಡೆಸಿ, ತುಂಬಿದಾರವ ಸಪ್ತವಾಯಿತೆಂದು ಮರುಗಿ, ಶೋಕಸೂಚಕ ಗೊತ್ತುವಳಿಯನ್ನು ಅವಿರೋಧವಾಗಿ ಸ್ವೀಕರಿಸುವುದೂ ಗೊತ್ತುವಳಿಯನ್ನು ಅಂಗೀಕರಿಸಿದೊಡನೆಯೇ ಉಂಟಾದ ಸಂತಾಪವನ್ನು ಮರೆತುಬಿಡುವುದೂ ನಾಗರಿಕ ಜೀವನದ ಸರ್ವಸಾಮಾನ್ಯವಾಗಿ ಒಂದಿದೆ. ಸರದಾರ ಪಟೇಲರು ಮಾಡಿದ ಸಂದರ್ಭದಲ್ಲಿಯೂ ಇದೇ ಸಂಪ್ರದಾಯ ಹಣಿಕೆ ನೋಡಿತ್ತು; ಆದು ತನ್ನ ಜಾಡನ್ನು ಬಿಡದೆ ಮುಂದುವರಿದಿತ್ತು. ಆದರೆ, ಸರದಾರರ ಹಿಂದೆಯೇ ಅವರು ಇಟ್ಟುಕೊಂಡಿದ್ದ ವಿಶೇಷ ಭಾರತದ ಕನಸೂ ಪುರು ಪಾರಿಚ್ಛೇಯಾಯಿತು. ಆನರು ಸ್ವಾತಂತ್ರ್ಯ ನಂತರ ಒದುಕಿದ ಅಲ್ಪ ಕಾಲದಲ್ಲಿಯೇ ಸುಮಾರು ಅರುನೂರಕ್ಕೂ ಮಿಕ್ಕಿದ ಚಿಕ್ಕದೊಡ್ಡ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ವಿಲೀನ ಮಾಡುವ ಮಹಾ ಸಾಹಸದಲ್ಲಿ ಯಶಸ್ವಿಯಾದರು; ಈಗ ಈ ಸಂಸ್ಥಾನಗಳು ಕೇವಲ ವಿಲೀನಗೊಂಡಿರುವುದು ಮಾತ್ರ ವಲ್ಲ, ಯಾವುದೇ ಕಾಲಕ್ಕೆ ಆವು ಒಕ್ಕೂಟವನ್ನು ಬಿಟ್ಟು ಸಿಡಿದು ಹೋಗದಂತಹ ರೀತಿಯಲ್ಲಿ ಅವಿಭಾಜ್ಯವಾಗಿ ಹುದುಗಿ ಕೊಳ್ಳುವಂತಾಯಿತು. ಇವರ ಉಕ್ಕಿನ ಪ್ರನಸ್ಸು, ದೃಢ ಸ್ಥಿತಜ್ಞೆ, ದಿಟ್ಟ ಛಿಜ್ಞೆ, ಕೆಚ್ಚೆದೆಗಳಲ್ಲದೆ ಹೋಗಿದ್ದರೆ, ಭಾರತದ ಏಕ್ಯ—ಪ್ರಶಾಸನಾತ್ಮಕ ಏಕಸೂತ್ರತೆ ಎಂದೋ ಸಡಿಲವಾಗಿ ಹೋಗುತ್ತಿತ್ತು. ಇತಿಹಾಸಾವಧಿಯಲ್ಲಿ ಈ ಮೊದಲೆಂದೂ ಏಕಸೂತ್ರತೆಯಲ್ಲಿ ಕೋಯಲ್ಪಡದ ಭಾರತ ವಿಂದು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ, ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದ ತನಕ ಆಡಳಿತಾತ್ಮಕವಾಗಿ ಒಂದಾಗಿರುವುದಕ್ಕೆ ಮೂಲ ಕಾರಣ ಸುರುಪರೇ ಸರದಾರರು— ಅವರ ಈ ಹೆಚ್ಚುಗಾರಿಕೆಯನ್ನು ಅಲ್ಲಗಳೆಯುವುದು ಯಾರಿಂದಲೂ ಸಾಧ್ಯವಿಲ್ಲ. ಸಂಪೂರ್ಣವಾದ ಸತ್ಯದಿಂದ ಲೋಕವ್ಯವಹಾರವು ಹೇಗೆ ನಡೆಯುವುದಿಲ್ಲವೋ ಹಾಗೆಯೇ ಸಂಪೂರ್ಣವಾದ ಅಹಿಂಸೆಯಿಂದಲೂ ಸಂಪೂರ್ಣವಾದ ಶಾಂತಿ ನೀತಿಯಿಂದಲೂ ಜಗದ್ವ್ಯಾಪಾರಗಳು ನಡೆಯುವುದಿಲ್ಲವೆಂಬ ಸರದಾರರ ಅಂಬೋಣವು ರಾಜನೀತಿಯ ಮಟ್ಟಿಗೆ ಅಕ್ಷರಶಃ ನಿಜವೆಂಬುದಕ್ಕೆ ಅವರ ನಿಧನಾನಂತರದ ಘಟ್ಟನೆಗಳೇ ನಾಕಿಯಾಗಿವೆ. ಸ್ವಾತಂತ್ರ್ಯಾನಂತರ ಭಾರತವು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು; ಆವುಗಳಿಂದ ಸುಧಾರಿಸುವಷ್ಟರಲ್ಲಿ ಯೋಜನೆಗಳನ್ನು ರೂಪಿಸಿ ಅವನ್ನು ಕಾರ್ಯಗತಗೊಳಿಸಿ, ಆಭಿವೃದ್ಧಿಯನ್ನು ಸಾಧಿಸ ತೊಡಗಿತು—ಹೌದು ಆದರೆ, ಈ ಎರಡು ಯೋಜನೆಗಳ ಪರಿಣಾಮವು ದೃಷ್ಟಿಗೋಚರವಾಗುವುದು ತೀರ ಕಡಮೆ. ಸ್ವಾತಂತ್ರ್ಯಾ ನಂತರ ಭಾರತವು ಸಾಧಿಸಿದ ಅದ್ವಿತೀಯ ಸಾಧನೆಯೆಂದರೆ ಭಾರತದ ಏಕ ಸೂತ್ರತೆ ಮಾತ್ರ. ಇದರ ಕೀರ್ತಿಸ್ಥಲ ಬೇಕಾದುದು ಸರದಾರ ಪಟೇಲರಿಗೆ ಮಾತ್ರ.

ಸರದಾರರ ನಿಧನಾನಂತರ ರಾಷ್ಟ್ರದ ಆಂತರಿಕ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಷ್ಟು ಸುಧಾರಣೆ ನಡೆದಿಲ್ಲ. ಪ್ರತಿ ರಾಜ್ಯದಲ್ಲೂ ಒಡಕು-ಅಸಮಾಧಾನಗಳು ತಾಂಡವನಾಡ ತೊಡಗಿವೆ. ರಾಷ್ಟ್ರದಲ್ಲಿ ಐಕ್ಯತೆಯ ಅಭಾವ-ಪ್ರತ್ಯೇಕತಾ ಭಾವನೆ ಬೆಳೆಯುತ್ತಿದೆ. ಯಾವ ರಾಷ್ಟ್ರದ ಪ್ರಜೆಗಳಲ್ಲಿ ರಾಷ್ಟ್ರೀಯ ಭಾವನೆಯ ಅಭಾವವಿರುವುದೋ ಅಲ್ಲಿ ಏನೈಕ್ಯವು ತಾನಾಗಿಯೇ ಉದ್ಭವಿಸುವುದು. ಸರದಾರರ ನಂತರ ಸರದಾರರಂತಹ ಕೆಚ್ಚೆದೆಯು, ಸ್ವತಂತ್ರ ನೀತಿಯನ್ನು ರೂಪಿಸಿ ದೇಶದ ಏಕ್ಯವನ್ನು ನಾಧಿಸಬಲ್ಲ ನಾಯಕ ನಮ್ಮಲ್ಲಿಲ್ಲವೆಂಬುದರಿಂದಲೇ ನಾವು ಅಂತಾರಾಷ್ಟ್ರೀಯತೆಯತ್ತ ತೂಗಾಡುತ್ತಿದ್ದೇವೆ. ವಮ್ಮ ನಾಯಕರನ್ನಿಸಿಕೊಂಡವರಾಷ್ಟ್ರೀಯತೆಯು ಮತ್ತು ಒಕ್ಕಟ್ಟಿನ ಪ್ರಾಧಾನ್ಯವನ್ನೂ ಅವಶ್ಯಕತೆಯನ್ನೂ ವಿವರಿಸಿ ತಾಸುಗಟ್ಟಲೆ ಭೂತಾಡುತ್ತಾರೆ; ಆದರೆ, ಕೇವಲ ಮಾತುಗಾರಿಕೆಯಿಂದ ಈ ಕೆಲಸವಾಗದೆಂಬ ಕಟು ಸತ್ಯವನ್ನು ಮರೆತು ಬಿಡುತ್ತಾರೆ. ರಾಷ್ಟ್ರಪತಿಗಳು ಹೇಳಿದಂತೆ, ಸರದಾರರಂತೆ ರಚನಾತ್ಮಕ ಕಾರ್ಯಕರ್ತರು ನಮಗೆ ಬೇಕು; ಕಾರ್ಯವೆಸಗುವ ಕೆಚ್ಚೆದೆಯ ಕಲಿಗಳು ಬೇಕು. ಇಂತಹರು ಮುಂದೆ ಬಂದು ದೇಶಕ್ಕಾಗಿ ದುಡಿಯುವ ಅವಕಾಶವನ್ನು ಜನತೆ ಒದಗಿಸಿಕೊಡಬೇಕು; ಸರದಾರರ ಮರಣದಿಂದ ತುಂಬಿ ಬಾರದ ನಷ್ಟ ಆಗತಾನೇ ಭರ್ತಿಯಾಗುತ್ತದೆ. ಇಲ್ಲವಾದರೆ, ಆ ಸ್ಥಾನ ಸದಾ ಶೂನ್ಯ. ಭಾರತೀಯರ ಕರ್ತೃತ್ವ ಶಕ್ತಿಯೂ ಶೂನ್ಯ!

ಬಂಗಾಳದ ಹುಲಿಗಳು

ಬಂಗಾಳದ ಪಟ್ಟೆಹುಲಿಗಳು ಬೃಗಾಲಯಗಳಲ್ಲಿ ತಮ್ಮ ಸ್ವಾತಂತ್ರ್ಯವನ್ನು ಭದ್ರವಾಗಿರಿಸುವಂತೆಯೇ ಲಿಪಿಯ ಕೆಲವು ದೇಶಭಕ್ತರೂ ಹುಲಿಯಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಅಜರಾಮರರಾಗಿದ್ದಾರೆ. ಪ್ರಾಯಃ ಹುಲಿಗಳಿಗೂ ಬಂಗಾಳಿಗಳಿಗೂ ಸ್ವಭಾವದಲ್ಲಿಯೂ ಆಚರಣೆಯಲ್ಲಿಯೂ ನಿಕಟ ಸಂಬಂಧವಿರಬೇಕು ಕೆಲವು ವರ್ಷಗಳಿಗೆ ಮೊದಲು ಬಂಗಾಳದ ಪೂರ್ವಭಾಗ ಸೇರಿದ ಪೂರ್ವ ಪಾಕಿಸ್ತಾನದಲ್ಲಿ ಶಾಸನ ಸಭಾ ಸದಸ್ಯರು ರೊಚ್ಚಿಗೆದ್ದು ಕುರಿಯ ಮೇಲೆ ಹೆಸಿದ ಹುಲಿಗಳು ಹಾರುವಂತೆ ನೆಗೆದು ಅಧ್ಯಕ್ಷರನ್ನು ಬಡೆದುಕೊಂದ ಚಮತ್ಕಾರದ ದುರ್ಘಟನೆ ನಡೆದಿತ್ತು. ಈಗ ಜಲ್ಲಿ, ಅಯೂಬಖಾನರ ಸರ್ವಾಧಿಕಾರತನದಲ್ಲಿ ಅದಕ್ಕೆ ಅವಕಾಶವಿಲ್ಲವೆಂದೇ ಅಥವಾ ಹುಲಿಗಳ ಉಗುರುಗಳು ಉಡಿದು ಹೋದುವೆಂದೋ, ಶಾಂತತೆ ನೆಲೆಯೂರಿದೆಯೆಂದು ವರದಿಗಳು ಬರುತ್ತಿವೆ. ಆದರೆ, ಆ ಹುಲಿಗಳು ಬಿಡುವ ನಿಟ್ಟುಸಿರು ಇತ್ತೀಚೆಗೆ ಪಶ್ಚಿಮ ಪಾಕಿಸ್ತಾನದತ್ತ ಬೀರಿಸುತ್ತಿರುವಂತೆ ಭಾಸವಾಗುತ್ತಿದೆ. ಕೆಲವು ತಿಂಗಳುಗಳ ಹಿಂದಲು ಅಧ್ಯಕ್ಷರ ಮೇಲೆ ಚಪ್ಪಲಿ ಎಸೆಯುವಷ್ಟು ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ ಪಶ್ಚಿಮ ಬಂಗಾಳದ ಪ್ರಶಾಸನ ಪಟುಗಳೀಗ ಅಧ್ಯಕ್ಷರ ಅಧಿಕಾರ ದಂಡವನ್ನೂ ಕಿತ್ತುಕೊಳ್ಳುವಷ್ಟು ಜಾಣರಾಗಿರುವುದನ್ನು ಕೇಳುವಾಗ, ಪ್ರಜಾಸ್ವಭುತ್ವ ಪ್ರಿಯರಿಗೆ ಮರ್ಮಾಘಾತವಾಗದಿರದು ಭಿನ್ನಾಭಿಪ್ರಾಯದ ವಿಭಿನ್ನ ಪ್ರತಿನಿಧಿಗಳು ಸೇರಿ ಒಂದು ವಿಷಯದ ಮೇಲೆ ಚರ್ಚೆ ನಡೆಸುವಾಗ, ವಿರಸ ಪ್ರಸಂಗಗಳು ನಡೆಯುಬಹುದಾದುದು ಸಂಭವನೀಯವೇ ಆದರೂ ಜನತೆಯ ಪ್ರತಿನಿಧಿಗಳಾಗಿ ಆಯ್ಕೆಹೊಂದಿದ ಮಹನೀಯರು ತಮ್ಮ ಸ್ಥಾನವೂನ, ಗೌರವಗಳನ್ನು ವಿರೆತು ಆವುಗಳ ಬಗ್ಗೆ ಎಳ್ಳನಿತೂ ಕಾಳಜಿ ವಹಿಸದೆ ಹೇಯ ವರ್ತನೆ ಗಿಳಿಯುವುದು ಪ್ರಜಾಪ್ರಭುತ್ವದಲ್ಲಿ ಲಾಂಛನಾಸ್ಪದ! ಜನನಾಯಕರೇ ಇಂತಹ ಪೂರ್ಗದರ್ಶನ ನೂಡಿದರೆ, ಇನ್ನು ಸಾಮಾನ್ಯ ಜನರ ವಾಡೇನ? ಶಿವಪ್ಪನಾಣೆ ಹೇಳುವ ಪರಿಸ್ಥಿತಿಯಲ್ಲಿರಲಾರ!

ಶಬ್ದಚಿತ್ರ

ಕನ್ನಡಮ್ಮನ ಗುಡಿಯ ಪೂಜಾರಿ—ಅ.ನ.ಕೃ.

ಳತನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಸುವಿಖ್ಯಾತ ಸಾಹಿತಿ ಅ.ನ.ಕೃ. ರವರ ಅಧ್ಯಕ್ಷತೆಯಲ್ಲಿ "ಸಭೂತೋ ನ ಭವಿಷ್ಯತಿ" ಎಂಬಂತಾಗುವುದು ನಿಸ್ಸಂದೇಹ

ಹಳೆಯ ಜಾಡಿನಲ್ಲಿ ಕುಂಠಿತವಾಗಿ ಮುಂದುವರಿಯುತಿದ್ದ ಕನ್ನಡ ಸಾಹಿತ್ಯಕ್ಕೆ ಅಮರ ನಂದಾದೀಪವನ್ನು ತೋರಿ, ಅದನ್ನು ದಿವ್ಯತೆಯತ್ತ ಹರಿಯಗೊಟ್ಟವರಲ್ಲಿ ಅ. ನ. ಕೃ. ಅಗ್ರಗಣ್ಯರು. ಕೇವಲ ಆದರ್ಶ ವಾದದ ಬೆನ್ನು ಹತ್ತಿ ಸವಾರಿ ಮಾಡುವ ಸಾಹಿತ್ಯದಲ್ಲಿ ನಾಸ್ತವಿಕತೆಯನ್ನು ತೂರಿದ ಧೀರ ಧೀವಂತ ಸಾಹಿತಿ ಅ. ನ. ಕೃ. ಎಂತಲೇ, ಇಂದು ಅ.ನ.ಕೃ. ಕನ್ನಡಿಗರೆಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ, ತಮ್ಮ ಅನವಂತ ಸರಸ್ವತೀ ಸೇವೆಯಿಂದ.

ಕನ್ನಡ ನಾಡಿನಲ್ಲಿ ಕನ್ನಡದ ಕೃಷಿಯು ಏನೇನೂ ಪಡೆಯದೆ ಕಾಲದಲ್ಲಿ, ಇಂಗ್ಲಿಷ್ ಭಾಷೆಯು ಸವಾರಿ ಮಾಡುತಿದ್ದ ಕರ್ನಾಟಕದಲ್ಲಿ, ಕನ್ನಡದ ಬಗ್ಗೆ ಅಭಿಮಾನ, ಆಸಕ್ತಿಗಳು ಹುಟ್ಟುವಂತೆ ಪ್ರಯತ್ನ ನಡೆಸಿದವರು ಇವರು. ಸಣ್ಣ ಕಥೆ, ಕಾದಂಬರಿ, ನಾಟಕ, ವಿಮರ್ಶೆ, ವಿಚಾರಾತ್ಮಕ ಗ್ರಂಥಗಳನ್ನು ಬರೆದು ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಕಷ್ಟು ಕೃಷಿಮಾಡಿದ ಕನ್ನಡಮ್ಮನಗುಡಿಯ ಪೂಜಾರಿಯವರು.ತಮ್ಮೆಲ್ಲ ಸಾಹಿತ್ಯ ಕೃತಿಗಳಲ್ಲಿಸೂರ್ಯನಡಿಯಲ್ಲಿ ದಿನಂಪ್ರತಿನಡೆಯುವ ದಿನಚರಿಯನ್ನು ಮಾಡಿಸಿ, ಅವನ್ನು ಸಜೀವವಾಗಿಸಿದ್ದಾರೆ. ಈ ಕಾರಣದಿಂದಲೇ ಅ. ನ. ಕೃ.ರವರ ಕೃತಿಗಳು ಸತ್ವವರ ಕಥೆಗಳಾಗಿಯಾಗಲಿ, ಹುಟ್ಟುವವರ ಕಥೆಗಳಾಗಿಯಾಗಲಿ ಪರಿಣಮಿಸದೆ, ಇಂದಿನ ಜನರೆಲ್ಲರ ಜೀವನ ಕಥೆಯಾಗಿದೆ.

ಪ್ರಾರಂಭದಲ್ಲಿ ಅ. ನ ಕೃ. ಬರೆದ 'ಜೀವನಯಾತ್ರೆ'—ಕಾದಂಬರಿಯು ಮಡಿವಂತರ ಆಪವಾದವನ್ನು ಕೇಳಬೇಕಾಯ್ತಂತೆ. ಆ ಸಮಯ ಕನ್ನಡಕದ ನಾಲ್ಕೂ ಸಿಟ್ಟುಗಳಿಂದ 'ಸಾಹಿತ್ಯದ ಅಂತಸ್ತು ಕುಸಿಯಿತು' ಎಂಬ ಕೂಗೆದ್ದಿತಂತೆ. ಇದೇ ಮೊದಲಿಯ ಕೂಗು, ಇವರ ಮುಂದಿನ ಕೃತಿಗಳಾದ 'ನನ್ನ ಸತ್ಯ', 'ಶನಿ ಸಂತಾನ', 'ಸಂಜೆಗತ್ತಲು','ಸಾಹಿತ್ಯ ರಶ್ಮಿ' ಗಳು ಬೆಳಕು ಕಂಡಾಗ ಮತ್ತಷ್ಟು ಬಿರುಸಾಯಿತು. 'ನಟಸಾರ್ವ ಭೌಮ' ಕಾದಂಬರಿಯನ್ನೋದಿದವರು ಇದಕ್ಕೆ 'ವಿಟ ಸಾರ್ವ ಭೌಮ'ನೆಂಬ ಹೆಸರೇ ಸೂಕ್ತವೆನ್ನುವುದುಂಟು. ಅಂತೂ ಪ್ರಾಯಃ ಅ. ನ. ಕೃ. ಬರೆದಷ್ಟು ಕೃತಿಗಳನ್ನು ಬರೆದವರೂ ಇಲ್ಲ; ಅವರಷ್ಟು ಟೀಕೆ ಟಿಪ್ಪಣಿಗಳಿಗೊಳಗಾದ ಕನ್ನಡ ಸಾಹಿತಿಯೂ ಇರಲಾರ.

ಅ. ನ. ಕೃ. ಸಾಹಿತ್ಯಾರಾಧನೆಯೇ ತನ್ನ ಉದ್ದೇಶವೆಂದಿಟ್ಟುಕೊಂಡವರು. ಕನ್ನಡಿಗರಲ್ಲಿ ತಮ್ಮ ಬಗ್ಗೆ ಅಭಿಮಾನ ಮೂಡಬೇಕು; ಸುಸಜ್ಜಿತಿಯಿಂದ ಜಾಗೃತರಾಗಬೇಕು ಎಂಬ ಹಂಬಲದಿಂದ ಕರ್ನಾಟಕದ ಮೂಲೆ ಮೂಲೆಯನ್ನು ಸುತ್ತಾಡಿ ಕನ್ನಡಿಗರ ಸಂಘಟನೆಗಾಗಿ, ಕರ್ನಾಟಕ ರಾಜ್ಯ ರಚನೆಗಾಗಿ ದುಡಿದವರಿವರು. ಪ್ರಗತಿಶೀಲ ಸಾಹಿತ್ಯ ಸಂಘವನ್ನು ಸ್ಥಾಪಿಸಿ, ಕನ್ನಡದಲ್ಲಿಯೂ ಸಾಹಿತ್ಯ ಬೆಳೆಯುವಂತೆ ವಿಕಸಿತವಾಗುವಂತೆ ವತ್ತು ಪ್ರಗತಿಪಥದೆಯುವಂತೆ ಮಾರ್ಗದರ್ಶನ ನೂಡಿದವರಿವರು.

'ಜೀವನಯಾತ್ರೆ'ಯನ್ನು ಪ್ರಾರಂಭಿಸಿದ ಅ. ನ. ಕೃ. 'ಉದಯ-ರಾಗ', ಸಂಧ್ಯಾರಾಗ'ಗಳನ್ನು ಹಾಡಿ, 'ನನ್ನ ಸತ್ಯ'ವನ್ನು ಬಯಲಿಗೆಳೆದು, 'ವಿಜಯ ವಿದ್ಯಾರಣ್ಯ'ದ

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ನಿ. ಯಸ್. ಕುಡುವರ ಪುನರಾಗಮನ—ನವಭಾರತ ಸಂಯಾದಕರೂ ಕೆನರಾ ವರ್ಕ್ ಶೋಪ್ಸ್ ಲಿಮಿಟೆಡ್‌ನ ಟೆಕ್ನಿಕಲ್ ಡೈರೆಕ್ಟರೂ ಆದ ಶ್ರೀ ವಿ. ಎಸ್. ಕಾಮುರಿಯ ಸುಬ್ಬರಾಯ 3 ತಿಂಗಳ ಜಾಗತಿಕ ಸ್ವಯಹಾರ ಪ್ರವಾಸವನ್ನು ಮುಗಿಸಿಕೊಂಡು ಇಂದೇ ತಾ. 16ರಂದು ಮಂಗಳೂರಿಗೆ ಹಿಂತಿರುಗಿ ಬಂದಿದ್ದಾರೆ. ಬಜ್ಪೆ ವಿಮಾನ ನಿಲ್ದಾಣದಲ್ಲಿ ಇವರಿಗೆ ಭವ್ಯ ಸ್ವಾಗತವನ್ನೀಯಲಾಯಿತು. ಇವರು ಪಶ್ಚಿಮ ಜರ್ಮನಿ, ಜಪಾನ್, ಅಮೆರಿಕ, ಕೆನಡಾ, ಜೆಕೊಸ್ಲೊವಾಕಿಯಾ ಮೊದಲಾದ ಊರುಗಳನ್ನು ಸಂದರ್ಶಿಸಿ ಬಂದಿರುವರು.

ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶ್ರೀ ಟಿ. ಎ. ಪೈಗಳ ಭಾಷಣ—ಇಂದೇ ತಾ. 12ರಂದು ಸುರತ್ಕಲ್ಲಿನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ವ್ಯಾನಿಂಗ್ ಫೋರಂನ ಆಶ್ರಯದಲ್ಲಿ ಕಾಲೇಜು ಯೂನಿಯನ್ ಏರ್ಪಡಿಸಿದ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಭಾರತದಲ್ಲಿ ಯೋಜನೆಗಳು ಎಂಬ ಕುರಿತು ಉಪನ್ಯಾಸವೀಯುತ್ತಾ ಯೋಜನೆಗಳಿಂದ ಸಾಧಿಸಲಾದ ಪ್ರಗತಿಯನ್ನು ವಿವರಿಸಿದರು.

ಮಂಗಳೂರು ಯುವಕ ಕಾಂಗ್ರೆಸ್ಸಿನ ನಾಮಸ್ತಾತ್ಮಿಕ ಕಾರ್ಯಕ್ರಮವು ತಾ. 16ರಂದು ಶ್ರೀ ಕೆ. ದಯಾನಂದರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಹಿಂದೂ ಕಾನೂನಿನ ಕುರಿತಾಗಿ ಭಾಷಣವಿತ್ತರು.

ಶಾಲಾ ವರ್ಧಂತಿ— ಇನ್ಫಂಟ್ರಿಯ ಎಸ್. ಪಿ. ಎಸ್. ಹೈಸ್ಕೂಲಿನ ವರ್ಧಂತಿಯು ಉಡುಪಿ ನಗರ ಸಭಾಪತಿ ಡಾ ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ತಾ. 10ರಂದು ವಿಜೃಂಭಣೆಯಿಂದ ನೆರವೇರಿತು. ಶಾಲಾ ವ್ಯವಸ್ಥಾಪಕರಾದ ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವಾಗತಿಸಿದ ಮೇಲೆ ಶ್ರೀ ಕೆ. ನಾರಾಯಣ ಭಟ್ಟರು ಸ್ವಾಸ್ತಿವಾಚನ ನೂಡಿದರು. ವರದಿವಾಚನ, ಪಾರಿತೋಷಕ ವಿತರಣೆ ಮೊದಲಾದ ಕಾರ್ಯಕ್ರಮಗಳಾದ ಮೇಲೆ ಅಧ್ಯಕ್ಷರು ಶಾಂತಿನಿಕೇತನದಂಥ ಈ ಶಾಲೆಯು ಪ್ರಗತಿಯನ್ನು ಕೊಂಡಾಡಿ ಭಾಷಣವಿತ್ತರು. ರಾತ್ರಿ ಮನರಂಜನೆಯ ಕಾರ್ಯಕ್ರಮಗಳಾದುವು. ಆದೇ ದಿನ ಬೆಳಿಗ್ಗೆ ಮುಟ್ಟೋಪಾಧ್ಯಾಯ ಶ್ರೀ ವಿಠಲ ಶೆಣೈಯವರು ದೈಜ ರೋಪಣ ಮಾಡಿದ್ದರು.

ಇದೇ ಶಾಲೆಯ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶಿವಮದ ಡಾ. ಯು. ಕೆ. ಆಚಾರ್ಯರ ಅಧ್ಯಕ್ಷತೆಯಲ್ಲಿ ತಾ 11ರಂದು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ನಿಧನ—ಕೆಲವು ಸಮಯದಿಂದ ಆಸ್ವಸ್ಥದಿಂದಿದ್ದ ಶ್ರೀ ಬಡಗಬೆಟ್ಟು ವೆಂಕಪ್ಪ ಹೆಗ್ಡೆಯವರು ಇಂದೇ ತಾ. 7ರಂದು ಸ್ವರ್ಗಸ್ಥರಾಗಿರುವರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಪ್ರಸಿದ್ಧ ಮನೆತನಕ್ಕೆ ಸೇರಿದವರಾಗಿದ್ದು ಜನಾನುರಾಗ ಗಳಿಸಿದ್ದರು. ವಿದ್ಯಾಭಿಮಾನಿಗಳೂ ಸಾರ್ವಜನಿಕ ಸೇವಾಸಕ್ತರೂ ಆಗಿದ್ದರು.

ಆಜ್ಞೆ—ಸ್ಥಳೀಯ ಪಂಚಾಯತಿನ ವತಿಯಿಂದ ನೂತನವಾಗಿ ವಿಸ್ತರಿಸಲಾದ ಪಟ್ಟೇವಾರು ಮೊಕ್ತೇಟು ಮತ್ತು ಬೀದಿ ದೀಪಗಳ ಉಪ್ಪಾಟನಾ ಸವಲರಿಂಧುವು ತಾಲೂಕು ಬೋರ್ಡು ಸದಸ್ಯ ಶ್ರೀ ಜೆ ಸುಬ್ರಾಯ ಆಚಾರ್ಯರ ಅಧ್ಯಕ್ಷತೆಯಲ್ಲಿ ತಾ 12ರಂದು ಜರಿಗಿತು ಗ್ರಾಮ ಸೇವಕ ಶ್ರೀ ಬಿ. ಆನಂದ ಪಟ್ಟರು ಸ್ವಾಗತಿಸಿದ ಬಳಿಕ ಶ್ರೀಗಳಾದ ರಾಮಕೃಷ್ಣ ಅಡಿಗ, ತೇಜಪ್ಪ ಸೆಟ್ಟಿ, ರಘುರಾಮ ಸೆಟ್ಟಿ ಮೊದಲಾದವರು ಪಂಚಾಯತಿನ ಪ್ರಗತಿಪರ ಕಾರ್ಯಕಲಾಪಗಳನ್ನು ಶ್ಲಾಘಿಸಿದರು. ಪ್ರದರ್ಶನಕ್ಕೆ ತಂದ ಉತ್ತಮ ಜಾನುವಾರುಗಳಿಗೆ ಬಹುಮಾನ ಕೊಟ್ಟ ಮೇಲೆ ಪಂಚಾಯತ ಚೇರ್‌ಮೇನ್ ಶ್ರೀ ಎ ಎಸ್., ನಿತಲ ಪಟ್ಟರು ಧನ್ಯವಾದಗಳರ್ಪಿಸಿದರು.

ಶಿಶು ಮಹಿಳಾ ಕಲ್ಯಾಣ ಕೇಂದ್ರ—ಪೊಂದು ಬ್ರಹ್ಮಾವರವಲ್ಲಿ ಸ್ಥಳೀಯ ಪಂಚಾಯತಿನ ಸಭಾಪತಿ ಶ್ರೀ ಬಿ. ವಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ತಾ 7ರಂದು ಫಿಕ್ಕಾರೆವಿನ್ಯೂ ಇನ್ಸಿಪೆಕ್ಟರ್ ಶ್ರೀ ಜಿ. ವಿನೇಜಸರಿಂದ ಉದ್ಘಾಟಿಸಲ್ಪಟ್ಟಿತು. ಉಡುಪಿ ತಾಲೂಕು ಸಮಾಜ ಕಲ್ಯಾಣ ಇನ್ಸ್‌ಪೆಕ್ಟರ್ ಶ್ರೀ ಭಾಸ್ಕರ ಆಚಾರ್ ಇವರು ಸ್ವಾಗತಿಸಿ ಕೇಂದ್ರದ ಉದ್ದೇಶಗಳನ್ನು ವಿವರಿಸಿದರು ಅಧ್ಯಕ್ಷರು ಬ್ರಹ್ಮಾವರ ಜನತೆಯ ಪರವಾಗಿ ಕೇಂದ್ರಾರಂಭವಾದುದಕ್ಕಾಗಿ ಸಂತೃಪ್ತಿ ಸೂಚಿಸಿ ಇದು ಆದರ್ಶರೀತಿಯಲ್ಲಿ ನಡೆಯಲೆಂದು ಹಾರೈಸಿದರು ಮಕ್ಕಳಿಗೆ ತಿಂಡಿ ವಿತರಣೆಯಾದ ಬಳಿಕ ಸಾಮೂಹಿಕ ಕಲ್ಯಾಣ ಇನ್ಸ್‌ಪೆಕ್ಟರು ಧನ್ಯವಾದಗಳರ್ಪಿಸಿದರು. ಈ ಕೇಂದ್ರದ ಸಂಘಟಕರಾಗಿ ಕೂಮಾರಿ ಜೊಸೆಫೀನ್ ಎಸ್. ಸುಮಿತ್ರಾ ಇವರು ನೇಮಿಸಲ್ಪಟ್ಟಿದ್ದಾರೆ.

ಉಡುಪಿಯ ಕಡಿಯಾಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಲಿಮೆಂಟರಿ ಶಾಲೆಯ— ಹಳೆಯ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೇರಿ, ಶ್ರೀ ಕೆ. ಕೆ. ಪೈಯವರನ್ನು ಅಧ್ಯಕ್ಷರನ್ನಾಗಿ, ಶ್ರೀ ಕಂ. ಶಿ. ಹರಿದಾಸ ಭಟ್ಟರನ್ನು ಉಪಾಧ್ಯಕ್ಷರೆನ್ನಾಗಿಯೂ, ಶ್ರೀ ಎಸ್ ಗೋಪೀಚಂದ ರಾವ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ, ಶ್ರೀ ಕೆ ಗೋಪಾಲ ಕೃಷ್ಣ ಉಪಾಧ್ಯಾರನ್ನು ಉಪಕಾರ್ಯದರ್ಶಿಯಾಗಿಯೂ, ಮತ್ತು ಶ್ರೀ ವಿ. ಗುರುರಾಜ ಭಟ್ಟರನ್ನು ಕೋಶಾಧಿಕಾರಿಯಾಗಿಯೂ, ಆರಿಸಿತು. ತಾನು ಪ್ರಕಟಿಸುತ್ತಿರುವ ಮಹಿಳಾ ಮಂದಿರ ಕಲಾಮಂದಿರದ ಉದ್ಘಾಟನೆಯನ್ನು ಮುಂದಿನ ಫೆಬ್ರವರಿ ತಿಂಗಳಲ್ಲಿ ನಡೆಸಬೇಕೆಂದೂ ಅದು ನಿರ್ಧರಿಸಿತು

ಉಡುಪಿ ತಾಲೂಕು ಬೋರ್ಡು ಕಾಂಗ್ರೆಸ್ ಸದಸ್ಯರ ಸಭೆಯು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾ. 10ರಂದು ಜರಗಿ ಶ್ರೀ ಮಧ್ವರಾಜರು ಅಧ್ಯಕ್ಷರಾಗಿಯೂ ಡಾ ಯು. ಕೆ. ಆಚಾರ್ಯರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಬಳಿಕ ತಾಲೂಕು ಪಟ್ಟೀರಿಯಲ್ಲಿ ಅಸಿಸ್ಟಾಂಟ್ ಕಮಿಶನರ್ ಶ್ರೀ ಕೆ. ನರಸಿಂಹ ಮೂರ್ತಿಯವರ ಹೆಸ್ಮೆಯಲ್ಲಿ ಮೇಲಿನವರೇ ಅದಿಕೃತವಾಗಿ ಆವಿರೋಧವಾಗಿ ಚುನಾಯಿತರಾಗಿದ್ದಾರೆ.

ಸತ್ತಾರ್—ಉಡುಪಿ ತಾಲೂಕು ಬೋರ್ಡಿನ ಅಸ್ಥಾಕ್ಷ ಮತ್ತು ಉಪಾಧ್ಯಕ್ಷರಾಗಿ ಚುನಾಯಿತರಾದ ಶ್ರೀ ಮುದ್ಗರಾಜ ಮತ್ತು ಡಾ. ಕುಸ್ಪಣ್ಣಾಚಾರ್ಯ ಹಾಗೂ ಇತರ ತಾಲೂಕು ಬೋರ್ಡು ಸದಸ್ಯರಿಗೆ ಸತ್ತಾರಿನಲ್ಲಿಯ ಸಮೂರಂಭವು ತಾ 18ರಂದು ಸುಲ್ತೆ ಫಿಶ್ ಕ್ಯೂರರ್ಸ್ ಎಂಡ್ ಎಕ್ಸ್‌ಪೋರ್ಟರ್ಸ್ ಎಸೋಸಿಯೇಶನ್ ಇದರ ಆಶ್ರಯದಲ್ಲಿ ಸುಲ್ತೆ ಫಿಶರೀಸ್ ಸ್ಕೂಲಿನಲ್ಲಿ ಜರಿಗಿತು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಶ್ರೀ ಕೆ. ಆರ್. ಬಂಗೇರರು ಸ್ವಾಗತಿಸಿದರು. ಶ್ರೀ ಉದ್ಯಾವರ ಮಾಧವ ಆಚಾರ್ಯರು ತನ್ನ ಅಧ್ಯಕ್ಷತೆಯ ಜವಾಬ್ದಾರಿಯನ್ನು ವಿವರಿಸಿದರು. ಡಾ. ಕುಸ್ಪಣ್ಣಾಚಾರ್ಯ, ಶ್ರೀ ದೇವೇಂದ್ರ ಪೆಜತ್ತಾಯ, ಆರ್. ಆರ್. ಕುಂದಾಪುರ ಮೊದಲಾದವರು ಭಾಷಣವಿತ್ತ ಮೇಲೆ ತಾಲೂಕು ಬೋರ್ಡಿನ ಅಧ್ಯಕ್ಷತನವು ಜನಸೇವೆ ಸಲ್ಲಿಸುವ ಜವಾಬ್ದಾರಿ ಸ್ಥಾನವೆಂದೂ ಹೊಣೆ ಸದ್ವಿನಿಯೋಗವಾಗುವಂತೆ ನೋಡಬೇಕಾವದು ಮುಖ್ಯವೆಂದೂ ಅಧ್ಯಕ್ಷ ಶ್ರೀ ಟಿ ಎ. ಪೈಗಳು ಹೇಳಿದರು. ಶ್ರೀ ಎಸ್. ಕೆ. ಅವಿನಾರು ಆಭಾರ ಮನ್ನಿಸಿದರು.

ಎಸ್ ಕೆ. ಸಿ. ಸಿ. ಬ್ಯಾಂಕ್ ಲಿ ಮಂಗಳೂರು—ಇದರ ತಾ 30ರಲ್ಲಿ ಜರಿಗಿದ ಡೈರೆಕ್ಟರ ಸಭೆಯಲ್ಲಿ ಶ್ರೀ ಬಿ. ಪ್ರಭಾಕರರಾಯರು ಅಧ್ಯಕ್ಷರಾಗಿಯೂ ಶ್ರೀ ಬಿ. ನಾರಾಯಣ ನಾಯ್ಕರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ರೋಕಿ ಫೆರ್ನಾಂಡಿಸ್, ರಾಮಕೃಷ್ಣ ಕೋಟೆಕಾರ್ ನಾರಾಯಣ ರಾವ್‌ಇವರು ಕಾರ್ಯಕಾರಿ ಮಂಡಳಿಯ ಸದಸ್ಯರಾಗಿಯೂ ಆರಿಸಲ್ಪಟ್ಟಿದ್ದಾರೆ.

ಮೇಲ್ಪಿಚಾರಕ ಸಮಿತಿಗೆ ಶ್ರೀಗಳಾದ ಕುಕ್ಕಾಲು ಗಣಪಯ್ಯ ಸೆಟ್ಟಿ ಆರ್. ಕೆ. ಸಂಜೀವ ರಾವ್ ಡಿ. ಸುಬ್ಬರಾವ್ ಇವರು ಚುನಾಯಿತರಾಗಿದ್ದಾರೆ.

ಕುಟುಂಬ ನಿಯಂತ್ರಣ ಯೋಜನಾ—ಸಭೆಯೊಂದು ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ ತಾ. 18ರಂದು ಡಾ| ವಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಿಗಿ. ಡಾ| ಅನಂತರಾವ್, ಡಾ| ಪದ್ಮರಾವ್, ಡಾ| ಕೆ ಎಲ್. ಐತಾಳ್ ಶ್ರೀ ಎ. ಜೆ. ಅಲ್ಲೆ ಮೊದಲಾದವರ ಭಾಷಣಗಳಾದುವು ಡಾ| ಪಿ. ಎನ್ ಶ್ರೀನಿವಾಸಯ್ಯನವರು ಧನ್ಯವಾದಗಳನ್ನರ್ಪಿಸಿದರು ಯೋಜನೆಗೆ ಸಂಬಂಧಿಸಿದ ವಸ್ತು ಪ್ರದರ್ಶನವೂ ಇದ್ದಿತು.

ಹಿಂದೂ ದೇವಾಲಯಗಳಲ್ಲಿ ಉಂಬಳಿ ಸಮಿತಿಯ ಆಗಮನ—ಡಾ| ಸಿ. ಪಿ. ರಾಮಸ್ವಾಮಿ ಅಯ್ಯರರ ಆತ್ಮಕ್ಷತೆಯಲ್ಲಿ ಕೇಂದ್ರ ಸರಕಾರದಿಂದ ನೇಮಿತವಾದ ಉಂಬಳಿ ಜನರ ಸಮಿತಿಯು ತಾ 19ನೇ ಬೆಳಿಗ್ಗೆ ಮಂಗಳೂರಿನಿಂದ ಉಡುಪಿಗೆ ಆಗಮಿಸಿ ಮಾನಾಧಿಪತಿಗಳಿಂದಲೂ ಇತರರಿಂದಲೂ ಸಾಕ್ಷ್ಯಗಳನ್ನು ಪಡೆದಿರುತ್ತದೆ

ಡಾ| ಸಿ.ಪಿ. ರಾಮಸ್ವಾಮಿ ಐಯ್ಯರರಿಗೆ ಮಾನಪತ್ರ ಸತ್ಕಾರ ಸಮಾರಂಭಗಳು—ಹಿಂದೂ ಧಾರ್ಮಿಕ ಉಂಬಳಿ ಸಮಿತಿಯ ಅಧ್ಯಕ್ಷರಾದ ಡಾ| ಸಿ. ಪಿ. ರಾಮಸ್ವಾಮಿ ಐಯ್ಯರರಿಗೆ ಉಡುಪಿ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಅಧ್ಯಮರು ನುಡೆದ ಶ್ರೀ ಶ್ರೀ ಪಿಭುದೇಶ ತೀರ್ಥ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ತಾ 19ರಂದು ಮಾನಪತ್ರವನ್ನು ಪ್ರಿನ್ಸಿಪಾಲ್ ವಿ. ಎಂ. ಇನಾಮ್ದಾರರು ಆರ್ಪಿಸಿ ನಿಡಲು ಡಾ| ಸಿ ಪಿ ಯವರು ಸಂದರ್ಭೋಚಿತವಾಗಿ ಉತ್ತರವಿತ್ತ ಮೇಲೆ ಶ್ರೀ ಎ. ಜೆ. ಇಲ್ಲೆಯವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ರೋಟರಿ ಕ್ಲಬ್ಬಿನಲ್ಲಿ ರಾತ್ರಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಸಿ ಪಿ ಯವರು ಭಾಷಣವಿತ್ತರು ಶ್ರೀ ಟಿ ಎ ಪೈಗಳು ಧನ್ಯವಾದ ವನ್ನರ್ಪಿಸಿದರು. ಬಳಿಕ ಭೋಜನ ಸತ್ಕಾರ ನಡೆಯಿತು

ತಾ. 20ನೇ ಬೆಳಿಗ್ಗೆ ಶ್ರೀ ಸಿ. ಪಿ.ಯವಯವರು ಎಂ. ಜೆ.ಎಂ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣನನ್ನಿತ್ತರು.

ಜಿಲ್ಲಾ ಪ್ರೆಸ್ ಕೆಲಸಗಾರರ ಸಮ್ಮೇಳನ—ಪೊಂದು ತಾ.18ರಂದು ಉಡುಪಿ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ವಿ. ಶ್ರೀನಿವಾಸ ನೆಟ್ಟಿ, ಎಂ. ಎಲ್. ಎ ಆವರಿಂದ ಉದ್ಘಾಟಿಸಲ್ಪಟ್ಟು ಹಲವರ ಭಾಷಣಗಳಾಗಿ ಕೆಲವು ನಿರ್ಣಯಗಳು ಮಂಡಿಸಲ್ಪಟ್ಟವು.

ವರೆಗೆ ಮುಂದುವರಿದಿದ್ದಾರೆ. ತಮ್ಮ "ತಪೋಬಲ"ದಿಂದಲೂ ಕನ್ನಡಿಗರ "ಪುಣ್ಯ ವ್ಯಭಾವ"ದಿಂದಲೂ ಈ ನರುಷದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಹೊಂದಿದ್ದಾರೆ.

ಸಾದಾ ಪೈಜಾಮ, ನೆಹರೂ ಶರಟು ಅದರ ಮೇಲೊಂದು ವಾರ್‌ಕೋಟ್ ಹಾಕಿ, ಚಪ್ಪಲಿ ಮೆಟ್ಟುವ ಆ. ನ. ಕೃ.ರವರ ಕೇಶರಾಶಿ ಕೆಲವೊಮ್ಮೆ ಗಾಳಿಯಲ್ಲಿ ಹಾರಾಡುವುದೂ ಇದೆ. ಸದಾ ಸಿಗರೇಟು ಭಕ್ತರಾದ ಇವರು ನಿಗರ್ವಿಗಳು, ನಿರಹಂಕಾರಿಗಳು. ತಮ್ಮನ್ನು, ತಮ್ಮ ಸಾಹಿತ್ಯವನ್ನು ಮೆಚ್ಚದವರನ್ನೂ ಆರೋಗ್ಯ ಮತ್ತು ಆಯುಸ್ಸು ದೊರೆತು ಬಿಟ್ಟರೆ, ಗೆದು ಬಿಡುವೆನೆಂಬ ಆತ್ಮ ವಿಶ್ವಾಸ ಇವರಲ್ಲಿದೆ. ಈ ಮೊದಲು ನಡೆದ ಕೆಲವಾರು ಸಾಹಿತ್ಯ ಸಮ್ಮೇಳನಗಳಲ್ಲಿ ಇವರೇ ಅಧ್ಯಕ್ಷರಾಗಬೇಕೆಂಬ ಸೂಚನೆ ಬಂದಿದ್ದರೂ ಆದು ಈಡೇರಿರಲಿಲ್ಲ. ಉಡುಪಿ—ಮಣಿಪಾಲದಲ್ಲಿ ನಡೆಯುವ ಅತಿಥಿಯ ಸಮ್ಮೇಳನವು ವಿಖ್ಯಾತ ಸಾಹಿತಿ ಆ. ನ. ಕೃ.ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆದು ಕನ್ನಡಿಗರಲ್ಲಿ ನವಚೇತನ, ನವಕಾರ್ಯಪಟುತ್ವಗಳನ್ನು ಮೂಡಿಸುವುದೆಂದು ಹಾರಯಿಸಬಹುದು.

ಕಾಸರಗೋಡು ಮು. ಕೋರ್ಟಿನ ನಿ

O. S No 227/1960

ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಭಂಡಾರಂ ಮೇನೆಜಿಂಗ್ ಟ್ರಸ್ಟಿ, ಎ. ಮಹಾಲಿಂಗಯ್ಯ — ವಾದಿ.

ಕೃಷ್ಣರಾಯ್ ಕೂಡಾ —ಪ್ರತಿವಾದಿರು.

ಸದರಿ ವ್ಯವಹಾರಣೆಯ ತೀರ್ಪು ಪ್ರತಿವಾದಿ ತಿಂಮಯ್ಯ ಹೆಬ್ಬಾರ್, ತಿಂಮಯ್ಯ ಹೆಬ್ಬಾರರ ನುಗ. ಕಾಸರಗೋಡು ತಾಲೂಕು ಯಣ್ಣೂ ಕಜೆ ಗ್ರಾಮ ವೆಲ್ಲ ಎಂಬವರುಗಳ ಯೂ ನುಲು ಲಕ ವಾದಿಯರ ಕಡೆಯಿಂದ ತಿಳಿಸುವು ದೇನೆಂದರೆ—

ಸದ್ರಿ ವ್ಯವಹಾರಣೆಯ ವಾದಿ ಭಂಡಾರಕ್ಕೆ ತಾ 28—5 1918 ರಲ್ಲು ರೂಪ್ಯಾ 150ಕ್ಕೆ ಬರೆಕೊಟ್ಟ ಆಡವು ದಸ್ತಾವೇಜಿನ ಬಗ್ಗೆ ಬರತಕ್ಕೆ ಬಡ್ಡಿಟಾಕಿ ಕುರಿತು ದಾಕ್ಷ್ಯಮೂಡಿದ ಮೇಲ್ಕಂಡ ವ್ಯವಹರಣೆಯು ತಾ. 4.1.1961ಕ್ಕೆ ಆಪ್ಯೆರು ತಪ್ಪಿಗೆಯಟ್ಟಿರುವುದರಿಂದ ಆ ದಿನ ಹಗಲು ಗಂಟೆ 11ಕ್ಕೆ ಹಾಜ್ರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟೆ ನೂಡಲಾಡೀತು ಎಂತ ಕೋರ್ಟು ಹುಕುಂ ಪ್ರಕಾರ ಈ ನೂಲಕ ತಿಳಿಸೋಣಾಗಿಯದೆ.

H. Hariappa Bhat,
Advocate for Plaintiff.
ಕಾಸರಗೋಡು ತಾ. 14—12—60

ವಾಚಕರಲ್ಲಿ ವಿನಂತಿ.

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ವಾಡಿಕೆಯಂತೆ ಬರುವ ವಾರದ ತಾರೀಕು 29—12—60 ರಂದು ಸಂಚಿಕೆಯನ್ನು ನಿಲ್ಲಿಸಿದ್ದೇವೆ. ವಾಚಕರು ಗಮನಿಸಬೇಕಾಗಿ ವಿನಂತಿ.

—ಮೆನೇಜರ್.

ವಾರ್ತೆಯಲ್ಲಿ ವ್ಯಕ್ತಿ

ಯು. ಪಿ. ಯ ಮುಖ್ಯಮಂತ್ರಿ--ಭಾನುಗುಪ್ತ

ಮೊದಲಿನ ಚುನಾವಣೆಯಲ್ಲಿ ಸೋತುಹೋದ ಶ್ರೀ ಚಂದ್ರಭಾನು ಗುಪ್ತರು ಕೇಂದ್ರ ವರಿಷ್ಠರ ಆಶೀರ್ವಾದ ಬಲದಿಂದ ಡಾ। ಸಂಪೂರ್ಣಾನಂದರನ್ನು ಮನೆಗೆ ಕಳಿಸಿ, ಅವರ ಸ್ಥಾನವನ್ನೇರಿದರು. ಆದರೆ, ತಮ್ಮ ಹೊಣೆಯನ್ನು ಅವರಂತೆ ನಿರ್ವಹಿಸಿಯಾರೆ?

೧೯೫೭ರ ಎರಡನೆಯ ಸಾರ್ವತ್ರಿಕ ಮತ್ತು ೧೯೫೯ರ ಉಪಚುನಾವಣೆಗಳಲ್ಲಿ ಪರಾಜಿತರಾದ ನಂತರ ಶ್ರೀ ಚಂದ್ರಭಾನು ಗುಪ್ತರು ಮುಂದಿನ ಎರಡೇ ವರ್ಷಗಳೊಳಗೆ ಉತ್ತರ ಪ್ರದೇಶದ ಮುಖ್ಯ ಮಂತ್ರಿಯಾಗುವರೆಂದು ಯಾರೂ ಕನಸು ಕಂಡಿರಲಿಲ್ಲ; ಅವರೂ ಭಾವಿಸಿರಲಾರರು. ಈ ಪದವಿಗೆ ಬರಲು ಶ್ರೀ ಗುಪ್ತರು ಎದುರಿಸಬೇಕಾಗಿ ಬಂದಷ್ಟು ವಿಘ್ನವಿಡ್ಡೂರಗಳು ಬೇರಾರಿಗೂ ಒದಗಿ ಬಂದಿರಲಿಲ್ಲ. ಪಕ್ಷದ ಒಂದು ಒಳಗುಂಪು ಇವರ ಮೇಲೆ ಅಸ್ತ್ರ ಸನ್ನವಾಗಿತ್ತು; ಉತ್ತರ ಪ್ರದೇಶ ಪ್ರಸವಾ ಪಕ್ಷವೂ ಇವರ ವಿರುದ್ಧ ಧ್ವನಿಯೆತ್ತಿತ್ತು. ಆದರೆ, ಉತ್ತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಚುನಾವಣೆಯ ಮೂಲಕ ಗೆದ್ದುಕೊಂಡು ಇವರು ಊದಿದ ಧ್ವಜವನ್ನು ಅಲ್ಲಾಡಿಸಲು ಅವರಾರಿಗೂ ಸಾಧ್ಯವಾಗಲಿಲ್ಲ. ಕೊನೆಯಲ್ಲಿ ಡಾ। ಸಂಪೂರ್ಣಾನಂದರ ಕೋಪವು ಇವರಿಗೆ ವರ ಸಮೂಹವಾಯಿತು; ಶ್ರೀ ನೆಹರು ಮತ್ತು ಪಂ. ಪಂತರ ಆಶೀರ್ವಾದ ಪಡೆದು ಭಾರತದ ಒಂದು ವಿಶಾಲ ರಾಜ್ಯದ ಮುಖ್ಯ ಮಂತ್ರಿ ಪದವಿಯನ್ನಲಂಕರಿಸಿಯೇ ಬಿಟ್ಟರು.

ಮುಖ್ಯಮಂತ್ರಿಯ ಸಿಂಹಾಸನವನ್ನು ಪಡೆದ ಕೂಡಲೇ ಒಂದಿಷ್ಟ ಸಚಿವ ಸಂಪುಟವ ಅನುಭವಿ ಮಂತ್ರಿಗಳಲ್ಲಿ ಕೆಟ್ಟಿನವರು ಪಮಗೆ ಪಹಕಾರ ನೀಡಲು ನಿರಾಕರಿಸಿದಾಗ, ಶ್ರೀ ಗುಪ್ತರಿಗೆ ಮಂತ್ರಿಮಂಡಲವನ್ನು ರಚಿಸುವ ಕೆಲಸ ಸುಲಭವಲ್ಲ ವೆಂಬುದರ ಅರಿವಾಯಿತು. ಆದುದರಿಂದಲೇ, "ಒಂದು ಶಪಥಗಳಿಗೆಯಲ್ಲಾದರೂ ತಾನೇ ಹುದ್ದೆ ಪಡೆಯಬಾರದಾಗಿತ್ತೇ?" ಎಂದವರು ಪರಿತಪಿಸಬೇಕಾಯಿತು.

ಪಂಡಿತ ಪಂತರಂತೆ ಶ್ರೀ ಗುಪ್ತರಿಗೆ ಜನತೆಯ ಶ್ರದ್ಧೆ ಹಾಗೂ ಗೌರವಗಳು ಲಭಿಸಿರುವುದಿಲ್ಲ. ಅವರಂತೆ ವ್ಯವಹಾರ ಕುಶಲರೂ ಅಲ್ಲ. ಸಂಪೂರ್ಣಾನಂದರಂತೆ ವಿದ್ವಾಂಸರಾಗಿಯೂ ಇಲ್ಲ. ಇವರಿಗೆ ಉತ್ತಮ ಸಂಘಟನಾ ಕರ್ತರೆಂಬುದೊಂದೇ ಪ್ರಶಸ್ತಿ. ರಫಿ ಅಮದ್‌ಕಿದ ಕಿಡ್ವಾಯಿಯವರ ನಂತರ ಉತ್ತರ ಪ್ರದೇಶ ಕಾಂಗ್ರೆಸ್ಸಿನಲ್ಲಿ ಐಕ್ಯ ಸ್ಥಾಪಕರೆಂದು ಇವರನ್ನು ಪರಿಗಣಿಸಲಾಗುತ್ತಿದೆ. ಇವರ ಈ ಗುಣದಿಂದಾಗಿಯೇ ಪದ್ಮ ಮುಖ್ಯ ಮಂತ್ರಿ ಪದವಿಯು ಇವರ ಕೈಸೇರಿತು.

೫೭ ವರ್ಷ ಪ್ರಾಯದ ಶ್ರೀ ಗುಪ್ತರು ತಮ್ಮ ರಾಜ್ಯ ಕಾಂಗ್ರೆಸ್‌ನ ವರಿಷ್ಠ ನಾಯಕರಲ್ಲೊಬ್ಬರು. ದ್ವಿತೀಯ ಸಾರ್ವತ್ರಿಕ ಚುನಾವಣೆಗೆ ಮೊದಲು, ಪಂ. ಪಂತರು ಕೇಂದ್ರ ಸಚಿವರಾಗಿ ಹೋದ ಬಳಿಕ ಉತ್ತರ ಪ್ರದೇಶ ಸರಕಾರದ ಶಾಸನ ನಿರ್ಮಾತರೆಂಬ ಕೀರ್ತಿಗೆ ಇವರು ಭಾಗಿಯಾದರು. ಪಂತರ ಬಳಿಕ ಸಂಪೂರ್ಣಾನಂದರು ಅವಿರೋಧವಾಗಿ ಮುಖ್ಯ ಮಂತ್ರಿಯಾದರು. ಆವರ ವರಿಷ್ಠತೆ, ವಿದ್ವತ್ತು ಸೇವೆ ಮೊದಲಾದುವುಗಳು ಇದಕ್ಕೆ ಪೋಷಕವಾಗಿದ್ದರೂ ಗುಪ್ತರು ಆವರಿಗೆ ವಿರುದ್ಧ ನಿಲ್ಲದಿದ್ದುದೇ ಮುಖ್ಯ ಕಾರಣವಾಗಿತ್ತು!

೧೯೦೨ರಲ್ಲಿ ಶ್ರೀ ಗುಪ್ತರು ಲಖೀಮಪುರದಲ್ಲಿ ಜನಿಸಿದರು. ತಮ್ಮ ಗಣಿತೆಯ ವಯಸ್ಸಿನಲ್ಲಿಯೇ ಲಖನೌನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನವನ್ನು ವರು ಕಂಡಿದ್ದರು. ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಇವರಿಗೆ ರಾಜ್ಯಕೀಯದಲ್ಲಿ ಆಸಕ್ತಿಯಿತ್ತು. ಕ್ಯಾನಿಂಗ್ ಕಾಲೇಜಿನ ವಿದ್ಯಾರ್ಥಿಸಂಘದ ನಾಯಕರೂ ಇವರಾಗಿದ್ದರು. ಶ್ರೀ ಗುಪ್ತರು ಬಿ. ಎ. ಎಲ್. ಎಲ್. ಬಿ. ಪದವೀಧರರು. ೧೯೩೫ರಲ್ಲಿಯೇ ಇವರು ವಕಾಲಿ ವೃತ್ತಿಗೆ ತೊಡಗಿದ್ದರು. ೩೭ರಲ್ಲಿ ಆವಧ ಕೋರ್ಟು ಇವರಿಗೆ ವಕೀಲರಾಗಲು ನೂನ್ಯತೆಯಿತ್ತರು; ಆದರೆ, ಆಗಿನ ಮುಖ್ಯ ನ್ಯಾಯಾಧೀಶರ ವಿರುದ್ಧ ಒಂದು ಪತ್ರವನ್ನು ಪತ್ರಿಕೆಯಲ್ಲಿ ಬರೆದು ಆವರ ಕೋಪಕ್ಕೆ ಆಹುತಿಯಾದರು. ಆನಂತರ ಲಂಚಸ್ವೀಕರಿಸುವ ನ್ಯಾಯಾಧೀಶರ ವಿರುದ್ಧ ಆಂದೋಲನವೆಬ್ಬಿಸಿದರು. ಇದೇ ವರ್ಷ ಇವರು ಲಖನೌ ವಿಶ್ವವಿದ್ಯಾಲಯದ ಕೋರ್ಟಿನ ಸದಸ್ಯರಾಗಿ ಆರಿಸಲ್ಪಟ್ಟರು. ಈ ವಿಶ್ವವಿದ್ಯಾಲಯದೊಡನೆ ಇವರು ಮೂವತ್ತು ವರ್ಷಗಳ ವರೆಗೆ ಸಂಬಂಧವಿರಿಸಿಕೊಂಡಿದ್ದರು.

೧೯೩೩ನೆ ವರ್ಷದಿಂದ ಶ್ರೀ ಚಂದ್ರಭಾನು ಗುಪ್ತರು ಉತ್ತರ ಪ್ರದೇಶ ಕಾಂಗ್ರೆಸ್‌ನ ಸದಸ್ಯರಾಗಿದ್ದಾರೆ. ೧೯ ವರ್ಷಗಳವರೆಗೆ ಇದರ ಕೋಶಾಧ್ಯಕ್ಷರಾಗಿದ್ದರು. ಶ್ರೀ ಗುಪ್ತರು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್—ಸೋಶಿಯಲಿಸ್ಟ್ ಪಕ್ಷಗಳ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು; ನೇತಾಜಿ ಸುಭಾಸ ಚಂದ್ರ ಬೋಸರ ಸಂಬಂಧದಲ್ಲಿ ಪಕ್ಷದ ನಾಯಕರ ನೀತಿಯನ್ನಿವರು ಒಪ್ಪಲಿಲ್ಲ; ತದಿಂದಾಗಿ ಆವರು ಪಕ್ಷದ ಸಂಬಂಧವನ್ನು ಕಡಿದುಕೊಂಡರು.

ಸತ್ಯಾಗ್ರಹಾಂದೋಲನದ ಸಂಬಂಧದಲ್ಲಿ ಅನೇಕ ಬೇಳೆ ಕಾರಾಗೃಹವಾಸವನ್ನು ಅನುಭವಿಸಬೇಕಾಗಿ ಬಂದಿತ್ತು. ೧೯೩೭ರಲ್ಲಿ ರಾಜ್ಯ ವಿಧಾನ ಸಭೆಯ ಸದಸ್ಯರಾಗಿ ಜನತಾಯಿಸರಾದರು. ೧೯೪೬ರಲ್ಲಿ ಸಂಸತ್ತಿನ ಸಚಿವರಾದರು. ೧೯೪೭ರಲ್ಲಿ ಸ್ಥಾಪಿಸಿವಾದ ಪಂಡಿತ ಪಂತರ ಮಂತ್ರಿ ಮಂಡಳಿಯಲ್ಲಿ ಇವರು ಸದಸ್ಯರಾದರು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲುಮತ್ತು ಅನಂತರವೂ ಕಾಂಗ್ರೆಸ್ಸಿಗಾಗಿ ಉತ್ತರ ಪ್ರದೇಶದಲ್ಲಿ ಹಣ ಸಂಗ್ರಹಿಸುವುದರಲ್ಲಿ ಶ್ರೀ ಕಿಡ್ವಾಯಿಯವರು ಮೊದಲಿಗರಾದರೆ, ಶ್ರೀ ಗುಪ್ತರು ಎರಡನೆಯವರೆಂದು ಹೇಳಬಹುದು. ಲಖನೌ ವಿಶ್ವವಿದ್ಯಾಲಯಕ್ಕೂ ಇವರು ಬಹಳಷ್ಟು ಧನ ಕೂಡಿಸಿಕೊಟ್ಟಿದ್ದಾರೆ. ದಿವಂಗತ ಮದನ ಮೋಹನ ಮೂಲವೀಯರು ತಮಗೆ ಈ ಕೆಲಸದಲ್ಲಿ ಆದರ್ಶವಾಪ್ರಾಯರೆಂದು ಶ್ರೀ ಗುಪ್ತರನ್ನುತ್ತಾರೆ.

ಉತ್ತರ ಪ್ರದೇಶದ ಮಂತ್ರಿ ಮಂಡಳಿಯನ್ನು ವರು ರಚಿಸುವ ಭಾರವೇನೋ ಹೊತ್ತರು. ಹೊತ್ತ ಭಾರವನ್ನು ಯಶಸ್ವಿಯಾಗಿ ಇವರು ನಿರ್ವಹಿಸಿಯಾರು ಎಂದು ಈಗಲೇ ಹೇಳುವುದು ಮಾತ್ರ ಕಷ್ಟ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E P. No. 50/1960.

ಬೊಳ್ಳಿ ಸಟ್ಟಿ ಮತ್ತು —ಅರ್ಜಿದಾರ.

ತಬುರ ಸಟ್ಟಿ - ಕೊರಗ ಸಟ್ಟಿ ಆಳಿಯ ಉಡ್ಪಿ ತಾಲ್ಲೂ ಪಾಂಗಳ ಗ್ರಾಮದವರುಪಪ ಎದ್ರಿರು.

ಸದ್ರಿ ಯದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅನುಲಜಾರಿಯಲ್ಲಿ ಅರ್ಜಿದಾರನು ಎದ್ರಿ ಹಕ್ಕಿನ ಸ್ಥಿರಾಸ್ತಿ ಜಪ್ತಿ ಮಾಡಿ ಹಾಜ್ರುಪಡ್ಸಿದ್ದಿದೆ. ಯೆಲಂ ಇಸ್ತ್ಯಾರಿನ ಪೆಲಂ ಕರ್ತ ನಿರ್ಣಯಿಸುವರೆ ತಾ 5 - 1 - 1961 ಕ್ಕೆ ತನ್ನಿ ಬಗ್ಗೆ ಯಿಟ್ಟಿದೆ—ಆ ಕುರಿತು ಯೆದ್ರಿಗೆ ಆಕ್ಷೇಪಣೆಹೇಳುವ್ಕದ್ದುಯಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಮುಂದೆ ಬೆಳಿಗ್ಗೆ 10ಗಂಟೆಗೆ ಹಾಜ್ರಾಗಿ ಜಾಬ್ತೀರುಮಾಡಿಕೊಳ್ಳ ತಕ್ಕದ್ದುಯಂತ ಈ ಮೂಲಕ ತಿಳಿಸೋಣಾಗಿಯಂದೆ.

K. Narayana Rao.
Abvocate for Petitioners

ಉಡ್ಪಿ 14—12—60.

A. B. SHETTY MEMORIAL FUND

Give your help small or big.
A token of love and respect to him.

Sir,

As decided by the Memorial Committee, one of the items of work is to put up a Marble Statue of late Sri A. B. Shetty in front of S R. S. Home Mangalore which owes its inception and development to his labour of love for student population.

The work of preparing the Statue was entrusted to a famous sculptor in Bombay through the cooperation and supervision of Dr. N. V. Adyanthaya.

A good deal of spade work had to be done in supplying suitable photographs and other materials to the Sculptor from time to time. It took nearly 8 to 9 months to have the clay model which has been approved by our people at Bombay.

A life Size bust 2 feet in Italian marble on a pedestal 4½ feet high in Indian marble will be completed in 2 or 3 months more. The total expenditure (Cost of the Statue, conveyance from Bombay erecting and unveiling) is estimated to cost Rs.6000

The Memorial Committee is anxious to take up other items of work when funds are forthcoming.

On behalf of the Committee, I send you this special appeal for cooperation and support. Please send your donation to Sri P. M. Hegde, Treasurer of the Committee, Kodialbail Post, Mangalore.3

Yours Sincerely,

Bejai Post,
Mangalore-4.
5—12—1960.

K. T. Alwa
President of the Committee.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O.S. 445/1960

ಪೇದ್ರು ಫೆರ್ನಾಂಡಿಸ್ —ವಾದಿ.

ಜೋರ್ಕಾಎಲ್ ಜೋಸೆಪ — ಪ್ರತಿವಾದಿ.

ಸದ್ರಿ ದಾವೆಯು ಪ್ರತಿವಾದಿ ಬೆಲ್ಚಂಗಡಿ ತಾಲ್ಲೂ ನೆರಿಯ ಗ್ರಾಮದ ಗಂಡಿ ಬಾಗ್ಲು ಎಂಬಲ್ಲಿರುವ ಜೋರ್ಕಾಎಲ್ ಜೋಸೆಪರ ಮಗ ಜೋರ್ಕಾಎಲ್ ಜೋಸೆಪರಿಗೆ —

ವಾದಿಯು ತಾ. 2-6. 1959ರಲ್ಲು ನಿಮಗೆ ಬರಕೊಟ್ಟ ರಿಜಿಸ್ಟ್ರಿ ಕ್ರಯಚೀಟಿನ ಪ್ರತಿ ಫಲದಲ್ಲಿ ಬಾಕಿ ಯಿರಗೊಡಿಸಿದ Unpaid purchase money ವಗೈರೆ ರೂ. 487/. ಬರಮಾಡಿಕೊಳ್ಳುವರೆ ಮೂಡಿದ ಮೇಲ್ಕಂಡ ದಾವಾ ತಾ 16-1 1961ಕ್ಕೆ ಇಟ್ಟರುವದ್ರಿಂದ ಆ ದಿನ ಸೂರ್ಯಾಸ್ತ ಗಂಟೆ 10ಕ್ಕೆ ನೀವೆ ಹಾಜ್ರಾಗಿ ಉಡಪರಿಸತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

By order of the Court.

K. S. Hegde,
Adovcate for Plaintiff.

Karkala, 13—12—1960.

ವರ ಬೇಕಾಗಿದೆ

IVಫಾರ್ಮ್ ತನಕ ಓದಿದ ಗೃಹ ಕೃತ್ಯಗಳಲ್ಲಿ ನುರಿತ ಶಿವಳ್ಳಿ ಬ್ರಾಹ್ಮಣ ಜಾತಿಯ 22 ವರ್ಷ ಪ್ರಾಯದ ಯುವತಿಗೆ ಯೋಗ್ಯ ಬ್ರಾಹ್ಮಣ ವರ ಬೇಕಾಗಿದೆ—

ದಯವಿಟ್ಟು ವ್ಯವಹರಿಸಿರಿ—
'X' C/o ನವಯುಗ, ಉಡುಪಿ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಾಂಡಿರುವರೆಂದು ನಾವು ತಿಳಿಯಬಹು . ಕೊಯಿರಾಲಾರು ಪದಚ್ಯುತರಾದು ಮಾತ್ರವಲ್ಲ, ಅವರೂ ಅವರ ಪಕ್ಷ ೋಗಿಗಳೂ ಬಂಧಿತರಾಗಿರುವರೆಂದೂ ರನ್ನು ಭದ್ರವಾದ ಪಕ್ಷಪ್ರ ನೋಲೀ ರು ಕಾಯುತಿದ್ದಾರೆಂದೂ ಗೊ ತ್ತಾ ಿ.

ಇಷ್ಟೆಲ್ಲ ಕಾರ್ಯಭಾರಗಳಿಗೆ ಮಂತ್ರಿ ಂಡಳಿಯ ಯಾವ ಕೃತ್ಯಗಳು ಕಾರಣ ದುವು ಎಂಬುದನ್ನು ಹೇಳುವುದು ಕ ವೇ. ಆದರೂ ಭಾರತದ ಉತ್ತರ ಸೀ ಯಲ್ಲಿ ಕಮ್ಯುನಿಸ್ಟ್ ಚೀನವು ಗೊಂದಲ ನ್ನು ನಡೆಯಿಸುತ್ತಿರುವಾಗ, ನೇಪಾಲ ದರೂ ಕಮ್ಯುನಿಸ್ಟರ ಹೆದರಿಕೆಯಿರು ಮು ವಿಶೇಷವಲ್ಲ. ಅಲ್ಲದೇ ನೇಪಾಲ ಳಿಗೂ ಕಮ್ಯುನಿಸ್ಟರು ದಾಳಿ ನಡೆಸಿ ವರೆಂಬ ಅಪ್ರಿಯವಾದ ಸುದ್ದಿ ಕೇಳಿ ಬ ತಿತ್ತು. ಭಾರತದಂತಹ ಹಿರಿಯ ರಾ ದೇ ಚೀನದ ಆಕ್ರಮಣದ ಪ್ರಶ್ನೆಯ ಬಿಡಿಸುವುದರಲ್ಲಿ ಒದ್ದಾಡುತ್ತಿರುವಾ ಎಳೆಯ ನೇಪಾಳದ ಮತ್ತೆತ್ತೆ? ಇದ ಹೋಷಕವಾಗಿ, ಪದಚ್ಯುತ ಪ್ರಧಾನಿ ೀಯರಾಲಾ ಕೆಲವು ತಿಂಗಳುಗಳಿಗೆ ಂದಲು ಪೇಕಿಂಗಿಗೆ ತೆರಳಿ ಅಲ್ಲಿ ರಾಜ್ಯ ೀಯ ವಿಚಾರ ವಿನಿಮಯವನ್ನೂ ಡಿರುವುದರಿಂದ ಕಳಸವಿಟ್ಟಂತಾಗಿದೆ ಸು ಮಹೇಂದ್ರರು ರಾಷ್ಟ್ರದ ಒಳ ನ ಕುರ್ಮಿಗಳಿಗಿಂತಲೂ ರಿನಿಸ ಕಮ್ಯುನಿಸ್ಟರಿಗೆ ಹೆಚ್ಚಾಗಿ ರುತ್ತಿರುವಂತೆ ತೋರುತ್ತದೆ; ತನ್ನ ವಾಳದ ಸಾರ್ವಭೌಮತೆಗೆ ತೊಡಕುಂ ಗದಂತೆ ಎಚ್ಚರಿಕೆ ವಹಿಸುವುದು ತನ್ನ ರ್ವ ವೆಂದವರು ಕಂಡುಕೊಂಡಿದ್ದಾರೆ.

ಭಾರತದ ನೆರೆಯಲ್ಲಾದ ಈ ರಾಜ್ಯ ಯ ಹುರುವರ್ತನೆ—ನೇಪಾಳದಲ್ಲಿ ಪ್ರ ಷತ್ತೆ ಅಸಫಲಗೊಂಡುದು—ಯು ಸ್ಫೋಭಕರವಾದುದೆಂದು ಪರ್ಣಿಸಲಾಗಿ ಸ್ವಧಾನಿ ನೆಹರು ದೆಹಲಿಯ ಸಮೀಪ ಊರೊಂದರಲ್ಲಿ ಮೂಕನಾಡುತ್ತ 'ನ ನೆರೆಯ ನೇಪಾಳದಲ್ಲಿಯೂ ಕೆಲವು ಷೆಗಳು ನಡೆದಿದ್ದು, ಅವುಗಳನ್ನು ನೀ ನಾಳೆಯ ಇಲ್ಲವೆ ನಾಡಿದಿನ ಪತ್ರಿಕೆಗ ಿ ಓದಬಹುದು' ಎಂದು ಈ ಘಟನೆ ಂ ವರದಿಗಳು ಬರುವುದಕ್ಕೆ ಕೆಲವು ತಾ ಗಳಿಗೆ ಮೊದಲು ಹೇಳಿದುದು ಬಹು ೀಜಿಗನ್ನೆನ್ನುವಂತಾಗಿದೆ. ಅರಸು ಮ ಂದ್ರ ಮತ್ತು ಪ್ರಧಾನಿ ನೆಹರುರವರ ುವೆ ಈ ಬಗ್ಗೆ ಏನಾದರೂ ವಿಚಾರ ಮಯಗಳು ನಡೆದಿದ್ದುವೆಂಬುದನ್ನಾ ು, ಈ ವಿಚಾರವು ನೆಹರುಗಳಿಗೆ ಹೊ ೀ ತಿಳಿದಿತ್ತೆನ್ನುವುದನ್ನಾಗಲೀ ನೆಹರು ಾಕರಿಸಿದ್ದಾರೆ. ಅಂತೂ ಆಗ್ನೇಯ ್ಯಾದಲ್ಲಿ ಇದುವರೆಗಾದರೂ ಶಾಂತಿಯು ಕೊಂಡು ಬಂದ ರಷ್ಟವೆಂದರೆ ಭಾ ಮಾತ್ರ. ಆದೇ ನಮಗೆಲ್ಲರಿಗೆ ಅಭಿ ನವಲ್ಲವೆ?

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಕಲಾಕ್ಷೇತ್ರ

(೪ನೇ ಪುಟದಿಂದ)

ದುವರಿದೆ. ಈ ಒಂದು ಅಮರ ಭಾವನೆ ಭಾರತದಲ್ಲಿಯೇ ವರಿಷ್ಠಾರ್ಜಿತಗೊಳ್ಳಿದೆ, ಚೀನ, ಜಪಾನ್, ಥೈಲೆಂಡ್ ಮೊದ ಲಾದ ದೇಶಗಳಲ್ಲಿಯೂ ಬುದ್ಧನ ಬೃಹದಾ ಕಾರದ ಮೂರ್ತಿರಚನೆಗೆ ಪ್ರೇರಣೆಯಿತ್ತು ವು. ಮಹಾಮೌನವನ್ನು ಮಹಾನತೆಯೇ ನು ಎಂಬುದನ್ನು ಈ ದೊಡ್ಡ ಮೂರ್ತಿಗಳ ನ್ನು ಕಂಡು ಮೌನವರು ತಿಳಿದುಕೊಂಡ ರು. ತಮ್ಮ ಪ್ರಗತಿ ಮೌರ್ಗವನ್ನೊ ಅವ ರು ಈ ಮಹಾನತೆಯತ್ತ ಮುಂದುನರಿ ದರು.

ವಿಶಾಲತೆಯತ್ತ ಭೂಮಿಸಿದ ಮೌನ ಕಲ್ಪನೆಯು ಸುಕುಮಾರತೆಯನ್ನು ಬಿಟ್ಟು ಬಿಡುವಂತಿರಲಿಲ್ಲ. ವಿಶಾಲತೆಯಿಂದ ತಡೆ ಯಲ್ಪಟ್ಟು ಮೌನವ ಮನವು ಮುರಳಿ ಸು ಸ್ಥಿರವಾದಾಗ, ಉಲ್ಲಾಸದ ಪ್ರವಾಹವ ನ್ನು ಬಯಸುತ್ತದೆ. ಮೂರ್ತಿಕಾರರು ಪ ದಾರ್ಥಗಳಲ್ಲಿ ಭಾವನೆಯನ್ನು ತುಂಬಿಸಿ, ಈ ಸ್ರೋತವನ್ನು ಒದಗಿಸಿಕೊಟ್ಟರು. ಈ ಭಾವವು ಸುಕುಮಾರ ಸೂಕ್ಷ್ಮ ಮತ್ತು ಸ್ವಾಭಾವಿಕವಾಗಿರಂತೆ ಅಧಿಕ ಸುಂದರ, ಮನೋರಮ ಮತ್ತು ಸ್ಥಾಯಿಯಾಗುತ್ತ ಹೋಯಿತು. ಮೂರ್ತಿಕಾರರು ಇದಕ್ಕಾ ಗಿ ಬಹುದೀರ್ಘಕಾಲ ಪರಿಶ್ರಮಪಡಬೇ ಕಾಯಿತು. ಈ ಸಾಧನೆಯು ಅತಾಕಿಕ ಹಾ ಗೂ ಸುಂದರವಾಗಿದ್ದುದರಿಂದಲೇ ಮೌನವ ಮನವು ಚಮತ್ಕೃತವಾಯಿತು. ಖಜುರಾಹೊವಿನ ಮಂದಿರ, ಕೊನಾರಕ ದ ಸೂರ್ಯ ದೇವಾಲಯ, ಆಬೂ, ಮ ಧುರೆ, ಕಾಂಚಿ, ಚಿತ್ತೂರು ಮೊದಲಾದು ವುಗಳಲ್ಲಿನ ಮಂದಿರಗಳು ಈ ಸಾಧನೆಯ ಪ್ರತಿಫಲವಾಗಿವೆ. ಈ ಕಲೆಯು ದೇಶದ ವಿಘ್ನನ್ನ ಪ್ರದೇಶಗಳಲ್ಲಿ ಹರಡಿಕೊಂಡಿರು ವುದು ಗೋಚರಿಸುತ್ತದೆ.

ರಜಪೂತರ ಕಾಲಾನಂತರ ಭಾರತವು ಆಫಘಾನರ ಆಕ್ರಮಣಕ್ಕೆ ಗುರಿಯಾಯಿ ತು. ಇಸ್ಲಾಂ ಧರ್ಮದಲ್ಲಿ ಮೂರ್ತಿಗಳು ನಿಷೇಧಿಸಲ್ಪಟ್ಟಿದ್ದುದರಿಂದ, ಈ ಕಲೆಯು ಮರಳಿ ಚಿಗುರುವ ಅವಕಾಶವೊದಗಲಿಲ್ಲ. ಆದರೂ ದಿಲ್ಲಿ, ಮಥುರೆ, ಕಾಶಿ, ಪಾಟಲಿ ಪುತ್ರ ಮೊದಲಾದ ಕೇಂದ್ರಗಳಿಂದ ಹಿಂ ಮೂರ್ತಿಕಾರರು ಓಡಿ ರಾಜಸ್ಥಾನ, ದ ಕ್ಷಿಣ ಭಾರತ, ನೇಪಾಲಗಳಿಗೆ ಹೋಗಿ, ಅಲ್ಲಿ ತಮ್ಮ ಕಲೋಪಾಸನೆಗೆ ತೊಡಗಿದರು. ಮೊದಲಿನೆಡೆಯಲ್ಲೇ ಉಳಿದಿದ್ದ ಕ ಲಾವಿದರು ಮುಸ್ಲಿಂ ಅಧಿಕಾರಿಗಳ ಆಪೇ ಕ್ಷೆಯಂತೆ ಹೊಸ ಎಲೆಗಳು ಮೊದಲಾದು ವನ್ನು ಕೆತ್ತುತ್ತಿದರಲ್ಲಿಯೇ ತಮ್ಮ ಕಲಾ ಪ್ರದರ್ಶನ ಮಾಡಬೇಕಾಯ್ತು. ಕುತುಬ್ಮಿ ನಾರದಲ್ಲಿ ಅಂಕಿತವಾದ ವಲ್ಲರಿ ಮತ್ತು ಘಂಟೆಗಳಲ್ಲಿ ಇಸ್ಲಾಮದ ಮೂರ್ತಿ ನಿಷೇ ಧತೆ ಹಾಗೂ ಭಾರತೀಯ ಮೂರ್ತಿಕ ಲೆಯ ಪರಿಚಯ ನಮಗಾಗುವುದು. ಮ ಸೀದಿಯ ಬಾಗಿಲುಗಳು, ಗೋಪುರಗಳಲ್ಲಿ ಮಿರಾನದ ಉಲ್ಲೇಖಗಳನ್ನು ಕೆತ್ತುತಿದ್ದ ರು. ಇವುಗಳಲ್ಲಿಯೂ ಕಲಾಭಿವ್ಯಕ್ತಿಯೂ ಗುತಿತ್ತು. ಇಸ್ಲಾಮದಿಂದ ದೀಪ್ತಗೊಂಡ ಭಾರತೀಯ ಕಲಾವಿದರ ಹೃದಯವಿವುಗ ಳಲ್ಲಿ ತೆರೆದು ತೋರುತ್ತದೆ.

ಮೊಗಲರ ಕಾಲದಲ್ಲಿ ಈ ಕಲೆಯು ಮ ತ್ತಷ್ಟು ವಿಕಸಿತವಾಯಿತು. ಇಸ್ಲಾಮದ ನಿಷ್ಠೆಯೂ ಈ ಕಾಲದಲ್ಲಿ ಶಿಥಿಲಗೊಂಡಿ ತ್ತು. ವಲ್ಲರಿಗಳ ನಡುವೆ ಪಶುಪಕ್ಷಿಗಳ ನ್ನು ಕೆತ್ತುವ ಅವಕಾಶವೀಗ ದೊರೆಯಿ ತು. ಮೂರ್ತಿಕಲೆಗೆ ವಿಶೇಷ ಪ್ರೋತ್ಸಾ ಹ ದೊರೆಯದಿದ್ದರೂ ಭಾರತೀಯರಲ್ಲಿದ್ದ ಈ ಆಸಕ್ತಿ ಒಂದಲ್ಲ ಒಂದು ರೀತಿಯಲ್ಲಿ ಹೊರಪಡುತಿತ್ತು. ಅದು ಉಸಿರು ಕಟ್ಟಿ ದಂತಿದ್ದರೂ ಸತ್ತು ಹೋಗಲಿಲ್ಲ.

ಆಂಗ್ಲೇಯರ ಪ್ರಭುತ್ವದೊಡನೆ ಆಧು ನಿಕ ಯುಗವು ಭಾರತದಲ್ಲಿ ತಳವೂರಿತು. ಈ ಕಾಲದಲ್ಲಿ ಮೂರ್ತಿ ಕಲೆಗೆ ಹೊಸಜೀವ ಬಂತು. ಆಗ, ಹಳೆಯ ಭಾರತೀಯ ಸಂ ಪ್ರದಾಯವೊಂದು, ಅದರೊಂದಿಗೆ ಆಧು ನಿಕ ಪಾಶ್ಚಾತ್ಯ ವಿಧಾನವನ್ನು ಬಳವಡಿಸಿ ಕೊಂಡ ಸಂಪ್ರದಾಯವಿನ್ನೊಂದು ಬೆಳೆ ದು ಬಂದುವು. ಇಂಗ್ಲಿಷರ ಕಾಲದಲ್ಲಿ ನಿ ರ್ಮಾಣಗೊಂಡ ಧರ್ಮಸ್ಥಾನಗಳಲ್ಲಿ ಪಾ ಶ್ಚಾತ್ಯ ಸಂಪ್ರದಾಯತನವಿದೆ. ಜಯಪುರ ದ ನವನಿರ್ಮಿತ ಮೂರ್ತಿಗಳು, ನವದೆಹ ಲಿಯ ಲಕ್ಷ್ಮೀನಾರಾಯಣ ದೇವಾಲಯ ದ ಮೂರ್ತಿಗಳು ಇವುಗಳಲ್ಲಿ ಉಲ್ಲೇಖ ನೀಯವಾಗಿವೆ. ಈ ಪ್ರತೀಕಗಳಲ್ಲಿ ಕಲೆ ಯು ಕೋಮಲವಾಗಿಯೂ ಇಲ್ಲ, ಹೃದ ಯಸ್ಪರ್ಶಿ ಗಂಭೀರವಾಗಿಯೂ ಇಲ್ಲ. ಆ ದುದರಿಂದ ಇವು ಪ್ರಾರಂಭಿಕಾವಸ್ಥೆಯ ಲ್ಲೇ ಇವೆಯೆನ್ನಬಹುದು. ಧಾರ್ಮಿಕ ಭಾ ವನೆಯೊಂದಿಲ್ಲವಾದರೆ, ಇವು ಸಾನುಸ್ಯ ಮೂರ್ತಿಗಳಾಗಿರುತಿದ್ದುವು. ಇವುಗಳಿಗೆ ನಾನಾ ವರ್ಣಗಳನ್ನು ಬಳೆದು ಪ್ರಭಾ ವಶಾಲಿಯಾಗಿಸುವ ಸಾಹಸೆ ಮಾಡುತ್ತ ಕ ಲೆಯ ಭಾವಗಳನ್ನು ನಷ್ಟಪಡಿಸುತ್ತಿ ದ್ದಾರೆ.

ಇಂದು ಮೂರ್ತಿಕಲೆಯು ಮನೋ ವಿನೋದ ಕ್ಷೇತ್ರದಲ್ಲಿಯೂ ಪ್ರಕಟವಾ ಗುತ್ತಿದೆ. ಮಣ್ಣು, ಪ್ಲಾಸ್ಟಿಕ್ ಮೊದ ಲಾದ ವಸ್ತುಗಳ ಆಟಿಕೆಗಳಿಂದ ತೊಡಗಿ ಚಂದ್ರಕಾಂತಶಿಲೆ, ಚಂದನ ದಂತ, ಕೊಂಬು ಮೊದಲಾದುವುಗಳ ವ ರೆಗೂ ಅದು ಹೊರಳೂಳುತ್ತಿದೆ. ಜನಜೀ ವನದಲ್ಲಿ ಕಲಾಭಾವನೆಯು ಸಂವಿತಿ ವಿ ಸ್ತೃತವಾದಂತೆ ಈ ಕಲೆಯು ಮತ್ತಷ್ಟು ವಿಕಾಸಗೊಳ್ಳುವುದು. "ಬಹುಜನ ಹಿತಾ ಯ; ಬಹುಜನ ಸುಖಾಯ" ಎಂಬ ಆದ ರ್ಶದಲ್ಲೇ ಇದು ಮುಂದುವರಿಯುವುದು; ಆಗಲೇ ಅದು ರಾಷ್ಟ್ರದ ಅಭಿರುಚಿ, ಸಂ ಸ್ಕೃತಿ ಮತ್ತು ನಾಗರಿಕತೆಯ ಸಮಷ್ಟಿ ರೂಪದ ಆಧಾರವಾಗಿ ಪ್ರತಿಷ್ಠಾಪಿತವಾ ಗುವುದು, ಪ್ರತಿಷ್ಠಿತವಾಗುವುದು.

ಡಿ. ವಿಜಯಾ ಬ್ಯಾಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಚೀಂಕಿನಲ್ಲಿ, ನಗದ ಉಡಿನ ಮೇಲೆ ಸಾಲ ಪಡೆಕೊಂಡು ಕ್ಲುಪ್ತ ವಾಯಿದೆಗೆ ಅಸ್ಸು ಬಡ್ಡಿ ವಗೈರೆ ಕೊಡದೆ ಬಾಕಿ ನೂಡಿಕೊಂಡಿರುವು ದರಿಂದಲೂ, ಸದ್ರಿ ಸಾಲವನ್ನು ಬರನೂಡಿಕೊಳ್ಳುವರೇ ಅವರಿಗೆ ರಜಿಸ್ಟ್ರಿ ನೋಟೀಸು ಕಟ್ಟಲ್ಪಟ್ಟಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿ ಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 29-12-1960ನೇ ಗುರುವಾರ ಮಧ್ಯಾಹ್ನ ಗಂಟೆ 3ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯಾ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಏಲಂ ನೂಡಲಾಗುವುದು. ಏಲಂನಿಲ್ಲಿ ಹುಟ್ಟಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧ ಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿಗೆ ಬಪ ಐವೇಜನ್ನು ನಸೂಲು ನೂಡಲಾದೀ ತೆಂಬುದನ್ನು ಈ ಮೂಲಕ ತಿಳಿಸೋಣಾಗಿಯದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30-9-1960ಕ್ಕೆ ಬರತಕ್ಕ ಮೊಬಲಗು
		Rs. nP.
235/58	ಶ್ರೀ ಸುಂದರ ಶೆಟ್ಟಿ, ಶುಬ್ಬ ಶೆಟ್ರ ಮಗ, ಹೆನ್ನೊಟ್ಟು ಮನೆ, ಮುಡಾಸು ಗ್ರಾಮ, ಪೋಸ್ಟು ಬಜಗೋಳಿ	44-15
472/58	ಶ್ರೀ ನಾರಾಯಣ ಶೆಟ್ಟಿ, ಆಂತಯ್ಯ ಶೆಟ್ರ ಮಗ, ಕಚೆ ಮನೆ, ಪೆರ್ವಾಜೆ ಗ್ರಾಮ, ಪೋಸ್ಟು ಕಾರ್ಕಳ	97-93
1218/58	ಶ್ರೀ ಕೆ. ಧರ್ಮರಾಜ ಹೆಗ್ಡೆ, ಶಾಂತಿರಾಜ ಬಲಿಪರ ಮಗ, ಸಂಡ್ಲಿಗುತ್ತು, ಪೋಸ್ಟು ಪುತ್ತಿಗೆ	386-93
21/59	ಶ್ರೀ ಕೆ. ಮಹಮ್ಮದ್ ಆದಮ್ ಸಾಹೇಬ ಮಹಮ್ಮದ್ ಅಬ್ದುಲ್ ಖಾದರ್ ಸಾಹೇಬರ ಮಗ, ಆತ್ತೂರು ಚರ್ಚ್ ರೋಡು, ಜೋಲ್ಬಾದಿ, ಕಾರ್ಕಳ	296-82
596/59	ಶ್ರೀ ಸೀನ ಪೂಜಾರಿ, ಟಾಬ ಪೂಜಾರಿಯವರ ಮಗ, ಹೊಸ ಬೆಟ್ಟು, ಪಡು ಕುಡೂರು ಗ್ರಾಮ, ಪೋಸ್ಟು ಕುಪ್ಪಿನಪೊಲು	36-06
616/59	ಶ್ರೀ ರಾಜು ಶೆಟ್ಟಿ, ಮುದರ ಶೆಟ್ರ ಮಗ, ಬೊಲಿಂಜಾಲೆ ಸಾಗುಮನೆ, ಪೋಸ್ಟು ಶಿರ್ಲ	600-85
698/59	ಶ್ರೀ ಶಾಂತಿರಾಜ ಭಂಡಾರಿ, ಧರ್ಮರಾಜ ಭಂಡಾರಿಗಳ ಆಳಿಯ, ಕರಿಯೂಲು ಮನೆ, ನಲ್ಲೂರು ಗ್ರಾಮ, ಪೋಸ್ಟು ಬಜಗೋಳಿ	253-08
699/59	— do — — do —	230-74
732/59	ಶ್ರೀ ಎನ್. ಕುಮಾರಯ್ಯ ಹೆಗ್ಡೆ, ಮಂಜಪ್ಪ ಹೆಗ್ಡೆರ ಆಳಿಯ ನಡಾವೆ ಮನೆ, ಈದು ಗ್ರಾಮ, ಪೋಸ್ಟು ನಾರಾವಿ	46-83

The Vijaya Bank Ltd., Karkal.
Dated 15—12—1960.

M. M. Bhandary,
Agent.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿ ಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ವಿಚಾರವರ್ಷ

(೩ನೇ ಪುಟದಿಂದ)

ಅದು ಏರಿಗೆ ಶಾಸ್ತ್ರಜ್ಞರಿಗೆ ವಿಚಿತ್ರವೆನಿಸಿದ ಅನೇಕ ವಿಷಯಗಳು ಈಗ ಸ್ಪಷ್ಟವಾಗುತ್ತ ಬಂದುವು. ಉದಾಹರಣೆಗೆ, ಸೃಷ್ಟಿಯಲ್ಲಿ ನೈಟ್ರೊಜನ್ನಿಗಿಂತಲೂ ಪ್ರಾಣವಾಯು ಮೂರು ಪಾಲಿನಿಂದ ಐದು ಪಾಲಿನ ವರೆಗೂ ಹೆಚ್ಚಿದೆ. ಸೂರ್ಯನಲ್ಲಿ ಕೂಡಾ ಇವೆರಡು ವಾಯುಗಳೂ ಇದೇ ಪಾಲಿನಲ್ಲಿವೆ. ಆದರೆ ಭೂಮಿಯೊಳಗನ್ನೂ ನೋಡುವಾಗ ಇದರಲ್ಲಿ ನೈಟ್ರೊಜನ್ನಿಗಿಂತಲೂ ಪ್ರಾಣವಾಯು ಹತ್ತು ಸಾವಿರ ಪಾಲು ಹೆಚ್ಚಿದೆ. ಇದಕ್ಕೆ ಕಾರಣವೂ ಇದೆ. ಪ್ರಾಣವಾಯು ಇತರ ದ್ರವ್ಯದೊಂದಿಗೆ ಸುಲಭವಾಗಿ ರಾಸಾಯನಿಕ ಸಂಯೋಗ ಹೊಂದುತ್ತದೆ. ನೈಟ್ರೊಜನ್ ಹಾಗೆ ಹೊಂದದು. ಭೂಮಿ ಉಂಟಾಗುವಾಗ ಅದರೊಳಗೆ ಸೇರಿದ ಕಲ್ಲು ಪದಾರ್ಥಗಳೂ ಲೋಹ ಪದಾರ್ಥಗಳೂ ಸುತ್ತಲೂ ಇರುವ ಮೇಘದಿಂದ ಪ್ರಾಣವಾಯುವಿನೊಂದಿಗೆ ಹೆಚ್ಚು ಸಂಯೋಗ ಹೊಂದಲು ಶಕ್ತವಾದುವು. ನೈಟ್ರೊಜನ್ನಿನೊಂದಿಗೆ ಸ್ವಲ್ಪವೇ ಸಂಯೋಗ ಹೊಂದಿದುವು. ಈ ಕಾರಣದಿಂದಲೇ ರಾಸಾಯನಿಕವಾಗಿ ನಿಷ್ಕ್ರಿಯವಾಗಿರುವ ನಿಯಾನ್, ಕ್ರಿಪ್ಟಾನ್, ಸ್ನೆನಾನ್ ಮೊದಲಾದ ವಾಯುಗಳು ಕೂಡಾ ಭೂಮಿಯಲ್ಲಿ ಬಹಳ ಅಪೂರ್ವವಾಗಿರುತ್ತವೆ. ಈ ವಾಯುಗಳು ಭೂಮಿಯಲ್ಲಿರುವುದಕ್ಕಿಂತಲೂ ನಕ್ಷತ್ರ ಮೊದಲಾದುವುಗಳಲ್ಲಿ ಅನೇಕ ಲಕ್ಷ, ಕೋಟಿ ಪಾಲು ಹೆಚ್ಚಾಗಿ ಕಾಣಿಸುತ್ತವೆ.

ವ್ಯತ್ಯಾಸಗಳು—

ಕೆಲವು ಗ್ರಹಗಳು ಒಂದು ವಿಧವಾಗಿಯೂ, ಮತ್ತೆ ಕೆಲವು ಗ್ರಹಗಳು ಇನ್ನೊಂದು ವಿಧವಾಗಿಯೂ ಇರುವುದನ್ನು ಕುರಿತು ಪೂರ್ವ ಸಿದ್ಧಾಂತಿಗಳು ಏನು ಹೇಳಿದರೆಂದರೆ:

ಸೂರ್ಯನಲ್ಲಿರುವ ಪದಾರ್ಥದಲ್ಲಿ ಅತ್ಯಧಿಕ ಭಾಗವು ಹೈಡ್ರೊಜನ್, ಹೀಲಿಯಂ ಎಂಬ ಅತ್ಯಂತ ಹಗುರಾದ ಪದಾರ್ಥಗಳು. ಈ ಪದಾರ್ಥಗಳು ಎಲ್ಲಾ ಗ್ರಹಗಳೊಳಗೂ ಸಮವಾಗಿಯೇ ಪ್ರವೇಶ ಮಾಡಿದೆ. ಆದರೂ ಹಗುರಾದ ಗ್ರಹಗಳು ಆ ಪದಾರ್ಥಗಳನ್ನು ತಮ್ಮ ಗುರುತ್ವಾಕರ್ಷಣೆಯಿಂದ ಕಟ್ಟಿಟ್ಟುಕೊಳ್ಳಲಾರದೆ ಹೋಗಲಾಡಿಸಿಕೊಂಡುವು. ಗುರು ಮೊದಲಾದ ದೊಡ್ಡ ಗ್ರಹಗಳು ಮಾತ್ರ ಈ ಹಗುರ ಪದಾರ್ಥಗಳನ್ನು ತಡೆದು ಹಿಡಿದುಕೊಂಡುವು—ಹೀಗೆಂದ ಪೂರ್ವ ಸಿದ್ಧಾಂತಿಗಳ ಪ್ರಕಾರ ದೊಡ್ಡ ಗ್ರಹಗಳಲ್ಲಿ ಹೈಡ್ರೊಜನ್ನಿನೊಂದಿಗೆ ಕೂಡಿದ ರಾಸಾಯನಿಕ ವಸ್ತುಗಳು—ನೀರೇ, ಅಮೋನಿಯಾ ಮೊದಲಾದುವು—ಹೆಚ್ಚಾಗಿರಲು ಮುಖ್ಯ ಕಾರಣ ಅತಿ ಭಾರವಾದ ಗ್ರಹಗಳಾಗಿರುವುದೆಂದಾಗುತ್ತದೆ.

ಆದರೆ ಈ ಸಿದ್ಧಾಂತಕ್ಕೆ ಇತ್ತೀಚೆಗೆ ಎರಡು ಅವಾಂತರಗಳು ಇದಿರಾದುವು.

ಶನಿಗ್ರಹದ ಸುತ್ತೂ ತಿರುಗುವ ಉಪಗ್ರಹಗಳಲ್ಲಿ ಟೈಟಾನ್ ಎಂಬುದೊಂದಿದೆ. ಇದರ ತೂಕ ನಮ್ಮ ಭೂಮಿಯ ಅಂಶದ ಒಂದು ಭಾಗದಷ್ಟಿದೆ. ಆದರೂ ಇದರ ಸುತ್ತಲೂ ಇರುವ ವಾತಾವರಣದಲ್ಲಿ ಪೂರ್ತಿಯಾಗಿ ನೀರೇ, ಅಮೋನಿಯಾ ವಾಯುಗಳಿರುವುದೆಂದು ಗಣಿತಜ್ಞರಲ್ಲಿ ಕುಯಿಪರ್ ಎಂಬ ಅಮೆರಿಕನ್ ಜ್ಯೋತಿಶಾಸ್ತ್ರಜ್ಞನು ಕಂಡುಹಿಡಿದನು. ಈ ಉಪಗ್ರಹದ ಉಷ್ಣಸ್ಥಿತಿ ಈಗ ಹೆಚ್ಚುಕಡಿಮೆ ಗಣಿಂದ ಡಿಗ್ರಿಗಳಷ್ಟು ಕಡಮೆ. ಇದಕ್ಕಿರುವ ಗುರುತ್ವಾಕರ್ಷಣೆಯ ಶಕ್ತಿ ಬಹು ಸ್ವಲ್ಪ. ಉಗಿರುವ ಸ್ಥಿತಿಯಲ್ಲಿಯೇ ಇದು ಹೈಡ್ರೊಜನ್ನನ್ನು ಹಿಡಿದಿಟ್ಟುಕೊಳ್ಳಲಾರದು. ಹೈಡ್ರೊಜನ್ನಿಗಿಂತಲೂ ಎಂಟರಷ್ಟು ಭಾರವುಳ್ಳ ಮಿಥೇನ್ ವಾಯುವೇ ಈ ಉಪಗ್ರಹವನ್ನು ಅತಿಶ್ರಯಿಸಿದಿಂದ ಅಂಟಿ ಹಿಡಿದುಕೊಂಡಿದೆ. ಈ ಉಪಗ್ರಹವು ಹೊರಪು ಕರಗುವಂತಹ ಬಿಸಿಯನ್ನು ಪಟ್ಟಿತೆಂದಾದರೆ ಮಿಥೇನ್ ಹೇಳ ಹೆಸರಿಲ್ಲದೆ ಮಾಯವಾಗುತ್ತದೇ ಸರಿ!

ಅಂತಹ ಉಪಗ್ರಹದ ವಾತಾವರಣದಲ್ಲಿ ಮಿಥೇನ್ (ಇದು ಹೈಡ್ರೊಜನ್ ಕರ್ಬನ್ ಸಂಯೋಗಹೊಂದಿ ಏರ್ಪಡುವ ವಾಯು) ಇರುವುದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ೧—ದೊಡ್ಡ ಗ್ರಹಗಳಲ್ಲಿ ಹೈಡ್ರೊಜನ್ನಿನೊಡಗೂಡಿದ ವಾತಾವರಣವಿರಲಿಕ್ಕಿಲ್ಲ, ಅವುಗಳ ಗುರುತ್ವಾಕರ್ಷಣೆಗೂ ಯಾವ ಸಂಬಂಧವೂ ಇಲ್ಲ. ೨— ಟೈಟಾನಿನಂತೆ ಯಾವ ಕಾಲಕ್ಕೂ ಉಷ್ಣವನ್ನೆರಿಯದ ಗೋಳಗಳು ಸೂರ್ಯ ಕೂಟದಲ್ಲಿವೆ. ಉರಿಯುವ ಸೂರ್ಯ ಪದಾರ್ಥವು ತಣಿದು ಗಟ್ಟಿಗಟ್ಟುವುದರಿಂದಲೇ ಗ್ರಹಗಳೆಲ್ಲಾ ಏರ್ಪಟ್ಟುವೆನ್ನುವುದು ಬರಿಯ ಭ್ರಮೆ.

ಒಂದೇ ಬಗೆಯ ಪದಾರ್ಥದಿಂದ ಎಲ್ಲಾ ಗ್ರಹಗಳೂ ಉತ್ಪತ್ತಿಯಾಗಿ, ಸೂರ್ಯನಿಗೆ ಹತ್ತಿರದಲ್ಲಿರುವುವು ಮಾತ್ರ ಚಿಕ್ಕ ಗ್ರಹಗಳಾದುದರಿಂದ ಹಗುರಾದ ನಾಯುಗಳನ್ನು ಕಳೆದುಕೊಂಡುವೆಂದು ಹೇಳುವ ಪಕ್ಷದಲ್ಲಿ, ಕಾಗೆ ನಡೆಯಲು ಹಿಡಿಯುವ ಕಾಲವು ಸೂರ್ಯ ಕುಟುಂಬದ ವಯಸ್ಸಿಗೆ ಅನೇಕ ನೂರು ಪಾಲು ಹೆಚ್ಚಿಗೇ ಇರಬೇಕೆಂದು ಗಣಿತಜ್ಞರಲ್ಲಿ ಒಬ್ಬ ಸೋವಿಯೆಟ್ ಶಾಸ್ತ್ರಜ್ಞನು ನಿರೂಪಿಸಿದನು.

ಇನ್ನೊಂದು ವಿಷಯವೇನೆಂದರೆ, ಸೂರ್ಯನ ಪದಾರ್ಥದಲ್ಲಿ ನೂರಕ್ಕೆ ೯೮ ಪಾಲು ಹೈಡ್ರೊಜನ್, ಹೀಲಿಯಂ ವಾಯುಗಳು, ಉಳಿದುವೆಲ್ಲಾ ಕೂಡಿ ಎರಡು ಪಾಲು ಮಾತ್ರವೇ ಎಂದು ಇತ್ತೀಚೆಗೆ ಸಿದ್ಧಾಂತಿಸಿಯೂಗಿದೆ. ಭೂಮಿ ಕೂಡಾ ಮೊದಲು ಇಂತಹ ವಾಯುಗೊಂಡ ಪದಾರ್ಥದಿಂದಲೇ ಉತ್ಪತ್ತಿಯಾಗಿದ್ದ ಪಕ್ಷಕ್ಕೆ ಆ ಭೂಮಿಯ ಭಾರವು ಈಗಿನ ಭೂಮಿಯ ಭಾರಕ್ಕಿಂತ ಕೆಲವು ಡಜನು ಗಳಷ್ಟು ಹೆಚ್ಚಿಗಿರಬೇಕಾಗುತ್ತದೆ; ಅದು ಯುರೇನಸ್ ನೆಪ್ಚ್ಯೂನ್ ಗ್ರಹಗಳಿಗೆ ಕಡಮೆಯೂ ಆಗದಷ್ಟು ದೊಡ್ಡದಾಗಿಯೂ ಇರಬೇಕಾಗುತ್ತದೆ. ಆದರೆ ಈ ಎರಡು ಗ್ರಹಗಳಲ್ಲಿಯೂ ಹಗುರಾದ ವಾಯುಗಳು ಹುಸ್ಸಳವಾಗಿವೆ! ಹಾಗಿರುವಾಗ ಭೂಮಿ ತನ್ನ ಹಗುರಾದ ವಾಯುಗಳನ್ನು ಕಳೆದುಕೊಳ್ಳಬೇಕಾದ ಅಗತ್ಯ ಕಂಡುಬರುವುದಿಲ್ಲ.

ಇಷ್ಟು ಆಭ್ಯಂತರಗಳಿದ್ದರೂ ಭೂಮಿಯಂತೆ ಸೂರ್ಯನಿಗೆ ಹತ್ತಿರದಲ್ಲಿರುವ ಗ್ರಹಗಳು ಹಗುರಾದ ವಾಯುಗಳನ್ನು ಕಳೆದುಕೊಂಡು ದೂರ ಗ್ರಹಗಳಿಗೆ ಭಿನ್ನವೆನಿಸಿ ತಯಾರಾದುದೆಂಬ ಸಿದ್ಧಾಂತವು ಬಳಕೆಯಾಗಿ ಪ್ರಚಾರದಲ್ಲಿದೆ. ಈ ಸಿದ್ಧಾಂತ ಸರಿಯಾದರೆ ಭೂಮಿಯಲ್ಲಿ ಪ್ರಾಣವಾಯು ಹೆಚ್ಚಾಗಿ ನಿಂತು, ನೈಟ್ರೊಜನ್ ಬಹಳ ಮಟ್ಟಿಗೆ ತಪ್ಪಿಸಿಕೊಂಡ. ಹೋಗಲು ಕಾರಣವು ಗೊತ್ತಾಗುವುದಿಲ್ಲ ಏತಕ್ಕೆಂದರೆ, ಎರಡೂ ಹೆಚ್ಚುಕಡಮೆ ಒಂದೇ ಭಾರವುಳ್ಳವು ಇನ್ನೂ ಹೇಳಬೇಕಾದರೆ ಪ್ರಾಣವಾಯುವಿಗಿಂತಲೂ. ನೀರಾವಿಗಿಂತಲೂ ಹೆಚ್ಚು ಭಾರವಾದ ಕ್ರಿಪ್ಟಾನ್, ಸ್ನೆನಾನ್ ವಾಯುಗಳು ಭೂಮಿಯಲ್ಲಿ ಸ್ವಲ್ಪವೂ ಇಲ್ಲ. ಇವು ತಪ್ಪಿಸಿಕೊಂಡು ಹೋದವೆಂದು ಭಾವಿಸುವುದಾದರೆ, ಅವುಗಳಿಗಿಂತ ಮುಂಚೆ ನೀರಾವಿ ಯಾವತ್ತೂ ವಾಯುವಾಗಿ ಭೂಮಿಯ ಮೇಲೆ ಒಂದು ಚುಕ್ಕಿ ಕೂಡಾ ಉಳಿಯದೆ ಹಾರಿಹೋಗಬೇಕಾಗುತ್ತದೆ.

ಈ ಮೇಲಿನ ಅಂಶಗಳಿಂದ ಗೊತ್ತಾಗುವುದೇನೆಂದರೆ, ಸೂರ್ಯನ ಸಮೀಪದಲ್ಲಿರುವ ಮೇಘದಲ್ಲಿ ವಾಯು ಪದಾರ್ಥಗಳಿಗಿಂತ ಘನಸ್ಥಿತಿಯಲ್ಲಿರುವ ಪದಿಗಳು ಹೆಚ್ಚಾಗಿದ್ದು ಅವುಗಳ ಸೇರಿಕೆಯಿಂದ ಭೂಮಿ ಉಂಟಾಯಿತು. ಆ ಸಮಯದಲ್ಲಿ ಈ ಕಾರಣಗಳ ಬೆಂಬಿಡದುಕೊಂಡಿದ್ದ ಉಷ್ಣಸ್ಥಿತಿ ಕೂಡಾ ಇದಕ್ಕೆ ಸಹಾಯವಾಯಿತು. ಮಿಕ್ಕ ಗ್ರಹಗಳೂ, ಅವುಗಳ ಉಪಗ್ರಹಗಳೂ ಎಂತಹ ಉಷ್ಣಸ್ಥಿತಿಯಲ್ಲಿ ಯಾವ ವಿಧವಾದ ಪದಾರ್ಥಗಳಿಂದ ನಿರ್ಮಾಣವಾಯಿತೆಂದು ನಾವು ಹೀಗೆಯೇ ತಿಳಿದುಕೊಳ್ಳಬಹುದು.

ಸಮೀಪ ಗ್ರಹಗಳಲ್ಲಿರುವ ಪದಾರ್ಥ ಸಾಂದ್ರತೆ ಹೆಚ್ಚುಕಡಮೆ ಒಂದೇ ವಿಧವಾಗಿದೆ. ಅಂಗಾರಕ ಗ್ರಹದ ಸಾಂದ್ರತೆ ಘನಸೆಂಟಿಮೀಟರಿಗೆ ೩.೯ ಗ್ರಾಮುಗಳು; ಬುಧಗ್ರಹದ ಸಾಂದ್ರತೆ ೫.೮ ಗ್ರಾಮುಗಳು; ಭೂಮಿಯದು ೫.೫೨ ಗ್ರಾಮುಗಳು; ಚಂದ್ರನದು ೩.೩ ಗ್ರಾಮುಗಳು. ಬುಧಗ್ರಹವು ಸೂರ್ಯನಿಗೆ ಹತ್ತಿರದಲ್ಲಿರುವಂಥದ್ದು. ಇದಕ್ಕಿಂತಲೂ ಭೂಮಿ ಗಿಂತ ಪಾಲು ಹೆಚ್ಚು ಭಾರವಾಗಿದೆ. ಆದರೂ ಅದರ ಸಾಂದ್ರತೆ ಭೂಮಿಯ ಸಾಂದ್ರತೆಗೆ ಸಮಾನವಾಗಿಯೇ ಇವೆ.

ಶಾಸ್ತ್ರಜ್ಞರ ಅಂದಾಜನ್ನು ಹಿಡಿದು ಚಂದ್ರ, ಅಂಗಾರಕ, ಶುಕ್ರ, ಭೂಮಿ ಇವು ಒಂದೇ ಬಗೆಯ ಪದಾರ್ಥದಿಂದ ಕೂಡಿರುಮತೆ ತಿಳಿದುಬರುತ್ತದೆ; ಸಾಂದ್ರತೆಯಲ್ಲಿರುವ ವ್ಯತ್ಯಾಸಕ್ಕೆ ಕಾರಣ ಈ ಗೋಳಗಳ ಗರ್ಭದಲ್ಲಿರುವ ಒತ್ತಡದ ವ್ಯತ್ಯಾಸವೇ ಆಗಿರಬೇಕು. ಗೋಳವು ದೊಡ್ಡದಾದಷ್ಟೂ ಅದರ ಗರ್ಭದ ಯ ಒತ್ತಡವು ಹೆಚ್ಚಾಗಿರುತ್ತದೆ. ಅದರ ಗುರುತ್ವಾಕರ್ಷಣೆಯೂ ಹೆಚ್ಚಾಗಿರುತ್ತದೆ. ಬುಧಗ್ರಹದ ವಿಷಯದಲ್ಲಿ ಅದರ ಹೆಚ್ಚು ಸಾಂದ್ರತೆಗೆ ಅವರ ಪದಾರ್ಥವು ಇನ್ನಿಷ್ಟು ಭಾರವಾದುದೇ ಕಾರಣ. ಇದು ಸೂರ್ಯನಿಗೆ ಇನ್ನಿಷ್ಟು ಹತ್ತಿರವಾಗಿರುವುದರಿಂದ ಉಷ್ಣವನ್ನು ಸಹಿಸಿಕೊಳ್ಳತಕ್ಕಂತಹ ಘನಪದಾರ್ಥದಿಂದ ತಯಾರಾಯಿತು. ಅಂತಹ ಪದಾರ್ಥಗಳು ಯಾವಾಗಲೂ ಭಾರವಾದುದಾಗಿಯೇ ಇರುತ್ತವೆ.

ಭೂಮಿಯ ಪದಾರ್ಥಕ್ಕಿಂತಲೂ ಭಾರವಾದ ಶಿಲಾಪದಾರ್ಥದಿಂದ ತಯಾರಾದ ಗೋಳಗಳು ಸೂರ್ಯನಿಗೆ ದೂರ ಪ್ರಾಂತದಲ್ಲಿ ಕೂಡಾ ಇರುವುದು ಗಮನಾರ್ಹವಾಗಿದೆ. ಇಯೋ, ಯುರೋಪಾ ಎಂಬ ಉಪಗ್ರಹಗಳು ಹಾಗಿವೆ ಇವು ಗುರುವಿನ ಸುತ್ತಲೂ ತಿರುಗುವಂಥವು ಗುರುವಿಗೆ ೧೨ ಉಪಗ್ರಹಗಳಿವೆ. ಇವುಗಳಲ್ಲಿ ಪ್ರಧಾನವಾದುವು ನಾಲ್ಕು. ಆವುಗಳ ಸಾಂದ್ರತೆ ನಮಗೆ ಗೊತ್ತಾಗಿದೆ. ಆದರೆ ಈ ಸಾಂದ್ರತೆ ಒಂದಕ್ಕೊಂದಕ್ಕಿಲ್ಲ. ಇಯೋ ೪.೩೫, ಯುರೋಪಾ ೩.೭೮, ಗಾನಿಮೀಡ್ ೨.೩೫, ಕಾಲಿಸ್ಟೋ ೧.೭೬ ಹೀಗಿವೆ. ಈ ವ್ಯತ್ಯಾಸಕ್ಕೆ ಕಾರಣ ಈ ಉ

(೧೨ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4	ತಿಂಗಳ ವರೆಗೆ	4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಕುಮಾರಿ ಬಿಲ್ಲಿಗಳು
(Registered)
ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).
P. DEVEE & Co. (M. I.) CALCUTTA—40
ಸ್ವಾಕೆಸ್ಟರು: ಷಾ ಕಂಪೆನಿ, ಮಂಗಳೂರು—1.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE

ಕಥಾವಿಹಾರ

(೨ನೇ ಕಂಟಿದಿಂದ)

ಗುತ್ತಿರುವ ಕನ್ನಡದ ಇತರ ಚಿತ್ರ ನಿರ್ಮಾಪಕರು, 'ಅವಕಾಶವಿಲ್ಲದೆ ಕತ್ತಲೆಯಲ್ಲಿ ಕೊಳೆಸುವ ಸುಪ್ತ ಪ್ರತಿಭೆಯ ಕನ್ನಡ ನಟಿಗಿದ್ದಾರೆ' ಎಂದು ಮನಗಂಡರು! ಹೊಸ ಮುಖಗಳ ಅವಶ್ಯ—ಆಕರ್ಷಣೆಗಳನ್ನು ಕಂಡು ಕೊಂಡರು.

ವಿಜೆತ್ರ ವಿಶ್ವದ ಅಪೂರ್ವೋತ್ತರ ಕೀರ್ತಿ ಪತಾಕೆಯು ಕನ್ನಡ ಚಿತ್ರ ಬ್ರಹ್ಮ ರೊಳಗೆ ಮೇಲಾಟ ನಡೆಸಿ, ನನ್ನ ವರ ಮಾನ (ಬೆಲೆ?)ವನ್ನು ಲಪ್ಪಕ್ಕೆ ಲಕ್ಷವೇ ಏರಿಸಿತು!

ಹತ್ತಾರು ಕನ್ನಡ ಚಿತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿದೆನಲ್ಲದೆ, 'V. M. S. ಪ್ರೊಡಕ್ಷನ್ಸ್'ನವರ ಒಂದೆರಡು ಚಿತ್ರಗಳ ನಿರ್ದೇಶಕನೂ ನಾನಾದೆ. ನನ್ನ ಕಲಾ ಸೇವೆಗೆ ಮೆಚ್ಚಿರೋ ವಿನೋ, ಶ್ರೀ—ವಿಶ್ವಮತಿ ದೇವಿಯರೂ ಒಲಿದರು!

ಸಭೆ, ಸಮಾರಂಭಗಳಿಗೆ ಅತಿಥಿಯಾಗಿ ಹೋದಾಗ; ಜನಜಂಗುಳಿಯಲ್ಲಿದ್ದಾಗ—ನನ್ನ ಕಸಾತ್ಕ್ಷರಗಳನ್ನು ಪಡೆಯಲು ಭಗೀರಥ ಪ್ರಯತ್ನ ಮಾಡುತ್ತಿರುವ ವಿದ್ಯಾರ್ಥಿ—ರಸಿಕರ ತಂತ ಒಂಡೆಯೂದರೆ, ಹತ್ತಾರು ಕಡೆಯಿಂದ ಪ್ರಶ್ನೆಗಳ ಸುರಿಮಳೆಗರೆಯತ್ತಾ, 'ಕೆಮರಾ'ದ ಗುಂಡಿಯನ್ನೊತ್ತುವವರು—ಅಗಣಿತ ಪ್ರಮಾಣದ ಪತ್ರಿಕಾ ನರದಿಗಾರರು!

ಅನ್ಯ ಭಾಷಾ ಚಿತ್ರಗಳ ವಿಕಲ್ಪು ಪರಿಣಾಮದಿಂದಾಗಿ, ಕನ್ನಡವು ಕಾಲ್ಬುಸವಾಗುತ್ತಿರುವಾಗ, ಕನ್ನಡ ಚಿತ್ರಗಳ ನ್ಯೂನತೆಯನ್ನು ಹೋಗಲಾಡಿಸಿ, ಹಿರಿಮೆಯನ್ನು ಎತ್ತಿ ತೋರಿಸಲು ಹವಣಿಸಿದೆ.....ಆದ ಕಾಗಿ, ನನ್ನ ಪ್ರಥಮ ಸ್ವಂತ ಚಿತ್ರವಾದ 'ಪ್ರೇಮ ವಿವಾಹ'ವನ್ನು ವೈಶಿಷ್ಟ್ಯಪೂರ್ಣವಾಗಿ ತೆಗೆಯುವ ಯೋಜನೆ ಹಾಕಿದೆ. ನಟ, ನಿರ್ದೇಶಕನಾಗಿದ್ದ ನಾನು 'ಪ್ರೇಮ ವಿವಾಹದ ಮೂಲಕ ನಿರ್ಮಾಪಕ, ಲೇಖಕ, ಗಾಯಕನಾಗಿ ಸಿನೀಮಾ ಪ್ರಪಂಚದ ಕೆಲವು ಸ್ವಮುಖ ಡಿಗ್ರಿಗಳನ್ನು ಹೊತ್ತೆ! ಚಿತ್ರದ ಸ್ತ್ರೀ ಪ್ರಧಾನ ಭೂಮಿಕೆಗೆ ನನ್ನ ಮೆಚ್ಚಿನ ಸಹ ನಟಿ ವಿನತನ ಕರವಾಯಿಸಿದೆ.

ಕಲೆಯು ವಿವಿಧ ಮುಖಗಳಲ್ಲಿ ಪ್ರವಹಿಸುತಿದ್ದ ನನ್ನ ಧೀ ಶಕ್ತಿಯನ್ನು ಅವಳು ಮನಸಾರೆ ಮೆಚ್ಚಿವರುಳಾದಳು—ಫೋರೆ ತಪಸ್ಸಿಗೆ ದೈವವೊಲಿದಂತೆ!

ಮೆಚ್ಚಿದ ಹೃದಯವನ್ನು ಬಿಚ್ಚಿ ತೋರಿಸಲು 'ಪ್ರೇಮ ವಿವಾಹ'ದಲ್ಲಿಯು ತನ್ನ ನಟನೆಯನ್ನು ನೈಜವಾಗಿಸಿ ಕೊಂಡಳು. ಅವಳ ಮನದಿಂಗಿತವನ್ನರಿತ ನಾನೂ ಅವಳ ಪ್ರೇಮದ ಬೇರಿಗೆ ಪ್ರೋತ್ಸಾಹದ ನೀರೆರೆಯತೊಡಗಿದೆ. 'ಪ್ರೇಮ ವಿವಾಹ'ವು ಬಿಡುಗಡೆಗೊಳ್ಳುವಷ್ಟರಲ್ಲಿ, ನನ್ನ ಮತ್ತು ವಿನತಳ ಪ್ರೇಮ ವಿವಾಹವಾಗಿತ್ತು!—ಪ್ರೀತಿಯ ಸುಪ್ತ ಜ್ವಾಲೆಯಿಂದ ಬಿಡುಗಡೆ ಹೊಂದಿ!

ಅದೃಷ್ಟವು ಕಣ್ಣೆರೆದಾಗ ಪ್ರಪಂಚವೇ ಕಣ್ಣು ತೆರೆಯುತ್ತದಂತೆ! ಮನೆಯಲ್ಲಿ ನೌಕರಿಯಿಲ್ಲದೆ, ಹಿಡಿ ಕೂಳಿಗಾಗಿ 'ಛೀ .....ಥೂ.... 'ಎನ್ನಿಸಿಕೊಳ್ಳುತಿದ್ದ ಭೂತ ಕಾಲದ ಬರಡು ಬಾಳು, ಅದೇ ನನ್ನನ್ನ ಇಂದು ಅವಕ್ಕಿರ ಕಣ್ಣೊಂಬೆಯೊಗರಿಸಿ, ಎಲ್ಲರು ನನ್ನನ್ನೇ ಅವಲಂಬಿಸುವಂತೆ ಮಾಡಿದ ವಿಧಿಯು ಏಲಾಶ!...ಭಕಾಂ!... ಉಂಡಾಡಿ! ಎಂದು ಕರೆದ ನಮ್ಮೂರ ಕೆಲ ಬಡೇರ ಮುಖ್ರರು ನಾನು ವಿವಾಹಿತನೆಂದು ತಿಳಿದೂ, ತಮ್ಮ 'ಕುಮಾರಿ'ಯರನ್ನು ಕೊಡಲು ಪ್ರಯತ್ನಿಸಿ ಕೈಕಟ್ಟು ಕೊಂಡು ತೆಪ್ಪಗಾದರು. ಏಷ್ಟೆಂದು ನ್ಯಾತ್ಯಾ!...ವಿಧಿಯ ಕೈವಾಡದಿಂದ ನನ್ನ ಜೀವನವೂ, ಪರಿಸರವು ಪರಿವರ್ತನೆಗೊಂಡಿತ್ತು!

ಕೆಲವೇ ವರ್ಷಗಳಲ್ಲಿ ನಗರದಲ್ಲಿ ಮತ್ತೈದು ಸ್ವಂತ ಮನೆಗಳನ್ನು ನಿರ್ಮಿಸಿದೆ. ಹತ್ತಾರು ಶ್ರೇಷ್ಠ ಕನ್ನಡ ಚಿತ್ರಗಳನ್ನು ತೆರೆಗೆ ತಂದು ಕನ್ನಡ ಕಲೆಗೆ ಸಲ್ಲಿಸಿದ ನನ್ನ ಸೇವೆಯು ಅನೂಚಿತವಾದುದೆಂದು ಲೋಕವೆ ಹೇಳಿತ!

ನನ್ನ ನಿತ್ಯ ಜೀವನಧಲ್ಲಿ ಭಾರ್ಯೆ ಸೂಚಿತ್ರ ಸ್ವಪಂಚದಲ್ಲಿ ಗೆಳತಿಯಾಗಿ ನನ್ನ ಪಾಲಿನ ಕಲಾದೇವತೆಯೆನಿಸಿಕೊಂಡ 'ವಿನ'ವು ಸದಾ ಚಾಲೆಳೆಯಾಗಿದ್ದಳು. ಆದರೆ ನನ್ನ ಸಾಪ್ರತಿಷ್ಠೆಗೆ ಕಾಲವು ಪ್ರತಿಕೂಲವಾಗಿತ್ತು. ವಾರಂಚಿಯು ವೀಚಿಯಂತೆ ವಿಕಲ್ಪವಾದ ಆಮೆ ಕಷ್ಟಗಳಿಗೆಯೊಂದಿಲ್ಲಿ ತನ್ನ ವಿಕಟ ಸ್ವರೂಪವನ್ನು ಹೊರಗೆಡವಿತು.

ಆದೊಂದು ನನ್ನ ಬಾಳಿನ ದುರ್ದಿನ! ...ಗಳಲ್ಲಿಯೊಬ್ಬನನ್ನು ಕಾಣಾ.ವುದಿದೆಯೆಂದು ಮಧ್ಯಾಹ್ನ ಹೊ.ಗಿದ್ದ 'ವಿನು'ಳಿಗಂಟೆ ಏದಾದರು ಬಂದಿರಲಿಲ್ಲ. ಚಿತ್ರವೊಂದಕ್ಕೆ ಸಂಭಾವನೆ ಚಿಪುತಿದ್ದವ, ವಿಕೋರ್ಪರವಾಗಿ ಸಂಜೆಯು ವಿಕೆಂಗಿಗೆ ಹೊರಟೆ 'ಗೆರೇಜಿ'ನಲ್ಲಿ ಕಾರಿದು ದನ್ನು ಕಂಡು ಆಶ್ಚರ್ಯನಂದರೂ ವಿಕ್ಕಿನ ವರೆಗೆ ನಡೆಯಿ ಬೇಕಾಗಿದ್ದ ನನಗೆ ಅನುವಾಗಿತ್ತು. ಕಾರನ್ನು ವೇಗವಾಗಿ ವಿಕ್ಕಿನ ಕಡೆಗೆ ಓಡಿಸಿದೆ.

ನನ್ನೆದರಿಗೆ ಕಾರಿನಿಂದು ಮಿಂದಗತಿಯಿಂದ ಬರುತಿತ್ತು. ನಾನೂ ನಿಧಾನಿಸಿದೆ. ಹಾಂ! ನನ್ನ ಪ್ರಿಯೆ ವಿನ! ಕಾರು ಚಾಲಕ ನನ್ನ ಪರಿಚಿತ ಸಹೋದ್ಯೋಗಿ—ಶಶಿ ಕುಮಾರ!ಪ್ರವನ ಎಡತೋಳು ನನ್ನ ವಿನುವಿನ ಹೆಗಲೇರಿತ್ತು! ನನ್ನನ್ನು ಕಂಡು ಭಯ ವಿಸ್ಮಲನಾದ ಆತನ ಕೈ ಹಿಂದೆ ಸರಿಯಲು ಪ್ರಯತ್ನಿಸಿದರೂ, ಜಡೆಯೊಂದಿಗೆ ಜಗಳವಾಡುವ ಅವಳ ಕಂಕೋಮಲವು ಬೆದರಿದ ಆ ಕರದ್ವಯಗಳನ್ನು ಮೃದುವಾಗಿ ಹಿಡಿದುಪ್ಪಿ!—ಬೆವರ ಬೇಡವೆಂಬಂತೆ! ಮುಸ್ಸಂಜೆಯ ಮೂಕಳಿಗಾಗಿ ಏನೋ ಬೇಡಿದಳು.

ಎಂತಹ ಉಪಹಾಪಕರ ಅವಮಾನ! ... ಕೈ ಹಿಡಿದವ (ಗಂಡ?)ನೆದುರುಅನ್ಯ ನೊಡನೆ ಪ್ರೇಮ ಭಿಕ್ಷೆ!....ನನ್ನ ದೇಹ ದಾದ್ಯಂತ ಬೆವರು ಬರಿಯಿತು... ದೇಹ ನಡುಗಿತು!.... ಆದರೂ ಸಾವರಿಸಿಕೊಂಡು 'ವಿನೂ! ನನ್ನ ಆಕೆಯನ್ನೆಲ್ಲ ಕನಸು ಮಾಡಿದೆಯೂ... ಇಂಥಾ ಹೀನ ಕೆಲಸಕ್ಕೆ ಕೈಯಿಕ್ಕುವುದು ನಿನಗೆ ಸಮ್ಮತವೆ?" ಎಂದು ಕರುಣೆಯು ಮೂರ್ತಿಯೆಂಬಂತೆ, ಕಾರಿನಿಂದ ಕೆಳಗಿಳಿದು ಅವಳೊಡನೆ ಬೇಡಿದೆ. ನಿರುತ್ತರ!...

"ನಮ್ಮ ಮೂನ-ಮರ್ಯಾದೆಯು ಗತಿಯೇನೆಂದು ಯೋಚಿಸಿರುವೆಯೂ?" ಎಂದೆ. ನಿರುತ್ತರ! ಆವರ ನಿಃಶಕ್ತರಂತೆ ನಿರಭಿಮಾನಕ್ಕೆ ತುಳಿದ ಫಣಿಯಂತಾದೆ! ನಾ ಚಿಕೆ ಬಿಟ್ಟು ಬೇಕಾದವರೊಡನೆ ನಟಿಸುವ ತಾರಾಲೋಕದ ಸಂಸಾರವೆಂದರೆ ಜಿಗುಪ್ಸೆ ಪಡುವಂತಾಯಿತು. ಪತಿಯೆಂಬ ಪರಪೆಯಿಲ್ಲದೆ ಪರಕೀಯನೊಡನೆ ಪ್ರೇಮ ಯಾಚಿಸುವ ಅವಳ ವ್ಯಕ್ತಿತ್ವವನ್ನು ನೆನೆದು ನರಕಕ್ಕೆ ನೂಕಲ್ಪಟ್ಟವನಂತೆ ಒದ್ದಾಡಿದೆ!

ಕೊನೆಗೆ ಕೊನೆಯೇದ್ಧಿತನಾಗಿ ಕೂಗಿದೆ, "ಥೂ!... ನಾಯಿ ಜಾಳಿಗಿಳಿದ ಹೆಣ್ಣೇ! ನಿನ್ನನ್ನ ಹೊವಿನ ರೂಪದ ಹಾವೆಂದು ತಿಳಿಯದೆ ವೋಸಹೋದೆ....ಹೊವಿಂದ ಹೊವಿಗೆ ಹಾರುವ ಒಣ್ಣಾದ ಚಿಟ್ಟೆಯೆ; ಅಷ್ಟು ಇಂದು ನನ್ನಂತಹ ನರ ಕಾರಿಗಳನ್ನು ನಂಬಿಸಿ, ವಂಚಿಸಿ ಮೋಸದ ಬಲೆ ಕೊಟ್ಟಿರುವಿಯೋ ದೇವರೆ ಬಲ್ಲ! ಕೊನೆಯದಾಗಿ ಹೇಳಹೇರಿಲ್ಲದಾಗಬಹುದಾದ ನಮ್ಮ ಮೂನ-ಮರ್ಯಾದೆಯು ಏನಿವೆ ನಿನಗಿದೆಯೆ?" ಎಂದೆ ನಿಟ್ಟುಸಿರು ಬಿಡುತ್ತಾ—ಗಂಡನೆಂಬ ಬಂಡು ಹೆಸರು ಹೊತ್ತ ತಪ್ಪಿಗಾಗಿ.

ಒಂಡೆರಡು ನಿಮಿಷಗಳ ಬಳಿಕ ಒಯ್ಯಾರ, ಒನಪುಗಳ ಬೆಡಗಿನೊಂದಿಗೆ, 'ಅಗಲಾದ್ರು ತಿಳಿಯಿರಿ—ಇದು ಚಿತ್ರ ಪ್ರಪಂಚ'ನೆಂದು! ಕ್ಷಮಿಸಿ...ಇದೇ ನನ್ನ —ನಿಮ್ಮ ಕೊನೆಯ ಭೇಟಿ!..." ಎಂದಳು—ಜಾಸ್ತಿ ಮಾತನಾಡಿದರೆ ಮುತ್ತು ಸುರಿಯುತ್ತದೆಂಬಂತೆ! ಮುಗುಳು ನಗೆಯ ಮುಖವೆರಡನ್ನು ಹೊತ್ತ ಕಾರು ಚಲಿಸಿತ್ತು!

ನನ್ನ ತಲೆಯು ಮೇಲೆ ಸಿಡಿಲು ಬಡಿದಂತಾಗಿ: ಮೆದುಳು ಆಲ್ಲೋಲಕಲ್ಲೋಲವಾಯಿತು. ನಿರಾಶನಾಗಿ, 'ವಿನೂ!.." ಎಂದು ಆರ್ತನಾಗಿ ಕೂಗಿದೆ. ಆದರೆ ಆ ಹಕ್ಕಿ ನನ್ನ ಗೋಳನ್ನು ಕೇಳದೆ, ಪ್ರೇಮದ ಬಲೆಯನ್ನು ಹರಿದೊಗೆದು; ಬಿದ್ದಿತ್ತು —ಮತ್ತೊಬ್ಬ ಪ್ರೇಮಿ ವ್ಯಾಧನ ಬಲೆಗೆ.

"ಯಾರೋ ನಿನ್ನ ಏನೂ?" ಸ್ತ್ರೀ ಸ್ವರವೊಂದು ಗುಡುಗಿತು. ನನ್ನ ಕನಸರದ ಕೂಗಿಗೆ ವಿಮೋಹನಲು ಮರಳಿದವಳೆಂದು ದಡಬಡನೆದ್ದು ನೋಡಿದೆ. ಅವಳಲ್ಲ!.... ನನ್ನಮ್ಮ! ಅಕ್ಕ, ಅತ್ತಿಗೆ, ತಂಗಿ ಮೊದಲಾದ ನಾರೀನ ಜೆಗಳು ನನ್ನನ್ನು ಕಂಡು ಮುಖಮುಚ್ಚಿ ಗಹಗಹಿಸಿ ನಗುತ್ತಿದ್ದರು. ನನಗೆ ನಾಚಿಗೆಯೂದೂ ಕಣ್ಣು ಜುಮ್ಮೆನ್ನುತ್ತಾ "ಆ್ಹ!.... ನನ್ನ ಗೆಳೆಯ ವಿನೋದ ನಮ್ಮ ಹಾಸು ಕನಸಿನಲ್ಲಿ ಕಾಣಿಸಿಕೊಂಡಿದ್ದೆ." ಎಂದು ಉಪಾಯವಾಗಿ ಅಲ್ಲಿಂದ ಜಾರಿದೆ. ತಾರಾಲೋಕದಿಂದ ನಾರೀಲೋಕದ ವರೆಗಿನ ಸಹಜ ಕಹಿನಿಮಿಷಗಳನ್ನು ಮೆಲುಕುಹಾಕುತ್ತಹೊರಬಂದೆ' ಎಂದು ತನ್ನ ಕನಸಿನ ಕತೆಯನ್ನು ಹೇಳಿ ಮುಗಿಸಿದ—ನನ್ನ ಗೆಳೆಯ ಚಂದ್ರಣ್ಣ!

ನನಗೆ ಕೆಳಕ್ಕನೆ ಬಂದು ನಗುವನ್ನು ಹಿಡಿಯಲಾಗಲಿಲ್ಲ. ನಕ್ಕೆ 'ಯೂಕೆ ನಗ್ತಿಯೂ? ಎಂದ ಚಂದ್ರು. ನಗು ನಿಲ್ಲಿಸದೆ, 'ತುಂಬಾ ಸ್ವಾರಸ್ಯದ ಕನಸನ್ನೆ ಕಂಡಿದ್ದೀಯೂ!...." ಎಂದೆ. ಆದಿಂತ ಸ್ವಾರಸ್ಯವೊ, ಬರೀ ಕನಸು ಎಂದೆ ತತ್ತಾಸ್ವರವಾಗಿ ಹೇಳಿದೆ.

ಅದಕ್ಕೆ ನಾನೆಂದೆ, "ಸಾಕಲ್ಲ!....ನೀನೇನೂ ನಟನಾಗಬೇಕೆಂದು ಹಗಲು ಕನಸು ಕಾಣ್ತಿದ್ದಿ ....ವಾಸ್ತವಿಕವಾಗಿ ಅಲ್ಲದಿದ್ದರೂ ಕನಸಿನಲ್ಲಾದರು ನಿನ್ನ ಆಕೆಗೆ ಫಲ ದೊರೆಯುತು!...ಸಾಕ; ಮುಂದಾದರೂ ನೀನೇನೂ ನಟನಾಗಬೇಕೆಂಬ ಭ್ರಾಂತಿಯನ್ನು ಬಿಟ್ಟುಬಿಡು!"—ಪಾರ್ಶ್ವವಾಗಿ. ಮೊತಿನ ಅರ್ಥಗ್ರಹಿಸಿದ ಚಂದ್ರು ನಗೆಯಲ್ಲಿ ನನ್ನೊಂದಿಗೆ ಜೊತೆಗೂಡಿ ಬೀಳ್ಕೊಟ್ಟ.

(ಈ ಕಥೆಯ ವಸ್ತು, ವ್ಯಕ್ತಿ, ಸನ್ನಿವೇಶಗಳೆಲ್ಲ ಶುದ್ಧ ಕಾಲ್ಪನಿಕ)

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿವಾದಿಂದ ಜೆನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾವ್:ಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅನೇರಿಕದ ಆರು ಕತೆಗಳು ,,	1	12
ವಿಶಿಯದ ಸಂಪತ್ತು ಕು. ಶಿ. ಹರಿದಾಸ ಭಟ್)	2	0
ಘಂಟೆವಾಗಾ (ಅನು: ಕು ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ ಶೆಟ್ಟಿ, ಎಂ ಎಂ. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಆದೃಷ್ಟಕಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮಡುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮುಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

NAVAYUGA
REGD. NO. M. 3619

UDIPI, THURSDAY
22–12–1960

LICENSE NO. 31
Licensed to Post without Prepayment

ವಿಚಾರವರ್ಷ

(ಒಂನೇ ಪುಟದಿಂದ)

ಪಗ್ರಹಗಳ ಗರ್ಭದಲ್ಲಿರುವ ಒತ್ತಡವೇ ಎನ್ನಲು ಬರುವುದಿಲ್ಲ. ಏಕೆಂದರೆ, ಅವು ಬಹಳ ಚಿಕ್ಕ ಗೋಳಗಳು. ಭೂಮಿಯ ನೂರನೇ, ಐವತ್ತನೇ ಒಂದಂಶದಷ್ಟೇ ಇವೆ. ಇವುಗಳ ಸಾಂದ್ರತೆಯಲ್ಲಿರುವ ವ್ಯತ್ಯಾಸಕ್ಕೆ ಕಾರಣ, ಗುರು ಗ್ರಹದಿಂದ ಆ ವುಗಳಿಗಿರುವ ದೂರವೆಂದೇ ಹೇಳಬೇಕು. ಎಲ್ಲಕ್ಕಿಂತ ಹೆಚ್ಚು ಸಾಂದ್ರತೆಯುಳ್ಳ ಇ ಟೋ ಗುರುವಿಗೆ ಬಹಳ ಹತ್ತಿರದಲ್ಲಿದೆ. ಯುರೋಪಾ ಸುಮಾರು ಎರಡು ಪಾಲು ದೂರದಲ್ಲಿದೆ. ಗಾನಿಮೀಡ್ ಸುಮಾರು ಮೂರು ಪಾಲು ದೂರದಲ್ಲಿಯೂ, ಕಾಲಿ ಸ್ಟೋ ಸುಮಾರು ನಾಲ್ಕುನರೆ ಪಾಲು ದೂರದಲ್ಲಿಯೂ ಇವೆ.

ಭೂಮಿಯೂ, ಆದರ ಉಪಗ್ರಹವಾದ ಚಂದ್ರನೂ ಹೆಚ್ಚು ಕಡಮೆ ಒಂದೇ ಪದಾ ರ್ಥದಿಂದಾದ ಗ್ರಹಗಳು. ಆದರೆ ಗುರು ವಿನ ಉಪಗ್ರಹಗಳು ಭೂಮಿಯ ಪದಾ ರ್ಥಕ್ಕಿಂತ ಹೆಚ್ಚು ಭಾರವಾದ ಪದಾರ್ಥ ದಿಂದ ತಯಾರಾದುವು. ಇದರಿಂದ ಏನು ರು ಜು ವಾ ಗು ವು ದೆಂ ದರೆ, ಈ ಉ ಪ ಗ್ರ ಹ ಗ ಳು ತಯಾರಾಗುವ ಕಾಲ ದ ಲ್ಲಿ ಗುರು ಗ್ರಹದ ಮೇಲು ಭಾ ಗ ವು ಬ ಹ ಳ ಉಷ್ಣವಾಗಿದ್ದಿರಬೇಕು. ಏಕೆಂದರೆ, ಸೂರ್ಯನ ಸುತ್ತಲೂ ಗ್ರಹಗ ಳು ಏರ್ಪಡುವಾಗ ಸಮೀಪ ಗ್ರಹಗಳಿಗೂ ದೂರ ಗ್ರಹಗಳಿಗೂ ನಡುವೆ ವ್ಯತ್ಯಾಸಗ ಳೇರ್ಪಟ್ಟಹಾಗೆಯೇ, ಗುರುವಿನ ಸುತ್ತ ಲೂ ಉಪಗ್ರಹಗಳೇರ್ಪಡುವಾಗ ಕೂಡಾ ವ್ಯತ್ಯಾಸಗಳುಂಟಾದುವು. ಗುರುವಿಗೆ ಸ ಮೀಪದಲ್ಲಿರುವ ಎರಡು ಉಪಗ್ರಹಗಳಿ ಗಿಂತಲೂ ದೂರದಲ್ಲಿರುವುವು ಎರಡು ದೊಡ್ಡವು.

ಪ್ರಸ್ತುತದಲ್ಲಿ ಗುರುಗ್ರಹದ ಉಪರಿ ಭಾಗವು ಮಬ್ಬುಗಳಿಂದ ಕವಿದುಕೊಂಡಿ ದೆ. ಈ ಮಬ್ಬುಗಳು ಬಲು ಶೀತಳ. ಗುರು ವಿನ ಅಂತರ್ಭಾಗದಲ್ಲಿ ಇನ್ನೂ ಬಿಸಿಯಿದ್ದಿ ರಬಹುದು. ಆದರೆ ಇದು ಹೇಳಿಕೊಳ್ಳುವ ಷ್ಟು ಪೇಲೇಲವಂತೆ ಕಾಣಿಸುವುದಿಲ್ಲ. ಉಪಗ್ರಹಗಳೇರ್ಪಡುವ [ಕಾಲಕ್ಕೆ ಗುರು ಗ್ರಹವು ಬಿಸಿಯೂಗಿರುವ ಮೂಲಕಾರಣ ಆಪಾರವಾದ [ಆದರ ಭಾರವೆಂದೇ ಹೇಳ ಬೇಕು. ಭೂಮಿಯ ಭಾರದೊಂದಿಗೆ ಹೋ ಲಿಸುವಾಗ ಆದರ ಭಾರ ಭೂಮಿಗಿಂತ ಸುಮಾರು ಒಂಭಂ ಪಾಲು ಹೆಚ್ಚು! ಈ ಗ್ರ ಹವು ಈಗಿರುವುದಕ್ಕಿಂತ [ಅರ್ಧದಷ್ಟೇ ಇ ದ್ದಾಗ ಕೂಡಾ ಸುತ್ತಲಿರುವ ಪದಾರ್ಥಗ ಳನ್ನು ಅಮಿತವಾದ ಶಕ್ತಿಯಿಂದ ಆಕ ರ್ಷಿಸಿಕೊಂಡಿರಬೇಕು. ಈ ಪದಾರ್ಥಗ ಳು ಅಪಾರವಾದ ವೇಗದಿಂದ ಗುರುವನ್ನು ತಾಗಿದುದರಿಂದ ಉಷ್ಣೋತ್ಪತ್ತಿಯೂಗಿರ ಬೇಕು.

ದೊಡ್ಡದಾದ ದೂರಗ್ರಹಗಳ ಸಾಂದ್ರ ತೆಯಲ್ಲಿ ಕೂಡಾ ವ್ಯತ್ಯಾಸಗಳಿವೆ.

ಗ್ರಹ	ಭಾರ(ಭೂಮಿಗಿಂತ)	ಸಾಂದ್ರತೆ ಘ.ಸೆಂ.ಮೀ.ಗೆ
ಗುರು	೩೧೮.೪೦	ಗಳಷ್ಟು.
ಶನಿ	೯೫.೫೩ ,,	೦.೭೦ ,,
ಯುರೇನಸ್	೧೪.೫೮ ,,	೧.೪೦ ,,
ನೆಪ್ಚೂನ್	೧೭.೩೬ ,,	೨.೩೦ ,,
ಪ್ಲೂಟೋ	ತಿಳಿಯದು	ತಿಳಿಯದು

ಪಾಲುಗಳಲ್ಲಿ ಹೆಚ್ಚು ಕಡಮೆ

ಮೇಲೆ ಹೇಳಿದ ವಿವರಗಳಿಂದ ಈ ಗ್ರ ಹಗಳ ಭಾರಕ್ಕೂ ಸಾಂದ್ರತೆಗೂ ಸಂಬಂ ಧವಿಲ್ಲವೆಂದೂ, ಸಾಂದ್ರತೆಯಲ್ಲಿರುವ ವ್ಯ ತ್ಯಾಸಗಳು ಪದಾರ್ಥದಲ್ಲಿರುವ ವ್ಯತ್ಯಾಸ ಗಳನ್ನನುಸರಿಸಿ ಏರ್ಪಟ್ಟುವೆಂದೂ ಸ್ಪಷ್ಟ ವಾಗುತ್ತದೆ. ಗುರು, ಶನಿ ಗ್ರಹಗಳು ಅವು ಗಳ ತರುವಾಯ ಬರುವ ಗ್ರಹಗಳೆರಡ ಕ್ಕಿಂತ ಭಾರದಲ್ಲಿಯೂ, ಆ ಕಾರಣದಿಂದ ತಮ್ಮ ಗರ್ಭಗಳಲ್ಲಾಗುವ ಒತ್ತಡದಲ್ಲಿ ಯೂ ಬಹಳ ಹೆಚ್ಚಾಗಿವೆ. ಆದರೂ ಅವು ಗಳ ಸಾಂದ್ರತೆ ಕಡಮೆಯಾಗಿದೆ. ಇದ ರಿಂದ ಯುರೇನಸ್, ನೆಪ್ಚ್ಯೂನ್ ಗ್ರಹಗ ಳಿಗಿಂತ ಗುರು, ಶನಿ ಗ್ರಹಗಳು ಹೆಗು ರಾದ ಪದಾರ್ಥದಿಂದ ತಯಾರಾದುವೆಂದು ಸ್ಪಷ್ಟವಾಗುತ್ತದೆ. ಯುರೇನಸ್, ನೆಪ್ಚ್ಯೂನ್ ಗ್ರಹಗಳ ಭಾರಗಳಲ್ಲಿರುವ ವ್ಯತ್ಯಾಸಗಳೊಂದಿಗೆ ಹೋಲಿಸಿದರೆ ಸಾಂ ದ್ರತೆಯಲ್ಲಿರುವ ವ್ಯತ್ಯಾಸವು ಹೆಚ್ಚು. ಆ ದುದರಿಂದ ನೆಪ್ಚ್ಯೂನಿನೊಳಗಿನ ಪದಾ ರ್ಥವು ಯುರೇನಸ್ಸಿನೊಳಗಿನ ಪದಾರ್ಥ ಕ್ಕಿಂತ ಹೆಚ್ಚು ಭಾರವಾದುದಾಗಿರಬೇಕು.

ಯಾವ ಪದಾರ್ಥವು, ಎಷ್ಟು ಒತ್ತಡ ಕ್ಕೆ ಎಷ್ಟು ಪ್ರಮಾಣದಲ್ಲಿರುವುದೋ ನ ಮಗೆ ಗೊತ್ತಾಗಿದೆ. ಸೃಷ್ಟಿಯೊಳಗೆಲ್ಲಾ ಹಗುರಾದ ಹೈಡ್ರೊಜನನ್ನೂ, ಗುರು ಗ್ರಹದ ಭಾರವುಳ್ಳುದನ್ನೂ ತೆಗೆದುಕೊಂ ಡರೆ, ಆದು ಗುರು ಗ್ರಹಕ್ಕಿಂತ ಸ್ವಲ್ಪ ಹೆಚ್ಚು ಪ್ರಮಾಣವುಳ್ಳ ಗೋಳವಾಗಿ ತ ಯಾರಾಗುತ್ತದೆ. ಹೈಡ್ರೊಜನ್ನಿನ ಹೊ ರತು ಬೇರಾವ ಪದಾರ್ಥವನ್ನು ತೆಗೆದು ಕೊಂಡರೂ ಅದು ಗುರು ಗ್ರಹಕ್ಕಿಂತ ಚಿಕ್ಕ ಗೋಳವೇ ಆಗುತ್ತದೆ. ಇದರಿಂದ ಗುರು ಗ್ರಹದಲ್ಲಿ ಹೈಡ್ರೊಜನ್ನಿನೊಂದಿಗೆ ಕೆಲವು ಭಾರವಾದ ಪ ದಾ ರ್ಥ ಗ ಳು ಸೇ ರಿ ರು ವು ದೆಂ ದು ನಾ ವು ಭಾ ವಿಸಬ ಹು ದು. ಅಂದಾಜನ್ನು ಹಿಡಿದು ಗುರುಗ್ರಹದಲ್ಲಿ ಹೈಡ್ರೊಜನ್ನಿನ ಪಾಲು ಅರ್ಧಕ್ಕಿಂತ ಕಡಮೆಯಿರಲಿಕ್ಕಿಲ್ಲ ನೂರ ಕ್ಕೆ ಐವತ್ತಮ್ಭತ್ತು ಕೂಡಾ ಇದ್ದೀತು. ಶನಿಗ್ರ ಹದಲ್ಲಿ ಹೈಡ್ರೊಜನ್ ಇನ್ನೂ ಕಡಮೆ ಯೇ ಸರಿ. ಇಲ್ಲಿ ಭಾರವಾದ ಪದಾರ್ಥಗ ಳು ಹೆಚ್ಚಾಗಿವೆ. ಆದರೂ ಶನಿಯ ಗರ್ಭ ದಲ್ಲಿರುವ ಒತ್ತಡವನ್ನು ಗುರುವಿನೊಂದಿಗೆ ಹೋಲಿಸುವಾಗ ಕಡಮೆಯೇ. ಅಂತೆಯೇ ಆದರ ಸಾಂದ್ರತೆಯೂ ಕಡಮೆ. ಯುರೇ ನಸ್, ನೆಪ್ಚ್ಯೂನ್ ಗ್ರಹಗಳನ್ನು ತೆಗೆ ದುಕೊಂಡರೆ, ಸೂರ್ಯನಿಂದ ದೂರ ಹೋದಷ್ಟೂ ಹೈಡ್ರೊಜನ್ನಿನ ಪಾಲು ಕ್ರ ಮವಾಗಿ ತಗ್ಗುವುದೂ, ಭಾರವಾದ ಪ ದಾರ್ಥಗಳ ಪಾಲು ಹೆಚ್ಚುವುದೂ ಕಂಡು ಬರುತ್ತದೆ.

ಗ್ರಹಗಳು ಏರ್ಪಡುವುದಕ್ಕೆ ಮುಂಚೆ ಸೂರ್ಯನ ಸುತ್ತಲೂ ಉಂಟಾದ ಚಕ್ರ ದಲ್ಲಿರುವ [ಪದಾರ್ಥವು ದೂರ ಹರಡಿದ ಸ್ಟೂ ತೆಳುವಾಗಿ ಹೋಗುತ್ತದೆ. ಆ ಚಕ್ರ ದಲ್ಲಿ [ಸೂರ್ಯನಿಗೆ ಹತ್ತಿರವಾಗಿರುವ ಪ್ರಾಂತದಲ್ಲಿ ಕಣಗಳು ಸೇರಿಕೊಂಡುವು. ದೂರ ದೂರದಲ್ಲಿ ವಾಯು ಪದಾರ್ಥವು ಸೇರಿಕೊಂಡಿತು. ಈ ಚಕ್ರಕ್ಕೆ [ಸಂಬಂಧ ಪಟ್ಟ ಸಾಂದ್ರತೆ ಹೆಚ್ಚುಗೊಂಡಷ್ಟು ಹತ್ತಿ ರ ಭಾಗದಲ್ಲಿರುವ ಪದಾರ್ಥವು ಸೂರ್ಯ ಕಿರಣಗಳನ್ನು ತಡೆದು ಅವು ದೂರಪ್ರಾಂ ತಗಳಿಗೇ ಪಸರಿಸದಂತೆ ನಿರೋಧಿಸಿರಬೇ ಕು. ಆ ಪಂಸ್ಥಿತಿಯಲ್ಲಿ ದೂರ ಪ್ರಾಂತದ ಲ್ಲಿ ಉಷ್ಣವು ೨೭೦ ಡಿಗ್ರಿಗಳಿಗಿಂತಲೂ ತಗ್ಗಿ ಹೈಡ್ರೊಜನ್ ವಾಯು [ಪದುರು ಪದುರುಗಳಾಗಿ ಸೇರಿಕೊಂಡಿರಬೇಕು.

ಆದರೆ ಸೂರ್ಯನಿಗೆ ಸಮೀಪದಲ್ಲಿರುವ ಗ್ರಹಗಳು ಆಕಾರ ಹೊಂದಿದಂತೆ, ಸೂ ರ್ಯ ರಶ್ಮಿ ದೂರ ಪ್ರಾಂತಗಳಿಗೆ ಮತ್ತೆ ಪಸರಿಸ ವುದಕ್ಕೆ ಅವಕಾಶವಾಯಿತು. ಈ ರಶ್ಮಿಗೆ ಹೈಡ್ರೊಜನ್ ಮತ್ತೆ ಇಂಗಲಾ ರಂಭಿಸಿತು. ಆ ಪ್ರಾಂತಗಳಲ್ಲಿರುವ ಇತರ ಪದಾರ್ಥದ ಕಣಗಳೊಂದಿಗೆ ಸೇರಿದ ಹೈಡ್ರೊಜನ್ ಪೂರ್ತಿಯಾಗಿ ಇಂಗಿ ಹೋ ಯಿತು. ಆದರೆ ಆಗ ತಾನೇ ಗೋಳರೂಪ ಪಡೆದ ಗ್ರಹಪಿಂಡಗಳಿಂದ ಅದು ಸಂಪೂ ರ್ಣವಾಗಿ ಇಂಗಿ ಹೋಗಲಿಲ್ಲ. ಸಮೀಪ ಗ್ರಹಗಳೇರ್ಪಟ್ಟ ಸ್ವಲ್ಪ ಕಾಲದ ಮೇಲ ಷ್ಟೇ ದೂರ ಗ್ರಹಗಳು ತಯಾರಾದುವು. ಅವು ಏರ್ಪಟ್ಟ ಮೇಲೆ ಅವುಗಳಲ್ಲಿ ಹೈ ಡ್ರೊಜನ್ನಿನ ಪಾಲು ದೂರಕ್ಕೆತಕ್ಕಂತೆ ತ ಗ್ಗುತ್ತಾ ಹೋಗಲು ಮೇಲೆ ಹೇಳಿದುದೇ ಕಾರಣ.

(ಮುಂದಿನವಾರ: ಇತರ ಗೋಳರೂ ಪಾದಿಗಳು.)

ಪ್ರಜಾಸತ್ತೆಯನ್ನು ಕತ್ತಿಹಿಡಿದು ರಾಜ್ಯಾಡಳಿತೆಯನ್ನು ತನ್ನ ಕೈಗೆ ತೆಗೆದುಕೊಂಡ ನೇಪಾಲದ ಅರಸ ಮಹೇಂದ್ರರು ಮತ್ತು ಅವರ ಪತ್ನಿ ರತ್ನಾ ರಾಜ್ಯಲಕ್ಷ್ಮೀ ದೇವಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಎಲ್ಲರಿಗೂ ಬೇಕಾಗಿದೆ

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬರ ಆರ್ಥಿಕ ಅನುಕೂಲತೆ ಮತ್ತು ಆವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಪಿಗ್ಮಿ — ಜೀವಜಾತಿ ಯೋಜನೆ. ಪ್ರತಿದಿನವೂ ಉಳಿಸಬೇಕೆಂಬ ಆಪೇಕ್ಷೆಯುಳ್ಳವರಿಗೆ ಆಗತ್ಯ. ನಾಲ್ಕಾಣೆಯನ್ನು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು. ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.

ಕ್ಯುಮ್ಯುಲೆಟಿವ್ — ಜೀವಜಾತಿಗಳು ರೂಪಾಯಿ ಐದು ಆಥವಾ ಅದರ ಗುಣಕ ಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ವೇತ ಪಡೆಯುವ ಮಂದಿಗೆ ಅನುಕೂಲ ರೀತಿಯಲ್ಲಿ ಆಕರ್ಷಕವಾಗಿದೆ.

ಲಕ್ಷ್ಮೀ — ಕೇಶ್ ಸರ್ಟಿಫಿಕೇಟ್ ನಮ್ಮಲ್ಲಿರುವ ಬಂಡವಾಳಕ್ಕೆ ಲಾಭ ದಾಯಕ ಪ್ರತಿಫಲ ದೊರೆಯುವುದು. ಸುಪ್ತ ಧನದ ಸದ್ವಿನಿಯೋಗಕ್ಕೆ ಲಕ್ಷ್ಮೀಯ ಆಹ್ವಾನ ಮನೋಹರವಾಗಿದೆ.

ವಿದ್ಯಾರ್ಥಿಗಳಿಗೆ — ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪಾಠವಿದೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿ ಕೊಡಲಾಗಿದೆ.

ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H. Shetty, at the Navayuga Press, Udipi, S. India.